ಹೇಮಾಡಪಂತ ವಿರಚಿತ

# ಶ್ರೀ ಸಾಯಿ ಸಚ್ಚರಿತೆ

Late Govind Raghunath Dabholkar's (Hemadpant)

# SHRI SAI SATCHARITRA (Kannad)



ಶ್ರೀ ಸಾಯಿಬಾಬಾ ಸಂಸ್ಥಾನ ಶಿರ್ಡಿ

SHRI SAIBABA SANSTHAN TRUST, SHIRDI

ಶ್ರೀ ಸದ್ಗುರು ಸಾಯಿನಾಥಾಯ ನಮಃ

# ಶ್ರೀ ಸಾಯಿ ಸಚ್ಚರಿತೆ

## ೧ನೇ ಅಧ್ಯಾಯ

### ವಂದನೆ–ಗೋದಿ ಹಿಟ್ಟಿನ ಕಥೆ–ಅದರ ತತ್ವ

ಪೂರ್ವ ಸಂಪ್ರದಾಯಕ್ಕನುಸಾರವಾಗಿ ಶ್ರೀ ಹೇಮಾಡಪಂತರು ಶ್ರೀ ಸಾಯಿ ಸಚ್ಚರಿತೆಯನ್ನು ಅನೇಕ ವಿಧವಾದ ವಂದನೆಗಳಿಂದ ಆರಂಭಿಸಿರುತ್ತಾರೆ.

೧. ಮೊದಲನೆಯದಾಗಿ ಶ್ರೀ ವಿನಾಯಕನಿಗೆ ವಂದನೆಗಳನ್ನು ಅರ್ಪಿಸುತ್ತ ಶ್ರೀ ಸಾಯಿ ಸಚ್ಚರಿತೆಯನ್ನು ಬರೆಯಲು ತೊಡಗಿರುವ ಈ ಕಾರ್ಯಕ್ಕೆ ಯಾವುದೇ ವಿಘ್ನ ಬಾರದಿರಲೆಂದು ಪ್ರಾರ್ಥಿಸಿ ಶ್ರೀ ಸಾಯಿಬಾಬಾ ಅವರೇ 'ಗಣಪತಿ' ಎಂದು ಹೇಳಿರುತ್ತಾರೆ.

೨. ನಂತರ ಈ ಕೃತಿಯನ್ನು ರಚಿಸಲು ಸಾಕಷ್ಟು ಹುಮ್ಮಸ್ಸನ್ನು ನೀಡುವಂತೆ ಶ್ರೀ ಸರಸ್ವತಿ ಮಾತೆಯನ್ನು ಪ್ರಾರ್ಥಿಸಿ ಶ್ರೀ ಸಾಯಿಬಾಬಾ ಅವರು ಶ್ರೀ ಸರಸ್ವತಿಯಲ್ಲಿ ಐಕ್ಯರಾಗಿ ತಾವೇ ಸ್ವತಃ ತಮ್ಮ ಜೀವನ ಚರಿತ್ರೆಯನ್ನು ಹಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ.

೩. ಅನಂತರ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣರಾಗಿರುವ ತ್ರಿಮೂರ್ತಿಗಳಿಗೆ ವಂದನೆಗಳನ್ನು ಅರ್ಪಿಸಿ ಶ್ರೀ ಸಾಯಿಬಾಬಾ ಅವರಲ್ಲಿ ಐಕ್ಯರಾಗಿ ಮತ್ತು ಸದ್ಗುರುವಾಗಿ ಸಂಸಾರ ಸಾಗರವನ್ನು ಸುಗಮವಾಗಿ ದಾಟಿಸುತ್ತಾರೆ ಎಂದು ಹೇಳಿರುತ್ತಾರೆ.

೪. ಅನಂತರ ಅವರ ಕುಲದೇವರಾದ ನಾರಾಯಣ ಆದಿನಾಥರಿಗೆ ವಂದನೆಗಳನ್ನು ಅರ್ಪಿಸಿರುತ್ತಾರೆ.

೫. ಅನಂತರ ತಾವು ಜನಿಸಿದ ಗೋತ್ರದ ಮೂಲಪುರುಷರಾದ ಭಾರಧ್ವಾಜ ಮುನಿಗಳಿಗೆ ಮತ್ತು ಯಾಜ್ಞವಲ್ಕ್ಯ, ಭೃಗು, ಪರಾಶರ, ನಾರದ, ವೇದವ್ಯಾಸ, ಸನಕ, ಸನಂದನ, ಸನತ್ಕುಮಾರ, ಶುಕ, ಶೌನಕ, ವಿಶ್ವಾಮಿತ್ರ, ವಾಲ್ಮೀಕಿ, ವಾಮದೇವ, ಜೈಮಿನಿ, ವೈಶಂಪಾಯನ, ನವಯೋಗಿಂದ್ರ ಮುಂತಾದ ಮಹರ್ಷಿಗಳಿಗೂ ಮತ್ತು ನವಯೋಗಿಗಳಾದ ನಿವೃತ್ತಿ, ಜ್ಞಾನದೇವ, ಮುಕ್ತಾಬಾಯಿ, ಜನಾರ್ಧನ, ಏಕನಾಥ, ನಾಮದೇವ, ತುಕಾರಾಮ, ಕನ್ಹಾ, ನರಹರಿ ಮೊದಲಾದವರಿಗೂ ಸಹ ವಂದನೆ ಅರ್ಪಿಸಿರುತ್ತಾರೆ.

೬. ಅನಂತರ ತಮ್ಮ ಅಜ್ಜ ಸದಾಶಿವರಾವ, ಪಿತಾಮಹ ರಘುನಾಥರಾವ, ತಮ್ಮನ್ನು ಬಾಲ್ಯದಲ್ಲಿಯೇ ಬಿಟ್ಟು ಅಗಲಿದ ಮಾತಾರತ್ನ, ತಮ್ಮನ್ನು ಸಾಕಿ ಸಲುಹಿದ ಅತ್ತೆ ಮತ್ತು ಪ್ರೀತಿಯ ಅಗ್ರಜರಿಗೆ ವಂದನೆ ಅರ್ಪಿಸಿರುತ್ತಾರೆ.

೭. ವಾಚಕ ಮಹಾಶಯರಿಗೂ ಸಹ ವಂದನೆ ಅರ್ಪಿಸಿ ಈ ಕಾರ್ಯಕ್ಕೆ ಅವರು ನಿಶ್ಚಲವಾದ ಗಮನ ಕೊಡುವಂತೆ ಪ್ರಾರ್ಥಿಸಿರುತ್ತಾರೆ.

೮. ಕೊನೆಯದಾಗಿ ತಮ್ಮ ಏಕಮಾತ್ರ ರಕ್ಷಕರಾದ ಜಗವೆಂಬ ಮಾಯೆಯಿಂದ ವಿಮೋಚನೆ ಹೊಂದಿ ಬ್ರಹ್ಮಜ್ಞಾನವನ್ನು ಪಡೆಯಲು ಸಹಾಯಕರಾದ ಶ್ರೀ ದತ್ತಾತ್ರೇಯರ ಅವತಾರ–ರೂಪಿಯಾದ ಶ್ರೀ ಸಾಯಿನಾಥರಿಗೆ ವಂದನೆ ಅರ್ಪಿಸಿದ್ದಾರೆ. ಹಾಗೆಯೇ ಪರಮಾತ್ಮನು ವಾಸವಾಗಿರುವ ಸಕಲ ಜೀವರಾಶಿಗಳಿಗೂ ಸಹ ವಂದಿಸಿದ್ದಾರೆ.

ನಂತರ ಪರಾಶರ, ವ್ಯಾಸ, ಶಾಂಡಿಲ್ಯ ಮೊದಲಾದವರು ಹೇಳಿದ ಭಕ್ತಿಯ ವಿವಿಧ ರೀತಿಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿ, ಲೇಖಕರು ಈ ಮುಂದಿನ ಕಥೆಯನ್ನು ಹೇಳಿದ್ದಾರೆ.

ಸುಮಾರು ೧೯೧೦ರ ನಂತರ ಒಂದು ದಿನ ಪ್ರಾತ:ಕಾಲ ಶ್ರೀ ಸಾಯಿಬಾಬಾ ಅವರ ದರ್ಶನ ಭಾಗ್ಯವನ್ನು ಪಡೆಯಲು ಶಿರ್ಡಿಯಲ್ಲಿಯ ಮಸೀದಿಗೆ ಹೋದೆನು. ಆ ದಿನ ಈ ಕೆಳಕಂಡ ಅದ್ಭುತವಾದ ಚಮತ್ಕಾರವನ್ನು ಕಂಡು ದಿಗ್ಭ್ರಾಂತನಾದೆ. ಶ್ರೀ ಸಾಯಿಬಾಬಾ ತಮ್ಮ ಮುಖವನ್ನು ತೊಳೆದುಕೊಂಡ ನಂತರ ಗೋಧಿಯನ್ನು ಬೀಸಲು ತಕ್ಕ ಸಿದ್ಧತೆಗಳನ್ನು ಮಾಡಿಕೊಂಡು ಹಿಡಿ ಹಿಡಿಯಾಗಿ ಗೋಧಿಯನ್ನು ಬೀಸುವ ಕಲ್ಲಿನೊಳಗೆ ಹಾಕಿ ಬೀಸುತ್ತ ಕುಳಿತರು. "ಇವರು ಭಿಕ್ಷೆ ಬೇಡಿ ಜೀವಿಸುವವರು. ಹೀಗೇಕೆ ಗೋಧಿಯನ್ನು ಬೀಸಿ ಹಿಟ್ಟು ಕೂಡಿ ಹಾಕುತ್ತಿದ್ದಾರೆ?" ಎಂಬ ಭಾವನೆ ನನ್ನಲ್ಲಿ ಮೂಡಿತು. ಅಲ್ಲಿ ನೆರೆದಿದ್ದ ಅನೇಕರಲ್ಲಿಯೂ ಸಹ ಈ ಭಾವನೆ ಇತ್ತು. ಆದರೂ ಬಾಬಾ ಅವರನ್ನು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ. ನಂತರ ನಾಲ್ಕು ಜನ ಮಹಿಳೆಯರು ಧೈರ್ಯದಿಂದ ಮುಂದೆ ಹೋಗಿ ಅವರನ್ನು ಎಬ್ಬಿಸಿ ಅವರ ಲೀಲೆಗಳನ್ನು ಹಾಡುತ್ತ ತಾವೇ ಬೀಸಲು ಕುಳಿತರು. ಬಾಬಾ ಮೊದಲು ಕೋಪಗೊಂಡರು. ನಂತರ ಅವರ ಪ್ರೀತಿ, ಭಕ್ತಿ, ವಾತ್ಸಲ್ಯಗಳಿಗೆ ಮನಸೋತು ಮುಗುಳು ನಗೆ ಬೀರುತ್ತ ಕುಳಿತರು. ಅವರು ಬೀಸುತ್ತ, 'ಬಾಬಾ' ಅವರಿಗೆ ಮನೆಯಾಗಲಿ, ಮಠವಾಗಲಿ, ಆಸ್ತಿ–ಪಾಸ್ತಿಗಳಾಗಲಿ, ಮಕ್ಕಳು–ಮರಿಗಳಾಗಲಿ ಇಲ್ಲ. ಜೋಪಾನ ಮಾಡಲೂ ಸಹ ಯಾರೂ ಇಲ್ಲ. ಭಿಕ್ಷಾಟನೆಯಿಂದ ಕಾಲ ನೂಕುತ್ತಿದ್ದಾರೆ. ರೊಟ್ಟಿ ಮಾಡಲು ಹಿಟ್ಟು ಬೇಕಾಗಿಲ್ಲ. ಇವರಿಗೇಕೆ ಇಷ್ಟೊಂದು ಹಿಟ್ಟು ? ಬಹುಶ: ದಯಾಳುವಾದ ಇವರು ನಮಗೆ ಈ ಹಿಟ್ಟನ್ನು ಹಂಚಬಹುದು" ಎಂದು ನಾನಾ ವಿಧವಾಗಿ ಯೋಚಿಸುತ್ತ ಎಲ್ಲವನ್ನೂ ಬೀಸಿ ಮುಗಿಸಿ ಹಿಟ್ಟನ್ನು ನಾಲ್ಕು ಭಾಗ ಮಾಡಿ ಹಂಚಿಕೊಂಡು ತೆಗೆದುಕೊಂಡು ಹೋಗಲು ಸಿದ್ಧರಾದರು. ಇದನ್ನು ನೋಡಿ ಅಲ್ಲಿಯವರೆಗೂ ತಾಳ್ಮೆಯಿಂದ ಇದ್ದ ಬಾಬಾ ಒಮ್ಮೆಲೆ ಕೋಪಗೊಂಡು "ಮಹಿಳೆಯರೆ, ನಿಮಗೇನು ಹುಚ್ಚು ಹಿಡಿಯಿತೆ? ಯಾರ ಅಪ್ಪನ ಆಸ್ತಿಯೆಂದು ಹಿಟ್ಟು ದೋಚಿಕೊಂಡು ಹೋಗುತ್ತಿದ್ದೀರಿ?

ನಾನೇನಾದರು ನಿಮ್ಮ ಮನೆಯಿಂದ ಗೋದಿಯನ್ನು ಎರವಲಾಗಿ ತಂದಿರುವೆನೆ? ಈಗ ಹಿಟ್ಟು ತೆಗೆದುಕೊಂಡು ಹಳ್ಳಿಯ ಗಡಿಯ ಸುತ್ತಲೂ ಒಗೆದು ಬನ್ನಿರಿ" ಎಂದರು. ಈ ಮಾತನ್ನು ಕೇಳಿ ಅವರು ಗಾಬರಿಗೊಂಡು ತಮ್ಮ ತಮ್ಮಲ್ಲಿಯೇ ಪಿಸುಗುಟ್ಟುತ್ತ ಬಾಬಾ ಅವರ ಅಜ್ಞಾನುಸಾರವಾಗಿ ಹಿಟ್ಟನ್ನು ಹಳ್ಳಿಯ ಸುತ್ತಲೂ ಚೆಲ್ಲಿ ಬಂದರು.

ಆಗ ನಾನು "ಬಾಬಾ ಹೀಗೇಕೆ ಮಾಡಿದರು?" ಎಂದು ಶಿರ್ಡಿವಾಸಿಗಳಲ್ಲಿ ಪ್ರಶ್ನಿಸಿದೆ. ಅವರು "ಕಾಲರಾ ಅಂಟು ಜಾಡ್ಯವು ಹಳ್ಳಿಯಲ್ಲಿ ಹರಡಿದೆ. ಅದಕ್ಕೆ ಇದು ಬಾಬಾ ಅವರ ಚಿಕಿತ್ಸೆ. ಹಿಟ್ಟು ಮಾಡಿ ಚೆಲ್ಲಿದುದು ಗೋದಿಯನ್ನಲ್ಲ - ಕಾಲರಾ ಕ್ರಿಮಿಗಳನ್ನು ಪುಡಿ ಮಾಡಿ ಹಳ್ಳಿಯಿಂದ ಆಚೆಗೆ ಚೆಲ್ಲಿದ್ದಾರೆ. ಇದರಿಂದ ಕಾಲರಾ ಜಾಡ್ಯವು ಕಡಿಮೆಯಾಗಿ ಈಗ ಜನರು ಸುಖವಾಗಿರುತ್ತಾರೆ" ಎಂದರು. ಈ ವಿಷಯವನ್ನು ಕೇಳಿ ನಾನು ವಿಸ್ಮಯಗೊಂಡೆ. ಆಗ ನನ್ನಲ್ಲಿ ನಾನೇ "ಗೋದಿ ಹಿಟ್ಟಿಗೂ ಕಾಲರಾಕ್ಕೂ ಇರುವ ವ್ಯಾವಹಾರಿಕ ಸಂಬಂಧವಾದರೂ ಏನು? ಈ ಘಟನೆ ವಿವರಣಾತೀತ. ನಾನು ಬಾಬಾ ಅವರ ಲೀಲೆಗಳ ಬಗ್ಗೆ ಬರೆಯಲೇಬೇಕು ಮತ್ತು ಅವರ ಮಧುರ ಲೀಲೆಗಳನ್ನು ಮನದಣಿಯುವಂತೆ ಹಾಡಲೇಬೇಕು" ಎಂದು ಯೋಚಿಸಿದಾಗ ನನ್ನ ಹೃದಯದಲ್ಲಿ ಸಂತೋಷ ತುಂಬಿ ತುಳುಕಾಡಲು ಪ್ರಾರಂಭವಾಯಿತು. ಈ ರೀತಿ ಸಾಯಿ ಸಚ್ಚರಿತೆ ಬರೆಯಲು ನನಗೆ ಸ್ಫೂರ್ತಿ ಬಂದಿತು.

ಬಾಬಾ ಅವರ ಕೃಪಾದೃಷ್ಟಿ ಮತ್ತು ಆಶೀರ್ವಾದದ ಫಲದಿಂದ ಈ ಕೆಲಸ ಯಶಸ್ವಿಯಾಗಿ ಮುಗಿಯಿತು ಎಂಬುದನ್ನು ನಾವು ಬಲ್ಲೆವು.

## ಬೀಸುವದರ ತತ್ವ

ಈ ಮೇಲ್ಕಂಡ ಘಟನೆಗೆ ಶಿರ್ಡಿ ನಿವಾಸಿಗಳು ಕೊಟ್ಟ ಅರ್ಥವಲ್ಲದೆ, ಈ ಮಹೋನ್ನತ ತತ್ವದರ್ಶನವೂ ಅದರ ಮತ್ತೊಂದು ಅರ್ಥವಾಗಿದೆ:

ಸಾಯಿಬಾಬಾ ಶಿರ್ಡಿಯಲ್ಲಿ ಸುಮಾರು ೬೦ ವರ್ಷಗಳ ಕಾಲ ವಾಸಿಸಿದ್ದರು. ಈ ಕಾಲದಲ್ಲಿ ಅವರು ಈ ತರದ ಬೀಸುವಿಕೆಯ ಕಾರ್ಯವನ್ನು ಪ್ರತಿ ದಿನವೂ ಮಾಡುತ್ತಿದ್ದರು. ಅವರು ಬೀಸುತ್ತಿದ್ದುದು ಬರೀ ಗೋದಿಯನ್ನಲ್ಲ - ಅಸಂಖ್ಯಾತ ಭಕ್ತರ ಪಾಪಗಳನ್ನು ಮತ್ತು ಅವರ ಮಾನಸಿಕ ಹಾಗೂ ದೈಹಿಕ ಜಿಗುಪ್ಸೆಗಳನ್ನು. ಕಾರಣ ಈ ಬೀಸುವ ಕಲ್ಲುಗಳು ಕರ್ಮ ಮತ್ತು ಭಕ್ತಿಯನ್ನು ಸೂಚಿಸುತ್ತವೆ. ಮೇಲಿನ ಕಲ್ಲು ಕರ್ಮವನ್ನೂ ಕೆಳಗಿನ ಕಲ್ಲು ಭಕ್ತಿಯನ್ನೂ ಸೂಚಿಸುತ್ತದೆ. ಬೀಸುವ ಕಲ್ಲಿನ ಹಿಡಿಯೇ ಜ್ಞಾನ. ನಮ್ಮನು ನಾವು ಸಂಪೂರ್ಣವಾಗಿ ಅರಿತುಕೊಳ್ಳಬೇಕಾದರೆ, ನಮ್ಮಲ್ಲಿರುವ ಪಾಪ, ಅಸೂಯೆ, ಆಶೆ ಮತ್ತು ಸತ್ವ, ರಜಸ್ಸು, ತಮೋಗುಣಗಳನ್ನು, ಅಹಂಕಾರವನ್ನೂ ಬೀಸುವದರಿಂದ ಹೊರದೂಡಬೇಕು. ಆಗ ನಮಗೆ ಅರಿವು ಉಂಟಾಗುವುದು ಎಂಬುದೇ ಬಾಬಾ ಅವರ ಸ್ಪಷ್ಟವಾದ ಸಂದೇಶ.

"ಬೀಸುವ ಕಲ್ಲಿನಲ್ಲಿ ಸಿಕ್ಕ ಕಾಳುಗಳಂತೆ ಈ ಭವಚಕ್ರದಲ್ಲಿ ಸಿಕ್ಕು ನಾನು ವೇದನೆಯನ್ನು ಅನುಭವಿಸಬೇಕಾಗಿದ್ದರಿಂದ ನಾನು ಅಳತೊಡಗಿದ್ದೇನೆ" ಎಂದು ಒಮ್ಮೆ ಕಬೀರರು ಕಾಳು ಬೀಸುತ್ತಿದ್ದ ಒಬ್ಬ ಮಹಿಳೆಯನ್ನು ನೋಡಿ ತಮ್ಮ ಗುರುಗಳಾದ ನಿಪಥಿರಂಜನರಿಗೆ ಹೇಳಿದರು. ಆಗ ನಿಪಥಿರಂಜನರು "ಅಂಜಬೇಡ, ನಾನು ಹಿಡಿದಂತೆ ನೀನೂ ಸಹ ಈ ಚಕ್ರಕ್ಕೆ ಇರುವ ಜ್ಞಾನವೆಂಬ ಮೇಟಿಯನ್ನು ಭದ್ರವಾಗಿ ಹಿಡಿದುಕೋ. ಅದರಿಂದ ಅತ್ತಿತ್ತ ದೂರ ಹೋಗಬೇಡ. ಅಂತರ್ಮುಖಿಯಾಗು - ಅಂದರೆ ನಿನಗೆ ಖಚಿತವಾಗಿ ಕಲ್ಯಾಣವಾಗುತ್ತದೆ" ಎಂದು ಕಬೀರರಿಗೆ ಉಪದೇಶಿಸಿದ ಕಥೆಯು ಈ ಮೇಲಿನ ಘಟನೆಯಿಂದ ನಮ್ಮ ಜ್ಞಾಪಕಕ್ಕೆ ಬರುತ್ತದೆ.

**ಶ್ರೀ ಸಾಯಿ ಪ್ರಣಾಮ**

# ೨ನೇ ಅಧ್ಯಾಯ

## ಕೃತಿಯ ಧ್ಯೇಯ–ಕಾರ್ಯಕ್ಕೆ ತಕ್ಕ ಧೈರ್ಯ

## ಹೇಮಾಡಪಂತ ಎಂಬ ಬಿರುದು ಬಂದ ಬಗೆ–ಗುರುವಿನ ಅವಶ್ಯಕತೆ

ಮೂಲ ಮರಾಠಿ ಕೃತಿಯಲ್ಲಿ ಹಿಂದಿನ ಅಧ್ಯಾಯದಲ್ಲಿ ಲೇಖಕರು ಈ ಕಾರ್ಯವನ್ನು ಕೈಕೊಂಡ ಬಗೆ ಮತ್ತು ಯಾರು ಈ ಕೃತಿಯನ್ನು ಓದಲು ಅರ್ಹರು ಎಂಬುದನ್ನು ತಿಳಿಸುವುದಾಗಿ ಹೇಳಿ, ಈಗ ಈ ಅಧ್ಯಾಯದಲ್ಲಿ ಅದನ್ನು ನೀರೂಪಿಸಿರುತ್ತಾರೆ.

### ಈ ಕೃತಿಯ ಧ್ಯೇಯ

ಈ ಹಿಂದಿನ ಅಧ್ಯಾಯದಲ್ಲಿಯೇ ನಾನು ಶ್ರೀ ಸಾಯಿಬಾಬಾ ಕಾಲರಾ ಅಂಟು ಜಾಡ್ಯವು ಹರಡುವುದನ್ನು ತಡೆಗಟ್ಟಿದ ಅದ್ಭುತ ಪವಾಡವನ್ನು ವಿವರಿಸಿದ್ದೇನೆ. ಇದಾದ ನಂತರ ಅನೇಕ ಅದ್ಭುತ ಪವಾಡಗಳನ್ನು ಕೇಳಿದೆ. ಅದರಿಂದ ಉಂಟಾದ ಸಂತೋಷದಿಂದ ಈ ಕೃತಿ ಹೊರಹೊಮ್ಮಿದೆ. ಈ ಅದ್ಭುತ ಪವಾಡಗಳ ವಿವರಣೆಯು ಭಕ್ತ ಕೋಟಿಗೆ ಹಿಡಿಸುತ್ತದೆ ಮತ್ತು ಅವುಗಳ ಶ್ರವಣದಿಂದ ಭಕ್ತರ ಪಾಪಗಳು ನಾಶವಾಗುತ್ತವೆ ಎಂದು ತಿಳಿದು ಅವರ ಉದಾತ್ತವಾದ ಜೀವನ ಚರಿತ್ರೆ ಮತ್ತು ಉಪದೇಶಗಳನ್ನು ಬರೆಯಲು ತೊಡಗಿದೆ. ಈ ಯೋಗಿಯ ಜೀವನ ಚರಿತ್ರೆಯು ತರ್ಕವೂ ಅಲ್ಲ, ತರ್ಕಶಾಸ್ತ್ರವೂ ಅಲ್ಲ. ಇದು ನಮಗೆ ನೈಜವಾದ ಆಧ್ಯಾತ್ಮಿಕ ರಾಜಮಾರ್ಗ.

### ಅಸಮರ್ಥತೆ

ಹೇಮಾಡಪಂತರು ಈ ಕಾರ್ಯವನ್ನು ಕೈಕೊಳ್ಳಲು ತಮಗೆ ಯೋಗ್ಯತೆ ಸಾಲದೆಂದು ಭಾವಿಸಿದ್ದರು. "ನನಗೆ ಯಾವ ಆತ್ಮ ಸ್ನೇಹಿತನ

ಜೀವನ ಚರಿತ್ರೆಯೂ ಗೊತ್ತಿರುವುದಿಲ್ಲ. ನನ್ನ ಜೀವನ ಚರಿತ್ರೆಯೇ ನನಗೆ ತಿಳಿಯದು. ಹೀಗಿರುವಾಗ ಓರ್ವ ಮಹಾಯೋಗಿಯ ಜೀವನ ಚರಿತ್ರೆ ಬರೆಯಲು ಸಾಧ್ಯವೇ? ಅವರ ಅವತಾರವನ್ನು ವಿವರಿಸಲು ಶಕ್ಯನೆ? ಮಹಾಯೋಗಿಗಳ ಜೀವನ ಚರಿತ್ರೆ ಬರೆಯಬೇಕಾದರೆ ಅವರೂ ಸಹಾ ಮಹಾಯೋಗಿಗಳ ಹಾಗೆಯೇ ಇರಬೇಕು. ಇಲ್ಲದಿದ್ದರೆ ಅವರ ಅನುಭವಗಳನ್ನು ಹೊರಗೆಡಹಲು ಹೇಗೆ ಸಾಧ್ಯವಾದೀತು? ಇದೊಂದು ಕ್ಲಿಷ್ಟ ಸಮಸ್ಯೆ. ಮಹಾಸಾಗರದ ಆಳವನ್ನು ಪತ್ತೆ ಹಚ್ಚಬಹುದು. ಗಗನಕ್ಕೆ ವಸ್ತ್ರವನ್ನು ಹೊದಿಸಬಹುದು. ಆದರೆ ಈ ಕೆಲಸ ಗುರುತವಾದುದು – ನಂತರ ನಗೆಗೀಡಾದೇನು!" ಎಂದು ಹೇಳಿ ಸಾಯಿಯವರ ಆಶೀರ್ವಾದವನ್ನು ಬೇಡಿದೆ ಎಂಬುದಾಗಿ ಕವಿ ಹೇಮಾಡಪಂತ ಹೇಳಿರುತ್ತಾರೆ.

ಅತ್ಯಂತ ಹೆಸರುವಾಸಿಯಾದ ಮಹಾರಾಷ್ಟ್ರದ ಕವಿಯೋಗಿಗಳಾದ ಶ್ರೀ ಜ್ಞಾನೇಶ್ವರ ಮಹಾರಾಜರು ಈ ರೀತಿ ಹೇಳಿದ್ದಾರೆ: ಮಹಾ ಯೋಗಿಗಳು ಭಕ್ತರಿಂದ ತಮ್ಮದೇ ಆದ ವಿಚಿತ್ರ ರೀತಿಯಿಂದ ತಮ್ಮ ಕೆಲಸವನ್ನು ನೆರವೇರಿಸಿಕೊಳ್ಳುತ್ತಾರೆ. ಸಂತರ ಧ್ಯೇಯವನ್ನು ಸಾಧಿಸಲು ಭಕ್ತರು ಬಾಹ್ಯ ಪ್ರತೀಕರಷ್ಟೆ.

ಸುಮಾರು ೧೭೦೦ (ಶಕ) ರಲ್ಲಿ ಕವಿ ಮಹಿಪತಿಯವರು, ಮಹಾಯೋಗಿಗಳ ಅದ್ಭುತ ಜೀವನ ಚರಿತ್ರೆಯನ್ನು ಬರೆಯಲು ಉತ್ಸುಕರಾದರು. ಮಹಾಯೋಗಿಗಳು ಅವರನ್ನು ಪ್ರೇರೇಪಿಸಿ ಆ ಕಾರ್ಯವನ್ನು ಕೈಗೂಡಿಸಿಕೊಂಡರು. ಇದೇ ರೀತಿ ೧೮೦೦(ಶಕ)ರಲ್ಲಿ ದಾಸಗಣೂರವರ ಸೇವೆಯೂ ಸ್ವೀಕರಿಸಲ್ಪಟ್ಟಿತು. ಕವಿ ಮಹಿಪತಿಯವರು ನಾಲ್ಕು ಕೃತಿಗಳನ್ನು ಹೊರಗೆಡಹಿದರು. ೧. ಭಕ್ತವಿಜಯ ೨. ಸಂತವಿಜಯ ೩.ಭಕ್ತಲೀಲಾಮೃತ ೪. ಸಂತಲೀಲಾಮೃತ. ಶ್ರೀ ದಾಸಗಣೂ ಅವರು ಭಕ್ತಲೀಲಾಮೃತ ಮತ್ತು ಸಂತಲೀಲಾಮೃತ ಎಂಬ ಮಹೋನ್ನತ ಕೃತಿಗಳನ್ನು ಜನ ಸಮೂಹಕ್ಕೆ ದಯಪಾಲಿಸಿದರು.

ಇವುಗಳಲ್ಲಿ ಅನೇಕ ನವ್ಯ ಮಹಾಯೋಗಿಗಳ ಜೀವನ ಚರಿತ್ರೆಯು ಉಲ್ಲೇಖಿಸಲ್ಪಟ್ಟಿದೆ. ಭಕ್ತಲೀಲಾಮೃತ ೩೧-೩೨ನೇ ಮತ್ತು ೩೩ನೇ ಅಧ್ಯಾಯಗಳಲ್ಲಿಯೂ ಮತ್ತು ಸಂತಲೀಲಾಮೃತದ ೫೭ನೇ ಅಧ್ಯಾಯದಲ್ಲಿಯೂ ಶ್ರೀ ಸಾಯಿಬಾಬಾ ಅವರ ಜೀವನ ಚರಿತ್ರೆಯನ್ನು ಕಾಣಬಹುದು. ಇವು ಸಾಯಿಲೀಲಾ ಮಾಸಿಕದ ೧೧, ೧೨ ಮತ್ತು ೧೭ನೇ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಇದೇ ರೀತಿ ಶ್ರೀ ಸಾಯಿಬಾಬಾ ಅವರ ಅದ್ಭುತ ಲೀಲೆಗಳನ್ನು ಶ್ರೀಮತಿ ಸಾವಿತ್ರಿಬಾಯಿ ರಘುನಾಥ ತೆಂಡೋಲಕರ ಅವರು ಚಿಕ್ಕದಾದ, ಅಚ್ಚುಕಟ್ಟಾದ ಶ್ರೀ ಸಾಯಿನಾಥ ಭಜನ ಮಾಲಾ ಎಂಬ ಪುಸ್ತಕದಲ್ಲಿ ಬಹಳ ಚೆನ್ನಾಗಿ ವಿವರಿಸಿದ್ದಾರೆ. ದಕ್ಷಿಣ ಭಿಕ್ಷಾ ಸಂಸ್ಥೆ ಶಿರ್ಡಿಯ ಪ್ರಕಟನೆಯಾದ 'ಶ್ರೀ ಸಾಯಿ ಪ್ರಭಾ' ಎಂಬ ಪುಸ್ತಕದಲ್ಲಿ ಸಾಯಿ ಭಕ್ತರಾದ ಅಮೀದಾಸ ಭವಾನಿ ಮೆಹತಾ ಅವರು ಸಾಯಿಬಾಬಾ ಅವರ ಕೆಲವು ಕಥೆಗಳನ್ನು ಗುಜರಾತಿಯಲ್ಲಿ ಬರೆದಿರುತ್ತಾರೆ. ಇಷ್ಟೊಂದು ಕೃತಿಗಳಿದ್ದಾಗ ಈ ಸಚ್ಚರಿತೆಯ ಅವಶ್ಯಕತೆ ಏನು ಎಂಬ ಪ್ರಶ್ನೆ ಬರುವದು ಸಹಜ.

ಇದಕ್ಕೆ ಉತ್ತರ ಬಹು ಸುಲಭ ಶ್ರೀ ಸಾಯಿಬಾಬಾ ಅವರ ಜೀವನವು ಮಹಾ ಸಾಗರದಷ್ಟು ವಿಶಾಲವೂ ಮತ್ತು ಆಳವೂ ಆಗಿದೆ. ಯಾರು ಬೇಕಾದರೂ ಈ ಮಹಾಸಾಗರದಲ್ಲಿ ಮುಳಗಿ ಜ್ಞಾನ ಮತ್ತು ಭಕ್ತಿಯೆಂಬ ಅನರ್ಘ್ಯ ರತ್ನಗಳನ್ನು ತೆಗೆದು ಭಕ್ತ ಕೋಟಿಗೆ ಹಂಚಬಹುದು. ಇವರ ಕಥೆಗಳು, ಉಪದೇಶಗಳು ಮತ್ತು ನೀತಿ ಪಾಠಗಳು ಬಹಳ ಅದ್ಭುತವಾಗಿವೆ. ಯಾರು ದು:ಖದಿಂದ ನೊಂದಿರುತ್ತಾರೆಯೋ, ಪ್ರಾಪಂಚಿಕ ಜೀವನದಲ್ಲಿ ಜಿಗುಪ್ಸೆ ಹೊಂದಿರುತ್ತಾರೆಯೋ ಅಂಥವರಿಗೆ ಇವು ಶಾಂತಿ ಮತ್ತು ಸಂತೋಷವನ್ನು, ನೀಡುತ್ತವೆ. ಪ್ರಾಪಂಚಿಕ ಮತ್ತು ಪಾರಮಾರ್ಥಿಕ ವಿಷಯಗಳಲ್ಲಿ ಅವರಿಗೆ ಜ್ಞಾನವನ್ನೂ, ಅರಿವನ್ನೂ, ಉಂಟು ಮಾಡುತ್ತವೆ.

ವೇದಗಳಂತೆ ಅಭಿರುಚಿ ಹಾಗು ಬೋಧಪ್ರದವಾದ ಶ್ರೀ ಸಾಯಿಬಾಬಾ ಅವರ ಉಪದೇಶಗಳನ್ನು ಯಾರು ಶ್ರದ್ಧೆಯಿಂದ

ಕೇಳುತ್ತಾರೆಯೋ ಅವರ ಅಭೀಷ್ಟಗಳು ಸಿದ್ಧಿಸುವವು. ಈ ಕಥೆಗಳನ್ನು ಸಂಗ್ರಹಿಸಿ ಇಡುವುದೇ ನನ್ನ ಮುಖ್ಯೋಪಾಸನೆ. ಶ್ರೀ ಸಾಯಿಬಾಬಾ ಅವರ ದರ್ಶನವನ್ನು ಯಾರಿಗೆ ಪಡೆಯಲು ಆಗಲಿಲ್ಲವೋ ಅಂಥವರಿಗೆ ಈ ಕೃತಿ ಸಂತೋಷವನ್ನು ದೊರಕಿಸುತ್ತದೆ. ಆದ್ದರಿಂದ ಈ ಕಾರ್ಯದಲ್ಲಿ ನಾನು ಅನುವಾದೆ. "ನಾನು" "ನನ್ನದು" ಎಂಬ ಅಹಂಕಾರವನ್ನು ಅವರ ದಿವ್ಯ ಚರಣಾರವಿಂದಗಳಲ್ಲಿ ಅರ್ಪಿಸಿರುತ್ತೇನೆ. ಆದ್ದರಿಂದ ದಾರಿ ಈಗ ಸುಗಮವಾಗಿದೆ ಎಂದು ಭಾವಿಸಿದ್ದೇನೆ. ಅವರು ನನಗೆ ಇಹ–ಪರಗಳೆರಡರಲ್ಲಿಯೂ ಸಂತೋಷವನ್ನು ದೊರಕಿಸಿ ಕೊಡುತ್ತಾರೆ ಎಂದೇ ನನ್ನ ಅಚಲ ನಂಬಿಕೆ.

ನಾನೇ ಸ್ವತ: ಬಾಬಾ ಅವರ ಅಪ್ಪಣೆ ಪಡೆಯಲಿಲ್ಲ. ಆದುದರಿಂದ ಅವರ ಆತ್ಮೀಯ ಸಖರಾದ ಮಾಧವರಾವ ದೇಶಪಾಂಡೆ (ಶ್ಯಾಮ) ಅವರನ್ನು ನನ್ನ ಪರವಾಗಿ ಮಾತಾಡಲು ಬೇಡಿಕೊಂಡೆನು. ಅವರು ಈ ವಿಚಾರವನ್ನು ಬಾಬಾ ಅವರಿಗೆ "ಈ ಅಣ್ಣಾ ಸಾಹೇಬರು ನಿಮ್ಮ ಜೀವನ ಚರಿತ್ರೆ ಬರೆಯಲು ಉತ್ಸುಕರಾಗಿದ್ದಾರೆ. 'ನಾನು ಬಡ ಫಕೀರ. ನನ್ನ ಜೀವನ ಚರಿತ್ರೆಯ ಅವಶ್ಯಕತೆಯಿಲ್ಲ' ಎಂದು ದಯವಿಟ್ಟು ಹೇಳಬೇಡಿ. ನೀವು ಒಪ್ಪಿದರೆ ಅವರು ಬರೆಯಲು ಅನುವಾಗುತ್ತಾರೆ. ತಮ್ಮ ಚರಣ ಸೇವಾ ಬಲವೇ ಈ ಕೆಲಸವನ್ನು ಪೂರ್ತಿ ಮಾಡಿಸಿಕೊಳ್ಳುತ್ತದೆ. ನಿಮ್ಮ ಒಪ್ಪಿಗೆ ಮತ್ತು ಆಶೀರ್ವಾದವಿಲ್ಲದೆ ಯಾವ ಕಾರ್ಯವೂ ಯಶಸ್ವಿಯಾಗಿ ಮುಗಿಯಲಾರದು" ಎಂದು ತಿಳಿಸಿದರು. ಆಗ ಬಾಬಾ ಅವರ ಮನ ಕರಗಿ ನನ್ನ ಮಸ್ತಕದ ಮೇಲೆ ಅಭಯ ಹಸ್ತ ಇಟ್ಟು ಉಧಿ ನೀಡಿ, ಆಶೀರ್ವದಿಸಿ "ನನ್ನ ಕಥೆಗಳನ್ನು ಮತ್ತು ಅನುಭವಗಳನ್ನು ಸಂಗ್ರಹ ಮಾಡು, ಟಿಪ್ಪಣಿಗಳನ್ನಿಡು, ನಾನು ಸಹಾಯ ಮಾಡುತ್ತೇನೆ. ನೀನು ಕೇವಲ ಬಾಹ್ಯ ಪ್ರತೀಕ ನಾನೇ ನನ್ನ ಜೀವನ ಚರಿತ್ರೆಯನ್ನು ಬರೆದು ಭಕ್ತರ ಅಭಿಲಾಷೆಗಳನ್ನು ಈಡೇರಿಸುತ್ತೇನೆ. ಅಹಂಕಾರವನ್ನು ತೊರೆದು ನನ್ನ ಪಾದಾರವಿಂದಗಳನ್ನು ಆಶ್ರಯಿಸು.

ಯಾರು ತಮ್ಮ ಜೀವಿತದಲ್ಲಿ ಈ ರೀತಿ ವರ್ತಿಸುತ್ತಾರೆಯೋ ಅವರಿಗೆ ಸಹಾಯ ಮಾಡುತ್ತೇನೆ. ಯಾವಾಗ ನೀನು ಅಹಂಕಾರವನ್ನು ತ್ಯಜಿಸುವೆಯೋ ಆಗ ನಾನು ನಿನ್ನ ಒಳಹೊಕ್ಕು ನನ್ನ ಜೀವನ ಚರಿತ್ರೆಯನ್ನು ಸ್ವತ: ಬರೆಯುತ್ತೇನೆ. ನನ್ನ ಕಥೆ ಮತ್ತು ಉಪದೇಶಗಳನ್ನು ಕೇಳುವದರಿಂದ ಭಕ್ತರ ಹೃದಯದಲ್ಲಿ ನಂಬಿಕೆ ಉಂಟಾಗುತ್ತದೆ. ಆಗ ಅವರು ಸ್ವಾನುಭವ ಮತ್ತು ಪರಮ ಸುಖವನ್ನು ಹೊಂದುತ್ತಾರೆ. ಆದರೆ ತಮ್ಮದೇ ಆದ ರೀತಿಯನ್ನು ಪ್ರತಿಪಾದಿಸಬಾರದು. ಬೇರೆಯವರ ಸಲಹೆ ತಿರಸ್ಕರಿಸಬಾರದು. ನ್ಯಾಯನ್ಯಾಯದ ತರ್ಕವಿಚಾರ ಮಾಡಕೂಡದು" ಎಂದು ಹೇಳಿದರು.

ಈಗ ನನಗೆ "ಹೇಮಾಡಪಂತ" ಎಂಬ ಹೆಸರು ಹೇಗೆ ದೊರಕಿತು ಎಂಬುದನ್ನು ಹೇಳುತ್ತೇನೆ. ನಾನು, ಕಾಕಾಸಾಹೇಬ ದೀಕ್ಷಿತ ಮತ್ತು ನಾನಾಸಾಹೇಬ ಚಾಂದೋರಕರ ಬಹಳ ಆತ್ಮೀಯ ಸ್ನೇಹಿತರು. ಇವರು ನನ್ನನ್ನು ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆದು ಬರುವಂತೆ ಒತ್ತಾಯ ಪಡಿಸಿದರು. ನಾನು ಮಾತು ಕೊಟ್ಟೆನು. ಆದರೆ ಕಾರಣಾಂತರಗಳಿಂದ ಹೋಗಲಾಗಲಿಲ್ಲ. ಲೋಣಾವಳದಲ್ಲಿ ನನ್ನ ಸ್ನೇಹಿತರೊಬ್ಬರ ಮಗನಿಗೆ ಬಹಳ ಖಾಯಿಲೆಯಾಗಿತ್ತು. ಯಾವ ಔಷಧಿಗಳಿಂದಲೂ ಪ್ರಯೋಜನ ಆಗಲಿಲ್ಲ. ಗುರುಗಳನ್ನು ಕರೆಯಿಸಿ ಅವರನ್ನು ಮಗನ ಹಾಸಿಗೆಯ ಬಳಿ ಕೂಡ್ರಿಸಿದರು. ಅದರಿಂದಲೂ ಪ್ರಯೋಜನವಾಗಲಿಲ್ಲ. ಇದನ್ನು ಕೇಳಿ ನನಗೆ "ಗುರುವಿನ ಪ್ರಯೋಜನವಾದರೂ ಏನು? ಗುರುವಿನ ಸಹಾಯದಿಂದ ಏನೊಂದು ಸಾಧ್ಯವಾಗದೆ ಇದ್ದರೆ ನಾನು ಶಿರ್ಡಿಗೆ ಏಕೆ ಹೋಗಬೇಕು" ಎಂದೆನಿಸಿತು. ಈ ರೀತಿ ಯೋಚಿಸುತ್ತ ನಾನು ಶಿರ್ಡಿ ಪ್ರಯಾಣವನ್ನು ಮುಂದೂಡಿದೆನು. ಆದರೆ ಅನಿವಾರ್ಯವಾದದ್ದು ಆಗಲೇ ಬೇಕು. ನನ್ನ ವಿಷಯದಲ್ಲಿಯೂ ಈ ರೀತಿಯಾಯಿತು. ಪ್ರಾಂತಾಧಿಕಾರಿಯಾದ ನಾನಾಸಾಹೇಬರು ಬಾಸೀನ್ನಿಗೆ ಪ್ರಯಾಣ ಬೆಳೆಸಿದ್ದರು. ಠಾಣಾದಿಂದ

ದಾದರಿಗೆ ಬಂದು ಬಾಸೀನ್ ಗಾಡಿಗೆ ಕಾಯುತ್ತಿದ್ದರು. ಅಷ್ಟರಲ್ಲಿ ಬಾಂದ್ರಾಗೆ ಹೋಗುವ ಲೋಕಲ್ ಬಂದಿತು. ಆಗ ಅವರು ಬಾಂದ್ರಾಕ್ಕೆ ಬಂದು ನನ್ನನ್ನು ಕರೆಯಿಸಿ ಶಿರ್ಡಿ ಪ್ರಯಾಣವನ್ನು ಮುಂದೂಡಿದುದಕ್ಕೆ ತರಾಟೆಗೆ ತೆಗೆದುಕೊಂಡರು. ಆಗ ಅದೇ ರಾತ್ರಿ ಶಿರ್ಡಿಗೆ ಹೋಗಲು ನಿರ್ಧರಿಸಿದೆನು. ದಾದರಿಗೆ ಹೋಗಿ ಅಲ್ಲಿಂದ ಮನಮಾಡ ಗಾಡಿಯನ್ನು ಹಿಡಿಯಲೆಂದು ದಾದರಿಗೆ ಹೊರಟೆ. ಇನ್ನೇನು ರೈಲು ಹೊರಡುವದರಲ್ಲಿತ್ತು. ಆಗ ಓರ್ವ ಮಹಮ್ಮದೀಯನು ನಮ್ಮ ಗಾಡಿಗೆ ಬಂದು ನನ್ನ ಸಾಮಾನು ಮುಂತಾದವುಗಳನ್ನು ನೋಡಿ 'ಎಲ್ಲಿಗೆ ಪ್ರಯಾಣ?' ಎಂದು ಕೇಳಿದನು. 'ಶಿರ್ಡಿಗೆ' ಎಂದು ಉತ್ತರಿಸಲು ಅವನು "ನೀವು ಸೀದಾ ಬೋರಿ ಬಂದರಗೆ ಹೋಗಿ ಅಲ್ಲಿಂದ ಮನಮಾಡ ಮೇಲ ಹಿಡಿಯಿರಿ. ದಾದರಿನಲ್ಲಿ ಇಳಿಯಬೇಡಿ, ಅಲ್ಲಿ ಮನಮಾಡ ಮೇಲ ನಿಲ್ಲುವದಿಲ್ಲ" ಎಂದನು. ಈ ಘಟನೆ ನಡೆಯದಿದ್ದರೆ ನನ್ನ ಅಭಿಲಾಷೆ ಪ್ರಕಾರ ನಾನು ಮರುದಿನ ಶಿರ್ಡಿ ತಲುಪಲಾಗುತ್ತಿರಲಿಲ್ಲ. ಅದೃಷ್ಟ ಬಲದಿಂದ ಶಿರ್ಡಿಯನ್ನು ಮರುದಿನ ಮುಂಜಾನೆ ೯-೧೦ ಗಂಟೆಗೆ ಸೇರಿದೆ. ಶ್ರೀ ಕಾಕಾಸಾಹೇಬ ದೀಕ್ಷಿತ (ಕಾಕಾ) ನನಗಾಗಿ ಕಾದಿದ್ದರು. ಇದು ನಡೆದಿದ್ದು ಸುಮಾರು ೧೯೧೦ರಲ್ಲಿ. ಆಗ ಶಿರ್ಡಿಯಲ್ಲಿ ಯಾತ್ರಿಕರಿಗೆ ತಂಗಲು ಇದ್ದ ಧರ್ಮಶಾಲೆ ಎಂದರೆ 'ಸಾಠೆವಾಡಾ' ಒಂದೆ. ಬಂದ ತಕ್ಷಣವೇ ಬಾಬಾ ಅವರ ದರ್ಶನವನ್ನು ಪಡೆಯಲು ಮನಸ್ಸು ಹಾತೊರೆಯುತಿತ್ತು. ಆಗ ತಾನೇ ತಾತ್ಯಾಸಾಹೇಬ ನೂಲಕರರು ಮಸೀದಿಯಿಂದ ಹಿಂತಿರುಗಿ ಬಂದು "ಬಾಬಾ ಈಗ ವಾಡಾದ ಮೂಲೆಯ ಹತ್ತಿರ ಇದ್ದಾರೆ. ಮೊದಲು ಹೋಗಿ ಅಲ್ಲಿ ದರ್ಶನ ಪಡೆಯಿರಿ. ಸ್ನಾನವಾದ ನಂತರ ವಿರಾಮವಾಗಿ ಮಸೀದಿಯಲ್ಲಿ ದರ್ಶನ ಪಡೆಯಿರಿ" ಎಂದು ಹೇಳಿದರು. ಇದನ್ನು ಕೇಳಿ ಬಾಬಾ ಅವರ ಕಡೆಗೆ ಕೂಡಲೇ ಬಂದೆ. ನನ್ನ ಸಂತೋಷಕ್ಕೆ ಪಾರವಿಲ್ಲದಾಯಿತು. ಅವರು ಹೇಳಿದ್ದುದಕ್ಕಿಂತ ಮಿಗಿಲಾದುದನ್ನು ಕಂಡೆನು. ನನ್ನ ಇಂದ್ರಿಯಗಳೆಲ್ಲವೂ ತೃಪ್ತಿಗೊಂಡವು.

ಹಸಿವು-ನೀರಡಿಕೆ ದೂರವಾದವು. ಶ್ರೀ ಬಾಬಾ ಅವರ ಚರಣಾರವಿಂದಗಳ ಸ್ಪರ್ಶವಾದ ಕೂಡಲೇ ನಾನು ಪುನರ್‌ಜನ್ಮ ಹೊಂದಿದಂತಾಯಿತು. ಶ್ರೀಯುವರ ದರ್ಶನ ಪಡೆಯಲು ಪ್ರೇರೇಪಿಸಿದವರನ್ನು ಸ್ಮರಿಸಿಕೊಂಡೆನು. ನಾನು ಅವರನ್ನು ನನ್ನ ನಿಜವಾದ ಬಂಧುಗಳೆಂದೇ ಭಾವಿಸಿದ್ದೇನೆ. ಅವರನ್ನು ನೆನೆದು ಮನದಲ್ಲಿ ಪ್ರಾರ್ಥಿಸುತ್ತೇನೆ. ಶ್ರೀ ಬಾಬಾ ಅವರ ದರ್ಶನದಲ್ಲಿ ಒಂದು ವಿಚಿತ್ರ ಶಕ್ತಿ ಅಡಗಿದೆ. ನನ್ನ ಅಭಿಪ್ರಾಯದಲ್ಲಿ ಅವರ ದರ್ಶನದಿಂದ ನಮ್ಮ ಭಾವನೆಗಳೆಲ್ಲವೂ ಬದಲಾಗುತ್ತದೆ. ನಮ್ಮ ಪೂರ್ವ ಕರ್ಮಗಳೆಲ್ಲ ಸವೆದು ಕ್ರಮೇಣ ಪ್ರಾಪಂಚಿಕ ವಸ್ತುಗಳ ಕಡೆಗೆ ವೀತರಾಗವುಂಟಾಗುತ್ತದೆ. ಮೋಹ ಕಡಿಮೆಯಾಗುತ್ತದೆ. ನಮ್ಮ ಪೂರ್ವಜನ್ಮದ ಪುಣ್ಯಗಳ ಫಲದಿಂದ ಮಾತ್ರವೇ ನಮಗೆ ಅವರ ದರ್ಶನ ಸಾಧ್ಯ. ನೀವು ಶ್ರೀ ಸಾಯಿಬಾಬಾರವರನ್ನು ನೋಡಿದರೆ ನಿಜವಾಗಿಯೂ ಪ್ರಪಂಚವೇ ಸಾಯಿಬಾಬಾರಂತೆ ಕಾಣುವುದು.

## ಬಿಸಿ ತರ್ಕ

ನಾನು ಶಿರ್ಡಿಗೆ ಬಂದ ದಿನವೇ ಗುರುವಿನ ಅಗತ್ಯದ ಬಗ್ಗೆ ನನಗೂ ಬಾಳಾಸಾಹೇಬ ಭಾಟೆಯವರಿಗೂ ದೊಡ್ಡ ಚರ್ಚೆ ನಡೆಯಿತು. ನಮ್ಮ ಸ್ವತಂತ್ರತೆಯನ್ನೇಕೆ ಬಿಡಬೇಕು? ಪರರಿಗೇಕೆ ದಾಸರಾಗಬೇಕು? ಗುರುವಿನ ಅಗತ್ಯವೇನು? ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ನಮ್ಮನ್ನು ನಾವು ಕಾಪಾಡಿಕೊಳ್ಳಲು ಶ್ರಮಿಸಬೇಕು. ಸುಮ್ಮನೆ ಜಾಡ್ಯತನದಿಂದ ಕುಳಿತು ನಿದ್ರೆ ಮಾಡುವುದರಿಂದೇನು ಪ್ರಯೋಜನ ಎಂದು ನನ್ನ ವಾದ. ವಿಧಿ! ಏನು ಸಂಭವಿಸಬೇಕೋ ಅದು ಸಂಭವಿಸಿಯೇ ತೀರುತ್ತದೆ. ಅನೇಕ ಮಹಾತ್ಮರೂ ಸಹ ಅನುಭವಿಸಿದ್ದಾರೆ. ನಾವೊಂದು ಬಗೆದರೆ ದೈವವೊಂದು ಬಗೆಯುತ್ತದೆ. "ನಿನ್ನ ಬುದ್ಧಿವಂತಿಕೆಯನ್ನು ಬದಿಗೆ ತಳ್ಳು, ನಿನ್ನ ಅಹಂಕಾರ ನಿನಗೆ ಸಹಾಯವಾಗಲಾರದು" ಎಂದು ಭಾಟೆಯವರ ವಾದ. ಈ ರೀತಿ

ಚರ್ಚೆ ಒಂದು ಗಂಟೆ ಕಾಲ ನಡೆಯಿತು. ಆದರೂ ಯಾವುದೊಂದು ನಿಲುವಿಗೂ ಬರಲಾಗಲಿಲ್ಲ. ಇದರಿಂದ ನನ್ನ ಮನಸ್ಸಿಗೆ ನೆಮ್ಮದಿಯಿರಲಿಲ್ಲ.

ಅನಂತರ ನಾವು ಇತರರೊಡನೆ ಮಸೀದಿಗೆ ಹೊರಟೆವು. ಆಗ ಬಾಬಾರವರು ಕಾಕಾಸಾಹೇಬರನ್ನು ಕುರಿತು, "ಸಾಠೆವಾಡಾದಲ್ಲಿ ಏನು ನಡೆಯಿತು? ಚರ್ಚೆಯ ವಿಷಯವೇನು? (ನನ್ನ ಕಡೆಗೆ ನೋಡಿ) ಈ 'ಹೇಮಾಡಪಂತ' ಏನು ಹೇಳುತ್ತಾನೆ?" ಎಂದು ಕೇಳಿದರು.

ಈ ಮಾತುಗಳನ್ನು ಕೇಳಿ ನನಗೆ ವಿಸ್ಮಯವಾಯಿತು. ನಾವು ವಾದ ಮಾಡುತ್ತಿದ್ದ ಸಾಠೆವಾಡಾ ಮಸೀದಿಯಿಂದ ದೂರದಲ್ಲಿತ್ತು. ಅವರು ಸರ್ವಜ್ಞರಲ್ಲದಿದ್ದ ಪಕ್ಷದಲ್ಲಿ ಈ ವಿಚಾರವನ್ನು ಹೇಗೆ ತಿಳಿಯಲು ಸಾಧ್ಯ?

## ಭವಿಷ್ಯವಾದಿ ಬಿರುದು

ಶ್ರೀ ಸಾಯಿಬಾಬಾರವರು ನನ್ನನ್ನು "ಹೇಮಾಡಪಂತ" ಎಂದು ಸಂಬೋಧಿಸಿದುದೇಕೆ ಎಂಬ ಯೋಚನೆ ನನ್ನಲ್ಲಿ ಮೂಡಿತು. ಈ ಪದದ ಮೂಲ ಹೇಮಾದ್ರಿಪಂತ. ಹೇಮಾದ್ರಿಪಂತರವರು ಯಾದವ ಕುಲದ ದೇವಗಿರಿ ಮಹಾರಾಜರಾದ ಮಹಾದೇವ ಮತ್ತು ರಾಮದೇವ ರಾಜರಿಗೆ ಮಂತ್ರಿಯಾಗಿದ್ದರು. ವಿದ್ಯಾವಂತರೂ ಸದ್ಗುಣ ಸಂಪನ್ನರೂ ಆಗಿ ಚತುರ್ವರ್ಗ ಚಿಂತಾಮಣಿ, ರಾಜ್ಯಪ್ರಶಸ್ತಿ ಮುಂತಾದ ಗ್ರಂಥಗಳ ಕರ್ತೃಗಳಾಗಿದ್ದರು. ನವರೀತಿಯ ಲೆಕ್ಕದ ವಿಧಾನವನ್ನು ಕಂಡುಹಿಡಿದಿದ್ದರು. ಮೋಡೀ ಲಿಪಿಯನ್ನು ಸೃಷ್ಟಿಸಿದವರು. ನಾನಾದರೋ ಇದಕ್ಕೆಲ್ಲ ತದ್ವಿರುದ್ಧ; ಸಾಮಾನ್ಯ ಮಾನವ. ಆದುದರಿಂದ ನನಗೇಕೆ ಈ ಬಿರುದನ್ನು ದಯಪಾಲಿಸಿದರು ಎನಿಸಿತು. ಅರ್ಥವಾಗಲಿಲ್ಲ. ಕೂಲಂಕಷವಾಗಿ ವಿಚಾರ ಮಾಡತೊಡಗಿದೆ. ಆಗ ಈ ಬಿರುದು ಕೊಟ್ಟಿರುವುದು ನನ್ನ ಅಹಂಕಾರ ನಿರ್ಮೂಲನಕ್ಕಾಗಿ

ಎಂದು ಮನಗಂಡೆನು. ಮತ್ತು ಚರ್ಚೆಯಲ್ಲಿದ್ದು ನನ್ನ ಬುದ್ಧಿವಂತಿಕೆಗೆ ಕೊಟ್ಟ ಸನ್ಮಾನ ಎಂದು ತಿಳಿದುಕೊಂಡೆನು.

ಮುಂದಿನ ಕಥೆಯನ್ನು ಪರೀಕ್ಷಿಸಿದರೆ ಬಾಬಾರವರು ಹೇಮಾಡಪಂತ ಎಂದು ಕರೆದುದು ನಿಜವಾಗಿಯೂ ಮಹತ್ವವಾದದ್ದು ಮತ್ತು ಭವಿಷ್ಯವಾದಿಯಾದದ್ದು ಎಂದು ಕಂಡು ಬರುತ್ತದೆ. ಏಕೆಂದರೆ ಅವರು ತಮ್ಮ ಮುಪ್ಪಿನಲ್ಲಿ ಶ್ರೀ ಸಾಯಿ ಸಂಸ್ಥಾನದಲ್ಲಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಲೆಕ್ಕ ಪತ್ರಗಳನ್ನೂ ಸಹ ಅವರೇ ನೋಡಿಕೊಳ್ಳುತ್ತಿದ್ದರು. ಅಧ್ಯಾತ್ಮಕ ವಿಷಯಗಳಾದ ಜ್ಞಾನ, ಭಕ್ತಿ, ವೀತರಾಗ, ಸ್ವಸಮರ್ಪಣೆ, ಆತ್ಮಜ್ಞಾನ ಮುಂತಾದವುಗಳನ್ನು ನಿರೂಪಿಸಿರುವ ಶ್ರೀ ಸಾಯಿ ಸಚ್ಚರಿತೆಯ ಲೇಖಕರೆಂದು ಪ್ರಸಿದ್ಧಿ ಪಡೆದರು.

ಗುರುವಿನ ಅವಶ್ಯಕತೆ : ಹೇಮಾಡಪಂತರು ಈ ವಿಚಾರವಾಗಿ ಯಾವುದೊಂದು ಟಿಪ್ಪಣೆಯನ್ನು ಸಹ ಇಟ್ಟಿರುವುದಿಲ್ಲ. ಆದರೆ ಕಾಕಾಸಾಹೇಬರು ಈ ವಿಷಯದ ಬಗ್ಗೆ ಈ ರೀತಿ ಹೇಳಿರುತ್ತಾರೆ.

ಹೇಮಾಡಪಂತರನ್ನು ಸಂಧಿಸಿದ ಮಾರನೇ ದಿನವೇ ಶ್ರೀ ಕಾಕಾಸಾಹೇಬ ದೀಕ್ಷಿತರವರು ಶ್ರೀ ಬಾಬಾರವರಲ್ಲಿಗೆ ಹೋಗಿ ನಾನು ಈಗ ಶಿರ್ಡಿ ಬಿಡಬಹುದಲ್ಲವೆ? ಎಂದು ಕೇಳಿದರು. ಆಗ ಅಲ್ಲಿದ್ದ ಕೆಲವರು 'ಎಲ್ಲಿಗೆ' ಎಂದು ಕೇಳಲು, ಬಾಬಾರವರು 'ಮೇಲಕ್ಕೆ' ಎಂದರು. ಆಗ ಅಲ್ಲಿಯೇ ಇದ್ದ ಓರ್ವನು 'ದಾರಿ ಹೇಗಿದೆ' ಎಂದು ಪ್ರಶ್ನಿಸಿದನು. ಬಾಬಾರವರು ಅಲ್ಲಿಗೆ ಹೋಗಲು ಅನೇಕ ದಾರಿಗಳಿವೆ. ಇಲ್ಲಿಂದಲೂ ದಾರಿ ಇದೆ, ಆ ದಾರಿ ಬಹಳ ಕಠಿಣವಾದುದು. ದಾರಿಯಲ್ಲಿ ಹುಲಿ ಮತ್ತು ತೋಳಗಳಿವೆ ಎಂದರು. ಅದಕ್ಕೆ ನಾನು (ಕಾಕಾ ಸಾಹೇಬ) "ಬಾಬಾ, ನಮ್ಮೊಂದಿಗೆ ಮಾರ್ಗದರ್ಶಕನನ್ನು ಕರೆದುಕೊಂಡು ಹೋದರೊಳಿತಲ್ಲವೆ" ಎಂದು ಕೇಳಲು, ಬಾಬಾರವರು

"ಆಗ ಕಷ್ಟವಿಲ್ಲ. ಮಾರ್ಗದರ್ಶಕನು ಸುರಕ್ಷಿತವಾಗಿ ಉದ್ದೇಶಿತ ಸ್ಥಳಕ್ಕೆ ಕೊಂಡೊಯ್ಯುವನು. ಮಾರ್ಗದರ್ಶಕನಿಲ್ಲದಿದ್ದ ಪಕ್ಷದಲ್ಲಿ ದಾರಿಯಲ್ಲಿ ತೊಂದರೆಗೀಡಾಗುವ ಸಂಭವ ಇದೆ" ಎಂದುತ್ತರಿಸಿದರು. ಈ ಉತ್ತರ ಅಲ್ಲಿಯೇ ಇದ್ದ ದಾಭೋಲಕರರವರ 'ಗುರುವಿನ ಅಗತ್ಯವಿದೆಯೆ' ಎಂಬ ಪ್ರಶ್ನಗೆ ಉತ್ತರವಾಗಿದ್ದು ಅವರು ಯೋಚಿಸತೊಡಗಿದರು. ನೈಜವಾದ ಪಾರಮಾರ್ಥಿಕ ಜ್ಞಾನ ಸಂಪಾದನೆಗೆ ಗುರುವಿನ ಅವಶ್ಯಕತೆ ಇದೆ ಎಂದು ತಿಳಿದುಕೊಂಡರು.

ಉದಾಹರಣೆ: ಅವತಾರ ರೂಪಿಗಳಾದ ಶ್ರೀ ಕೃಷ್ಣ, ಶ್ರೀ ರಾಮ ಇವರು ತಮ್ಮ ಸ್ವಾನುಭವಕ್ಕೋಸ್ಕರ ತಮ್ಮ ಗುರುಗಳಾದ ಸಾಂದೀಪನಿ ಮತ್ತು ವಸಿಷ್ಠರಿಗೆ ಶರಣಾಗತರಾಗಲಿಲ್ಲವೆ?

**ಶ್ರೀ ಸಾಯಿ ಪ್ರಣಾಮ**

# ೩ನೇ ಅಧ್ಯಾಯ

## ಶ್ರೀ ಸಾಯಿಬಾಬರವರ ಅನುಮತಿ ಮತ್ತು ಭರವಸೆ–ಅವರ ಮಾತೃಪ್ರೇಮ–ಅವರ ಮೃದುಮಧುರವಾದ ವಚನಗಳು.

### ಶ್ರೀ ಬಾಬಾರವರ ಅನುಮತಿ ಮತ್ತು ಭರವಸೆ

ಈ ಹಿಂದಿನ ಅಧ್ಯಾದಲ್ಲಿ ತಿಳಿಸಿದಂತೆ ಶ್ರೀ ಬಾಬಾರವರು ಸಚ್ಚರಿತೆ ಬರೆಯಲು ಪೂರ್ಣ ಅನುಮತಿ ನೀಡಿದರಷ್ಟೆ. ನಂತರ ಅವರು ಮುಂದುವರೆದು "ನೀನು ಸಚ್ಚರಿತೆ ಬರೆಯುವ ವಿಚಾರದಲ್ಲಿ ನನ್ನ ಸಂಪೂರ್ಣ ಸಮ್ಮತಿಯಿದೆ. ನೀನು ನಿನ್ನ ಕೆಲಸವನ್ನು ಮಾಡು. ನನ್ನ ವಚನದಲ್ಲಿ ನಂಬಿಕೆಯಿಟ್ಟು ಸ್ಥಿರಚಿತ್ತನಾಗು. ನನ್ನ ಲೀಲೆಗಳನ್ನು ಬರೆದರೆ ಅವಿದ್ಯೆಯು ನಾಶವಾಗುವುದು. ಅವುಗಳನ್ನು ಶ್ರದ್ಧೆ, ಭಕ್ತಿಯಿಂದ ಶ್ರವಣ ಮಾಡಿದರೆ ಭಕ್ತಿ ಮತ್ತು ಪ್ರೀತಿಯ ಅಲೆಗಳು ಮೇಲಕ್ಕೇಳುವವು; ಯಾರು ಇದರ ಒಳಹೊಕ್ಕು ಪರೀಕ್ಷಿಸುತ್ತಾರೆಯೋ ಅವರಿಗೆ ಜ್ಞಾನವೆಂಬ ಅನರ್ಘ್ಯ ರತ್ನ ಲಭಿಸುವದು" ಎಂದರು

ಇದನ್ನು ಕೇಳಿದ ತತ್‌ಕ್ಷಣವೇ ನನಗೆ ಧೈರ್ಯ ಬಂದು ಈ ಕಾರ್ಯವನ್ನು ಯಶಸ್ವಿಯಾಗಿ ಪೂರೈಸುತ್ತೇನೆಂಬ ದೃಢವಾದ ನಂಬಿಕೆ ಹುಟ್ಟಿತು. ಆಗ ಬಾಬಾ ಅವರು ಪುನ: ಶ್ಯಾಮ( ಮಾಧವರಾವ ದೇಶಪಾಂಡೆ) ಅವರನ್ನು ಕುರಿತು,

"ಯಾರು ನನ್ನ ನಾಮವನ್ನು ಪ್ರೀತಿಯಿಂದ ಉಚ್ಚರಿಸುತ್ತಾರೆಯೋ ಅವರ ಅಭಿಲಾಷೆಗಳೆಲ್ಲವನ್ನೂ ಈಡೆರಿಸುತ್ತೇನೆ ಮತ್ತು ಅವನಲ್ಲಿ ಭಕ್ತಿ ಹೆಚ್ಚಾಗುವಂತೆ ಮಾಡುತ್ತೇನೆ. ಯಾರು ನನ್ನ ಜೀವನವನ್ನು ಮತ್ತು ಲೀಲೆಗಳನ್ನು ಶ್ರದ್ಧೆಯಿಂದ ಹಾಡುತ್ತಾರೆಯೋ ಅವರನ್ನು ನಾನು ಸರ್ವದಾ ಕಾಪಾಡುತ್ತೇನೆ. ಭಕ್ತರು ನನ್ನ ಲೀಲೆಗಳನ್ನು ಕೇಳಿದಾಗ ಸ್ವಾಭಾವಿಕವಾಗಿ ಸಂತೋಷ ಉಂಟಾಗುತ್ತದೆ. ಅವರಿಗೆ ನಾನು ಅಮಿತಾನಂದವನ್ನೂ ಶಾಶ್ವತವಾದ ತೃಪ್ತಿಯನ್ನೂ ನೀಡುತ್ತೇನೆ. ಯಾರು

ಮನ:ಪೂರ್ವಕವಾಗಿ ತಮ್ಮ ತನು, ಮನ, ಧನಗಳನ್ನು ನನ್ನಲ್ಲಿ ಅರ್ಪಿಸುತ್ತಾರೆಯೋ, ಯಾರು ನನ್ನನ್ನು ಅಚಲ ನಂಬಿಕೆಯಿಂದ ಪೂಜಿಸುತ್ತಾರೆಯೋ, ಅಂಥವರನ್ನು ಬಿಡುಗಡೆ ಮಾಡುವದೇ ನನ್ನ ನಿತ್ಯ ಕರ್ತವ್ಯ. ಯಾರು ನನ್ನನ್ನು ಸದಾ ಆರಾಧಿಸುತ್ತಾರೆಯೋ ಅಂಥವರ ಮನಸ್ಸು ಪ್ರಾಪಂಚಿಕ ಸುಖಗಳ ಕಡೆಗೆ ಹೋಗಲಿಚ್ಛಿಸುವದಿಲ್ಲ. ನಾನು ಅವರನ್ನು ಮೃತ್ಯುವಿನ ದವಡೆಯಿಂದ ಪಾರು ಮಾಡುತ್ತೇನೆ. ನನ್ನ ಕಥೆಗಳನ್ನು ಶ್ರವಣ ಮಾಡಿದವರಿಗೆ ಎಲ್ಲ ವಿಧವಾದ ರೋಗಗಳೂ ಗುಣವಾಗುತ್ತವೆ. ಆದ್ದರಿಂದ ನನ್ನ ಕಥೆಗಳನ್ನು ಶಾಂತರಾಗಿ ಮರ್ಯಾದೆಯಿಂದ ಶ್ರವಣ ಮಾಡಿರಿ, ಅವುಗಳನ್ನೇ ಕುರಿತು ಚಿಂತಿಸಿರಿ, ಧ್ಯಾನ ಮಾಡಿರಿ ಮತ್ತು ಅವುಗಳನ್ನು ಸಂಗ್ರಹಿಸಿರಿ. ನಿಮ್ಮ ಶಾಶ್ವತ ತೃಪ್ತಿಗೆ ಇದೊಂದೆ ಮಾರ್ಗ. ನನ್ನ ಭಕ್ತರ ಗರ್ವ ಮತ್ತು ಅಹಂಕಾರ ನಾಶವಾಗುತ್ತವೆ. ಶ್ರವಣ ಮಾಡುವವರ ಮನಸ್ಸು ನೆಮ್ಮದಿಯಾಗುತ್ತದೆ. ಮನ:ಪೂರ್ವಕವಾಗಿ ಮತ್ತು ಸಂಪೂರ್ಣ ನಂಬಿಕೆಯಿಂದಿರುವವರು ಶ್ರೇಷ್ಠಭಾವದೊಡನೆ ನನ್ನಲ್ಲಿ ಐಕ್ಯವಾಗುತ್ತಾರೆ. ಕೇವಲ 'ಸಾಯಿ' 'ಸಾಯಿ' ಎಂದು ನನ್ನನ್ನು ಸ್ಮರಿಸುವದರಿಂದಲೇ ಅವರ ಪಾಪಗಳೆಲ್ಲವೂ ನಾಶವಾಗುವವು.

## ಭಕ್ತರಿಗೆ ಅನೇಕ ಕೆಲಸಗಳನ್ನು ವಹಿಸಿದುದು

ಭಗವಂತನು ಭಕ್ತರಿಗೆ ಅವರವರ ಯೋಗ್ಯತೆಗಳಿಗೆ ತಕ್ಕಂತೆ ಅನೇಕ ತರಹದ ಕೆಲಸಗಳನ್ನು ವಹಿಸಿರುತ್ತಾನೆ. ಕೆಲವರಿಗೆ ದೇವಾಲಯಗಳನ್ನು ಮತ್ತು ಮಠಗಳನ್ನು ಕಟ್ಟುವ ಕೆಲಸವೂ ಅಥವಾ ನದಿತೀರಗಳಲ್ಲಿ ಸ್ನಾನಘಟ್ಟಗಳನ್ನು ನಿರ್ಮಿಸುವ ಕೆಲಸವೂ ಮತ್ತೆ ಕೆಲವರಿಗೆ ತನ್ನ ಮಹಿಮೆಗಳನ್ನು ಹಾಡುವ ಕೆಲಸವೂ ಉಳಿದವರಿಗೆ ಯಾತ್ರಾ ಸ್ಥಳಗಳನ್ನು ಸಂದರ್ಶಿಸುವ ಕೆಲಸವೂ ವಹಿಸಲ್ಪಟ್ಟಿರುತ್ತದೆ. ಆದರೆ ನನ್ನ ಪಾಲಿಗೆ ಬಂದುದು "ಶ್ರೀ ಸಾಯಿ ಸಚ್ಚರಿತೆ"ಯ ರಚನೆ. ಇದಕ್ಕೆ ನಾನು ತೀರ ಅನರ್ಹ. ಬಾಬಾರವರ ನೈಜ ಜೀವನವನ್ನು

ಯಾರಿಂದ ವಿವರಿಸಲು ಸಾಧ್ಯ? ಅವರ ಅನುಗ್ರಹ ಬಲವೊಂದೇ ಈ ಕೆಲಸವನ್ನು ಯಶಸ್ವಿಯಾಗಿ ಮುಗಿಸಲು ಸಹಾಯವಾಗುವ ಸಾಧನ. ಆದುದರಿಂದ ನಾನು ನನ್ನ ಲೇಖಣಿಯನ್ನು ಕೈಗೆ ತೆಗೆದುಕೊಂಡ ಮರುಕ್ಷಣದಲ್ಲಿಯೇ ಶ್ರೀ ಬಾಬಾರವರು ನನ್ನ ಅಹಂಭಾವವನ್ನು ನಿರ್ಮೂಲಮಾಡಿ ತಾವೇ ತಮ್ಮ ಕಥೆಗಳನ್ನು ರಚಿಸಲಾರಂಭಿಸಿದರು. ಈ ಕೆಲಸಕ್ಕೆ ದೊರೆಯಬೇಕಾದ ಸನ್ಮಾನ ಅವರಿಗೆ –ನನಗಲ್ಲ. ನಾನು ಜನ್ಮತ: ಬ್ರಾಹ್ಮಣನಾಗಿದ್ದರೂ ಸಹ ಶೃತಿ ಮತ್ತು ಸ್ಮೃತಿ ಎಂಬೆರಡು ದೃಷ್ಟಿಗಳಿರಲಿಲ್ಲ. ಆದುದರಿಂದ ಬಾಬಾರವರ ಸಚ್ಚರಿತೆ ರಚಿಸಲು ಅಶಕ್ತನೆಂದು ಭಾವಿಸಿದ್ದೇ. ದೇವರ ಅನುಗ್ರಹದಿಂದ ಮೂಕನು ಮಾತನಾಡುವಂತಾಗಬಹುದು. ಕುಂಟನು ಪರ್ವತವನ್ನು ದಾಟಲು ಶಕ್ತನಾಗಬಹುದು. ತನ್ನ ಇಚ್ಛಾನುಸರಣೆಯಂತೆ ಕೆಲಸ ಮಾಡಿಸಿಕೊಳ್ಳುವ ಶಕ್ತಿ ಆ ಪರಮಾತ್ಮನಿಗಲ್ಲದೆ ಬೇರಾರಿಗೂ ಇಲ್ಲ. ಕೊಳಲಿಗಾಗಲಿ ಹಾರ್ಮೋನಿಯಂಗಾಗಲಿ ಶಬ್ದ ಹೇಗೆ ಉತ್ಪತ್ತಿಯಾಗುತ್ತದೆ ಎಂಬುದು ಗೊತ್ತಿರುವುದಿಲ್ಲ. ಅದನ್ನು ನುಡಿಸುವವನು ಮಾತ್ರ ಇದನ್ನು ಬಲ್ಲ. ಚಂದ್ರಕಾಂತಮಣಿ ಪ್ರಕಾಶಿಸುವುದೂ, ಸಮುದ್ರ ಉಕ್ಕುವುದೂ ತಮ್ಮ ಸ್ವಂತ ಶಕ್ತಿಯಿಂದಲ್ಲ; ಚಂದ್ರನ ಉದಯದಿಂದ ಮಾತ್ರ.

## ಬಾಬಾರವರ ಜ್ಞಾನಜ್ಯೋತಿ

ನಾವಿಕರಿಗೆ ದಾರಿ ಸುಗಮವಾಗಲೆಂದೇ ಸಮುದ್ರದ ಅನೇಕ ಕಡೆಗಳಲ್ಲಿ ದೀಪಗೃಹಗಳನ್ನು ನಿರ್ಮಿಸಿರುತ್ತಾರೆ. ಅಂತಯೇ ಈ ಬವಸಾಗರದಲ್ಲಿಯ ಸಂಚಾರವು ಸುಗಮವಾಗಲು ಸಾಯಿಬಾಬಾರವರ ಕಥೆಗಳು ನಮಗೆ ನಾವಿಕ ದೀಪಗೃಹಗಳ ಹಾಗೆ ಸಹಾಯವಾಗುತ್ತವೆ. ಸಂತರ ಚರಿತ್ರೆಗಳನ್ನು ನಾವು ಕಿವಿಯಾರೆ ಕೇಳಿದಾಗ ಅವು ನಮ್ಮ ಹೃದಯದ ಒಳಹೊಕ್ಕು ನಾನು, ನನ್ನದು ಎಂಬ ಭಾವನೆಗಳನ್ನು ಹೊರದೂಡುತ್ತವೆ. ಅವು ಹೃದಯದಲ್ಲಿ ಶೇಖರವಾದಾಗ ನಮ್ಮ ಮನಸ್ಸಿನಲ್ಲಿಯ ಸಂಶಯಗಳೆಲ್ಲವೂ ಹಾರಿಹೋಗುತ್ತವೆ. ಗರ್ವವು

ಅಡಗುತ್ತದೆ. ಜ್ಞಾನ ಉಕ್ಕುತ್ತದೆ. ಕೃತಯುಗದಲ್ಲಿ ಶಮ-ದಮನವೂ, ತ್ರೇತಾಯುಗದಲ್ಲಿ ತ್ಯಾಗವೂ, ದ್ವಾಪರದಲ್ಲಿ ದೇವರಪೂಜೆಯೂ ಜ್ಞಾನಮಾರ್ಗದ ಸಾಧನೆಗಳಾಗಿದ್ದವು. ಕಲಿಯುಗದಲ್ಲಿ ಜ್ಞಾನಮಾರ್ಗದ ಸಾಧನೆ ಯಾವುದೆಂದರೆ, ಆ ಪರಮಾತ್ಮನ ನಾಮವನ್ನು ಮತ್ತು ಮಹಿಮೆಯನ್ನು ಭಕ್ತಿ, ಶ್ರದ್ಧೆ ಮತ್ತು ಆಸಕ್ತಿಗಳಿಂದ ಹಾಡುವುದೊಂದೆ. ಈ ಕೊನೆಂಯ ಸಾಧನವು ಚತುರ್ವರ್ಣದವರಿಂದಲೂ ಅಭ್ಯಾಸಮಾಡಲು ಸಾಧ್ಯವಾದುದ್ದಾಗಿದೆ. ಇತರ ಸಾಧನಗಳಾದ ಯೋಗ, ಯಾಗ, ಧ್ಯಾನ ಮತ್ತು ಧಾರಣ ಇವುಗಳ ಅಭ್ಯಾಸ ಬಹು ಕಷ್ಟತರವಾದುದು. ಆ ಪರಮಾತ್ಮನ (ಬಾಬಾ ಅವರ) ಲೀಲೆಗಳನ್ನು ಹಾಡುವುದು ಎಷ್ಟೋ ಸುಲಭ ಸಾಧ್ಯ. ಈ ಲೀಲೆಗಳನ್ನು ಹಾಡುವುದರಿಂದಲೂ ಮತ್ತು ಶ್ರವಣ ಮಾಡುವುದರಿಂದಲೂ ನಾವು ಸ್ವಾನುಭವವನ್ನು ಸುಲಭವಾಗಿ ಹೊಂದಬಹುದು. ಈ ಒಂದು ಗುರಿ-ಧ್ಯೇಯ ಸಾಧನೆಗಾಗಿಯೇ ತಮ್ಮ ಕಥೆಗಳನ್ನೂ ಸಚ್ಚರಿತೆಯನ್ನೂ ಬರೆಯಲು ಬಾಬಾ ನನಗೆ ನೆರವು ನೀಡಿದರು. ಈಗ ಭಕ್ತರು ಅವರ ಕಥೆಗಳನ್ನು ಪಠಿಸಲು ಸುಲಭವಾಗಿದೆ. ಶ್ರವಣ ಮಾಡಲೂ ಸಹ ಸುಲಭವಾಗಿದೆ. ಹೀಗೆ ಪಠಣ ಮಾಡುವಾ ಅಥವಾ ಶ್ರವಣ ಮಾಡುವಾಗ ಏಕೈಕ ಚಿತ್ತದಿಂದ ಬಾಬಾರವರನ್ನು ಧ್ಯಾನಿಸಿ ಅವರ ರೂಪವನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳಿರಿ. ಆಗ ಗುರು ಮತ್ತು ದೇವರಲ್ಲಿ ಭಕ್ತಿಯುಂಟಾಗುತ್ತದೆ. ಅಲಿಪ್ತತೆ ಉಂಟಾಗಿ ಭಕ್ತರು ಸ್ವಾನುಭಾವವನ್ನು ಹೊಂದಬಹುದು.

## ಸಾಯಿಬಾಬಾರವರ ಮಾತೃವಾತ್ಸಲ್ಯ

ಗೋವಿಗೆ ತನ್ನ ಕರುವಿನ ಮೇಲೆ ಎಷ್ಟು ಮಮತೆಯಿರುತ್ತೆಂಬುದು ಎಲ್ಲರಿಗೂ ವೇದ್ಯವಾದ ವಿಷಯ. ಅದರ ಕೆಚ್ಚಲು ಹಾಲಿನಿಂದ ತುಂಬಿರುವಾಗ ಕರುವು ತನ್ನ ತಲೆಯಿಂದ ಕೆಚ್ಚಲನ್ನು ಒತ್ತಿ ಮೊಲೆಗಳಿಗೆ ಬಾಯಿ ಇಟ್ಟಾಗ ಹಾಲು ಹೇಗೆ ಧಾರಾಕಾರವಾಗಿ ತನ್ನಷ್ಟಕ್ಕೆ ತಾನೇ

ಬುರುತ್ತದೆಯೋ. ಅದೇ ರೀತಿ ಕಂದನಿಗೆ ಹಾಲು ಬೇಕಾದಾಗ ಮಾತೆಯಾದವಳು ಎಷ್ಟು ಪ್ರೀತಿ ಮತ್ತು ಆದರಗಳಿಂದ ಅದಕ್ಕೆ ಹಾಲು ನೀಡುತ್ತಾಳೆ. ಮಗುವಿನ ಉಡಿಗೆತೊಡಿಗೆಗಳಲ್ಲಿ ಅವಳಗೆಷ್ಟು ಆನಂದ! ಆದರೆ ಮಗುವಿಗೆ ಮಾತ್ರ ಅವುಗಳ ಕಡೆ ಗಮನವಿರುವುದಿಲ್ಲ. ಆದರೆ ಅವಳು ತನ್ನ ಮಗುವನ್ನು ಅಲಂಕಾರವಾಗಿ ಶೃಂಗರಿಸಿ, ಕಣ್ತುಂಬ ನೋಡುವವಳಲ್ಲವೆ? ಆಗ ಅವಳ ಆನಂದಕ್ಕೆ ಪಾರವಿರುತ್ತದೆಯೇ? ಮಾತೃಪ್ರೇಮವೆಂಬುದು ಆಗಾಧ – ವಿವರಣಾತೀತ. ಅದಕ್ಕೆ ಸರಿಸಮವಾದ ಪ್ರೀತಿ ಬೇರೊಂದಿಲ್ಲ. ಹಾಗೆಯೇ ಸದ್ಗುರುಗಳು ತಮ್ಮ ಶಿಷ್ಯವೃಂದಕ್ಕೆ ಅದೇ ತರಹದ ಮಾತೃ ವಾತ್ಸಲ್ಯವನ್ನು ತೋರುತ್ತಾರೆ. ಶ್ರೀ ಸಾಯಿಬಾಬ ಅವರಲ್ಲಿಯೂ ಇದೇ ತರಹದ ಮಾತೃ ವಾತ್ಸಲ್ಯವಿತ್ತು. ಉದಾಹರಣೆಗಾಗಿ:

ನಾನು ೧೯೧೬ರಲ್ಲಿ ಸರಕಾರಿ ಕೆಲಸದಿಂದ ನಿವೃತ್ತನಾದೆ. ನನಗೆ ಬರುತ್ತಿದ್ದ ವಿರಾಮ ವೇತನದಿಂದ ಸಂಸಾರ ನಿರ್ವಹಣೆ ಕಷ್ಟವಾಗಿತ್ತು. ಅಂದು ಗುರು ಪೌರ್ಣಿಮೆ– ಆಷಾಢದ ೧೫ನೇ ದಿನ ನಾನು ಭಕ್ತರೊಂದಿಗೆ ಶಿರ್ಡಿಗೆ ಪ್ರಯಣ ಬೆಳೆಸಿದೆ. ಅಣ್ಣಾಸಾಹೇಬ ಚಿಂಚಣಿಕರರವರಿಗೆ ನನ್ನ ಮೇಲೆ ದಯೆಯುಂಟಾಗಿ ತಾವಾಗಿಯೇ ಬಾಬಾರವರಲ್ಲಿಗೆ ಹೋಗಿ "ಇವನ ಮೇಲೆ ದಯೆಮಾಡಿ. ಇವನ ವಿರಾಮ ವೇತನ ಸಂಸಾರ ನಿರ್ವಹಣೆಗೆ ಸಾಲದು. ಸಂಸಾರ ವೃದ್ಧಿಯಾಗುತ್ತಿದೆ. ಬೇರೊಂದು ಉದ್ಯೋಗವನ್ನು ಕೊಡಿಸಿರಿ. ಇವನ ಚಿಂತೆಯನ್ನು ಬಿಡಿಸಿರಿ ಸಂತೋಷಗೊಳಿಸಿರಿ" ಎಂದರು. ಅದಕ್ಕೆ ಬಾಬಾರವರು " ಅವನಿಗೆ ಬೇರೊಂದು ಕೆಲಸ ಸಿಕ್ಕುತ್ತದೆ. ಅವನು ನನ್ನ ಸೇವೆ ಮಾಡುತ್ತ ಸಂತೋಷದಿಂದಿರಲಿ. ಅವನ ಮನೆಯಲ್ಲಿ ಉಡಲು, ಉಣಲು ಏನೂ ಕೊರತೆಯುಂಟಾಗುವುದಿಲ್ಲ. ನಾಸ್ತಿಕರು ಅಧರ್ಮಿಗಳು ಮತ್ತು ದುಷ್ಟರಿಂದ ದೂರವಾಗಿರಲಿ. ಸರ್ವರಲ್ಲಿಯೂ ಸೌಜನ್ಯ ಮತ್ತು ಸವಿನಯದಿಂದ ವರ್ತಿಸಲಿ. ಇದನ್ನು ಮಾಡಿದ್ದಾದರೆ

ಅವನಿಗೆ ಶಾಶ್ವತ ಸುಖ-ಸಂತೋಷಗಳು ದೊರಕುವವು" ಎಂದು ಉತ್ತರಿಸಿದರು.

## ರೋಹಿಲಾ

ಎತ್ತರವಾದ, ದೃಢಕಾಯನಾದ ರೋಹಿಲಾ ಎಂಬವನು ಸಾಯಿಬಾಬಾರವರಿಂದ ಆಕರ್ಷಿಸಲ್ಪಟ್ಟು ಶಿರ್ಡಿಗೆ ಬಂದು ನೆಲೆಸಿದ್ದನು. ಅವನು ಪ್ರತಿದಿನವೂ ರಾತ್ರಿ 'ಕುರಾನ್' ಪವಿತ್ರ ಗ್ರಂಥವನ್ನು ಜೋರಾಗಿ ಕರ್ಕಶ ಧ್ವನಿಯಲ್ಲಿ ಹಾಡುತ್ತಿದ್ದನು. ಮತ್ತು "ಅಲ್ಲಾ- ಹೋ- ಅಕ್ಬರ್" ಎಂದು ಜೋರಾಗಿ ಕೂಗಿಕೊಳ್ಳುತ್ತಿದ್ದನು. ಶಿರ್ಡಿಯ ಜನರಿಗೆ ಹಗಲಿನಲ್ಲಿ ಬೇಸತ್ತು ರಾತ್ರಿ ಮನೆಗೆ ಬಂದು ಕುಳಿತಾಗ ಇವನ ಕರ್ಕಶ ಧ್ವನಿಯಿಂದ ಬೇಜಾರಾಗುತ್ತಿತ್ತು. ಇದರಿಂದಾಗಿ ರಾತ್ರಿ ನಿದ್ದೆಗೂ ಅವಕಾಶವಿಲ್ಲದೆ ತೊಂದರೆಯಿಂದಿದ್ದರು. ಸ್ವಲ್ಪ ದಿನ ತಾಳ್ಮೆಯಿಂದಿದ್ದರು. ಒಂದು ದಿನ ತಾಳ್ಮೆ ಮೀರಿ ಬಾಬಾರವರ ಬಳಿಗೆ ಬಂದು ಈ ಉಪದ್ರವವನ್ನು ಹೇಗಾದರೂ ಮಾಡಿ ತಪ್ಪಿಸಿ ಎಂದು ಬೇಡಿಕೊಂಡರು. ಬಾಬಾರವರು ಆ ಮಾತಿಗೆ ಗಮನ ಕೊಡಲಿಲ್ಲ. ಅದಕ್ಕೆ ಬದಲಾಗಿ ಹಳ್ಳಿಯವರನ್ನೇ ತರಾಟೆಗೆ ತೆಗೆದುಕೊಂಡು "ನಿಮ್ಮ ಕಾರ್ಯ ನೀವು ಮಾಡಿ, ರೋಹಿಲಾನ ಗೊಡವೆಯೇಕೆ? ರೋಹಿಲಾಗೆ ಒಬ್ಬ ಕೆಟ್ಟ ಪತ್ನಿ ಇದ್ದಾಳೆ. ಆದುದರಿಂದ ಅವನು ಈ ರೀತಿ ಮಾಡುತ್ತಾನೆ. ದೇವರ ಸಂಕೀರ್ತನದಿಂದ ಅವಳು ಅವನ ಕಡೆಗೆ ಬರುವುದಿಲ್ಲ" ಎಂದು ಹೇಳಿ ಕಳಿಸಿದರು. ನಿಜವಾಗಿಯೂ ರೋಹಿಲಾಗೆ ಪತ್ನಿಯೇ ಇರಲಿಲ್ಲ. ಬಾಬಾರವರು ಪ್ರಸ್ತಾಪಿಸಿದ ರೋಹಿಲಾನ ಪತ್ನಿ ದುರ್ಬುದ್ಧಿ- ಕೆಟ್ಟ ಯೋಚನೆಗಳು. ಬಾಬಾರವರಿಗೆ ದೇವರನಾಮ ಸಂಕೀರ್ತನವು ಪ್ರಿಯವೆನಿಸಿದುದರಿಂದ ರೋಹಿಲಾನನ್ನು ರಕ್ಷಿಸಿದರು.

## ಬಾಬಾರವರ ಅಮೃತ ವಚನಗಳು

ಒಂದು ದಿನ ಶ್ರೀ ಬಾಬಾರವರು ಮಧ್ಯಾಹ್ನದ ಆರತಿ ಸಮಯದಲ್ಲಿ ಭಕ್ತರಿಗೆ ಈ ಕೆಳಗಿನ ಹಿತವಚನಗಳನ್ನು ನೀಡಿದರು.

"ನೀವು ಎಲ್ಲಿಯೇ ಇರಿ, ಏನೇ ಮಾಡುತ್ತೀರಿ ನೀವು ಮಾಡುವ ಪ್ರತಿಯೊಂದು ಕೆಲಸವನ್ನೂ ನಾನು ಬಲ್ಲೆನೆಂಬುದನ್ನು ಜ್ಞಾಪಕದಲ್ಲಿಡಿ ನಾನು ಸರ್ವರ ಹೃದಯದಲ್ಲಿಯೂ ಅಡಗಿರುತ್ತೇನೆ. ನಾನು ಪ್ರಪಂಚದಲ್ಲಿನ ಸಮಸ್ತ ಸಚರಾಚರಗಳನ್ನೂ ಆವರಿಸಿರುತ್ತೇನೆ. ನಾನೇ ಪ್ರಪಂಚದ ಸಮಸ್ತ ವಸ್ತುಗಳ ಮೂಲಸ್ಥಾನ ತ್ರಿಗುಣಗಳ ಸಮ್ಮಿಳನ. ಸರ್ವವಸ್ತುಗಳ ಸೂತ್ರಧಾರಿ, ನಾನೇ ಸೃಷ್ಟಿಕರ್ತ, ರಕ್ಷಕ, ವಿನಾಶಕಾರ, ಯಾರು ತಮ್ಮ ಭಕ್ತಿಯನ್ನು ನನ್ನಲ್ಲಿಡುತ್ತಾರೆಯೋ ಅವರಿಗೆ ಯಾವುದರಿಂದಲೂ ತೊಂದರೆಯುಂಟಾಗುವುದಿಲ್ಲ. ಯಾರು ನನ್ನನ್ನು ಮರೆಯುತ್ತಾರೆಯೋ ಅವರನ್ನು ಮಾಯೆ ಕವಿಯುತ್ತದೆ. ಸಣ್ಣ ಇರುವೆ, ಕಣ್ಣಿಗೆ ಕಾಣಿಸುವ ಸಚರಾಚರ ಪದಾರ್ಥಗಳು ಮತ್ತು ಸಕಲ ಜೀವರಾಶಿಗಳೆಲ್ಲವೂ ನನ್ನ ದೇಹ ಮತ್ತು ಸ್ವರೂಪ".

ಇಂತಹ ಸೊಗಸಾದ ಮತ್ತು ಅಮೂಲ್ಯವಾದ ವಚನಗಳನ್ನು ಕೇಳಿದ ಕೂಡಲೆ ಗುರುವಿನ ಸೇವೆ ಮಾಡಲು ನಿರ್ಧರಿಸಿದೆ. ನನಗೆ ಬೇರೆ ಕೆಲಸ ಸಿಗುತ್ತದೆ ಎಂದು ಬಾಬಾರವರು ಹೇಳಿದ ಮಾತುಗಳು ನನ್ನ ಜ್ಞಾಪಕದಲ್ಲಿ ಮರುಕಳಿಸಿ ಅದು ಯಾವಾಗ ಈಡೇರುವುದೋ ಎಂದು ಯೋಚಿಸ ತೊಡಗಿದೆ. ಮುಂದೆ ಬಾಬಾರವರ ಮಾತುಗಳು ನಿಜವಾದವು. ನಾನು ಸರಕಾರಿ ಕೆಲಸ ಮುಂದುವರೆಸಿದೆ. ನಂತರ ನನ್ನ ಜೀವನವನ್ನು ಬಾಬಾರವರ ಸೇವೆಗೆ ಮೀಸಲು ಮಾಡಿದೆ.

## ವಾಚಕರಲ್ಲಿ ಒಂದು ಭಿನ್ನಹ

ಜಾಡ್ಯತನ, ನಿದ್ದೆ, ಚಂಚಲತೆ ಇವೇ ಮೊದಲಾದ ಅನೇಕ ತರಹದ ಆತಂಕಗಳನ್ನು ದೂರಮಾಡಿರಿ. ನಿಶ್ಚಲಚಿತ್ತದಿಂದ ಶ್ರೀ ಸಾಯಿಬಾಬಾರವರ ಕಥೆಗಳ ಕಡೆಗೆ ಗಮನವಿಡಿ ಮತ್ತು ಭಕ್ತಿಯ ರಹಸ್ಯವನ್ನು ತಿಳಿಯಿರಿ. ಇದು ನಿಮ್ಮ ಪಾಪಗಳನ್ನು ತೊಲಗಿಸಿ ಮುಕ್ತಿಯನ್ನು ದೊರಕಿಸುತ್ತದೆ.

ಬಾಬಾರವರು ಸರ್ವರ ಹೃದಯದಲ್ಲಿಯೂ ಸಿಂಹಾಸನಾಸೀನರಾಗಲಿ!

ಮುಂದಿನ ಅಧ್ಯಾಯದಲ್ಲಿ ಶ್ರೀ ಬಾಬಾರವರು ಶಿರ್ಡಿಗೆ ಹೇಗೆ ಬಂದರು ಎಂಬುದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

**ಶ್ರೀ ಸಾಯಿ ಪ್ರಣಾಮ**

# ೪ನೇ ಅಧ್ಯಾಯ

**ಯೋಗಿಗಳ ಜೀವಿತೋದ್ದೇಶ–ಪವಿತ್ರ ತೀರ್ಥ ಶಿರ್ಡಿ–ಬಾಬಾರವರ ವ್ಯಕ್ತಿತ್ವ –ಗೌಳಿಬುವಾರವರ ವಚನ–ವಿಠಲ ದರ್ಶನ –ಕ್ಷೀರಸಾಗರವರ ಕಥೆ– ಪ್ರಯಾಗದಲ್ಲಿ ದಾಸಗಣೂರವರ ಸ್ನಾನ–ಬಾಬಾರವರ ಪವಿತ್ರ ಭಾವನೆ– ಅವರು ಶಿರ್ಡಿಯಲ್ಲಿ ಕಾಣಿಸಿಕೊಂಡ ಬಗೆ–ಮೂರು ವಾಡಾಗಳು (ಧರ್ಮಶಾಲೆಗಳು).**

ಹಿಂದಿನ ಅಧ್ಯಾಯದಲ್ಲಿ ಯಾವಾಗ ಶ್ರೀ ಸಾಯಿ ಸಚ್ಚರಿತೆಯನ್ನು ಬರೆಯಲು ಒದಗಿದ ಸಂದರ್ಭನ್ನು ವಿವರಿಸಿದ್ದೇನೆ. ಈಗ ಈ ಅಧ್ಯಾಯದಲ್ಲಿ ಬಾಬಾರವರು ಮೊದಲು ಶಿರ್ಡಿಯಲ್ಲಿ ಕಾಣಿಸಿಕೊಂಡ ಬಗೆಯನ್ನು ವಿವರಿಸುತ್ತೇನೆ.

## ಯೋಗಿಗಳ ಜೀವಿತೋದ್ದೇಶ

ಧರ್ಮವು ಅಳಿದು ಯಾವಾಗ ಅಧರ್ಮವು ತಲೆಯೆತ್ತಿ ಮೆರೆಯುತ್ತಿರುವುದೋ ಆಗ ನಾನು ಅವತರಿಸುತ್ತೇನೆ. ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಲೊಸಗವೂ, ಧರ್ಮವನ್ನು ಸ್ಥಾಪಿಸಲು ನಾನು ಯುಗ ಯುಗಗಳಲ್ಲಿಯೂ ಅವತರಿಸುತ್ತೇನೆ ಎಂದು ಭಗವಾನ್ ಶ್ರೀ ಕೃಷ್ಣನು ಹೇಳಿರುತ್ತಾನೆ. (ಭಗವದ್ಗೀತೆ ಅಧ್ಯಾಯ ೪, ೭–೮)

ಪರಮಾತ್ಮನ ಉದ್ದೇಶವಿದು. ಅಂತೆಯೇ ಅವನ ಪ್ರತಿನಿಧಿಗಳಾದ ಸಾಧು ಸನ್ಯಾಸಿಗಳ ಜೀವಿತೋದ್ದೇಶವೂ ಸಹ ಇದೇ ಆಗಿರುತ್ತದೆ. ಅವರು ತಮ್ಮದೇ ಆದ ಒಂದು ರೀತಿಯಿಂದ ಈ ಗುರಿಯನ್ನು ಸಾಧಿಸುತ್ತಾರೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರುಗಳು ಯಾವಾಗ ತಮ್ಮ ಕರ್ತವ್ಯಗಳನ್ನು ಮರೆಯುತ್ತಾರೆಯೋ, ಯಾವಾಗ ಧಾರ್ಮಿಕ ನೀತಿಗಳ ಕಡೆ ಜನರು ಗಮನಕೊಡದೆ ತಾವೇ ಅತಿ ವಿದ್ಯಾವಂತರೆಂದು ಮೂಢಭಾವನೆಯಿಂದಿರುತ್ತಾರೆಯೋ, ಯಾವಾಗ ಜನರು ಅನೀತಿಯುತವಾದ ಆಹಾರ ಸೇವನೆ ಮತ್ತು ಮತಾನುಷ್ಠಾನುವಾದ

ಸಂಧ್ಯಾವಂದನೆ ಮುಂತಾದವುಗಳನ್ನು ನಿರ್ಲಕ್ಷಿಸುವರೋ, ಯಾವಾಗ ಮತೀಯ ಕಲಹಗಳು ಪ್ರಾರಂಭವಾಗುವವೋ, ಯಾವಾಗ ಯೋಗಿಗಳು ತಪಸ್ಸನ್ನಾಚರಿಸುವುದವುದನ್ನು ಮರೆಯುವರೋ, ಯಾವಾಗ ಜನಕೋಟಿಯು ಹೊನ್ನು ಹೆಣ್ಣು ಮತ್ತು ಸಂತತಿಯೇ ಮುಖ್ಯವೆಂದು ಮೆರೆಯುವದೋ, ಆಗ ವಚನ ಮತ್ತು ಕಾರ್ಯರೀತಿಯಿಂದ ಧರ್ಮವನ್ನು ಪುನರುದ್ಧಾರ ಮಾಡಲು ಮಹಾಯೋಗಿಗಳು ಕಾಣಿಸಿಕೊಳ್ಳುತ್ತಾರೆ. ಈ ರೀತಿ ನಿವೃತ್ತಿ, ಜ್ಞಾನದೇವ, ಮುಕ್ತಾಬಾಯಿ, ನಾಮದೇವ, ಗೋರಾ, ಗೋಣಾಯಿ, ಏಕನಾಥ, ತುಕಾರಾಮ, ನರಹರಿ, ನರಸೀಭಾಯಿ, ಸಾವತ ಮತ್ತು ಇನ್ನೂ ಮುಂತಾದ ಅನೇಕ ಯೋಗಿಗಳು ಆಗಾಗ್ಗೆ ಕಾಣಿಸಿಕೊಂಡು ಜನಗಳಿಗೆ ಸರಿಯಾದ ದಾರಿಯನ್ನು ತೋರಿಸಿದರು. ಕೊನೆಯದಾಗಿ ಬಾಬಾರವರು ಶಿರ್ಡಿಯಲ್ಲಿ ಕಾಣಿಸಿಕೊಂಡರು.

## ಶಿರ್ಡಿ ಒಂದು ಪವಿತ್ರ ಕ್ಷೇತ್ರ

ಅನೇಕಾ ಮಹಾಯೋಗಿಗಳಿಗೆ ಜನ್ಮವಿತ್ತ ಅಹಮದನಗರ ಜಿಲ್ಲೆಯಲ್ಲಿ ಗೋದಾವರಿ ನದಿತೀರವು ನಿಜಕ್ಕೂ ಅದೃಷ್ಟಶಾಲಿಯಾಗಿದೆ. ಶಿರ್ಡಿಯೂ ಸಹ ಇದೇ ಅಹಮದನಗರ ಜಿಲ್ಲೆಯಲ್ಲಿ ಕೋಪರಗಾಂವ ತಾಲೂಕಿನಲ್ಲಿದೆ. ಕೋಪರಗಾವಂದಿಂದ ಗೋದಾವರಿ ನದಿ ದಾಟಿದ ನಂತರ ಶಿರ್ಡಿ ಬರುತ್ತದೆ. ಕೋಪರಗಾಂವದಿಂದ ೯ ಮೈಲಿ ದೂರದಲ್ಲಿ ನೀಮಗಾಂವ ಇದೆ. ಅಲ್ಲಿಂದ ಶಿರ್ಡಿಯು ಕಾಣಿಸುತ್ತದೆ. ಕೃಷ್ಣಾ ನದಿದಡದಲ್ಲಿರುವ ಪವಿತ್ರ ಯಾತ್ರಾಸ್ಥಳಗಳಾದ ಗಾಣಗಾಪುರ, ನೃಸಿಂಹವಾಡಿ, ಔದುಂಬರಗಳ ಹಾಗೆ ಶಿರ್ಡಿಯೂ ಸಹ ಪವಿತ್ರ ಕ್ಷೇತ್ರ, ಮಂಗಳವೇಡೆಯಲ್ಲಿ ಶ್ರೀ ದಾಮಾಜಿ, ಸಜ್ಜನಗಡದಲ್ಲಿ ಶ್ರೀ ಸಮರ್ಥ ರಾಮದಾಸ ಮತ್ತು ನರಸು ಬಾಚಿವಾಡಿಯಲ್ಲಿ ಶ್ರೀ ನರಸಿಂಹ ಸರಸ್ವತಿಗಳು ಪ್ರಸಿದ್ಧರಿದ್ದಂತೆ ಶಿರ್ಡಿಯಲ್ಲಿ ಶ್ರೀ ಸಾಯಿಬಾಬಾರವರು ಪ್ರಸಿದ್ಧರಾಗಿದ್ದರು.

## ಶ್ರೀ ಸಾಯಿಬಾಬಾರವರ ವ್ಯಕ್ತಿತ್ವ

ಶ್ರೀ ಸಾಯಿಬಾಬಾರವರ ಸಂಪರ್ಕದಿಂದ ಶಿರ್ಡಿ ಪ್ರಸಿದ್ಧಿಯನ್ನು ಪಡೆಯಿತು. ಈಗ ಶ್ರೀ ಬಾಬಾರವರು ಎಂತಹ ಮಹಾನುಭವ ವ್ಯಕ್ತಿ ಎಂಬುದನ್ನು ನೋಡೋಣ. ದಾಟಲು ಕಠಿಣವಾದ ಭವಸಾಗರವನ್ನು ಜಯಿಸಿದರವರು. ಶಾಂತಿಯೇ ಆಭರಣವಾಗಿ ಸತ್ವಶೀಲರಾಗಿದ್ದರು. ವೈಷ್ಣವ ಭಕ್ತರ ತವರುಮನೆಯಾಗಿದ್ದರು. ಕರ್ಣನೋಪಾದಿಯಲ್ಲಿ ದಾನಶೂರರಲ್ಲಿ ಅಗ್ರಗಣ್ಯರಾಗಿದ್ದರು. ಕ್ಷಣಿಕ ಮತ್ತು ಕ್ಷುಲ್ಲಕ ವಸ್ತುಗಳ ಕಡೆಗೆ ಗಮನ ಕೊಡದೆ ಯಾವಾಗಲೂ ಸ್ವಾನುಭವದಲ್ಲಿ ತಲ್ಲೀನರಾಗಿದ್ದರು. ಅವರಿಗೆ ಪ್ರಾಪಂಚಿಕ ಅಭಿಲಾಷೆಯಿರಲಿಲ್ಲ. ಅವರ ಅಂತರಂಗವು ಶುದ್ಧ ಕನ್ನಡಿಯಂತಿತ್ತು. ಅವರ ವಚನಗಳಲ್ಲಿ ಯಾವಾಗಲೂ ಸುಧೆಯು ಧಾರಾಕಾರವಾಗಿ ಹರಿಯುತ್ತಿತ್ತು. ಬಡವರಾಗಲಿ, ಬಲ್ಲಿದವರಾಗಲಿ ಅವರಲ್ಲಿ ಎಲ್ಲರೂ ಒಂದೆ. ಮಾನಾಪಮಾನಗಳ ಕಡೆಗೆ ಗಮನವಿಡುತ್ತಿರಲಿಲ್ಲ. ಸರ್ವರಿಗೂ ಶ್ರೇಷ್ಠರಾಗಿದ್ದರು. ಸರ್ವರೊಡನೆಯೂ ಕಲೆತು ಅವರೊಂದಿಗೆ ಕೂಡಿ ಹಾಡುಗಳನ್ನು ಹಾಡುತ್ತ ಸಂತೋಷದಿಂದಿರುತ್ತಿದ್ದರು. 'ಅಲ್ಲಾ' ನ ಹೆಸರನ್ನು ಯಾವಾಗಲೂ ಉಚ್ಚರಿಸುತ್ತಿದ್ದರು. ಅದರೂ ಸಮಾಧಿಯಿಂದ ಒಂದು ಅಂಗಲವೂ ಕದಲುತ್ತಿರಲಿಲ್ಲ. ಪ್ರಪಂಚವೆಲ್ಲವೂ ನಿದ್ರೆಯಲ್ಲಿದ್ದಾಗ ಎಚ್ಚರವಾಗಿಯೂ ಮತ್ತು ಎಚ್ಚರವಾಗಿದ್ದಾಗ ಅವರು ನಿದ್ರೆ ಮಾಡುತ್ತಲೂ ಇದ್ದರು. ಅವರ ನಿಜವಾದ ವಾಸಸ್ಥಾನ ನಡೆ ನುಡಿ ಇವು ಇಂತಹವೇ ಎಂದು ನಿರ್ಧರಿಸಲಾಗುತ್ತಿರಲಿಲ್ಲ. ಶಿರ್ಡಿಯಲ್ಲಿಯೇ ಇದ್ದರೂ ಕೂಡ ಅವರಿಗೆ ಪ್ರಪಂಚದ ಆಗು-ಹೋಗುಗಳ ಅರಿವಿತ್ತು.

ಅವರ ಅಂತರಂಗವು ಆಳವಾದ ಮಹಾಸಾಗರದೋಪಾದಿಯಲ್ಲಿಯ ಪ್ರಶಾಂತತೆಯಂತೆ ಇದ್ದಿತು. ಆದರೂ ಅವರು ಶಾಂತಿಯು ಸ್ಥಿತಿಯಿಂದ ಒಂದಂಗಲವೂ ಕದಲುತ್ತಿರಲಿಲ್ಲ. ಅವರು ಒಂದೊಂದು ಸಾರಿ ಮಸೀದಿಯ ಗೋಡೆಗೆ

ಒರಗಿಕೊಂಡು ನಿಲ್ಲುತ್ತಿದ್ದರು. ಕೆಲವು ವೇಳೆ ಬೆಳಿಗ್ಗೆ ಮಧ್ಯಾಹ್ನ ಮತ್ತು ಸಾಯಂಕಾಲ ಲೇಂಡಿಗಾಗಲಿ ಚಾವಡಿಗಾಗಲಿ ಹೋಗುತ್ತಿದ್ದರು. ಆದರೆ ಎಲ್ಲ ವೇಳೆಯಲ್ಲಿಯೂ ಸ್ವಾನುಭವದಲ್ಲಿ ತಲ್ಲೀನರಾಗುತ್ತಿದ್ದರು. ಸಿದ್ಧರಾದರೂ ಸಾಧಕರಂತೆ ವರ್ತಿಸಿದರು. ವಿನಯಶೀಲರೂ, ಸೌಮ್ಯ ರೂಪಿಯೂ ಮತ್ತು ನಿರಹಂಕಾರಿಗಳೂ ಆಗಿ ಸರ್ವರನ್ನೂ ಸಂತಸಗೊಳಿಸುತ್ತಿದ್ದರು. ಇಂತಹ ಪವಿತ್ರವಾದ ಶ್ರೀ ಸಾಯಿಬಾಬಾರವರ ಪಾದಧೂಳಿಯಿಂದ ಪವಿತ್ರವಾಗಿ ದೇಶದಲ್ಲಿ ಶಿರ್ಡಿಯು ಪ್ರಸಿದ್ಧಿಯನ್ನು ಪಡೆಯಿತು. ಆಳಂದಿಯನ್ನು ಜ್ಞಾನೇಶ್ವರರೂ, ಪೈಠಣವನ್ನು ಶ್ರೀ ಏಕನಾಥರೂ ಉದ್ಧರಿಸಿದ ರೀತಿಯಲ್ಲಿ ಶ್ರೀ ಸಾಯಿನಾಥರು ಶಿರ್ಡಿಯನ್ನು ಉದ್ಧರಿಸಿದರು. ಶಿರ್ಡಿಯು ನಮ್ಮಂತಹ ಭಕ್ತರ ಪಾಲಿಗೆ ಮತ್ತೊಂದು ಪಂಢರಪುರ, ದ್ವಾರಕಾ, ಕಾಶಿ, ರಾಮೇಶ್ವರ, ಬದ್ರಿ, ಕೇದಾರ, ನಾಶಿಕ, ತ್ರ್ಯಂಬಕೇಶ್ವರ, ಉಜ್ಜಯಿನಿ, ಮಹಾಬಲೇಶ್ವರ, ಮತ್ತು ಗೋಕರ್ಣ. ಶಿರ್ಡಿಯಲ್ಲಿಯ ಬಾಬಾರವರ ದರ್ಶನದಿಂದ ನಾವು ಸಂಸಾರಸಾಗರವನ್ನು ಮರೆತು ಸ್ವಾನುಭವ ಪಡೆಯಬಹುದು. ಶ್ರೀ ಸಾಯಿಬಾಬಾರವರ ದರ್ಶನವು ನಮಗೆ ಯೋಗಸಾಧನೆಯ ಹಾಗೆ. ಅವರೊಡನೆ ಮಾತನಾಡಿದ್ದುದರಿಂದ ನಮ್ಮ ಪಾಪಗಳೆಲ್ಲವೂ ನಿರ್ಮೂಲವಾದವು. ಅವರ ಪಾದಗಳನ್ನು ತೊಳೆದರೆ ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಮಿಂದಂತೆಯೆ. ಅವರ ಪಾದಕಮಲಗಳನ್ನು ತೊಳೆದ ಪವಿತ್ರ ತೀರ್ಥ ಸೇವನೆಯಿಂದ ನಮ್ಮ ಆಶೆಗಳೆಲ್ಲವೂ ದೂರವಾಗುವವು. ಅವರ ಆಜ್ಞೆಯೇ ವೇದ. ಅವರ ಉಧಿ ಪ್ರಸಾದದಿಂದ ಎಲ್ಲವೂ ಶುದ್ಧಿಯಾಗುತ್ತವೆ. ನಮಗೆ ನಿರಂತರ ಶಾಂತಿ ದೊರಕಿಸುವ ಅವರೇ ನಮ್ಮ ಪಾಲಿಗೆ ಶ್ರೀ ರಾಮ, ಶ್ರೀ ಕೃಷ್ಣ. ಅವರೇ ನಮ್ಮ ಪರಬ್ರಹ್ಮ. ಅವರು ದ್ವಂದ್ವದ್ವಯಗಳಿಂದ ದೂರಾಗಿದ್ದರು. ಬಾಬಾ ಎಂದೂ ಹಿಗ್ಗುತ್ತಿರಲಿಲ್ಲ-ಕುಗ್ಗುತ್ತಿರಲಿಲ್ಲ. ಯಾವಾಗಲೂ ಸ್ವತಃ ತಮ್ಮಲ್ಲಿಯೇ ತಲ್ಲೀನರಾಗಿ ಜ್ಞಾನ ಮತ್ತು ಮೋಕ್ಷವನ್ನು ನೀಡುತ್ತಿದ್ದರು. ಶಿರ್ಡಿ ಕೇಂದ್ರಸ್ಥಾನವಾದರೂ ಸಹ ಅವರ ಕೆಲಸಗಳು ಎಲ್ಲೆಡೆಗೂ

ಹರಡಿದ್ದವು. ಸಾಯಿಬಾಬಾರವರ ಹೆಸರು ದೂರದೇಶಗಳಿಗೂ ವ್ಯಾಪಿಸಿ ಪ್ರಪಂಚದ ನಾನಾಕಡೆಗಳಿಂದ ಭಕ್ತರು ಬಂದು ದರ್ಶನಮಾಡಿಕೊಂದು ಹಿಂತಿರುಗುತ್ತಿದ್ದರು. ಅವರ ಭಕ್ತರ ಮನವು ನಿಷ್ಕಲ್ಮಷವಾಗಿ ಅಥವಾ ಕಲ್ಮಷವಾಗಿ ಇದ್ದಲ್ಲಿ ಅವರ ದರ್ಶನ ಮಾತ್ರದಿಂದ ಎಲ್ಲವೂ ಸರಿಹೋಗುತ್ತಿತ್ತು. ಪಂಢರಪುರದ ವಿಠಲ-ರುಕ್ಮಾಯಿ ದರ್ಶನದಿಂದ ಉಂಟಾಗುತ್ತಿದ್ದ ಆನಂದದಷ್ಟೇ ಆನಂದ ಇವರ ದರ್ಶನದಿಂದ ದೊರಕುತ್ತಿತ್ತು. ಇದು ಉತ್ಪ್ರೇಕ್ಷೆಯಲ್ಲ, ಅವರ ಭಕ್ತರೊಬ್ಬರ ಅನುಭವ.

## ಗೌಳಿಬುವಾರವರ ನುಡಿ

೯೫ ವರ್ಷಗಳ ಹಿಂದೆ ಪಂಢರಿಯ ವಾರಕರಿ ಗೌಳಿಬುವಾ ಬಾಬಾ ಅವರ ಭಕ್ತರಾಗಿದ್ದರು. ಅವರು ಪಂಢರಪುರದಲ್ಲಿ ಮೂರು ತಿಂಗಳೂ ಗಂಗಾನದಿ ದಡದಲ್ಲಿ ನಾಲ್ಕು ತಿಂಗಳೂ (ಆಷಾಢದಿಂದ ಕೃತಿಕೆ ತನಕ) ಇರುತ್ತಿದ್ದರು. ಅವರಿಗೆ ಒಬ್ಬ ಶಿಷ್ಯನೂ ಸಾಮಾನು ಸರಂಜಾಮುಗಳನ್ನು ಸಾಗಿಸಲು ಗರ್ದಭವೂ ಇತ್ತು. ಪ್ರತಿ ವರ್ಷವೂ ಅವರು ಪಂಢರಪುರಕ್ಕೆ ಹೋಗಿ, ಸಾಯಿಬಾಬಾರನ್ನು ಕಾಣಲು ಶಿರ್ಡಿಗೆ ಬರುತ್ತಿದ್ದರು. ಅವರು ಬಾಬಾರವರನ್ನು ದೃಷ್ಟಿಸಿ ನೋಡಿ "ಇವರು ದಯಾಳುವಾದ ಆ ಪಂಢರಿನಾಥ ವಿಠ್ಠಲನ ಅವತಾರ" ಎಂದು ಹೇಳುತ್ತಿದ್ದರು. ಈ ಗೌಳಿಬುವಾ ವಿಠ್ಠಲ ಸ್ವಾಮಿಯ ಭಕ್ತರಾಗಿ ಅನೇಕ ಸಾರಿ ಪಂಢರಪುರಕ್ಕೆ ಹೋಗಿದ್ದರು. ಮತ್ತು ಸಾಯಿಬಾಬಾರವರೇ ನಿಜವಾದ ಪಂಢರಿನಾಥ ಎಂದು ಮನಗೊಂಡಿದ್ದರು.

## ವಿಠಲ ದರ್ಶನ

ಶ್ರೀ ಸಾಯಿಬಾಬಾರವರಿಗೆ ದೇವರ ನಾಮಗಳನ್ನು ಸ್ಮರಿಸುವುದು ಮತ್ತು ಹಾಡುವದೆಂದರೆ ಬಹಳ ಪ್ರೀತಿ. ಅವರು ಯಾವಾಗಲೂ "ಅಲ್ಲಾ ಮಾಲೀಕ್" ಎಂದು ಅನ್ನುತ್ತಿದ್ದರು. ಅವರ ಸಮ್ಮುಖದಲ್ಲಿ ಏಳು ದಿನಗಳ ಕಾಲ ಅನವರತವೂ ಪ್ರತಿಯೊಬ್ಬರೂ ದೇವರ

ನಾಮವನ್ನು ಪಠಿಸುವಂತೆ ಮಾಡುತ್ತಿದ್ದರು. ಒಂದು ಸಾರಿ ನಾಮಸಪ್ತಾಹವನ್ನು ಮಾಡಲು ದಾಸಗಣೂ ಮಹಾರಾಜ ಅವರನ್ನು ಕೇಳಿದರು. ಅದಕ್ಕೆ ಅವರು ಏಳನೇ ದಿನದ ಕೊನೆಯಲ್ಲಿ ವಿಠ್ಠಲನ ಸಾಕ್ಷಾತ್ಕಾರವಾಗುವುದೆಂದು ಭರವಸೆ ನೀಡಿದರೆ ಮಾತ್ರ ಅಗತ್ಯವಾಗಿ ಮಾಡುತ್ತೇನೆ ಎಂದರು. ಅದಕ್ಕೆ ಬಾಬಾ ಅವರು ತಮ್ಮ ಎದೆಯ ಮೇಲೆ ಹಸ್ತವಿಟ್ಟು ಖಂಡಿತವಾಗಿಯೂ ವಿಠ್ಠಲನ ಸಾಕ್ಷಾತ್ಕಾರವಾಗುತ್ತದೆ. ಎಂದರು. ಆದರೆ "ಭಕ್ತನು ಶ್ರದ್ಧೆಯುಳ್ಳವನೂ ಮತ್ತು ಭಕ್ತಿ ಸಂಪನ್ನನೂ ಆಗಿರಬೇಕು. ಡಂಕಪುರಿಯ ಡಾಕುರನಾಥ, ದ್ವಾರಕಿಯ ಶ್ರೀ ಕೃಷ್ಣ, ಪಂಡರಪುರದ ವಿಠ್ಠಲ – ಎಲ್ಲರೂ ಇಲ್ಲಿಯೇ ಇದ್ದಾರೆ. ಶ್ರೀ ಕೃಷ್ಣನನ್ನು ನೋಡಲು ದ್ವಾರಕೆಗೆ ಹೋಗಬೇಕಿಲ್ಲ. ವಿಠ್ಠಲ ಬೇರೆ ಸ್ಥಳದಿಂದಿಲ್ಲಿಗೆ ಬರುವನೆ? ಯಾವಾಗ ಭಕ್ತನು ಪ್ರೀತಿ ಮತ್ತು ಭಕ್ತಿಗಳಿಂದ ಪ್ರಾರ್ಥಿಸುತ್ತಾನೆಯೋ ಆಗ ವಿಠ್ಠಲನು ಇಲ್ಲಿಯೇ ದರ್ಶನ ನೀಡುತ್ತಾನೆ" ಎಂದು ಹೇಳಿದರು.

ಸಪ್ತಾಹ ಮುಗಿದ ನಂತರ ವಿಠ್ಠಲನ ದರ್ಶನ ಈ ರೀತಿಯಾಯಿತು: ಕಾಕಾ ಸಾಹೇಬ ದೀಕ್ಷಿತರು ಒಂದು ದಿನ ಬೆಳಿಗ್ಗೆ ಸ್ನಾನವಾದ ನಂತರ ಧ್ಯಾನಾಸೀನರಾದಾಗ ಅವರ ದೃಷ್ಟಿಗೆ ವಿಠ್ಠಲನ ಗೋಚರವಾಯಿತು. ನಂತರ ಬಾಬಾರವರ ದರ್ಶನಕ್ಕೆ ಹೋದಾಗ, ಬಾಬ ಅವರನ್ನು ಕುರಿತು, "ವಿಠ್ಠಲನ ದರ್ಶನವಾಯಿತೆ? ನೋಡಿದೆಯಾ? ಅವನು ಬಹು ತುಂಟ. ಭದ್ರವಾಗಿ ಹಿಡಿದುಕೋ. ಸ್ವಲ್ಪ ಉದಾಸೀನನಾದರೆ ಅವನು ತಪ್ಪಿಸಿಕೊಳ್ಳುವನು" ಎಂದರು. ಇದು ಬೆಳಿಗ್ಗೆ ನಡೆಯಿತು. ಮಧ್ಯಾಹ್ನ ಇನ್ನೊಂದು ರೀತಿಯಲ್ಲಿ ವಿಠ್ಠಲನ ದರ್ಶನವಾಯಿತು. ಒಬ್ಬ ವ್ಯಾಪಾರಿಯು ಶಿರ್ಡಿಗೆ ೨೦–೩೦ ವಿಠ್ಠಲನ ಫೋಟೋಗಳನ್ನು ಮಾರಲೋಸುಗ ಬಂದನು. ಫೋಟೋದಲ್ಲಿಂತು ವಿಠ್ಠಲನು ಸಹ ಕಾಕಾಸಾಹೇಬರು ಧ್ಯಾನಾಸೀನರಾಗಿದ್ದಾಗ ಕಂಡ ವಿಠ್ಠಲನಂತೆಯೇ ಇದ್ದುದನ್ನು ಕಂಡು

ವಿಸ್ಮಯವಾಗಿ ಬಾಬಾರವರ ಮಾತುಗಳನ್ನು ಸ್ಮರಿಸಿಕೊಂಡರು. ಪೂಜೆಗೋಸ್ಕರ ವಿಠ್ಠಲನ ಫೋಟೋವೊಂದನ್ನು ಕೊಂಡು ತಂದು ಪೂಜಾಸ್ಥಾನದಲ್ಲಿ ಪ್ರತಿಷ್ಠಾಪಿಸಿದರು.

## ಭಗವಂತರಾವ ಕ್ಷೀರಸಾಗರವರ ಕಥೆ

ವಿಠ್ಠಲ ಪೂಜೆಯೆಂದರೆ ಬಾಬಾರವರಿಗೆಷ್ಟು ಪ್ರಿಯವಾಗಿತ್ತೆಂಬುದು ಶ್ರೀ ಭಗವಂತರಾವ ಕ್ಷೀರಸಾಗರವರ ಕಥೆಯಿಂದ ವೇದ್ಯವಾಗುತ್ತದೆ. ವಿಠ್ಠಲನ ಭಕ್ತರಾದ ಭಗವಂತರಾವರವರ ತಂದೆ ಪ್ರತಿವರ್ಷವೂ ಪಂಢರಪುರಕ್ಕೆ ಹೋಗುತ್ತಿದ್ದರು. ಮನೆಯಲ್ಲಿಯೂ ವಿಠ್ಠಲನ ಪ್ರತಿಮೆಯೊಂದನ್ನು ಇಟ್ಟುಕೊಂಡು ಪ್ರತಿದಿನವೂ ಪೂಜಿಸುತ್ತಿದ್ದರು. ಅವರ ಮರಣದ ನಂತರ ಅವರ ಪುತ್ರನು ಪೂಜೆ –ಪುನಸ್ಕಾರ ಮತ್ತು ವರ್ಷಕೊಮ್ಮೆ ಯಾತ್ರೆ ಮಾಡುವದು ಎಲ್ಲವನ್ನೂ ಬಿಟ್ಟನು. ಭಗವಂತರಾವ ಒಮ್ಮೆ ಶಿರ್ಡಿಗೆ ಬಂದಾಗ ಬಾಬಾರವರು ಅವನ್ನು ನೋಡಿ ಅವನ ತಂದೆಯನ್ನು ಜ್ಞಾಪಿಸಿಕೊಂಡು ಕೂಡಲೆ, "ಇವನ ತಂದೆ ನನ್ನ ಸ್ನೇಹಿತನಾಗಿದ್ದನು. ಆದುದರಿಂದಲೇ ಮಗನನ್ನೂ ಸಹ ಇಲ್ಲಿಗೆ ಎಳೆದುಕೊಂಡು ಬಂದಿರುತ್ತೇನೆ. ಇವನು ದೇವರಿಗೆ ನೈವೇದ್ಯಕ್ಕೆ ಇಡದೆ ವಿಠ್ಠಲನನ್ನು ಮತ್ತು ನನ್ನನ್ನು ಹಸಿವಿನಿಂದ ಬಳಲಿಸಿದ್ದಾನೆ. ಆದುದರಿಂದಲೇ ನಾನಿಲ್ಲಿಗೆ ಅವನನ್ನು ಕರೆತಂದಿರುವುದು. ಅವನಿಗೆ ಇನ್ನು ಮುಂದೆ ಪೂಜೆ ಮಾಡುವಂತೆ ಹೇಳುತ್ತೇನೆ" ಎಂದರು.

## ಪ್ರಯಾಗದಲ್ಲಿ ದಾಸಗಣೂರವರ ತೀರ್ಥಸ್ನಾನ

ಗಂಗೆ ಯಮುನೆಗಳು ಮಿಲನವಾಗುವ ಪವಿತ್ರ ತೀರ್ಥಕ್ಷೇತ್ರವಾದ ಪ್ರಯಾಗದಲ್ಲಿ ಮೀಯುವುದು ಶ್ರೇಯಸ್ಕರವಾದುದೆಂಬುದು ಹಿಂದುಗಳ ಅಚಲ ನಂಬಿಕೆ. ಅದಕ್ಕೋಸ್ಕರ ಸಾವಿರಾರು ಯಾತ್ರಿಗಳು ಆಗಾಗ್ಗ ಅಲ್ಲಿಗೆ ಹೋಗಿ ಮಿಂದು ಬರುತ್ತಾರೆ. ಒಂದು ಸಾರೆ ದಾಸಗಣೂರವರಿಗೂ ಸಹ ಪ್ರಯಾಗಕ್ಕೆ ಹೋಗಿ ಸ್ನಾನ ಮಾಡಿ

ಬರಬೇಕೆಂದು ಅನಿಸಿತು. ಆದ್ದರಿಂದ ಅವರು ಬಾಬಾರವರ ಅಪ್ಪಣೆ ಬೇಡಿದರು. ಅದಕ್ಕೆ ಬಾಬಾರವರು "ಅಷ್ಟು ದೂರ ಹೋಗಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ. ನಮ್ಮ ಪ್ರಯಾಗ ಇಲ್ಲಿಯೇ ಇದೆ. ನನ್ನನ್ನು ನಂಬು" ಎಂದರು ಇದನ್ನು ಕೇಳಿ ದಾಸಗಣೂರವರು ಬಾಬಾರವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಆಗ ಅವರಿಗೆ ಕಂಡಿದುದೇನು? ಬಾಬಾ ಅವರ ಪಾದಗಳಿಂದ ಗಂಗೆ ಹರಿಯುತ್ತಿದ್ದಳು! ಬಾಬಾರವರ ಅದ್ಭುತ ಪವಾಡವನ್ನು ನೋಡಿ ಅವರು ಬಹಳ ಆನಂದ ಭರಿತರಾಗಿ ಸಂತೋಷಾಶ್ರುವನ್ನು ಸುರಿಸಿದರು. ಆನಂದಭರಿತರಾಗಿ ಬಾಬಾರವರನ್ನು ಕುರಿತು ಹಾಡತೊಡಗಿದರು.

## ಬಾಬಾ ಶಿರ್ಡಿಯಲ್ಲಿ ಮೊದಲು ಕಾಣಿಸಿಕೊಂಡ ಬಗೆ

ಸಾಯಿಬಾಬಾರವರ ಜನ್ಮ ಹೇಗೆ ಆಯಿತು? ಜನ್ಮಸ್ಥಳವಾವುದು? ಅವರ ತಾಯಿತಂದೆಗಳಾರು? ಎಂಬುದು ಯಾರಿಗೂ ತಿಳಿದಿರಲಿಲ್ಲ. ಈ ವಿಚಾರವಾಗಿ ಬಾಬಾರವರನ್ನೇ ಅನೇಕ ಬಾರಿ ಕೇಳಿದರೂ ಸಹ ಉತ್ತರವೀಯುತ್ತಿರಲಿಲ್ಲ, ಇದುವರೆಗೂ ಅದುತಿಳಿಯದ ವಿಷಯವಾಗಿ ಉಳಿದಿದೆ. ನಮಗೆ ಈ ವಿಚಾರವಾಗಿ ಯಾವುದೊಂದು ಸಮಾಚಾರವು ತಿಳಿದಿರುವುದಿಲ್ಲ. ನಾಮದೇವ ಮತ್ತು ಕಬೀರರು ಸಾಮಾನ್ಯ ಜನರಂತೆ ಜನ್ಮವೆತ್ತಲಿಲ್ಲ. ಅವರು ಶಿಶುರೂಪದಲ್ಲಿ ನದಿಯಲ್ಲಿ ದೊರೆತರು. ನಾಮದೇವನು ಗೋಣಾಯಿಗೆ ಭೀಮರಥಿ ನದಿಯಲ್ಲಿಯೂ, ಕಬೀರನು ಕಮಾಲನಿಗೆ ಭಾಗೀರಥಿ ನದಿಯಲ್ಲಿಯೂ ದೊರಕಿದರು. ಬಾಬಾರವರೂ ಸಹ ಇದೇ ರೀತಿ ಜನ್ಮಿಸಿದರು ಎಂದು ಊಹಿಸಲು ಸಂದೇಹಕ್ಕೆಡೆಯಿಲ್ಲ. ಅವರು ಮೊದಲು ಶಿರ್ಡಿಯಲ್ಲಿ ಭಕ್ತರಿಗೋಸಗವೇ ಒಂದು ಬೇವಿನ ಮರದ ನೆರಳಿನಲ್ಲಿ ಹದಿನಾರು ವರ್ಷದ ಯುವಕನಾಗಿದ್ದಾಗ ಕಾಣಿಸಿಕೊಂಡರು. ಆಗಲೇ ಜ್ಞಾನಿಗಳಾಗಿದ್ದರು. ಅವರಿಗೆ ಪ್ರಾಪಂಚಿಕ ಸುಖಗಳ ಕಡೆಗೆ ಗಮನವಿರಲಿಲ್ಲ. ಮಾಯೆಯನ್ನು ಹೊರದೂಡಿದ್ದರು. ಮುಕ್ತಿಯು ಯಾವಾಗಲೂ ಅವರ ಪಾದಸೇವೆ ಮಾಡುತ್ತಿದ್ದಳು.

ನಾನಾ ಚೋಪದಾರವರ ತಾಯಿಯವರು ಬಾಬಾರವರನ್ನು ಈ ರೀತಿ ವರ್ಣಿಸಿದ್ದಾರೆ.

ಸುಂದರವಾಗಿಯೂ, ಚಟುವಟಿಕೆಯವನಾಗಿಯೂ ಇದ್ದ ಈ ಹುಡುಗನು ಮೊದಲು ಆಸನಾಸೀನನಾಗಿ ಬೇವಿನ ಮರದ ಕೆಳಗೆ ಕಾಣಿಸಿಕೊಂಡನು. ಬಿಸಿಲು, ಚಳಿ, ಮಳೆ ಗಾಳಿಗಳನ್ನು ಲೆಕ್ಕಿಸದೆ ಕಠಿಣವಾದ ತಪಸ್ಸಿನಲ್ಲಿ ನಿರತನಾದ ಈ ಬಾಲ ಸಾಧುವನ್ನು ನೋಡಿ ಹಳ್ಳಿಯ ಜನರೆಲ್ಲರೂ ವಿಸ್ಮಿತರಾದರು. ಈ ಹುಡುಗನು ಹೇಗೆ ಬಂದನು ಎಂದು ಪಿಸುಗುಟ್ಟುತ್ತಿದ್ದರು. ಅವನ ರೂಪ-ಲಾವಣ್ಯಗಳು ಅವನ ಏಕೈಕ ದರ್ಶನ ಮಾತ್ರದಿಂದಲೇ ಸರ್ವರನ್ನೂ ಸಂತೋಷಗಳಿಸುತ್ತಿದ್ದವು. ಅವನು ಯಾರ ಮನೆ ಬಾಗಿಲಿಗೂ ಹೋಗುತ್ತಿರಲಿಲ್ಲ. ಯಾವಾಗಲೂ ಬೇವಿನ ಮರದ ಕೆಳಗೆ ಕುಳಿತಿರುತ್ತಿದ್ದನು. ಅನುರಾಗಯುಕ್ತನಾಗಿ ಎಲ್ಲರಿಗೂ ಅವನು ಸಮಸ್ಯೆಯಾಗಿದ್ದನು. ಒಂದು ದಿನ ಖಂಡೋಬ ದೇವರು, ಒಬ್ಬನ ಮೈಯಲ್ಲಿ ಬಂದಾಗ ಊರಿನ ಜನರು "ಹೇ, ದೇವಾ! ಯಾವ ಪುಣ್ಯಾತ್ಮನ ಪುತ್ರನಿವನು? ಇವನಿಲ್ಲಿಗೆ ಬಂದ ಬಗೆ ಹೇಗೆ? ತಿಳಿಸಿ" ಎಂದು ಕೇಳಲು ಖಂಡೋಬನು "ಒಂದು ಹಾರಿಯನ್ನು ತೆಗೆದುಕೊಂಡು ಬನ್ನಿರಿ. ನಾನು ತೋರಿಸಿದ ಜಾಗದಲ್ಲಿ ಅಗೆಯಿರಿ" ಎಂದು ಉತ್ತರವಿತ್ತನು. ಆಗ ಜನರು ಕೂಡಲೇ ಆ ಜಾಗವನ್ನು ಅಗೆದರು. ಅಗೆಯುತ್ತಿರುವಾಗ ಒಂದು ಕಲ್ಲಿನ ಚಪ್ಪಡಿ ಸಿಕ್ಕಿತು. ಅದನ್ನು ತೆಗೆದು ನೋಡಲಾಗಿ ಒಂದು ಹಜಾರವು ಕಾಣಿಸಿತು. ಆಗ ಖಂಡೋಬನು "ಈ ಹುಡುಗನು ಇಲ್ಲಿ ಹನ್ನೆರಡು ವರ್ಷ ಕಾಲ ತಪಸ್ಸು ಮಾಡಿರುವನು" ಎಂದನು ಕೂಡಲೇ ಜನರ ಈ ವಿಷಯದಲ್ಲಿ ಆ ಹುಡುಗನ ಪ್ರಶ್ನಿಸಲು, "ಇದು ನನ್ನ ಗುರುವಿನ ಸ್ಥಾನ, ಇದನ್ನು ಜೋಪಾನವಾಗಿ ಕಾಪಾಡಿ" ಎಂದು ಬೇಡಿಕೊಂಡನು. ಆಗ ಅವರು ಅದರಂತೆ ಆ ಜಾಗವನ್ನು ಮೊದಲಿನಂತೆ ಮುಚ್ಚಿದರು. ಅಶ್ವತ್ಥ ಮರವು ಹೇಗೆ ಶ್ರೇಷ್ಠವೆಂಬ

ನಂಬಿಕೆ ನಮ್ಮಲ್ಲಿದೆಯೋ ಅದೇ ರೀತಿ ಬಾಬಾರವರಿಗೆ ಬೇವಿನ ಮರವೆಂದರೆ ಅಷ್ಟು ಪ್ರೀತಿ. ಮ್ಹಾಳಸಾಪತಿ ಮತ್ತು ಅನೇಕ ಶಿರ್ಡಿ ನಿವಾಸಿಗಳು ಆ ಜಾಗವನ್ನು ಬಾಬಾರವರ ಗುರುವಿನ ವಿಶ್ರಾಂತಿ ಸ್ಥಾನವೆಂದು ಗೌರವಿಸಿ ಪೂಜೆ ಮಾಡಹತ್ತಿದರು.

## ಮೂರು ಧರ್ಮಶಾಲೆಗಳು

ಬೇವಿನ ಮರ ಮತ್ತು ಅದರ ಸುತ್ತಲಿನ ನೀವೇಶನಗಳನ್ನು ಶ್ರೀ ಹರಿ ವಿನಾಯಕ ಸಾತೆಯವರು ಖರೀದಿಗೆ ತೆಗೆದುಕೊಂಡು ಅಲ್ಲಿ 'ಸಾತೆವಾಡಾ' ಎಂಬ ಪ್ರವಾಸಿ ಮಂದಿರವನ್ನು ಕಟ್ಟಿಸಿದ್ದಾರೆ. ಈ ಮಂದಿರವು ಅನೇಕ ಭಕ್ತರ ವಿಶ್ರಾಂತಿ ಸ್ಥಳ. ಬೇವಿನ ಮರಕ್ಕೆ ಸುತ್ತಲೂ ಕಟ್ಟೆಯನ್ನು ಕಟ್ಟಿರುತ್ತಾರೆ. ಬೇವಿನ ಮರದ ಹತ್ತಿರ ಯಾರು ಗುರುವಾರ ಮತ್ತು ಶುಕ್ರವಾರದಂದು ಧೂಪವನ್ನು ಹಾಕುತ್ತಾರೆಯೋ, ಅವರಿಗೆ ದೇವರ ಅನುಗ್ರಹದಿಂದ ಶಾಂತಿ ಸುಖಗಳು ಲಭಿಸುವುದೆಂಬ ಪ್ರತೀತಿಯಿದೆ. ಈ ಮಂದಿರವು ಬಹಳ ಹಳೆಯದಾಗಿದ್ದುದರಿಂದ ಸಂಸ್ಥಾನದವರು ಅದನ್ನು ಸರಿಪಡಿಸಿ ಸ್ವಚ್ಛವಾಗಿ ಶುಚಿಯಾಗಿಟ್ಟಿರುತ್ತಾರೆ. 'ಸಾತೆವಾಡ' ಕಟ್ಟಿದ ಸ್ವಲ್ಪ ದಿನಗಳಲ್ಲಿಯೇ 'ದೀಕ್ಷಿತವಾಡಾ' ನಿರ್ಮಿತವಾಯಿತು.

ಮುಂಬಯಿಯ ಸಲಹಾ ವಕೀಲರಾದ (solicitor) ಕಾಕಾ ಸಾಹೇಬ ದೀಕ್ಷಿತರವರು ಒಮ್ಮೆ ಲಂಡನಿಗೆ ಹೋಗಿದ್ದಾಗ ಒಂದು ಅಪಘಾತದ ಪ್ರಯುಕ್ತ ಕಾಲುಗಳಿಗೆ ಏಟು ಬಿದ್ದು ಯಾವುದರಿಂದಲೂ ಸರಿಹೋಗಲಿಲ್ಲ. ನಾನಾಸಾಹೇಬ ಚಾಂದೋರಕರ ಅವರು ಸಾಯಿಬಾಬಾರವರ ದರ್ಶನ ಪಡೆಯುವಂತೆ ಪ್ರೇರೇಪಿಸಿದರು. ಅದರಂತೆ ಅವರು ೧೯೦೯ರಲ್ಲಿ ಸಾಯಿಬಾಬಾರವರ ದರ್ಶನ ಪಡೆದರು. "ಮನೋರೋಗವನ್ನು ನಿವಾರಣೆ ಮಾಡಿ" ಎಂದು ಬೇಡಿಕೊಂಡರು. ಬಾಬಾರವರ ದರ್ಶನದಿಂದ ತೃಪ್ತರಾಗಿ ಶಿರ್ಡಿಯಲ್ಲಿ ನೆಲೆಸಬೇಕೆಂದು

ಮನಸ್ಸು ಮಾಡಿದರು. ಶಿರ್ಡಿಯಲ್ಲಿ ಭಕ್ತರಿಗೊಂದು ಮಂದಿರವನ್ನು ಕಟ್ಟಿಸಿ, ತಾವೂ ಒಂದು ಮನೆಯನ್ನು ಕಟ್ಟಿಸಿಕೊಂಡರು. ಇದು ಆರಂಭವಗಿದ್ದು ದಿ. ೧೦-೧೨-೧೯೧೦ರಂದು ಅದೇ ದಿನ ಎರಡು ಮುಖ್ಯ ಘಟನೆಗಳು ಜರುಗಿದವು.

೧) ಶ್ರೀ ದಾದಾಸಾಹೇಬ ಖಾಪರ್ಡೆಯವರಿಗೆ ಮನೆಗೆ ಹೋಗಲು ಅನುಮತಿ ದೊರಕಿತು.

೨) ಚಾವಡಿಯಲ್ಲಿ ರಾತ್ರಿ ಆರತಿ ಪ್ರಾರಂಭವಾಯಿತು.

ಈ ದೀಕ್ಷಿತವಾಡೆಯು ೧೯೧೧ನೇ ವರ್ಷದಲ್ಲಿ ಶ್ರೀ ರಾಮನವಮಿಯ ದಿನ ಉದ್ಘಾಟಿಸಲ್ಪಟ್ಟಿತು.

ಮೂರನೆಯ ಮಂದಿರವು ನಾಗಪುರದ ಲಕ್ಷಾಧೀಶರಾದ ಶ್ರೀ ಬೂಟಿಯವರ ಸಹಾಯದಿಂದ ನಿರ್ಮಿತವಾಯಿತು. ಇದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರು. ಈ ಮಂದಿರದಲ್ಲಿ ಶ್ರೀ ಸಾಯಿಬಾಬಾರವರ ದೇಹವು ವಿಶ್ರಾಂತಿ ಪಡೆಯುತ್ತಿರುವುದರಂದ ಭವನ ನಿರ್ಮಾಣಕ್ಕೆ ವಿನಿಯೀಗಿಸಿದ ಹಣವು ಸದ್ವಿನಿಯೋಗವಾಯಿತೆಂದೇ ಹೇಳಬಹುದು. ಈ ಮಂದಿರವೇ ಈಗಿನ "ಸಮಾಧಿ ಮಂದಿರ". ಈ ಮಂದಿರದ ನಿವೇಶನದಲ್ಲಿ ಬಾಬಾರವರು ಪ್ರತಿದಿನವೂ ನೀರೆರೆದು ಒಂದು ತೋಟ ನಿರ್ಮಿಸಿದ್ದರು. ವಾಮನ ತಾತ್ಯಾ ಅವರ ಸಹಾಯದಿಂದ ತೋಟವನ್ನು ನೋಡಿಕೊಳ್ಳುತ್ತಿದ್ದ ಬಗೆ, ಪುನ: ಚಾಂದ್ ಪಾಟೀಲರವರ ಮದುವೆ ನಿಬ್ಬಣದ ಸಂಗಡ ಶಿರ್ಡಿಗೆ ಬಂದ ರೀತಿ, ಮೋಹಿದ್ದಿನ್ ತಂಬೋಳಿಯವರೊಡನೆ ಕುಸ್ತಿ ಆಡಿದುದು, ಇನ್ನೂ ಮುಂತಾದ ವಿಚಾರಗಳ ಬಗ್ಗೆ ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಪ್ರಸ್ತಾಪಿಸುತ್ತೇನೆ.

**ಶ್ರೀ ಸಾಯಿ ಪ್ರಣಾಮ**

# ೫ನೇ ಅಧ್ಯಾಯ

ಶ್ರೀ ಸಾಯಿಬಾಬಾರವರು ಚಾಂದ್ ಪಾಟೀಲರ್ ಮದುವೆ ನಿಬ್ಬಣದ ಜೊತೆಯಲ್ಲಿ ಬಂದ ಬಗೆ-ಸುಸ್ವಾಗತ-ಮಹಾಯೋಗಿಗಳ ಸಂಪರ್ಕ-ಅವರ ಉಡಿಗೆ ತೊಡಿಗೆ-ನಿತ್ಯ ಜೀವನ- ಪಾದುಕೆಗಳ ಕಥೆ - ಮೊಹಿದ್ದೀನ್‌ರವರೊಡನೆ ಕುಸ್ತಿ - ಅವರ ಜೀವನದ ಬದಲಾವಣೆ - ನೀರನ್ನು ಎಣ್ಣೆಯಾಗಿ ಪರಿವರ್ತಿಸಿದ ಬಗೆ - ಕಪಟ ಗುರು ಜವ್ಹಾರಅಲಿ

## ಚಾಂದ್ ಪಾಟೀಲರ ಮದುವೆ ನಿಬ್ಬಣದ ಜೊತೆಯಲ್ಲಿ ಬಾಬಾರವರು ಹಿಂದಿರುಗಿದುದು

ಚಾಂದ್ ಪಾಟೀಲ ಔರಂಗಾಬಾದ ಜಿಲ್ಲೆಯಲ್ಲಿ ಧೂಪ ಹಳ್ಳಿಯ ಮಹಮ್ಮದೀಯ ಸಾಹುಕಾರ. ಅವನು ಔರಂಗಾಬಾದಿಗೆ ಪ್ರಯಾಣ ಬೆಳೆಸುವಾಗ ತಮ್ಮ ಕುದುರೆಯನ್ನು ಕಳೆದುಕೊಂಡನು. ಎರಡು ತಿಂಗಳು ಕಾಲ ಹುಡುಕಿ ಬಹಳ ಬೇಸತ್ತಿದ್ದನು. ನಿರಾಶನಾಗಿ ಔರಂಗಾಬಾದಿಗೆ ಹಿಂತಿರುಗುತ್ತಿದ್ದಾಗ, ದಾರಿಯಲ್ಲಿ ಒಂದು ಮಾವಿನ ಮರದ ಕೆಳಗೆ ಕುಳಿತಿದ್ದ ಫಕೀರನನ್ನು ಕಂಡನು. ಚಾಂದ್ ಪಾಟೀಲನನ್ನು ನೋಡಿದ ಫಕೀರನು ಅವನನ್ನು ಕರೆದು, ತಾನು ಸೇದುತ್ತಿದ್ದ ಹುಕ್ಕಾವನ್ನು ಅವನಿಗೆ ಕೊಟ್ಟು ವಿಚಾರವೇನೆಂದು ಪ್ರಸ್ತಾಪಿಸಿದನು. ಅವನು ಕುದುರೆಯನ್ನು ಕಳೆದುಕೊಂಡ ಸಮಾಚಾರವನ್ನು ಅರುಹಿದನು. ಇದನ್ನು ಕೇಳಿದ ಫಕೀರನು" ಇಲ್ಲಿಯೇ ಹಳ್ಳದ ಬಳಿಗೆ ಹೋಗಿ ನೋಡು, ಅಲ್ಲಿದೆ" ಎಂದನು. ಚಾಂದ ಪಾಟೀಲನು ಅಲ್ಲಿಗೆ ಹೋಗಿ ನೋಡಲು ತನ್ನ ಕುದುರೆ ಅಲ್ಲಿ ಮೇಯುತ್ತಿರುವುದನ್ನು ಕಂಡು ಆನಂದಭರಿತನಾಗಿ "ಈ ಫಕೀರನು ಸಾಮಾನ್ಯನಲ್ಲ" ಎಂದು ಮನಸ್ಸಿನಲ್ಲಿ ಯೋಚಿಸಿ, ಕುದುರೆಯೊಡನೆ ಫಕೀರನ ಕಡೆಗೆ ಹಿಂತಿರುಗಿದನು. ಅಷ್ಟು ಹೊತ್ತಿಗಾಗಲೇ ಹುಕ್ಕಾ

ತಯಾರಾಗಿತ್ತು. ಆದರ ಬಟ್ಟೆ ಒದ್ದೆ ಮಾಡಲು ನೀರು, ಹೊಗೆಸಪ್ಪು ಹೊತ್ತಿಸಲು ಬೆಂಕಿಯೂ ಬೇಕಾಗಿದ್ದಿತು. ಆಗ ಆ ಫಕೀರನು ಸಟಕಾ (ಶೂಲ) ದಿಂದ ನೆಲಕ್ಕೆ ಹೊಡೆದ ಕೂಡಲೆ ಬೆಂಕಿ ಉತ್ಪತ್ತಿಯಾಯಿತು. ಮತ್ತೆ ಸಟಕಾ ನೆಲಕ್ಕೆ ಹೊಡೆದನು; ನೀರು ಹೊರ ಚಿಮ್ಮಿತು. ಆದರಿಂದ ಬಟ್ಟೆಯನ್ನು ಒದ್ದೆಮಾಡಿ ಹುಕ್ಕಾಸೇವಿಸಿದನು. ನಂತರ ಚಾಂದ್ ಪಾಟೀಲನಿಗೂ ನೀಡಿದನು. ಇದನ್ನು ನೋಡಿ ಚಾಂದ್ ಪಾಟೀಲನಿಗೆ ವಿಸ್ಮಯವಾಯಿತು. ಅವನು ಫಕೀರನನ್ನು ತನ್ನ ಮನೆಗೆ ಆಹ್ವಾನಿಸಿ, ತನ್ನ ಆದರಾತಿಥ್ಯ ಸ್ವೀಕರಿಸುವಂತೆ ಬೇಡಿಕೊಂಡನು. ಮಾರನೇ, ದಿನ ಪಕೀರನು ಸಹ ಚಾಂದ್ ಪಾಟೀಲನೊಂದಿಗೆ ಪ್ರಯಾಣ ಮಾಡಿ ಅವನ ಮನೆಯಲ್ಲಿ ಸ್ವಲ್ಪ ದಿನಗಳಿದ್ದನು. ಚಾಂದ್ ಪಾಟೀಲನು ತನ್ನ ಮೈದುನನ ಮದುವೆಗೆ ಹೊರಡಬೇಕಾಯಿತು. ಮದುವೆ ಶಿರ್ಡಿಯಲ್ಲಿ ನಡೆಯುವ ಹಾಗೆ ನಿಶ್ಚಿತವಾಗಿತ್ತು. ಆಗ ಫಕೀರನು ಸಹ ಮದುವೆ ಬಳಗದೊಂದಿಗೆ ಶಿರ್ಡಿಗೆ ಬಂದನು. ಮದುವೆ ಸಾಂಗವಾಗಿ ನೆರವೇರಿತು. ಬೀಗರೆಲ್ಲರೂ ಹಿಂತಿರುಗಿದರು. ಆದರೆ ಫಕೀರನು ಮಾತ್ರ ಶಿರ್ಡಿಯಲ್ಲಿಯೇ ಉಳಿದನು.

## ಫಕೀರನಿಗೆ 'ಸಾಯಿ' ಎಂಬ ಹೆಸರು

ಮದುವೆ ನಿಬ್ಬಣದವರು ಖಂಡೋಬ ದೇವಸ್ಥಾನದ ಬಳಿ ಇದ್ದ ಭಗತ್ ಮ್ಹಾಳಸಾಪತಿಯವರ ಹೊಲದ ಬಳಿ ಬಂದರು. ಗಾಡಿಯಿಂದ ಎಲ್ಲರೂ ಒಬ್ಬೊಬ್ಬರಾಗಿ ಇಳಿಯುತ್ತಿದ್ದರು. ಅಂತೆಯೇ ಫಕೀರನು ಸಹ ಇಳಿದು ಬರುತ್ತಿರುವಾಗ ಮ್ಹಾಳಸಾಪತಿಯವರು ಈ ಯುವಕನ್ನು ನೋಡಿ "ಯಾ ಸಾಯಿ" ಎಂದು ಸುಸ್ವಾಗತ ನೀಡಿದರು. ಅಂದಿನಿಂದ ಎಲ್ಲರೂ ಅವನ್ನು "ಸಾಯಿ" ಎಂದು ಕರೆಯಲಾರಂಭಿಸಿದರು. ಈ ಸಾಯಿಯೇ ಶಿರ್ಡಿಯ ಪ್ರಖ್ಯಾತ "ಶ್ರೀ ಸಾಯಿಬಾಬಾ".

## ಇತರ ಸನ್ಯಾಸಿಗಳೊಡನೆ ಸಂಪರ್ಕ

ಸಾಯಿಬಾಬಾರವರು ಮಸೀದಿಯಲ್ಲಿ ವಾಸಿಸುತ್ತಿದ್ದರು. ದೇವಿದಾಸ ಎಂಬ ಸಾಧುವು ಬಹಳ ದಿನಗಳಿಂದ ಶಿರ್ಡಿಯಲ್ಲಿಯೇ ಇದ್ದನು. ಬಾಬಾರವರಿಗೆ ಅವರ ಸಂಗ ಸಮ್ಮತವೆನಿಸಿತ್ತು. ಆದುದರಿಂದ ಕೆಲವು ಕಾಲ ಅವರೊಡನೆ ಮಾರುತಿ ದೇವಸ್ಥಾನಲ್ಲಿದ್ದರು. ನಂತರ ಕೆಲವು ಕಾಲ ಒಂಟಿಯಾಗಿ ವಾಸಿಸುತ್ತಿದ್ದರು. ಆಮೇಲೆ ಜಾನಕೀದಾಸ ಎಂಬ ಸಾಧುವು ಬಂದರು ಬಾಬಾರವರು ಅವರೊಡನೆಯೂ ಸಂಪರ್ಕ ಬೆಳೆಸಿ ಇವರಿರುವ ಕಡೆಗೆ ಅವರೂ, ಅವರಿರುವ ಕಡೆಗೆ ಇವರೂ ಬಂದು ಹೋಗುತ್ತಿದ್ದರು. ಗಂಗಾಗೀರ ಎಂಬ ಸಾಧುವಿನೊಡನೆಯೂ ಸಂಪರ್ಕ ಬೆಳೆಸಿದ್ದರು. ಗಂಗಾಗೀರವರು ಮೊದಲು ಬಾಬಾರವರೇ ಸ್ವತ: ತೋಟಕ್ಕೆ ನೀರೆರೆಯುತ್ತಿರುವುದನ್ನು ನೋಡಿ ಆಶ್ಚರ್ಯಚಕಿತರಾಗಿ "ಇಂಥ ಅಮೂಲ್ಯವಾದ ರತ್ನವನ್ನು ಹೊಂದಿರುವ ಶಿರ್ಡಿಯೇ ಪುಣ್ಯಸ್ಥಳ" ಎಂದು ಹೇಳಿದರು. ಇವನು ಸಾಮಾನ್ಯನಲ್ಲ; ಶಿರ್ಡಿಯ ಅದೃಷ್ಟವೇ ಸರಿ" ಎಂದೂ ಸಹ ಹೇಳಿದರು. ಇದೇ ರೀತಿ ಅಕ್ಕಲಕೋಟೆಯ ಮಹಾರಾಜರ ಶಿಷ್ಯರಾದ ಆನಂದಮಠದ ಆನಂದನಾಥ ಎಂಬ ಸಾಧುವೂ ಸಹ ಶಿರ್ಡಿಗೆ ಬಂದಿದ್ದರು. ಅವರೂ ಸಹ ಸಾಯಿಬಾಬಾರವರನ್ನು ನೋಡಿ "ಇದೇ ನೈಜವಾದ ಅಮೂಲ್ಯ ರತ್ನ; ಇವರು ಸಾಮಾನ್ಯ ಮನುಷ್ಯರಲ್ಲ, ನೀವು ಇದನ್ನು ಮುಂದೆ ಮನಗಾಣುವಿರಿ" ಎಂದು ಹೇಳಿ ಏವಲಾಗ್ರಾಮಕ್ಕೆ ಹಿಂತಿರುಗಿದರು. ಈ ನುಡಿಗಳೆಲ್ಲವೂ ಶ್ರೀ ಸಾಯಿಬಾಬಾರವರು ತರುಣರಾಗಿದ್ದಾಗಿನ ಮಾತುಗಳು.

## ಬಾಬಾರವರ ದೈನಂದಿನ

ಚಿಕ್ಕವಯಸ್ಸಿನಿಂದಲೇ ಬಾಬಾರವರು ತಲೆ ಬೆಳೆಸಿದ್ದರು. ಎಂದೂ ಆಯುಷ್ಕರ್ಮ ಮಾಡಿಸಿರಲಿಲ್ಲ. ಜಟ್ಟಿಯ ಹಾಗೆ ಉಡುಪು ಧರಿಸುತ್ತಿದ್ದರು. ರಾಹತಾಕ್ಕೆ ಹೋದಾಗ ಅಲ್ಲಿಂದ ಚೆಂಡು, ಜಾಯಿ ಮತ್ತು ಜೂಯಿ

ಎಂಬ ಹೂವಿನ ಗಿಡಗಳನ್ನು ತಂದು ನೆಟ್ಟು ನೀರೆರೆದು ಬೆಳೆಸಿದ್ದರು. ಶಿಷ್ಯನಾದ ವಾಮನ ತಾತ್ಯಾ ಎಂಬುವನ ಪ್ರತಿ ದಿನವೂ ಎರಡು ಹಸಿ ಮಡಿಕೆಗಳನ್ನು ತಂದು ಕೊಡುತ್ತಿದ್ದನು. ಬಾಬಾರವರು ಬಾವಿಯಿಂದ ನೀರು ಸೇದಿ ಗಿಡಗಳಿಗೆ ಎರೆಯುತ್ತಿದ್ದರು. ಸಾಯಂಕಾಲವಾದ ನಂತರ ಮಣ್ಣಿನ ಮಡಿಕೆಗಳನ್ನು ಒಂದು ಕಡೆಗೆ ಇಡುತ್ತಿದ್ದರು. ಅವು ಹಸಿಮಣ್ಣಿನಿಂದ ಮಾಡಲ್ಪಟ್ಟಿದುದರಿಂದ ಮಾರನೇ ದಿನದ ಹೊತ್ತಿಗೆ ಒಡೆದು ಹೋಗುತ್ತಿದ್ದವು. ಮರುದಿನ ವಾಮನ ತಾತ್ಯಾ ಪುನ: ಎರಡು ಮಡಿಕೆಗಳನ್ನು ತಂದಿಡುತ್ತಿದ್ದರು. ಈ ರೀತಿ ಸುಮಾರು ಮೂರು ವರ್ಷಗಳ ಪರಿಶ್ರಮದಿಂದ ಅವರು ಒಂದು ತೋಟವನ್ನು ನಿರ್ಮಿಸಿದರು. ಈ ನಿವೇಶನದಲ್ಲಿಯೇ ಬಾಬಾರವರ ಮಹಾ ಸಮಾಧಿ ಮಂದಿರ ನಿರ್ಮಿತವಾಗಿದೆ.

## ಬೇವಿನ ಮರದ ಬುಡದಲ್ಲಿರವ ಪಾದುಕೆಗಳು

ಅಕ್ಕಲಕೋಟೆಯ ಮಹಾರಾಜರ ಭಕ್ತ ಭಾಯಿ ಕೃಷ್ಣಾಜಿ ಅಲಿಬಾಗಕರ ಅವರು ತಮ್ಮ ಗುರುವಿನ ಫೋಟೋ ಒಂದನ್ನಿಟ್ಟುಕೊಂಡು ಪೂಜಿಸುತ್ತಿದ್ದರು. ಒಂದು ದಿನ ಅಕ್ಕಲಕೋಟೆಗೆ ಹೋಗಿ ಗುರುಗಳ ಪಾದದರ್ಶನ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡರು. ಆದರೆ ಅಲ್ಲಿಗೆ ಹೋಗುವ ಮುನ್ನವೇ ಅಕ್ಕಲಕೋಟೆ ಮಹಾರಾಜರು ಕನಸಿನಲ್ಲಿ ಕಾಣಿಸಿಕೊಂಡು "ಈಗ ನನ್ನ ವಿಶ್ರಾಂತಿ ಸ್ಥಳ ಶಿರ್ಡಿ; ನೀನು ಅಲ್ಲಿಗೆ ಬಂದು ಪೂಜೆ ಮಾಡು" ಎಂದರು. ಆಗ ಅವರು ತಮ್ಮ ನಿರ್ಧಾರವನ್ನು ಮಾರ್ಪಡಿಸಿಕೊಂಡು ಶಿರ್ಡಿಗೆ ಬಂದು ಅಲ್ಲಿ ಆರು ತಿಂಗಳು ನೆಲಸಿ ಶ್ರೀ ಬಾಬಾರವರ ಸೇವೆ ಮಾಡಿದರು. ಈ ಸ್ಮಾರಕವಾಗಿ ಭಾಯಿ ಕೃಷ್ಣಾಜಿ ಅವರು ಪಾದುಕೆಗಳನ್ನು ತಯಾರಿಸಿ ಅಲ್ಲಿ ಪ್ರತಿಷ್ಠಾಪನೆ ಮಾಡಿದರು. ಇದು ನಡೆದದ್ದು ಸುಮಾರು ೧೯೧೨ರಲ್ಲಿ. ಪೂಜೆ ಮಾಡಲು ಒಬ್ಬ ಬ್ರಾಹ್ಮಣನನ್ನು ನೇಮಿಸಿದರು. ಅದರ

ಮೇಲ್ವಿಚಾರಣೆಯನ್ನು ಭಕ್ತರಾದ ಸಗುಣರವರಿಗೆ ವಹಿಸಿದರು. ಕಥೆಯ ವಿವರ ಈ ರೀತಿ ಇದೆ. (ಇದನ್ನು 'ಸಾಯಿಲೀಲಾ' ೨ನೇ ಸಂಗ್ರಹದ ಮೊದಲ ಸಂಚಿಕೆ ೨೫ ನೇ ಪುಟದಲ್ಲಿ ಕಾಣಬಹುದು.)

೧೯೧೨ರಲ್ಲಿ ಡಾ. ರಾಮರಾವ ಕೋಠಾರೆ ಎಂಬುವರು ಬಾಬಾರವರ ದರ್ಶನ ಪಡೆಯಬೇಕೆಂದು ಶಿರ್ಡಿಗೆ ಬಂದರು. ಅವರ ಕಂಪೌಂಡರ ಮತ್ತು ಸ್ನೇಹಿತರಾದ ಶ್ರೀ ಭಾಯಿ ಕೃಷ್ಣಾಜಿ ಅಲಿಬಾಗಕರರವರೂ ಅವರೊಡನೆ ಬಂದಿದ್ದರು. ಕಂಪೌಂಡರ ಭಾಯಿ ಕೃಷ್ಣಾಜಿ, ಶ್ರೀಸಗುಣ ಮೇರು ನಾಯಿಕ ಮತ್ತು ಶ್ರೀ ಜಿ.ಕೆ. ದೀಕ್ಷಿತ ಅವರು ಆಪ್ತ ಸ್ನೇಹಿತರುಗಳಾಗಿದ್ದರು. ಇವರು ಕಲೆತು ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತಿರುವಾಗ ಸಾಯಿಬಾಬಾರವರು ಮೊದಲು ಶಿರ್ಡಿಗೆ ಬಂದ ಗುರುತಿಗಾಗಿ ಪವಿತ್ರವದ ಬೇವಿನ ವೃಕ್ಷದ ಕೆಳಗೆ ಒಂದು ಸ್ಮಾರಕವನ್ನು ನಿರ್ಮಿಸಬೇಕೆಂದು ನಿಶ್ಚಯಿಸಿದರು. ಸ್ಮಾರಕದ ಸಂಕೇತ ಪಾದುಕೆಗಳೆಂದು ತೀರ್ಮಾನಿಸಿ, ಅವುಗಳನ್ನು ಒಂದು ಶಿಲೆಯಲ್ಲಿ ಮಾಡಿಸಬೇಕೆಂಬ ನಿರ್ಧಾರಕ್ಕೆ ಬಂದರು. ಕೋಠಾರೆಯವರು ಸ್ನೇಹಿತರಾದ ಕಂಪೌಂಡರವರು ಈ ವಿಚಾರವನ್ನು ಡಾಕ್ಟರ ರಾಮರಾವ ಕೋಠರೆಯವರಿಗೆ ತಿಳಿಸಿದರೆ ಅವರು ಒಳ್ಳೆಯ ಪಾದುಕೆಗಳನ್ನು ಮಾಡಿಸುತ್ತಾರೆಂದು ಹೇಳಿದರು. ಸರ್ವರೂ ಸಮ್ಮತಿಸಿದ ನಂತರ ಡಾಕ್ಟರ ಕೋಠಾರೆಯವರಿಗೆ ಈ ವಿಷಯ ತಿಳಿಸಿದರು. ಅವರೇ ಸ್ವತ: ಶಿರ್ಡಿಗೆ ಬಂದು ತಾವು ಹಾಕಿದ ಯೋಜನೆಯ ನಕಲನ್ನು ಶ್ರೀ ಉಪಾಸನಿ ಮಹಾರಾಜರವರಿಗೆ ತೋರಿಸಿದರು. ಅವರು ಅದಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಅದರಲ್ಲಿ ಕಮಲಪುಷ್ಪವನ್ನು ಕೆತ್ತಿ, ಶಂಖ ಮತ್ತು ಚಕ್ರ ಇತ್ಯಾದಿಗಳನ್ನು ಬೇವಿನ ಮರದ ಶ್ರೇಷ್ಠತೆ ಮತ್ತು ಬಾಬಾರವರ ಮಹಿಮೆಯನ್ನು ಕುರಿತಾದ ಈ ಶ್ಲೋಕವನ್ನು ಕೆತ್ತಿಸಲು ಸಲಹೆ ನೀಡಿದರು.

**ಸದಾ ನಿಂಬವೃಕ್ಷಸ್ಯ ಮೂಲಾದಿ ವಾಸಾತ್ ।**
**ಸುಧಾ ಸ್ರಾವಿಣಂ ತಿಕ್ತಮಪ್ಯ ಪ್ರಿಯತಂ ॥**
**ತರುಂ ಕಲ್ಪವೃಕ್ಷಾಧಿಕಂ ಸಾಧಯಂತಂ।**
**ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥**

ಅರ್ಥ: ದೇವಾ! ಕಲ್ಪವೃಕ್ಷಕ್ಕೂ ಮಿಗಿಲಾದ ಆ ಬೇವಿನ ಮರದ ಬುಡದಲ್ಲಿ ಕುಳಿತಿರುವದರಿಂದಲೇ ಅದರಿಂದ ಬರುವ ಕಹಿ ರಸಕ್ಕೆ ಬದಲಾಗಿ ಅಮೃತವು ಸುರಿಯುವಂತೆ ಮಾಡಿರತಕ್ಕ ಪರಮೇಶ್ವರನೇ ನೀನಾಗಿರುವೆ. ನಿನಗೆ ನಮಸ್ಕಾರಗಳು. (ಬೇವಿನ ಮರದ ರಸವೇ ಅಮೃತ. ಏಕೆಂದರೆ ಅದಕ್ಕೆ ಸರ್ವ ರೋಗಗಳನ್ನು ವಾಸಿ ಮಾಡುವ ಗುಣವಿದೆ).

*Sada nimba vrksasya muladi vasat,*
*Sudha sravinam tikta mapya priyantam,*
*Tarum kalpavrksadhikam sadhayantam,*
*Namamiswaram sadgurum sainatham.*

*Meaning: I bow to the Lord Sainath, who by His constant stay at the foot the neem tree, made it sweet - which through bitter and unpleasent was yet oozing nectar (the oozing of this tree is called Amrit. i.e nectar, on account of its healing properties). it exels the Kalpa-Vriksha.*

ಉಪಾಸನಿಗಳವರ ಮೇಲಿನ ಸಲಹೆಯನ್ನು ಒಪ್ಪಿಸಿಕೊಂಡು ಅದೇ ರೀತಿ ಪಾದುಕೆಗಳನ್ನು ಮಾಡಿಸಿ ಮುಂಬಯಿಂದ ಕಂಪೌಂಡರರವರೊಡನೆ ಶಿರ್ಡಿಗೆ ಕಳುಹಿಸಿದರು. ಬಾಬಾರವರು ಅವುಗಳನ್ನು ಶ್ರಾವಣ ಶುದ್ಧ ಪೂರ್ಣಿಮೆಯಂದು ದಿನ ಪ್ರತಿಷ್ಠಾಪಿಸಬೇಕೆಂದು ತಿಳಿಸಿದರು. ಆ ದಿವಸ ೧೧ ಗಂಟೆಗೆ

ಸರಿಯಾಗಿ ಶ್ರೀ ಜಿ.ಕೆ. ದೀಕ್ಷಿತರು ಪಾದುಕೆಗಳನ್ನು ಸಕಲ ರಾಜ ಮರ್ಯಾದೆಗಳಿಂದ ಖಂಡೋಬ ದೇವಸ್ಥಾನದಿಂದ ದ್ವಾರಕಾಮಾಯಿಗೆ ತಂದರು. ಬಾಬಾರವರು ಅವುಗಳನ್ನು ಸ್ಪರ್ಶಿಸಿ, "ಇವು ಆ ಪರಮಾತ್ಮನ ಚರಣಾರವಿಂದಗಳು; ಇವುಗಳನ್ನು ಬೇವಿನ ಮರದಡಿಯಲ್ಲಿ ಪ್ರತಿಷ್ಠಾಪಿಸಿ" ಎಂದರು.

ಇದಕ್ಕೆ ಹಿಂದಿನ ದಿನ ಮುಂಬಯಿಯ ಪ್ರಶ್ತಾಸೇಟ ಎಂಬವರು ೨೫ ರೂ.ಗಳನ್ನು ಕಳುಹಿಸಿದ್ದರು. ಬಾಬಾರವರು ಅವುಗಳನ್ನು ಪಾದುಕಾ ಪ್ರತಿಷ್ಠಾಪನೆ ಖರ್ಚಿಗೆ ಕೊಟ್ಟರು. ಅದರ ಜೊತೆಗೆ ಚಂದಾ ಹಣದಿಂದ ೭೫ ರೂ.ಗಳನ್ನು ಸೇರಿಸಿ, ಒಟ್ಟು ೧೦೦ ರೂ.ಗಳನ್ನು ಸಮಾರಂಭಕ್ಕೆ ಉಪಯೋಗಿಸಲಾಯಿತು. ಮೊದಲ ೫ ವರ್ಷಗಳವರೆಗೆ ಶ್ರೀ ದೀಕ್ಷಿತರೂ ನಂತರ ಲಕ್ಷ್ಮಣ ಕಾಚೇಶ್ವರರೂ ಪೂಜಾವಿಧಿಗಳನ್ನು ನೆರವೇರಿಸುತ್ತಿದ್ದರು. ಮೊದಲು ೫ ವರ್ಷಗಳ ದೀಪದ ಖರ್ಚಿಗೋಸ್ಕರ ಡಾ. ಕೋಠಾರೆಯವರು ಪ್ರತಿ ತಿಂಗಳೂ ೩ ರೂ.ಗಳನ್ನು ಕಳುಹಿಸುತ್ತಿದ್ದರು. ಮತ್ತು ಪಾದುಕೆಯ ಸುತ್ತ ನೆಡಲು ಕಂಬಗಳನ್ನು ಕಳುಹಿಸಿದರು. ಮೇಲ್ಛಾವಣಿಯ ಖರ್ಚನ್ನು ಶ್ರೀ ಸಗುಣ ಮೇರು ನಾಯಿಕರವರು ವಹಿಸಿಕೊಂಡರು. ನಂತರ ನಾನಾ ಚೋಪದಾರರವರಿಂದ ಪೂಜೆಯೂ, ಶ್ರೀ ಸಗುಣ ಮೇರು ನಾಯಿಕರವರಿಂದ ಪ್ರತಿ ದಿನ ಸಾಯಂಕಲ ನೈವೇದ್ಯ ಅರ್ಪಣೆ ಮತ್ತು ಆರತಿಯೂ ನೆಡಯ ಹತ್ತಿದವು.

ಭಾಯಿ ಕೃಷ್ಣಾಜಿಯವರು ಮೊದಲು ಅಕ್ಕಲಕೋಟೆ ಮಹಾರಾಜರ ಭಕ್ತರಾಗಿದ್ದರು. ಪಾದುಕಾ ಪ್ರತಿಷ್ಠಾಪನಾ ಸಂದರ್ಭದಲ್ಲಿ (೧೯೧೨ರಲ್ಲಿ) ಶಿರ್ಡಿಗೆ ಬಂದರು. ಬಾಬಾರವರ ದರ್ಶನ ಪಡೆದ ನಂತರ ಅಕ್ಕಲಕೋಟೆಗೆ ಪ್ರಯಾಣ ಮಾಡಬೇಕೆಂದಿದ್ದರು. ಹೊರಡಲು ಬಾಬಾರವರ ಅನುಮತಿ ಬೇಡಿದರು. ಆಗ ಬಾಬಾರವರು "ಅಕ್ಕಲಕೋಟೆಯಲ್ಲೇನಿದೆ?

ಅಲ್ಲಿಗೇಕೆ ಹೋಗಬೇಕು? ಅಲ್ಲಿಯ ಮಹಾರಾಜನು ನಾನೇ, ಇಲ್ಲಿದ್ದೇನಿ" ಎಂದರು. ಇದನ್ನು ಕೇಳಿ ಭಾಯಿ ಕೃಷ್ಣಾಜಿ ಅವರು ಅಕ್ಕಲಕೋಟೆಗೆ ಹೋಗಲೇ ಇಲ್ಲ. ನಂತರ ಅವರು ಶಿರ್ಡಿಗೆ ಆಗಾಗ್ಗೆ ಬಂದು ಹೋಗುತ್ತಿದ್ದರು.

(ಶ್ರೀ ಬಿ.ವಿ. ದೇವರವರು ಶ್ರೀ ಹೇಮಾಡಪಂತರಿಗೆ ಈ ವಿಷಯ ತಿಳಿಸಿರಲಿಲ್ಲವೆಂದು ತೋರುತ್ತದೆ. ಹಾಗೆ ತಿಳಿಸಿದ್ದ ಪಕ್ಷದಲ್ಲಿ ಸಚ್ಚರಿತೆಯಲ್ಲಿ ಹೇಮಾಡಪಂತರು ಈ ವಿಷಯ ನಮೂದಿಸದೆ ಇರುತ್ತಿರಲಿಲ್ಲ.)

## ಮೊಹಿದ್ದೀನ್ ತಾಂಬೋಳಿಯವರೊಡನೆ ಕುಸ್ತಿ ಮತ್ತು ಅವರ ಜೀವನದಲ್ಲಿ ಬದಲಾವಣೆ

ಶಿರ್ಡಿಯಲ್ಲಿ ಮೊಹಿದ್ದೀನ್ ತಾಂಬೋಳಿ ಎಂಬ ಜಟ್ಟಿ ಇದ್ದನು. ಕೆಲವು ವಿಷಯಗಳಲ್ಲಿ ಬಾಬಾರವರಿಗೂ ಅವನಿಗೂ ಒಮ್ಮತವಾಗದೇ ಇಬ್ಬರೂ ಕುಸ್ತಿ ಮಾಡಿದರು. ಬಾಬಾರವರು ಸೋತರು. ಅಂದಿನಿಂದ ಬಾಬಾರವರು ತಮ್ಮ ದೈನಂದಿನ ಉಡುಪನ್ನು ಬದಲಾಯಿಸಿದರು. ಒಂದು ನಿಲುವಂಗಿಯನ್ನು ಧರಿಸಿ ತಲೆಗೆ ಬಟ್ಟೆ ಸುತ್ತಿದರು. ಆಸನಕ್ಕೆ ಗೋಣಿ ಚೀಲವನ್ನುಪಯೋಗಿಸಲು ಆರಂಭ ಮಾಡಿದರು. ಯಾವಾಗಲೂ ತೃಪ್ತಿಯಿಂದಿರುತ್ತಿದ್ದರು. ಯಾವಾಗಲೂ "ದೊರೆತನಕ್ಕಿಂತ ಬಡತನವೇ ಮೇಲು. ದೇವರು ಯಾವಾಗಲೂ ಬಡವರ ಸಹೋದರನಾಗಿರುತ್ತಾನೆ" ಎನ್ನುತ್ತಿದ್ದರು.(ಗಂಗಾಗೀರ ಸಹ ಮೊದಲು ಕುಸ್ತಿ ಜಟ್ಟಿಯಾಗಿದ್ದರು. ಇದೇ ತರಹದ ಭಾವನೆ ಅವರಲ್ಲಿಯೂ ಮೂಡಿ ಸಂಸಾರವನ್ನು ತ್ಯಜಿಸಿ, ಸ್ವಾನುಭವ ಪಡೆಯಲೋಸುಗ ಇದೇ ರೀತಿ ಪರಿವರ್ತನೆಯಾಗಿ ಪುಣತಾಂಬೆ ನದಿಯ ದಡದಲ್ಲಿ ಮಠವನ್ನು ಸ್ಥಾಪಿಸಿ ಶಿಷ್ಯರೊಡನೆ ಅಲ್ಲಿ ವಾಸಿಸಿದ್ದರು.) ಮೊದಲು ಬಾಬಾರವರು

ವಿಶೇಷವಾಗಿ ಜನರೊಡನೆ ಸೇರುವದಾಗಲಿ, ಮಾತನಾಡುವದಾಗಲಿ, ಮಾಡುತ್ತಿರಲಿಲ್ಲ. ಪ್ರಶ್ನಿಸಿದಾಗ ಮಾತ್ರ ಉತ್ತರ ಕೊಡುತ್ತಿದ್ದರು. ಬೆಳಿಗ್ಗೆ ಬೇವಿನ ಮರದ ಹತ್ತಿರವೂ ಕೆಲವು ಸಾರಿ ಹಳ್ಳಿಯ ಹಳ್ಳದ ಸಮೀಪದಲ್ಲಿದ್ದ ಬಾಬುಲ ಮರದ ನೆರಳಿನಲ್ಲಿಯೂ ಕುಳಿತು ಕಾಲ ಕಳೆಯುತ್ತಿದ್ದರು. ಮಧ್ಯಾಹ್ನದ ಹೊತ್ತು ಕೆಲವು ದಿನ ನೀಮಗಾಂವಕ್ಕೆ ಹೋಗುತ್ತಿದ್ದರು. ಅಲ್ಲಿ ತ್ರಿಂಬಕಜಿ ಢೆಂಗಳೆಯವರ ಮನೆಗೆ ಹೋಗುತ್ತಿದ್ದರು. ಬಾಬಾರವರು ಬಾಬಾಸಾಹೇಬರಲ್ಲಿ ಬಹಳ ಪ್ರೀತಿ ಇಟ್ಟಿದ್ದರು. ಅವರ ಕಿರಿಯ ಸಹೋದರರಾದ ನಾನಾಸಾಹೇಬರಿಗೆ ಎರಡನೇ ಮದುವೆಯಾದರೂ ಸಹ ಸಂತಾನ ಪ್ರಾಪ್ತಿಯಿರಲಿಲ್ಲ. ಬಾಬಾಸಾಹೇಬರು ಬಾಬಾರವರ ದರ್ಶನ ಪಡೆಯುವಂತೆ ತಮ್ಮ ಸಹೋದರರನ್ನು ಕೇಳಿಕೊಂಡರು. ಬಾಬಾರವರ ದರ್ಶನಲಾಭದಿಂದ ಮತ್ತು ಕೃಪೆಯಿಂದ ಅವರಿಗೆ ಪುತ್ರ ಸಂತಾನ ಪ್ರಾಪ್ತಿಯಾಯಿತು. ಅಂದಿನಿಂದ ಬಾಬಾರವರನ್ನು ಕಾಣಲು ಅನೇಕ ಜನರು ಬರಲು ಆರಂಭಿಸಿದರು. ಅವರ ಕೀರ್ತಿಯು ಅಹಮದನಗರವನ್ನು ಮುಟ್ಟಿತು. ಆಗ ನಾನು ಸಾಹೇಬ ಚಾಂದೋರಕರ ಮತ್ತು ಕೇಶವ ಚಿದಂಬರ ಮುಂತಾದವರು ಶಿರ್ಡಿಗೆ ಬರುವಂತಾಯಿತು. ಹಗಲಿನಲ್ಲಿ ಬಾಬಾರವರನ್ನು ಭಕ್ತರು ಎಡೆಬಿಡದೆ ಮುತ್ತಿಕೊಳ್ಳುತ್ತಿದ್ದರು. ರಾತ್ರಿ ಹೊತ್ತು ಅವರು ದ್ವಾರಕಾಮಾಯಿಯಲ್ಲಿ ನಿದ್ರಿಸುತ್ತಿದ್ದರು. ಬಾಬಾರವರ ಆಗಿನ ಆಸ್ತಿಯೆಂದರೆ ಹುಕ್ಕಾ ಸೇದುವ ಚಿಲುಮೆ, ನಿಲುವಂಗಿ, ಒಂದು ತಗಡಿನ ಪಾತ್ರೆ, ಒಂದು ಕೋಲು, ಒಂದು ಬಟ್ಟೆಯನ್ನು ತಲೆಗೆ ಕಟ್ಟಿದ ನಂತರ ಅದರ ಕೊನೆಯನ್ನು ಸುತ್ತಿ ಹಿಂದಿನಿಂದ ಎಡಭಾಗದ ಕಿವಿಯ ಮೇಲೆ ಇಳಿಬಿಡುತ್ತಿದ್ದರು. ಗೋಣಿ ಚೀಲವೇ ಅವರ ಆಸನವಾಗಿದ್ದಿತು. ಚಳಿಯಾದಾಗ ಮಾತ್ರ ದಕ್ಷಿಣದ ಕಡೆಗೆ ಮುಖ ಮಾಡಿಕೊಂಡು ಧುನಿ (ಅಗ್ನಿಕುಂಡ)ಯ ಮುಂದೆ ಕುಳಿತುಕೊಳ್ಳುತ್ತಿದ್ದರು. ಆ ಧುನಿಯಲ್ಲಿ ತಮ್ಮ ಅಹಂಕಾರ, ಮೋಹ

ಮುಂತಾದವುಗಳನ್ನು ಕಾಣಿಕೆಯಾಗಿ ಅರ್ಪಿಸಿದ್ದರು. ಕಾಲಿಗೆ ಪಾದರಕ್ಷೆಗಳನ್ನು ಉಪಯೋಗಿಸುತ್ತಿರಲಿಲ್ಲ. ಅವರಿದ್ದ ಮಸೀದಿ 'ದ್ವಾರಕಾಮಾಯಿ'ಯಾಗಿ ೧೯೧೨ರಲ್ಲಿ ಪರಿವರ್ತನೆ ಹೊಂದಿತು.

## ನೀರನ್ನು ಎಣ್ಣೆಯಾಗಿ ಪರಿವರ್ತಿಸಿದ್ದು

ಸಾಯಿಬಾಬಾರವರಿಗೆ ದೀಪಗಳೆಂದರೆ ಬಹಳ ಆನಂದ. ಆದುದರಿಂದ ಅವರು ಪ್ರತಿ ಅಂಗಡಿಯ ಬಾಗಿಲಿಗೂ ಹೋಗಿ ಎಣ್ಣೆಯನ್ನು ಭಿಕ್ಷೆ ಬೇಡಿ ತಂದು ದ್ವಾರಕಾಮಾಯಿ ಮತ್ತು ದೇವಸ್ಥಾನದಲ್ಲಿ ದೀಪವನ್ನು ಹಚ್ಚಿ ರಾತ್ರಿಯೆಲ್ಲ ಉರಿಸುತ್ತಿದ್ದರು. ಈ ರೀತಿಕೆಲವು ಕಾಲ ನಡೆಯಿತು. ಒಂದು ದಿನ ಅಂಗಡಿಯವರೆಲ್ಲರೂ ಸೇರಿಕೊಂಡು ಬಾಬಾರವರಿಗೆ ಎಣ್ಣೆ ಕೊಡಬಾರದೆಂದು ತೀರ್ಮಾನಿಸಿ, ಅವರು ಬಂದಾಗ ಯಾರೂ ಎಣ್ಣೆಯನ್ನು ಕೊಡಲೇ ಇಲ್ಲ. ಬಾಬಾರವರು ರಿಕ್ತ ಹಸ್ತದಿಂದ ಹಿಂದಿರುಗಿದರು. ಯಾವ ಅನುಮಾನವೂ ಇಲ್ಲದೆ ಬರಿ ಬತ್ತಿಯನ್ನೇ ಪಣತಿಗಳಲ್ಲಿಟ್ಟುತಗಡಿನ ಪಾತ್ರೆಯಲ್ಲಿದ್ದ ಸ್ವಲ್ಪೆಣ್ಣೆಗೆ ನೀರಿ ಬೆರೆಸಿ ಅದನ್ನು ಕುಡಿದರು. ನಂತರ ನೀರನ್ನು ಎಲ್ಲ ಪಣತಿಗಳಲ್ಲಿ ಹಾಕಿಬಿಟ್ಟು ದೀಪಗಳನ್ನು ಹಚ್ಚಿಸಿದರು. ರಾತ್ರಿಯೆಲ್ಲ ಪಣತಿಗಳು ಪ್ರಕಾಶಮಾನವಾಗಿ ಉರಿಯತೊಡಗಿದವು. ಇದನ್ನು ನೋಡಿದ ವರ್ತಕರು ಬಾಬಾರವರಲ್ಲಿಗೆ ಬಂದು ಕ್ಷಮೆ ಬೇಡಿದರು. ಬಾಬಾರವರು ಅವರನ್ನು ಕ್ಷಮಿಸಿ "ಇನ್ನು ಮುಂದೆ ಸತ್ಯತನದಿಂದ ನಡೆಯಿರಿ" ಎಂದು ಉಪದೇಶ ಮಾಡಿ ಕಳುಹಿಸಿದರು.

## ಕಪಟ ಗುರು ಜವ್ಹಾರಅಲ್ಲಿ

ಕುಸ್ತಿ ಘಟನೆ ಜರುಗಿದ ಐದು ವರ್ಷಗಳ ನಂತರ ಅಹಮದನಗರದಿಂದ ಜವ್ಹಾರಅಲ್ಲಿ ಎಂಬ ಫಕೀರನು ತನ್ನ

ಶಿಷ್ಯವೃಂದದೊಡನೆ ಶಿರ್ಡಿಗೆ ಬಂದು, ಅಲ್ಲಿಯ ವೀರಭದ್ರಸ್ವಾಮಿ ದೇವಸ್ಥಾನದ ಹತ್ತಿರದಲ್ಲಿದ್ದ ದೊಡ್ಡ ಕೊಠಡಿಯೊಂದರಲ್ಲಿ ಬಿಡಾರ ಮಾಡಿದನು. ಅವನು ಒಳ್ಳೆಯ ವಿದ್ವಾಂಸನಾಗಿದ್ದನು. ತನ್ನ ಮಧುರವಾದ ಕಂಠದಿಂದ ಕುರಾಣವೆಲ್ಲವನ್ನೂ ಕಂಠಪಾಠ ಮಾಡಿದ ಹಾಗೆ ಹೇಳುತ್ತಿದ್ದನು. ಹಳ್ಳಿಯ ಜನರೆಲ್ಲರೂ ಅವನನ್ನು ಗೌರವಿಸತೊಡಗಿದರು. ಜನರ ಸಹಾಯದಿಂದ ವೀರಭದ್ರಸ್ವಾಮಿ ದೇವಸ್ಥಾನದ ಎದುರಿನಲ್ಲಿ ಈದಗಾ (ಮಹಮ್ಮದಿಯರು ಎದುರಿನಲ್ಲಿ ಕುಳಿತು ಪ್ರಾರ್ಥನೆ ಮಾಡುವ ಗೋಡೆ) ಕಟ್ಟಿಸಲು ಪ್ರಯತ್ನಪಟ್ಟನು. ಈ ವಿಷಯದಲ್ಲಿ ಕೆಲವರೊಡನೆ ಮನಸ್ತಾಪವಾದುದರಿಂದ ಅವನು ಶಿರ್ಡಿಯನ್ನು ಬಿಟ್ಟು ರಾಹತಾಕ್ಕೆ ಹೋಗಿ ನೆಲಸಬೇಕಾಯಿತು. ಆಗಾಗ್ಗೆ ಅವನು ಶಿರ್ಡಿಗೆ ಬಂದು ಬಾಬಾರವರೊಡನೆ ಮಸೀದಿಯಲ್ಲಿ ತಂಗುತ್ತಿದ್ದನು. ಜನರು ಇದನ್ನು ನೋಡಿ ಬಾಬಾ ಅವನ ಶಿಷ್ಯನೆಂದು ಭಾವಿಸಿದರು. ಆದರೆ ಅವರಿಗದು ಆಕ್ಷೇಪಣೀಯವಾಗಿ ಕಂಡು ಬರಲಿಲ್ಲ. ನಂತರ ಗುರು ಮತ್ತು ಶಿಷ್ಯರಿಬ್ಬರೂ ರಾಹತಾಕ್ಕೆ ಹೋಗಿ ನೆಲಸಬೇಕೆಂದು ತೀರ್ಮಾನಿಸಿದರು. ಗುರುವಿಗೆ ಶಿಷ್ಯನ ಯೋಗ್ಯತೆ ತಿಳಿದಿರಲಿಲ್ಲ. ಆದರೆ ಶಿಷ್ಯನಿಗೆ ಮಾತ್ರ ಗುರುವಿನ ಯೋಗ್ಯತೆ ತಿಳಿದಿದ್ದಿತ್ತು. ಆದರೂ ಶಿಷ್ಯನು ಅವರನ್ನು ಕೀಳಾಗಿ ಕಾಣಿತ್ತಿರಲಿಲ್ಲ. ಶಿಷ್ಯನು ಗುರುವಿನ ಕೆಲಸಗಳನ್ನು ಅತಿ ಜಾಗರೂಕತೆಯಿಂದ ವೀಕ್ಷಿಸುತ್ತಿದ್ದನು. ಶಿಷ್ಯನು ಅನೇಕ ಸಲ ರಾಹತಾಕ್ಕೆ ಹೋಗುತ್ತಿದ್ದನು. ಅವರ ಮುಖ್ಯ ಸ್ಥಾನ ರಾಹತಾ ಆಗಿತ್ತು. ಶಿರ್ಡಿಯ ಬಾಬಾರವರ ಭಕ್ತರಿಗೆ ಇದು ಸಮ್ಮತವಾಗಿರಲಿಲ್ಲ. ಆದ್ದರಿಂದ ಅವರೆಲ್ಲರೂ ಬಾಬಾರವರಲ್ಲಿಗೆ ಗುಂಪು ಕಟ್ಟಿಕೊಂಡು ಹೊರಟರು. ಬಾಬ ಅವರನ್ನು ಈದಗಾ ಹತ್ತಿರ ಸಂದರ್ಶಿಸಿದಾಗ ಅವರು "ನನ್ನ ಫಕೀರನು ಬಹಳ ಕೋಪಿಷ್ಠ. ಅವನು ಬರುವದರೊಳಗಾಗಿ ಹಿಂತಿರುಗಿ" ಅಷ್ಟು ಹೊತ್ತಿಗೆ ಫಕೀರನು ಹಿಂದಿರುಗಿದನು. ಮಾತುಕತೆಗಳಾದವು. ಆಗ ಗುರು ಮತ್ತು ಚೇಲಾ

(ಬಾಬಾ) ಇಬ್ಬರೂ ಶಿರ್ಡಿಗೆ ಹಿಂತಿರುಗಬೇಕೆಂದು ತೀರ್ಮಾನವಾಯಿತು. ಆದ್ದರಿಂದ ಇಬ್ಬರೂ ಶಿರ್ಡಿಗೆ ಹಿಂತಿರುಗಿದರು. ಕೆಲವು ದಿನಗಳ ನಂತರ ಶಿರ್ಡಿಯ ದೇವಿದಾಸ ಎಂಬವನಿಂದ ಫಕೀರನು ಸೋಲಿಸಲ್ಪಟ್ಟು ಶಿರ್ಡಿಯನ್ನು ಬಿಟ್ಟು ಓಡಿದನು. ಬಿಜಾಪುರಕ್ಕೆ ಹೋಗಿ ಕೆಲವು ಕಾಲದ ನಂತರ ಶಿರ್ಡಿಗೆ ಬಂದು ಬಾಬಾರವರ ಮುಂದೆ ಧ್ಯಾನ ಮಾಡತೊಡಗಿದನು. "ನಾನು ಗುರು, ಬಾಬಾರವರು ನನ್ನ ಶಿಷ್ಯ" ಎಂಬ ದುರಭಿಮಾನವು ಫಕೀರನನ್ನು ಬಿಟ್ಟು ಓಡಿತು. ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟುಕೊಂಡನು. ಬಾಬಾರವರು ಅವನನ್ನು ಪ್ರೀತಿ, ವಿಶ್ವಾಸ ಮತ್ತು ಗೌರವಗಳಿಂದ ಸತ್ಕರಿಸಿದರು.

ಈ ಕಥೆಯಲ್ಲಿ ಬಾಬಾರವರು ಮನುಷ್ಯನು ತನ್ನ ಅಹಂಕಾರವನ್ನು ಹೇಗೆ ತೊರೆಯಬಹುದೆಂಬುದನ್ನು ನಿದರ್ಶಿಸಿದ್ದಾರೆ. ( ಈ ಕಥೆಯು ಬಾಬಾರವರ ಭಕ್ತ ಮ್ಹಾಳಸಾಪತಿಯವರಿಂದ ಗೊತ್ತಾಗಿದೆ.)

ಮುಂದಿನ ಅಧ್ಯಾಯದಲ್ಲಿ ಶ್ರೀ ರಾಮನವಮಿ ಸಮಾರಂಭ, ದ್ವಾರಕಾಮಾಯಿ ಇದ್ದ ರೀತಿ, ಅದರ ಪುನರುದ್ಧಾರ ಇತ್ಯಾದಿ ವಿಷಯಗಳನ್ನು ವಿವರಿಸುತ್ತೇನೆ.

**ಶ್ರೀ ಸಾಯಿ ಪ್ರಣಾಮ**

# ೬ನೇ ಅಧ್ಯಾಯ

## ಸದ್ಗುರು ಸಾಯಿಯವರ ಮಹಾತ್ಮೆ – ಶ್ರೀ ರಾಮನವಮಿ ಸಮಾರಂಭ ಮತ್ತು ಮಸೀದಿ ಜೀರ್ಣೋದ್ಧಾರ.

## ಗುರುವಿನ ಹಸ್ತಸ್ಪರ್ಶದ ಮುಕ್ತಿ

ನಿಜವಾದ ಗುರುವಿನ ಸಹಾಯದಿಂದ ಸಂಸಾರ ಸಾಗರವನ್ನು ಸುಖವಾಗಿ ದಾಟಬಹುದು. "ಸದ್ಗುರು" ಎಂಬ ಪದವು ಶ್ರೀ ಸಾಯಿಬಾಬಾವರನ್ನು ಜ್ಞಾಪಕಕ್ಕೆ ತರುತ್ತದೆ. ನನ್ನ ಮುಂದೆ ನಿಂತುಕೊಂಡು, ನನ್ನ ಹಣೆಗೆ ಉಧಿಯನ್ನು ಹಚ್ಚಿ ನನ್ನನ್ನು ಆಶೀರ್ವದಿಸುತ್ತಿರುವ ಹಾಗೆ ಭಾಸವಾಗುತ್ತದೆ. ನನ್ನ ಹೃದಯದಲ್ಲಿ ಸಂತೋಷವು ತುಂಬಿ, ನೇತ್ರಗಳ ಮೂಲಕ ಹೊರಹೊಮ್ಮುತ್ತಿರುವ ಹಾಗೆ ತೋರುತ್ತದೆ. ಗುರುವಿನ ಹಸ್ತ ಸ್ಪರ್ಶದಲ್ಲಿ ಮಹಾಶಕ್ತಿ ಅಡಗಿದೆ.

ಆಶೆ, ಆಕಾಂಕ್ಷೆಗಳನ್ನೊಳಗೊಂಡ ಈ ದೇಹವನ್ನು ಯಾವ ಬೆಂಕಿಯಿಂದ ದಹಿಸಲು ಸಾಧ್ಯವಿಲ್ಲವೋ, ಅಂತಹ ಈ ಶರೀರವು ಗುರುವಿನ ಹಸ್ತಸ್ಪರ್ಶ ಶಕ್ತಿಯಿಂದ ದಹಿಸಲ್ಪಡಬಲ್ಲದು. ಪೂರ್ವಜನ್ಮದ ಪಾಪಗಳೆಲ್ಲವೂ ನಾಶವಾಗಬಲ್ಲವು. ಯಾವ ನಾಸ್ತಿಕರು ದೇವರ ಹೆಸರನ್ನು ಕೇಳಿದರೆ ರೋಷವನ್ನು ಕಾರುತ್ತಾರೆಂತೋ, ಅಂಥವರೂ ಕೂಡಾ ಶಾಂತರಾಗಿ ಪರಿವರ್ತನೆಂರಾಗಬಲ್ಲರು. ಶ್ರೀ ಸಾಯಿಬಾಬಾರವರ ದಿವ್ಯದರ್ಶನದಿಂದ ಸಂತೋಷವೂ ಉಕ್ಕಿ, ನಮ್ಮ ಗಂಟಲು ಗದ್ಗದವಗುತ್ತದೆ. ನೇತ್ರಗಳಿಂದ ಆನಂದಬಾಷ್ಪ ಉಕ್ಕುತ್ತದೆ. ಅದು ನಮ್ಮಲ್ಲಿ "ನಾನೇ ಅವನು" (ಬ್ರಹ್ಮ) ಎಂಬ ಜ್ಞಾನವನ್ನುಂಟುಮಾಡುತ್ತದೆ. ನಾನು, ನನ್ನದು ಎಂಬದನ್ನೂ ನಾನು ನೀನೆಂಬ ವ್ಯತ್ಯಾಸಗಳನ್ನೂ ದೂರ ಮಾಡುತ್ತದೆ. ಸ್ವಾನಭಾವದ ಅರಿವಾಗುತ್ತದೆ.

ನಾನು ಮಹಾಕಾವ್ಯಗಳನ್ನು ಓದಲು ಆರಂಭಿಸಿದರೆ ಪ್ರತಿಯೊಂದು ಘಟ್ಟದಲ್ಲಿಯೂ ಸದ್ಗುರುವಿನ ನೆನಪಾಗುತ್ತದೆ. ಶ್ರೀ ಸಾಯಿಬಾಬಾರವರೇ ರಾಮ-ಕೃಷ್ಣರ ಅವತಾರವನ್ನು ತಾಳಿ ತಮ್ಮ ಕಥೆಗಳನ್ನು ಕೇಳುವ ಹಾಗೆ ಮಾಡುತ್ತಾರೆ. ಉದಾಹರಣೆ-ಭಾಗವತವನ್ನು ಶ್ರವಣ ಮಾಡಲು ಕುಳಿತಾಗ, ಸಾಯಿಬಾಬಾರವರು ಶ್ರೀ ಕೃಷ್ಣನಾಗಿ ಭಾಗವತವನ್ನು ಹೇಳುವ ಹಾಗೆ ಭಾಸವಾಗುತ್ತದೆ. ನಾನು ಮಾತನಾಡಲು ಕುಳಿತರೆ, ಕೂಡಲೆ ಶ್ರೀ ಸಾಯಿಯ ನೆನಪಾಗಿ ಕೆಲವು ಸೂಕ್ತ ಉದಾಹರಣೆಗಳನ್ನು ಕೊಡಲು ಅವರ ಕಥೆಗಳು, ಸ್ಮೃತಿ ಪಥಕ್ಕೆ ಬರುತ್ತವೆ. ನಾನೇನಾದರೂ ಸ್ವತಃ ಬರೆಯಲು ಕುಳಿತರೆ, ಕೆಲವು ಪದಗಳು ಮನಸ್ಸಿಗೆ ಬರುವುದೇ ಇಲ್ಲ. ಆದರೆ ಅವರೇ ನನ್ನನ್ನು ಬರೆಯುವ ಹಾಗೆ ಪ್ರೇರೇಪಿಸಿದಾಗ ನನ್ನ ಬರವಣಿಗೆಗೆ ಅಂತ್ಯವೇ ಇರುವುದಿಲ್ಲ. ಭಕ್ತನಲ್ಲಿ ಅಹಂಭಾವವೆಂದು ಮೇಲೆಕ್ಕೆದ್ದಾಗ, ಅವರು ತಮ್ಮ ಸ್ವಹಸ್ತದಿಂದ ಅದನ್ನು ನಾಶ ಮಾಡಿ ತಮ್ಮ ಶಕ್ತಿಯನ್ನವನಿಗೆ ನೀಡಿ, ಅವನ ಗುರಿ ಸಾಧನೆಯಾಗುವಂತೆ ಅವನನ್ನು ತೃಪ್ತಿಗೊಳಿಸಿ ಆಶೀರ್ವದಿಸಿದ್ದಾರೆ. ಯಾರಾದರೂ ಆಗಲಿ, ಸಾಯಿಯ ಮುಂದೆ ಧ್ಯಾನ ಮಾಡುತ್ತ ತಮ್ಮ ತನು, ಮನ, ಧನಗಳನ್ನರ್ಪಿಸಿದ್ದಲ್ಲಿ ಅವರ ಜೀವನದ ಮುಖ್ಯ ಗುರಿಗಳಾದ ಧರ್ಮ ಅರ್ಥ, ಕಾಮ ಮತ್ತು ಮೋಕ್ಷ ಎಲ್ಲವನ್ನೂ ಪಡೆಯುತ್ತಾರೆ. ಕರ್ಮ, ಜ್ಞಾನ, ಯೋಗ ಮತ್ತು ಭಕ್ತಿಯೆಂಬ ನಾಲ್ಕು ದಾರಿಗಳು ನಮ್ಮನ್ನು ದೇವರಿರುವಲ್ಲಿಗೆ ಕೊಂಡುಯ್ಯುತ್ತವೆ. "ಭಕ್ತಿಯೆಂಬ ದಾರಿಯಲ್ಲಿ ಹಳ್ಳ -ಕೊಳ್ಳಗಳು ಮತ್ತು ಮುಳ್ಳುಗಳಿರುವುದರಿಂದ ಪ್ರಯಾಣ ಮಾಡುವುದು ಬಹಳ ಕಷ್ಟ ಆದರೆ ನೀವು ಸದ್ಗುರುವನ್ನು ನಂಬಿದ್ದಾದರೆ ನಿಮ್ಮ ದಾರಿ ಸುಗಮವಾಗುತ್ತದೆ ಮತ್ತು ನೀವು ನಿಯಮಿತವಾದ ಸ್ಥಳವನ್ನು ಸೇರುತ್ತೀರಿ." ಹೀಗೆಂದು ಬಾಬಾರವರು ಖಂಡಿತವಾಗಿ ಹೇಳಿರುತ್ತಾರೆ.

ಬ್ರಹ್ಮ , ದೈವ ಶಕ್ತಿ – ಪ್ರಪಂಚ ಸೃಷ್ಟಿ ಎಲ್ಲವೂ ಒಂದೇ ಎಂದು ಹೇಳಿದ ನಂತರ ಗ್ರಂಥಕರ್ತರು, ಬಾಬಾರವರು 'ನನ್ನ ಭಕ್ತರ ಯೋಗಕ್ಷೇಮವೇ ನನ್ನಗುರಿ' ಎಂದು ಹೇಳಿದ ಕೆಲವು ಉಕ್ತಿಗಳನ್ನು ಉಲ್ಲೇಖಿಸಿರುತ್ತಾರೆ.

"ನನ್ನ ಭಕ್ತರ ಮನೆಗಳಲ್ಲಿ ಊಟಕ್ಕಾಗಲಿ, ಉಡಲಿಕ್ಕಾಗಲಿ ಕೊರತೆ ಇರುವುದಿಲ್ಲ. ಯಾರು ನನ್ನನು ನಿಶ್ಚಲಚಿತ್ತದಿಂದ ಪೂಜಿಸುತ್ತಾರೆಯೋ ಅಂಥವರ ಯೋಗಕ್ಷೇಮವನ್ನು ನೋಡಿಕೊಳ್ಳುವುದೇ ನನ್ನ ವಿಶೇಷ ಗುಣ. (ಶ್ರೀ ಕೃಷ್ಣನೂ ಸಹ ಗೀತೆಯಲ್ಲಿ ಇದನ್ನೇ ಹೇಳಿದ್ದಾನೆ.) ಆಹಾರ ಮತ್ತು ಬಟ್ಟೆಗಾಗಿ ಬಹಳ ಕಷ್ಟ ಪಡಬೇಡಿ. ಇನ್ನೇನಾದರೂ ಬೇಕಾಗಿದ್ದಲ್ಲಿ ಆ ಭಗವಂತನಲ್ಲಿ ಬೇಡಿರಿ. ಅವನ ದಯೆ ಮತ್ತು ಅಶೀರ್ವಾದವು ಲಭಿಸುವಂತೆ ಪ್ರಯತ್ನಿಸಿ. ಪ್ರಾಪಂಚಿಕ ವಿಷಯದಲ್ಲಿ ಆಸಕ್ತಿ ಬೇಡ.ಪರಮಾತ್ಮನನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳಿರಿ. ಪಂಚೇಂದ್ರಿಯಗಳೆಲ್ಲವನ್ನೂ ಒಂದುಗೂಡಿಸಿ ತ್ರಿಕರಣ ಶುದ್ಧಿಯಿಂದ ಆ ಪರಮಾತ್ಮನನ್ನು ಪೂಜಿಸಿರಿ. ಯಾವಾಗಲೂ ನಿಶ್ಚಲಚಿತ್ತದಿಂದ ನನ್ನನ್ನೇ ಸ್ಮರಿಸಿರಿ. ಸಂಸಾರ ತಾಪತ್ರಯಗಳ ಕಡೆಗೆ ಗಮನ ಕೊಡದಿರಿ. ಆಗ ಶಾಂತಿಯುಂಟಾಗುತ್ತದೆ. ಮನಸ್ಸು ಚಂಚಲತೆಯಲ್ಲಿದ್ದರೆ ಶಾಂತಿಯುಂಟಾಗುವುದಿಲ್ಲ.

ಇದನ್ನು ಹೇಳಿ ಮುಂದುವರೆದು ಗ್ರಂಥಕರ್ತರು ಶಿರ್ಡಿಯಲ್ಲಿಯ ಶ್ರೀ ರಾಮನವಮಿ ಸಾಪಾರಂಭವನ್ನು ವಿವರಿಸಿದ್ದಾರೆ. ಈ ಸುಂದರ ಶ್ರೀ ರಾಮನವಮಿ ಉತ್ಸವದ ಪೂರ್ಣವಿವರವು 'ಸಾಯಿಲೀಲಾ' ಪುಸ್ತಕದ ೧೯೨೫ನೇ ವರ್ಷದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಅದರ ಸಾರಾಂಶವನ್ನು ಇಲ್ಲಿ ಕೊಡಲು ಪ್ರಯತ್ನಿಸಿದ್ದೇನೆ.

## ಮೂಲ

ಕೋಪರಗಾಂವದ ಸರ್ಕಲ್ ಇನ್‌ಸ್ಪೆಕ್ಟರ, ಗೋಪಾಲರಾವ ಗುಂಡ ಅವರು ಶ್ರೀ ಸಾಯಿಬಾಬಾರವರ ಭಕ್ತರಾಗಿದ್ದರು. ಅವರಿಗೆ ಮೂವರು ಪತ್ನಿಯರಿದ್ದರು. ಆದರೂ ಸಂತತಿಯುಂಟಾಗಿರಲಿಲ್ಲ. ಸಾಯಿಬಾಬಾರವರ ಆಶೀರ್ವಾದದ ಫಲದಿಂದ ಅವರಿಗೆ ಪುತ್ರ ಜನನವಾಯಿತು. ಆ ಸಂತೋಷ ಸಮಾರಂಭದಲ್ಲಿ ೧೮೯೭ರಲ್ಲಿ ಶಿರ್ಡಿಯಲ್ಲಿ ಒಂದು ಜಾತ್ರೆ ಅಥವಾ ಉರಸ್ ನಡೆಸಬೇಕೆಂದು ತೀರ್ಮಾನ ಮಾಡಿ ಸಾಯಿಬಾಬಾರವರ ಭಕ್ತ ಮಂಡಲಿಯ ಮುಂದೆ ವಿಷಯವನ್ನಿಟ್ಟರು. ಮಂಡಲಿಯು ಸಮ್ಮತಿಸಿ, ಸಾಯಿಬಾಬಾರವರ ಅಪ್ಪಣೆ ಮತ್ತು ಆಶೀರ್ವಾದವನ್ನು ಪಡೆಯಿತು. ನಂತರ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರು. ಆ ಗ್ರಾಮದ ಪಟೇಲನು ಅದಕ್ಕೊಪ್ಪದೆ ವಿರುದ್ಧವಾಗಿ ಬರೆದಿದ್ದುದರಿಂದ ಜಿಲ್ಲಾಧಿಕಾರಿಯು ಒಪ್ಪಿಗೆ ನೀಡಲಿಲ್ಲ. ಬಾಬಾರವರ ಆಶೀರ್ವಾದದ ಫಲದಿಂದ ಮತ್ತೊಮ್ಮೆ ಪ್ರಯತ್ನಿಸಿ ಜಯಶೀಲರಾದರು. ಉರಸ್ ಶ್ರೀ ರಾಮನವಮಿ ದಿನ ನಡೆಯಬೇಕೆಂದು ಬಾಬಾರವರ ಸಲಹೆ ಮೇರೆಗೆ ನಿರ್ಧಾರವಾಯಿತು. ಈ ಎರಡೂ ಉತ್ಸವಗಳು ಒಂದೇ ದಿನ ನಡೆಯಬೇಕೆಂಬ ಬಾಬಾರವರ ಸಲಹೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಹಿಂದೂ ಮತ್ತು ಮಹಮ್ಮದೀಯರ ಐಕ್ಯಮತಕ್ಕೋಸ್ಕರವೇ ಈ ರೀತಿ ಬಾಬಾ ಹೇಳಿದಂತೆ ಕಂಡು ಬರುವದು. ಭವಿಷ್ಯದಲ್ಲಿ ಬಾಬಾ ಅವರು ಈ ಧ್ಯೇಯವನ್ನು ಸಾಧಿಸಿದರು.

ಅನುಮತಿ ದೊರೆಯಿತು. ಆದರೆ ಕಷ್ಟಗಳು ಉದ್ಭವಿಸದವು. ಶಿರ್ಡಿಯಲ್ಲಿ ನೀರಿನ ಅಭಾವವಿತ್ತು. ಅಲ್ಲಿ ಎರಡು ಬಾವಿಗಳು ಮಾತ್ರ ಇದ್ದವು ಒಂದರ ನೀರನ್ನು ಉಪಯೋಗಿಸುವ ಹಾಗಿರಲಿಲ್ಲ. ಇನ್ನೊಂದರ ನೀರೂ ಸಹ ಅಷ್ಟು ಶುದ್ಧವಾಗಿರಲಿಲ್ಲ. ಬಾಬಾರವರು

ಕೆಲವು ಪುಷ್ಪಗಳನ್ನು ಅದರೊಳಗೆ ಹಾಕಿದುದರಿಂದ ಅದರ ಉದಕವು ಶುದ್ಧವಾಯಿತು. ಆದರೂ ನೀರು ಸಾಕಾಗಲಿಲ್ಲ. ಆದುದರಿಂದ ತಾತ್ಯಾ ಪಾಟೀಲರು ಬೇರೆ ಕಡೆಯಿಂದ ನೀರನ್ನು ತರುವ ವ್ಯವಸ್ಥೆ ಮಾಡಿದರು. ತಾತ್ಕಾಲಿಕ ಅಂಗಡಿಗಳನ್ನು ನಿರ್ಮಿಸಿದರು. ಗೋಪಾಲರಾವ ಗುಂಡ ಅವರ ಸ್ನೇಹಿತರೂ ಸಹ ಸಂತತಿ ಇಲ್ಲದೆ ಕೊರಗುತ್ತಿದ್ದರು. ಅವರೂ ಸಹ ಬಾಬಾರವರಿಂದ ಆಶೀರ್ವದಿಸಲ್ಪಟ್ಟರು. ಆದುದರಿಂದ ಗೋಪಾಲರಾವ ಅವರು ಜಾತ್ರೆಯ ಮೆರವಣಿಗೆಗೆ ಒಂದು ಧ್ವಜವನ್ನು ತಯಾರು ಮಾಡಿಕೊಡುವಂತೆ ಪ್ರಾರ್ಥಿಸಿದರು. ಇನ್ನೊಂದು ಧ್ವಜ ಕೊಡಲು ನಾನಾ ಸಾಹೇಬ ಚಾಂದೋರಕರ ಅವರಿಗೆ ಹೇಳಿದರು. ಈ ಎರಡೂ ಧ್ವಜಗಳನ್ನು ಮೆರವಣಿಗೆ ಮುಗಿದ ನಂತರ ಮಸೀದಿಯ ಎರಡು ಮೂಲೆಗಳಲ್ಲಿ ನೆಟ್ಟರು. ಇದು ಈಗಲು ನಡೆಯುತ್ತಿದೆ.

## ಚಂದನದ ಮೆರವಣಿಗೆ

ಈ ಜಾತ್ರೆಯಲ್ಲಿ ಇನ್ನೊಂದು ಮೆರವಣಿಗೆ ಆರಂಭವಾಯಿತು. ಚಂದನದ ಮೆರವಣಿಗ ನಡೆಸಬೇಕೆಂಬದನ್ನು ಶ್ರೀ ಅಮೀರ ಸರಕಾರ ದಲಾಲ ಎಂಬುವರು ಹೇಳಿದರು. ಮುಸ್ಲಿಂ ಸಾಧುಗಳ ಗೌರವಕ್ಕಾಗಿ ಈ ತರದ ಮೆರವಣಿಗೆ ಮಾಡುವದು ಅವರ ಸಂಪ್ರದಾಯ. ಗಂಧದ ಪುಡಿಯನ್ನು ತಟ್ಟೆಯಲ್ಲಿರುವ ಅಗ್ನಿಗೆ ಹಾಕಿ, ಆ ಧೂಪವನ್ನು ವಾದ್ಯ ಮೊದಲಾದವುಗಳ ಸಹಿತ ಮೆರವಣಿಗೆ ಮಾಡಿ ನಂತರ ಮಸೀದಿಗೆ ತಂದರು. ಈ ಕೆಲಸವು ಮೊದಲ ಮೂರು ವರ್ಷಗಳವರೆಗೆ ಶ್ರೀ ಅಮೀರ ಸರಕಾರ ಅವರಿಂದ ಸಾಂಗವಾಗಿ ನೆರವೇರಿಸಲ್ಪಟ್ಟಿತು. ನಂತರ ಅವರ ಪತ್ನಿಯು ಅದನ್ನು ಮುಂದುವರಿಸಿದರು. ಈ ರೀತಿ ಹಿಂದೂಗಳಿಂದ ಧ್ವಜದ ಮೆರವಣಿಗೆಯೂ ಮುಸಲ್ಮಾನರಿಂದ ಗಂಧದ ಮೆರವಣಿಗೆಯೂ ಜೊತೆಯಲ್ಲಿಯೇ ಯಾವದೊಂದು ಆತಂಕವಿಲ್ಲದೆ ನಡೆದವು. ಈಗಲೂ ನಡೆಯುತ್ತಿವೆ.

ಶ್ರೀ ಬಾಬಾರವರ ಭಕ್ತರಿಗೆ ಅದೊಂದು ಮಹಾದಿನ! ಸರ್ವರೂ ಮೆರವಣಿಗೆಯಲ್ಲಿ ಭಾಗವಹಿಸಿ, ಮೆರವಣಿಗೆ ಸಾಂಗವಾಗಿ ನೆರವೇರಿತು. ಹೊರಗಿನ ವ್ಯವಸ್ಥೆಯನ್ನು ತಾತ್ಯಾ ಕೋತೆ ಪಾಟೀಲರೂ ಮತ್ತು ಒಳಗಿನ ವ್ಯವಸ್ಥೆಯನ್ನು ಶ್ರೀಮತಿ ರಾಧಾಕೃಷ್ಣಮಾಯಿಯೂ ಬಹಳ ಚೆನ್ನಾಗಿ ನೋಡಿಕೊಂಡರು. ಈ ವ್ಯವಸ್ಥೆಗಳನ್ನು ಮಾಡುವಾಗ ರಾಧಾಕೃಷ್ಣಮಾಯಿಯ ಮನೆ ಜನಕೋಟಿಯಿಂದ ತುಂಬಿರುತ್ತಿತ್ತು. ಅವಳ ಇನ್ನೊಂದು ಉತ್ತಮ ಕೆಲಸವೆಂದರೆ ಮಸೀದಿಯನ್ನು ಚೆನ್ನಾಗಿ ತೊಳೆದು ಶುಚಿಯಾಗಿಟ್ಟಿದುದು. ಬಡವರಿಗೆ ಅನ್ನದಾನ ಮಾಡುವದೆಂದರೆ ಬಾಬಾ ಅವರಿಗೆ ಪಂಚಪ್ರಾಣ. ಈ ಅಡಿಗೆ ಕೆಲಸವನ್ನೂ ಸಹ ಶ್ರೀಮತಿ ರಾಧಾಕೃಷ್ಣಮಾಯಿಯೇ ನೋಡಿಕೊಳ್ಳುತ್ತಿದ್ದಳು. ಇದರಲ್ಲಿ ಅನೇಕ ಧನಿಕರಾದ ಭಕ್ತರೂ ಸಹ ಭಾಗವಹಿಸುತ್ತಿದ್ದರು.

## ಉರಸ್ ಶ್ರೀ ರಾಮನವಮಿಯಾಗಿ ಪರಿವರ್ತನೆ

ಈ ರೀತಿಯಾದ ಸಂಭ್ರಮವು ಸುಮಾರು ೧೯೧೨ರ ತನಕ ನಡೆಯಿತು. ನಂತರ ಸ್ವಲ್ಪ ಬದಲಾವಣೆ ಹೊಂದಿತು. ಆ ವರ್ಷ ಶ್ರೀ ಕೃಷ್ಣರಾವ ಜಗದೀಶ್ವರ ಭೀಷ್ಮ ಎಂಬ ಭಕ್ತರು, ದಾದಾಸಾಹೇಬ ಖಾಪರ್ಡೆಯವರೊಡನೆ ಜಾತ್ರೆಯಲ್ಲಿ ಭಾಗವಹಿಸಲು ಹಿಂದಿನ ದಿನವೇ ಬಂದು ದೀಕ್ಷಿತವಾಡಾದಲ್ಲಿ ತಂಗಿದ್ದರು. (ಜಗದೀಶ್ವರ ಭೀಷ್ಮರವರು, "ಸಾಯಿ ಸುಗುಣೋಪಾಸನ" ಎಂಬ ಕೃತಿಯ ಗ್ರಂಥಕರ್ತರು.) ಶ್ರೀ ಲಕ್ಷ್ಮಣರಾವ – ಕಾಕಾ ಮಹಾಜನಿ – ಅವರು ಪೂಜಾ ಸಾಮಗ್ರಿಗಳೊಡನೆ ಮಸೀದಿಗೆ ಹೋಗುತ್ತಿರುವದನ್ನು ನೋಡಿದ ಭೀಷ್ಮರವರಿಗೆ "ಇಲ್ಲಿ ಶ್ರೀರಾಮನವಮಿ ದಿವಸವೇ ಉರಸ್ ಜಾತ್ರೆ ನಡೆಯುವದನ್ನು ಗಮನಿಸಿದರೆ ಇದು ದೈವ ಸಂಕಲ್ಪವೆಂದೆ ತೋರುತ್ತದೆ. ಹಿಂದೂಗಳಿಗೆ ಶ್ರೀರಾಮನವಮಿ ಬಹು ಪೂಜ್ಯವಾದ ಮತ್ತು ಶ್ರೇಷ್ಠವಾದ ದಿನ. ಆದ್ದರಿಂದ ನಾವು ಇಲ್ಲಿ ಶ್ರೀ ರಾಮನು

ಹುಟ್ಟಿದ ಹಬ್ಬವನ್ನು ಏಕೆ ಆಚರಿಸಬಾರದು?" ಎಂಬ ಭಾವನೆ ಹೊಳೆಯಿತು. ಕಾಕಾ ಮಹಾಜನಿಯವರಿಗೆ ಅದನ್ನು ತಿಳಿಸಿದರು. ಅವರಿಗೂ ಒಪ್ಪಿಗೆಯಾಯಿತು. ಬಾಬಾರವರ ಆಜ್ಞೆ ಪಡೆಯಲು ಏರ್ಪಾಡಾಯಿತು. ಆದರೆ ಆ ದಿನ ದೇವರ ಕೀರ್ತನೆಯನ್ನು ಹಾಡುವ ಹರಿದಾಸರದೇ ಒಂದು ದೊಡ್ಡ ಸಮಸ್ಯೆ ಆಗಿತ್ತು. ಆಗ ಭೀಷ್ಮರವರೇ ತಾವು ಬರೆದಿರುವ "ರಾಮಾಖ್ಯಾನ"ವನ್ನು ಕೀರ್ತನೆ ಮಾಡುವುದಾಗಿ ಮುಂದೆ ಬಂದರು. ಕಾಕಾ ಮಹಾಜನಿಯವರು ಹಾರ್ಮೋನಿಯಂ ನುಡಿಸಲೊಪ್ಪಿದರು. ರಾಧಾಕೃಷ್ಣಮಯಿಗೆ ಶುಂಠವಾಡ (ಸಕ್ಕರೆ ಮತ್ತು ಶುಂಠಿ ಪುಡಿ ಮಿಶ್ರಣ) ಪ್ರಸಾದದ ತಂiವಾರಿಕೆ ವಹಿಸಿದರು. ಈ ಅನುಕೂಲತೆಗಳನ್ನೆಲ್ಲ ಸಿದ್ಧಪಡಿಸಿಕೊಂಡು ಬಾಬಾರವರ ಅನುಜ್ಞೆ ಪಡೆಯಲು ಮಸೀದಿಗೆ ಹೊರಟರು. ಸರ್ವಜ್ಞರಾದ ಬಾಬಾರವರು "ನಿಮ್ಮ ಛತ್ರದಲ್ಲಿ ಏನು ನಡೆಯಿತು?" ಎಂದು ಕಾಕಾ ಮಹಾಜನಿಯವರನ್ನು ಕೇಳಿದರು. ಕಾಕಾ ಮಹಾಜನಿಯವರು ಉತ್ತರ ಕೊಡಲಾಗದೆ ಮೂಕರಂತೆ ನಿಂತರು. ನಂತರ ಬಾಬಾರವರು ಭೀಷ್ಮರವರನ್ನು ಪ್ರಶ್ನಿಸಿದರು. ಭೀಷ್ಮರವರು ಎಲ್ಲ ವಿಚಾರವನ್ನೂ ವಿಶದವಾಗಿ ವಿವರಿಸಿದರು. ಅದನ್ನು ಕೇಳಿ ಬಾಬಾರವರು ಒಪ್ಪಿಗೆ ಕೊಟ್ಟರು. ಆಗ ಸರ್ವರೂ ಆನಂದಭರಿತರಾಗಿ ಶ್ರೀ ರಾಮನವಮಿ ಹಬ್ಬಕ್ಕೆ ಬೇಕಾದ ವಸ್ತುಗಳನ್ನು ಅಣಿ ಮಾಡತೊಡಗಿದರು.

ಮಸೀದಿಯನ್ನೆಲ್ಲ ಶೃಂಗರಿಸಿದರು. ರಾಧಾಕೃಷ್ಣಮಾಯಿಯು ತೊಟ್ಟಿಲನ್ನು ಶೃಂಗರಿಸಿ ಬಾಬಾರವರ ಪೀಠದ ಮುಂದೆ ಇಟ್ಟಳು. ಜಯಂತಿಯ ಕಾರ್ಯ ಕಲಾಪಗಳು ಆರಂಭವಾದವು. ಭೀಷ್ಮರವರು ಕೀರ್ತನೆ ಮಾಡಲು ಎದ್ದು ನಿಂತರು. ಮಹಾಜನಿಯವರು ಹಾರ್ಮೋನಿಯಂ ನುಡಿಸಲನುವಾದರು. ಆಗ ಬಾಬಾರವರು ಮಹಾಜನಿಯವರಿಗೆ ಕರೆ ಕಳುಹಿಸಿದರು. ಆಗ ಮಹಾಜನಿಯವರು, ಬಾಬಾ ಈ ಉತ್ಸವ ಮಾಡಲು ಒಪ್ಪುವರೋ ಅಥವಾ ಇಲ್ಲವೋ

ಎಂಬ ಸಂದೇಹದಿಂದ ಅವರ ಬಳಿ ಬಂದು ನಿಂತರು. ಆಗ ಬಾಬಾರವರು "ಇದೇನು ಸಂಭ್ರಮ? ಇಲ್ಲೇಕೆ ತೊಟ್ಟಿಲವನ್ನು ಕಟ್ಟಿರುತೀರಿ?" ಎಂದು ಕೇಳಲು ಭೀಷ್ಮರವರು "ಇಂದು ಶ್ರೀರಾಮನವಮಿ. ಭಗವಾನ ಶ್ರೀರಾಮನ ಜನ್ಮದಿನ. ಆದುದರಿಂದಲೇ ಈ ತೊಟ್ಟಿಲು, ಈ ಸಮಾರಂಭ ಎಲ್ಲವೂ" ಎಂದುತ್ತರಿಸಿದರು. ಇದನ್ನು ಕೇಳಿದ ಬಾಬಾರವರು ಮಹಾಜನಿಯವರಿಗೆ ಒಂದು ಹಾರವನ್ನು ಹಾಕಿ, ಭೀಷ್ಮರವರಿಗೆ ಹಾಕಲು ಮತ್ತೊಂದು ಹಾರ ತರಲು ಹೇಳಿ ಕಳುಹಿಸಿದರು. ನಂತರ ಕೀರ್ತನೆ ಆರಂಭವಾಯಿತು. ಕೀರ್ತನೆ ಮುಗಿದ ನಂತರ "ಜಯರಾಮ, ಜಯರಾಮ,"ಎಂಬ ನಾಮ ಘೋಷವು ನಭೋ ಮಂಡಲವನ್ನು ಮುಟ್ಟಿತು. ಗುಲಾಲ ಎರಚಿದರು. ಗುಲಾಲ ಪುಡಿ ಬಾಬಾ ಅವರ ಕಣ್ಣುಗಳಲ್ಲಿ ಬಿದ್ದಿದುದರಿಂದ, ಅವರು ಕೋಪೋದ್ರೇಕದಿಂದ ಗರ್ಜಿಸಿದರು. ಎಲ್ಲರೂ ಭಯಬೀತರಾಗಿ ಓಡಲು ಆರಂಭಿಸಿದರು. ಅವರ ಭಕ್ತರಾದ ಕೆಲವರು ಬಾಬಾರವರ ಪ್ರಕೋಪವು ಅವರ ಆಶೀರ್ವಾದರೂಪವದುದೆಂದು ಮನಗಂಡಿದ್ದರು. ಶ್ರೀರಾಮನು ಜನಿಸಿದಾಗ ರಾವಣನು ಮತ್ತು ಅವನ ಪರಿವಾರವು ನಾಶವಾಗುವ ಸಂದರ್ಬ ಒದಗಿದ್ದುದರಿಂದ ಬಾಬಾರವರು ಕೋಪಗೊಂಡದ್ದು ಸರಿಯಾದುದ್ದು ತೋರುತ್ತದೆ ಮತ್ತು ಯಾವದಾದರೊಂದು ಹೊಸ ಕಾರ್ಯಕ್ಕೆ ತೊಡಗಿದಾಗ ಬಾಬಾ ಸಾಮಾನ್ಯವಗಿ ಈ ರೀತಿ ಮಾಡುವುದು ಸಹಜವಾಗಿತ್ತು. ಇದನ್ನು ಕಂಡ ರಾಧಾಕೃಷ್ಣ ಮಾಯಿಯು ಹೆದರಿ ಬಾಬಾರವರು ಎಲ್ಲಿ ತೊಟ್ಟಿಲ್ಲವನ್ನು ಮುರಿದು ಬಿಡುವರೋ ಎಂಬ ಅನುಮಾನದಿಂದ, ಮಹಾಜನಿಯವರಿಗೆ ತೊಟ್ಟಿಲನ್ನು ಬಿಚ್ಚಿ ತರುವಂತೆ ಹೇಳಿದಳು. ಅವರು ತೊಟ್ಟಿಲವನ್ನು ತರಬೇಕೆಂದು ಹೋದಾಗ ಬಾಬಾರವರು "ಅದನ್ನು ತೆಗೆಯಕೂಡದು" ಎಂದರು. ಸ್ವಲ್ಪಹೊತ್ತಿನ ನಂತರ ಬಾಬಾ ಸಮಾಧಾನಚಿತ್ತರಾದರು. ನಂತರ ಪೂಜೆಯ ಕೊನೆಯ ಅಂಗವಾಗಿ

ಆರತಿಯಾಗಿ ಪ್ರಸಾದ ವಿನಿಯೋಗವಾಯಿತು. ಆಗ ಮಹಾಜನಿಯವರು "ಈಗ ತೊಟ್ಟಿಲನ್ನು ತೆಗೆದುಕೊಂಡು ಹೋಗಲೇ?" ಎಂದು ಕೇಳಿದ್ದಕ್ಕೆ ಬಾಬಾರವರು "ಬೇಡ, ಇನ್ನೂ ಹಬ್ಬ ಮುಗಿದಿಲ್ಲ" ಎಂದರು. ಮಾರನೇ ದಿನ ಗೋಪಾಲ ಕಾಲಾ ಸಮಾರಂಭ ಮುಗಿದ ನಂತರ ತೊಟ್ಟಿಲನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಿದರು. ಈ ರೀತಿ, ಶ್ರೀ ರಾಮನವಮಿ ಸಮಾರಂಭ ಒಂದು ಕಡೆಗೆ, ಧ್ವಜ ಮತ್ತು ಚಂದನದ ಮೆರವಣಿಗೆ ಮತ್ತೊಂದು ಕಡೆಗೆ ಸಾಂಗವಾಗಿ ನೆರವೇರಿದವು. ಅಂದಿನಿಂದ ಉರಸ್ ಶ್ರೀ ರಾಮನವಮಿ ಹಬ್ಬವಾಗಿ ಪರಿವರ್ತನೆಯಾಯಿತು.

೧೯೧೨ರಿಂದ ಶ್ರೀ ರಾಮನವಮಿ ಸಮಾರಂಭ ವಿಶೇಷವಾಗಿ ನಡೆಯಲು ಆರಂಭವಾಯಿತು. ರಾದಾಕೃಷ್ಣಮಾಯಿಯವರು 'ನಾಮಸಪ್ತಾಹ' ಆರಂಭಿಸಿದರು. ಪ್ರತಿಯೊಬ್ಬರೂ ಸಮಾರಂಭದಲ್ಲಿ ಭಾಗವಹಿಸುತ್ತಿದ್ದರು. ಶ್ರೀರಾಮನವಮಿ ದೇಶದ ಎಲ್ಲ ಕಡೆಗೂ ಆಚರಿಸಲ್ಪಡುತ್ತಿದ್ದುದರಿಂದ, ಹರಿದಾಸರದೇ ಒಂದು ಸಮಸ್ಯೆಯಾಗಿತ್ತು. ಆದರೆ ಈ ಉತ್ಸವಕ್ಕೆ ೫-೬ ದಿನಗಳ ಮುಂಚೆ ಶ್ರೀ ಮಹಾಜನಿ ಅವರು ಆಧುನಿಕ ತುಕಾರಾಮರೆನಿಸಿದ ಬಾಳಾಬುವಾ ಸಾತಾರಕರ ಅವರನ್ನು ಆಕಸ್ಮಾತ್ತಾಗಿ ಸಂಧಿಸಿ ಅವರಿಂದ ಹರಿಕಥೆ ನಡೆಯಲು ಏರ್ಪಾಡಾಗಿತ್ತು. ೧೯೧೪ರಲ್ಲಿ ಬಾಳಾಬುವಾರವರು ತಮ್ಮ ಸ್ವಂತ ಊರಿನಲ್ಲಿ ಪ್ಲೇಗಿನ ಜಾಡ್ಯವಿದ್ದುದರಿಂದ ಅಲ್ಲಿ ಹರಿಕಥೆ ಮಾಡಲಾಗದೆ ಶಿರ್ಡಿಗೆ ಬಂದು ಬಾಬಾರವರ ಅನುಜ್ಞೆ ಪಡೆದು ಹರಿಕಥೆ ಮಾಡಿದರು. ನಂತರ ಬಾಬಾರವರು ಈ ಹರಿಕಥೆಯ ಕೆಲಸವನ್ನು ಶಾಶ್ವತವಾಗಿ ದಾಸಗಣೂರವರಿಗೆ ವಹಿಸಿದರು. ಹೀಗೆ ೧೯೧೨ರಿಂದ ಶ್ರೀರಾಮನವಮಿ ಸಮಾರಂಭವು ಪ್ರತಿವರ್ಷ ಅಭಿವೃದ್ಧಿ ಹೊಂದಿ ಚೈತ್ರಮಾಸದಲ್ಲಿ ೮ ರಿಂದ ೧೨ ರವರೆಗೆ ಶಿರ್ಡಿಯು ಜೇನುಗೂಡಿನಂತೆ ಕಾಣುತ್ತಿತ್ತು. ಅಂಗಡಿಗಳು ಹೆಚ್ಚಿದವು. ಅನೇಕ ಜಟ್ಟಿಗಳು ಕುಸ್ತಿ ಪಂದ್ಯದಲ್ಲಿ ಭಾಗವಹಿಸುತ್ತಿದ್ದರು. ಬಡಬಗ್ಗರಿಗೆ ಅನ್ನದಾನವು ಆರಂಭವಾಯಿತು.

ರಾಧಾಕೃಷ್ಣಮಾಯಿ ಮತ್ತು ಇತರರ ಪರಿಶ್ರಮದಿಂದ ಶಿರ್ಡಿಯು ಸಂಸ್ಥಾನವಾಗಿ ಮಾರ್ಪಾಡಾಯಿತು. ಸಾಮಾನು ಸರಂಜಾಮುಗಳು ಹೆಚ್ಚಿದವು. ಅಶ್ವದಳ, ಪಲ್ಲಕ್ಕಿ, ರಥ, ಬೆಳ್ಳಿಯ ಅನೇಕ ಸಾಮಾನುಗಳು ಪಾತ್ರೆಗಳು ಇತ್ಯಾದಿಯಾಗಿ ಎಲ್ಲವನ್ನೂ ಭಕ್ತಾದಿಗಳು ಸಮರ್ಪಿಸಿದರು. ಮೆರವಣಿಗೆಗೆ ಆನೆಗಳನ್ನೂ ಸಹ ಸಮರ್ಪಿಸಿದರು. ಆದರೆ ಬಾಬಾರವರು ಇವುಗಳ ಕಡೆಗೆ ಗಮನ ಕೊಡದೆ ಮೊದಲಿನಂತೆಯೇ ಇದ್ದರು. ಹಿಂದೂ – ಮಹಮ್ಮದೀಯರು ಬಹಳ ಚೆನ್ನಾಗಿ ಕಲೆತು ಉತ್ಸವವನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ಮೊದಮೊದಲು ೫,೦೦೦ ದಿಂದ ೬,೦೦೦ ದವರೆಗೂ ಜನರು ಸೇರುತ್ತಿದ್ದರು. ಬರಬರುತ್ತ ಜನಸಂದಣಿ ೭೫,೦೦೦ಕ್ಕೆ ಎರಿತು. ಆದರೂ ಯಾವ ತರದ ಅಂಟುರೋಗದ ಸುಳಿವಾಗಲಿ ಅಥವಾ ಗಲಭೆಗಳಾಗಲಿ ಆಗುತ್ತಿರಲಿಲ್ಲ –ಆಗುತ್ತಲೂ ಇಲ್ಲ.

## ಮಸೀದಿಯ ದುರಸ್ತಿ

ಗೋಪಾಲರಾವ ಗುಂಡ ಅವರಿಗೆ ಮತ್ತೊಂದು ಮುಖ್ಯ ವಿಚಾರ ಹೊಳೆಯಿತು. ಉರಸ್ ಹೇಗೆ ಆರಂಬಿಸಿದರೋ, ಅದೇ ರೀತಿ ಮಸೀದಿಯ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ಅವರು ಮನಸ್ಸು ಮಾಡಿದರು. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡರು. ಬಾಬಾರವರು ಮೊದಲು ಅನುಮತಿ ನೀಡಲಿಲ್ಲ. ನಂತರ ಮ್ಹಾಳಸಾಪತಿಯವರ ಒತ್ತಾಯದಿಂದ ಬಾಬಾ ಒಪ್ಪಿದರು. ಈ ಕೆಲಸವು ನಾನಾಸಾಹೇಬ ಚಾಂದೋರಕರ ಮತ್ತು ಕಾಕಾಸಾಹೇಬ ದೀಕ್ಷಿತ ಅವರಿಗೆ ಮೀಸಲಾಯಿತು. ಮಸೀದಿಯನ್ನು ಒಂದು ರಾತ್ರಿಯಲ್ಲಿ ಸರಿಪಡಿಸಿದರು. ೧೯೧೧ರಲ್ಲಿ ಸಭಾಮಂಟಪ ತಯಾರಾಯಿತು. ಮಸೀದಿಯ ಮುಂದಿನ ಬಯಲು ಬಹಳ ಚಿಕ್ಕದಾಗಿಯೂ ಅನಾನುಕೂಲವಾಗಿಯೂ ಇತ್ತು. ಕಾಕಾಸಾಹೇಬರು ಅದನ್ನು ವಿಸ್ತರಿಸಿ ಒಂದು ಛಾವಣಿ ಹಾಕಬೇಕೆಂದು ನಿರ್ಧರಿಸದರು.

ಬಹಳ ಕಷ್ಟದಿಂದ ಕಬ್ಬಿಣದ ಕಂಬ ಇತ್ಯಾದಿಗಳನ್ನು ತಂದು ಕಾರ್ಯ ಆರಂಭಿಸಿದರು. ಆದರೆ ಬಾಬಾರವರು ಮಾರನೆ ದಿನ ಬಂದು ನೋಡಿ, ಎಲ್ಲವನ್ನೂ ಕಿತ್ತು ಬಿಸಾಟಿದರು.ಒಮ್ಮೆ ಬಾಬಾರವರು ಬಹಳ ಕೋಪಗೊಂಡು, ಒಂದು ಕೈಯಿಂದ ಕಂಬವನ್ನು ಕೀಳುತ್ತ ಮತ್ತೊಂದು ಕೈಯಿಂದ ತಾತ್ಯಾ ಪಾಟೀಲರ ಕುತ್ತಿಗೆಯನ್ನು ಹಿಡಿದು ಹಿಚುಕಲು ಆರಂಭಿಸಿದರು. ತಾತ್ಯಾ ಪಾಟೀಲರ ರುಮಾಲನ್ನು ತೆಗೆದು ಅದಕ್ಕೆ ಬೆಂಕಿ ಹೊತ್ತಿಸಿ ಒಗೆದರು. ಈ ದೃಶ್ಯವನ್ನು ನೋಡಿ ಎಲ್ಲರಿಗೂ ಭಯವಾಯಿತು. ಬಾಬಾರವರು ತಕ್ಷಣವೇ ತಮ್ಮ ಕಿಸೆಯಿಂದ ಒಂದು ರೂಪಾಯಿಯನ್ನು ತೆಗೆದು ಬಿಸಾಟಿದರು. ತಾತ್ಯಾರವರಿಗೂ ಭೀತಿಯುಂಟಾಯಿತು. ಅವರಿಗೆ ಏನಾಗುವುದೋ ಎಂಬ ಶಂಕೆ ಜನರಲ್ಲಿ ಮೂಡಿತು. ಆದರೆ ಮುಂದೆ ಹೋಗಿ ಕೇಳಲು ಯಾರಿಗೂ ಧೈರ್ಯವಿರಲಿಲ್ಲ. ಭಾಗೋಜಿ ಸಿಂಧೆ ಅವರು ಸ್ವಲ್ಪ ಧೈರ್ಯ ಮಾಡಿ ಮುಂದೆ ಬರಲು ಬಾಬಾ ಅವರನ್ನೂ ತಳ್ಳಿದರು. ಶ್ಯಾಮ ಅವರಿಗೂ ಇದೇ ಗತಿಯಾಯಿತು. ಈ ರೀತಿ ಯಾರು ಯಾರು ಮುಂದೆ ಬಂದರೋ ಅವರೆಲ್ಲರಿಗೂ ಇದೇ ಗತಿಯಾಯಿತು. ನಂತರ ಸ್ವಲ್ಪ ಹೊತ್ತಿನ ಮೇಲೆ ಬಾಬಾ ಶಾಂತರಾದರು. ಒಬ್ಬ ಅಂಗಡಿಯವನಿಂದ ಜರತಾರಿ ಪೇಟಾ ತರಿಸಿ, ಅದನ್ನು ತಾವೇ ಸ್ವತಃ ತಾತ್ಯಾ ಪಾಟೀಲರ ತಲೆಗೆ ಸುತ್ತಿದರು. ಇದನ್ನು ನೋಡಿ ಎಲ್ಲರೂ ಅಚ್ಚರಿಗೊಂಡರು. ಬಾಬಾರವರ ಈ ನಡೆತೆಗೆ ಕಾರಣ ಗೊತ್ತಾಗಲಿಲ್ಲ. ಕೆಲವು ಸಲ ಬಾಬಾರವರು ಶಾಂತಿಯಿಂದ ಎಲ್ಲರೊಡನೆಯೂ ಮಾತುಕತೆಗಳನ್ನು ನಡೆಸುತ್ತಿದ್ದರು. ಕೆಲವು ವೇಳೆ ಕೋಪಗೊಂಡು ಉದ್ರಿಕ್ತರಾಗುತ್ತಿದ್ದರು.

ಮುಂದಿನ ಅಧ್ಯಾಯದಲ್ಲಿ ಶ್ರೀ ಸಾಯಿಬಾಬಾರವರು ಮಹಮ್ಮದೀಯರೋ ಅಥವಾ ಹಿಂದುವೋ ಎಂಬ ಪ್ರಶ್ನೆಯನ್ನು ಕೂಲಂಕಷವಾಗಿ ವಿವರಿಸುತ್ತೇನೆ. ಅವರ ಯೋಗಾಭ್ಯಯನದ ಮತ್ತು ಯೋಗಶಕ್ತಿಯ ವಿವರವನ್ನೂ ಸಹ ಕೊಡುತ್ತೇನೆ.

**ಶ್ರೀ ಸಾಯಿ ಪ್ರಣಾಮ**

# ೭ನೇ ಅಧ್ಯಾಯ

## ಅದ್ಭುತ ಅವತಾರ– ಸಾಯಿಬಾಬಾರವರ ನಡೆತೆ. ಅವರ ಯೋಗಾಧ್ಯಯನ –ಕುಷ್ಠರೋಗಿ ಭಕ್ತನ ಸೇವೆ– ಕುಮಾರ ಖಾಪರ್ಡೆ ಅವರಿಗೆ ಪ್ಲೇಗ–ಪಂಢರಪುರಕ್ಕೆ ಪ್ರಯಾಣ

### ಅದ್ಭುತ ಅವತಾರ

ಬಾಬಾರವರಿಗೆ ಸಮಸ್ತ ಯೋಗಾಸನಗಳೂ ಬರುತ್ತಿದ್ದವು. ಅವರಿಗೆ ಧೋತಿ ಮೋತಿ ಮುಂತಾದ ಅರು ಯೋಗಾಸನಗಳಲ್ಲಿ ಬಹಳ ಪರಿಶ್ರಮವಿತ್ತು. (೩ಅಂಗುಲ ಅಗಲ,೨೨ ೧/೨ ಅಡಿ ಉದ್ದದ ಬಟ್ಟೆಯಿಂದ ಉದರವನ್ನು ಶುದ್ಧಿ ಮಾಡುವದಕ್ಕೆ ಧೋತಿ ಎಂದು ಕರೆಯುತ್ತಾರೆ.) ಖಂಡ ಯೋಗದಲ್ಲಿಯೂ ಅವರು ಪ್ರವೀಣರಾಗಿದ್ದರು. (ಕೈಕಾಲುಗಳನ್ನು ಬೇರ್ಪಡಿಸಿ, ಪುನ: ಸೇರಿಸಿಕೊಳ್ಳುವ ಯೋಗಸಾಧನೆಗೆ ಖಂಡ ಯೋಗವೆಂದು ಕರೆಯುತ್ತಾರೆ.) ಬಾಬಾರವರನ್ನು ನಾವು ಹಿಂದೂ ಎಂದು ಭಾವಿಸುವದಾದರೆ, ಯವನರಂತೆ ಕಾಣುತ್ತಿದ್ದರು. ಅವರು ಹಿಂದುವೋ ಅಥವಾ ಮಹಮ್ಮದಿಯರೋ ಎಂಬುದು ಯಾರಿಗೂ ಸರಿಂiವಾಗಿ ತಿಳಿದಿರಲಿಲ್ಲ. ಹಿಂದುಗಳ ಹಬ್ಬವಾದ ಶ್ರೀ ರಾಮನವಮಿಯನ್ನು ಹೇಗೆ ಆಚರಿಸಲೊಪ್ಪಿದರೋ ಅದೇ ರೀತಿ ಮಹಮ್ಮದೀಯರ ಚಂದನದ ಮೆರವಣಿಗೆಗೂ ಸಹ ಒಪ್ಪಿಗೆ ನೀಡಿದ್ದರು. ಮಲ್ಲಯುದ್ಧವನ್ನು ಪ್ರೋತ್ಸಾಹಿಸಿ ಬಹುಮಾನ ನೀಡುತ್ತಿದ್ದರು. ಗೋಕುಲಾಷ್ಟಮಿಯ ದಿನ ಗೋಪಾಲ ಕಾಲಾ ಸಮಾರಂಭವನ್ನು ನಡೆಸಲೊಪ್ಪಿದ್ದರು ಮತ್ತು 'ಈದ' ಮೊದಲಾದ ಹಬ್ಬಗಳಲ್ಲಿ ಮಹಮ್ಮದೀಯರು ತಮ್ಮ ಮಸೀದಿಯಲ್ಲಿ ನಮಾಜು ಮಾಡಲು ಒಪ್ಪಿದ್ದರು. ಮೋಹರಮು ಸಮಾರಂಭದಲ್ಲಿ ಮಹಮ್ಮದೀಯರು ಮಸೀದಿಯಲ್ಲಿ ತಾಜಾ ಕಟ್ಟಲು ಸಲಹೆ

ಕೇಳಿದ್ದಕ್ಕೆ ಅದಕ್ಕೂ ಸಮ್ಮತಿ ಇತ್ತಿದ್ದರು. ನಾವು ಅವರನ್ನು ಮಹಮ್ಮದೀಯರೆಂದು ಕರೆಯುವದಾದರೆ ಅವರು ಕಿವಿಗಳನ್ನು ಚುಚ್ಚಿಸಿಕೊಂಡಿದ್ದರು. ಹಿಂದುವೆಂದು ಕರೆಯುವದಾದರೆ, ಅವರು ಯಾವಾಗಲೂ ಮಸೀದಿಯಲ್ಲಿ ವಾಸವಾಗಿದ್ದರು. ಮಹಮ್ಮದೀಯರೆನ್ನುವದಾದರೆ, ಮಹಮ್ಮದೀಯ ಸಂಪ್ರದಾಯಕ್ಕೆ ವಿರುದ್ಧವಾಗಿ ಯಾವಾಗಲೂ ಪವಿತ್ರ ಧುನಿಯಲ್ಲಿ ಅಗ್ನಿ ಉರಿಸುತ್ತಿದ್ದರು. ಶಂಖ ಊದುವದು, ಘಂಟೆ ಬಾರಿಸುವದು, ಭಜನೆ ಮಾಡುವದು, ಅಗ್ನಿಕುಂಡದಲ್ಲಿ ಹೋಮ, ಅನ್ನ, ಅರ್ಘ್ಯ ಬಿಡುವದು ಇವೇ ಮೊದಲಾದ ಆಚರಣೆಗಳು ಅವರಲ್ಲಿದ್ದವು, ಮಹಮ್ಮದೀಯರೆನ್ನುವದಾದರೆ, ಅನೇಕ ಬ್ರಾಹ್ಮಣರೂ, ಅಗ್ನಿಹೋತ್ರಿಗಳೂ ತಮ್ಮ ಆಚಾರವನ್ನು ಬದಿಗಿಟ್ಟು ಅವರ ಪಾದಸೇವೆ ಮಾಡುತ್ತಿದ್ದರು. ಅವರನ್ನು ಪ್ರಶ್ನಿಸಲು ಹೋದ ಕೆಲವರು ಮೂಕರಂತೆ ನಿಂತು ಬಿಡುತ್ತಿದ್ದರು. ಅವರ ದರ್ಶನದಿಂದ ದಿಗ್ಭ್ರಾಂತರಾಗುತ್ತಿದ್ದರು. ಆದುದರಿಂದ ಶ್ರೀ ಸಾಯಿಬಾಬಾರವರು ಹಿಂದುವೋ ಅಥವಾ ಮಹಮ್ಮದೀಯರೋ ಎಂಬುದನ್ನು ಖಂಡಿತವಾಗಿ ನಿರ್ಧರಿಸಲು ಸಾಧ್ಯವೇ ಇಲ್ಲ. ಪರಮಾತ್ಮನಲ್ಲಿ ಐಕ್ಯರಾದ ಬಾಬಾ ಅವರಿಗೆ ಜಾತಿಮತದ ಭೇದ ಭಾವ ಇರಲಿಲ್ಲ. ಸರ್ವಮತದವರನ್ನೂ ಸಕಲ ಚರಾಚರಗಳನ್ನೂ ಅವರು ಒಂದೇ ಎಂದು ಭಾವಿಸಿದ್ದರು.

ಇಂತಹ ಒಂದು ಉದಾತ್ತವಾದ, ಏಕೈಕವಾದ, ಅತ್ಯಾಶ್ಚರ್ಯಕರವಾದ ಅವತಾರ ಪುರುಷರು– ಶ್ರೀ ಸಾಯಿಬಾಬಾ. ಪೂರ್ವಜನ್ಮದ ಸುಕೃತ ಫಲದಿಂದ ಮಾತ್ರವೇ ನನಗೆ ಅವರ ಸೇವೆ ಮಾಡುವ ಯೋಗ ದೊರೆಯಿತು. ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಬಾಬಾ ಅವರು ಅನಂತವಾದ ಆನಂದ ಸ್ಫೂರ್ತಿಯುಳ್ಳವರಾಗಿದ್ದರು. ಅವರ ಶ್ರೇಷ್ಠತೆಯನ್ನೂ ಮತ್ತು ಏಕೈಕ ಸ್ವಭಾವವನ್ನೂ ಪೂರ್ಣವಾಗಿ ವರ್ಣಿಸಲು ಸಾಧ್ಯವೇ ಇಲ್ಲ. ಅನೇಕ

ಸಾಧು ಸಂತರುಗಳು ಮೋಕ್ಷಮಾರ್ಗದ ಮರ್ಮವನ್ನು ತಿಳಿಯಲು ಬಾಬಾರವರ ಕಡೆಗೆ ಬರುತ್ತಿದ್ದರು. ಅವರು ಸರ್ವರೊಡನೆಯೂ ಕಲೆತು ಸಂಭಾಷಣೆ ಮಾಡಿ ಸೂಕ್ತ ರೀತಿಯ ಸಲಹೆಗಳನ್ನು ನೀಡುತ್ತಿದ್ದರು. ಯಾವಾಗಲೂ ದೇವರು ದೊಡ್ಡವನು ಎಂದು ಹೇಳುತ್ತಿದ್ದರು. ಶ್ರೀಮಂತನಾಗಲಿ, ಬಡವನಾಗಲಿ ಎಲ್ಲರಿಗೂ ಒಂದೇ ತರದ ಮರ್ಯಾದೆ ಸಲ್ಲುತ್ತಿತ್ತು. ಅವರಿಗೆ ಪ್ರಪಂಚದ ಆಗುಹೋಗಗಳೆಲ್ಲವೂ ತಿಳಿದಿದ್ದವು. ಅವರು ಜ್ಞಾನದ ಗಣಿಯಾಗಿದ್ದರು. ಆದರೂ ಏನೂ ತಿಳಿಯದವರಂತೆ ಕಾಣುತ್ತಿದ್ದರು. ಮನುಷ್ಯ ರೂಪಿಗಳಾಗಿದ್ದರೂ, ಅವರ ಕೆಲಸಗಳಲ್ಲಿ ದೈವಿಕತೆ ತುಂಬಿತ್ತು. ಸರ್ವರೂ ಅವರನ್ನು ದೇವರೆಂದೇ ಭಾವಿಸಿದ್ದರು.

## ಸಾಯಿಬಾಬಾರವರ ಆಚರಣೆ

ಬಾಬಾರವರು ಶಿರ್ಡಿಯಲ್ಲಿಯ ಸಮಸ್ತ ದೇವಾಲಯಗಳನ್ನು ದುರಸ್ತಿ ಪಡಿಸಿದರು. ತಾತ್ಯಾಪಾಟೀಲರ ಮೂಲಕ ಶನಿ, ಗಣಪತಿ, ಶಂಕರ–ಪಾರ್ವತಿ, ಗ್ರಾಮ ದೇವತೆ, ಮಾರುತಿ ಮುಂತಾದ ದೇವಾಲಯಗಳನ್ನು ದುರಸ್ತಿ ಪಡಿಸಿದರು. ಅಂತೆಯೇ ಅವರು ಧರ್ಮಿಷ್ಟರಾಗಿಯೂ ಮತ್ತು ದಾನಶೀಲರಾಗಿಯೂ ಇದ್ದರು. ದಕ್ಷಿಣೆಯ ಮೂಲಕ ಸಂಪಾದಿಸಿದ ಹಣವನ್ನೆಲ್ಲ ಒಬ್ಬರಿಗೆ ೨೦ ರೂ.ಗಳು ಇನ್ನೊಬ್ಬರಿಗೆ ೧೫ ರೂ.ಗಳು ಮತ್ತೊಬ್ಬರಿಗೆ ೫೦ ರೂ.ಗಳು ಈ ರೀತಿ ಪ್ರತಿದಿನವೂ ಎಲ್ಲರಿಗೂ ಸಂತೋಷದಿಂದ ಹಂಚುತ್ತಿದ್ದರು. ಅದನ್ನು ಭಕ್ತರು ಬಹಳ ಪೂಜ್ಯ ಭಾವನೆಯಿಂದ ಸ್ವೀಕರಿಸುತ್ತಿದ್ದರು. ಎಲ್ಲ ದ್ರವ್ಯವೂ ಸದ್ವಿನಿಯೋಗವಾಗಬೇಕೆಂಬುದೇ ಬಾಬಾರವರ ಇಚ್ಛೆ ಆಗಿದ್ದಿತು.

ಬಾಬಾರವರ ದರ್ಶನದಿಂದ ಭಕ್ತ ಜನರಿಗೆ ಬಹಳ ಲಾಭ'ವಾಯಿತು. ಅನೇಕ ಜನರು ಆರೋಗ್ಯದಿಂದ ದೃಢಕಾಯರಾದರು. ಕೆಲವು ಕುಷ್ಠರೋಗಿಗಳಿಗೆ ಗುಣವಾಯಿತು. ದುಷ್ಟರು ಸನ್ಮಾರ್ಗ ಪ್ರವರ್ತಕರಾದರು. ಯಾವ ಒಂದು

ಔಷಧಿಯಿಂದಾಗಿ ಇಲ್ಲದೆ ಅನೇಕ ಕುರುಡರಿಗೆ ಕಣ್ಣು ಕಾಣಿಸುವಂತಾಯಿತು. ಕಾಲಿಲ್ಲದವರಿಗೆ ನಡೆಯಲು ಬಂದಿತು. ಅವರ ಕೀರ್ತಿಯು ದೇಶಾದ್ಯಂತ ಹರಡಿತು. ಅನೇಕ ಯಾತ್ರಾರ್ಥಿಗಳು ಬಂದು ಬಾಬಾರವರ ಅನಂತ ದರ್ಶನ ಪಡೆದು ಪರಮ ಸಂತೋಷ ಭರಿತರಾಗಿ ಅಚ್ಚಳಿಯದ ಭಕ್ತಿಯಿಂದ ಹಿಂತಿರುಗುತ್ತಿದ್ದರು. ಬಾಬಾರವರು ಮಾತ್ರ ಯಾವಾಗಲೂ ಮಹಾತಪಸ್ವಿಯಂತೆ ಧುನಿಯ ಮುಂದೆ ಕುಳಿತಿರುತ್ತಿದ್ದರು.

ಮೊದಲು ಬಾಬಾ ಒಂದು ಅಂಗಿ ದೋತರ ಉಟ್ಟುಕೊಂಡು ಬಿಳಿ ಪೇಟಾವನ್ನು ತಲೆಗೆ ಸುತ್ತಿಕೊಳ್ಳುತ್ತಿದ್ದರು. ಹಳ್ಳಿಯ ರೋಗಿಗಳನ್ನು ಪರೀಕ್ಷಿಸಿ ಔಷಧಿ ಕೊಡುತ್ತಿದ್ದರು. ಈ ವೃತ್ತಿಯಲ್ಲಿ ಅವರಿಗೆ ಜಯವು ದೊರೆತು ಹಳ್ಳಿಯ ಹಕೀಮರಾಗಿದ್ದರು. ಅವರು ಒಂದು ದಾರುಣವಾದ ರೋಗವನ್ನು ವಾಸಿ ಮಾಡಿದ ಕಥೆ ಈ ರೀತಿ ಇದೆ.

ಒಂದು ಸಾರಿ ಭಕ್ತನೊಬ್ಬನ ಕಣ್ಣುಗಳು ಉದಿಕೊಂಡವು. ಆಗ ಶಿರ್ಡಿಯಲ್ಲಿ ವೈದ್ಯರಾರೂ ಇರಲಿಲ್ಲ. ಕೆಲವರು ಅವನನ್ನು ಬಾಬಾರವರ ಬಳಿಗೆ ಕರೆದುಕೊಂಡು ಹೋದರು. ಬೇರೆ ವೈದ್ಯರಾಗಿದ್ದರೆ ಸಾಮಾನ್ಯವಾಗಿ ಮುಲಾಮು, ಹಸುವಿನ ಹಾಲು, ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದರು. ಆದರೆ ಬಾಬಾರವರದೇ ಒಂದು ವೈಶಿಷ್ಟ್ಯ. ಸಾಯಿಬಾಬಾ ಅವರು 'ಬೀಬಾ' ಕಾಯಿಯನ್ನು ಪುಡಿಮಾಡಿ, ಗುಳಿಗೆ ಮಾಡಿ ಅವುಗಳನ್ನು ಎರಡೂ ಕಣ್ಣುಗಳಲ್ಲಿ ಹಾಕಿ ಬಟ್ಟೆ ಕಟ್ಟಿದರು. ಮಾರನೇ ದಿವಸ ಬಿಚ್ಚಿ ನೀರಿನಿಂದ ಕಣ್ಣನ್ನು ತೊಳೆದರು. ಊದು ಇಳಿದು ಕಣ್ಣುಗಳು ಸ್ವಚ್ಛವಾಗಿದ್ದವು!

## ಬಾಬಾರವರ ಯೋಗಾಧ್ಯಯನಗಳು

ಬಾಬಾರವರಿಗೆ ಎಲ್ಲ ತರಹದ ಯೋಗಾಸನಗಳು ಬರುತ್ತಿದ್ದವು ಇಲ್ಲಿ ಎರಡನ್ನು ಮಾತ್ರ ವಿವರಿಸುತ್ತೇನೆ.

(೧) ಧೋತಿ ವಿಧಾನ: ಬಾಬಾರವರು ಮಸೀದಿಯಿಂದ ಸ್ವಲ್ಪ ಹತ್ತಿರದಲ್ಲಿಯೇ ಇದ್ದ ಅಶ್ವತ್ಥ ವೃಕ್ಷದ ಬಳಿಯ ಬಾವಿಗೆ ಹೋಗಿ ಸ್ನಾನ ಮೊದಲಾದವುಗಳನ್ನು ತೀರಿಸಿಕೊಂಡು ಬರುತ್ತಿದ್ದರು. ಕೆಲವು ಸಾರಿ ಅವರು ಕರುಳನ್ನು ಹೊರಗೆ ತೆಗೆದು ಶುದ್ಧ ಮಾಡಿ ಬಿಸಿಲಿನಲ್ಲಿ ಒಣಗಲೋಸುಗ ಇಡುತ್ತಿದ್ದರು. ಇದನ್ನು ಅನೇಕ ಶಿರ್ಡಿ ನಿವಾಸಿಗಳು ಕಣ್ಣಾರೆ ಕಂಡಿರುವರೆಂದು ಹೇಳಿರುತ್ತಾರೆ. ಸಾಮಾನ್ಯವಾಗಿ ಧೋತಿ ಯೋಗವೆಂದರೆ, ೩ ಅಂಗುಲ ಅಗಲ, ೨೨ ೧/೨ ಅಂಗುಲ ಉದ್ದವಾದ ಬಟ್ಟೆಯನ್ನು ಒದ್ದೆಮಾಡಿ ಗಂಟಲನ ಮೂಲಕ ಉದರಕ್ಕೆ ತುರಕಿ, ಸುಮಾರು ಅರ್ಧ ಗಂಟೆಯವರೆಗೆ ಅದನ್ನು ಅಲ್ಲಿರಿಸಿದ ನಂತರ ಹೊರಕ್ಕೆ ತೆಗೆದು ಒಣ ಹಾಕುವುದು. ಆದರೆ ಬಾಬಾರವರ ಧೋತಿಯೋಗವೇ ವಿಚಿತ್ರವಾಗಿದ್ದಿತು.

(೨) ಖಂಡ ವಿಧಾನ: ಈ ಯೋಗ ಸಾಧನೆಯಲ್ಲಿ ಬಾಬಾರವರು ಕೈಕಾಲುಗಳನ್ನು ದೇಹದಿಂದ ಬೇರ್ಪಡಿಸಿ ಬೇರೆ ಬೇರೆ ಕಡೆಗೆ ಇಡುತ್ತಿದ್ದರು. ಒಂದು ಸಾರಿ ಅವರು ಈ ಯೋಗ ಸಾಧನೆಯಲ್ಲಿ ನಿರತರಾಗಿದ್ದಾಗ ಒಬ್ಬನು ಇದನ್ನು ನೋಡಿ ಆಶ್ಚರ್ಯಗೊಂಡನು. ಬಾಬಾರವರನ್ನು ಯಾರೋ ಕೊಲೆ ಮಾಡಿದ್ದಾರೆ ಎಂದು ಭಾವಿಸಿ ಹಳ್ಳಿಯವರಿಗೆ ಈ ಸಂಗತಿ ತಿಳಿಸಬೇಕೆಂದು ನಿಶ್ಚಯಿಸಿಕೊಂಡನು. ನಂತರ ಈ ವಿಷಯವನ್ನು ತಿಳಿಸಿದರೆ ತನ್ನ ಮೇಲೆಯೇ ಅಪವಾದ ಬರಬಹುದು ಎಂದು ಭಾವಿಸಿ ಭೀತಿಯಿಂದ ಸುಮ್ಮನಾದನು. ಮಾರನೇ ದಿನ ಮಸೀದಿಗೆ ಹೋದಾಗ ಬಾಬಾ ಎಂದಿನಂತೆ ಇರುವುದನ್ನು ಕಂಡು ದಿಗ್ಭ್ರಾಂತನಾದನು.

ಬಾಬಾರವರು ಚಿಕ್ಕನಿಂದಿನಿಂದಲೇ ಈ ತರಹದ ಯೋಗಾಭ್ಯಾಸವನ್ನು ಮಾಡುತ್ತಿದ್ದರು. ಅವರು ಇಷ್ಟೊಂದು ಪ್ರಾವೀಣ್ಯತೆಯನ್ನು ಹೇಗೆ ಸಂಪಾದಿಸಿದರೆಂಬುದು ಯಾರಿಗೂ

ತಿಳಿಯದ ವಿಷಯ. ಅವರು ರೋಗಗಳನ್ನು ಗುಣಪಡಿಸಿದುದಕ್ಕೆ ಯಾವದೊಂದು ಪ್ರತಿಫಲವನ್ನೂ ಪಡೆಯುತ್ತಿರಲಿಲ್ಲ. ಹೀಗಾಗಿ ಅವರು ಬಹಳ ಜನಪ್ರಿಯರಾದರು. ಯಾವಾಗಲೂ ಜನಸೇವೆಯಲ್ಲಿ ನಿರತರಾಗಿದ್ದರು. ಈ ಕೆಳಗಿನ ಕತೆಯಿಂದ ಬಾಬಾರವರ ಸರ್ವಜ್ಞತ್ವ ಮತ್ತು ದಯೆ ವೇದ್ಯವಾಗುತ್ತದೆ.

## ಸರ್ವಜ್ಞಮತ್ತು ದಯೆ

ಅಂದು ದೀಪಾವಳಿ ಹಬ್ಬ. ಬಾಬಾರವರು ಎಂದಿನಂತೆ ಧುನಿಯ ಮುಂದೆ ಕುಳಿತು ಕಾಯಿಸಿಕೊಳ್ಳುತ್ತಿದ್ದರು. ಧುನಿಯಲ್ಲಿ ಅಗ್ನಿದೇವನು ಕಾಂತಿಯುತವಾಗಿ ಬೆಳಗುತ್ತಿದ್ದನು. ಕಾಷ್ಟವನ್ನು ಧುನಿಯಲ್ಲಿ ಹಾಕುತ್ತ ತಮ್ಮ ಕೈಗಳನ್ನೂ ಸಹ ಅಗ್ನಿಯಲ್ಲಿಟ್ಟರು. ಅಗ ಬಾಬಾರವರ ತೋಳೆಲ್ಲವೂ ಸುಟ್ಟು ಗಾಯವಾಯಿತು. ಇದನ್ನು ಸೇವಕನಾದ ಮಾಧವ ಮತ್ತು ಮಾಧವರಾವ ದೇಶಪಾಂಡೆ ಕಣ್ಣಾರೆ ಕಂಡು ಅವರ ಹತ್ತಿರ ಹೋಗಿ "ಬಾಬಾ, ಇದೇನು ಮಾಡಿದಿರಿ?" ಎಂದು ಪ್ರಶ್ನಿಸಿದರು. ಆಗ ಬಾಬಾರವರು "ಅಕ್ಕಸಾಲಿಗನೋರ್ವನ ಪತ್ನಿ ತಿದಿಯೊತ್ತುತ್ತಾ ಕೆಲಸ ಮಾಡುತ್ತಿದ್ದಳು. ಅವಳ ಪತಿಯು ಕರೆದಿದ್ದುದರಿಂದ ಮಗುವನ್ನು ಅಲ್ಲಿಯೇ ಬಿಟ್ಟು ಓಡಿಹೋದಳು. ಮಗು ಆಟವಾಡುತ್ತ ಅಗ್ನಿಯೊಳಗೆ ಕೈಯಿಟ್ಟಿತು. ಆ ಮಗುವನ್ನು ರಕ್ಷಿಸಲೋಸುಗ ಕೂಡಲೇ ಈ ರೀತಿ ಮಾಡಿದೆನು. ನನ್ನ ಕರಗಳು ಬೆಂದರೂ ಪರವಾಗಿಲ್ಲ; ಆ ಮಗು ಬದುಕಿಕೊಂಡಿತಲ್ಲ. ಅದೇ ನನಗೆ ಸಂತೋಷ" ಎಂದರು.

## ಕುಷ್ಠ ಭಕ್ತನ ಸೇವೆ

ಬಾಬಾರವರು ಕೈಸುಟ್ಟುಕೊಂಡ ಘಟನೆ ನಡೆದ ಕೂಡಲೇ, ಮಾಧವರಾವ ದೇಶಪಾಂಡೆ ಮತ್ತು ನಾನಾಸಾಹೇಬ ಚಾಂದೋರಕರವರು ಮುಂಬಯಿಯ ಪ್ರಸಿದ್ಧ ವೈದ್ಯರಾದ ಶ್ರೀ

ಪರಮಾನಂದರವರಿಂದ ಅವರನ್ನು ಚಿಕಿತ್ಸೆ ಮಾಡಿಸಿಕೊಳ್ಳುವಂತೆ ಬೇಡಿದರು. ಆದರೆ ಅವರು ಅದಕ್ಕೆ ಸಮ್ಮತಿಸಲಿಲ್ಲ. ಕೈಸುಟ್ಟಿಕೊಂಡಾಗಿನಿಂದ ಕುಷ್ಠರೋಗಿಯಾದ ಭಾಗೋಜಿ ಸಿಂಧೆ ಅವರೇ ಅವರ ಉಪಚಾರ ಮಾಡುತ್ತಿದ್ದರು. ಅವರು ಪ್ರತಿದಿನವೂ ದಹಿಸಲ್ಪಟ್ಟ ಜಾಗಕ್ಕೆ ತುಪ್ಪವನ್ನು ಸವರಿ ನೀವಿ ಆದರ ಮೇಲೆ ಹಸಿರು ಎಲೆಯಿಟ್ಟು ಬಟ್ಟೆ ಕಟ್ಟುತ್ತಿದ್ದರು. ನಾನಾಸಾಹೇಬ ಚಾಂದೋರಕರ ಅವರೂ ಮತ್ತು ಡಾ. ಪರಮಾನಂದ ಅವರೂ ಎಷ್ಟು ಸಾರೆ ವಿನಂತಿಸಿದರೂ ಬಾಬಾ ಚಿಕಿತ್ಸೆಗೆ ಸಮ್ಮತಿಸಲೇ ಇಲ್ಲ. ಪ್ರತಿದಿನವೂ ಭಾಗೋಜಿ ಅವರೇ ಸೇವೆ ಮಾಡುತ್ತಿದ್ದರು. ಸ್ವಲ್ಪ ದಿನಗಳ ನಂತರ ಬಾಬಾರವರ ಸಮಾಧಿಂದು ತನಕ ಬಾಗೋಜಿಯವರೇ ತೋಳುಗಳಿಗೆ ತುಪ್ಪ ಸವರಿ ನೀವುತ್ತಿದ್ದರು. ಬಾಬಾ ಅವರು ಸ್ವಯಂಸಿದ್ಧರಾಗಿದ್ದರು. ಭಾಗೋಜಿಯವರ ಮೇಲಿನ ಮಮತೆಯಿಂದ ಅವರ ಸೇವೆಯನ್ನು ಸ್ವೀಕರಿಸುತ್ತಿದ್ದರು. ಭಾಗೋಜಿಯವರು ಪೂರ್ವಜನ್ಮದಲ್ಲಿ ಪಾಪಿಷ್ಠರಾಗಿದ್ದರು. ಆದ್ದರಿಂದ ಅವರು ಕುಷ್ಠರೋಗಿಯಾಗಿದ್ದುದು. ಸಿಂಧೆ ಬಾಹ್ಯದಲ್ಲಿ ಜಿಗುಪ್ಸೆಯಿಂದಲೂ ಅಂತರಂಗದಲ್ಲಿ ಸಂತೋಷಭರಿತರಾಗಿದ್ದರು. ಬಾಬಾ ಅವರ ನಿತ್ಯ ಸೇವೆಯ ಅವಕಾಶ ದೊರಕಿದುದು ಅವರ ಅದೃಷ್ಟವೇ ಸರಿ!

## ಕುಮಾರ ಖಾಪರ್ಡೆ ಅವರಿಗೆ ಪ್ಲೇಗ

ಇದೊಂದು ಬಾಬಾರವರ ಅತ್ಯಾಶ್ಚರ್ಯಕರವಾದ ಲೀಲೆ. ದಾದಾಸಾಹೇಬ ಅವರ ಧರ್ಮಪತ್ನಿ ಶ್ರೀಮತಿ ಖಾಪರ್ಡೆಯವರು ಕೆಲವು ದಿನಗಳ ಕಾಲ ತಮ್ಮ ಮಗನೊಂದಿಗೆ ಶಿರ್ಡಿಯಲ್ಲಿ ತಂಗಿದ್ದರು. ಅವನಿಗೆ ಮೊದಮೊದಲು ಜ್ವರಬಂದು ಬ್ಯುಬೋನಿಕ್ ಪ್ಲೇಗ ಅಂಟಿಕೊಂಡಿತು. ತಾಯಿಯಾದ ಶ್ರೀಮತಿ ಖಾಪರ್ಡೆಯವರು ಬಹಳ ಹೆದರಿಕೊಂಡು ಕಂಗೆಟ್ಟರು. ಅವರು ಅಮರಾವತಿಗೆ

ಹಿಂತಿರುಗಲೋಸುಗ ಬಾಬಾರವರ ಅಪ್ಪಣೆ ಪಡೆಯಲು ಬಂದು ಈ ವಿಷಯವನ್ನು ತಿಳಿಸಿದರು. ಆಗ ಬಾಬಾರವರು ದಯಾಪೂರಿತ ದೃಷ್ಟಿಯಿಂದ ಮೃದುವಾಗಿ "ಗಗನವನ್ನು ಕಾರ್ಮೋಡವು ಆವರಿಸಿಕೊಂಡಿದೆ, ಆದರೆ ಅದು ಹಾಗೆಯೇ ಇರಲಾರದು; ಕ್ರಮೇಣ ಕರಗಿ ಗಗನವು ಸ್ವಚ್ಛವಾಗುತ್ತದೆ" ಎಂದು ಹೇಳುತ್ತ, ತಮ್ಮ ಕಫನಿ (ನಿಲುವಂಗಿ)ಯನ್ನು ಮೇಲಕ್ಕೆತ್ತಿ ತಮಗೆ ಆಗಿದ್ದ ಮೂರು ಗಂಟುಗಳನ್ನು ತೋರಿಸಿ, "ನೋಡು ನಾನು ಭಕ್ತರಿಗೋಸುಗ ಕಷ್ಟವನ್ನನುಭವಿಸಬೇಕಾಗಿದೆ; ಅವರ ಕಷ್ಟಗಳೆಲ್ಲವೂ ನನ್ನವು" ಎಂದರು. ಈ ಒಂದು ಏಕೈಕವಾದ ಮತ್ತು ಆಶ್ಚರ್ಯಕರವಾದ ಲೀಲೆಯನ್ನು ನೋಡಿ ಅಲ್ಲಿ ನೆರೆದಿದ್ದ ಜನಸ್ತೋಮವು ಸಂತರು ಹೇಗೆ ತಮ್ಮ ಭಕ್ತರಿಗೋಸುಗ ಕಷ್ಟವನ್ನನುಭವಿಸುತ್ತಾರೆ ಎಂಬುದನ್ನು ಮನಗಂಡಿತು.

ಸಂತರ ಮನಸ್ಸು ಮೇಣದ ಹಾಗೆ ಮೃದುವಾಗಿರುತ್ತದೆ. ಮೇಲಾಗಿ ಸದು ಬೆಣ್ಣೆಯು ಹಾಗೆ ಒಳಗೂ ಹೊರಗೂ ಮೃದುವಾಗಿರುತ್ತದೆ. ಅವರು ತಮ್ಮ ಭಕ್ತರನ್ನು ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ಪ್ರೀತಿಸುತ್ತಾರೆ ಮತ್ತು ಅವರನ್ನು ತಮ್ಮ ಸ್ವಂತ ಶಿಶುಗಳಂತೆ ಕಾಪಾಡುತ್ತಾರೆ.

## ಪಂಢರಪುರದ ಯಾತ್ರೆ

ಇನ್ನು ಶ್ರೀ ಸಾಯಿಬಾಬಾರವರು ತಮ್ಮ ಭಕ್ತರನ್ನು ಹೇಗೆ ಪ್ರೀತಿಸುತ್ತಿದ್ದರು, ಅವರ ಆಶೆ–ಆಕಾಂಕ್ಷೆಗಳನ್ನು ಹೇಗೆ ಈಡೇರಿಸುತ್ತಿದ್ದರು ಎಂಬುದನ್ನು ಈ ಘಟನೆಯಲ್ಲಿ ಮನಗಾಣುವಿರಿ.

ಖಾನಾದೇಶದಲ್ಲಿಯ ನಾಂದುರಬಾರದ ಮಾಮಲೇದಾರರಾದ ಶ್ರೀ ನಾನಾ ಸಾಹೇಬ ಚಾಂದೋರಕರ ಬಾಬಾರವರ ಪರಮ

ಭಕ್ತರು. ಅವರಿಗೆ ಪಂಢರಪುರಕ್ಕೆ ವರ್ಗವಾದ ಹುಕುಂ ಬಂದಿತ್ತು. ನಿಜವಾಗಿಯೂ ಭಕ್ತನ ಅಪರಿಮಿತವಾದ ಭಕ್ತಿಗೆ ಬಾಬಾ ಮೆಚ್ಚಿದವರಷ್ಟೆ. ಏಕೆಂದರೆ ಭೂವೈಕುಂಠವಾದ ಪಂಢರಪುರದಲ್ಲಿ ನೆಲೆಸಲು ಸಿಕ್ಕಿದ ಅವಕಾಶಕ್ಕಿಂತ ಮಿಗಿಲಾದುದೇನಿದೆ? ಅವರು ತಕ್ಷಣದಲ್ಲಿಯೇ ಕೆಲಸದ ಪರಭಾರೆ ವಹಿಸಬೇಕಾಗಿದ್ದುದರಿಂದ ಕೂಡಲೇ ಪ್ರಯಾಣ ಬೆಳೆಸಿದರು. ಶಿರ್ಡಿಗೆ ಸಮಾಚಾರ ತಿಳಿಸಲಿಲ್ಲ. ಅವರು ಯಾರಿಗೂ ತಿಳಿಯದಂತೆ ತಕ್ಷಣವೇ ಶಿರ್ಡಿಗೆ ಸಮಾಚಾರ ತಿಳಿಸಲಿಲ್ಲ. ಅವರು ಯಾರಿಗೂ ತಿಳಿಯದಂತೆ ತಕ್ಷಣವೇ ಶಿರ್ಡಿಗೆ ಹೋಗಿ ಬಾಬಾರವರ ದರ್ಶನ ಮಾಡಿಕೊಂಡ ನಂತರ ಪಂಢರಪುರಕ್ಕೆ ಹೋಗಬೇಕೆಂದಿದ್ದರು. ಅವರು ಶಿರ್ಡಿಗೆ ಹೊರಟಿದ್ದು ಯಾರಿಗೂ ತಿಳಿದಿರಲಿಲ್ಲ. ಆದರೆ ಸರ್ವವ್ಯಾಪಿಯೂ ಅಂತರ್ಯಾಮಿಯೂ ಆದ ಶ್ರೀ ಸಾಯಿಬಾಬಾರವರಿಗೆ ತಿಳಿಯದಿರುವದೇನಿದೆ? ನಾನಾಸಾಹೇಬರು ಶಿರ್ಡಿಗೆ ಸ್ವಲ್ಪ ದೂರದಲ್ಲಿಯೇ ಇದ್ದ ನೀಮಗಾಂವ ಸಮೀಪಿಸುತ್ತಿದ್ದ ಕ್ಷಣದಲ್ಲಿಯೇ ಬಾಬಾರವರು ತಮ್ಮ ಜ್ಞಾನ ದೃಷ್ಟಿಯಿಂದ ಅದನ್ನು ಅರಿತು ಮಸೀದಿಯಲ್ಲಿ ಮಹ್ಲಾಳಸಾಪತಿ ಮತ್ತು ಇತರರೊಡನೆ ಸಂಭಾಷಿಸುತ್ತಿರುವಾಗ ತಕ್ಷಣವೇ "ಪಂಢರಪುರದ ಬಾಗಿಲು ತೆರೆದಿದೆ; ಈಗ ನಾವೆಲ್ಲರೂ ಭಜನೆ ಮಾಡೋಣ" ಎಂದರು. ಅನಂತರ "ನಾನು ನನ್ನ ದೇವರ ವಾಸಸ್ಥಾನವಾದ ಪಂಢರಪುರಕ್ಕೆ ಹೋಗಿ ನೆಲೆಸುವೆ" ಎಂದು ಭಜನೆಯನ್ನಾರಂಭಿಸಿದರು.

ಭಕ್ತರೆಲ್ಲರೂ ಜೊತೆಗೂಡಿ ಭಜನೆ ಮಾಡಲು ಆರಂಭಮಾಡಿದರು. ನಾನಾಸಾಹೇಬರು ಕುಟುಂಬ ಸಮೇತ ಬಂದು ಬಾಬಾರವರಿಗೆ ನಮಸ್ಕರಿಸಿ "ಪಂಢರಪುರಕ್ಕೆ ತಾವು ನನ್ನೊಡನೆ ಬರಬೇಕು" ಎಂದು ಪ್ರಾರ್ಥಿಸಿದರು. ಆ ಆಮಂತ್ರಣ ಅನವಶ್ಯಕವಾಗಿತ್ತು. ಏಕೆಂದರೆ ಬಾಬಾರವರು ಈ ಹಿಂದೆಯೇ

ಪಂಢರಪುರಕ್ಕೆ ಹೋಗುವ ಇಚ್ಛೆಯಿಂದ ಭಜನೆಯನ್ನಾರಂಭಿಸಿದ್ದರಷ್ಟೆ. ಇದನ್ನು ಕೇಳಿದ ನಾನಾಸಾಹೆಬರ ಮನಸ್ಸು ಕರಗಿ ಅವರು ಬಾಬಾರವರ ಪಾದಾರವಿಂದಗಳಿಗೆರಗಿದರು. ಅನಂತರ ಅವರ ಆಶೀರ್ವಾದ, ಉಧಿ ತೆಗೆದುಕೊಂಡು ಪಂಢರಪುರಕ್ಕೆ ಪ್ರಯಾಣ ಬೆಳೆಸಿದರು.

**ಶ್ರೀ ಸಾಯಿ ಪ್ರಣಾಮ**

# ೮ನೇ ಅಧ್ಯಾಯ

## ಮಾನವ ಜನ್ಮದ ಮಹತ್ವ- ಸಾಯಿಬಾಬಾರವರ ಭಿಕ್ಷೆ- ಬಾಯಜಾ ಬಾಯಿಯ ಸೇವೆ- ಸಾಯಿಬಬಾರವರ ಶಯನ ಪದ್ಧತಿ –ಖುಶಾಲ ಚಂದರಲ್ಲಿ ಆತ್ಮೀಯತೆ

ಆ ಅಧ್ಯಾಯದಲ್ಲಿ ಹೇಮಾಡಪಂತರು ಮಾನವಜನ್ಮದ ಮಹತ್ವ ವಿವರಿಸಿ ಬಾಬಾರವರ ಆಹಾರಭಿಕ್ಷೆ, ಬಾಯಜಾಬಾಯಿಯವರು ಹೇಗೆ ಅವರ ಸೇವೆ ಮಾಡುತ್ತಿದ್ದರು, ಬಾಬಾರವರು ರಾತ್ರಿ ವೇಳೆ ಮಸೀದಿಯಲ್ಲಿ ಹೇಗೆ ನಿದ್ರಿಸುತ್ತಿದ್ದರು ಮತ್ತು ಖುಶಲಚಂದರನ್ನು ಹೇಗೆ ಪ್ರೀತಿಸುತ್ತಿದ್ದರು ಎಂಬುದನ್ನು ವಿವರಿಸುತ್ತಾರೆ.

### ಮಾನವ ಜನ್ಮದ ಮಹತ್ವ

ಪ್ರಪಂಚದಲ್ಲಿ (ಸ್ವರ್ಗ, ಮರ್ತ್ಯ, ನರಕ, ಪಾತಾಳ, ಸಾಗರ, ಗಗನ ಮತ್ತು ಇನ್ನಿತರ ಲೋಕಗಳೂ ಸೇರಿ) ಆ ಪರಮಾತ್ಮನು ಕೋಟಿಗಟ್ಟಲೆ ಪ್ರಾಣಿಗಳನ್ನೂ ಮತ್ತು ಮಾನವರನ್ನೂ ಸೃಷ್ಟಿಸಿರುತ್ತಾನೆ. ಇವುಗಳಲ್ಲಿ ಪುಣ್ಯವೇ ಪ್ರಧಾನವಾಗಿದ್ದ ಜೀವಿಗಳು ಸ್ವರ್ಗವನ್ನು ಸೇರಿ ತಮ್ಮ ಕರ್ಮದ ಫಲವನ್ನು ಅನುಭವಿಸಿದ ನಂತರ ಮರ್ತ್ಯಲೋಕಕ್ಕೆ ಬರುತ್ತವೆ. ಯಾವುದರಲ್ಲಿ ಪಾಪವೇ ಪ್ರಧಾನವಾಗಿರುವದೋ ಅವು ನರಕಕ್ಕೆ ಹೋಗಿ ತಮ್ಮ ಕರ್ಮಾನುಸಾರ ನರಕಯಾತನೆ ಅನುಭವಿಸುತ್ತವೆ. ಪಾಪ-ಪುಣ್ಯಗಳು ಸಮತೂಗಿದಾಗ ಅವು ಭೂಲೋಕದಲ್ಲಿ ಮಾನವ ಜನ್ಮವನ್ನು ಪಡೆಯುತ್ತವೆ. ಈ ಒಂದು ಜನ್ಮದಲ್ಲಿ ನಮಗೆ ಪರಮಾತ್ಮನು ಮುಕ್ತಿ ಪಡೆಯಲು ಅವಕಾಶ ನೀಡುತ್ತಾನೆ. ಪಾಪ – ಪುಣ್ಯಗಳಿಂದ ಮುಕ್ತರಾದವರಿಗೆ ಮೋಕ್ಷ ದೊರಕುತ್ತದೆ. ಆತ್ಮಗಳು ತಮ್ಮ ಕರ್ಮಾನುಸಾರ ಪುನರ್ಜನ್ಮ ತಾಳುತ್ತವೆ.

## ಮಾನವ ದೇಹದ ಬೆಲೆ

ನಮಗೆ ತಿಳಿದಿರುವಂತೆ ಆಹಾರ, ನಿದ್ರೆ, ಹೆದರಿಕೆ ಮತ್ತು ಲೈಂಗಿಕ ಸಂಬಂಧ ಇವು ನಾಲ್ಕೂ ಸಮಸ್ತ ಸೃಷ್ಟಿಗಳಿಗೂ ಸಾಮಾನ್ಯ. ಆದರೆ ಮಾನವನಿಗೆ ಯಾವ ಜನ್ಮದಲ್ಲಿಯೂ ಸಾಧ್ಯವಾಗದಂತಹ ಆ ಪರಮಾತ್ಮನನ್ನು ಹೊಂದಬಹುದಾದ ವಿಶೇಷವಾದ ಜ್ಞಾನದ ಸೌಲಭ್ಯವಿದೆ. ಆದುದರಿಂದಲೇ ದೇವತೆಗಳಿಗೂ ಕೂಡಾ ಮಾನವನ ಈ ಶಕ್ತಿಯನ್ನು ಕಂಡರೆ ಅಸೂಯೆ!

ಮಲ, ಶ್ಲೇಷ್ಮ, ಅಮ ಮತ್ತು ಕೊಳೆ ಇವುಗಳಿಂದ ಕೂಡಿದ ಮತ್ತು ರೋಗರುಜಿನಗಳಿಗೆ ಬಲಿಯಾಗಿರುವ ಈ ಮಾನವ ಜನ್ಮದಂತಹ ಕೆಟ್ಟ ಜನ್ಮ ಇನ್ನಾವುದಿದೆ ಎಂದು ಕೆಲವರ ಅಭಿಪ್ರಾಯ. ಇದು ಸ್ವಲ್ಪ ಮಟ್ಟಿಗೆ ನಿಜವೇನೋ ಅಹುದು. ಈ ನ್ಯೂನತೆಗಳನ್ನೊಳಗೊಂಡಿದ್ದರೂ ಸಹ ಮಾನವ ಜನ್ಮಕ್ಕೆ ಮಹತ್ವ ಹೆಚ್ಚು. ಏಕೆಂದರೆ ಮಾನವನಿಗೆ ಜ್ಞಾನವನ್ನು ಪಡೆಯುವ ಶಕ್ತಿ ಇದೆ. ಮಾನವನು ಈ ದೇಹದ ಮತ್ತು ಪ್ರಪಂಚದ ತಾತ್ಕಾಲಿಕತೆ, ಇಂದ್ರಿಯ ಭೋಗಗಳಲ್ಲಿ ಜಿಗುಪ್ಸೆ, ಸತ್ಯ ಮತ್ತು ಮಿಥ್ಯದ ಸಾಮ್ಯತೆ ಇವುಗಳನ್ನು ತುಲನೆ ಮಾಡಿ, ಆ ಪರಮಾತ್ಮನನ್ನು ಹೊಂದಲು ಸಹಾಯಕವಾದ ಜ್ಞಾನವನ್ನು ಹೊಂದಬಹುದು. ಮಾನವ ಜನ್ಮ ಮಲಮಯ ಎಂದು ಉದಾಸೀನರಾದರೆ ಆ ಪರಮಾತ್ಮನನ್ನು ಹೊಂದುವ ಸೌಲಭ್ಯ ಕಳೆದುಕೊಳ್ಳುತ್ತಾರೆ. ಇಂದ್ರಿಯ ಸುಖೋಪಭೋಗಗಳೇ ಲೇಸೆಂದು ಅತ್ತ ಕಡೆಗೆ ಮನಹರಿಸಿದರೆ ನರಕದ ಬಾಗಿಲು ಕಾದಿರುತ್ತದೆ. ಆದುದರಿಂದ ನಾವು ಕುದುರೆಯ ಮೇಲೆ ಕುಳಿತಿರುವ ಸವಾರನು ತಮ್ಮ ಗುರಿಯನ್ನು ಮುಟ್ಟಿ ಹಿಂತಿರುಗುವ ತನಕ ತನ್ನ ಕುದುರೆಯನ್ನು ಹೇಗೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾನೆಯೋ ಅದೇ ರೀತಿಯಲ್ಲಿ ನಾವು ನಮ್ಮ ದೇಹವನ್ನು ಕಾಪಾಡಬೇಕು. ಈ ಮಾನವ ಜನ್ಮದಲ್ಲಿ

ಪರಮಾತ್ಮನನ್ನು ಕಾಣಲು ಅನುಕೂಲವಾಗುವಂತಹ ಆತ್ಮಜ್ಞಾನವನ್ನು ಪಡೆಯಲು ಶ್ರಮಿಸಬೇಕು.

ಪರಮಾತ್ಮನು ಅನೇಕ ಪ್ರಾಣಿಗಳನ್ನು ಸೃಷ್ಟಿಸಿದ ನಂತರವೂ ಸಹ ತೃಪ್ತನಾಗಲಿಲ್ಲ. ಕಾರಣವೇನೆಂದರೆ, ತನ್ನ ಕೆಲಸವನ್ನು ಹೊಗಳುವಂತಹ ಯೋಗ್ಯತೆ ಯಾವ ಪ್ರಾಣಿಗಳಿಗೂ ಸಹ ಇರಲಿಲ್ಲ. ಆದುದರಿಂದ ಅವನು ಬೇರೊಂದು ಜೀವವನ್ನು ಸೃಷ್ಟಿಸಬೇಕಾಯಿತು. ಅದಕ್ಕೆ ವಿಶೇಷವಾದ ಜ್ಞಾನ ಬಲವನ್ನು ಕೊಟ್ಟನು. ಈ ಹೊಸ ಸೃಷ್ಟಿಯೇ ಮಾನವ. ಆಗ ಮಾನವನಿಗೆ ತನ್ನ ಲೀಲೆಯನ್ನು ಹೊಗಳುವಂತಹ ಶಕ್ತಿ ಇದೆ ಎಂದು ತೃಪ್ತಿ ಹೊಂದಿದನು. ಆದುದರಿಂದ ಮಾನವ ಜನ್ಮವನ್ನು ಹೊಂದುವುದೇ ದುರ್ಲಭ ಹಾಗೆ ಹೊಂದಿದ್ದರೆ ನಿಜಕ್ಕೂ ಅದೃಷ್ಟವೆನ್ನಬಹುದು.

ಎಲ್ಲಕ್ಕಿಂತಲೂ ಶ್ರೇಷ್ಠವಾದುದು, ಬಾಬಾರವರ ಚರಣಾರವಿಂದಗಳಿಗೆ ಸೇವೆ ಸಲ್ಲಿಸುವ ಸೌಲಭ್ಯ ದೊರಕಿರುವುದು.

## ಮಾನವನ ಕರ್ತವ್ಯ

ಮಾನವ ಜನ್ಮವು ಅಮೂಲ್ಯವಾದುದು! ಹುಟ್ಟಿದ ಮೇಲೆ ಸಾವು ಖಂಡಿತ ಎಂಬುದನ್ನು ಅರಿತ ಮೇಲೆ ನಾವು ನಮ್ಮ ಜೀವನದ ಗುರಿಯನ್ನು ಮುಟ್ಟಲು ಯಾವಾಗಲೂ ಹಾತೊರೆಯುತ್ತಿರಬೇಕು. ನಮ್ಮ ಶಕ್ತಿ ಮೀರಿ ಶ್ರಮಿಸಬೇಕು. ಸೋಮಾರಿತನ, ಅಲಸ್ಯ, ಇವುಗಳನ್ನು ತಳ್ಳಿ ಜಡತನವನ್ನು ತ್ಯಜಿಸಿ, ಹಗಲಿರುಳೂ ನಾವು ಪರಮಾತ್ಮನನ್ನು ಕುರಿತು ಧ್ಯಾನಿಸಬೇಕು. ಇದನ್ನು ಮಾಡದಿದ್ದಲ್ಲಿ, ಮಾನವನು ಕಾಡು ಪ್ರಾಣಿಗಳಿಗಿಂತಲೂ ಕೀಳಾಗುತ್ತಾನೆ.

# ಸಾಧು ಸಂತರ ಆಶ್ರಯ

ನಿಮ್ಮ ಗುರಿಯನ್ನು ಬೇಗನೆ ಸಾಧಿಸಬೇಕಾದರೆ, ಆ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿರತಕ್ಕ ಸಾಧು-ಸಂತರನ್ನು ಆಶ್ರಯಿಸಬೇಕು. ಧಾರ್ಮಿಕ ಪುರಾಣ ಕೇಳುವುದರಿಂದಲೂ ಧಾಮಿಕ ಗ್ರಂಥಗಳನ್ನು ಪಠಿಸುವದರಿಂದಲೂ, ಯಾವುದನ್ನು ಪಡೆಯಲು ಅಸಾಧ್ಯವೋ, ಅಂತಹದನ್ನು ಈ ಪವಿತ್ರ ಆತ್ಮಗಳ ಸ್ನೇಹದಿಂದ ಪಡೆಯಬಹುದು. ಹೇಗೆ ದಿನಕರನು ಸಮಸ್ತ ತಾರಾಗಣಗಳ ಕಾಂತಿಗಿಂತ ಮಿಗಿಲಾದ ಬೆಳಕನ್ನು ಕೊಡಬಲ್ಲನೋ, ಹಾಗೆ ಸದ್ಗುರುವು ಸಮಸ್ತ ಧಾರ್ಮಿಕ ಗ್ರಂಥಗಳು ನೀಡಬಹುದಾದುಕ್ಕಿಂತ ಮಿಗಿಲಾದ ಪಾರಮಾರ್ಥಿಕ ಜ್ಞಾನವನ್ನು ನೀಡಬಲ್ಲನು. ಅವನ ಚಲನವಲನಗಳೇ ನಮಗೆ ಮೃದುವಾದ ಮಾರ್ಗದರ್ಶನ ನೀಡುತ್ತವೆ. ಕ್ಷಮೆ, ತಾಳ್ಮೆ, ದಯೆ, ದಾನ, ಧರ್ಮ, ಇಂದ್ರಿಯನಿಗ್ರಹಶಕ್ತಿ ಇವುಗಳನ್ನು ಗುರುವು ಅಭ್ಯಾಸ ಮಾಡುವಾಗಲೆ ಶಿಷ್ಯರು ಅದನ್ನು ಪಾಲಿಸುತ್ತಿರುತ್ತಾರೆ. ಇದು ಅವರ ಮನಸ್ಸನ್ನು ಪಾರಮಾರ್ಥಿಕ ಜ್ಞಾನದೆಡೆಗೆ ಕೊಂಡೊಯ್ಯುತ್ತದೆ. ಶ್ರೀ ಸಾಯಿಬಾಬಾರವರು ಇಂತಹ ಒಬ್ಬ ಸಂತ ಸದ್ಗುರು. ಅವರು ಬಾಹ್ಯದಲ್ಲಿ, ಫಕೀರರಾಗಿ ಕಂಡರೂ ಯಾವಾಗಲೂ ಆತ್ಮದಲ್ಲಿ ತಲ್ಲೀನರಾಗಿರುತ್ತಿದ್ದರು. ಪರಮಾತ್ಮನನ್ನು ಅಥವಾ ದೈವತ್ವವನ್ನು ಕಾಣಬಹುದಾದ ಎಲ್ಲ ವಸ್ತುಗಳನ್ನು ಬಾಬಾ ಪ್ರೀತಿಸುತ್ತಿದ್ದರು. ಸಂತೋಷದಿಂದ ಅವರು ಉಬ್ಬುತ್ತಿರಲಿಲ್ಲ. ಅನಾದೃತವೆಂದು ಕುಗ್ಗುತ್ತಿರಲಿಲ್ಲ. ಧನಿಕನಾಗಲಿ ಭಿಕಾರಿಯಾಗಲಿ ಇಬ್ಬರೂ ಅವರಿಗೆ ಒಂದೇ. ತಮ್ಮ ದೃಷ್ಟಿಮಾತ್ರದಿಂದಲೇ ಭಿಕಾರಿಯನ್ನು ಧನಿಕನನ್ನಾಗಿ ಪರಿವರ್ತಿಸುವ ಪ್ರತಿಭೆಯಿತ್ತು. ಅಂತಹ ಬಾಬಾ ಶಿರ್ಡಿಯ ಪ್ರತಿಮನೆಯ ಬಾಗಿಲಿಗೂ ಹೋಗಿ ಭಿಕ್ಷೆ ಬೇಡುತ್ತಿದ್ದರು. ಅದು ಹೇಗೆಂಬುದನ್ನು ಈಗ ನೋಡೋಣ.

## ಬಾಬಾರವರ ಭಿಕ್ಷೆ

"ಅಮ್ಮಾ – ನನಗೆ ಒಂದು ಚೂರು ರೊಟ್ಟಿ ನೀಡುವಿರಾ?" ಎಂದು ಬಾಬಾ ಪ್ರತಿಮನೆಯ ಬಾಗಿಲಿಗೆ ಹೋಗಿ ಭಿಕ್ಷೆ ಬೇಡುತ್ತಿದ್ದರು. ಬಾಬಾರವರಿಗೆ ನೀಡಿದವರೇ ಧನ್ಯರು! ಅವರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು, ಜೋಳಿಗೆಯನ್ನು ಸಿಕ್ಕಿಸಿಕೊಂಡು, ಪ್ರತಿಮನೆಯ ಬಾಗಿಲಿಗೂ ಹೋಗುತ್ತಿದ್ದರು. ಸಾಂಬಾರು, ಪಲ್ಯ, ಮಜ್ಜಿಗೆ, ಸಾರು ಮುಂತಾದವುಗಳನ್ನು ಪಾತ್ರೆಯಲ್ಲಿಯೂ ಅನ್ನ ಮುಂತಾದ ಘಟ್ಟಿ ಪದಾರ್ಥಗಳನ್ನು ಜೋಳಿಗೆಯಲ್ಲಿಯೂ ಹಾಕಿಸಿಕೊಂಡು ಬರುತ್ತಿದ್ದರು. ಅವರಿಗೆ ಆಹಾರ ಪದಾರ್ಥಗಳ ಚಾಪಲ್ಯವಿರಲಿಲ್ಲ. ಕೊನೆಗೆ ಭಿಕ್ಷೆ ಬೇಡಿ ತಂದ ಎಲ್ಲ ಪದಾರ್ಥಗಳನ್ನು ಬೆರೆಸಿ ಮನದಣಿಯುವಂತೆ ತಿನ್ನುತ್ತಿದ್ದರು. (ಒಂದೊಂದು ದಿನ ಮಧ್ಯಾಹ್ನ ೧೨ ಗಂಟೆಯವರೆಗೆ ಭಿಕ್ಷೆ ಬೇಡುತ್ತಿದ್ದರು.) ಅವರು ತಿನ್ನುವಾಗ ನಾಯಿ, ಬೆಕ್ಕು ಕಾಗೆಗಳೂ ಸಹ ಅವರೊಡನೆ ಬಂದು ತಿನ್ನುತ್ತಿದ್ದವು. ಆದರೆ ಬಾಬಾರವರು ಅವುಗಳನ್ನು ಓಡಿಸುತ್ತಿರಲಿಲ್ಲ. ಮಸೀದಿಯನ್ನು ಗುಡಿಸಿ, ಸಾರಿಸುತ್ತಿದ್ದವರೂ ಸಹ ೧೦–೧೨ ರೊಟ್ಟಿ ಚೂರುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಕನಸಿನಲ್ಲಿಯೂ ಸಹ ನಾಯಿ, ಬೆಕ್ಕುಗಳನ್ನು ಹೆದರಿಸಿ ಓಡಿಸದೆ ಇದ್ದ ಬಾಬಾ ಬಡಜನರನ್ನು ಓಡಿಸಬಹುದೆ?' ಶಿರ್ಡಿಯಲ್ಲಿಯ ಜನರು ಇವರನ್ನು ಮೊದಲು ಹುಚ್ಚರೆಂದು ತಿಳಿದಿದ್ದರು. ಪ್ರತಿಮನೆಯ ಬಾಗಿಲಿಗೆ ಹೋಗಿ ಭಿಕ್ಷೆ ಬೇಡಿ ಜೀವಿಸುವವರನ್ನು ಯಾರು ತಾನೆ ಗೌರವಿಸುವರು? ಅವರು ಬಾಹ್ಯದಲ್ಲಿ ಚಂಚಲರಾಗಿದ್ದರೂ, ಅಂತರಂಗದಲ್ಲಿ ಮಹಾಜ್ಞಾನಿಗಳಾಗಿದ್ದರು. ಅವರ ಮಾರ್ಗ ಅದ್ವಿತಿಯವಾಗಿದ್ದಿತು. ಕೆಲವರು ಇವರನ್ನು ಮಹಾಜ್ಞಾನಿಗಳೆಂದು ಗೌರವಿಸುತ್ತಿದ್ದರು. ಇದನ್ನು ಉದಾಹರಿಸುವ ಕಥೆಯೊಂದು ಈ ರೀತಿಯಿದೆ.

## ಬಾಯಜಾಬಾಯಿಯ ಸೇವೆ

ತಾತ್ಯಾ ಕೋತೆಯವರ ಮಾತೆ ಬಾಯಜಾಬಾಯಿಯವರು ಸ್ವಲ್ಪ ರೊಟ್ಟಿ ನೀರು ತೆಗೆದುಕೊಂಡು ಕಾಡಿಗೆ ಪ್ರತಿದಿನವೂ ಹೋಗುತ್ತಿದ್ದರು. ಸ್ವಲ್ಪ ಹೊತ್ತು ಅಲೆದ ನಂತರ ಈ ಫಕೀರರನ್ನು ಸಂಧಿಸುತ್ತಿದ್ದರು. ಹೀಗೆ ಸಂದರ್ಶಿಸಿದ ತಕ್ಷಣ ಅವರಿಗೆ ಎಲೆ ಹಾಕಿ ಊಟಕ್ಕೆ ಬಡಿಸುತ್ತಿದ್ದರು. ನಂತರ ಬಲವಂತ ಮಾಡಿ ಊಟ ಮಾಡಿಸುತ್ತಿದ್ದರು. ನಿಜವಾಗಿಯೂ ಅವರ ನಂಬಿಕೆ, ಸೇವೆ ಅಗಾಧವಾಗಿದ್ದಿತು. ಈ ಸೇವೆಗೆ ಪ್ರತಿಫಲವಾಗಿ ಅವರ ಮಗನಿಗೆ ಬಾಬಾ ಅಮೂಲ್ಯ ಆಶೀರ್ವಾದ ಕೊಟ್ಟರು. ತಾಯಿ ಮತ್ತು ಮಗ ಇಬ್ಬರಿಗೂ ಬಾಬಾರವರೆಂದರೆ ಪಂಚಪ್ರಾಣ. ಬಾಬಾರವರು ಅನೇಕ ಸಾರೆ ಅವರಿಗೆ "ಈ ತಿರುಕನೇ – ದೇವರ ಅವತಾರ" ಎಂದು ಹೇಳುತ್ತಿದ್ದರು. ಸ್ವಲ್ಪ ದಿನಗಳ ನಂತರ ಬಾಬಾರವರು ಕಾಡಿನಲ್ಲಿ ನೆಲೆಸುವುದನ್ನು ಬಿಟ್ಟು ಊರಲ್ಲಿ ಬಂದು ನೆಲಸಿದರು. ನಂತರ ಬಾಯಜಾಬಾಯಿಯವರಿಗೆ ಕಾಡಿನಲ್ಲಿ ಅಲೆಯುವ ಕಷ್ಟ ತಪ್ಪಿತು.

## ತ್ರಿಮೂರ್ತಿಗಳ ಶಯನ

ಯಾರ ಅಂತರಾತ್ಮದಲ್ಲಿ ಪರಮಾತ್ಮನು ವಾಸಿಸುವನೋ ಅಂತಹ ಸಂತರೇ ಧನ್ಯರು. ಇಂತಹ ಸಂತರ ಸತ್ಸಂಗವನ್ನು ಹೊಂದುವ ಮಾನವರು ನಿಜಕ್ಕೂ ಅದೃಷ್ಟಶಾಲಿಗಳೇ ಸರಿ. ತಾತ್ಯಾಕೋತೆ ಮತ್ತು ಭಗತ ಮ್ಹಾಳಸಾಪತಿಯವರು ಸಾಯಿಬಾಬಾರವರ ಸಂಪರ್ಕ ಹೊಂದಿದ್ದರು ಸಾಯಿಬಾಬಾರವರೂ ಸಹ ಅವರಲ್ಲಿ ಅತ್ಯಂತ ಪ್ರೀತಿ ಇಟ್ಟಿದ್ದರು. ಈ ಮೂವರೂ ಒಬ್ಬನು ಪಶ್ಚಿಮಕ್ಕೂ ಮತ್ತೊಬ್ಬನು ಪೂರ್ವಕ್ಕೂ, ಮಗದೊಬ್ಬನು ಉತ್ತರಕ್ಕೂ ತಲೆಮಾಡಿಕೊಂಡು, ಕಾಲುಗಳನ್ನು ಒಂದೆಡೆ ಕೂಡಿಸಿಕೊಂಡು ಮಸೀದಿಯಲ್ಲಿ ಮಲಗುತ್ತಿದ್ದರು. ಅನೇಕ ಸಾರಿ

ಮಧ್ಯ ರಾತ್ರಿಯವರೆಗೂ ಹರಟೆಹೊಡೆಯುತ್ತಾ ನಂತರ ನಿದ್ರಿಸುತ್ತಿದ್ದರು. ಒಬ್ಬನು ನಿದ್ದೆ ಮಾಡಲು ಆರಂಭ ಮಾಡಿದರೆ ಮತ್ತೊಬ್ಬನು ಎಚ್ಚರಗೊಳಿಸುತ್ತಿದ್ದನು. ಉದಾಹರಣೆಗಾಗಿ, ತಾತ್ಯಾ ನಿದ್ರಿಸಿದರೆ ಬಾಬಾರವರು ಕೂಡಲೆ ಎದ್ದು ಅವನನ್ನು ಅಲುಗಾಡಿಸಿ ಎಚ್ಚರಿಸುತ್ತಿದ್ದರು. ಮ್ಹಾಳಸಾಪತಿ ನಿದ್ರಿಸಿದರೆ, ಅವರನ್ನು ಅಮಕಿ ಎಚ್ಚರಿಸುತ್ತಿದ್ದರು. ಈ ರೀತಿ ೧೪ ವರ್ಷಗಳವರೆಗೆ ತಾತ್ಯಾರವರು ತಮ್ಮ ಮನೆಯನ್ನು ಬಿಟ್ಟು ಬಾಬಾರವರೊಡನೆ ಮಸೀದಿಯಲ್ಲಿ ಮಲಗುತ್ತಿದ್ದರು. ಬಾಬಾರವರ ಪ್ರೇಮ ಮತ್ತು ದಯೆ ಇವುಗಳನ್ನು ವಿವರಿಸಲು ಯಾರಿಂದ ಸಾಧ್ಯ? ತಾತ್ಯಾರವರು, ತಮ್ಮ ತಂದೆಯು ಕಾಲವಾದ ನಂತರ ಪ್ರಪಂಚದ ಭಾರ ಹೊರಬೇಕಾಗಿದ್ದುದರಿಂದ ಮನೆಯಲ್ಲಿ ಮಲಗಹತ್ತಿದರು.

## ರಾಹತಾದ ಖುಶಾಲಚಂದ

ಬಾಬಾರವರಿಗೆ ಶಿರ್ಡಿಯ ಗಣಪತ ಕೋತೆಯವರೆಂದರೆ ಬಹಳ ಪ್ರೀತಿ. ರಾಹತಾದ ಚಂದ್ರಭಾನು ಸೇಠರವರೆಂದರೂ ಅಷ್ಟೆ ಪ್ರೀತಿ ಮತ್ತು ಆದರ. ಶ್ರೀ ಸೇಠರವರು ಗತಿಸಿದ ನಂತರ ಅವರ ಸೋದರಿಯ ಮಗನಾದ ಖುಶಾಲಚಂದ ಅವರನ್ನೂ ಅದೇ ರೀತಿ ಪ್ರೀತಿಸುತ್ತಿದ್ದರು. ಅವರ ಯೋಗಕ್ಷೇಮವನ್ನು ಹಗಲು - ರಾತ್ರಿ ಚಿಂತಿಸುತ್ತಿದ್ದರು. ಕೆಲವು ಸಾರೆ ಸಂಗಡಿಗರೊಂದಿಗೆ ಎತ್ತಿನ ಗಾಡಿಯಲ್ಲಿ ಅಥವಾ ಟಾಂಗಾದಲ್ಲಿ ಆಗಾಗ ರಾಹತಾಕ್ಕೆ ಬಂದು ಹೋಗುತ್ತಿದ್ದರು. ರಾಹತಾಕ್ಕೆ ಹೋದಾಗ ಅಲ್ಲಿಯ ಭಕ್ತರು ವಾದ್ಯ, ಮೃದಂಗ ಮೊದಲಾದ ವಾದ್ಯವೈಭವದೊಡನೆ ಬಾಬಾ ಅವರನ್ನು ಸ್ವಾಗತಿಸುತ್ತಿದ್ದರು. ನಂತರ ಊರಿನಲ್ಲಿ ಮೆರವಣಿಗೆ ಮಾಡುತ್ತಿದ್ದರು. ಖುಶಾಲಚಂದರು ಬಾಬಾರವರನ್ನು ಮನೆಗೆ ಕರೆದುಕೊಂಡು ಹೋಗಿ ಆದರಾಥಿತ್ಯ ಮಾಡುತ್ತಿದ್ದರು. ಅಲ್ಲಿ ಸ್ವಲ್ಪ ಕಾಲವಿದ್ದ ನಂತರ ಶಿರ್ಡಿಗೆ ಹಿಂತಿರುಗುತ್ತಿದ್ದರು.

ಶಿರ್ಡಿಯು ರಾಹತಾ ಮತ್ತು ನೀಮಗಾಂವಗಳಗೆ ಸಮದೂರದಲ್ಲಿದೆ. ಬಾಬಾ ತಮ್ಮ ಜೀವಮಾನದಲ್ಲಿ ಈ ಎರಡು ಹಳ್ಳಿಗಳಿಂದಾಚೆ ಹೋಗಿರಲಿಲ್ಲ. ಅವರು ರೈಲು ಬಂಡಿಯನ್ನು ನೋಡಿಯೇ ಇರಲಿಲ್ಲ. ಆದರೂ ಅವು ಬರುವ ಕಾಲ, ಹೊರಡುವ ಕಾಲ –ಎಲ್ಲ ತಿಳಿದಿರುತ್ತಿದ್ದರು. ಶಿರ್ಡಿಯಿಂದ ಹೊರಡುವ ಸಮಯದಲ್ಲಿ ಬಾಬಾ ಅವರ ಆಜ್ಞಾನುಸಾರ ವರ್ತಿಸಿದವರಿಗೆ ಪ್ರಯಾಣ ಸುಗಮವಾಗುತ್ತಿತ್ತು. ಉಳಿದವರಿಗೆ ಎಡರುತೊಡರುಗಳು ಸಾಮಾನ್ಯವಾಗಿ ಸಂಭವಿಸುತ್ತಿದ್ದವು. ಈ ವಿಚಾರವನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ.

**ಶ್ರೀ ಸಾಯಿ ಪ್ರಣಾಮ**

# ೯ನೇ ಅಧ್ಯಾಯ

## ಶಿರ್ಡಿಯಿಂದ ಹೊರಡುವಾಗ ಬಾಬಾರವರ ಅಪ್ಪಣೆಯನ್ನುಲ್ಲಂಘಿಸಿದ ಪರಿಣಾಮ–ದೇವತ್ವ ಮತ್ತು ಅದರ ಅವಶ್ಯಕತೆ – ಭಕ್ತರ ಅನುಭವಗಳು

ಹಿಂದಿನ ಅಧ್ಯಾಯದಲ್ಲಿ, ಬಾಬಾರವರ ಆಜ್ಞೆಯನ್ನು ಮೀರುವುದರ ಪರಿಣಾಮವನ್ನು ವಿವರಿಸಿದ್ದೇನಷ್ಟೆ. ಇದನ್ನು ಈಗ ಈ ಅಧ್ಯಾಯದಲ್ಲಿ ಕೆಲವು ಸೂಕ್ತವಾದ ಉದಾಹರಣೆಗಳಿಂದ ದೃಢಪಡಿಸುತ್ತೇನೆ.

## ಶಿರ್ಡಿಯಾತ್ರೆಯ ಲಕ್ಷಣ

ಶಿರ್ಡಿಯಾತ್ರೆಯ ಒಂದು ವಿಚಿತ್ರ ಲಕ್ಷಣವೇನೆಂದರೆ ಬಾಬಾರವರ ಆಜ್ಞೆ ಇಲ್ಲದೆ ಶಿರ್ಡಿಯನ್ನು ಬಿಟ್ಟು ಯಾರೂ ಹೊರಡುವಂತಿಲ್ಲ. ಹಾಗೆ ಹೊರಟರೆ ಭಕ್ತರಿಗೆ ಕಷ್ಟಗಳು ಸಂಭವಿಸುತ್ತಿದ್ದವು ಮತ್ತು ಬಾಬಾರವರ ಆಜ್ಞೆಯ ನಂತರ ಅಲ್ಲಿ ಇರಲೂ ಸಹ ಆಗುತ್ತಿರಲ್ಲ. ಭಕ್ತರು ಶಿರ್ಡಿ ಬಿಟ್ಟು ಹೊರಡುವಾಗ ಬಾಬಾರವರು ಅವರಿಗೆ ಉಪದೇಶ ನೀಡುತ್ತಿದ್ದರು. ಅವರು ಅದರಂತೆ ನಡೆದುಕೊಂಡರೆ ಒಳಿತು. ನಡೆಯದೇ ಇದ್ದವರಿಗೆ ಅನಾಹುತಗಳು ತಪ್ಪಿರಲಿಲ್ಲ. ಇಂತಹ ಕೆಲವು ಘಟನೆಗಳು ಈ ಕೆಳಕಂಡಂತೆ ಇವೆ.

## ತಾತ್ಯಾ ಕೋತೆ ಪಾಟೀಲ

ತಾತ್ಯಾ ಕೋತೆ ಪಾಟೀಲ ಒಂದು ದಿನ ಕೋಪರಗಾಂವದ ಪೇಟೆಗೆ ಹೋಗುವವರಿದ್ದರು. ಹಾಗೆ ಹೋಗುತ್ತಿರುವಾಗ ಅವಸರದಲ್ಲಿ ಮಸೀದಿಗೆ ಬಾಬಾ ಅವರಿಗೆ ನಮಸ್ಕರಿಸಲು ಬಂದರು. ಆಗ ಬಾಬಾರವರು "ಅವಸರವೇಕೆ? ಸ್ವಲ್ಪ ತಾಳು; ಈಗ

ಹೋಗಬೇಡ" ಎಂದರು. ಆದರೆ ಅವರು ಕೂಡಲೆ ಹೋಗಲೇಬೇಕೆಂದಾಗ ಶ್ಯಾಮನನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಲು ಹೇಳಿದರು. ಇದನ್ನು ಲಕ್ಷಿಸದೆ ತಾತ್ಯಾ ಟಾಂಗಾದಲ್ಲಿ ಹೊರಟರು. ಸಾವುಲ್ ಬಾವಿ ದಾಟುತ್ತಲೇ ಅವರ ಕುದುರೆಯು ಜೋರಾಗಿ ಓಡಲು ಆರಂಭ ಮಾಡಿದ್ದುದರಿಂದ ಟಾಂಗಾ ನಡುವಿನಲ್ಲಿ ಉರುಳಿ ಕೆಳಗೆ ಬಿದ್ದಿತು. ಆದರೆ ತಾತ್ಯಾರವರಿಗೆ ಹೆಚ್ಚಿಗೆ ಅಪಾಯವಾಗಲಿಲ್ಲ. ಸಾಯಿಬಾಬಾರವರ ಮಾತು ನೆನಪಾಯಿತು. ಮತ್ತೊಂದು ಸಂದರ್ಭದಲ್ಲಿ ಕೋಲ್ಹಾರ ಎಂಬ ಹಳ್ಳಿಗೆ ಹೋಗುತ್ತಿರುವಾಗ ಬಾಬಾರವರ ಮಾತನ್ನು ತಾತ್ಯಾ ಮೀರಿದುದರಿಂದ ಇದೇ ತರಹದ ಪರಿಸ್ಥಿತಿಯೊದಗಿತು.

## ಯುರೋಪಿಯನ್ ಗ್ರಹಸ್ಥ

ನಾನಾಸಾಹೇಬರಿಂದ ಪರಿಚಯಪತ್ರ ಪಡೆದು, ಓರ್ವ ಯುರೋಪಿಯನ್ನನು ಬಾಬಾರವರನ್ನು ಕಾಣಲೋಸುಗ ಶಿರ್ಡಿಗೆ ಬಂದನು. ಅವನು ಒಂದು ತಂಬುವಿನಲ್ಲಿ ಇಳಿದುಕೊಂಡನು. ಬಾಬಾರವರ ಮುಂದೆ ನಮಸ್ಕರಿಸಿ ಅವರ ಕರಗಳನ್ನು ಮುತ್ತಿಡಲು ಹಾತೊರೆಯುತ್ತ ಮಸೀದಿಯೊಳಗೆ ಬರಲು ಅವನು ಮೂರು ಬಾರಿ ಪ್ರಯತ್ನಿಸಿದನು. ಬಾಬಾರವರು ಅನುಮತಿ ನೀಡಲಿಲ್ಲ. ಮಸೀದಿಯ ಅಂಗಳದಲ್ಲಿ ಕುಳಿತು ದರ್ಶನ ಪಡೆಯುವಂತೆ ಆಜ್ಞೆಯಾಯಿತು. ಇದು ಅವನಿಗೆ ಸರಿಬೀಳಲಿಲ್ಲ. ಕೂಡಲೆ ಹಿಂತಿರುಗಲು ಮನಸ್ಸು ಮಾಡಿ ಹೊರಡಲು ಬಾಬಾರವರ ಅನುಮತಿ ಬೇಡಿದನು. ಆಗ ಬಾಬಾ "ಇಂದು ಬೇಡ, ಅವಸರವೇಕೆ" ಎಂದರು. ಅಲ್ಲಿದ್ದವರೆಲ್ಲರೂ ಬಾಬಾರವರ ಮಾತನ್ನು ಉಲ್ಲಂಘಿಸಬಾರದೆಂದು ಅವನಿಗೆ ಹೇಳಿದರು. ಆದರೂ ಅದನ್ನು ಲಕ್ಷಿಸದೆ ಅವನು ಟಾಂಗಾ ಹತ್ತಿದನು. ಮೊದಲು ಮೊದಲು ಕುದುರೆಗಳು ಚೆನ್ನಾಗಿ ಓಡುತ್ತಿದ್ದವು. ಸಾವುಲ್‌ಬಾವಿ ಸಮೀಪಿಸಿದಾಗ

ಎದುರಿಗೆ ಬರುತ್ತಿದ್ದ ಸೈಕಲನ್ನು ಕಂಡು ಅವು ಜೋರಾಗಿ ಓಡಲು ಸುರು ಮಾಡಿದವು. ಟಾಂಗಾ ತಲೆಕೆಳಗಾಯಿತು. ಯುರೋಪಿಯನ್ನನು ಕೆಳಗೆ ಬಿದ್ದನು. ಅವನನ್ನು ಕೂಡಲೆ ಕೊಪರ್‌ಗಾಂವ ಆಸ್ಪತ್ರೆಗೆ ಸಾಗಿಸಲಾಯಿತು. ಈ ರೀತಿಯಾದ ಅನುಭವಗಳು ಬಾಬಾರವರ ಮಾತನ್ನು ಜನರು ಮೀರದಂತೆ ಮಾಡಿದವು.

## ಭಿಕ್ಷೆಯ ಅವಶ್ಯಕತೆ

ಈಗ ಭಿಕ್ಷೆಯ ಪ್ರಶ್ನೆಯನ್ನು ನೋಡೋಣ. ಬಾಬಾರವರು ಅಂತಹ ಮಹಾಯೋಗಿ, ದೈವಿಕತೆಯ ಅಂಶವೇ ಆಗಿದ್ದರೆ ತಮ್ಮ ಜೀವಮಾನದಲ್ಲೆಲ್ಲ ಭಿಕ್ಷೆ ಏಕೆ ಬೇಡುತ್ತಿದ್ದರು ಎಂಬ ಪ್ರಶ್ನೆ ಕೆಲವರ ಮನಸ್ಸಿನಲ್ಲಿ ಮೂಡದಿರಲಾರದು. ಈ ಪ್ರಶ್ನೆಯನ್ನು ಹೀಗೆ ಉತ್ತರಿಸಬಹುದು.

೧) ಭಿಕ್ಷೆ ಬೇಡಿ ಜೀವಿಸಲು ಯಾರು ಅರ್ಹರು? ಯಾರು ಸಂತಾನ, ದ್ರವ್ಯ, ಕೀರ್ತಿ ಇವು ಮೂರರಿಂದ ವಿಮುಕ್ತರಾಗಿ, ಸನ್ಯಾಸಿಗಳಾಗಿರುತ್ತಾರೆಯೋ ಅವರು ಭಿಕ್ಷೆ ಬೇಡಿ ಜೀವಿಸಲರ್ಹರು ಎಂದು ನಮ್ಮ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಅವರಿಗೆ ಅಡಿಗೆ ಮಾಡಿಕೊಂಡು ಊಟ ಮಾಡಲಾಗುವುದಿಲ್ಲ. ಅವರಿಗೆ ಆಹಾರ ನೀಡುವುದು ನಮ್ಮ ಕರ್ತವ್ಯ. ಸಾಯಿಬಾಬಾರವರು ಗ್ರಹಸ್ಥಾಶ್ರಮವನ್ನಾಗಲಿ ವಾನಪ್ರಸ್ಥಾಶ್ರಮವನ್ನಾಗಲಿ ಸ್ವೀಕರಿಸಿರಲಿಲ್ಲ. ಅವರು ಬ್ರಹ್ಮಚಾರಿಗಳಾಗಿದ್ದರು. ಅಂದರೆ ಚಿಕ್ಕಂದಿನಿಂದಲೂ ಸನ್ಯಾಸಿಯಾಗಿಯೇ ಇದ್ದರು. ಪ್ರಪಂಚವೇ ನನ್ನ ಮನೆ, ವಾಸುದೇವನೇ ಜಗನ್ನಿಯಾಮಕ ಎಂಬ ಧೃಡವಾದ ನಂಬಿಕೆ ಅವರಲ್ಲಿತ್ತು. ಆದ್ದರಿಂದ ಅವರು ಭಿಕ್ಷೆ ಬೇಡಲು ಅರ್ಹರಾಗಿದ್ದರು.

೨) ಪಂಚಸೂನಗಳು ಮತ್ತು ಅವುಗಳ ಪಾಲನೆ : ನಾವು ನಮ್ಮ ಆಹಾರವನ್ನು ತಯಾರು ಮಾಡುವಾಗ ನಾವು ಪಂಚ-ವಿಧಾನಗಳನ್ನು ಅನುಸರಿಸಬೇಕು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಸರಿ.

೧) ಕಂಡಣಿ-ಪುಡಿ ಮಾಡುವುದು, ೨) ಪೇಷಣಿ-ಅರೆಯುವುದು, ೩)ಉದಕುಂಭಿ-ಪಾತ್ರೆ ತೊಳೆಯುವುದು., ೪) ಮಾರ್ಜನಿ-ಗುಡಿಸುವುದು ಮತ್ತು ಶುದ್ಧಿ ಮಾಡುವುದು ೫) ಚುಲ್ಲಿ-ಬೆಂಕಿಗೆ ಹಾಕುವುದು. ಈ ಪಂಚ ವಿಧಾನಗಳನ್ನು ಅನುಸರಿಸುವಾಗ ಆಹಾರದಲ್ಲಿ ಅನೇಕ ಕ್ರಿಮಿಕೀಟಗಳು ನಾಶವಾಗಬಹುದು ಮತ್ತು ಅದರಿಂದಾಗಿ ನಾವು ಪಾಪ ಮಾಡಬೇಕಾಗುವುದು. ಈ ಪಾಪಕ್ಕೆ ಪ್ರಾಯಶ್ಚಿತ್ತವೆಂದು ನಮ್ಮ ಶಾಸ್ತ್ರಗಳು ಈ ಐದು ತರದ ಯಜ್ಞಗಳನ್ನು ಸೂಚಿಸಿವೆ. ೧) ಬ್ರಹ್ಮ ಯಜ್ಞ ಅಥವಾ ವೇದಾಧ್ಯಯನ - ಬ್ರಹ್ಮನಿವೇದನೆ ಅಥವಾ ವೇದವ್ಯಾಸಂಗ ೨) ಪಿತೃಯಜ್ಞ - ಪೂರ್ವಜರಿಗೆ ಅರ್ಪಣೆ ೩) ದೇವಯಜ್ಞ - ದೇವತೆಗಳಿಗೆ ಅರ್ಪಣೆ, ೪) ಭೂತಯಜ್ಞ - ೫) ಮನುಷ್ಯ ಅಥವಾ ಅತಿಥಿ ಯಜ್ಞ, ಈ ಯಜ್ಞಗಳನ್ನು ನಾವು ಸರಿಯಾಗಿ ಪಾಲಿಸಿದರೆ, ಅವು ನಮಗೆ ಜ್ಞಾನ ಮತ್ತು ಮುಕ್ತಿ ಮಾರ್ಗಕ್ಕೆ ಸುಲಭವಾದ ದಾರಿ ಹಾಕಿಕೊಡುತ್ತವೆ. ಈ ಕರ್ತವ್ಯಗಳನ್ನು ನಮಗೆ ಜ್ಞಾಪಿಸಲೋಸುಗವೇ ಬಾಬಾರವರು ಪ್ರತಿ ಮನೆಯ ಬಾಗಿಲಿಗೂ ಹೋಗುತ್ತಿದದ್ದರು. ಅವರಿಂದ ಈ ರೀತಯಾದ ಪಾಠ ಕಲಿತವರು ನಿಜಕ್ಕೂ ಧನ್ಯರು.

## ಭಕ್ತರ ಅನುಭವಗಳು

"ಯಾರು ಒಂದು ಪ್ರತಿ, ಫಲ ಅಥವಾ ಉದಕ ಇವುಗಳನ್ನು ನಿರಂತರ ಪ್ರೀತಿಯಿಂದ ನನಗೆ ಅರ್ಪಿಸುವರೋ ಅಂಥವರ ಪರಿಶುದ್ಧವಾದ ಪ್ರೇಮವನ್ನು ನಾನು ಸದಾ ಮನಃಪೂರ್ವಕವಾಗಿ

ಸ್ವೀಕರಿಸುತ್ತೇನೆ." ಎಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುತ್ತಾನೆ. ಹೀಗೆ ಬಾಬಾರವರಿಗೆ ಏನಾದರೊಂದು ಪದಾರ್ಥವನ್ನು ಭಕ್ತಿಯಿಂದ ಅರ್ಪಿಸುತ್ತೇನೆಂದು ಮನಃಪೂರ್ವಕವಾಗಿ ಹೇಳಿಕೊಂಡು ನಂತರ ಅದನ್ನು ಮರೆತರೆ ಅವರು ಅದನ್ನು ಜ್ಞಾಪಿಸಿ ತೆಗೆದುಕೊಳ್ಳುತ್ತಿದ್ದರು. ಮತ್ತು ಆಶೀರ್ವದಿಸುತ್ತಿದ್ದರು. ಈ ತರದ ಅನೇಕ ಘಟನೆಗಳು ಜರುಗಿವೆ.

## ತರ್ಖಡ ಕುಟುಂಬ

ಬಾಬಾಸಾಹೇಬ ತರ್ಖಡ ಪ್ರಾರ್ಥನಾ ಸಮಾಜಕ್ಕೆ ಸೇರಿದ ಬಾಬಾರವರ ಧೃಡ ಭಕ್ತರಾಗಿದ್ದರು. ಅವರ ಪತ್ನಿ ಮತ್ತು ಮಗ ಇಬ್ಬರೂ ಸಹ ಬಾಬಾರವರ ಪರಮ ಭಕ್ತರಾಗಿದ್ದರು. ಮೇ ತಿಂಗಳಲ್ಲಿ ಶಾಲೆಗೆ ರಜೆ ಇತ್ತು. ಆಗ ಕುಮಾರ ತರ್ಖಡ ಮತ್ತು ಅವನ ತಾಯಿ ಶಿರ್ಡಿಗೆ ಹೋಗಬೇಕೆಂದು ಮನಸ್ಸು ಮಾಡಿದರು. ಆದರೆ ಬಾಲಕ ತರ್ಖಡ ತಾನು ಮತ್ತು ತನ್ನ ತಾಯಿ ಶಿರ್ಡಿಗೆ ಹೋದರೆ ಮನೆಯಲ್ಲಿ ಬಾಬಾರವರ ಪೂಜೆ ನಿಂತು ಹೋಗುವದೆಂದೂ, ತಂದೆಯುವರು ಪ್ರಾರ್ಥನಾ ಸಮಾಜವಾದಿಗಳಾದುದರಿಂದ ಬಾಬಾರವರ ಫೋಟಕ್ಕೆ ಪೂಜೆ ಸಲ್ಲಿಸಲಾರರೆಂದೂ ತಿಳಿದು ಶಿರ್ಡಿಗೆ ಹೋಗಲಿಚ್ಛಿಸಲಿಲ್ಲ. ಆಗ ತಂದೆಯವರಿಂದ ಆಶ್ವಾಸನೆ ಪಡೆದು ತಾಯಿ ಮಗ ಇಬ್ಬರೂ ಒಂದು ಶುಕ್ರವಾರ ರಾತ್ರಿ ಶಿರ್ಡಿಗೆ ಪ್ರಯಾಣ ಬೆಳೆಸಿದರು.

ಮರುದಿನ ಶನಿವಾರ ಶ್ರೀ ತರ್ಖಡರವರು ಬೆಳಗಿನ ಜಾವ ಎದ್ದು ಸ್ನಾನ ಮುಂತಾದವುಗಳನ್ನು ಮುಗಿಸಿಕೊಂಡು ಬಾಬಾರವರ ಫೋಟೋದ ಮುಂದೆ ನಿಂತು "ಬಾಬಾ ನನ್ನ ಮಗನು ನಿಮಗೆ ಹೇಗೆ ಸೇವೆ ಮಾಡುತ್ತಿದ್ದನೋ, ಅದೇ ರೀತಿ ನಾನು ಈ ದಿನ ಸೇವೆ ಸಲ್ಲಿಸುತ್ತೇನೆ. ಅದು ಕೇವಲ ತಮಾಷೆಯಾಗದಿರಲಿ" ಎಂದು

ಹೇಳಿ ಆ ದಿನ ಪೂಜೆ ಸಲ್ಲಿಸಿ ಸಕ್ಕರೆಯನ್ನು ನೈವೇದ್ಯವಾಗಿ ಅರ್ಪಿಸಿದರು. ಪ್ರಸಾದವನ್ನು ಎಲ್ಲರಿಗೂ ಊಟದ ಜೊತೆಗೆ ಕೊಟ್ಟರು.

ಆ ದಿನ ಸಂಜೆ ಮತ್ತು ಮರುದಿನ ಭಾನುವಾರವೂ ಸಹ ಅದೇ ರೀತಿ ಆಚರಿಸಿದರು. ಅವರಿಗೆಂದೂ ಈ ತರದ ಪೂಜೆ ಮಾಡಿ ಅಭ್ಯಾಸವಿರಲಿಲ್ಲ. ಆದರೂ ತಮ್ಮ ಮಗನಿಗೆ ವಚನಕೊಟ್ಟಂತೆ ಎಲ್ಲವೂ ಸಾಂಗವಾಗಿ ನೆರವೇರುತ್ತಿರುವದನ್ನು ಕಂಡು ಅವರ ಮನಸ್ಸಿನಲ್ಲಿ ಧೃಡತೆ ಮೂಡಿತು. ಮಂಗಳವಾರ ಬೆಳಿಗ್ಗೆಯೂ ಸಹ ಪೂಜೆ ನೆರವೇರಿಸಿ ಕಛೇರಿಗೆ ಹೋದರು. ಮಧ್ಯಾಹ್ನ ಮನೆಗೆ ಬಂದು ಊಟಕ್ಕೆ ಕುಳಿತಾಗ ಬಾಬಾರವರ ಪ್ರಸಾದವಿರಲಿಲ್ಲ. ಅಡಿಗೆಯವರು "ಸ್ವಾಮಿ, ಈ ದಿನ ತಾವು ಸಕ್ಕರೆಯನ್ನು ನೈವೇದ್ಯ ಮಾಡಲು ಮರೆತು ಬಿಟ್ಟಿರಿ" ಎಂದನು. ಕೂಡಲೆ ಬಾಬಾರವರ ಫೋಟೋದ ಹತ್ತಿರ ಹೋಗಿ ನಮಸ್ಕರಿಸಿ ಕ್ಷಮೆ ಬೇಡಿದರು. ಆ ದಿನವೇ ತಮ್ಮ ಮಗನಿಗೆ ಬಾಬಾರವರಿಂದ ತಮ್ಮ ಅಪರಾಧ ಕ್ಷಮೆ ಮಾಡಲು ಪತ್ರ ಬರೆದರು.

ಅದೇ ಸಮಯ, ಮಂಗಳವಾರ ಶಿರ್ಡಿಯಲ್ಲಿ ಮಧ್ಯಾಹ್ನದ ಆರತಿ ಆರಂಭವಾಗುವುದರಲ್ಲಿತ್ತು. ಬಾಬಾರವರು ಶ್ರೀಮತಿ ತರ್ಖಡರವರನ್ನು ಕುರಿತು "ತಾಯಿ ಈ ದಿನ ಏನಾದರೂ ತಿನ್ನಬೇಕೆಂದೆನಿಸಿ ಬಾಂದ್ರಾದಲ್ಲಿ ನಿಮ್ಮ ಮನೆಗೆ ಹೋಗಿದ್ದೆ. ಮನೆಗೆ ಬೀಗ ಹಾಕಿತ್ತು. ಹೇಗೋ ಒಳಗೆ ಪ್ರವೇಶಿಸಿ ನೋಡಿದೆ; ತರ್ಖಡರು ನನಗೋಸ್ಕರ ಏನನ್ನೂ ಇಟ್ಟಿರಲಿಲ್ಲ. ಅತೃಪ್ತನಾಗಿ ಹಸಿವಿನಿಂದ ಹಿಂತಿರುಗಿದ್ದೇನೆ" ಎಂದರು. ಶ್ರೀಮತಿ ತರ್ಖಡರವರಿಗೆ ಇದರ ಅರ್ಥವಾಗಲಿಲ್ಲ. ಅವರ ಮಗನಿಗೆ ಮಾತ್ರ ತಕ್ಷಣವೇ ಅದರ ಅರ್ಥವಾಯಿತು. ಕೂಡಲೇ ಅವರು ಬಾಂದ್ರಾದಲ್ಲಿ ಪೂಜೆ ಸರಿಯಾಗಿ ನೆರವೇರಲಿಲ್ಲವೆಂದು ಯೋಚಿಸಿ ಬಾಂದ್ರಾಕ್ಕೆ ಹೊರಡಲು ಬಾಬಾ ಅವರ ಅನುಮತಿ ಬೇಡಿದನು. ಬಾಬಾರವರು ಅದನ್ನು

ನಿರಾಕರಿಸಿ, "ಇಲ್ಲಿಯೇ ಪೂಜೆಯನ್ನು ನೆರವೇರಿಸು" ಎಂದರು. ಆಗ ಅವನು ಈ ಬಗ್ಗೆ "ಬಾಬಾರವರ ಪೂಜೆಯನ್ನು ನೀವು ಸರಿಯಾಗಿ ನೆರವೇರಿಸದಿದ್ದುದಕ್ಕಾಗಿ ನನಗೆ ಬಹಳ ದುಖಃವಾಗಿದೆ" ಎಂದು ತಂದೆಗೆ ಕಾಗದ ಬರೆದನು.

ಮಾರನೇ ದಿನ ಈ ಪತ್ರಗಳು ಅವರವರ ಕೈ ಸೇರಿದವು!

## ಶ್ರೀಮತಿ ತರ್ಖಡ

ಈಗ ನಾವು ಶ್ರೀಮತಿ ತರ್ಖಡರವರ ವಿಚಾರವನ್ನು ತೆಗೆದುಕೊಳ್ಳೋಣ. ಅವರು ಈ ಮೂರು ಆಹಾರ ಪದಾರ್ಥಗಳನ್ನು ಪ್ರತಿದಿನವೂ ಬಾಬಾರವರಿಗೆ ಅರ್ಪಿಸುತ್ತಿದ್ದರು. ಅವು: ಭರೀತ, ಕಾಚರಿ ಮತ್ತು ಪೇಢೆ ಇವುಗಳನ್ನು ಬಾಬಾ ಅವರು ಹೇಗೆ ಸ್ವೀಕರಿಸುತ್ತಿದ್ದರೆಂಬುದನ್ನು ನೋಡೋಣ.

ಒಂದು ಸಾರಿ ಬಾಬಾರವರ ಪರಮ ಭಕ್ತರಾದ ಬಾಂದ್ರಾದ ಶ್ರೀ ರಘುಭಾಸ್ಕರ ಪುರಂಧರೆಯವರು ಕುಟುಂಬ ಸಮೇತ ಶಿರ್ಡಿಗೆ ಹೊರಟರು. ಶ್ರೀಮತಿ ತರ್ಖಡ ಅವರು ಎರಡು ಬದನೇಕಾಯಿಗಳನ್ನು ಕೊಟ್ಟು ಒಂದರಿಂದ ಭರೀತ ಮತ್ತೊಂದರಿಂದ ಕಾಚರಿ ಮಾಡಿ ಬಾಬಾರವರಿಗೆ ಅರ್ಪಿಸಲು ಶ್ರೀಮತಿ ಪುರಂಧರೆಯವರಿಗೆ ತಿಳಿಸಿದರು. ಪುರಂಧರೆ ಶಿರ್ಡಿ ತಲುಪಿದ ತಕ್ಷಣವೇ ಬಾಬಾರವರಿಗೆ ತಾವು ತಂದ ವಸ್ತುಗಳನ್ನು ಅರ್ಪಿಸಲು ಹೋದಾಗ ಬಾಬಾರವರು ಊಟಕ್ಕೆ ಕುಳಿತಿದ್ದರು. ಬಾಬಾರವರು ಭರೀತ ಉಂಡು ಬಹಳ ಚೆನ್ನಾಗಿದೆಯೆಂದು ಹೇಳಿ ಎಲ್ಲರಿಗೂ ಹಂಚಿ ನಂತರ ಕಾಚರಿ ಕೇಳಿದರು. ರಾಧಾಕೃಷ್ಣ ಮಾಯಿಯನ್ನು ಕರೆದು ಅವಳಿಗೆ ಕಾಚರಿ ತಯಾರು ಮಾಡಿ ತರಲು ಹೇಳಿದರು. ಆದರೆ ಆಗ ಬದನೆಕಾಯಿ ಮೋಸಂ ಇರಲಿಲ್ಲ. ಭರೀತ ಯಾರು ತಂದರೆಂದು ವಿಚಾರಿಸಿದ ಮೇಲೆ ಅದನ್ನು

ಒದಗಿಸಿದ ಶ್ರೀಮತಿ ಪುರಂಧರೆಯರಿಗೆ ಬದನೇಕಾಯಿ ಒಪ್ಪಿಸುವ ಜವಾಬ್ದಾರಿ ಇದೆ ಎಂದು ಎಲ್ಲರೂ ಮನಗಂಡರು!

೧೯೧೫ನೇ ಡಿಸೆಂಬರದಲ್ಲಿ ಶ್ರೀ ಗೋವಿಂದ ಬಲರಾಮ ಮಾನಕರವರು ತಮ್ಮ ತಂದೆಯವರ ಶ್ರಾದ್ಧ ಮಾಡಲು ಶಿರ್ಡಿಗೆ ಹೊರಡಬೇಕೆಂದಿದ್ದರು. ಅವರು ಶಿರ್ಡಿಗೆ ಹೊರಡುವ ಮುನ್ನ ಶ್ರೀಮತಿ ತರ್ಖಡರವರನ್ನು ಕಂಡರು. ಶ್ರೀಮತಿ ತರ್ಖಡರವರು ಬಾಬಾರವರಿಗೆ ಏನನ್ನಾದರೂ ತಿನ್ನಲು ಕಳುಹಿಸಬೇಕೆಂದು ಯೋಚಿಸಿ ಮನೆತುಂಬ ಹುಡುಕಿದರು. ಪೇಢೆ ಹೊರತು ಇನ್ನಾವುದೂ ಇರಲಿಲ್ಲ. ಆದರೆ ಆದಾಗಲೇ ನೈವೇದ್ಯವಾಗಿತ್ತು. ಅದನ್ನೇ ಬಾಬಾರವರು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ಭಾವಿಸಿ ಮಾನಕರ ಅವರ ಕೈಯಲ್ಲಿ ಕೊಟ್ಟು ಕಳುಹಿಸಿದರು. ಶ್ರೀಯುತ ಮಾನಕರವರು ಶಿರ್ಡಿ ತಲುಪಿ ಬಾಬಾರವರ ದರ್ಶನ ಮಾಡಲು ಮಸೀದಿಗೆ ಹೊರಟರು. ಆದರೆ ಪೇಢೆ ತೆಗೆದುಕೊಂಡು ಹೋಗುವುದನ್ನು ಮರೆತುಬಿಟ್ಟರು. ಬಾಬಾರವರು ತಾಳ್ಮೆಯಿಂದ ಕೆಲವು ಕಾಲ ಸುಮ್ಮನಿದ್ದರು. ಮಧ್ಯಾಹ್ನ ಮಸೀದಿಗೆ ಹೋದಾಗಲೂ ಮಾನಕರ ಪೇಢೆ ಕೊಡಲು ಮರೆತರು. ಬಾಬಾರವರಿಗೆ ತಾಳ್ಮೆ ಮೀರಿತು. ಆಗ ಅವರು "ನನಗೆ ಏನನ್ನು ತಂದಿರುವೆ?" ಎಂದು ಮಾನಕರ ಅವರನ್ನು ಕೇಳಿದರು. ಅವರು ಏನೂ ಇಲ್ಲವೆಂದುತ್ತರಿಸಿದರು. ಬಾಬಾ ಮತ್ತೊಮ್ಮೆ ಕೇಳಿದರು. ಪುನ: ಅದೇ ಉತ್ತರ. ಆಗ ಬಾಬಾರವರು "ತಾಯಿಯು ನನಗೋಸ್ಕರ ನೀನು ಹೊರಟು ಬರುವಾಗ ಸಿಹಿತಿನಿಸನ್ನು ಕೊಡಲು ಹೇಳಿ, ನಿನ್ನ ಹತ್ತಿರ ಏನೂ ಕೊಡಲಿಲ್ಲವೆ?" ಎಂದು ಕೇಳಿದರು. ಆಗ ಅವರಿಗೆಲ್ಲವೂ ನೆನಪಾಯಿತು. ಕೂಡಲೆ ಬಾಬಾರವರ ಕ್ಷಮೆ ಬೇಡಿ ತಾವು ತಂಗಿದ್ದ ಸ್ಥಳಕ್ಕೆ ಹೋಗಿ ತಂದಿದ್ದ ಪೇಢೆ ತೆಗೆದುಕೊಂಡು ಬಂದು ಅರ್ಪಿಸಿದರು. ಅದನ್ನು ಬಾಬಾರವರು ಸಂತೋಷದಿಂದ

ತಂದರು. ಈ ರೀತಿ ಶ್ರೀಮತಿ ತರ್ಖಡರವರ ಭಕ್ತಿಯನ್ನು ಬಾಬಾ ಮೆಚ್ಚಿದರು. "ನನ್ನನ್ನು ನಂಬಿದರವರನ್ನು ನಾನು ಸದಾ ಆಶೀರ್ವದಿಸುತ್ತೇನೆ" ಎಂಬ ಗೀತೆಯ ವಾಕ್ಯ ಈ ರೀತಿ ಇಲ್ಲಿ ನಿಜವಾಯಿತು.

## ಹೊಟ್ಟೆತುಂಬ ಊಟ

ಒಂದು ದಿನ ಶ್ರೀಮತಿ ತರ್ಖಡರವರು ಶಿರ್ಡಿಯಲ್ಲಿ ಒಬ್ಬರ ಮನೆಯಲ್ಲಿ ಊಟಕ್ಕೆ ಕುಳಿತಾಗ ಅಲ್ಲಿ ಒಂದು ಹಸಿದ ನಾಯಿ ಬಂದಿತು. ಶ್ರೀಮತಿಯವರು ಅದಕ್ಕೆ ಒಂದು ಚೂರು ರೊಟ್ಟಿ ಹಾಕಿದರು. ಅದು ಅದನ್ನು ಸಂತೋಷದಿಂದ ತಿಂದು ಹೊರಟು ಹೋಯಿತು. ಸಾಯಂಕಾಲ ಅವರು ಮಸೀದಿಗೆ ಹೋದಾಗ ಬಾಬರವವರು "ತಾಯೀ, ಈ ದಿನ ನೀನು ನನಗೆ ಹೊಟ್ಟೆ ತುಂಬ ಊಟ ಹಾಕಿರುವೆ. ನನ್ನ ಪ್ರಾಣಗಳು ತೃಪ್ತಿ ಪಡೆದವು. ಯಾವಾಗಲೂ ಇದೇ ರೀತಿ ವರ್ತಿಸು. ನಿನಗೆ ಒಳ್ಳೆಯದಾಗುತ್ತದೆ. ಮಸೀದಿಯಲ್ಲಿ ಕುಳಿತು ನಾನು ಯಾವಾಗಲೂ ಸತ್ಯವನ್ನೇ ನುಡಿಯುವೆನು. ಈ ರೀತಿ ಯಾವಾಗಲೂ ನನ್ನ ಮೇಲೆ ದಯೆ ಇಡು. ಮೊದಲು ಹಸಿದವರಿಗೆ ಆಹಾರ ನೀಡಿ ನಂತರ ನೀನು ಊಟ ಮಾಡು" ಎಂದರು. ಇದು ಅವಳಿಗೆ ಅರ್ಥವಾಗಲಿಲ್ಲ. ಆಗ "ಬಾಬಾ, ನಾನು ಯಾವಾಗ ನಿಮಗೆ ಆಹಾರ ನೀಡಿದೆ"? ಎಂದು ಕೇಳಲು, ಬಾಬಾರವರು "ನೀನು ಪ್ರೀತಿಯಿಂದ ಕೊಟ್ಟ ರೊಟ್ಟಿಯಂತು ಚೂರನ್ನು ತಿಂದು ನಾನು ನಿಜವಗಿಯೂ ತೃಪ್ತಿಗೊಂಡಿದ್ದೇನೆ. ನೀನು ಬೆಳಿಗ್ಗೆ ಊಟಕ್ಕೆ ಕುಳಿತಾಗ ಬಂದ ನಾಯಿಯು ನನ್ನ ಅಂಶ ಇದೇ ರೀತಿ ಇತರ ಜೀವಿಗಳೂ ಸಹ. ನಾನು ಆ ರೀತಿ ಅಲೆದಾಡುತ್ತೇನೆ. ಯಾರು ಈತರದ ಪ್ರಾಣಿಗಳಲ್ಲಿ ನನ್ನನ್ನು ಕಾಣುವರೋ ಅಂಥವರನ್ನು ನಾನು ಆಶೀರ್ವದಿಸುತ್ತೇನೆ. ಭೇದ ಭಾವಗಳನ್ನು ತೊರೆದು ಈ ದಿನ ಸೇವೆ ಮಾಡಿದಂತೆ

ನನ್ನ ಸೇವೆ ಮಾಡು" ಎಂದರು. ಈ ಅಮೃತ ವಚನಗಳನ್ನು ಕೇಳಿ ಅವರ ಮನಸ್ಸು ಕರಗಿತು. ನೇತ್ರಗಳಿಂದ ಆನಂದ ಬಾಷ್ಪ ಉಕ್ಕಿದವು.

### ಪಾಠ

ಸಕಲ ಜೀವಿಗಳಲಲ್ಲಿಯೂ ಪರಮಾತ್ಮನನ್ನು ಕಾಣಬಹುದು ಎಂಬುದೇ ಇದರ ತಿರುಳು. ಉಪನಿಷತ್, ಗೀತೆ, ಭಗವತ ಎಲ್ಲ ಪುಣ್ಯಗ್ರಂಥಗಳೂ ಇದನ್ನೇ ಸಾರುತ್ತಿವೆ. ಈ ರೀತಿ ಸಾಯಿಬಾಬಾರವರು ಉಪನಿಷತ್ತನ್ನು ಕಾರ್ಯಾಚರಣೆಯಲ್ಲಿ ತಂದರು.

**ಶ್ರೀ ಸಾಯಿ ಪ್ರಣಾಮ**

# ೧೦ನೇ ಅಧ್ಯಾಯ

## ಬಾಬಾರವರ ಜೀವನ–ಅವರು ಮಲಗುತ್ತಿದ್ದ ಹಲಿಗೆ – ಶಿರ್ಡಿಯಲ್ಲಿ ಅವರು ನೆಲೆಸಿದುದು –ಉಪದೇಶಗಳು–ಅವರ ನಮ್ರತೆ – ಸುಗಮ ದಾರಿ

ಯಾರು ತಮ್ಮ ಜೀವಿತವನ್ನು ಪರರ ಶ್ರೇಯಸ್ಸಿಗೆ ಮುಡುಪಾಗಿಟ್ಟಿದ್ದರೋ, ಅಂತಹ ಶ್ರೀ ಸಾಯಿಬಾಬಾರವರನ್ನು ನೀವು ಯಾವಾಗಲೂ ಧ್ಯಾನಿಸಿರಿ. ಅವರನ್ನು ಧ್ಯಾನಿಸುವುದರಿಂದ ಜನನ–ಮರಣವೆಂಬ ಭವಸಾಗರವನ್ನು ದಾಟಬಹುದು. ಇದೊಂದೇ ಸುಲಭವಾದ ಸಾಧನೆ. ನಮ್ಮ ಮನಸ್ಸು ನೆಮ್ಮದಿಯಾಗಿರಲು ಪ್ರತಿಕ್ಷಣವೂ ಈ ಸಾಧನೆಯನ್ನು ಅಬ್ಯಾಸ ಮಾಡಬೇಕು. ಇತರ ದೇವತೆಗಳೆಲ್ಲ ಬರಿಭ್ರಮೆ. ಗುರುವೊಬ್ಬನೇ ದೇವರು. ನಾವು ನಮ್ಮ ಸದ್ಗುರುವಿನಲ್ಲಿ ಅಚಲ ನಂಬಿಕೆ ಇಟ್ಟಿದ್ದಾದರೆ, ಅವರು ನಮ್ಮ ಅದೃಷ್ಟ ಒಳ್ಳೆಯದಾಗಿ ಮಾರ್ಪಡಿಸಬಹುದು. ನಿರ್ಮಲ ಚಿತ್ತದಿಂದ ಅವರ ಸೇವೆ ಮಾಡಿದ್ದಾದರೆ, ಸಂಸಾರವೆಂಬ ಬಂಧನದಿಂದ ಮುಕ್ತರಾಗಬಹುದು. ನ್ಯಾಯ ಮತ್ತು ಮೀಮಾಂಸೆ ಎಂಬ ವೇದಾಂತಗಳನ್ನು ಅಭ್ಯಾಸ ಮಾಡಬೇಕಿಲ್ಲ. ನಾವು ಗುರುವನ್ನು ಅಂಬಿಗನನ್ನಾಗಿ ಮಾಡಿಕೊಂಡರೆ, ನೋವು ದು:ಖವೆಂಬ ಸಮುದ್ರವನ್ನು ಸುಗಮವಾಗಿ ದಾಟಬಹುದು. ನದಿ ಮತ್ತು ಸಮುದ್ರಗಳನ್ನು ದಾಟುವಾಗ ನಾವು ಅಂಬಿಗನನ್ನು ನಂಬಿರುವ ಹಾಗೆ ಸಂಸಾರಬಂಧನದ ಸಮುದ್ರವನ್ನು ದಾಟುವಾಗ ಸದ್ಗುರುವನ್ನು ನಾವು ನಂಬಲೇಬೇಕು. ಅವರು ಭಕ್ತರಿಂದ ನಿಶ್ಚಲ ಭಕ್ತಿಯನ್ನು ಅಪೇಕ್ಷಿಸುತ್ತಾರೆ. ಅವರು ಜ್ಞಾನ ಮತ್ತು ಅಪರಿಮಿತವಾದ ಆನಂದವನ್ನು ನಮಗೆ ದೊರಕಿಸುತ್ತಾರೆ.

## ಬಾಬಾರವರ ಹಾಸಿಗೆ

ಬಾಬಾರವರು ಹೇಗೆ ನಿದ್ರಿಸುತ್ತಿದ್ದರೆಂಬುದನ್ನು ನೋಡೋಣ. ಶ್ರೀ ನಾನಾಸಾಹೇಬ ಢೇಂಗಳೆಯವರು ಬಾಬಾರವರಿಗೆ ಮಲಗಲೋಸುಗ ಒಂದು ಕಟ್ಟಿಗೆಯ ಹಲಿಗೆ ತಂದಿದ್ದರು. ಅದನ್ನು ನೆಲದ ಮೇಲೆ ಇಟ್ಟು ಮಲಗುವ ಬದಲು ಬಾಬಾರವರು ಚಿಂದಿ ಬಟ್ಟೆಗಳನ್ನು ಹಗ್ಗದಂತೆ ಸುತ್ತಿ ಹಲಿಗೆಯನ್ನು ಮೇಲ್ಛಾವಣಿಯಿಂದ ಎತ್ತರದಲ್ಲಿ ತೂಗುಹಾಕಿ ಉಯ್ಯಾಲೆಯಂತೆ ಮಾಡಿಕೊಂಡು ಅದರ ಮೇಲೆ ನಿದ್ರಿಸುತ್ತಿದ್ದರು. ಉಯ್ಯಾಲೆ ಹಲಿಗೆಯ ಭಾರವನ್ನು ತಡೆಯಲಾರದೆ, ಕಿತ್ತು ಬೀಳುವ ಹಾಗೆಯೇ ತೋರುತ್ತಿತ್ತು. ಆದರೆ ಬಾಬಾರವರ ಲೀಲೆ ವಿಸ್ಮಯಕಾರಕ! ಹಲಿಗೆಯ ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಪಣತಿಗಳನ್ನು ಹಚ್ಚಿ ಇಡುತ್ತಿದ್ದರು. ಅವರು ಹಲಿಗೆಯ ಮೇಲೆ ಹೇಗೆ ಹತ್ತಿ ಕುಳಿತುಕೊಳ್ಳುತ್ತಿದ್ದರು, ಹೇಗೆ ಕೆಳಗಿಳಿದು ಬರುತ್ತಿದ್ದರು ಎಂಬುದು ಯಾರಿಗೂ ತಿಳಿದಿರಲಿಲ್ಲ. ಎಷ್ಟೋ ಜನರು ಇದನ್ನು ಪರಶೀಲಿಸಲು ಬಂದು ವಿಫಲರಾಗಿದ್ದರು. ಈ ಚಮತ್ಕಾರವನ್ನು ಪರೀಕ್ಷಿಸಲೋಸುಗ ಒಂದು ದಿನ ಮಸೀದಿಯಲ್ಲಿ ಜನ ನೆರೆದರು. ಇದನ್ನು ಕಂಡ ಬಾಬಾರವರು ಉದ್ರಿಕ್ತರಾಗಿ ಹಲಿಗೆಯನ್ನು ಚೂರು ಚೂರು ಮಾಡಿ ಬಿಸುಟಿದರು. ಬಾಬಾ ಅಷ್ಟಸಿದ್ಧಿಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಅವರು ಅವುಗಳನ್ನೇನೂ ಅಬ್ಯಾಸ ಮಾಡಿರಲಿಲ್ಲ ಜನ್ಮತ: ಅವು ಅವರ ಕರಗತವಾಗಿದ್ದವು.

## ಸಗುಣ ಬ್ರಹ್ಮ

ಬಾಬಾರವರು ಸಾಮಾನ್ಯ ಮನುಷ್ಯರಂತೆ ಕಂಡು ಬಂದರೂ ಅವರು ಪ್ರತಿಯೊಬ್ಬರ ಆತ್ಮದಲ್ಲಿಯೂ ವಾಸವಾಗಿದ್ದರು. ಬಾಹ್ಯದಲ್ಲಿ ಜನರ ಯೋಗಕ್ಷೇಮವನ್ನೇ ಚಿಂತಿಸುತ್ತಿದ್ದರು ಭಕ್ತರಿಗೋಸುಗ

ಬಾಹ್ಯದಲ್ಲಿ ಅವರು ಅನೇಕ ಆಶೆ –ಆಕಾಂಕ್ಷೆಗಳನ್ನು ವ್ಯಕ್ತಪಡಿಸುತ್ತಿದ್ದರು. ಅಂತರಂಗದಲ್ಲಿ ಅವರು ಶಾಂತಿಯು ಪ್ರತೀಕವಾಗಿದ್ದರು. ಬಹಿರಂಗದಲ್ಲಿ ನಿರಂತರ ಕೆಲಸ ಮಾಡುವ ವಿಲಕ್ಷಣ ವ್ಯಕ್ತಿಯಂತೆ ವರ್ತಿಸುತ್ತಿದ್ದರು. ಅಂತರಂಗದಲ್ಲಿ ಅದ್ವೈತವನ್ನು ಪ್ರೀತಿಸುತ್ತಿದ್ದರು. ಬಾಹ್ಯದಲ್ಲಿ ಪ್ರಪಂಚವೆಂಬ ಬಂಧನಕ್ಕೆ ಸಿಕ್ಕಿದ್ದರು. ಕೆಲವು ಬಾರಿ ಪ್ರತಿಯೊಬ್ಬರನ್ನು ಪ್ರೀತಿ ಮತ್ತು ಆದರಗಳಿಂದ ಕಾಣುತ್ತಿದ್ದರು. ಕೆಲವು ವೇಳೆ ಅವರ ಮೇಲೆ ಕಲ್ಲೆಸೆಯುತ್ತಿದ್ದರು. ಅನೇಕ ಸಾರಿ ಕೆಲವರನ್ನು ತಬ್ಬಿಕೊಂಡು ಶಾಂತಿಮೂರ್ತಿಯಾಗುತ್ತಿದ್ದರು. ಮತ್ತೊಮ್ಮೆ ಅವರನ್ನು ದೂಷಿಸುತ್ತಿದ್ದರು. ಯಾವಾಗಲೂ ಆತ್ಮಚಿಂತನೆಯಲ್ಲಿಯೇ ತಲ್ಲೀನರಾಗಿ ಭಕ್ತರನ್ನು ಆದರದಿಂದ ಕಾಣುತ್ತಿದ್ದರು. ಅವರು ಒಂದು ಆಸನದಲ್ಲಿ ಕುಳಿತಿರುತ್ತಿದ್ದರು. ಎಲ್ಲಿಗೂ ಪ್ರಯಾಣ ಮಾಡುತ್ತಿರಲಿಲ್ಲ. ಯಾವಾಗಲೂ ಕೈಯಲ್ಲಿ ಸಟಕಾ ಇಟ್ಟುಕೊಂಡಿರುತ್ತಿದ್ದರು. ಐಶ್ವರ್ಯ–ಕೀರ್ತಿಗಾಗಿ ಎಂದೂ ಆಸೆಪಡುತ್ತಿರಲಿಲ್ಲ. ಭಿಕ್ಷೆ ಬೇಡಿ ಜೀವಿಸುತ್ತಿದ್ದರು. ಯಾವಗಲೂ "ಅಲ್ಲಾ –ಮಾಲಿಕ್" (ದೇವರು ದೊಡ್ಡವನು) ಎನ್ನುತ್ತಿದ್ದರು. ಅವರು ಜ್ಞಾನದ ಗಣಿಯಾಗಿದ್ದರು. ನಿಜಕ್ಕೂ ಅವರು ದತ್ತದೇವರು. ನಿಜವಾಗಿಯೂ ಅದೃಷ್ಟವಂತರಾದ ಕೆಲವರಿಗೆ ಮಾತ್ರ ಈ ನಿಧಿ ಪೆಟ್ಟಿಗೆ ದೊರಕಿತು. ಯಾರು ಅವರ ನಿಜವಾದ ವ್ಯಕ್ತಿತ್ವವನ್ನು ತಿಳಿಯಲಿಲ್ಲವೋ, ಅಂಥವರು ದುದೃಷ್ಟಶಾಲಿಗಳೆ ಸರಿ.

## ಶಿರ್ಡಿಯಲ್ಲಿ ಅವರು ನೆಲೆಸಿದುದು – ಅವರ ಜನ್ಮ

ಬಾಬಾರವರ ಮಾತಾಪಿತೃಗಳಾರು, ಅವರ ನಿಜವಾದ ಜನ್ಮದಿನ ಯಾವುದು ಎಂಬುದು ಯಾರಿಗೂ ತಿಳಿದಿಲ್ಲ. ಆದರೆ ಅವರು ಶಿರ್ಡಿಯಲ್ಲಿ ಬಂದು ನೆಲೆಸಿದ ವರ್ಷದ ಆಧಾರದ ಮೇಲೆ ಅವುಗಳನ್ನು ಅಂದಾಜಾಗಿ ನಿರ್ಧರಿಸಬಹುದು. ಬಾಬಾರವರು

ತಮ್ಮ ಸುಮಾರು ಹದಿನಾರನೇ ವಯಸ್ಸಿನಲ್ಲಿ ಮೊದಲು ಶಿರ್ಡಿಯಲ್ಲಿ ಕಾಣಿಸಿಕೊಂಡರು. ಅಂದಿನಿಂದ ಅವರು ಮೂರು ವರ್ಷಗಳವರೆಗೆ ಶಿರ್ಡಿಯಲ್ಲಿ ದ್ದರು. ಮುಂದೆ ಕೆಲವು ಕಾಲ ಕಣ್ಮರೆಯಾಗಿದ್ದರು. ನಂತರ ಅವರು ಚಾಂದ್ ಪಾಟೀಲರ ಮದುವೆಯ ದಿಬ್ಬಣದ ಜೊತೆಯಲ್ಲಿ ಮತ್ತೊಮ್ಮೆ ಶಿರ್ಡಿಗೆ ಬಂದರು. ಆಗ ಅವರಿಗೆ ಸುಮಾರು ೨೦ ವರ್ಷವಯಸ್ಸಿರಬಹುದು. ಅಂದಿನಿಂದ ಅವರು ೬೦ ವರ್ಷಗಳವರೆಗೆ ಶಿರ್ಡಿಯಲ್ಲಿ ನೆಲೆಸಿದ್ದರು. ಬಾಬ ೧೯೧೮ರಲ್ಲಿ ಸಮಾಧಿ ಹೊಂದಿದರು. ಇದರಿಂದ ಬಾಬಾರವರು ಸುಮಾರು ೧೮೩೮ರಲ್ಲಿ ಜನಿಸಿದರು ಎಂದು ನಾವು ಹೇಳಬಹುದು.

## ಬಾಬಾರವರ ಉಪದೇಶಗಳು

೧೭ನೆಯ ಶತಮಾನದಲ್ಲಿ ಬಾಳಿ ಬದುಕಿದ( ೧೬೦೮-೧೬೮೧) ಸಂತ ರಾಮದಾಸರು ಗೋವು ಮತ್ತು ಬ್ರಾಹ್ಮಣರನ್ನು ಯವನರ ದೌರ್ಜನ್ಯದಿಂದ ಪಾರು ಮಾಡಿ ಜೀವನದ ಗುರಿಯನ್ನು ಸಾಧಿಸಿದರು. ನಂತರ ಮುಂದಿನ ಎರಡು ಶತಮಾನಗಳಲ್ಲಿ ಹಿಂದೂ ಮುತ್ತು ಮುಸ್ಲಿಂ ಜಾತಿಯು ಕಲಹಗಳು ಪುನ: ತಲೆಯೆತ್ತಿದ್ದವು.ಇವುಗಳನ್ನು ನಿರ್ಮೂಲ ಮಾಡಲು ಬಾಬಾರವರು ಜನ್ಮ ತಾಳಿದರು.

ಶ್ರೀ ರಾಮ (ಹಿಂದೂಗಳ ದೇವರು) ರಹೀಮ (ಮಹಮ್ಮದೀಯರ ದೇವರು) ಇಬ್ಬರೂ ಒಂದೇ ಎಂದು ಬಾಬಾ ಯಾವಾಗಲೂ ಉಪದೇಶಿಸುತ್ತಿದ್ದರು. ಅವರಲ್ಲಿ ಸ್ವಲ್ಪವಾದರೂ ವ್ಯತ್ಯಾಸವಿರಲಿಲ್ಲ. "ವಿನಾಕಾರಣ ಭಕ್ತರು ಏಕೆ ಕಲಹ ಮಾಡಬೇಕು" ಎಂದು ಬಾಬಾ ಕೇಳುತ್ತಿದ್ದರು. ಜಾತಿ ಭೇದವೇಕೆ? ಎಲ್ಲ ದರ್ಮಗಳೂ ಒಂದೇ ಎಂದು ಒಗ್ಗಟ್ಟಾಗಿರಿ. ರಾಷ್ಟ್ರದ ಐಕ್ಯಮತವನ್ನು ಸಾಧಿಸಿರಿ. ತಾರತಮ್ಯ ಮಾಡಿ ವಾದಿಸುವುದರಿಂದ ಫಲವೇನು?

ನಿಮ್ಮ ಯೋಗಕ್ಷೇಮ ನೋಡಿಕೊಳ್ಳಿರಿ. ದೇವರು ನಿಮ್ಮನ್ನು ಕಾಪಾಡುತ್ತಾನೆ. ಯೋಗ, ಯಾಗ, ತಪಸ್ಸು ಮತ್ತು ಜ್ಞಾನ ಇವು ಪರಮಾತ್ಮನನ್ನು ಸೇರುವ ಸಾಧನಗಳು. ಇವುಗಳಲ್ಲಿ ಯಾವುದಾದರೊಂದನ್ನು ನೀವು ಸಾಧಿಸದಿದ್ದರೆ ನಿಮ್ಮ ಜನ್ಮ ನಿಸ್ಸಾರ್ಥಕ. ಯಾರಾದರೂ ನಿಮಗೆ ಅಹಿತ ಮಾಡಿದರೆ ತಿರುಗಿ ಅಹಿತ ಮಾಡಲು ಹೋಗಬೇಡಿ. ಬೇರೆಯವರಿಗೆ ಏನಾದರೂ ನಿಮಗೆ ಮಾಡಬೇಕೆಂದೆನಿಸಿದರೆ ಒಳ್ಳೆಯದನ್ನು ಮಾಡಿ" ಎಂದು ಸಾಯಿಬಾಬಾ ಅನ್ನುತ್ತಿದ್ದರು. ಸಂಕ್ಷಿಪ್ತವಾಗಿ ಇದು ಬಾಬಾ ಅವರ ಉಪದೇಶ. ಅದು ಭೌತಿಕ ಮತ್ತು ಆದ್ಯಾತ್ಮಕ ವಿಷಯಗಳಲ್ಲಿ ನಮಗೆ ಸಹಾಯವಾಗುತ್ತದೆ.

## ಸದ್ಗುರು ಸಾಯಿಬಾಬಾ

ಗುರುಗಳು ಅನೇಕರಿದ್ದಾರೆ. ಕೆಲವರು ತಂಬೂರಿ ತಾಳಗಳನ್ನು ಹಿಡಿದುಕೊಂಡು ತಮ್ಮ ಆಧ್ಯಾತ್ಮಿಕತೆಯನ್ನು ತೋರ್ಪಡಿಸುತ್ತ ಮನೆ ಮನೆಗೂ ಅಲೆಯುತ್ತಾರೆ. ತಮ್ಮ ಶಿಷ್ಯರಿಗೆ ಮಂತ್ರಗಳನ್ನು ಉಪದೇಶಿಸಿ ಅವರಿಂದ ದ್ರವ್ಯವನ್ನು ಸುಲಿಗೆ ಮಾಡುತ್ತಾರೆ. ಧರ್ಮ ಮತ್ತು ಮತಬೋಧಕರೆಂದು ಹೇಳಿಕೊಂಡು ಅವರು ಸ್ವತ: ನೀತಿಬಾಹಿರರೂ ಅಧರ್ಮಿಗಳೂ ಆಗಿರುವ ಎಷ್ಟು ಜನರಿಲ್ಲ? ಆದರೆ ಬಾಬಾರವರಲ್ಲಿ ಇಂಥ ಡಂಭಾಚಾರವಿರಲಿಲ್ಲ. ತಮ್ಮ ಭಕ್ತರಲ್ಲಿ ಅವರಿಗೆ ಅಪರಿಮಿತವಾದ ಪ್ರೀತಿ ಇದ್ದಿತು. ಗುರುಗಳಲ್ಲಿ ಎರಡು ವಿಧ. ೧) ನಿಯತ್ ಮತ್ತು ೨) ಅನಿಯತ್, ಮೊದಲನೆಯವರು ತಮ್ಮ ಉಪದೇಶಗಳಿಂದ ನಮ್ಮಲ್ಲಿ ಒಳ್ಳೆಯ ಗುಣಗಳನ್ನುಂಟುಮಾಡಿ, ನಮ್ಮ ಆತ್ಮವನ್ನು ಶುದ್ಧಿ ಮಾಡಿ, ಮುಕ್ತಿಮಾರ್ಗದ ಪಥದಲ್ಲಿ ಕೊಂಡೊಯ್ಯುತ್ತಾರೆ. ಎರಡನೆಯವರು ನಮ್ಮಲ್ಲಿ ಕಲಹ ಮತ್ತು ಭೇದಭಾವ ಹುಟ್ಟುವಂತೆ ಮಾಡುತ್ತಾರೆ. ಆದರೆ ಯಾವ ಗುರುವು ನಮ್ಮ ಆತ್ಮವನ್ನು ನಮ್ಮಲ್ಲಿ ಧೃಡಪಡಿಸಬಲ್ಲನೋ, ಯಾವ ಗುರುವು

ಸಂಸಾರಸಾಗರದಿಂದ ನಮ್ಮನ್ನು ದಾಟಿಸಬಲ್ಲನೋ ಅವನೇ ಸದ್ಗುರು. ಸಾಯಿಬಾಬಾ ಇಂತಹ ಸದ್ಗುರುಗಳಾಗಿದ್ದರು. ಅವರ ಯೋಗ್ಯತೆ ವರ್ಣನಾತೀತವಾದದ್ದು. ಯಾರಾದರೂ ಅವರ ದರ್ಶನ ಪಡೆಯಲು ಹೋದಾಗ ಅವರು ಸ್ವತ: ಕೇಳದೆಯೇ ಇದ್ದರೂ ಅವರ ಹಿಂದಿನ ಮತ್ತು ಮುಂದಿನ ಆಗು –ಹೋಗುಗಳೆಲ್ಲವನ್ನೂ ಹೇಳುತ್ತಿದ್ದರು. ಸಮಸ್ತ ಜೀವ ರಾಶಿಗಳಲ್ಲಿಯೂ ಅವರು ದೈವತ್ವವನ್ನು ಕಂಡಿದ್ದರು. ಸ್ನೇಹಿತನಾಗಲಿ ಶತ್ರುವಾಗಲಿ ಅವರಿಗೆ ಇಬ್ಬರೂ ಒಂದೇ ದುಷ್ಕರ್ಮಿಗಳಲ್ಲಿಯೂ ಅವರು ಪ್ರೀತಿ ತೋರಿಸುತ್ತಿದ್ದರು. ಯಾವುದೂ ಅನುಮಾನಕ್ಕೆ ಅವರಲ್ಲಿ ಆಸ್ಪದವಿರಲಿಲ್ಲ. ದೈಹಿಕವಾಗಿ ಅವರು ವರ್ತಿಸಿದರೂ ಅವರಿಗೆ ನಿಜವಾಗಿಯೂ ದೇಹದ ಸಂಬಂಧ ಇರಲಿಲ್ಲ.

ಶ್ರೀ ಸಾಯಿಬಾಬಾ ಅವರನ್ನು ದೇವರೆಂದು ಪೂಜಿಸಿದ ಜನಕೋಟಿಯೇ ಧನ್ಯ! ಊಟಮಾಡುವಾಗಲೂ, ಪಾನೀಯಗಳನ್ನು ಸೇವಿಸುವಾಗಲೂ, ಕೆಲಸದಲ್ಲಿ ನಿರತರಾಗಿ ಇರುವಾಗಲೂ ಅನವರತವೂ ಸಾಯಿಬಾಬಾ ಅವರನ್ನು ಸ್ಮರಿಸಿ ಅವರ ಲೀಲೆಗಳನ್ನು ಹಾಡುತ್ತಿದ್ದರು. ಶಿರ್ಡಿಯ ಮಹಿಳೆಯರಿಗೆ ಬಾಬಾರವರೆಂದರೆ ಅನಂತ ಪ್ರೀತಿ. ಬಾಬಾರವರ ಮೇಲೆ ಹಾಡುವುದನ್ನು ರಚಿಸಿ ಅವರು ಇಂಪಾಗಿ ಹಾಡುತ್ತಿದ್ದರು. ಹಾಡುಗಳು ಹೊರಹೊಮ್ಮುವುದು ಬುದ್ಧಿಯಿಂದಲ್ಲ – ಪ್ರೀತಿಯಿಂದ ನೈಜವಾದ ಹಾಡು ಪ್ರೇಮದ ಪ್ರತೀಕ. ಈ ಜಾನಪದ ಹಾಡುಗಳನ್ನು ಸಂಗ್ರಹಿಸಿ 'ಸಾಯಿಲೀಲಾ' ಮಾಸಿಕದಲ್ಲಿ ಅಥವಾ ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಬಹುದು.

## ಬಾಬಾರವರ ನಮ್ರತೆ

ದೇವರಿಗೆ ಷಡ್ಗುಣಗಳಿವೆಯೆಂದು ಹೇಳಲಾಗಿದೆ. ಅವು ಯಾವುವೆಂದರೆ, ೧)ಕೀರ್ತಿ, ೨)ಐಶ್ವರ್ಯ ೩) ವಿರಕ್ತಿ

೪) ಜ್ಞಾನ ೫) ವೈಭವ ಮತ್ತು ೬) ಉದಾರತೆ. ಬಾಬಾರವರಲ್ಲಿ ಈ ಗುಣಗಳೆಲ್ಲವೂ ಇದ್ದವು. ಭಕ್ತರಿಗೋಸುಗ ಬಾಬಾ ಅವತಾರ ತಾಳಿದರು. ಭಕ್ತರನ್ನು ತಮ್ಮೆಡೆಗೆ ಆಕರ್ಷಿಸಿದ ಅವರ ಅದ್ವಿತೀಯ ಪ್ರೇಮ ಮತ್ತು ದಯೆ ಅತ್ಯಾಶ್ಚರ್ಯಕರವಾದುದಾಗಿದೆ. ವಾಗ್ದೇವಿಯೂ ಸಹ ಉಚ್ಚರಿಸಲಾಗದಂತಹ ಮಾತುಗಳನ್ನು ಬಾಬಾ ತಮ್ಮ ಭಕ್ತರಿಗೊಸುಗ ಉಚ್ಚರಿಸುತ್ತಿದ್ದರು. ಬಾಬಾ ಒಂದು ಸಾರೆ ಈ ರೀತಿ ಹೇಳಿದರು. "ನಾನು ನಿಮಗೆ ಋಣಿ. ನಿಮ್ಮ ದರ್ಶನದಿಂದ ನಾನು ತೃಪ್ತನಾಗಿದ್ದೇನೆ. ನಿಮ್ಮ ಪಾದಗಳನ್ನು ನೋಡಿ ನಾನು ಧನ್ಯನಾದೆ." ಇದೆಂತಹ ನಮ್ರತೆ! ಇದನ್ನು ಪ್ರಕಟಿಸುವುದರಿಂದ ಬಾಬಾರವರಿಗೆ ಅವಮಾನ ಮಾಡಿದಂತೆ ಎಂದು ಕೆಲವರು ಯೋಚಿಸಿದರೆ ನಾವು ಕ್ಷಮೆ ಕೇಳುತ್ತೇವೆ ಮತ್ತು ಪ್ರಾಯಶ್ಚಿತ್ತ ರೂಪವಾಗಿ ಅವರ ನಾಮವನ್ನು ಹಾಡುತ್ತೇವೆ.

ಬಾಬಾ ಅವರು ಲೌಕಿಕದಲ್ಲಿ ಎಲ್ಲರಂತೆ ಆಶೆ-ಆಕಾಂಕ್ಷೆಗಳನ್ನಿಟ್ಟು ಕೊಂಡಿದ್ದರೂ ಸಹ ಅವರಿಗೆ ಅದರಲ್ಲಿ ಅಭಿರುಚಿ ಇರಲಿಲ್ಲ. ಆಹಾರವನ್ನು ಸೇವಿಸುತ್ತಿದ್ದರೂ ಅಹ ರುಚಿಯ ಕಡೆಗೆ ಗಮನವಿರಲಿಲ್ಲ. ನೋಡುತ್ತಿದ್ದರೂ ಸಹ, ಯಾವ ವಿಧವಾದ ಮೋಹ ತೋರಿಸುತ್ತಿರಲಿಲ್ಲ. ಶ್ರೀರಾಮ ಭಕ್ತ ಹನುಮಾನರಂತೆ ಅವರು ಅಜನ್ಮ ಬ್ರಹ್ಮಚಾರಿಗಳಾಗಿದ್ದರು. ಯಾವುದರಲ್ಲಿಯೂ ಸಂಪರ್ಕವಿಟ್ಟು ಕೊಂಡಿರಲಿಲ್ಲ. ಶುದ್ಧ ಸ್ಮೃತಿಯುಳ್ಳವರಾಗಿ, ಅವರು ಕರುಣಾಮಯಿಗಳೂ ಮತ್ತು ನಿ:ಸ್ವಾರ್ಥಿಗಳೂ ಆಗಿದ್ದರು. ಇದನ್ನು ಪ್ರತಿಪಾದಿಸುವ ಉದಾಹರಣೆ ಈ ರೀತಿಯಿದೆ.

## ನಾನಾವಲ್ಲಿ

ಶಿರ್ಡಿಯಲ್ಲಿ ಒಬ್ಬ ವಿಲಕ್ಷಣ ವ್ಯಕ್ತಿಯಾದ ನಾನಾವಲ್ಲಿ ಎಂಬ ಫಕೀರನಿದ್ದನು. ಅವನು ಬಾಬಾರವರ ಚಲನವಲನಗಳನ್ನೇ ವೀಕ್ಷಿಸುತ್ತಿದ್ದನು. ಒಂದು ದಿನ ಅವನು ಬಾಬಾರವರಲ್ಲಿಗೆ ಬಂದು

"ನಿಮ್ಮ ಆಸನವನ್ನು ಬಿಟ್ಟೇಳಿರಿ. ನಾನು ಅಲ್ಲಿ ಕುಳಿತುಕೊಳ್ಳುತ್ತೇನೆ" ಎಂದನು. ಬಾಬಾರವರು ಕೂಡಲೇ ಎದ್ದು ಆಸನಬಿಟ್ಟು ಕೊಟ್ಟರು. ನಾನಾವಲ್ಲಿ ಅಲ್ಲಿ ಸ್ವಲ್ಪ ಕಾಲ ಕುಳಿತುಕೊಂಡು ನಂತರ ಎದ್ದು ಬಂದು ಪುನಃ ಬಾಬಾರವರಿಗೆ ಆಸನ ಬಿಟ್ಟುಕೊಟ್ಟನು. ಬಾಬಾರವರು ಆಸನದಲ್ಲಿ ಕುಳಿತುಕೊಂಡ ನಂತರ ನಾನಾವಲ್ಲಿ ಮತ್ತೆ ಅವರ ಪಾದಕ್ಕೆರಗಿ ನಮಸ್ಕರಿಸಿ ಹೊರಟು ಹೋದನು. ಇದರಿಂದ ಬಾಬಾರವರಿಗೆ ಸ್ವಲ್ಪವೂ ಅಸಮಾಧಾನವಾಗಲಿಲ್ಲ.

ನಂತರ ನಾನಾವಲ್ಲಿ ಬಾಬಾರವರ ಪರಮ ಭಕ್ತರಾಗಿ ಬಾಬಾರವರು ಮಹಾಸಮಾಧಿ ಹೊಂದಿದ ಸ್ವಲ್ಪ ದಿನಗಳಲ್ಲಿಯೇ ಪರಲೋಕ ಯಾತ್ರೆ ಬೆಳೆಸಿದನು.

## ಸುಗಮವಾದ ದಾರಿ

ಸಾಧು ಸಂತರ ಕಥೆಗಳನ್ನು ಕೇಳುವುದು ಮತ್ತು ಅವರ ಜೋತೆಯಲ್ಲಿ ವಾಸ ಮಾಡುವುದು.

ಬಾಬಾರವರು ಲೌಕಿಕದಲ್ಲಿ ಸಾಮಾನ್ಯ ಮನುಷ್ಯರಂತೆ ವರ್ತಿಸುತ್ತಿದ್ದರು. ಅವ ನಡೆ–ನುಡಿಗಳಲ್ಲಿ ಒಂದು ವಿಶೇಷತೆಯಿತ್ತು ಇದರಿಂದ ಅಪರೂಪವಾದ ಪ್ರತಿಭೆ ಕಂಡು ಬರುತ್ತಿತ್ತು. ಅವರು ಮಾಡಿದುದೆಲ್ಲವೂ ಭಕ್ತರ ಹಿತಕ್ಕಾಗಿಯೇ. ಅವರು ತಮ್ಮ ಭಕ್ತರಿಗೆ ಯಾವುದೊಂದು ಯೋಗಾಸನವನ್ನಾಗಲಿ, ಧಾರ್ಮಿಕ ರೀತಿಯನ್ನಾಗಲಿ ಹೇಳಿ ಕೊಡಲಿಲ್ಲ. ಮಂತ್ರೋಪದೇಶ ಮಾಡುತ್ತಿರಲಿಲ್ಲ. ಅಹಂಬಾವನ್ನು ತ್ಯಜಿಸಿ ಯಾವಾಗಲೂ "ಸಾಯಿ ಸಾಯಿ" ಎಂದು ಉಚ್ಚರಿಸಿರೆಂದು ಮಾತ್ರ ಬಾಬಾ ಹೇಳುತ್ತಿದ್ದರು. ಇದರಂತೆ ನೀವು ನಡೆದರೆ ನಿಮ್ಮ ತೊಂದರೆಗಳೆಲ್ಲವೂ ನಿವಾರಣೆಯಾಗುತ್ತವೆ. ಅಗ್ನಿಕುಂಡದ ಮುಂದೆ ಕುಳಿತು ಯಾಗ ಮಾಡುವುದು ಬ್ರಾಹ್ಮಣರಿಗೆ ಮಾತ್ರ ಸಾಧ್ಯ. ಅದು ಬೇರೆ

ವರ್ಗದವರಿಗೆ ಸಾಧ್ಯವಿಲ್ಲ. ಯೋಚನೆ ಮಾಡುವುದೊಂದೇ ಮನಸ್ಸಿನ ಕೆಲಸ. ಯೋಚಿಸದೆ ಮನಸ್ಸು ಒಂದು ಕ್ಷಣವಾದರೂ ಇರಲಾರದು. ಅದಕ್ಕೆ ಇಂದ್ರಿಯ ವಸ್ತುವನ್ನು ಕೊಟ್ಟರೆ ಅದನ್ನೇ ಕುರಿತು ಚಿಂತಿಸುತ್ತದೆ. ಗುರುವನ್ನು ಕೊಟ್ಟರೆ ಅವನನ್ನೇ ಕುರಿತು ಚಿಂತಿಸುತ್ತದೆ. ನೀವು ಬಾಬಾರವರ ಗುಣ ಮತ್ತು ಪ್ರತಿಭೆಯನ್ನು ಕೇಳಿರುವಿರಿ. ಅದನ್ನು ಪ್ರತಿ ದಿನವೂ ಕೇಳಿರಿ. ಇದೇ ನೀವು ಬಾಬಾರವರಿಗೆ ಸಲ್ಲಿಸಬಹುದಾದ ನೈಸರ್ಗಿಕ ಪೂಜೆ. ಸಂತರ ಕಥೆಗಳನ್ನು ಕೇಳುವುದು ಈ ಹಿಂದೆ ಹೇಳಿದ ಸಾಧನಗಳಷ್ಟು ಕಷ್ಟವಲ್ಲ. ಅದು ನಿಮ್ಮನ್ನು ಸಂಸಾರ ಬಂಧನದ ಹೆದರಿಕೆಯಿಂದ ತಪ್ಪಿಸಿ ಧಾರ್ಮಿಕ ಪಥದೆಡೆಗೆ ಸಾಗಿಸುತ್ತದೆ. ಆದುದರಿಂದ ಅಂಥ ಕಥೆಗಳನ್ನು ಕೇಳಿರಿ ಮತ್ತು ಮನಸ್ಸಿನಲ್ಲಿ ಗ್ರಹಿಸಿಕೊಳ್ಳಿರಿ. ಇದನ್ನು ಮಾಡಿದರೆ ಎಲ್ಲ ವರ್ಗದವರೂ ಪರಿಶುದ್ಧರಾಗಬಹುದು. ನೀವು ಎಲ್ಲಿಯೇ ಇರಿ, ಯಾವುದೇ ಕೆಲಸ ಮಾಡುತ್ತಿರಿ, ನಿಮ್ಮ ಮನಸ್ಸನ್ನು ಶ್ರೀ ಸಾಯಿಯವರಲ್ಲಿ ಇಡಿ. ಅವರು ಖಂಡಿತವಾಗಿಯೂ ನಿಮ್ಮನ್ನು ಆಶೀರ್ವದಿಸುವರು. ಇದೇ ಬಾಬಾ ಅವರನ್ನು ಅರಿಯಲು ಸುಲಭವಾದ ಸಾಧನ. ಎಲ್ಲರೂ ಇದನ್ನು ಅಭ್ಯಾಸ ಮಾಡಲಾರರು. ಕಾರಣ, ಭಗವಂತನ ದಯೆ ಇಲ್ಲದೆ ನಮಗೆ ಸಂತರ ಕಥೆಗಳನ್ನು ಕೇಳುವ ಮನಸ್ಸು ಬರುವುದಿಲ್ಲ. ಅವರ ಕಥೆಗಳನ್ನು ಕೇಳಿದರೆ ಅವರೊಡನಿದ್ದಂತಯೇ. ಸಂತರೊಡನೆ ಇರುವುದು ಬಹು ಮುಖ್ಯವಾದದ್ದು. ಅದು ನಿಮ್ಮ ದೇಹಸ್ಮೃತಿಯನ್ನು ತಪ್ಪಿಸಿ, ಅಹಂಭಾವವನ್ನು ತೆಗೆದೊಗೆದು ಜನನ ಮರಣಗಳಿಂದ ನಮ್ಮನ್ನು ವಿಮುಕ್ತ ಮಾಡಿ, ಹೃದಯದ ಎಲ್ಲ ಗಂಟುಗಳನ್ನು ಬಿಡಿಸಿ, ಶುದ್ಧ ಚೈತನ್ಯನಾದ ಆ ವಾಸುದೇವನಲ್ಲಿಗೆ ನಿಮ್ಮನ್ನು ಕರೆದೊಯ್ಯುತ್ತದೆ. ಇದು ಇಂದ್ರೀಯ ವಸ್ತಗಳಲ್ಲಿ ವಿರಕ್ತಿ ಹುಟ್ಟಿಸಿ ನಿ:ಸ್ವಾರ್ಥಿಗಳನ್ನಾಗಿ ಮಾಡಿ, ಧಾರ್ಮಿಕ ಪಥದೆಡೆಗೆ ಸಾಗಿಸುತ್ತದೆ. ಪೂಜೆ, ಭಕ್ತಿ ಅಥವಾ ಅವರ ನಾಮಸ್ಮರಣೆಯೆಂಬ ಸಾಧನಗಳು ನಿಮಗೆ ಸಾಧ್ಯವಾಗದಿದ್ದರೆ,

ಆ ಪರಮಾತ್ಮನನ್ನೇ ನಿಶ್ಚಲ ಚಿತ್ತದಿಂದ ಧ್ಯಾನಿಸಿದರೆ ಈ ಸಂಸಾರಸಾಗರವನ್ನು ದಾಟಬಹುದು. ಇದಕ್ಕೋಸ್ಕರವೇ ಸಾಧು ಸಂತರು ಜನ್ಮ ತಾಳುವುದು. ನಮ್ಮ ಪಾಪಗಳನ್ನು ನಿರ್ಮೂಲ ಮಾಡುವ ಗಂಗೆ, ಗೋದಾವರಿ, ಕೃಷ್ಣೆ, ಕಾವೇರಿ ನದಿಗಳು ಸಹ ಸಂತರು ತಮ್ಮಲ್ಲಿ ಬಂದು ಸ್ನಾನ ಮಾಡಿ, ತಮ್ಮನ್ನು ಪವಿತ್ರ ಮಾಡಬೇಕೆಂದು ಹಾತೊರೆಯುತ್ತವೆ. ಇದು ಸಂತರ ವೈಭವ. ನಮಗೆ ಬಾಬಾರವರ ಪಾದ ದರ್ಶನ ಲಭಿಸಿದುದು ನಮ್ಮ ಪೂರ್ವ ಜನ್ಮದ ಸುಕೃತವೇ ಸರಿ!

ಮಸೀದಿಯ ಒಂದು ಮೂಲೆಯಲ್ಲಿ ದಯಾಮಯರಾಗಿ ಉಧಿಯನ್ನು ನೀಡುತ್ತಿರುವ ಬಾಬಾ ಅವರ ಚಿತ್ರವನ್ನು ನೆನಪಿನಲ್ಲಿಟ್ಟುಕೊಂಡು, ಸದ್ಗುಣ ಸಂಪನ್ನರಾದ ಅವರನ್ನು ಧ್ಯಾನಿಸಿ ಈ ಅಧ್ಯಾಯವನ್ನು ಮುಗಿಸೋಣ.

**ಶ್ರೀ ಸಾಯಿ ಪ್ರಣಾಮ**

# ೧೧ನೇ ಅಧ್ಯಾಯ

**ಸಗುಣ ಬ್ರಹ್ಮ ಸಾಯಿಬಾಬಾ– ಡಾಕ್ಟರ ಪಂಡಿತ ಅವರ ಪೂಜಾ ವಿಧಾನ – ಹಾಜಿ ಸಿದೀಕ ಫಾಳಕೆ – ಪಂಚಭೂತಗಳ ಮೇಲೆ ಹತೋಟಿ**

## ಸಗುಣ ಬ್ರಹ್ಮ ಸಾಯಿಬಾಬಾ

ಬ್ರಹ್ಮನಿಗೆ ಎರಡು ರೂಪಗಳಿವೆ. ನಿರ್ಗುಣ ಮತ್ತು ಸಗುಣ. ನಿರ್ಗುಣನಿಗೆ ರೂಪವಿಲ್ಲ. ಸಗುಣನಿಗೆ ರೂಪ ಇದೆ. ಕೆಲವರು ಮೊದಲನೆಯವನನ್ನೂ ಕೆಲವರು ಎರಡನೆಯವನನ್ನೂ ಪೂಜಿಸುತ್ತಾರೆ. ಗೀತೆಯಲ್ಲಿ ಹೇಳಿರುವಂತೆ (ಅಧ್ಯಾಯ ೧೨) ಸಗುಣ ಬ್ರಹ್ಮನ ಪೂಜೆಯೇ ಸುಲಭವಾದುದು ಮತ್ತು ಯೋಗ್ಯವಾದುದು. ಮನುಷ್ಯನಿಗೆ ಒಂದು ರೂಪವಿರುವುದರಿಂದ ಅವನು ದೇವರ ಸಗುಣ ರೂಪವನ್ನೇ ಪೂಜಿಸಲು ಇಚ್ಛೆಪಡುತ್ತಾನೆ. ನಮ್ಮ ಪ್ರೀತಿ ಮತ್ತು ಭಕ್ತಿಗಳು ಕೆಲವು ಕಾಲವಾದರೂ ಸಗುಣ ಬ್ರಹ್ಮನನ್ನು ಪೂಜಿಸದಿದ್ದರೆ ಅವು ಅಭಿವೃದ್ಧಿಯಾಗಲಾರವು. ಹೀಗೆ ಸಗುಣ ಬ್ರಹ್ಮನ ಪೂಜೆ ಮಾಡುತ್ತ ಹೋದರೆ ಅವು ಅಭಿವೃದ್ಧಿ ಹೊಂದಿ ಸ್ವಾಭಾವಿಕವಾಗಿ ನಿರ್ಗುಣ ಬ್ರಹ್ಮನನ್ನು ಆರಾಧಿಸುವ ಶಕ್ತಿಯುಂಟಾಗುತ್ತದೆ. ಆದ್ದರಿಂದ ನಾವು ಮೊದಲು ಸಗುಣ ಬ್ರಹ್ಮನನ್ನೇ ಆರಾಧಿಸೋಣ. ವಿಗ್ರಹ, ವೇದಿಕೆ, ಅಗ್ನಿ, ಬೆಳಕು, ಸೂರ್ಯ, ಉದಕ, ಬ್ರಾಹ್ಮಣ ಇವು ಏಳೂ ಆರಾಧನೆಯ ಮೂಲವಸ್ತುಗಳು. ಆದರೆ ಸದ್ಗುರುವಿನ ಆರಾಧನೆ ಇವೆಲ್ಲಕ್ಕಿಂತ ಉತ್ತಮವಾದುದು. ಕಾರಣ ನಾವು ಈಗ ಮಹಾ ತೇಜಸ್ವಿನಿಯಾದ, ಸದ್ಗುಣ ಸಂಪನ್ನರಾದ ಸಾಯಿಬಾಬಾ ಅವರನ್ನು ಸ್ಮರಿಸೋಣ. ಸಾಯಿಬಾಬಾರವರನ್ನು ಕೆಲವರು ದೈವಭಕ್ತರೆಂದೂ ಮತ್ತೆ ಕೆಲವರು ಮಹಾ ಭಾಗವತರೆಂದು ಹೇಳಿರುತ್ತಾರೆ. ಆದರೆ ನಮಗೆ

ಸಾಯಿಬಾಬಾ ದೇವರ ಅವತಾರ, ಅವರ ದಯೆ, ತಾಳ್ಮೆ ಮತ್ತು ವಿನಯಸಂಪನ್ನತೆಗೆ ಯಾರೂ ಸರಿಯಾಗಲಾರರು. ಗಂಗಾ ನದಿಯು ಸಮುದ್ರವನ್ನು ಸೇರುವ ಮೊದಲು ದಾರಿಯಲ್ಲಿ ಜನರ ಮತ್ತು ಪ್ರಾಣಿಗಳ ದಾಹವನ್ನೆಲ್ಲ ನೀಗಿಸುತ್ತ ಗಿಡ–ಮರ ಮತ್ತು ಪೈರುಗಳಿಗೆ ಜೀವಕಳೆಯನ್ನು ತುಂಬುತ್ತ ಸಾಗುವಂತೆ ಸಾಯಿಬಾಬಾ ಅವರಂಥ ಸಂತರು ತಮ್ಮ ಜೀವಿತದಲ್ಲಿ ಅನೇಕರಿಗೆ ಶಾಂತಿ ಸೌಲಭ್ಯಗಳನ್ನು ದೊರಕಿಸಿಕೊಡುತ್ತಾರೆ. ಆದುದರಿಂದಲೇ ಭಗವಾನ್ ಶ್ರೀ ಕೃಷ್ಣನು "ಸಂತರೇ, ನನ್ನ ಅತ್ಮ–ನನ್ನ ಜೀವಿತ ಮೂರ್ತಿಗಳು "ಎಂದು ಸಾರಿದ್ದಾನೆ. ಇಂಥ ಒಂದು ವರ್ಣನಾತೀತ ಶಕ್ತಿ ಮತ್ತು ಜ್ಞಾನ ಶಿರ್ಡಿಯಲ್ಲಿ ಶ್ರೀ ಸಾಯಿಬಾಬಾರವರ ಅವತಾರದಲ್ಲಿ ವ್ಯಕ್ತವಾಗಿದೆ. ಶ್ರುತಿಯು (ತೈತ್ರೇಯ ಉಪನಿಷತ್) ಬ್ರಹ್ಮನನ್ನು ಪರಮ ಸುಖಿಯೆಂದು ವಿವರಿಸಿದೆ. ಆದರೆ ಕೆಲವು ಭಕ್ತರು ಶಿರ್ಡಿಯ ಬಾಬಾರವರಲ್ಲಿ ಇವೆಲ್ಲವನ್ನು ಕಂಡಿದ್ದರು. ನಮಗೆಲ್ಲರಿಗೂ ಆಧಾರವಾದ ಸಾಯಿಬಾಬಾರವರಿಗೆ ಯಾರ ಆಧಾರವೂ ಬೇಕಿರಲಿಲ್ಲ. ಬಾಬಾರವರ ಆಸನವೆಂದರೆ ಒಂದು ಗೋಣಿಚೀಲ. ಆದರೆ ಭಕ್ತರು ಅದಕ್ಕೆ ಒಳ್ಳೆಯ ಅಂದವಾದ ಬಟ್ಟೆ ಹಾಕಿ ಹೊಲಿದು ಒರಗಿಕೊಳ್ಳಲು ಒಂದು ದಿಂಬನ್ನೂ ಸಹ ಇಟ್ಟಿದ್ದರು. ಬಾಬಾರವರು ಭಕ್ತರ ಬಯಕೆಗಳಿಗೆ ಮನಸೋತು ಅವರವರ ಇಚ್ಛೆಯಂತೆ ತಮ್ಮನ್ನು ಆರಾಧಿಸಲು ಅನುಮತಿ ನೀಡಿದ್ದರು. ಕೆಲವರು ಚಾಮರ ಬೀಸುತ್ತಿದ್ದರು. ಕೆಲವು ಅವರ ಚರಣಾರವಿಂದಗಳನ್ನು ತೊಳೆಯುತ್ತಿದ್ದರು. ಕೆಲವರು ಚಂದನ ಮುಂತಾದ ಸುಗಂಧ ದ್ರವ್ಯಗಳನ್ನು ಲೇಪಿಸುತ್ತಿದ್ದರು. ಕೆಲವರು ತಾಂಬೂಲ ನೀಡುತ್ತಿದ್ದರು. ಕೆಲವರು ನೈವೇದ್ಯ ಅರ್ಪಿಸುತ್ತಿದ್ದರು. ಅವರು ನೋಡಲು ಶಿರ್ಡಿಯಲ್ಲಿ ವಾಸಿಸುತ್ತಿರವ ಹಾಗೆ ಕಂಡರೂ ಎಲ್ಲೆಡೆಗೂ ವಾಸವಾಗಿದ್ದರು. ಈ ಅಂತರ್ಯಾಮಿತ್ವವು ಭಕ್ತರಿಗೆ ಅನುಭವವೇದ್ಯವಾಗಿದ್ದಿತು. ಇಂತಹ ಅಂತರ್ಯಾಮಿಯಾದ ಅವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

## ಡಾಕ್ಟರ ಪಂಡಿತ ಅವರ ಪೂಜಾವಿಧಾನ

ಶ್ರೀ ತಾತ್ಯಾಸಾಹೇಬ ಅವರ ಸ್ನೇಹಿತರಾದ ಡಾ. ಪಂಡಿತ ಅವರು ಒಂದು ಸಾರೆ ಬಾಬಾರವರ ದರ್ಶನಕ್ಕೆಂದು ಶಿರ್ಡಿಗೆ ಬಂದರು. ಬಾಬಾರವರಿಗೆ ನಮಸ್ಕರಿಸಿ ಸ್ವಲ್ಪ ಹೊತ್ತು ಮಸೀದಿಯಲ್ಲಿ ಕುಳಿತರು. ಆಗ ಬಾಬಾರವರು ಅವರಿಗೆ ಶ್ರೀ ದಾದಾ ಕೇಳಕರ ಅವರಲ್ಲಿಗೆ ಹೋಗುವಂತೆ ಹೇಳಿದರು. ಆದ್ದರಿಂದ ಅವರು ಕೇಳಕರ ಅವರ ಕಡೆಗೆ ಬಂದರು. ಆಗ ದಾದಾ ಕೇಳಕರ ಅವರು ಪೂಜಾ ಸಾಮಗ್ರಿಗಳೊಡನೆ ಮಸೀದಿಗೆ ಹೊರಟಿದ್ದರು. ಡಾಕ್ಟರ ಅವರೂ ಸಹ ಅವರೊಡನೆ ಮಸೀದಿಗೆ ಬಂದರು. ದಾದಾರವರು ಬಾಬಾರವರ ಪೂಜೆ ನೆರವೇರಿಸಿದರು. ಗಂಧವನ್ನು ಬಾಬಾರವರ ಹಣೆಗೆ ಹಚ್ಚುವ ಧೈರ್ಯ ಯಾರಿಗೂ ಇರಲಿಲ್ಲ. ಇದನ್ನು ಮ್ಹಾಳಸಾಪತಿಯವರು ಮಾತ್ರ ಹಚ್ಚುತ್ತಿದ್ದರು. ಆದರೆ ಡಾ. ಪಂಡಿತ ಅವರು ದಾದಾಭಟ್ಟ ಅವರ ತಟ್ಟೆಯಲ್ಲಿದ್ದ ಗಂಧವನ್ನು ತೆಗೆದುಕೊಂಡು ಬಾಬಾರವರ ಹಣೆಯ ಮೇಲೆ ತ್ರಿಪುಂಡ್ರವನ್ನೆಳೆದರು. ಬಾಬಾರವರು ಸುಮ್ಮನಿದ್ದುದನ್ನು ಕಂಡು ಎಲ್ಲರೂ ಅಚ್ಚರಿಗೊಂಡರು. ಆ ದಿನ ಸಾಯಂಕಾಲ ಕೇಳಕರ ಅವರು ಸಾಯಿಬಾಬಾರವರನ್ನು ಕುರಿತು, "ಈ ಹಿಂದೆ ಗಂಧವನ್ನು ನಿಮ್ಮ ಹಣೆಗೆ ಹಚ್ಚಲು ಸಮ್ಮತಿಸಿರಲಿಲ್ಲ. ಡಾಕ್ಟರರು ಈ ದಿನ ಹಚ್ಚಿದಾಗ ಸುಮ್ಮನಿದ್ದಿರಿ ಹೀಗೇಕೆ?" ಎಂದು ಕೇಳಿದರು. ಆಗ ಬಾಬಾ ಅವರು "ಡಾಕ್ಟರರು ನನ್ನನ್ನು ತಮ್ಮ ಕುಲ ಗುರುವೆಂದೇ ಭಾವಿಸಿ, ಗಂಧವನ್ನು ಹಚ್ಚಿದರು; ನಾನು ಹೇಗೆ ಬೇಡವೆನ್ನಲಿ ?" ಎಂದರು. ನಂತರ ಡಾಕ್ಟರ ಅವರನ್ನು ವಿಚಾರಸಲಾಗಿ "ಬಾಬಾರವರನ್ನು ನನ್ನ ಕುಲಗುರವೆಂದೆ ಭಾವಿಸಿ ಗಂಧವನ್ನಿಟ್ಟೆ" ಎಂಬ ಉತ್ತರ ಬಂದಿತು.

ಭಕ್ತರು ತಮ್ಮ ಇಚ್ಛಾನುಸಾರ ತಮ್ಮನ್ನು ಪೂಜಿಸಲು ಬಾಬಾ ಅನುಮತಿ ನೀಡಿದ್ದರೂ ಸಹ ಕೆಲವು ವೇಳೆ ವಿಚಿತ್ರವಾಗಿ

ವರ್ತಿಸುತ್ತಿದ್ದರು. ಕೆಲವು ಸಾರೆ ಪೂಜಾಸಾಮಗ್ರಿಗಳನ್ನು ಬಿಸುಟಿ ಬಹಳ ಕೋಪಿಷ್ಠರಾಗುತ್ತಿದ್ದರು. ಕೆಲವು ಸಾರೆ ಭಕ್ತರನ್ನು ಬೈಯುತ್ತಿದ್ದರು. ಅನೇಕ ಸಾರೆ ಮೇಣಕ್ಕಿಂತಲೂ ಮೃದುವಾದ ರೀತಿಯಲ್ಲಿ ಭಕ್ತರನ್ನು ಕಾಣುತ್ತಿದ್ದರು. ಅಂತರಂಗದಲ್ಲಿ ಶಾಂತರಾಗಿರುತ್ತಿದ್ದರು. ಕೆಲವು ವೇಳೆ ಭಕ್ತರನ್ನು ಸಮೀಪಕ್ಕೆ ಕರೆದು, "ನಾನು ನಿಮ್ಮ ಮೇಲೆ ಕೋಪಗೊಂಡಿದ್ದೇನೆಯೇ?" ಎಂದು ಕೇಳುತ್ತಿದ್ದರು. "ತಾಯಿಯು ಮಕ್ಕಳನ್ನು ತ್ಯಜಿಸುವುದಾದರೆ, ಸಾಗರವು ನದಿಗಳನ್ನು ತಿರಸ್ಕರಿಸುವುದಾದರೆ, ನಾನು ಭಕ್ತರ ಯೋಗಕ್ಷೇಮವನ್ನು ಮರೆಯುವೆನು. ನಾನು ಭಕ್ತರ ಸೇವಕ. ಯಾವಾಗ ಅವರು ನನ್ನ ಸಹಾಯ ಅಪೇಕ್ಷಿಸುತ್ತಾರೆಯೋ, ಆಗ ಅವರನ್ನು ನಿಜವಾಗಿಯೂ ಕಾಪಾಡುತ್ತೇನೆ" ಎಂದು ಸಾಯಿಬಾಬಾ ಹೇಳಿರುತ್ತಾರೆ.

## ಹಾಜಿ ಸಿದೀಕ ಫಾಳಕೆ

ಬಾಬಾರವರು ಭಕ್ತರನ್ನು ಯಾವಾಗ ಸ್ವೀಕರಿಸುತ್ತಾರೆಂಬುದು ತಿಳಿದಿರಲಿಲ್ಲ. ಅದು ಅವರ ಮನಸ್ಸನ್ನವಲಂಬಿಸಿತ್ತು. ಸಿದೀಕ ಫಾಳಕೆಯವರು ಕತೆ ಇದನ್ನು ತೋರಿಸುತ್ತದೆ. ಕಲ್ಯಾಣದ ಮಹಮ್ಮದೀಯರಾದ ಶ್ರೀ ಹಾಜಿ ಸಿದೀಕ ಫಾಳಕೆಯವರು, ಮಕ್ಕಾ-ಮದೀನಾ ಯಾತ್ರೆ ಮುಗಿಸಿಕೊಂಡು ಶಿರ್ಡಿಗೆ ಬಂದಿದ್ದರು. ಮಸೀದಿಯ ಉತ್ತರದಲ್ಲಿದ್ದ ಚಾವಡಿಯಲ್ಲಿ ಅವರು ತಂಗಿದ್ದರು. ಒಂಬತ್ತು ತಿಂಗಳ ಕಾಲ ಮಸೀದಿಯೊಳಗೆ ಬರಲು ಬಾಬಾ ಅವರಿಗೆ ಅವಕಾಶ ನೀಡಿರಲಿಲ್ಲ. ಫಾಳಕೆಯವರಿಗೆ ಏನು ಮಾಡಬೇಕೆಂಬುದು ತಿಳಿಯದಾಗಿದ್ದಿತು. ಕೆಲವರು ಶ್ಯಾಮ ಅವರ ಮೂಲಕ ಬಾಬಾರವರ ದರ್ಶನ ಪಡೆಯಬಹುದೆಂದು ಹೇಳಿದರು. ಶಿವನನ್ನು ನಂದಿಯ ಮೂಲಕ ದರ್ಶಿಸುವಂತೆ ಬಾಬಾರವರನ್ನು ಶ್ಯಾಮನ ಮೂಲಕ ದರ್ಶನ ಮಾಡಬೇಕೆಂಬುದೇ ಅವರ ಅಭಿಮತವಾಗಿದ್ದಿತು. ಫಾಳಕೆ

ಅವರು ಇದನ್ನು ಶ್ಯಾಮ ಅವರಲ್ಲಿಗೆ ಬಂದು ಬಾಬಾರವರ ದರ್ಶನ ಸೌಲಭ್ಯ ಒದಗಿಸಿಕೊಡಬೇಕೆಂದು ಕೇಳಿಕೊಂಡರು. ಶ್ಯಾಮ ಅವರು ಅದಕ್ಕೊಪ್ಪಿ ಅನುಕೂಲ ನೋಡಿಕೊಂಡು ಬಾಬಾ ಅವರನ್ನು ಕುರಿತು ಬಾಬಾ, ಆ ವೃದ್ಧ ಹಾಜಿಯನ್ನು ಯಾಕೆ ಮಸೀದಿಯೊಳಗೆ ಬಿಡಬಾರದು? ಅನೇಕ ಜನರು ದರ್ಶನ ಪಡೆದು ಹೋಗುತ್ತಿದ್ದಾರೆ. ಅವರನ್ನೇಕೆ ತಾವು ಆಶೀರ್ವದಿಸಬಾರದು?" ಎಂದು ಕೇಳಿದರು. ಆಗ ಬಾಬಾ ಅವರು "ನೀನು ಹುಡುಗ ಇನ್ನೂ ನಿನಗೆ ತಿಳಿದಿಲ್ಲ, ದೇವರು ಅಪ್ಪಣೆ ಕೊಡದಿದ್ದರೆ ನಾನೇನು ಮಾಡಲು ಸಾಧ್ಯ? ಅವನ ದಯೆಯಿಲ್ಲದೆ ಯಾರೂ ಈ ಮಸೀದಿಯಲ್ಲಿ ಕಾಲಿಡಲು ಸಾಧ್ಯವಿಲ್ಲ; ಸರಿ, ನೀನು ಹೋಗಿ ನಾಳೆ ಅವರಿಗೆ ಬಾರವಿ ಬಾವಿಯ ಬಳಿ ಇರುವ ಕಾಲುದಾರಿಯಲ್ಲಿ ನನ್ನನ್ನು ಸಂಧಿಸಲು ಸಾಧ್ಯವೇ? ಕೇಳಿ ಬಾ" ಎಂದರು. ಶ್ಯಾಮ ಅವರು ಬಂದು ಹಾಜಿಯವರನ್ನು ಕೇಳಲು ಅವರು ಸಮ್ಮತಿಸಿದರು. ಅದನ್ನು ಬಾಬಾರವರಿಗೆ ತಿಳಿಸಿದರು. ಪುನ: ಬಾಬಾರವರು "ಅವರು ೪೦.೦೦೦ ರೂ.ಗಳನ್ನು ನಾಲ್ಕು ಕಂತಿನಲ್ಲಿ ಕೊಡಬಲ್ಲರೆ? ಕೇಳಿ ಬಾ" ಎಂದರು. ಶ್ಯಾಮ ಅವರು ಬಂದು ಹಾಜಿಯವರನ್ನು ಕೇಳಲು ಅವರು ೪೦ ಸಾವಿರವೇಕೆ, ನಾಲ್ವತ್ತು ಲಕ್ಷ ರೂ. ಕೊಡಲು ಸಿದ್ಧರೆಂದು ಉತ್ತರಿಸಿದರು. ಆಗ ಬಾಬಾರವರು ಪುನ: ನಾಳೆ ದಿನ ಮಸೀದಿಯಲ್ಲಿ ನಾವು ಆಡನ್ನು ವಧಿಸುತ್ತೇವೆ. ಅದರ ಮಾಂಸ ಮತ್ತು ಇತರ ಅವಯವಗಳನ್ನು ಅವರು ಸ್ವೀಕರಿಸಲು ಸಿದ್ಧರಿರುವರೋ ಕೇಳಿ ಬಾ" ಎಂದರು. ಶ್ಯಾಮ ಅವರು ಬಂದು ಹಾಜಿಯವರನ್ನು ಕೇಳಿದರು. ನಂತರ ಹಾಜಿಯವರು ಬಾಬಾರವರ ಪ್ರಸಾದವು ಏನೇ ಆಗಿರಲಿ ಅದನ್ನು ಸ್ವೀಕರಿಸಲು ಸಿದ್ಧರೆಂದು ಹೇಳಿ ಉತ್ತರವನ್ನು ಬಾಬಾರವರಿಗೆ ತಿಳಿಸಿದರು. ಆಗ ಬಾಬಾರವರು ಸಿಟ್ಟಿಗೆ ಬಂದು ತಮ್ಮ ಪಾತ್ರೆಯನ್ನು ಎಸೆದು ಹಾಜಿಯಲ್ಲಿಗೆ ಹೋಗಿ ನೀನು ಏತಕ್ಕೆ ಹಾಜಿಂಯೆಂದು ಹೇಳಿಕೊಳ್ಳುವೆ? ಕುರಾಣ

ಓದಿರುವುದು ಇಷ್ಟೇನೆ? ಮಕ್ಕಾ-ಮದೀನಾ ಯಾತ್ರೆ ಮಾಡಿ ಕೊಂಡಿರುವೆನೆಂದು ಜಂಬ ಕೊಚ್ಚಿಕೊಳ್ಳುವೆ! ನಾನು ಯಾರು ನಿನಗೆ ಗೊತ್ತಿಲ್ಲವೆ?" ಎಂದು ಹಾಜಿಯವರನ್ನು ಕೇಳಿದರು. ಹಾಜಿಯವರು ಸ್ತಂಭೀಭೂತರಾದರು, ನಂತರ ಅವರು ಮಸೀದಿಗೆ ಹಿಂತಿರುಗಿ, ಕೆಲವು ಮಾವಿನ ಹಣ್ಣುಗಳನ್ನು ತರಿಸಿ ಹಾಜಿಯವರಿಗೆ ಕೊಟ್ಟರು. ಮತ್ತು ತಮ್ಮ ಕಿಸೆಯಿಂದ ೫೫ರೂ.ಗಳನ್ನು ತೆಗೆದು ಹಾಜಿಯವರ ಕೈಗಿತ್ತರು. ಅಂದಿನಿಂದ ಹಾಜಿಯವರನ್ನು ಬಾಬಾ ಪ್ರೀತಿಸತೊಡಗಿದರು. ಹಾಜಿಯವರೂ ಸಹ ತಮಗೆ ಇಷ್ಟ ಬಂದಾಗ ಮಸೀದಿಗೆ ಬಂದು ಹೋಗುತ್ತಿದ್ದರು. ಅವರೂ ಸಹ ಸಾಯಿಬಾಬಾ ದರ್ಬಾರದ ಭಕ್ತರಾದರು.

## ಪಂಚಭೂತಗಳ ಮೇಲೆ ಹತೋಟಿ

ಬಾಬಾರವರು ಪಂಚಭೂತಗಳ ಮೇಲೆ ಹೇಗೆ ನಿಯಂತ್ರಣ ಇಟ್ಟಿದ್ದರು ಎಂಬುದನ್ನು ವಿವರಿಸಿ ಈ ಅಧ್ಯಾಯವನ್ನು ಮುಗಿಸೋಣ.

೧) ಒಂದು ದಿನ ಸಂಜೆ ಶಿರ್ಡಿಯಲ್ಲಿ ಬಿರುಗಾಳಿ ಎದ್ದಿತು. ಗಾಳಿ ಬಲವಾಗಿ ಬೀಸುತ್ತಿತ್ತು. ಗುಡುಗು ಮೊಳಗುತ್ತಿತ್ತು. ಮಿಂಚು ಹೊಳೆಯುತ್ತಿತ್ತು. ಮಳೆ ಧಾರಕಾರವಾಗಿ ಸುರಿಯತೊಡಗಿತು. ಕೇವಲ ಸ್ವಲ್ಪಕಾಲದಲ್ಲಿ ಎಲ್ಲೆಲ್ಲೂ ನೀರಿನ ಪ್ರವಾಹ ಆರಂಭವಾಯಿತು. ಹಕ್ಕಿಗಳು, ಪ್ರಾಣಿಗಳು ಮತ್ತು ಮನುಷ್ಯರಲ್ಲದೆ ಸಮಸ್ತ ಜೀವರಾಶಿಗಳೆಲ್ಲ ಆಶ್ರಯಕ್ಕಾಗಿ ಮಸೀದಿಯಲ್ಲಿ ನೆರೆದವು. ಶಿರ್ಡಿಯಲ್ಲಿ ಅನೇಕ ದೇವತೆಗಳಿದ್ದರೂ ಸಹ ಯಾರೂ ಸಹಾಯಕ್ಕೆ ಬರಲಿಲ್ಲ. ಆಗ ಜನರೆಲ್ಲರೂ ಬಾಬಾರವರನ್ನು ಮೊರೆಹೊಕ್ಕು ಬಿರುಗಾಳಿಯನ್ನು ಅಡಗಿಸುವಂತೆ ಬೇಡಿದರು. ಆಗ "ಏ ಬಿರುಗಾಳಿಯೇ, ನಿನ್ನ ಕೋಪವನ್ನು ತ್ಯಜಿಸು; ಶಾಂತನಾಗು" ಎಂದರು. ಕೆಲವೇ ನಿಮಿಷಗಳಲ್ಲಿ ಮಳೆಯು ಕಮ್ಮಿಯಾಯಿತು. ಗಗನದಲ್ಲಿ ಚಂದ್ರನು

ಮೂಡಿದನು. ಜನರು ಸಮಾಧಾನ ಚಿತ್ತದಿಂದ ತಮ್ಮ ಮನೆಗಳಿಗೆ ಹೋದರು.

## ಇನ್ನೊಂದು ಸಂದರ್ಭ

೨) ಬಾಬಾರವರು ಮಸೀದಿಯಲ್ಲಿ ಉರಿಯುತ್ತಿದ್ದ ಧುನಿಯಲ್ಲಿ ಅಗ್ನಿಯು ಒಮ್ಮೆ ಪ್ರಚಂಡವಾಗಿ ಉರಿಯತೊಡಗಿ ಮೇಲ್ಛಾವಣಿಯನ್ನು ಮುಟ್ಟುವಂತಾಯಿತು. ಮಸೀದಿಯಲ್ಲಿ ಕುಳಿತವರೆಲ್ಲರೂ ಏನೂ ಮಾಡಲು ತೋಚದೆ ಸುಮ್ಮನಿದ್ದರು. ಬಾಬಾ ಅವರಿಗೆ ಅಗ್ನಿಗೆ ನೀರು ಎರಚುವಂತೆ ಹೇಳಲು ಅಥವಾ ಉರಿಯನ್ನು ತಡೆಗಟ್ಟಲು ಇನ್ನೇನಾದರೂ ಮಾಡಿ ಎಂದು ಸೂಚಿಸಲು ಯಾರಿಗೂ ಧೈರ್ಯವಿರಲಿಲ್ಲ. ಬಾಬಾರವರು ಇದನ್ನು ಮನಗಂಡು ತಮ್ಮ ಸಟಕಾ ಕೈಗೆ ತೆಗೆದುಕೊಂಡು ಪಕ್ಕದಲ್ಲಿದ್ದ ಕಂಬಕ್ಕೆ ಹೊಡೆಯುತ್ತ "ಇಳಿಮುಖನಾಗು ಶಾಂತನಾಗು!" ಎಂದರು. ಸಟಕಾದ ಪ್ರತಿಯೊಂದು ಹೊಡೆತಕ್ಕೂ ಉರಿ ಇಳಿಮುಖವಾಗಹತ್ತಿತು. ಸ್ವಲ್ಪ ಹೊತ್ತಿನ ನಂತರ ಉರಿಯು ನಂದಿಹೋಯಿತು.

ಶ್ರೀ ಸಾಯಿಬಾಬಾ ದೇವರ ಅವತಾರರೂಪರು. ಯಾರು ಅವರನ್ನು ಮೊರೆ ಹೊಕ್ಕು ನಮಸ್ಕರಿಸುತ್ತಿದ್ದರೋ ಅವರನ್ನು ಬಾಬಾ ಸದಾ ಆಶೀರ್ವದಿಸುತ್ತಿದ್ದರು. ಯಾರು ಈ ಕಥೆಯನ್ನು ಪ್ರತಿ ದಿನವೂ ಪಠಿಸುತ್ತಾರೆಯೋ ಅಥವಾ ಶ್ರವಣ ಮಾಡುತ್ತಾರೆಯೋ ಅಂಥವರ ಕಷ್ಟಗಳೆಲ್ಲವೂ ನಿವಾರಣೆಯಾಗುವವು. ಅವರ ಅಭಿಷ್ಟಗಳೆಲ್ಲವೂ ಸಿದ್ಧಿಸಿ ಅವರು ಪರಮಾತ್ಮನನ್ನು ಹೊಂದುವರು.

## ಶ್ರೀ ಸಾಯಿ ಪ್ರಣಾಮ

# ೧೨ನೇ ಅಧ್ಯಾಯ

## ಕಾಕಾ ಮಹಾಜನಿ – ಧುಮಾಳ – ನಿಮೋಣಕರ – ಮೂಳೆ ಶಾಸ್ತ್ರಿ – ಡಾಕ್ಟರ ಮುಂತಾದವರ ಅನುಭವಗಳು

ಬಾಬಾರವರು ಭಕ್ತರನ್ನು ಹೇಗೆ ಬರಮಾಡಿಕೊಂಡು ಅವರನ್ನು ಆಶೀರ್ವದಿಸುತ್ತಿದ್ದರು ಎಂಬುದನ್ನು ಈ ಅಧ್ಯಾಯದಲ್ಲಿ ನೋಡೋಣ.

### ಸಂತರ ಧ್ಯೇಯ

ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಲೋಸುಗವೇ ಪರಮಾತ್ಮನು ಅನೇಕ ಅವತಾರಗಳೆನ್ನೆತ್ತಿದನೆಂಬುದು ಸರ್ವರಿಗೂ ತಿಳಿದ ಅಂಶ. ಆದರೆ ಸಂತರ ಧ್ಯೇಯವೇ ಬೇರೆ. ದುಷ್ಟರಾಗಲಿ, ಒಳ್ಳೆಯವರಾಗಲಿ ಎಲ್ಲರೂ ಅವರ ದೃಷ್ಟಿಯಲ್ಲಿ ಒಂದೇ. ಮೊದಲು ದುಷ್ಕರ್ಮಿಗಳಿಗೋಸುಗ ವ್ಯಥೆಪಟ್ಟುಕೊಂಡು ಅವರನ್ನು ಸಂತರು ಒಳ್ಳೆಯ ಹಾದಿಗೆ ತರಲು ಯತ್ನಿಸುತ್ತಾರೆ. ಭವ ಸಾಗರವನ್ನು ನಿರ್ಮೂಲ ಮಾಡುವ ಅಗಸ್ತ್ಯರವರು. ದೇವರು ಸಂತರಲ್ಲಿ ವಾಸಿಸುತ್ತಾನೆ. ಆದುದರಿಂದ ಸಂತರು ಪರಮಾತ್ಮನಿಂದ ಬೇರೆಯಲ್ಲ. ಇಂತಹ ಸಂತರ ಗುಂಪಿಗೆ ಸೇರಿದವರಲ್ಲಿ ಶ್ರೀ ಸಾಯಿಬಾಬಾ ಅಗ್ರಗಣ್ಯರು. ಅವರಲ್ಲಿ ದೈವಿಕತೆಯು ತೇಜಸ್ಸಿತ್ತು. ಸಮಸ್ತ ಜೀವರಾಶಿಗಳನ್ನೂ ಸಮದೃಷ್ಟಿಯಿಂದ ಕಾಣುತ್ತಿದ್ದರು. ಶತ್ರುಗಳಾಗಲಿ, ಮಿತ್ರರಾಗಲಿ ಅವರ ದೃಷ್ಟಿಯಲ್ಲಿ ಒಂದೇ. ಅವರು ಭಕ್ತರಿಗೋಸುಗ ತಮ್ಮ ಪುಣ್ಯದ ಗಣಿಯನ್ನು ಬರಿದುಮಾಡಿಕೊಂಡರು. ಬಾಬಾ ಅವರ ದರ್ಶನ ಯೋಗವಿದ್ದರೆ ಮಾತ್ರ ಅವರಲ್ಲಿಗೆ ಭಕ್ತರು ಹೋಗಬಹುದಾಗಿತ್ತು. ಅವರ ಯೋಗ ಬರದಿದ್ದರೆ, ಬಾಬಾರವರು ಅವರನ್ನು ಜ್ಞಾಪಿಸಿಕೊಳ್ಳದಿದ್ದರೆ ಅಥವಾ ಅವರ ಲೀಲೆಗಳು ಭಕ್ತರ ಕಿವಿಗಳನ್ನು ತಲುಪದೆ ಇದ್ದರೆ ಅಂಥವರು ಬಾಬಾರವರನ್ನು

ಕಾಣಬೇಕೆಂಬ ಚಿಂತನೆಯನ್ನಾದರೂ ಹೇಗೆ ಮಾಡಬಹುದು? ಸಾಯಿಬಾಬಾರವರನ್ನು ಕಾಣಬೇಕೆಂದು ಅಭಿಲಾಷೆ ಇಟ್ಟುಕೊಂಡ ಅನೇಕರಿಗೆ ಅವರ ಮಹಾಸಮಾದಿ ನಡೆಯುವ ತನಕವೂ ಅವರ ದರ್ಶನ ಪಡೆಯಲು ಅವಕಾಶ ದೊರೆಯಲೇ ಇಲ್ಲ ಇಂಥವರು ಅವರಲ್ಲಿ ಧೃಡ ವಿಶ್ವಾಸವನ್ನಿಟ್ಟು ಅವರ ಲೀಲೆಗಳನ್ನು ಕೇಳಿದರೆ ಅವರ ದರ್ಶನಾಂಕಾಕ್ಷೆ ನೆರವೇರಿದಂತೆಯೆ. ಬಾಬಾರವರ ದರ್ಶನ ಪಡೆದು ಶಿರ್ಡಿಯಲ್ಲಿಯೇ ಬಹಳ ದಿವಸವಿರಲು ಸಾಧ್ಯವಿರಲಿಲ್ಲ. ಬಾಬಾರವರು ಒಪ್ಪಿಗೆ ಕೊಡುವವರೆಗೆ ಅಲ್ಲಿ ಇರಬಹುದಾಗಿದ್ದಿತು. ಅಂತೆಯೆ ಅವರು ಅಪ್ಪಣೆ ಕೊಟ್ಟ ನಂತರವೇ ಶಿರ್ಡಿಯನ್ನು ಬಿಟ್ಟು ಹೊರಡಬೇಕಾಗುತ್ತಿತ್ತು. ಎಲ್ಲವೂ ಅವರ ಇಚ್ಛೆಯನ್ನವಲಂಬಿಸಿತ್ತು.

## ಕಾಕಾ ಮಹಾಜನಿ

ಒಂದು ಸಾರಿ ಕಾಕಾ ಮಹಾಜನಿ ಮುಂಬಯಿಯಿಂದ ಶಿರ್ಡಿಗೆ ಹೊರಟರು. ಅಲ್ಲಿ ಗೋಕುಲಾಷ್ಟಮಿ ಸಮಾರಂಭವನ್ನು ನೋಡಲೋಸುಗ ಒಂದು ವಾರ ಇರಬೇಕೆಂದು ಅವರು ನಿರ್ಧರಿಸಿದ್ದರು. ಅವರು ಶಿರ್ಡಿಗೆ ಬಂದು ಬಾಬಾರವರ ದರ್ಶನ ಪಡೆದು ಸ್ವಲ್ಪ ಹೊತ್ತಿನಲ್ಲಿಯೆ ಬಾಬಾರವರು "ನೀನು ಪುನ: ಯಾವಾಗ ಇಲ್ಲಿಂದ ಹೊರಡುವಿ ?" ಎಂದು ಕೇಳಿದರು. ಕಾಕಾ ಮಹಾಜನಿಯವರಿಗೆ ಆಶ್ಚರ್ಯವಾಯಿತು. ಉತ್ತರ ಕೊಡಲೇ ಬೇಕಾಯಿತು. " ನೀವು ಯಾವಾಗ ಅಪ್ಪಣೆ ಕೊಡುವಿರೋ ಆಗ ನಾನು ಹೊರಡಲು ಸಿದ್ಧ" ಎಂದುತ್ತರಿಸಿದರು. ಆಗ ಬಾಬಾರವರು "ನಾಳೆ ಹೊರಡು" ಎಂದರು. ಬಾಬಾರವರ ವಚನಗಳು ಶಾಸನಗಳಿದ್ದಂತೆ ಅವುಗಳನ್ನು ಪಾಲಿಸಬೇಕಿತ್ತು. ಅವರು ಬಾಬಾರವರ ಆಜ್ಞೆಯಂತೆ ಮರುದಿನ ಹೊರಟರು. ಅವರು ಮುಂಬಯಿಯನ್ನು ತಲುಪಿ ಕಛೇರಿಗೆ ಹೋದಾಗ ಅವರ ಮಾಲಿಕನು ಅವರ

ಬರುವವನ್ನೇ ಕಾಯುತ್ತಿದ್ದನೆಂದು ತಿಳಿದು ಬಂದಿತು. ಅಲ್ಲಿನ ಮ್ಯಾನೇಜರ್‌ಗೆ ಜ್ವರ ಬಂದಿದ್ದುದರಿಂದ ಕಾಕಾ ಮಹಾಜನಿಯವರ ಅಗತ್ಯವಿದ್ದಿತು. ಮಾಲಿಕನು ಈ ವಿಚಾರವಾಗಿ ಕಾಗದವನ್ನು ಕಾಕಾರವರಿಗೆ ಬರೆದಿದ್ದನು. ಅದು ಮರುದಿನ ಮುಂಬಯಿಗೆ ಮರಳಿ ಬಂದಿತು.

## ಭಾವುಸಾಹೇಬ ಧುಮಾಳ

ಒಮ್ಮೆ ನಾಸಿಕದ ವಕೀಲರಾದ ಭಾವುಸಾಹೇಬ ಧುಮಾಳರು ಒಂದು ಮೊಕದ್ದಮೆಗಾಗಿ ನಿಫಾಡಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಹಾಗೆಯೇ ಶಿರ್ಡಿಗೆ ಬಂದು ಬಾಬಾರವರ ದರ್ಶನ ಪಡೆದು ಹೊರಡಲು ಸಿದ್ಧರಾದರು. ಬಾಬಾರವರು ಅಪ್ಪಣೆ ಕೊಡಲಿಲ್ಲ. ಶಿರ್ಡಿಯಲ್ಲಿ ಒಂದು ವಾರ ತಂಗುವಂತೆ ಹಳೆಇದರು. ಅದೇ ಸಮಯದಲ್ಲಿ ನಿಫಾಡದ ನ್ಯಾಯಾದೀಶರು ರೋಗಪೀಡಿತರಾಗಿ ಮಲಗಿದ್ದರಿಂದ ಮೊಕ್ಕದಮೆಯನ್ನು ಒಂದು ವಾರ ಮುಂದೂಡಿದ್ದರು. ನಂತರ ಧುಮಾಳರಿಗೆ ಹೋಗಲು ಭಾಬಾ ಅನುಮತಿ ನೀಡಿದರು. ಆ ಮೊಕದ್ದಮೆ ಕೆಲವು ತಿಂಗಳು ಕಾಲ ಮೂರು ನಾಲ್ಕು ನ್ಯಾಯಾಧೀಶರಿಂದ ವಿಚಾರಸಲ್ಪಟ್ಟು ಧುಮಾಳ ಅವರು ಜಯಶೀಲರಾದರು.

## ಶ್ರೀಮತಿ ನಿಮೋಣಕರ

ನಿಮೋಣದ ವಾರಸದಾರರೂ ಮತ್ತು ಗೌರವ ನ್ಯಾಯಧೀಶರೂ ಆದ ಶ್ರೀ ನಾನಾಸಾಹೇಬ ನಿಮೋಣಕರ ಅವರು ತಮ್ಮ ಪತ್ನಿಯೊಡನೆ ಶಿರ್ಡಿಯಲ್ಲಿ ತಂಗಿದ್ದರು. ಇವರಿಬ್ಬರೂ ದಿನದ ಬಹುಕಾಲವನ್ನು ಬಾಬಾರವರ ಸೇವೆಗೆ ಮುಡಿಪಾಗಿಟ್ಟು ಮಸೀದಿಯಲ್ಲಿಯೇ ಇರುತ್ತಿದ್ದರು. ಇದ್ದಕ್ಕಿಂತೆಯೇ ಬೇಲಾಪಪುರದಲ್ಲಿದ್ದ ಅವರ ಮಗನು ಹಾಸಿಗೆ ಹಿಡಿದು

ಮಲಗಿದ್ದರಿಂದ ಶ್ರೀಮತಿಯವರು ಕೂಡಲೇ ಬೇಲಾಪುರಕ್ಕೆ ಹೋಗಿ ತಮ್ಮ ಮಗನನ್ನು ನೋಡಿ ಅಲ್ಲಿ ಕೆಲವು ಕಾಲವಿರಬೇಕೆಂದು ಮನಸ್ಸು ಮಾಡಿ ಹೊರಡಲನುವಾದರು. ಆದರೆ ಶ್ರೀಯುತ ನಿಮೋಣಕರ ಅವರು ಮಗನನ್ನು ನೋಡಿಕೊಂಡು ಮರುದಿನವೇ ಬರುವಂತೆ ಹೇಳಿದರು. ಶ್ರೀಮತಿಯವರಿಗೆ ಏನೂ ತೋಚದಾಯಿತು. ಆಗ ಬಾಬಾರವರು ಅವರ ಸಹಾಯಕ್ಕೆ ಬಂದರು. ಬಾಬಾರವರು ವಾಡದ ಸಮೀಪದಲ್ಲಿ ನಾನಾಸಾಹೇಬ ಮತ್ತು ಕೆಲವರೊಡನೆ ಕಲೆತು ಮಾತನಾಡುತ್ತಿದ್ದರು. ಆಗ ಶ್ರೀಮತಿಯವರು ಬಂದು ಅವರ ಪಾದಗಳಿಗೆ ಎರಗಿ ಹೊರಡಲು ಅನುಮತಿ ಬೇಡಿದರು. ಬಾಬಾರವರು ಕೂಡಲೇ "ಹೊರಡು, ತೀವ್ರ ಹೊರಡು – ಗಾಬರಿ ಪಡಬೇಡ ಬೇಲಾಪುರದಲ್ಲಿ ನಾಲ್ಕು ದಿನ ನಿಂತು ಬಾ" ಎಂದರು. ಬಾಬಾರವರ ಮಾತುಗಳು ಎಷ್ಟು ಸಮಯೋಚಿತ ಎಂಬುದನ್ನು ವಾಚಕರೆ ಊಹಿಸಬಹುದು.

## ನಾಸಿಕದ ಮೂಳೆ ಶಾಸ್ತ್ರಿ

ನಾಸಿಕದ ಪ್ರಸಿದ್ಧ ಅಗ್ನಿಹೋತ್ರಿಗಳೂ ಹೋರಾಟರತ್ನರೂ ಆದ ಶ್ರೀ ಮೂಳೆ ಶಾಸ್ತ್ರಿಗಳು ನಾಗಪುರದ ಲಕ್ಷಾಧೀಶರಾದ ಬಾಪೂಸಾಹೇಬ ಬೂಟಿಯವರನ್ನು ಭೆಟ್ಟಿಯಾಗಲು ಶಿರ್ಡಿಗೆ ಬಂದರು. ಅವರು ಬೆಟ್ಟಿಯಾದ ನಂತರ ಎಲ್ಲರೂ ಬಾಬಾರವರ ದರ್ಶನವನ್ನು ಪಡೆಯಲು ಮಸೀದಿಗೆ ಬಂದರು. ಬಾಬಾರವರು ತಮ್ಮ ಸ್ವಂತ ಹಣದಿಂದ ಕೆಲವು ಮಾವಿನ ಹಣ್ಣುಗಳನ್ನು ತರಿಸಿ ಎಲ್ಲರಿಗೂ ಹಂಚಿದರು. ಹಾಗೆ ಹಂಚುವಾಗ ಅವರು ಹಣ್ಣಗಳನ್ನು ಚೆನ್ನಾಗಿ ಹಿಚುಕಿ ಕೊಡುತ್ತಿದ್ದರು. ತೆಗೆದುಕೊಂಡವರು ಹಣ್ಣನ್ನು ಬಾಯಿಗಿಟ್ಟಾಗ ಎಲ್ಲ ತಿರುಳು ಒಮ್ಮೆಲೆ ಬಾಯಿಗೆ ಹೋಗಿ ಗೊಟ್ಟ ಮತ್ತು ಸಿಪ್ಪೆ ಮಾತ್ರ ಕೈಯಲ್ಲಿ ಉಳಿಯುತ್ತಿತ್ತು. ನಂತರ ಬಾಳೆಹಣ್ಣನ್ನು ಸುಲಿದು ಎಲ್ಲರಿಗೂ ಹಂಚಿದರು. ಆಗ ಮೂಳೆ ಶಾಸ್ತ್ರಿಗಳು (ಹಸ್ತ

ಸಾಮುದ್ರಿಕರಾಗಿದ್ದುದರಿಂದ) ಬಾಬಾ ಅವರ ಹಸ್ತವನ್ನು ಪರೀಕ್ಷಿಸಲಪೇಕ್ಷಿಸಿ ಅವರನ್ನು ಕೇಳಿದರು. ಬಾಬಾರವರು ಅದನ್ನು ನಿರಾಕರಿಸಿ ಅವರಿಗೆ ನಾಲ್ಕು ಬಾಳೆಹಣ್ಣುಗಳನ್ನು ಕೊಟ್ಟು ಕಳುಹಿಸಿದರು. ನಂತರ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. ಮರುದಿನ ಮೂಳೆಶಾಸ್ತ್ರಿಗಳು ಸ್ನಾನ ಮಾಡಿ ಸಂಧ್ಯಾವಂದನೆ ಮಾಡುತ್ತಿದ್ದರು. ಬಾಬಾರವರು ಎಂದಿನಂತೆ ಅಂದೂ ಲೇಂಡಿಂತು ಕಡೆಗೆ ಹೋಗುತ್ತಿದ್ದಾಗ ಸಮೀಪದಲ್ಲಿದ್ದವರೊಬ್ಬರಿಗೆ "ನನಗೆ ಸ್ವಲ್ಪ ಗೇರು ತಂದು ಕೊಡು; ಈ ದಿನ ಕಾವಿ ಬಟ್ಟೆ ಧರಿಸುವೆ" ಎಂದರು. ಯಾರಿಗೂ ಇದರ ಅರ್ಥ ತಿಳಿಯಲೇ ಇಲ್ಲ. ಕೆಲವು ಕಾಲದ ನಂತರ ಬಾಬಾರವರು ಮಧ್ಯಾಹ್ನದ ಆರತಿ ಹೊತ್ತಿಗೆ ಮಸೀದಿಗೆ ಹಿಂತಿರುಗಿದರು. ಜೋಗ ಅವರು ಮೂಳೆ ಶಾಸ್ತ್ರಿಗಳನ್ನು "ಆರತಿ ಹೊತ್ತಿಗೆ ಬರಲು ಸಾಧ್ಯವೆ?" ಎಂದು ಕೇಳಿದರು. ಮೂಳೆ ಶಾಸ್ತ್ರಿಗಳು ಮಧ್ಯಾಹ್ನದ ನಂತರ ಬರುವೆನೆಂದು ಹೇಳಿದರು. ಬಾಬಾ ಅವರು ಆಸನದಲ್ಲಿ ಕುಳಿತರು. ಆರತಿ ಸಮಾರಂಭ ಆರಂಭವಾಯಿತು. ಆಗ ಬಾಬಾ ಅವರು ಅಲ್ಲಿದ್ದವರೊಬ್ಬರಿಗೆ "ಆ ನಾಸಿಕದ ಬ್ರಾಹ್ಮಣನಲ್ಲಿಗೆ ಹೋಗಿ ದಕ್ಷಿಣೆ ತೆಗೆದುಕೊಂಡು ಬಾ" ಎಂದರು. ಈ ವಿಷಯ ಅವರು ಮೂಳೆ ಶಾಸ್ತ್ರಿಗಳಿಗೆ ತಿಳಿಸಿದಾಗ ಅವರು ಗಾಬರಿಗೊಂಡು ತಮ್ಮ ಮನದಲ್ಲಿ "ನಾನು ಶುದ್ಧ ಅಗ್ನಿಹೋತ್ರಿ ಬ್ರಾಹ್ಮಣ. ನಾನೇಕೆ ದಕ್ಷಿಣೆ ಕೊಡಬೇಕು. ಬಾಬಾರವರು ದೊಡ್ಡ ಸಂತರಾಗಿರಬಹುದು. ಆದರೆ ನಾನು ಅವರ ಆಶ್ರಿತನಲ್ಲ" ಎಂದು ಸಂಕೋಚಪಟ್ಟರು. ತಕ್ಷಣದಲ್ಲಿ ಪುನ: "ಬಾಪೂಸಾಹೇಬರಂಥ ಲಕ್ಷಾಧೀಶರೆ ದಕ್ಷಿಣೆ ಕೊಡಲು ನಿರಾಕರಿಸುವುದಿಲ್ಲ. ನಾನೇಕೆ ಹೀಗೆನ್ನಲಿ?" ಎಂದುಕೊಂಡು ಬಾಪೂಸಾಹೇಬರೊಂದಿಗೆ ಮಸೀದಿಗೆ ಹೊರಟರು. ಅಲ್ಲಿಗೆ ಬಂದ ನಂತರ ತಾವೇ ದೊಡ್ಡವರೆಂದು ಭಾವಿಸಿ ದೂರದಿಂದಲೇ ಬಾಬಾರವರೆಡೆಗೆ ಪುಷ್ಪಗಳನ್ನರ್ಪಿಸಿದರು. ಆ ಕ್ಷಣದಲ್ಲಿ ಅವರು

ಕಂಡಿದುದೇನು? ಶ್ರೀ ಸಾಯಿಬಾಬಾ ಅವರನ್ನಲ್ಲ! ತಮ್ಮ ದಿವಂಗತ ಗುರುಗಳಾದ ಶ್ರೀ ಘೋಲಪನಾಥ ಅವರನ್ನು ಕಂಡರು. ಅವರಿಗೆ ಕನಸು ಕಾಣುತ್ತಿರೆವೆನೆಂದು ಭಾಸವಾಯಿತು. ಕ್ಷಣಕಾಲ ದಿಗ್ಭ್ರಾಂತರಾದವರು. ನಂತರ ಅನುಮಾನಗಳೆಲ್ಲವನ್ನೂ ದೂರತಳ್ಳಿ ಗುರುಗಳಲ್ಲಿಗೆ ಹೋಗಿ ಅವರ ಚರಣಾರವಿಂದಗಳಿಗೆರಗಿದರು. ಎಲ್ಲರೂ ಬಾಬಾರವರಿಗೆ ಆರತಿಯನ್ನು ಮಾಡುತ್ತಿದ್ದರು. ಆದರೆ ಮೂಳೆಶಾಸ್ತ್ರಿಗಳು ತಮ್ಮ ಗುರುಗಳ ನಾಮ ಉಚ್ಚರಿಸುತ್ತಿದ್ದರು. ಅಹಂಕಾರ, ಅಹಂಭಾವಗಳನ್ನು ತೊರೆದು ಅವರು ಕ್ಷಣಕಾಲ ಕಣ್ಮುಚ್ಚಿಕೊಂಡರು. ಕಣ್ಣು ತೆರೆದಾಗ ಅವರು ಕಂಡಿದುದೇನು? ಕರುಣಾಮೂರ್ತಿಯಾದ ಸಚ್ಚಿದಾನಂದ ರೂಪನಾದ ಶ್ರೀ ಬಾಬಾರವರು ದಕ್ಷಿಣೆ ಕೇಳುತ್ತಿರುವುದನ್ನು! ಅವರ ಪ್ರತಿಭೆಯನ್ನು ಕಂಡು ಮೂಳೆ ಶಾಸ್ತ್ರಿಗಳು ತಮ್ಮನ್ನು ತಾವೇ ಮರೆತರು. ಅಮಿತಾನಂದದಿಂದ ನಯನಗಳಲ್ಲಿ ಆನಂದ ಬಾಷ್ಪ ಉಕ್ಕಿತು. ಬಾಬಾ ಅವರ ದಿವ್ಯ ಚರಣಾರವಿಂದಗಳಿಗೆ ಎರಗಿ ದಕ್ಷಿಣೆಯನ್ನು ಅರ್ಪಿಸಿದರು. ಆಗ ಅಲ್ಲಿ ನೆರೆದಿದ್ದವರೆಲ್ಲರೂ ಬಾಬಾರವರು "ಸ್ವಲ್ಪ ಗೇರು ತಂದು ಕೊಡು; ಕಾವಿ ಬಟ್ಟೆ ಧರಿಸುವೆ" ಎಂದು ಹೇಳಿದ ಶಬ್ದಗಳ ಅರ್ಥವನ್ನು ಮನಗಂಡರು

## ಡಾಕ್ಟರರೊಬ್ಬರ ಕಥೆ

ಒಂದು ದಿನ ಒಬ್ಬ ಮಾಮಲೇದಾರರ ಜೊತೆಗೆ ಒಬ್ಬ ಡಾಕ್ಟರರು ಶಿರ್ಡಿಗೆ ಬಂದರು. ಡಾಕ್ಟರರು "ನಾನು ರಾಮಭಕ್ತ; ಮಹಮ್ಮದೀಯನಿಗೆ ನಮಸ್ಕಾರ ಮಾಡಲಾರೆ" ಎಂದು ಮಾಮಲೇದಾರರಿಗೆ ತಿಳಿಸಿದ್ದರು. ಮಾಮಲೇದಾರರು "ಯಾರೂ ನಿಮ್ಮನ್ನು ನಮಸ್ಕಾರ ಮಾಡಲು ಬಲವಂತ ಮಾಡುವುದಿಲ್ಲ, ಬನ್ನಿ" ಎಂದು ಸಂಗಡ ಕರೆದುಕೊಂಡು ಬಂದಿದ್ದರು. ಅದರಂತೆ ಅವರಿಬ್ಬರು ಬಾಬಾ ಅವರ ದರ್ಶನಕ್ಕೆಂದು ಮಸೀದಿಗೆ ಬಂದರು. ಡಾಕ್ಟರರು

ಬಾಬಾರವರಿಗೆ ನಮಸ್ಕಾರ ಮಾಡಲು ಹೋಗುತ್ತಿರುವುದನ್ನು ಕಂಡು ಎಲ್ಲರಿಗೂ ಅಚ್ಚರಿಯಾಯಿತು. ನಂತರ " ನೀವು ಬಾಬಾರವರಿಗೆ ನಮಸ್ಕಾರ ಮಾಡುವುದಿಲ್ಲವೆಂದು ಸಂಕಲ್ಪವನ್ನು ಹೇಗೆ ಮುರಿದಿರಿ?" ಎಂದು ಕೇಳಿದುದಕ್ಕೆ ಅವರು "ನಾನು ನನ್ನ ದೇವರಾದ ಶ್ರೀರಾಮಚಂದ್ರ ಮೂರ್ತಿಯನ್ನೇ ಕಾಣುತ್ತಿದ್ದೇನೆ." ಎಂದು ಹೇಳುತ್ತಿರುವಾಗಲೇ ಮತ್ತೆ ಬಾಬಾರವರ ರೂಪ ಗೋಚರವಾಯಿತು. ಅವರು ಅಚ್ಚರಿಗೊಂಡು "ಇದೇನು ಕನಸೇ? ಇವರು ಹೇಗೆ ಮಹಮ್ಮದೀಯರಾಗಿರಬೇಕು? ಇವರು ಯೋಗ ಸಂಪನ್ನರು; ಪರಮಾತ್ಮನ ಅವತಾರ ರೂಪಿಗಳು" ಎಂದು ಹೇಳಿದರು. ಮರುದಿನ ಅವರು ಉಪವಾಸವಿರಲು ಪಣತೊಟ್ಟರು. ಆ ದಿನ ಬಾಬಾರವರು ಆಶೀರ್ವದಿಸುವ ತನಕ ಮಸೀದಿಗೆ ಹೋಗುವುದಿಲ್ಲವೆಂದು ಡಾಕ್ಟರು ಮನೆಯಲ್ಲಿ ಕುಳಿತಿದ್ದರು. ಹೀಗೆ ಮೂರು ದಿನ ಕಳೆದವು. ನಾಲ್ಕನೆಯ ದಿನ ಅವರು ತಮ್ಮ ಆಪ್ತ ಸೇಹಿತರೊಡನೆ ತಾವಾಗಿಯೇ ಮಸೀದಿಗೆ ಹೊರಟರು. ಬಾಬಾರವರಿಗೆ ನಮಸ್ಕಾರ ಮಾಡಿದರು ಆಗ ಬಾಬಾರವರು "ನಿನ್ನನ್ನು ಕರೆಯಲು ಯಾರಾದರೂ ಬಂದಿದ್ದರೆ?" ಎಂದು ಕೇಳಿದರು. ಇದನ್ನು ಕೇಳಿ ಡಾಕ್ಟರರ ಮನಸ್ಸು ಕರಗಿತು. ಅದೇ ರಾತ್ರಿ ಕನಸಿನಲ್ಲಿ ಬಾಬಾರವರಿಂದ ಆಶೀರ್ವದಿಸಲ್ಪಟ್ಟರು. ನಂತರ ತಮ್ಮ ಊರಿಗೆ ಹಿಂತಿರುಗಿ ಅದೇ ಕನಸನ್ನು ಹದಿನೈದು ದಿನಗಳವರೆಗೆ ಕಂಡರು. ಈ ರೀತಿ ಅವರಿಗೆ ಬಾಬಾರವರಲ್ಲಿ ಭಕ್ತಿ ಮಿಗಿಲಾಯಿತು–ನೂರ್ಮಡಿಯಾಯಿತು.

ನಮ್ಮ ಗುರುವಿನಲ್ಲಿ ನಮಗೆ ಅಚಲ ನಂಬಿಕೆ ಮತ್ತು ವಿಶ್ವಾಸಗಳಿರಬೇಕು ಎಂಬುದೇ ನೀತಿ.

**ಶ್ರೀ ಸಾಯಿ ಪ್ರಣಾಮ**

# ೧೩ನೇ ಅಧ್ಯಾಯ

## ರೋಗಗಳನ್ನು ಗುಣಪಡಿಸಿದುದು - ಭಿಮಾಜಿ ಬಾಳಾ ಶಿಂಪಿ - ಬಾಪೂ ಸಾಹೇಬ ಬೂಟಿ - ಆಳಂದಿ ಸ್ವಾಮಿ - ಕಾಕಾ ಮಹಾಜನಿ - ಹರ್ದಾ ಪಟ್ಟಣದ ದತ್ತೋಪಂತ

### ಮಾಯೆಯ ಅಗಾಧ ಶಕ್ತಿ

ಬಾಬಾರವರ ವಚನಗಳು ಯಾವಾಗಲೂ ಸಂಕ್ಷಿಪ್ತವಾಗಿಯೂ, ರಸಭರಿತ ವಾಗಿಯೂ, ಆಳವಾಗಿಯೂ, ಅರ್ಥಗರ್ಬಿತವಾಗಿಯೂ, ಸಾಮರ್ಥ್ಯ ವುಳ್ಳವುಗಳಾಗಿಯೂ ಇದ್ದವು. ಅವರು ಯಾವಾಗಲೂ ಸಂತುಷ್ಟರಾಗಿದ್ದರು. "ನಾನು ಪಕೀರನಾಗಿ ಮನೆ-ಮಠಗಳಿಲ್ಲದೆ ಸರ್ವಸ್ವವನ್ನು ತ್ಯಜಿಸಿ ಒಂದು ಸ್ಥಳದಲ್ಲಿ ನೆಲೆಸಿದ್ದರೂ ಸಹ ಅನಿವಾರ್ಯವಾದ ಮಾಯೆ ಎಂಬುದು ನನ್ನನ್ನು ಆಗಾಗ್ಗೆ ಕಾಡುತ್ತದೆ. ನನ್ನನ್ನು ನಾನೇ ಮರೆತರೂ ಸಹ ನಾನು ಮಾಯೆಯನ್ನು ಮರೆಯಲಾಗುವುದಿಲ್ಲ. ಅವಳು ನನ್ನನ್ನು ಬಂಧಿಸಿದ್ದಾಳೆ. ಶ್ರಿಹರಿಯ ಮಾಯೆ ಬ್ರಹ್ಮ ಮುಂತಾದವರನ್ನೂ ಕಾಡುತ್ತಾಳೆ-ಹೀಗಿರುವಾಗ ಈ ಫಕೀರನನ್ನು ಕೇಳುವವರಾರು? ಯಾರು ಪರಮಾತ್ಮನಲ್ಲಿ ಶರಣು ಹೋಗುತ್ತಾರೆಯೋ ಅಂಥವರು ಅವನ ದಯೆಯಿಂದ ಮಾಯೆಯ ಬಂಧನವನ್ನು ತಪ್ಪಿಸಿಕೊಳ್ಳಬಹುದು." ಮಾಯೆಯನ್ನು ಕುರಿತು ಬಾಬಾರವರು ಈ ಮೇಲೆ ಹೇಳಿದಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಉದ್ಧವನಿಗೆ ಈ ರೀತಿ ಹೇಳಿದ್ದಾನೆ; "ಸಂತರು ನನ್ನ ಜೀವಿತ ರೂಪ." ಈಗ ಬಾಬಾರವರು ತಮ್ಮ ಭಕ್ತರ ಯೋಗಕ್ಷೇಮಕ್ಕಾಗಿ ಏನು ಹೇಳಿದ್ದಾರೆಂಬುದನ್ನು ನೋಡೋಣ "ಯಾರು ಅದೃಷ್ಟಶಾಲಿಗಳೋ, ಯಾರು ಪಾಪಗಳಿಂದ ವಿಮುಕ್ತರಾಗಿರುತ್ತಾರೆಯೋ, ಅಂಥವರು ನನ್ನನು ಆರಾಧಿಸುತ್ತಾರೆ.

ನೀವು ಯಾವಾಗಲೂ 'ಸಾಯಿ, ಸಾಯಿ, ಎಂದು ಧ್ಯಾನಿಸುತ್ತಿದ್ದರೆ ನಾನು ನಿಮ್ಮನ್ನು ಸಪ್ತಸಾಗರಗಳ ಆಚೆಗೆ ಸಾಗಿಸುತ್ತೇನೆ. ನನ್ನ ವಚನಗಳಲ್ಲಿ ನಂಬಿಕೆ ಇಟ್ಟರೆ ಒಳ್ಳೆಯದಾಗುತ್ತದೆ. ನನ್ನ ಆರಾಧನೆಗೆ ಪೂಜಾ ಸಾಮಗ್ರಿಗಳ ಅವಶ್ಯಕತೆಯಿಲ್ಲ. ಪರಿಶುದ್ಧವಾದ ಭಕ್ತಿ ಒಂದೇ ಸಾಕು" ಎಂದು ಬಾಬ ಹೇಳಿರುತ್ತಾರೆ.

## ಭೀಮಾಜಿ ಪಾಟೀಲ

ಪುಣೆ ಜಿಲ್ಲೆಯ ಜುನ್ನರ ತಾಲೂಕಿಗೆ ಸೇರಿದ ನಾರಾಯಣಗಾಂವದ ಭೀಮಾಜಿ ಪಾಟೀಲರಿಗೆ ಆಗಾಗ್ಗೆ ಎದೆ ನೋವು ಬರುತ್ತಿದ್ದು, ನಂತರ ಅದು ಕ್ಷಯಕ್ಕೆ ತಿರುಗಿತು. ಅವರು ತೆಗೆದುಕೊಳ್ಳದೆ ಇದ್ದ ಔಷಧವೇ ಉಳಿಯಲಿಲ್ಲ. ಆದರೂ ರೋಗ ಗುಣವಾಗಿರಲಿಲ್ಲ. ನಂತರ ಬದುಕುವ ಭರವಸೆಯನ್ನು ತೊರೆದು ಅವರು ಭಗವಂತನನ್ನು ಪ್ರಾರ್ಥಿಸಿದರು. ಸ್ಥಿತಿಗತಿಗಳು ಚೆನ್ನಾಗಿರುವಾಗ ನಾವು ಭಗವಂತನನ್ನು ಸ್ಮರಿಸುವುದಿಲ್ಲ. ಕಷ್ಟಕಾರ್ಪಣ್ಯಗಳು ತಲೆದೋರಿದಾಗ ಮಾತ್ರ ಭಗವಂತನ ನೆನಪು ಬರುತ್ತದೆ. ಇದು ಮಾನವನ ಸಹಜ ಸ್ವಭಾವ. ಅಂತೆಯೇ ಭೀಮಾಜಿಯವರೂ ಸಹ. ಈ ವಿಷಯದಲ್ಲಿ ಬಾಬಾರವರ ಪರಮ ಭಕ್ತರಾದ ನಾನಾಸಾಹೇಬ ಚಾಂದೋರಕರ ಅವರ ಸಲಹೆ ಕೇಳುವ ಬಯಕೆ ಅವರಲ್ಲಿ ಮೂಡಿತು. ಮರುದಿನವೇ ಅವರಿಗೆ ಎಲ್ಲ ಸಮಾಚಾರವನ್ನು ಪತ್ರಮುಖೇನ ತಿಳಿಸಿದರು. ಅದಕ್ಕೆ ಬಾಬಾರವರ ಚರಣಾರವಿಂದಗಳಲ್ಲಿ ಮೊರೆ ಹೋಗುವದೊಂದೇ ಸರಿಯಾದ ಮಾರ್ಗವೆಂದು ನಾನಾ ತಿಳಿಸಿದರು. ನಾನಾರವರ ಸಲಹೆಯನ್ನು ಒಪ್ಪಿ ಪಾಟೀಲರು ಶಿರ್ಡಿಗೆ ಪ್ರಯಾಣ ಬೆಳೆಸಿದರು. ಬಾಬಾರವರಲ್ಲಿಗೆ ಅವರನ್ನು ಕರೆತರಲಾಯಿತು. ಆ ಸಮಯದಲ್ಲಿ ಬಾಬಾರವರ ಹತ್ತಿರ ನಾನಾ ಚಾಂದೋರಕರ ಮತ್ತು ಶ್ಯಾಮ ಇವರು ಇದ್ದರು. ಬಾಬಾರವರು "ಇದೇನು ಶ್ಯಾಮ, ಈ ಕಳ್ಳನ್ನನ್ನು ತಂದು ನನ್ನ

ಮುಂದಿರಿಸಿದಿ! ಇದು ಒಳ್ಳೆಯ ಕೆಲಸವೇ?" ಎಂದು ಕೇಳಿದರು. ಸ್ವಲ್ಪ ಹೊತ್ತಿನ ಮೇಲೆ ಬಾಬಾರವರ ಮನಸ್ಸು ಕರಗಿ "ನಿಲ್ಲು – ನಿನ್ನ ಚಿಂತೆಯನ್ನು ಬಿಡು. ನಿನ್ನ ಕಷ್ಟಗಳು ದೂರವಾದವು. ಕಷ್ಟಗಳು ಎಷ್ಟೇ ಇರಲಿ, ಭಕ್ತರು ಈ ಮಸೀದಿಯಲ್ಲಿ ಕಾಲಿಟ್ಟ ಕ್ಷಣದಿಂದಲೇ ಅವರ ಕಷ್ಟಗಳು ದೂರವಾದಂತೆಯೇ. ಈ ಫಕೀರನು ದಯಾಮಯನು. ರೋಗಗಳನ್ನು ಗುಣಮಾಡಿ ಎಲ್ಲರನ್ನು ಪ್ರೀತಿ ಮತ್ತು ಆದರದಿಂದ ಕಾಪಾಡುವನು" ಎಂದರು. ರೋಗಿಗೆ ಈ ಹಿಂದೆ ಐದು ನಿಮಿಷಕ್ಕೊಮ್ಮೆ ರಕ್ತ ವಾಂತಿಯಾಗುತ್ತಿತ್ತು. ಬಾಬಾರವರ ಸಮ್ಮುಖದಲ್ಲಿ ಏನೂ ಆಗಲಿಲ್ಲ. ಅಂದಿನಿಂದ ರೋಗಿಯ ಕಷ್ಟಗಳು ದೂರ ಸರಿಯುತ್ತ ಬಂದವು. ಬಾಬಾ ರೋಗಿಗೆ ಭಿಮಾಬಾಯಿಯವರ ಮನೆಯಲ್ಲಿರುವಂತೆ ಹೇಳಿದರು. ಆ ಮನೆಯ ಪರಿಸ್ಥಿತಿ ಅಷ್ಟು ಆರೋಗ್ಯಕರವಾಗಿರಲಿಲ್ಲ. ಆದರೂ ಬಾಬಾರವರ ಆಜ್ಞೆಯನ್ನು ಪರಿಪಾಲಿಸಲೇ ಬೇಕಾಗಿದ್ದಿತು. ಅಲ್ಲಿ ತಂಗಿದ್ದಾಗ ಬಾಬಾರವರು ಅವರ ರೋಗವನ್ನು ಎರಡು ಸಲ ಕನಸಿನಲ್ಲಿ ಬಂದು ಗುಣಪಡಿಸಿದರು. ಒಂದನೆ ಕನಸಿನಲ್ಲಿ ಒಬ್ಬ ಹುಡುಗನು ಶಾಲೆಯಲ್ಲಿ ಪಾಠವನ್ನೊಪ್ಪಿಸದೆ ಉಪಾಧ್ಯಾಯರಿಂದ ಹೊಡೆತ ತಿಂದು ಅನುಭವಿಸುತ್ತಿರುವ ಯಾತನೆ, ಮತ್ತೊಂದು ಕನಸಿನಲ್ಲಿ ಯಾರೋ ಅವರ ಎದೆಯ ಮೇಲೇ ಕಲ್ಲುರುಳಿಸಿ ನೋವು ಮಾಡುತ್ತಿರುವುದನ್ನು ಕಂಡರು. ಕನಸಿನಲ್ಲಿ ಅನುಭವಿಸಿದ ನೋವಿನಿಂದ ಅವರ ರೋಗ ಗುಣವಾಗಿ ನಂತರ ಬಾಬಾರವರಲ್ಲಿಗೆ ಬಂದು ಭೀಮಾಜಿ ನಮಸ್ಕಾರ ಮಾಡಿದರು. ಬಾಬಾ ಅವರಿಗೆ ಭಕ್ತರು ತಮ್ಮನ್ನು ಸದಾ ಅಚಲ ನಂಬಿಕೆಯಿಂದ ಸ್ಮರಿಸುವದೊಂದೇ ವಿನ: ಇನ್ನಾವುದೂ ಬೇಕಾಗಿರಲಿಲ್ಲ. ಮಹಾರಾಷ್ಟ್ರದ ಜನರು ೧೫ ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ತಮ್ಮ ಮನೆಗಳಲ್ಲಿ ಶ್ರೀ ಸತ್ಯನಾರಾಯಣ ವ್ರತವನ್ನು ಆಚರಿಸುತ್ತಾರೆ. ಆದರೆ ಭೀಮಾಜಿಯವರು ತಮ್ಮ ಮನೆಯಲ್ಲಿ ಶ್ರೀ ಸಾಯಿ ಸತ್ಯನಾರಾಯಣ ವ್ರತ ಎಂಬ ಹೊಸ ವ್ರತವನ್ನು ಆಚರಿಸಹತ್ತಿದರು.

## ಬಾಳಾ ಗಣಪತ ಶಿಂಪಿ

ಬಾಬಾರವರ ಇನ್ನೊಬ್ಬ ಭಕ್ತರಾದ ಬಾಳಾ ಗಣಪತ ಶಿಂಪಿಯವರು ಭಯಂಕರವಾದ ಮಲೇರಿಯಾ ರೋಗದಿಂದ ನರಳುತ್ತಿದ್ದರು. ಅವರು ಎಲ್ಲ ತರದ ಔಷಧಿಗಳನ್ನು ಉಪಯೋಗಿಸಿದರೂ ರೋಗವು ಗುಣವಾಗದೆ ಇದ್ದುದರಿಂದ ಕರುಣಾಮಯಿ ಬಾಬಾರವರ ಅಡಿದಾವರೆಗಳಲ್ಲಿ ಬಿದ್ದರು. ಬಾಬಾರವರು ಅವರಿಗೆ ಒಂದು ಅದ್ಭುತವಾದ ಉಪಾಯವನ್ನು ಸೂಚಿಸಿದರು. "ಲಕ್ಷ್ಮೀದೇವಸ್ಥಾನದ ಮುಂದೆ ಒಂದು ಕರಿನಾಯಿಗೆ ಮೊಸರು ಅನ್ನ ಕೊಡು," ಎಂದು ಬಾಬಾ ಬಾಳಾ ಶಿಂಪಿಗೆ ಹೇಳಿದರು. ಬಾಳಾ ಇದನ್ನು ಕಾರ್ಯಗತ ಮಾಡುವುದು ಹೇಗೆ ಎಂದು ಯೋಚಿಸುತ್ತ ಮನೆಗೆ ಬಂದರು. ಆಗ ಮನೆಯಲ್ಲಿ ಅನ್ನ ಮೊಸರು ಇತ್ತು. ಅವೆರಡನ್ನು ಬೆರೆಸಿ ಲಕ್ಷ್ಮೀದೇವಸ್ಥಾನದ ಬಳಿ ತೆಗೆದುಕೊಂಡು ಬಂದರು. ಅಷ್ಟರಲ್ಲಿ ಒಂದು ಕರಿ ನಾಯಿ ಬಾಲವನ್ನು ಅಲ್ಲಾಡಿಸುತ್ತಾ ಹಸಿವಿನಿಂದ ಬಂದಿತು. ಬಾಳಾ ಶಿಂಪಿ ಅದನ್ನು ನಾಯಿಯ ಮುಂದಿಟ್ಟರು. ನಾಯಿಯು ಅದನ್ನು ಸಂತೋಷದಿಂದ ಭಕ್ಷಿಸಿತು. ಕೆಲವೇ ದಿನಗಳಲ್ಲಿ ಬಾಳಾರವರ ಮಲೇರಿಯಾ ಗುಣವಾಯಿತು!

## ಬಾಪೂ ಸಾಹೇಬ ಬೂಟಿ

ಬಾಪೂ ಸಾಹೇಬ ಬೂಟಿಯವರಿಗೆ ಒಂದು ಸಾರಿ ವಾಂತಿ ಮತ್ತು ಆಮಶಂಕೆ ಆರಂಭವಾಯಿತು. ಯಾವ ಔಷಧಗಳಿಂದಲೂ ಗುಣ ಕಾಣಲಿಲ್ಲ. ಬಹಳ ಆಯಾಸವಾಗಿದ್ದುದರಿಂದ ಮಸೀದಿಗೆ ಹೋಗಲು ಸಹ ತ್ರಾಣವಿಲ್ಲದಂತಾಯಿತು. ಬಾಬಾ ಅವರನ್ನು ಕರೆಯಿಸಿ, ಮುಂದೆ ಕೂಡ್ರಿಸಿಕೊಂಡು "ಎಚ್ಚರದಿಂದಿರು! ಇನ್ನು ನೀನು ವಾಂತಿ ಮಾಡಕೂಡದು" ಎಂದು ತೋರ ಬೆರಳನ್ನು ಸೂಚಿಸುತ್ತ ಹೇಳಿದರು. ಅಂದಿನಿಂದ ಅವರ ವಾಂತಿ ಮತ್ತು ಭೇದಿ ನಿಂತಿತು.

ಇನ್ನೊಂದು ಸಂದರ್ಭದಲ್ಲಿ ಅವರಿಗೆ ಕಾಲರಾ ಜಾಡ್ಯವು ಅಂಟಿಕೊಂಡು ಬಹಳ ಬಾಯಾರಿಕೆಯಿಂದ ಬಳಲುತ್ತಿದ್ದರು. ಡಾ.ಪಿಳ್ಳೆಯವರು ಅವರಿಗೆ ಅನೇಕ ಔಷಧಿಗಳನ್ನು ಕೊಟ್ಟರು. ಗುಣ ಕಂಡುಬರಲಿಲ್ಲ. ಆಗ ಬಾಬಾರವರಲ್ಲಿಗೆ ಧಾವಿಸಿ "ಯಾವ ಪಾನೀಯದಿಂದ ಬಾಯಾರಿಕೆ ಅಡಗುವುದು?" ಎಂದು ಕೇಳಿದರು. ಅದಕ್ಕೆ ಬಾಬಾರವರು "ಬಾದಾಮಿ, ಅಕ್ರೋಟು, ಪಿಸ್ತೆ (ಒಂದು ತರದ ಒಣಗಿದ ಹಣ್ಣು) ಇವು ಮೂರನ್ನೂ ಅರೆದು, ಸಕ್ಕರೆ ಹಾಕಿ, ಹಾಲಿನಲ್ಲಿ ಸೇರಿಸಿ ಬೇಯಿಸಿ ಕುಡಿ" ಎಂದರು. ಯಾವ ವೈದ್ಯರನ್ನಾದರೂ ಕೇಳಿದರೆ ಇದು ರೋಗವನ್ನು ಹೆಚ್ಚಿಸುತ್ತದೆ ಎಂದು ಹೇಳಬಹುದು. ಆದರೆ ಅವರು ಬಾಬಾರವರ ಆಜ್ಞೆಯಂತೆ ಪಾಲಿಸಲೇಬೇಕಾಗಿದ್ದಿತು. ಈ ಔಷಧಿ ತಯಾರಿಸಿ ಕುಡಿದರು. ಅವರ ರೋಗ ಗುಣವಾಯಿತು!

## ಆಳಂದಿ ಸ್ವಾಮಿ

ಆಳಂದಿಯ ಸ್ವಾಮಿಗಳೊಬ್ಬರು ಬಾಬಾರವರ ದರ್ಶನಾಕಾಂಕ್ಷಿತರಾಗಿ ಒಮ್ಮೆ ಶಿರ್ಡಿಗೆ ಬಂದರು. ಅವರಿಗೆ ಕಿವಿ ನೋವಿನಿಂದ ರಾತ್ರಿಯೆಲ್ಲ ನಿದ್ದೆ ಬರುತ್ತಿರಲಿಲ್ಲ. ಅವರಿಗೆ ಶಸ್ತ್ರ ಚಿಕಿತ್ಸೆ ಸಹ ಆಗಿದ್ದಿತು. ಆದರೂ ಗುಣವಾಗಿರಲಿಲ್ಲ. ನೋವು ಬಲವಾಗಿ ಏನು ಮಾಡಲೂ ತೋಚಲಿಲ್ಲ. ಅವರು ಬಾಬಾರವರ ದರ್ಶನ ಪಡೆಯಲು ಬಂದರು. ಆಗ ಶ್ಯಾಮ ಅವರು "ಸ್ವಾಮಿಯವರ ಕಿವಿ ನೋವು ಹೋಗುವಂತೆ ಏನಾದರೂ ಮಾಡಿರಿ" ಎಂದು ಬಾಬಾರವರಲ್ಲಿ ಬೇಡಿದರು. ಆಗ ಬಾಬಾರವರು " ಅಲ್ಲಾ ಅಚ್ಛಾ ಕರೇಗಾ – ದೇವರು ಒಳ್ಳೆಯದನ್ನು ಮಾಡುತ್ತಾನೆ" ಎಂದು ಸಮಾಧಾನ ಪಡಿಸಿದರು. ಸ್ವಾಮಿಯವರು ಪುಣೆಗೆ ಹೋದ ಒಂದು ವಾರದ ನಂತರ ಕಿವಿನೋವು ಗುಣವಾಗಿದೆ ಎಂದು ಪತ್ರ ಬರೆದರು. ಹೀಗಿತ್ತು ಬಾಬಾರವರ ಮಾತಿನ ಪ್ರಭಾವ!

## ಕಾಕಾ ಮಹಾಜನಿ

ಇನ್ನೊಬ್ಬ ಭಕ್ತರಾದ ಕಾಕಾ ಮಹಾಜನಿಯವರು ಅತಿಸಾರ ರೋಗದಲ್ಲಿ ನರಳುತ್ತಿದ್ದರು. ಬಾಬಾರವರ ಸೇವೆಗೆ ಭಂಗಬಾರದಂತೆ ಮಸೀದಿಯ ಮೂಲೆಯಲ್ಲಿ ನೀರನ್ನು ಇಟ್ಟುಕೊಂಡು ಆಗಾಗ್ಗೆ ಹೊರಗೆ ಹೋಗಿಬರುತ್ತಿದ್ದರು. ಬಾಬಾರವರಿಗೆ ಇದು ಗೊತ್ತಿತ್ತು. ಅವರೇ ಗುಣ ಮಾಡುತ್ತಾರೆಂದು ಸುಮ್ಮನಿದ್ದು ಬಾಬಾರವರಿಗೆ ತಿಳಿಸಿರಲಿಲ್ಲ. ಮಸೀದಿಯ ಎದುರಿನಲ್ಲಿ ಕಲ್ಲುಮಂಚ ಹಾಕುವ ಕೆಲಸ ಸಾಗುತ್ತಿದ್ದಾಗ ಬಾಬಾರವರು ಇದ್ದಕ್ಕಿದ್ದಂತೆ ಉದ್ರಿಕ್ತರಾಗಿ ಜೋರಾಗಿ ಕೂಗಿಕೊಂಡರು. ಅಲ್ಲಿದ್ದವರೆಲ್ಲರೂ ಹೆದರಿ ಓಡಿ ಹೋದರು. ಕಾಕಾರವರು ಮಾತ್ರ ಅವರ ಕೈಗೆ ಸಿಕ್ಕಿ ಬಿದ್ದರು. ಈ ಗಲಾಟೆಯಲ್ಲಿ ಯಾರೋ ಒಂದು ಕಡಲೇಕಾಯಿಯ ಚೀಲವನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು. ಆಗ ಬಾಬಾರವರು ಒಂದು ಹಿಡಿ ಕಡಲೇಕಾಯಿಯನ್ನು ತೆಗೆದುಕೊಂಡು, ಸುಲಿದು ಚೆನ್ನಾಗಿ ತಿಕ್ಕಿ, ಕಾಕಾರವರಿಗೆ ಕೊಟ್ಟು ತಿನ್ನಲು ಹೇಳಿದರು. ಹೀಗೆ ಬಾಬಾರವರು ಕೊಡುತ್ತಲೇ ಇದ್ದರು; ಕಾಕಾರವರು ತಿನ್ನುತ್ತಲೇ ಇದ್ದರು. ನಂತರ ಬಾಬಾರವರು ಬಾಯಾರಿಕೆಯಾಗಿದೆಯೆಂದು ಹೇಳಿ ನೀರು ತರಲು ಹೇಳಿದರು. ಕಾಕಾರವರು ನೀರು ತಂದು ಕೊಡಲು ಬಾಬಾ ತಾವು ಸ್ವಲ್ಪ ಕುಡಿದು, ಕಾಕಾರವರಿಗೂ ಕುಡಿಯಲು ಹೇಳಿದರು. ಕಾಕಾರವರು ಸಹ ಸ್ವಲ್ಪ ನೀರನ್ನು ಕುಡಿದರು. ಆಗ ಬಾಬಾರವರು "ನಿನ್ನ ರೋಗ ಗುಣವಾಯಿತು ಕಲ್ಲುಮಂಚ ಹಾಕುವ ಕೆಲಸವನ್ನು ಆರಂಭ ಮಾಡಬಹುದು" ಎಂದರು. ನಂತರ ಓಡಿಹೋಗಿದ್ದವರೆಲ್ಲ ಹಿಂತಿರುಗಿ ಕೆಲಸವನ್ನು ಆರಂಭ ಮಾಡಿದರು. ಅತಿಸಾರ ರೋಗಕ್ಕೆ ಕಡಲೇಕಾಯಿ ಔಷಧವೆ? ವೈದ್ಯರ ಅಭಿಪ್ರಾಯದಲ್ಲಿ ಕಡಲೇಕಾಯಿ ತಿನ್ನುವದರಿಂದ ಅತಿಸಾರ ಹೆಚ್ಚಾಗುತ್ತದೆ. ಇದಲ್ಲವೆ ಬಾಬಾರವರ ಲೀಲೆ!

## ಹರ್ದಾದ ದತ್ತೋಪಂತ

ಹರ್ದಾದ ದತ್ತೋಪಂತರೆಂಬವರೊಬ್ಬರು ಹದಿನಾಲ್ಕು ವರ್ಷಗಳ ಕಾಲ ಹೊಟ್ಟೆ ಶೂಲೆಯಿಂದ ನರಳುತ್ತಿದ್ದರು. ಯಾವ ಔಷಧಿಗಳಿಂದಲೂ ಗುಣವಾಗಿರಲಿಲ್ಲ. ಬಾಬಾ ಅವರ ಹೆಸರನ್ನು ಕೇಳಿ ಶಿರ್ಡಿಗೆ ಬಂದರು. ಬಾಬಾರವರು ದಯಾಪೂರಿತ ದೃಷ್ಟಿಯಿಂದ ಅವರನ್ನು ನೋಡಿ, ಅವರ ಮಸ್ತಕದ ಮೇಲೆ ಕೈ ಇಟ್ಟು ಆಶೀರ್ವದಿಸಿ, ಉಧಿ ಪ್ರಸಾದವನ್ನು ನೀಡಿದರು. ಅಂದಿನಿಂದ ಅವರ ಹೊಟ್ಟೆ ಶೂಲೆ ನಿವಾರಣೆಯಾಯಿತು.

ಮಾಧವರಾವ ದೇಶಪಾಂಡೆ (ಶ್ಯಾಮ) ಒಮ್ಮೆ ಹೊಟ್ಟೆ ಶೂಲೆಯಿಂದ ನರಳುತ್ತಿದ್ದರು. ಅವರಿಗೆ ಬಾಬಾ ಸೋನಾಮುಖಿ ಕಷಾಯ ಕುಡಿಯುವಂತೆ ಹೇಳಿದರು. ಅದರಂತೆ ಆ ಕಷಾಯ ಕುಡಿಯಲು ರೋಗ ಗುಣವಾಯಿತು. ಎರಡು ವರ್ಷಗಳ ನಂತರ ರೋಗ ಮತ್ತೆ ತಲೆದೋರಿತು. ಆ ಸಾರೆ ಬಾಬಾರವರನ್ನು ವಿಚಾರಿಸದೆ ಪುನ: ಅದೇ ಕಷಾಯ ಮಾಡಿ ಶ್ಯಾಮ ಕುಡಿದರು. ಆದರೆ ಆಗ ಹೊಟ್ಟೆಶೂಲೆ ಹೆಚ್ಚಾಯಿತು. ನಂತರ ಬಾಬಾರವರ ದಯೆಯಿಂದ ಗುಣವಾಯಿತು.

ಕಾಕಾ ಮಹಾಜನಿಯವರ ಅಣ್ಣಂದಿರೊಬ್ಬರಿಗೆ ಒಂದು ಸಾರೆ ಹೊಟ್ಟೆ ನೋವು ಆರಂಭವಾಯಿತು. ಅವರು ಬಾಬಾರವರ ಕೀರ್ತಿಯನ್ನು ಕೇಳಿ ಶಿರ್ಡಿಗೆ ಬಂದು ರೋಗವನ್ನು ಗುಣಮಾಡುವಂತೆ ಬೇಡಿದರು. ಬಾಬಾರವರು ಅವರ ಉದರವನ್ನು ಮುಟ್ಟಿ "ದೇವರು ಗುಣ ಮಾಡುತ್ತಾನೆ, ಚಿಂತಿಸಬೇಡ" ಎಂದರು. ಅಂದಿನಿಂದ ಹೊಟ್ಟೆ ನೋವು ಗುಣವಾಗಿ ಪುನ: ನೋವು ಬರಲೇ ಇಲ್ಲ.

ನಾನಾಸಾಹೇಬ ಚಾಂದೋರಕರ ಅವರಿಗೂ ಒಂದು ಸಾರೆ ಅತಿಯಾದ ಹೊಟ್ಟನೋವು ಆರಂಭವಾಯಿತು. ಯಾವ ಔಷಧಿಗಳಿಂದಲೂ ಗುಣವಾಗಲಿಲ್ಲ. ನಂತರ ಬಾಬಾರವರಲ್ಲಿ ಬಂದು ಕೇಳಿದರು. ಬಾಬಾರವರು "ಬರ್ಫಿಯನ್ನು ತುಪ್ಪದಲ್ಲಿ ಸೇರಿಸಿ ತಿನ್ನು"

ಎಂದರು. ಈ ಔಷಧಿಯಿಂದ ಅವರ ಹೊಟ್ಟೆನೋವು ಗುಣವಾಯಿತು.

ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ರೋಗಗಳನ್ನು ಗುಣಪಡಿಸಿದುದು ಬಾಬಾರವರ ಮೃದು ನುಡಿಗಳೇ ಹೊರತು, ಔಷಧಿಗಳಲ್ಲ ಎಂದು ನಾವು ಮನಗಾಣಬಹುದು.

**ಶ್ರೀ ಸಾಯಿ ಪ್ರಣಾಮ**

# ೧೪ನೇ ಅಧ್ಯಾಯ

## ನಾಂದೇಡದ ರತನಜಿ ವಾಡಿಯ – ದಕ್ಷಿಣೆಯ ಮೀಮಾಂಸೆ

ಬಾಬಾರವರ ಜೀವನ ಬಹು ಮಧುರವಾದದ್ದು. ಅವರ ಅನೇಕ ಕೆಲಸಗಳೂ ಮತ್ತು ಸ್ವಾಭಾವಿಕ ಹೊರಹೊಮ್ಮುತ್ತಿದ್ದ ವಚನಗಳೂ ಸಹ ಅಂತೆಯೇ ಮಧುರವಾಗಿದ್ದವು. ಅವರ ಜೀವನವು ಹರ್ಷದ ಪ್ರತಿರೂಪ. ಅವರು ಭಕ್ತರಿಗೋಸುಗ ಕರ್ತವ್ಯತತ್ಪರತೆಯನ್ನು ಬೋಧಿಸುವ ಕಥೆಗಳನ್ನು ಹೇಳುತ್ತಿದ್ದರು. ಜನಕೋಟಿಯು ಸುಖವಾಗಿ ಬಾಳಬೇಕೆಂಬುದೇ ಅವರ ಧ್ಯೇಯವಾಗಿದ್ದಿತು. ಆದರೆ ಜೀವನದ ಗುರಿಯನ್ನು ಸಾಧಿಸಲು ಜನರು ಜಾಗೃತರಾಗಬೇಕೆಂಬುದು ಅವರ ಅಭಿಪ್ರಾಯ. ಪೂರ್ವಜನ್ಮದ ಸುಕೃತ ಫಲದಿಂದ ಈ ಜನ್ಮವು ಲಭಿಸಿದೆ. ಆದುದರಿಂದ ಈ ಜನ್ಮದಲ್ಲಿ ಮಾನವನು ಭಕ್ತಿಮಾರ್ಗವನನ್ನವಲಂಬಿಸಿ ಮುಕ್ತಿಯನ್ನು ಹೊಂದಲು ಪ್ರಯತ್ನ ಮಾಡಬೇಕು. ಆದುದರಂದ ನಾವು ಉದಾಸೀನರಾಗದೆ ನಮ್ಮ ಜೀವನದ ಅಂತಿಮ–ಅನಂತ ಗುರಿಯನ್ನು ಸಾಧಿಸಲು ಸತತವೂ ಶ್ರಮಿಸಬೇಕು.

ಸಾಯಿಬಾಬಾರವರ ಲೀಲೆಗಳನ್ನು ನೀವು ಪ್ರತಿದಿನ ಕೇಳಿದರೆ, ಪ್ರತಿದಿನವೂ ನೀವು ಅವರನ್ನು ಭಕ್ತಿಭಾವದಿಂದ ನೆನೆದರೆ ನಿಮ್ಮ ಮನಸ್ಸಿನ ಚಂಚಲತೆ ದೂರವಾಗುತ್ತದೆ. ಮತ್ತು ಅದು ಕೊನೆಗೆ ಪರಬ್ರಹ್ಮನಲ್ಲಿ ಲೀನವಾಗುತ್ತದೆ.

### ನಾಂದೇಡದ ರತನಜಿ

ನಿಜಾಮರಾಜ್ಯದಲ್ಲಿನ ನಾಂದೇಡದಲ್ಲಿ ರತನಜಿ ಶಾಪುರಜಿ ವಾಡಿಯಾ ಎಂಬ ಒಬ್ಬ ಧನಿಕನಿದ್ದರು. ಅವರಿಗೆ ಐಶ್ವರ್ಯಕ್ಕೇನೂ ಕೊರತೆ ಇರಲಿಲ್ಲ. ಮೇಲೆ ನೋಡುವುದಕ್ಕೆ ಸಂತೃಪ್ತನಾದಂತೆ ಕಂಡರೂ ಅವರಿಗೆ ಮನಸ್ಸಿನಲ್ಲಿ ದು:ಖವಿತ್ತು. ಪ್ರಪಂಚದಲ್ಲಿ ಯಾರೂ ಸಂಪೂರ್ಣ ಸುಖಿಯಾಗಿರಬಾರದೆಂದೆಂಬುದು ಆ ಭಗವಂತನ

ನಿಯಮವಿದ್ದಿರಬಹುದು. ಅವರು ಧರ್ಮಿಷ್ಠರೂ, ಉದಾರಿಯೂ ಆಗಿದ್ದರು. ಆದ್ದರಿಂದ ಜನರು ಅವರನ್ನು ಸುಖಿಯೆಂದೇ ಭಾವಿಸಿದ್ದರು. ಆದರೆ ರತನಜಿಗೆ ಸಂತಾನ ಪ್ರಾಪ್ತಿ ಇಲ್ಲದಿದ್ದುರಿಂದ ಶಾಂತಿಯಿರಲಿಲ್ಲ. ಭಕ್ತಿ ಅಥವಾ ಪ್ರೀತಿ ಇಲ್ಲದ ಕೀರ್ತನೆಯೂ, ವಾದ್ಯಗಳ ಹೊಂದಾಣಿಕೆಯಿಲ್ಲದ ಸಂಗೀತವೂ, ಯಜ್ಞೋಪವೀತವಿಲ್ಲದ ಬ್ರಾಹ್ಮಣನೂ, ವಿವೇಕವಿಲ್ಲದ ಬುದ್ಧಿವಂತಿಕೆಯೂ, ಪಶ್ಚಾತ್ತಾಪವಿಲ್ಲದ ಯಾತ್ರೆಯೂ, ಹಾರವಿಲ್ಲದ ಆಭರಣ ಸೌಂದರ್ಯವೂ ಇರುವಂತೆ ಸಂತಾನವಿಲ್ಲದ ಗೃಹವೂ ನಿಷ್ಪ್ರಯೋಜಕ. ರತನಜಿಯು ಹಗಲಿರುಳೂ ಇದನ್ನೆ ಕುರಿತು ಚಿಂತಿಸುತ್ತಿದ್ದರು. ಹಾಗೆಯೇ ಮನಸ್ಸಿನಲ್ಲಿ "ದೇವರು ನನಗೊಬ್ಬ ಪುತ್ರನನ್ನು ದಯಪಾಲಿಸುತ್ತಾನೆಯೆ?" ಎಂದು ಕೊರಗುತ್ತಿದ್ದರು. ಈ ಚಿಂತೆಯಿಂದ ಆಹಾರ ಮುಂತಾದವುಗಳಲ್ಲಿ ಆಸಕ್ತಿ ಇರಲಿಲ್ಲ. ರತನಜಿ ದಾಸಗಣೂ ಮಹಾರಾಜ ಅವರಲ್ಲಿ ವಿಶೇಷ ಗೌರವವಿಟ್ಟಿದ್ದರು. ಅವರನ್ನು ಕಂಡು ತಮ್ಮ ವೇದನೆಯನ್ನು ತೋಡಿಕೊಂಡರು. ಆಗ ದಾಸಗಣೂರವರು ಶಿರ್ಡಿಗೆ ಹೋಗಿ ಬಾಬಾರವರಲ್ಲಿ ಬೇಡಿದರೆ ನಿಮ್ಮ ಬಯಕೆ ಕೈಗೂಡುವುದೆಂದರು. ರತನಜಿಯವರು ಶಿರ್ಡಿಗೆ ಹೋಗುವ ಮನಸ್ಸು ಮಾಡಿದರು. ಕೆಲವು ದಿನಗಳ ನಂತರ ಶಿರ್ಡಿಗೆ ಬಂದು ಬಾಬಾರವರ ಪಾದಗಳಿಗೆರಗಿದರು. ಬಾಬಾರವರಿಗೆ ಫಲ ಪುಷ್ಪಗಳನ್ನು ಅರ್ಪಿಸಿದರು. ಅನಂತ ಭಕ್ತಿಯಿಂದ ಬಾಬಾರವರ ಸಮೀಪದಲ್ಲಿ ಕುಳಿತು, ಅವರನ್ನು ಪ್ರಾರ್ಥಿಸುತ್ತ, "ಅನೇಕ ಜನರು ಅವರ ಕಷ್ಟಕಾಲದಲ್ಲಿ ತಮ್ಮಲ್ಲಿಗೆ ಬಂದು ಕಷ್ಟ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಇದನ್ನು ಕೇಳಿ ನಾನು ಸಹ ಅತೃಪ್ತಿಯಿಂದ ನಿಮ್ಮ ಪಾದಗಳನ್ನು ಆಶ್ರಯಿಸಿರುತ್ತೇನೆ. ನನ್ನನ್ನು ನಿರಾಶೆಗೊಳಿಸಬೇಡಿ." ಎಂದು ಬೇಡಿಕೊಂಡರು. ಆಗ ಬಾಬಾರವರು ರತನಜಿಯವರಿಂದ ಐದು ರೂ. ದಕ್ಷಿಣೆ ಕೇಳಿದರು. ರತನಜಿಯವರು ೫ರೂ ಕೊಡುವದಲ್ಲಿದ್ದರು. ಆಗ ಬಾಬ "ನಿನ್ನಿಂದಾಗಲೆ ರೂ ೩-೧೪ ಬಂದಿದೆ ಉಳಿದುದನ್ನು ಮಾತ್ರ ಕೊಡು" ಎಂದರು.

ರತನಜಿಯವರಿಗೆ ಸಮಸ್ಯೆಯಾಯಿತು. ನಂತರ ಸಾಷ್ಟಾಂಗ ನಮಸ್ಕಾರ ಮಾಡಿ ದಕ್ಷಿಣೆಯನ್ನು ಕೊಟ್ಟು ತಮ್ಮ ವೇದನೆಯನ್ನೆಲ್ಲ ತೋಡಿಕೊಂಡು, "ಬಾಬಾ, ನನಗೊಬ್ಬ ಪುತ್ರನನ್ನು ಆಶೀರ್ವದಿಸಿ" ಎಂದು ಅಂಗಲಾಚಿ ಬೇಡಿದರು. ಆಗ ಬಾಬಾ ಅವರ ಮನಸ್ಸು ಕರಗಿ, ಇನ್ನು ಚಿಂತಿಸಬೇಡ ಎಂದು ಹೇಳಿ, ಉಧಿಯನ್ನು ಕೊಟ್ಟು ಆಶೀರ್ವದಿಸಿ "ದೇವರು ನಿನ್ನ ಬಯಕೆ ಈಡೇರಿಸುತ್ತಾನೆ" ಎಂದರು.

ಹೀಗೆ ರತನಜಿ ಬಾಬಾರವರ ಆಶಿರ್ವಾದ ಪಡೆದು ನಾಂದೇಡಿಗೆ ಹಿಂತಿರುಗಿ ಬಂದು ನಡೆದುದೆಲ್ಲವನ್ನು ವಿಶದವಾಗಿ ದಾಸಗಣೂರವರಿಗೆ ತಿಳಿಸಿದರು. "ನಾನು ಶಿರ್ಡಿಗೆ ಈ ಹಿಂದೆ ಹೋಗಿಯೇ ಇರಲಿಲ್ಲ. ಅವರು ನನ್ನಿಂದಾಗಲೇ ೩ ರೂ ೧೪ ಆಣೆ ಬಂದಿದೆಯೆಂದರು. ಅದು ಹೇಗೆ?" ಎಂದೂ ಸಹ ಕೇಳಿದರು. ದಾಸಗಣೂರವರಿಗೂ ಸಹ ಇದೊಂದು ಸಮಸ್ಯೆಯಾಯಿತು. ಕೂಡಲೇ ಅವರಿಗೆ ರತನಜಿಯವರು ಕೆಲವು ದಿನಗಳ ಹಿಂದೆ ಒಬ್ಬ ಮಹಮ್ಮದೀಯ ಸಂತರಾದ ಮೌಲ್ವಿ ಸಾಹೇಬರನ್ನು ಸತ್ಕರಿಸಿದ ನೆನಪು ಬಂದಿತು. ರತನಜಿ ಶಿರ್ಡಿಗೆ ಹೋಗುವ ನಿರ್ಧಾರ ಕೈಗೊಂಡ ಸ್ವಲ್ಪ ದಿನಗಳಲ್ಲಿ ಇದು ನಡೆದಿತ್ತು. ದಾಸಗಣೂರವರು ಆ ಸತ್ಕಾರಕ್ಕೆ ಖರ್ಚು ಮಾಡಿದ ಪಟ್ಟಿ ತರಿಸಿ ನೋಡಿದರು. ಸರಿಯಾಗಿ ಲೆಕ್ಕದಲ್ಲಿ ೩ರೂ ೧೪ ಆಣೆ ಖರ್ಚಾಗಿತ್ತು. ಆಗ ಬಾಬಾರವರು ಶಿರ್ಡಿಯಲ್ಲಿಯೇ ವಾಸವಾಗಿದ್ದರೂ ಸರ್ವಜ್ಞರು ಎಂಬುದು ಎಲ್ಲರಿಗೂ ವೇದ್ಯವಾಯಿತು. ಈ ರೀತಿ ಅವರಿಗೆ ಪ್ರಪಂಚದ ಆಗು ಹೋಗುಗಳೆಲ್ಲದರ ಅರಿವಿತ್ತು.

ಇದರಿಂದ ರತನಜಿಗೆ ಬಾಬಾರವರಲ್ಲಿ ಭಕ್ತಿ ಮಿಗಿಲಾಯಿತು. ಸ್ವಲ್ಪ ದಿನಗಳ ನಂತರ ಬಾಬಾರವರ ಆಶೀರ್ವಾದದಂತೆ ಅವರಿಗೆ ಪುತ್ರ ಸಂತಾನ ಪ್ರಾಪ್ತಿಯಾಯಿತು. ಇದಾದ ನಂತರ ಅವರಿಗೆ ೧೨ ಮಕ್ಕಳಾದವು. ಅವುಗಳಲ್ಲಿ ನಾಲ್ಕು ಮಾತ್ರ ಬದುಕಿದವು

## ದಕ್ಷಿಣೆಯ ಮೀಮಾಂಸೆ

ಬಾಬಾರವರು ತಮ್ಮನ್ನು ಕಾಣಲು ಬಂದವರೆಲ್ಲರಿಂದಲೂ ಸಾಮಾನ್ಯವಾಗಿ ದಕ್ಷಿಣೆ ಕೇಳುತ್ತಿದ್ದರೆಂಬುದು ಎಲ್ಲರಿಗೂ ತಿಳಿದ ವಿಷಯ, ಅವರು ಶುದ್ಧ ಫಕೀರರು ಮತ್ತು ವಿರಕ್ತರು ಆಗಿದ್ದರೆ ದಕ್ಷಿಣೆಯನ್ನೇಕೆ ಕೇಳುತ್ತಿದ್ದರು, ಎಂದು ಕೆಲವರು ಪ್ರಶ್ನಿಸಬಹುದು. ಅದಕ್ಕೆ ಉತ್ತರವನ್ನು ಈಗ ಪರಿಶೀಲಿಸೋಣ.

ಮೊದಮೊದಲು ಬಾಬಾ ಯಾರಿಂದಲೂ ಏನನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಉರಿದು ತುಂಡು –ತುಂಡಾಗಿದ್ದ ಬೆಂಕಿ ಕಡ್ಡಿಗಳನ್ನು ಆಯ್ದು ಕಿಸೆಯಲ್ಲಿ ತುಂಬಿಕೊಳ್ಳುತ್ತಿದ್ದರು. ಅವರ ಮುಂದೆ ಹಣ ಇಟ್ಟರೆ ಅದರಿಂದ ಎಣ್ಣೆ ಮತ್ತು ಹೊಗೆಸಪ್ಪು ಕೊಡುಕೊಳ್ಳುತ್ತಿದ್ದರು. ಅವರಿಗೆ ಹೊಗೆಸೊಪ್ಪೆಂದರೆ ಬಹಳ ಇಷ್ಟವಾಗಿತ್ತು. ಸಂತರ ದರ್ಶನಕ್ಕೆ ಬರಿಗೈಯಿಂದ ಹೋಗಬಾರದು ಎಂಬ ರೂಢಿ ಇದ್ದುದರಿಂದ ಕೆಲವರು ಅವರ ಮುಂದೆ ಕೆಲವು ತಾಮ್ರದ ನಾಣ್ಯಗಳನ್ನಿಟ್ಟು ಬರುತ್ತಿದ್ದರು. ಎರಡು ಮೂರು ಕಾಸು ಇಟ್ಟಿರುವುದನ್ನು ಕಂಡರೆ, ಹೆಚ್ಚಾದುದನ್ನು ಕೂಡಲೆ ಬಾಬಾ ಹಿಂತಿರುಗಿಸುತ್ತಿದ್ದರು. ಈ ರೀತಿ ಬಾಬಾರವರ ಕೀರ್ತಿ ದೇಶದ ಮೂಲೆ ಮೂಲೆಗಳಲ್ಲಿಯೂ ಹರಡಿತು. ಮಸೀದಿಯಲ್ಲಿ ಭಕ್ತರ ಜನಸಂದಣಿ ಆರಂಭವಾಯಿತು. ಆಗ ಬಾಬಾರವರು ಅವರಿಂದ ದಕ್ಷಿಣೆ ಕೇಳ ಹತ್ತಿದರು. ದಕ್ಷಿಣೆ ಇಲ್ಲದೆ ದೇವರ ಪೂಜೆ ವ್ಯರ್ಥವೆಂದು ಶ್ರುತಿಯಲ್ಲಿ (ವೇದದಲ್ಲಿ) ಹೇಳಲಾಗಿದೆ. ದೇವರ ಪೂಜೆಗೆ ದಕ್ಷಿಣೆ ಅವಶ್ಯಕವಾದರೆ, ಯೋಗಿಗಳ ಪೂಜೆಗೆ ಬೇಡವೆ? ಶಾಸ್ತ್ರಗಳು ದೇವರನ್ನೇ ಆಗಲಿ, ದೊರೆಯನ್ನೇ ಆಗಲಿ ಯೋಗಿಗಳನ್ನೇ ಆಗಲಿ ಗುರವನ್ನೇ ಆಗಲಿ ಕಾಣಲು ಹೋದರೆ ಬರಿಗೈಯಿಂದ ಹೋಗಬಾರದೆಂದು ನಮಗೆ ವಿಧಿಸಿವೆ. ಈ ಸಂದರ್ಭದಲ್ಲಿ ಉಪನಿಷತ್ತುಗಳಲ್ಲಿ ಈ ವಿಚಾರವಾಗಿ ಏನು ಹೇಳಲಾಗಿದೆಯೆಂಬುದನ್ನು ನೋಡೋಣ. ಪ್ರಜಾಪತಿಯು ದೇವತೆಗಳನ್ನೂ, ಅಸುರರನ್ನೂ, ಮಾನವರನ್ನೂ, 'ದಾ'

ಎಂಬ ಒಂದೇ ಅಕ್ಷರದಿಂದ ಸಂಬೋಧಿಸಿದನೆಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಲಾಗಿದೆ. ದೇವತೆಗಳು ಇದರಿಂದ ಧರ್ಮವನ್ನು ಅಭ್ಯಾಸ ಮಾಡಬೇಕೆಂದು ತಿಳಿದುಕೊಂಡರು. ಮಾನವರು ದಾನಮಾಡಬೇಕೆಂದು ತಿಳಿದುಕೊಂಡರು. ಅಸುರರು ದಯೆಯನ್ನು ಅಭ್ಯಾಸ ಮಾಡಬೇಕೆಂದು ತಿಳಿದುಕೊಂಡರು.

ಮಾನವರಿಗೆ ದಾನ–ಧರ್ಮವು ಶಿಫಾರಸು ಮಾಡಲ್ಪಟ್ಟಿದೆ. ತೈತ್ರೇಯ ಉಪನಿಷತ್ತಿನಲ್ಲಿಯೂ ಸಹ ಗುರುವು ತನ್ನ ಶಿಷ್ಯರಿಗೆ ದಾನ – ಧರ್ಮವನ್ನು ಅಭ್ಯಾಸ ಮಾಡಬೇಕೆಂದು ಹೇಳಿರುತ್ತಾನೆ. ಧರ್ಮದ ವಿಚಾರವಾದಿ "ವಿಶ್ವಾಸದಿಂದಲಾದರೂ ಅಥವಾ ವಿಶ್ವಾಸವಿಲ್ಲದೆಯೂ ಧರ್ಮ ಮಾಡು" ಎಂದು ಹೇಳಲಾಗಿದೆ. ಆದರೆ ಔದಾರ್ಯ ಮತ್ತು ದಯೆಯಿಂದ ದಾನ ಮಾಡಬೇಕು. ಬಾಬಾರವರು ಈ ಪಾಠ ಕಲಿಸಲೋಸುಗವೇ ಎಲ್ಲರಿಂದಲೂ ದಕ್ಷಿಣೆ ಕೇಳುತ್ತಿದ್ದರು. ಆದರೆ ಬಾಬಾರವರೇ ಹೇಳಿರುವಂತೆ "ಅವನಿಂದ ತೆಗೆದುಕೊಂಡ ನೂರರಷ್ಟನ್ನು ಅವನಿಗೆ ಪುನ: ಕೊಡಬೇಕು" ಎಂಬುದರಲ್ಲಿ ವಿಶೇಷವಿದೆ. ಈ ರೀತಿ ಘಟನೆಗಳು ಬೇಕಾದಷ್ಟಿವೆ. ಪ್ರಸಿದ್ಧ ನಟರಾದ ಗಣಪತರಾವ ಬೋಪದಾರವರು ತಮ್ಮ ಚರಿತ್ರೆಯಲ್ಲಿ ಈ ರೀತಿ ಬರೆದಿರುತ್ತಾರೆ. "ಬಾಬಾರವರು ಆಗಾಗ್ಗೆ ನನ್ನಿಂದ ದಕ್ಷಿಣೆ ಕೇಳುತ್ತಿದ್ದುದರಿಂದ ನನ್ನ ಭಂಡಾರವೆಲ್ಲವೂ ಬರಿದಾಯಿತು. ಆದರೆ ಕೊನೆಕೊನೆಯಲ್ಲಿ ನನಗೆ ಹಣದ ಕೊರತೆ ಇರಲಿಲ್ಲ."

ದಕ್ಷಿಣೆಯ ಇನ್ನೂ ಕೆಲವು ಅರ್ಥಗಳು ಈ ರೀತಿ ಇವೆ. ಬಾಬಾರವರು ಅತಿ ಹೆಚ್ಚಾದ ದಕ್ಷಿಣೆ ಕೇಳುತ್ತಿರಲಿಲ್ಲ. ಇದನ್ನು ಸಮರ್ಥಿಸುವ ಉದಾಹರಣೆಗಳು ಈ ಕೆಳಕಂಡಂತಿವೆ:

೧) ಬಾಬಾರವರು ಪ್ರೊ. ನಾರ್ಕೆಯವರನ್ನು ೧೫ರೂ. ದಕ್ಷಿಣೆ ಕೇಳಿದಾಗ ಅವರು ತಮ್ಮ ಹತ್ತಿರ ಹಣವಿಲ್ಲ ಎಂದು ಹೇಳಿದರು.

ಆಗ ಬಾಬಾರವರು "ನನಗೆ ಗೊತ್ತು, ನೀನು ಈಗ ಯೋಗ ವಾಷಿಷ್ಠವನ್ನು ಓದುತ್ತಿದ್ದೀಯಲ್ಲವೇ? ಅದರಿಂದ ಕೊಡು" ಎಂದರು. ಈ ಸಂದರ್ಭದಲ್ಲಿ ದಕ್ಷಿಣೆಯೆಂದರೆ ಪುಸ್ತಕ ಪಠಣೆಯಿಂದ ಪಾಠ ಕಲಿತು ಬಾಬಾರವರು ವಾಸವಾಗಿರುವ ಆತ್ಮದಲ್ಲಿ ಆ ನೀತಿಯನ್ನು ಇಡುವದು ಎಂದು ಅರ್ಥ.

೨) ಬಾಬಾರವರು ಶ್ರೀಮತಿ ತರ್ಖಡರವರಿಂದ ೬ರೂ ದಕ್ಷಿಣೆಯನ್ನು ಕೇಳಿದರು. ಅವರ ಹತ್ತಿರ ಹಣವಿಲ್ಲದುದರಿಂದ ಅವರಿಗೆ ವ್ಯಥೆಯಾಯಿತು. ಆಗ ಅವರ ಪತಿಯು "ಬಾಬಾರವರು ನಿನ್ನಿಂದ ಕೇಳಿದ್ದು ನಿನ್ನ ಅಂತರಂಗದ ಆರು ಶತ್ರುಗಳನ್ನು (ಮೋಹ, ಮಮತೆ, ಆಶೆ ಇತ್ಯಾದಿಗಳು)" ಎಂದರು. ಬಾಬರವರು ಒಪ್ಪಿಕೊಂಡರು.

ಬಾಬಾರವರು ಶೇಖರಿಸುತ್ತಿದ್ದ ದಕ್ಷಿಣೆಯನ್ನು ಅದೇ ದಿನ ಸರ್ವರಿಗೂ ಹಂಚಿ ಮಾರನೆದಿನ ಎಂದಿನಂತೆ ಫಕೀರರಾಗುತ್ತಿದ್ದರೆಂಬುದನ್ನು ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಸಾವಿರಾರು ರೂಪಾಯಿಗಳನ್ನು ದಕ್ಷಿಣೆಯಾಗಿ ತೆಗೆದುಕೊಂಡ ಬಾಬಾರವರ ಹತ್ತಿರ ಅವರು ಸಮಾಧಿಯಾದಾಗ ಕೇವಲ ಸ್ವಲ್ಪ ಹಣವಿತ್ತು. ನಿಜವಾಗಿ ಹೇಳುವದಾದರೆ ದಕ್ಷಿಣೆಯಿಂದ ತಮ್ಮ ಭಕ್ತಿಗೆ ಸನ್ಯಾಸ ಮತ್ತು ಪರಿಶುದ್ಧತೆಯ ಪಾಠ ಕಲಿಸುವದೇ ಅವರ ಮುಖ್ಯ ಧ್ಯೇಯವಾಗಿದ್ದಿತು.

ಠಾಣಾದ ನಿವೃತ್ತ ಮಾಮಲೇದಾರರಾದ ಶ್ರೀ ಬಿ.ವಿ. ದೇವರವರು ಬಾಬಾರವರು ಕೇಳದಿದ್ದರೂ ಸಹ ತಾವಾಗಿಯೇ ದಕ್ಷಿಣೆ ಕೊಡುತ್ತಿದ್ದರು. ಕೆಲವು ಸಾರಿ ಸ್ವೀಕರಿಸುತ್ತಿದ್ದರು, ಕೆಲವು ಸಾರಿ ನಿರಾಕರಿಸುತ್ತಿದ್ದರು. ಬಾಬಾರವರು ದಕ್ಷಿಣೆ ಕೇಳಲಿ, ಅನಂತರ ಕೊಡೋಣವೆಂದು ಯೋಚಿಸುತ್ತಿದ್ದವರಿಂದ ತೆಗೆದುಕೊಳ್ಳುತ್ತಲೇ ಇರಲಿಲ್ಲ; ಭಕ್ತರ ಶಕ್ತ್ಯಾನುಸಾರ ದಕ್ಷಿಣೆ ಕೇಳಿ ತೆಗೆದುಕೊಳ್ಳುತ್ತಿದ್ದರು. ಆದರೆ ಐಶ್ವರ್ಯವಂತರಿಗೆ

ಅಥವಾ ಕಡು ಬಡವರಿಗೆ ಕೇಳುತ್ತಿರಲಿಲ್ಲ. ದಕ್ಷಿಣೆ ಕೇಳಿದಾಗ ಕೊಡದಿದ್ದರೆ ಕೋಪಗೊಳ್ಳುತ್ತಲೂ ಸಹ ಇರಲಿಲ್ಲ. ಭಕ್ತರು ಇನ್ನೊಬ್ಬರ ಸಂಗಡ ದಕ್ಷಿಣೆ ಕೊಟ್ಟು ಕಳುಹಿದಾಗ, ಅವರು ಅದನ್ನು ಕೊಡಲು ಮರೆತರೆ ಬಾಬಾರವರೇ ಅದನ್ನು ಜ್ಞಾಪಿಸಿ ಪಡೆಯುತ್ತಿದ್ದರು ಅನೇಕ ವೇಳೆ ಕೆಲವು ಹಣವನ್ನು ಮರಳಿ ಕೊಟ್ಟು ದೇವರ ಪೂಜಾ ಗೃಹದಲ್ಲಿಟ್ಟು ಪೂಜಿಸುವಂತೆ ಹೇಳುತ್ತಿದ್ದರು. ಇದರಿಂದ ಭಕ್ತರಿಗೆ ಒಳ್ಳೆಯದಾಗುತ್ತಿತ್ತು. ಅನೇಕ ಸಲ ಭಕ್ತರು ತಾವು ಕೊಡುತ್ತೇವೆಂದು ಹೇಳಿಕೊಂಡಿದುದಕ್ಕಿಂತ ಹೆಚ್ಚಾದ ದಕ್ಷಿಣೆಯನ್ನು ಅರ್ಪಿಸಿದಾಗ ಆ ಹೆಚ್ಚಾದ ಹಣವನ್ನು ಹಿಂತಿರುಗಿ ಕೊಟ್ಟು ಬಿಡುತ್ತಿದ್ದರು. ಕೆಲವುಸಲ ಭಕ್ತರ ಮನಸ್ಸಿನಲ್ಲಿ ಇದ್ದುದಕ್ಕಿಂತ ಹೆಚ್ಚಾಗಿ ದಕ್ಷಿಣೆ ಕೇಳುತ್ತಲೂ ಇದ್ದರು. ಹಣವಿಲ್ಲದಿದ್ದ ಪಕ್ಷದಲ್ಲಿ ಸಾಲ ಮಾಡಿಯಾದರೂ ಕೊಡಿರಿ ಎಂದು ಹೇಳಿದ ಪ್ರಸಂಗಗಳೂ ಇದ್ದವು. ಕೆಲವರಿಂದ ದಿನದಲ್ಲಿ ೩-೪ ಬಾರಿ ದಕ್ಷಿಣೆ ಕೇಳಿ ತೆಗೆದುಕೊಳ್ಳುತ್ತಿದ್ದರು.

ದಕ್ಷಿಣೆ ರೂಪವಾಗಿ ಸಂಪಾದಿಸಿದ ಹಣದಲ್ಲಿ ಕೇವಲ ಸ್ವಲ್ಪ ಭಾಗ ಮಾತ್ರ ತಮ್ಮ ಸ್ವಂತ ಖರ್ಚಿಗೆಂದು ಇಡುತ್ತಿದ್ದರು. ಅದರಿಂದ ತಂಬಾಕು ಮತ್ತು ಧುನಿಗೋಸ್ಕರ ಕಟ್ಟಿಗೆ ಇವುಗಳನ್ನು ತೆಗೆದುಕೊಳ್ಳುತ್ತಿದ್ದರು. ಉಳಿದ ಹಣವನ್ನು ಕೆಲವು ಭಕ್ತರಿಗೆ ಹಂಚುತ್ತಿದ್ದರು. ಶಿರ್ಡಿ ಸಂಸ್ಥಾನಕ್ಕೆ ಸಮಸ್ತ ಪದಾರ್ಥಗಳನ್ನು ರಾಧಾಕೃಷ್ಣಮಾಯಿಯ ಸಲಹೆಯ ಮೇರೆಗೆ ಭಕ್ತರು ಒದಗಿಸುತ್ತಿದ್ದರು. ಬಾಬಾರವರು ಹೆಚ್ಚಿನ ಬೆಲೆಯ ಪದಾರ್ಥಗಳನ್ನು ತಂದವರ ಮೇಲೆ ಕೋಪಗೊಳ್ಳುತ್ತಿದ್ದರು. ಅವರು ಒಂದು ದಿನ ನಾನಾರವರಿಗೆ "ನನ್ನ ಆಸ್ತಿಯೆಂದರೆ, ಒಂದು ಚೂರು ಬಟ್ಟೆ, ಕಫನಿ, ಮತ್ತು ಮಣ್ಣಿನಪಾತ್ರೆ ಇಷ್ಟೆ. ಈ ಜನರು ಅನಾವಶ್ಯಕವಾದ ಮತ್ತು ಕೆಲಸಕ್ಕೆ ಬಾರದ ಬೆಲೆಬಾಳುವಂತಹ ಪದಾರ್ಥಗಳನ್ನು ತಂದು ನನಗೆ ತೊಂದರೆಕೊಡುತ್ತಾರೆ" ಎಂದು ಹೇಳಿದರು.

ಶ್ರೀ ಸಾಯಿ ಪ್ರಣಾಮ

# ೧೫ನೇ ಅಧ್ಯಾಯ

## ನಾರದೀಯ ಕೀರ್ತನೆ– ಚೋಳಕರರ ಸಕ್ಕರೆಯಿಲ್ಲದ ಚಹ– ಎರಡು ಹಲ್ಲಿಗಳು

ಈ ಹಿಂದೆ ಆರನೇ ಅಧ್ಯಾಯದಲ್ಲಿ ಶಿರ್ಡಿಯಲ್ಲಿ ಶ್ರೀರಾಮನವಮಿ ಸಮಾರಂಭ ಹೇಗೆ ನಡೆಯುತ್ತಿತ್ತು. ಮೊದಮೊದಲು ಹರಿಕಥಾ ಸಮಾರಂಭಕ್ಕೆ ಹರಿದಾಸರ ನ್ನೊದಗಿಸುವುದೆಷ್ಟು ಕಷ್ಟವಿತ್ತು ಬಾಬಾರವರು ದಾಸಗಣೂರವರಿಗೆ ಈ ಕಾರ್ಯವನ್ನು ವಹಿಸಿದ ಬಗೆ, ಮುಂತಾದವುಗಳನ್ನು ವಿವರಿಸಿದ್ದೇನಷ್ಟೆ. ಈಗ ದಾಸಗಣೂ ಅವರು ಹೇಗೆ ಹರಿಕಥೆ ಮಾಡುತ್ತಿದ್ದರು ಎಂಬುದನ್ನು ನೋಡೋಣ.

### ನಾರದೀಯ ಕೀರ್ತನೆ

ಸಾಮಾನ್ಯವಾಗಿ ನಮ್ಮ ಹರಿದಾಸರು ಕೀರ್ತನೆ ಮಾಡುವಾಗ ಮೈತುಂಬ ಸೊಗಸಾದ ಉಡುಪುಗಳನ್ನು ಹಾಕಿಕೊಳ್ಳುತ್ತಾರಲ್ಲವೇ? ನಿಲುವಂಗಿ ಹಾಕಿಕೊಂಡು ಜರಿಶಲ್ಯವನ್ನು ಹೊದೆದುಕೊಂಡು ಜರಿ ಪೇಟವನ್ನು ಸುತ್ತಿಕೊಂಡು ಸಭೆಯ ಮುಂದೆ ಗೋಚರವಾಗುತ್ತಾರೆ. ಒಮ್ಮೆ ದಾಸಗಣೂರವರೂ ಸಹ ಇದೇ ರೀತಿ ಉಡುಪು ಧರಿಸಿ ಕೀರ್ತನೆ ಮಾಡುವ ಮುನ್ನ ಬಾಬಾರವರಿಗೆ ನಮಸ್ಕರಿಸಲು ಬಂದರು. ಇದನ್ನು ನೋಡಿದ ಬಾಬಾ "ಏನು ಮದುಮಗನ ಹಾಗೆ ಶೃಂಗಾರವಾಗಿದ್ದೀಯಲ್ಲ – ಏನು ಸಮಾಚಾರ?" ಎಂದು ಕೇಳಲು "ಕೀರ್ತನೆ ಮಾಡಲೋಸುಗ," ಎಂದು ಗಣೂ ಉತ್ತರ ಕೊಟ್ಟರು. ಆಗ ಬಾಬಾರವರು "ಕೀರ್ತನೆಗೋಸ್ಕರ ಇಷ್ಟೊಂದು ಆಡಂಬರವೆ? ನಿನ್ನ ಈ ಆಡಂಬರವನ್ನು ಬದಿಗಿಡು"ಎಂದರು. ಆಗ ದಾಸಗಣೂರವರು ತಮ್ಮ ಶೃಂಗಾರ ವಸ್ತುಗಳೆಲ್ಲವನ್ನು ತೆಗೆದಿಟ್ಟು ನಮಸ್ಕರಿಸಿ ಕೀರ್ತನೆ ಆರಂಭ ಮಾಡಿದರು. ಕೀರ್ತನ ಪದ್ಧತಿಯನ್ನು ಆರಂಭಿಸಿದ ನಾರದರೂ ಸಹ ತಂಬೂರಿ ತಾಳ ಇವುಗಳ ವಿನಃ ಹೆಚ್ಚಿಗೆ ಏನೂ ಇಟ್ಟುಕೊಂಡಿರಲಿಲ್ಲ.

ಕೇವಲ ತಂಬೂರಿಯನ್ನು ನುಡಿಸುತ್ತ ಪರಮಾತ್ಮನ ವೈಭವವನ್ನು ಕೊಂಡಾಡುತ್ತ ತ್ರಿಲೋಕಗಳಲ್ಲಿ ನಾರದರು ಸಂಚರಿಸುತ್ತಿದ್ದರು.

## ಚೋಳಕರರ ಸಕ್ಕರೆಯಿಲ್ಲದ ಚಹ

ಬಾಬಾರವರ ಹೆಸರು ಮೊದಲು ಪುಣೆ ಮತ್ತು ಅಹಮದನಗರ ಜಿಲ್ಲೆಗಳಲ್ಲಿ ಮಾತ್ರ ವ್ಯಾಪಿಸಿತ್ತು. ನಾನಾಸಾಹೇಬರ ಮೌಖಿಕ ಪ್ರಚಾರದಿಂದಲೂ, ದಾಸಗಣೂ ಅವರ ಕೀರ್ತನೆಯಿಂದಲೂ ಬಾಬಾರವರ ಕೀರ್ತಿ ದೇಶದ ಮೂಲೆ ಮೂಲೆಗಳಿಗೂ ಸಹ ವ್ಯಾಪಿಸಿತು. ಮುಖ್ಯವಾಗಿ ಹೇಳುವುದಾದರೆ ಬಾಬಾರವರ ಕೀರ್ತಿಗೆ ಕಾರಣರು ದಾಸಗಣೂರವರು. ಕೀರ್ತನ ಶ್ರವಣಕ್ಕೆ ಸೇರುವ ಜನರಲ್ಲಿ ವಿವಿಧವಾದ ಅಭಿರುಚಿಯುಳ್ಳವರಿರುತ್ತಾರೆ. ಕೆಲವರು ಕೀರ್ತನಕಾರನ ಜ್ಞಾನವನ್ನೂ, ಕೆಲವರು ಅವನ ನಟನೆಯನ್ನೂ, ಕೆಲವರು ಅವನ ಹಾಡುಗಾರಿಕೆಯನ್ನೂ, ಕೆಲವರು ಅವನ ಹಾಸ್ಯವನ್ನೂ, ಕೆಲವರು ಅವನು ಹೇಳುವ ಉಪಕಥೆಗಳನ್ನೂ, ಕೆಲವರು ಅವನ ವೇದಾಂತವನ್ನು ಮೆಚ್ಚುತ್ತಾರೆ. ಆದರೆ ಕೀರ್ತನೆಯನ್ನು ಕೇಳಿ ಭಕ್ತಿಯನ್ನು ಸಾಧಿಸುವವರು ಬಹು ವಿರಳ. ಆದರೆ ದಾಸಗಣೂರವರ ಕೀರ್ತನೆಯು ಸಭಿಕರ ಮೇಲೆ ವಿದ್ಯುತ್ ತರಂಗದಂತೆ ಪರಿಣಾಮ ಮಾಡುತ್ತಿತ್ತು. ಇದನ್ನು ಸಮರ್ಥಿಸುವ ಒಂದು ಉದಾಹರಣೆಯನ್ನು ಇಲ್ಲಿ ಕೊಟ್ಟಿರುತ್ತೇನೆ.

ಠಾಣಾದ ಕೌಪಿನೇಶ್ವರ ದೇವಾಲಯದಲ್ಲಿ ದಾಸಗಣೂ ಒಮ್ಮೆ ಬಾಬಾರವರ ಕೀರ್ತಿಯನ್ನು ಕೊಂಡಾಡುತ್ತ ಹರಿಕಥೆ ಮಾಡುತ್ತಿದ್ದರು. ಅಲ್ಲಿ ನೆರೆದಿದ್ದ ಸಭಿಕರಲ್ಲಿ, ಸಿವಿಲ್ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಬಡವರಾದ ಚೋಳಕರರವರೂ ಒಬ್ಬರು. ದಾಸಗಣೂರವರ ಹರಿಕಥೆ ಶ್ರವಣ ಮಾಡಿದಾಗ ಅವರ ಮನಸ್ಸು ಕರಗಿತು. ಆ ಕ್ಷಣವೇ ತಮ್ಮ ಮನಸ್ಸಿನಲ್ಲಿ ಸಾಯಿಬಾಬಾರವರಿಗೆ ವಂದಿಸುತ್ತ "ಬಾಬಾ, ನಾನು ಸಂಸಾರ ನಿರ್ವಹಣೆಯನ್ನು ಹೋರಲಾಗದಿರುವ ಕಡು ಬಡವ. ನಿಮ್ಮ ದಯೆಯಿಂದ ಈ ಸಾರಿ ನನಗೆ ಇಲಾಖೆಯ ಪರೀಕ್ಷೆಯಲ್ಲಿ

ತೇರ್ಗಡೆಯಾಗಿ ಕಾಯಂ ಕೆಲಸ ದೊರೆತರೆ ಶಿರ್ಡಿಗೆ ಬಂದು ನಿಮಗೆ ನಮಸ್ಕರಿಸಿ ನಿಮ್ಮ ಹೆಸರಿನಲ್ಲಿ ನಾನು ಕಲ್ಲು ಸಕ್ಕರೆ ಹಂಚುತ್ತೇನೆ" ಎಂದು ಬೇಡಿಕೊಂಡರು.

ಚೋಳಕರರವರ ಅದೃಷ್ಟವೋ ಎಂಬಂತೆ, ಅವರು ಪರೀಕ್ಷೆಯಲ್ಲಿ ತೇರ್ಗಡೆಯಾದರು. ಕಾಯಂ ಕೆಲಸ ಸಿಕ್ಕಿತು. ಆಗ ಅವರು ಹರಕೆಯನ್ನು ಪೂರೈಸುವುದೊಂದೆ ಉಳಿಯಿತು. ಚೋಳರರವರು ಮೊದಲೇ ಹೇಳಿದಂತೆ ಕಡು ಬಡವರಾದುದರಿಂದ, ಸಂಸಾರದ ಭಾರವಿದ್ದುದರಿಂದ ಶಿರ್ಡಿಗೆ ಹೋಗಲು ಬೇಕಾದ ಹಣದ ಕೊರತೆ ಇದ್ದಿತು. ಆದರೂ ತಮ್ಮ ಖರ್ಚನ್ನು ಹೇಗಾದರೂ ಕಡಿಮೆ ಮಾಡಿ ಶಿರ್ಡಿಗೆ ಹೋಗಲು ಹಣ ಉಳಿತಾಯ ಮಾಡಬೇಕೆಂದು ನಿರ್ಧರಿಸಿ, "ಇಂದಿನಿಂದ ನನ್ನ ಆಹಾರದಲ್ಲಿ ಅಥವಾ ಚಹಾದಲ್ಲಿ ಉಪಯೋಗಿಸದೆ ಹಣ ಉಳಿಸುತ್ತೇನೆ" ಎಂದು ದೃಢ ಸಂಕಲ್ಪ ಮಾಡಿದರು. ಈ ರೀತಿ ಹಣವನ್ನು ಕೂಡಿಸಿ, ಕೆಲವುದಿನಗಳ ನಂತರ ಶಿರ್ಡಿಗೆ ಬಂದು ಹರಕೆಯನ್ನು ಪೂರೈಸಿ, "ನನ್ನ ಆಶೆಯು ಇಂದು ನೆರವೇರಲ್ಪಟ್ಟಿತು. ಎಂದು ಹೇಳಿಕೊಂಡು ಬಾಬಾರವರ ದಿವ್ಯ ಚರಣಾರವಿಂದಗಳಿಗೆ ನಮ್ರತೆಯಿಂದ ಎರಗಿದರು. ಆಗ ಜೋಗ ಅವರು ಸಹ ಚೋಳರರವರೊಡನೆ ಇದ್ದರು. ಆಗ ಬಾಬಾರವರು ಜೋಗರವರನ್ನುದ್ದೇಶಿಸಿ "ಈ ದಿನ ನಿನ್ನ ಅತಿಥಿಗೆ ಚಹದಲ್ಲಿ ಹೆಚ್ಚಾಗಿ ಸಕ್ಕರೆ ಹಾಕಿಕೊಡು" ಎಂದು ಇದನ್ನು ಕೇಳಿದ ಚೋಳಕರರವರಿಗೆ ಅಮಿತಾನಂದವಾಯಿತು. ಕಣ್ಣುಗಳಲ್ಲಿ ಅನಂದ ಭಾಷ್ಪವುಕ್ಕಿತು. ಕೂಡಲೆ ಪುನಃ ಬಾಬಾರವರಿಗೆ ನಮಸ್ಕರಿಸಿದರು. ಬಾಬಾರವರು ತಮ್ಮ ಮಾತಿನಿಂದ ಚೋಳಕರ ಅವರಿಗೆ ನಿಶ್ಚಲ ಭಕ್ತಿಯುಂಟಾಗುವಂತೆ ಮಾಡಿದರು. ತಮ್ಮ ಮಾತಿನಿಂದ ಹರಕೆಯಂತೆ ತಮಗೆ ಕಲ್ಲುಸಕ್ಕರೆ ಸಂದಿದೆ, ಮತ್ತು ಚೋಳಕರರು ಆಹಾರದಲ್ಲಿ ಸಕ್ಕರೆ ಉಪಯೋಗಿಸದೆ ಇದ್ದುದೂ ಸಹ ತಮಗೆ ತಿಳಿದಿದೆ ಎಂಬುನ್ನು ಬಾಬಾ ಸೂಚಿಸಿದರು.

ಬಾಬಾರವರು ಯಾವಾಗಲೂ ತಮ್ಮ ಭಕ್ತರಿಗೆ " ಭಕ್ತಿಯಿಂದ ನೀವು ನನ್ನ ಮುಂದೆ ಕೈಚಾಚಿದರೆ ನಾನು ಕೂಡಲೆ ನಿಮ್ಮ ಬಳಿ ಹಗಲು- ರಾತ್ರಿ ಇರುತ್ತೇನೆ. ನಾನು ಮಸೀದಿಯಲ್ಲಿ ಕುಳಿತಿದ್ದರೂ ಸಹ ನೀವು ಎಲ್ಲಿಯೇ ಇರಿ, ಏನೇ ಮಾಡುತ್ತಿರಿ ಅದೆಲ್ಲವೂ ನನಗೆ ತಿಳಿದಿರುತ್ತದೆ. ನಿಮ್ಮ ಹೃದಯ ಕಮಲಗಳಲ್ಲಿ ನಾನು ಸದಾ ವಾಸವಾಗಿರುತ್ತೇನೆ. ನನ್ನ ಹೃದಯದಲ್ಲಿ ನೀವು ವಾಸವಾಗಿರುತ್ತೀರಿ. ನಿಮ್ಮಲ್ಲಿ ಮತ್ತು ಸಮಸ್ತ ಜೀವರಾಶಿಗಳಲ್ಲಿ ವಾಸವಾಗಿರುವ ನನ್ನನ್ನು ಅನವರತವೂ ಧ್ಯಾನಿಸಿರಿ. ಈ ರೀತಿ ಯಾರು ನನ್ನನ್ನು ಆರಾಧಿಸುತ್ತಾರೆಯೋ ಅವರೇ ಧನ್ಯರು" ಎಂದು ಬಾಬಾ ಹೇಳುತ್ತಿದ್ದರು.

## ಎರಡು ಹಲ್ಲಿಗಳು

ಬಾಬಾರವರು ಒಂದು ದಿನ ಮಸೀದಿಯಲ್ಲಿ ಕುಳಿತಿದ್ದರು. ಭಕ್ತನೋರ್ವನು ಅವರ ಸಮೀಪದಲ್ಲಿ ಕುಳಿತಿದ್ದನು. ಆಗ ಒಂದು ಹಲ್ಲಿಯು ಲೊಚಗುಟ್ಟಹತ್ತಿತು. ಕುತೂಹಲದಿಂದ ಅವನು "ಹಲ್ಲಿಯ ಲೊಚಚಗುಟ್ಟುವಿಕೆಯು ಏನನ್ನಾದರೂ ಸೂಚಿಸುತ್ತದೆಯೇ? ಅದು ಒಳ್ಳೆಯ ಶಕುನವೆ ?" ಎಂದು ಬಾಬಾ ಅವರಿಗೆ ಕೇಳಿದನು. ಆಗಾ ಬಾಬರವರು "ಆ ಹಲ್ಲಿಯು ಈ ದಿನ ಔರಂಗಾಬಾದದಿಂದ ತನ್ನ ತಂಗಿಯು ಬರುವಳೆಂದು ಆನಂದದಲ್ಲಿದೆ." ಎಂದರು ಅವನಿಗೆ ಏನೂ ಅರ್ಥವಾಗಲಿಲ್ಲ. ಸುಮ್ಮನೆ ಕುಳಿತಿದ್ದನು. ಸ್ವಲ್ಪ ಹೊತ್ತಿನ ನಂತರ ಓರ್ವ ಭಕ್ತನು ಬಾಬಾರವರ ದರ್ಶನಕ್ಕಾಗಿ ಔರಂಗಾಬಾದದಿಂದ ಕುದುರೆಯ ಮೇಲೆ ಬಂದಿಳಿದನು. ಕುದುರೆಯನ್ನು ಕಟ್ಟಿ ಹುರುಳಿಯನ್ನು ತರಲು ತನ್ನ ಹೆಗಲ ಮೇಲಿದ್ದ ಚೀಲದ ಧೂಳನ್ನು ತೆಗೆಯಲು ಚೀಲ ಕೆಳಕ್ಕೆ ಹಾಕಿದನು. ಕೂಡಲೆ ಅದರಲ್ಲಿದ್ದ ಒಂದು ಹಲ್ಲಿ ಹೊರಗೆ ಬಂದು, ಎಲ್ಲರೂ ನೋಡುತ್ತಿದ್ದಂತೆಯೇ ಗೋಡೆಯ ಮೇಲೆ ಹತ್ತಿ ಲೋಚಗುಟ್ಟುತ್ತಿದ್ದ ಹಲ್ಲಿಯ ಹತ್ತಿರ ಹೋರಟಿತು. ಬಾಬಾರವರು ಆ ಭಕ್ತನಿಗೆ ಅದನ್ನು ತೋರಿಸಿದರು. ಅವೆರಡು ಆನಂದದಿಂದ ಆಡಿದವು.

ಕುದುರೆ ಮೇಲೆ ಬಂದ ಔರಂಗಾಬಾದದ ಪ್ರಯಣಿಕನ ಚೀಲದಲ್ಲಿ ಹಲ್ಲಿ ಹೇಗೆ ಸೇರಿಕೊಂಡಿತು, ಬಾಬಾರವರು ಈ ಎರಡು ಹಲ್ಲಿಗಳ ಮಿಲನವನ್ನು ಹೇಗೆ ಮುಂಚೆಯೆ ಅರಿತಿದ್ದರು ಎಂಬುದನ್ನು ನಾವು ಕೂಲಂಕಷವಾಗಿ ಪರಶೀಲಿಸದರೆ ಬಾಬಾರವರ ಸರ್ವಜ್ಞತ್ವ ವೇದ್ಯವಾಗುತ್ತದೆ.

ಯಾರು ಈ ಅಧ್ಯಾಯವನ್ನು ಶ್ರದ್ಧೆ ಭಕ್ತಿಯಿಂದ ಪಠಣ ಮಾಡುತ್ತಾರೆಯೋ ಅವರ ಕಷ್ಟಗಳು ಬಾಬಾರವರ ದಯೆಯಿಂದ ದೂರವಾಗುತ್ತವೆ.

**ಶ್ರೀ ಸಾಯಿ ಪ್ರಣಾಮ**

# ೧೬ ಮತ್ತು ೧೭ನೇ ಅಧ್ಯಾಯಗಳು

## ಬ್ರಹ್ಮ ಶಾಸ್ತ್ರ

ಈ ಎರಡು ಅಧ್ಯಾಯಗಳು ಬಾಬಾರವರಿಂದ ಶೀಘ್ರದಲ್ಲಿಯೇ ್ರಹ್ಮಜ್ಞಾನ ಪಡೆಯಬೇಕೆಂಬ ಬಂದವನೊಬ್ಬನಿಗೆ ಕಥೆಗೆ ಸಂಬಂಧಿಸಿದೆ.

ಈ ಹಿಂದಿನ ಅಧ್ಯಾಯದಲ್ಲಿ ಶ್ರೀ ಚೋಳಕರ ಅವರ ಹರಕೆ ುತ್ತು ಅದನ್ನು ಅವರು ಈಡೇರಿಸಿದ ವಿಚಾರವನ್ನು ತಿಳಿಸಿದ್ದೇನೆ. ಾಬಾರವರು ಎಲ್ಲ ವಸ್ತುಗಳನ್ನು ಪ್ರೀತಿ, ಪ್ರೇಮ ಮತ್ತು ಭಕ್ತಿಯಿಂದ ರ್ಪಿಸಿದರೆ ಅವುಗಳನ್ನು ಸ್ವೀಕರಿಸುತ್ತಿದ್ದರು. ಆದರೆ ಅವುಗಳನ್ನು ಹಂಭಾವದಿಂದ ಅರ್ಪಿಸಿದರೆ ಅವರು ನಿರಾಕರಿಸುತ್ತಿದ್ದರು ಎಂಬುದು ಈ ಕಥೆಯಿಂದ ವೇದ್ಯವಾಗುತ್ತದೆ. ಬಾಬಾರವರು ಚ್ಚಿದಾನಂದರಾಗಿದ್ದರು. ಆದ್ದರಿಂದ ಅವರು ಬಾಹ್ಯಾಡಂಬರಗಳಿಗೆ ಮನ ಕೊಡುತ್ತಿರಲಿಲ್ಲ. ಅವರಷ್ಟು ಉದಾರಿ ಮತ್ತು ದಯಾಳುವಾದವರು ೇರೆ ಯಾರೂ ಇರಲಿಲ್ಲವೆಂದೇ ಹೇಳಬಹುದು. ಅವರನ್ನು ಿಂತಾಮಣಿ ವಜ್ರಕ್ಕಾಗಲಿ, ಕಲ್ಪತರುವಿಗಾಗಲಿ, ಅಥವಾ ಾಮಧೇನುವಿಗಾಗಲಿ ಹೋಲಿಸುವುದು ಸರಿಯಲ್ಲ. ಏಕೆಂದರೆ ಅವು ಾವು ಇಚ್ಛೆಪಟ್ಟಿದುದನ್ನು ಮಾತ್ರ ಕೊಡಬಹುದಾಗಿದೆ. ಆದರೆ ದ್ಗುರುವಾದಂಥಹ ಬಾಬಾರವರು ಇವುಗಳಿಗಿಂತಲೂ ಊಹಿಸಲಸಾಧ್ಯವಾದ, ಅನರ್ಘ್ಯವಾದಂತಹ ವಸ್ತು ನೀಡುವ ಾಮರ್ಥ್ಯವುಳ್ಳವರಾಗಿದ್ದರು. ಈಗ ಬಾಬಾರವರು ತಮ್ಮಲ್ಲಿಗೆ ್ರಹ್ಮಜ್ಞಾನವನ್ನು ಪಡೆಯಲು ಬಂದ ಧನಿಕನೋರ್ವನನ್ನು ಹೇಗೆ ಶೀರ್ವದಿಸಿದರು ಎಂಬುದನ್ನು ನೋಡೋಣ.

ಯಾವ ಚಿಂತೆಯೂ ಇಲ್ಲದೆ ಸುಖಿಯಾಗಿ ಒಬ್ಬ ಗೃಹಸ್ಥನಿದ್ದನು. ಅವನಿಗೆ ವಿಪುಲವಾದ ಐಶ್ವರ್ಯವಿತ್ತು. ಮನೆ ಮಠಗಳಿದ್ದವು. ಅವನೂ ಹ ಬಾಬಾರವರ ಕೀರ್ತಿಯನ್ನು ಕೇಳಿದ್ದನು. ಬ್ರಹ್ಮಜ್ಞಾನವನ್ನು ಪಡೆದರೆ

ಇನ್ನೂ ಸುಖಿಯಾಗಿರಬಹುದೆಂದು ಭಾವಿಸಿ ಶಿರ್ಡಿಗೆ ಹೋಗಿ ಬಾಬಾರವರಿಂದ ಬ್ರಹ್ಮಜ್ಞಾನವನ್ನು ಪಡೆಯುವೆನು ಎಂದು ಹೇಳುತ್ತಿದ್ದನು. ಅವನ ಸ್ನೇಹಿತರು, "ಬ್ರಹ್ಮಜ್ಞಾನವನ್ನು ಪಡೆಯುವುದು ಅಷ್ಟು ಸುಲಭವಲ್ಲ. ಯಾವಾಗಲೂ ಐಶ್ವರ್ಯ, ಮಡದಿ, ಮಕ್ಕಳು, ಮುಂತಾದವುಗಳ ಮೋಹದ ಬಲೆಗೆ ಸಿಕ್ಕಿರುವ ಅತಿಯಾಶೆಯುಳ್ಳ ನಿನ್ನಂಥವನಿಗೆ ಬ್ರಹ್ಮಜ್ಞಾನ ಪಡೆಯುವುದೆ ಕಷ್ಟ. ಒಂದು ಬಿಡಿಕಾಸನ್ನೂ ಸಹ ದಾನ ಮಾಡಲು ಮನಸ್ಸಿಲ್ಲದ ವ್ಯಕ್ತಿಗೆ ಬ್ರಹ್ಮಜ್ಞಾನವನ್ನು ಯಾರು ನೀಡುತ್ತಾರೆ" ಎಂದು ಹಾಸ್ಯ ಮಾಡಿದರು.

ಆದರೂ ಸ್ನೇಹಿತರ ಸಲಹೆಯನ್ನು ಲಕ್ಷಿಸದೆ ಅವನು ಮಾರನೇ ದಿನವೇ ಗಾಡಿ ಮಾಡಿಕೊಂಡು ಶಿರ್ಡಿಗೆ ಬಂದನು. ಮಸೀದಿಯೊಳಗೆ ಪ್ರವೇಶಿಸಿ ಬಾಬಾರವರ ದರ್ಶನ ಪಡೆದು ಅವರ ಪಾದಗಳಿಗೆರಗಿ "ಬಾಬಾ, ನೀವು ಬ್ರಹ್ಮನನ್ನು ತೋರಿಸುವಿರೆಂದು ತಿಳಿದು ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬ ಆಶೆಯಿಂದ ನಿಮ್ಮಲ್ಲಿಗೆ ಬಂದಿದ್ದೇನೆ. ನಾನು ಪ್ರಯಾಣದಿಂದ ಬಹು ಬಳಲಿದ್ದೇನೆ. ನಿಮ್ಮಿಂದ ನನಗೆ ಬ್ರಹ್ಮಜ್ಞಾನ ದೊರಕಿದರೆ, ನಾನು ಪರಮ ಸುಖಿಯಾಗಬಹುದು" ಎಂದು ಹೇಳಿ ಬ್ರಹ್ಮಜ್ಞಾನವನ್ನು ಯಾಚಿಸಿದನು. ಆಗ ಬಾಬಾರವರು "ರಾಯರೆ, ಇಷ್ಟು ಅವಸರವೇಕೆ? ಬ್ರಹ್ಮಜ್ಞಾನವನ್ನು ಕೊಡುವೆನು. ಆದರೆ ನನ್ನ ವ್ಯವಹಾರವೆಲ್ಲವೂ ನಗದು. ಉದ್ದರಿಗೆ ಮಾತ್ರ ಎಡೆಯಿಲ್ಲ. ನನ್ನಲ್ಲಿಗೆ ಬರುವವರೆಲ್ಲ ಐಹಿಕ ಸುಖ ಭೋಗಗಳಾದ ಸಂಪತ್ತು, ಆರೋಗ್ಯ, ಶಕ್ತಿ, ಗೌರವ, ರೋಗ ಗುಣಪಡಿಸುವಿಕೆ ಇವುಗಳನ್ನು ಬೇಡುತ್ತಾರೆ. ಹೊರತಾಗಿ ಬ್ರಹ್ಮಜ್ಞಾನವನ್ನು ಕೇಳಲು ಬರುವವರು ಅತಿ ವಿರಳ. ಬ್ರಹ್ಮಜ್ಞಾನವನ್ನು ಪಡೆಯಲು ಬಂದಿರುವ ನಿನ್ನನ್ನು ನೋಡಿದುದು ನನ್ನ ಅದೃಷ್ಟವೇ ಸರಿ. ಕೂಡಲೆ ನಿನಗೆ ಬ್ರಹ್ಮಜ್ಞಾನದ ಸರ್ವ ಸ್ವರೂಪವನ್ನು ತೋರಿಸುವೆನು" ಎಂದರು.

ಹೀಗೆ ಹೇಳಿ ಅವನಿಗೆ ಬ್ರಹ್ಮಜ್ಞಾನವನ್ನು ಕೊಡಲು ಬಾಬಾ ಅನುವಾದರು. ಅವನನ್ನು ಅಲ್ಲಿಯೇ ಕೂಡ್ರಿಸಿ ಬೇರೆ ವಿಚಾರಗಳನ್ನು ಪ್ರಸ್ತಾಪಿಸುತ್ತ ಒಂದುಕ್ಷಣ ಅವನು ತನ್ನ ಪ್ರಶ್ನೆಯನ್ನು ಮರೆಯುವಂತೆ ಮಾಡಿದರು. ಆಗ ಒಬ್ಬ ಹುಡುಗನನ್ನು ಕರೆದು "ನಂದು ಮಾರವಾಡಿ ಬಳಿಗೆ ಹೋಗಿ, ನಾನು ಹೇಳಿದೆನೆಂದು ೫ರೂ, ಗಳನ್ನು ಸಾಲ ತೆಗೆದುಕೊಂಡು ಬಾ" ಎಂದರು. ಹುಡುಗನು ಹೋಗಿ, ನಂದು ಮಾರವಾಡಿಯ ಮನೆಗೆ ಬೀಗ ಹಾಕಿದೆಯೆಂದು ತಿಳಿಸಿದನು. ನಂತರ ಬಾಬಾ ಬಾಳಾನ ಅಂಗಡಿಗೆ ಹೋಗಿ ಹಣ ತೆಗೆದುಕೊಂಡು ಬರಲು ಹುಡುಗನಿಗೆ ಹೇಳಿದರು. ಆ ಸಲವೂ ಹಣ ಸಿಗಲಿಲ್ಲ. ಇದೇ ರೀತಿ ಎರಡು ಮೂರು ಬಾರಿ ಪ್ರಯತ್ನಪಟ್ಟರೂ ಎಲ್ಲಿಯೂ ಹಣ ಸಿಗಲೇ ಇಲ್ಲ.

ಸಾಯಿಬಾಬಾ ನಮಗೆ ತಿಳಿದಂತೆ ಬ್ರಹ್ಮನ ಅವತಾರ–ರೂಪಿ. ಹಾಗಿದ್ದರೂ ಅವರಿಗೆ ಕೇವಲ ೫ ರೂ, ಏಕೆ ಬೇಕಾಗಿದ್ದವು? ಅದಕ್ಕೋಸ್ಕರ ಅವರು ಅಷ್ಟು ಕಷ್ಟ ಪಡಬೇಕಾಗಿದ್ದಿತೆ? ಎಂದು ಕೆಲವರು ಪ್ರಶ್ನಿಸಬಹುದು. ನಿಜವಾಗಿಯೂ ಬಾಬಾ ಅವರಿಗೆ ಹಣ ಬೇಕಾಗಿರಲಿಲ್ಲ. ಅವರಿಗೆ ನಂದೂ ಮತ್ತು ಬಾಳಾ ಇವರ ಕಡೆ ಹಣ ಇರಲಿಲ್ಲವೆಂಬುದು ಚೆನ್ನಾಗಿ ಗೊತ್ತು. ಆದರೂ ಬ್ರಹ್ಮಜ್ಞಾನವನ್ನು ಪಡೆಯಲು ಬಂದವನನ್ನು ಪರೀಕ್ಷಿಸಲೋಸುಗ ಹೀಗೆ ಮಾಡಿದರು. ಆ ಗೃಹಸ್ಥನು ತನ್ನಲ್ಲಿ ಕಂತೆಗಟ್ಟಲೆ ನೋಟುಗಳನ್ನಿಟ್ಟಿದ್ದನು. ಅವನು ನಿಜವಾಗಿಯೂ ಶ್ರದ್ಧೆ ಇದ್ದವನಾಗಿದ್ದರೆ ಬಾಬಾ ಸಾಲ ಕೇಳಲು ಹುಡುಗನನ್ನು ಕಳುಹಿಸಿದಾಗ ಸ್ವತ: ನೋಡಿ ಸುಮ್ಮನಿರುತ್ತಿದ್ದನೆ? ಬಾಬಾ ಸುಳ್ಳು ಮಾತನಾಡುವರಲ್ಲ. ಸಾಲವನ್ನು ಕೂಡಲೇ ಹಿಂತಿರುಗಿ ಕೊಡುತ್ತಾರೆ ಎಂದು ತಿಳಿದರೂ ಸಹ ಸುಮ್ಮನೆ ಇದ್ದನು. ಹಾಗೆ ಬಾಬಾ ಕೂಡಲೆ ಎರವಲಾಗಿ ತರಲು ಹೇಳಿದ ಹಣವಾದರೂ ಎಷ್ಟು? ಕೇವಲ ೫ರೂ .ಗಳು.....! ಇಂಥವನು ಬಾಬಾರವರಿಂದ ಬ್ರಹ್ಮಜ್ಞಾನವನ್ನು ಪಡೆಯಲು ಬಂದವನು!

ನಿಜವಾಗಿಯೂ ಬಾಬಾರವರನ್ನು ಮನ:ಪೂರ್ವಕವಾಗಿ ಪ್ರೀತಿಸುತ್ತಿದ್ದವನಾಗಿದ್ದರೆ, ಆ ಸಂದರ್ಭದಲ್ಲಿ ಅವನು ಖಂಡಿತ ತಾನೇ ಸಾಲ ಕೊಡುತ್ತಿದ್ದನು. ಆದರೆ ಅವನ ವಿಷಯವೇ ಬೇರೆ. ಹೋಗಲಿ, ಅವನು ಮೌನದಿಂದಾದರೂ ಇದ್ದನೆ? ಇಲ್ಲ.....! ಮರಳಿ ಹೋಗಲು ಕಾತುರನಾಗಿ "ಬಾಬಾ, ಬೇಗನೆ ಬ್ರಹ್ಮಜ್ಞಾನವನ್ನು ತೋರಿಸಿ" ಎಂದು ತಾಳ್ಮೆ ಮೀರಿ ಕೇಳಲು ಆರಂಭಿಸಿದನು. ಆಗ ಬಾಬಾ "ಮಿತ್ರ...ಇಲ್ಲಿ ನಡೆದುದೆಲ್ಲವೂ ನಿನಗೆ ಅರ್ಥವಾಗಲಿಲ್ಲವೇ? ನಿನಗೆ ಬ್ರಹ್ಮಜ್ಞಾನ ನೀಡಲು ನಾನು ಪ್ರಯತ್ನ ಪಡಲಿಲ್ಲವೆ? ಸಂಕ್ಷಿಪ್ತವಾಗಿ ಹೇಳುವದಾದರೆ, ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬುವವನು ಪಂಚಪ್ರಾಣ, ಪಂಚೇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ ಮೊದಲಾದ ಐದು ವಿಷಯಗಳನ್ನು ಪರಮಾತ್ಮನಿಗೆ ಅರ್ಪಿಸಬೇಕು. ಬ್ರಹ್ಮಜ್ಞಾನದ ದಾರಿಯು ಖಡ್ಗದ ಅಲುಗಿನಷ್ಟು ಹರಿತವಾದುದು ಮತ್ತು ಅಷ್ಟೇ ಅಪಾಯಕರವಾದುದು" ಎಂದರು.

## ಬ್ರಹ್ಮಜ್ಞಾನಾರ್ಜನೆಗೆ ಅರ್ಹತೆ

ತಮ್ಮ ಜೀವಿತದಲ್ಲಿ ಸರ್ವರಿಗೂ ಬ್ರಹ್ಮಜ್ಞಾನವನ್ನು ಹೊಂದಲು ಸಾಧ್ಯವಿಲ್ಲ. ಇದಕ್ಕೆ ಕೆಲವು ಅರ್ಹತೆಗಳಿವೆ.

### ೧. ಮುಮುಕ್ಷು

ಮುಕ್ತರಾಗಬೇಕೆಂಬ ಅಭಿಲಾಷೆ: ಯಾರು ಸಂಸಾರ ಬಂಧನದಿಂದ ಮುಕ್ತರಾಗಲಿಚ್ಛಿಸಿ ಶ್ರದ್ಧೆ, ಭಕ್ತಿಯಿಂದ ಆ ಗುರಿಯನ್ನು ಸಾಧಿಸಲು ಶ್ರಮಿಸುತ್ತಾರೆಯೋ ಅಂಥವರು ಧಾರ್ಮಿಕ ಜೀವನಕ್ಕೆ ಅರ್ಹರು.

### ೨. ವಿರಕ್ತಿ

ಪ್ರಾಪಂಚಿಕ ಸುಖ ಭೋಗಗಳಲ್ಲಿ ಅನಾಸಕ್ತಿ. ಮನುಷ್ಯನು ಸಂಪತ್ತು ಗೌರವ ಮೊದಲಾದ ಐಹಿಕ ಸುಖಗಳ ಕಡೆಗೆ ಗಮನವಿಟ್ಟರೆ ಅಂಥವನು ಈ ಅಧ್ಯಾತ್ಮಿಕ ವಲಯದಲ್ಲಿ ಪ್ರವೇಶಿಸಲು ಅರ್ಹನಲ್ಲ.

## ೩.ಅಂತರ್ಮುಖತೆ

ನಮ್ಮ ಇಂದ್ರಿಯಗಳೆಲ್ಲವೂ ಆ ಪರಮಾತ್ಮನ ಸೃಷ್ಠಿ. ಅವು ಯಾವಾಗಲೂ ಬಹಿರ್ಮುಖವಾಗಿಯೇ ಯೋಚಿಸಲಾರಂಭಿಸುವವು. ಆದುದರಿಂದ ಮಾನವನು ಸಾಮಾನ್ಯವಾಗಿ ಅಂತರ್ಮುಖನಾಗದೆ ಬಹಿರ್ಮುಖನಾಗಿಯೇ ಇರುತ್ತಾನೆ. ಯಾರು ಬ್ರಹ್ಮಜ್ಞಾನಕ್ಕೆ ತವಕ ಪಡುವರೋ ಅಂಥವರು ಅಂತರ್ಮುಖರಾಗಬೇಕು.

## ೪. ಪಾಪ–ವಿಮುಕ್ತಿ

ಯಾವನು ತನ್ನ ದುಷ್ಟ ಸ್ವಭಾವವನ್ನು ಬಿಡದೆ, ದುಷ್ಕ್ರತ್ಯಗಳನ್ನು ನಿಲ್ಲಿಸುವದಿಲ್ಲವೋ ಅಂಥವನಿಗೆ ಹೇರಳವಾದ ಜ್ಞಾನವಿದ್ದರೂ ಸಹ ಬ್ರಹ್ಮಜ್ಞಾನವವನ್ನು ಹೊಂದಲು ಸಾಧ್ಯವಾಗುವದಿಲ್ಲ.

## ೫. ಶ್ರೇಯಸ್ಸು

ವಸ್ತುಗಳಲ್ಲಿ ಒಳ್ಳೆಯದು ಮತ್ತು ಮಧುರವಾದದು ಎಂಬ ಎರಡು ಬಗೆಗಳಿವೆ. ಮೊದಲನೆಯದು ಅಧ್ಯಾತ್ಮಿಕ ವಿಚಾರವನ್ನೂ ಎರಡನೆಯದು ಪ್ರಾಪಂಚಿಕ ವಿಚಾರವನ್ನೂ ತೋರಿಸುತ್ತದೆ. ಇವೆರಡೂ, ಮಾನವನು ತಮ್ಮನ್ನು ಸ್ವೀಕರಿಸಲೆಂದೇ ಅವನೆಡೆಗೆ ಬರುತ್ತದೆ. ಅವನು ಯೋಚಿಸಿ ಆರಿಸಿಕೊಳ್ಳಬೇಕು. ಜ್ಞಾನಿಯಾದವನು ಒಳ್ಳೆಯದನ್ನು ಆರಿಸುತ್ತಾನೆ. ಅಜ್ಞಾನಿಯು ಮಧುರವಾದದ್ದನ್ನು ಆರಿಸಿಕೊಳ್ಳುತ್ತಾನೆ.

## ೬. ಸದಾಚಾರ

ಸತ್ಯವಾಗಿ ನಡೆದುಕೊಳ್ಳದಿದ್ದಲ್ಲಿ ಬ್ರಹ್ಮಜ್ಞಾನವನ್ನು ಹೊಂದಲು ಸಾಧ್ಯವಿಲ್ಲ.

## ೭. ಇಂದ್ರಿಯ ನಿಗ್ರಹ

ದೇಹವೇ ರಥ. ಆತ್ಮವೇ ಅದರ ಗುರು. ಬುದ್ಧಿಯೇ ಸಾರಥಿ.

ಇಂದ್ರಿಯಗಳೇ ಅಶ್ವಗಳು. ಇಂದ್ರಿಯ ವಸ್ತುಗಳೇ ದಾರಿ. ಯಾರಿಗೆ ಅರಿವಿಲ್ಲವೋ, ಯಾರಿಗೆ ಮನಸ್ಸಿನ ಮೇಲೆ ಹಿಡಿತವಿಲ್ಲವೋ ಅವರ ಇಂದ್ರಿಯಗಳು ಊಹಿಸಲಗಾಧವಾದಂಥ ದುರ್ಗುಣಗಳುಳ್ಳ ಪಶುಗಳಂತೆ ಗುರಿಯನ್ನು ಸಾಧಿಸದೆ ಜನನ ಮರಣವೆಂಬ ವ್ಯೂಹದಲ್ಲಿ ಸಿಕ್ಕಿಬೀಳುತ್ತಾರೆ. ಆದರೆ ಯಾರು ಅರಿವುಳ್ಳವರಾಗಿ, ತಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು, ಇಂದ್ರಿಯ ನಿಗ್ರಹ ಶಕ್ತಿ ಪಡೆದಿರುವರೋ, ಅಂಥವರು ತಮ್ಮ ಗುರಿಯನ್ನು ತಲುಪುವುರು. ಅಂಥವರು ಬ್ರಹ್ಮಜ್ಞಾನವನ್ನು ಹೊಂದಿ ಆ ಪರಮಾತ್ಮನ ಕೃಪೆಗೆ ಪಾತ್ರರಾಗಿ ಮುಕ್ತಿಯನ್ನು ಪಡೆಯುವರು.

## ೮. ಶುದ್ಧ ಮನಸ್ಸು

ಯಾವನು ತನ್ನ ಕರ್ತವ್ಯವನ್ನು ಆತ್ಮತೃಪ್ತಿಯಾಗಿ ನಿರ್ವಹಿಸುವದಿಲ್ಲವೋ ಅಂಥವನ ಮನಸ್ಸು ಶುದ್ಧವಾಗಿರುವುದಿಲ್ಲ. ಮನಸ್ಸಿನ ಶುದ್ಧಿಯಿಲ್ಲದೆ ಬ್ರಹ್ಮಜ್ಞಾನ ಪಡೆಯಲು ಅಸಾಧ್ಯ. ಪರಿಶುದ್ಧವಾದ ಮನಸ್ಸಿನಲ್ಲಿ ವಿವೇಕ, ವೈರಾಗ್ಯಗಳು ಮೂಡಿ ಬ್ರಹ್ಮಜ್ಞಾನ ಪಡೆಯಲು ನೆರವಾಗುತ್ತದೆ. ಅಹಂಭಾವವನ್ನು ತ್ಯಜಿಸದೆ ಇದ್ದರೆ, ಅತಿಯಾಶೆಯಿಂದ ಮುಕ್ತನಾಗದಿದ್ದರೆ ಸ್ವಾನುಭವ ಪಡೆಯಲು ಅಸಾಧ್ಯ. 'ನಾನು' ಎಂಬ ವಿಚಾರವೇ ಭ್ರಮೆ. ಇದಕ್ಕೆ ಹೊಂದಿಕೊಳ್ಳುವುದೇ ಬಂಧನಕ್ಕೆ ಕಾರಣ. ಈ ವಿಚಾರ ದೂರ ಮಾಡಿ, ಮೋಹ-ಮಮತೆಗಳಿಂದ ವಿಮುಕ್ತರಾದರೆ ಮಾತ್ರ ಸ್ವಾನುಭವ ಪಡೆಯಬಹುದು.

## ೯. ಗುರುವಿನ ಅವಶ್ಯಕತೆ

ಆತ್ಮಜ್ಞಾನವೆಂಬುದು ಸೂಕ್ಷ್ಮವಾದದ್ದು ಮತ್ತು ಗೂಢವಾದದ್ದು. ಕೇವಲ ಸ್ವಪ್ರಯತ್ನದಿಂದ ಮಾತ್ರ ಅದನ್ನು ಪಡೆಯಲು ಅಸಾಧ್ಯ. ಆದುದರಿಂದ ಗುರುವಿನ ನೆರವು ಅಗತ್ಯ. ಆ ಗುರುವು ಸಹ ಸ್ವಾನುಭವ ಹೊಂದಿದವನಾಗಿರಬೇಕು. ಎಷ್ಟೇ ಕಷ್ಟಪಟ್ಟು ದೊರಕಿಸಲು ಸಾಧ್ಯವಿರದ

ಬ್ರಹ್ಮಜ್ಞಾನವನ್ನು ಗುರುವಿನಿಂದ ಸುಲಭವಾಗಿ ಪಡೆಯಬಹುದು. ಏಕೆಂದರೆ ಗುರುವು ಅದನ್ನು ಅನುಭವಿಸಿ, ಅದನ್ನು ತೋರಿಸುತ್ತಿರುವಾಗಲೇ ಶಿಷ್ಯರು ಕ್ರಮೇಣ ಸ್ವಾನುಭವ ಪಡೆಯಬಹುದು.

## ೧೦. ಪರಮಾತ್ಮನ ದಯೆ

ಕೊನೆಯದಾಗಿ ಪರಮಾತ್ಮನ ದಯೆ ಅತ್ಯಗತ್ಯ ಮತ್ತು ಅನಿವಾರ್ಯ ಮಾನವನಿಗೆ ವಿಚಾರ, ವಿವೇಕ ಮತ್ತು ವೈರಾಗ್ಯಗಳನ್ನು ನೀಡಿ ಅವನನ್ನು ಪ್ರಾಪಂಚಿಕ ಸಾಗರದಿಂದಾಚೆಗೆ ಗುರುವು ಕರೆದುಕೊಂಡು ಹೋಗುತ್ತಾನೆ.

ಈ ವಿವರಣೆಯಾದ ನಂತರ ಬಾಬಾ ಆ ಧನಿಕನ ಕಡೆಗೆ ತಿರುಗಿ, "ಸರಿ, ಈಗ ನಿನ್ನ ಕಿಸೆಯಲ್ಲಿ ೨೫೦ ರೂ. ಗಳ ರೂಪದಲ್ಲಿ ಬ್ರಹ್ಮಜ್ಞಾನ ಅಡಗಿದೆ. ದಯವಿಟ್ಟು ಅದನ್ನು ತೆಗೆ" ಎಂದರು. ಆಗ ಅವನು ಹಣ ತೆಗೆದು ನೋಡಲು ಸರಿಯಾಗಿ ೨೫೦ ರೂ ಗಳಿದ್ದವು. ಆಶ್ಚರ್ಯವಾಯಿತು. ಮನಕರಗಿ ಬಾಬಾರವರ ಪಾದಗಳಿಗೆ ಧನಿಕನು ಎರಗಿದನು. ಆಗ ಬಾಬಾ ಪುನಃ "ನಿನ್ನ ಬ್ರಹ್ಮದ ಗಂಟನ್ನು ಕಟ್ಟು. ನೀನು ಅತಿಯಾಶೆ ತ್ಯಜಿಸದ ಹೊರತು ನಿನಗೆ ಎಂದೂ ಬ್ರಹ್ಮಜ್ಞಾನ ಸಿಗಲಾರದು. ಈ ಮೋಹವೆಂಬ ಭ್ರಮೆಯೇ ಆಳವಾದ ನೀರಿನಲ್ಲಿಯ ಸೆಳೆವುಗಳು. ಮೋಹ ಮತ್ತು ಅಸೂಯೆ ಎಂಬುವುಗಳೇ ಮೊಸಳೆಗಳು. ಯಾವನು ಆಶಾರಹಿತನಾಗಿರುತ್ತಾನೆಯೋ, ಅವನು ಮಾತ್ರ ನೀರಿನ ಸೆಳವಿನಿಂದ ತಪ್ಪಿಸಿಕೊಳ್ಳಬಹುದು. ಅತಿಯಾಶೆ ಮತ್ತು ಬ್ರಹ್ಮಜ್ಞಾನ, ಇವು ಉತ್ತರ ಧೃವ ಮತ್ತು ದಕ್ಷಿಣ ಧೃವಗಳಿದ್ದಂತೆ. ಅತಿಯಾಶೆ ಇದ್ದಲ್ಲಿ ಬ್ರಹ್ಮಜ್ಞಾನಕ್ಕೆ ಅವಕಾಶವಿಲ್ಲ. ಹಾಗಾದರೆ ಅತಿಯಾಶೆ ಇದ್ದವನು ಅನುರಾಗ ವಿರಕ್ತನಾಗಿ ಮುಕ್ತಿ ಹೊಂದಲು ಸಾಧ್ಯವೆ? ಅತಿಯಾಶೆಯುಳ್ಳವನಿಗೆ ಶಾಂತಿಯಾಗಲಿ, ನಿಶ್ಚಲತೆಯಾಗಲಿ ಇರುವುದಿಲ್ಲ. ಅತಿಯಾಶೆಯ ಅಂಕುರತೆ ಸ್ವಲ್ಪ ಮಟ್ಟಿಗಾದರೂ ಇರುವಾಗ ಆಧ್ಯಾತ್ಮಿಕ ವಿಚಾರಗಳು ಅವನಿಗೆ ಸಹಾಯಕವಾಗಲಾರವು. ಅತಿಯಾಶೆ ಎಳ್ಳಷ್ಟೂ

ಇರಬಾರದು. ತನ್ನ ಕಾರ್ಯಕ್ಕೆ ಪ್ರತಿಫಲ ಅಪೇಕ್ಷಿಸುವವನು ಎಂಥ ವಿದ್ವಾಂಸನಾಗಿದ್ದರೂ ಅವನಿಗೆ ಸ್ವಾನುಭವ ದೊರಕಲಾರದು. ಇಂದ್ರಿಯ ವಸ್ತುಗಳ ಭೋಗಾಪೇಕ್ಷೆಯುಳ್ಳ ಅಹಂಭಾವವಿರುವವನಿಗೆ ಗುರುವಿನ ಉಪದೇಶದಿಂದ ಏನೂ ಪ್ರಯೋಜನವಾಗಲಾರದು. ಮನುಶ್ಶುದ್ದೀಕರಣ ಅತ್ಯಗತ್ಯ. ಇದಿಲ್ಲದ ಆಧ್ಯಾತ್ಮಿಕ ಪ್ರಯತ್ನವು ನಿಷ್ಪ್ರಯೋಜಕ ಮತ್ತು ಕೇವಲ ಡಾಂಭಿಕವಾದದ್ದು. ಆದುದರಿಂದ ಯಾರಿಗೆ ಏನು ತೆಗೆದುಕೊಂಡರೆ ಜೀರ್ಣಿಸಬಹುದೋ ಅದನ್ನು ಮಾತ್ರ ತೆಗೆದುಕೊಳ್ಳುವುದು ಮೇಲು. ನನ್ನ ಭಂಡಾರವು ತುಂಬಿದೆ. ಯಾರಿಗೆ ಏನು ಬೇಕೋ ಅದನ್ನು ಕೊಡಲು ನಾನು ಸಿದ್ಧನಾಗಿದ್ದೇನೆ. ಆದರೆ ನಾನು ಕೊಡುವದನ್ನು ಅವರು ತೆಗೆದುಕೊಳ್ಳಲು ಅರ್ಹರೆ, ಎಂಬುದನ್ನು ನಾನು ಯೋಚಿಸಬೇಕು. ನೀನು ನನ್ನನ್ನು ನಿಜವಾಗಿ ಅರ್ಥ ಮಾಡಿಕೊಂಡರೆ ನಿನಗೆ ಒಳ್ಳೆಯದಾಗುತ್ತದೆ. ಈ ಮಸೀದಿಯಲ್ಲಿ ಕುಳಿತು ನಾನು ಎಂದಿಗೂ ಸುಳ್ಳು ನುಡಿಯಲಾರೆ.

ಅತಿಥಿಯನ್ನು ಮನೆಗೆ ಆಮಂತ್ರಿಸಿದಾಗ ಇತರ ಸ್ನೇಹಿತರು ಮತ್ತು ಸಂಬಂಧಿಗಳು ಯಾರಾದರೂ ಆ ಸಮಯದಲ್ಲಿದ್ದರೆ ಮನೆಯವರು ಅತಿಥಿಯೊಂದಿಗೆ ಅವರನ್ನೂ ಸಹ ಸತ್ಕರಿಸುತ್ತಾರೆ. ಹೀಗೆ ಮಸೀದಿಯಲ್ಲಿ ಆ ಸಮಯದಲ್ಲಿದ್ದ ಎಲ್ಲರಿಗೂ ಈ ಆಧ್ಯಾತ್ಮಿಕ ಔತಣ ದೊರೆಯಿತು. ನಂತರ ಬಾಬಾರವರ ಆಶೀರ್ವಾದ ಪಡೆದು ತೃಪ್ತಿಯಿಂದ ಎಲ್ಲರೂ ಹಿಂತಿರುಗಿದರು.

## ಬಾಬಾರವರ ವಿಶೇಶ ಗುಣ

ಮನೆ-ಮಠಗಳನ್ನು ತ್ಯಜಿಸಿ ಕಾಡಿನಲ್ಲಿಯೋ ಗುಹೆಗಳಲ್ಲಿಯೋ ಅಥವಾ ಆಶ್ರಮಗಳಲ್ಲಿಯೋ, ಒಬ್ಬಂಟಿರಾಗಿ ನೆಲಸಿ, ಜೀವನ್ಮುಕ್ತಿ ಪಡೆಯಲು ಪ್ರಯತ್ನ ಮಾಡುವ ಸಾಧುಗಳು ಅನೇಕರಿದ್ದಾರೆ. ಅವರು ಬೇರೆಯವರೊಡನೆ ಸಂಬಂಧ ಇಟ್ಟುಕೊಂಡಿರುವುದಿಲ್ಲ. ಆದರೆ

ಸಾಯಿಬಾಬಾರವರು ಇಂಥವರಲ್ಲ. ಅವರಿಗೆ ಮನೆ -ಮಠಗಳಾಗಲಿ, ಮಡದಿ-ಮಕ್ಕಳಾಗಲಿ, ಆತ್ಮೀಯ ಬಂಧೂಗಳಾಗಲಿ ಯಾರು ಇರಲಿಲ್ಲ. ಆದರೂ ಬಾಬಾ ಸಮಾಜದಲ್ಲಿ ಜೀವಿಸಿದ್ದರು. ತಮ್ಮ ಆಹಾರವನ್ನು ಭಿಕ್ಷೆ ಬೇಡಿ ತಂದು ಬೇವಿನ ಮರದ ಬುಡದಲ್ಲಿ ಕುಳಿತು, ಪ್ರಾಪಂಚಿಕ ಕರ್ವರ್ಗಗಳನ್ನೆಸಗುತ್ತ ಈ ಪ್ರಪಂಚದಲ್ಲಿ ನಾವು ಹೇಗೆ ವರ್ತಿಸಬೇಕೆಂಬುದನ್ನು ನಮಗೆ ಹೇಳಿಕೊಟ್ಟಿರುತ್ತಾರೆ. ಪರಮಾತ್ಮನ ಸಾಕ್ಷಾತ್ಕಾರದ ನಂತರ ಜನಕೋಟಿಯ ಯೋಗಕ್ಷೇಮಕ್ಕಾಗಿ ತಮ್ಮ ಜೀವಿತವನ್ನು ಮುಡುಪಾಗಿಡುವ ಸಾಧುಗಳು ಬಹು ವಿರಳ. ಆದರೆ ಸಾಯಿಬಾಬಾ ಜನಕೋಟಿಯ ಹಿತಚಿಂತಕರಲ್ಲಿ ಅಗ್ರಗಣ್ಯರು - ಸಾಧು ಮಣಿಗಳು.

ಆದ್ದರಿಂದ ಇಂತಹ ಅಪರೂಪವಾದ ಅವತಾರ ಪುರುಷರನ್ನು ಪಡೆದಿರುವ ದೇಶವೇ ಧನ್ಯ. ಪಡೆದ ಸಂಸಾರವೇ ಧನ್ಯ. ಜನ್ಮ ನೀಡಿದ ಮಾತಾ-ಪಿತೃಗಳೇ ಧನ್ಯರು!

ಶ್ರೀ ಸಾಯಿ ಪ್ರಣಾಮ

# ೧೮ ಮತ್ತು ೧೯ನೇ ಅಧ್ಯಾಯಗಳು

## ಹೇಮಾಡಪಂತರನ್ನು ಬಾಬಾ ಆಶೀರ್ವದಿಸಿದುದು

**ಸಾಠೆ ಮತ್ತು ದೇಶಮುಖಿ ಅವರ ಕಥೆ – ಸದ್ಭಾವನೆಗೆ ಪ್ರೋತ್ಸಾಹ ಉಪದೇಶ –ನಿಣದೆ – ದುಡಿಮೆಗೆ ತಕ್ಕ ಪ್ರತಿಫಲ – ಇತ್ಯಾದಿ**

ಈ ಹಿಂದಿನ ಎರಡು ಅಧ್ಯಾಯಗಳಲ್ಲಿ ಬ್ರಹ್ಮಜ್ಞಾನವನ್ನು ಪಡೆಯಲು ಬಂದ ಧನಿಕನನ್ನು ಬಾಬಾರವರು ಹೇಗೆ ಆದರಿಸಿದರು ಎಂಬುದನ್ನು ವಿವರಿಸಿದ್ದೇನೆ. ಈಗ ಈ ಎರಡು ಅಧ್ಯಾಯಗಳಲ್ಲಿ ಬಾಬಾ ಸದ್ಭಾವನೆಯನ್ನು ಹೇಗೆ ಪ್ರೋತ್ಸಾಹಿಸುತ್ತಿದ್ದರು ಎಂಬುದನ್ನೂ ಇತರ ವಿಷಯಗಳನ್ನೂ ಹೇಮಾಡಪಂತರು ಚರ್ಚಿಸಿರುತ್ತಾರೆ.

ಸದ್ಗುರುವು ಶಿಷ್ಯನ ಅರ್ಹತೆಯನ್ನು ತಿಳಿದು ಅವನಿಗೆ ಸರಿಯಾದುದನ್ನು ಉಪದೇಶಿಸಿ ಅವನನ್ನು ಸ್ವಾನುಭವದ ಗುರಿಯೆಡೆಗೆ ಸಾಗಿಸುತ್ತಾನೆ. ಈ ವಿಚಾರದಲ್ಲಿ ಗುರುಗಳು ಹೇಳಿ ಕೊಟ್ಟಿರುವದನ್ನು ಬೇರೆಯವರಿಗೆ ತಿಳಿಸಬಾರದೆಂದು ಕೆಲವರ ಅಭಿಪ್ರಾಯ. ಅದನ್ನು ಪ್ರಕಟಿಸಿದರೆ ಅದು ನಿಷ್ಪ್ರಯೋಜಕವಾಗುವುದೆಂದು ಅವರು ವಾದಿಸುತ್ತಾರೆ. ಈ ಅಭಿಪ್ರಾಯ ಸರಿಯಲ್ಲ. ಸದ್ಗುರುವು ಮಳೆಗಾಲದ ಮೋಡಗಳಿದ್ದಂತೆ. ಧಾರಾಕಾರವಾಗಿ ಅವನು ಮಳೆ ಸುರಿಸಬಲ್ಲನು. ಅಂದರೆ ತನ್ನ ಅಮೃತ ವಚನಗಳನ್ನು ಎಲ್ಲೆಡೆಗೂ ಹರಡಬಲ್ಲನು. ಇದನ್ನು ನಾವು ಅನುಭವಿಸಿ ಜ್ಞಾನೋದಯವಾದ ನಂತರ ಯಾವ ಆಶೆಯೂ ಇಲ್ಲದೆ, ಅದನ್ನು ಇತರರ ಸೇವೆಗಾಗಿ ಸದ್ವಿನಿಯೋಗ ಮಾಡಬೇಕು.

### ಉದಾಹರಣೆ

ಬುಧ ಕೌಶಿಕ ಮುನಿಯು ತಾನು ಕನಸಿನಲ್ಲಿ ಕಂಡ 'ರಾಮರಕ್ಷಾ' ಸ್ತೋತ್ರವನ್ನು ಪ್ರಕಟಿಸಿದ್ದಾನೆ.

ಮಮತೆಯುಳ್ಳ ಮಾತೆಯು ತಮ್ಮ ಕಂದನ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಕಹಿಯಾದ ಔಷಧಿಗಳನ್ನು ಬಲಾತ್ಕಾರವಾಗಿ ಕಂದನಿಗೆ ಕುಡಿಸುವಂತೆ ಸಂತಶ್ರೇಷ್ಠ ಸಾಯಿಬಾಬಾರವರು ತಮ್ಮ ಭಕ್ತರಿಗೆ ಆಧ್ಯಾತ್ಮಿಕ ಬೋಧನೆ ಮಾಡುತ್ತಿದ್ದರು. ಅವರ ರೀತಿ ಗುಪ್ತವಾಗಿರದೆ ಎಲ್ಲರಿಗೂ ಗೋಚರಿಸುವಂತಿತ್ತು. ಅವರ ಬೋಧನೆಗಳಿಂದ ನಾವು ಗುರಿ ಸಾಧಿಸಬಹುದಾಗಿತ್ತು. ಬಾಬಾ ಅವರಂಥ ಗುರುಗಳು ನಮ್ಮ ಜ್ಞಾನಚಕ್ಷುಗಳನ್ನು ತೆರೆದು, ಆತ್ಮದ ಸೌಂದರ್ಯವನ್ನು ತೋರಿಸಿ, ಭಕ್ತಿ ಮಾರ್ಗವನ್ನು ಅವಲಂಬಿಸಲು ಸಹಾಯ ಮಾಡುತ್ತಾರೆ. ಇದಾದ ನಂತರ ನಮ್ಮ ಇಂದ್ರಿಯ ಚಾಪಲ್ಯಗಳು ದೂರವಾಗಿ, ವಿವೇಕ ಮತ್ತು ವೈರಾಗ್ಯವೆಂಬ ಅವಳಿ -ಜವಳಿ ಫಲಗಳು ನಮ್ಮ ಕರಗತವಾಗುತ್ತವೆ ಮತ್ತು ಪರಮಜ್ಞಾನ ಕನಸಿನಲ್ಲಿಯೂ ಸಹ ಉಕ್ಕಿ ಹರಿಯುತ್ತದೆ. ನಾವು ಸದ್ಗುರುವಿನ ಸಂಗದಲ್ಲಿದ್ದು ಅವನ ಪ್ರೀತಿಗೆ ಪಾತ್ರರಾದ, ಕೂಡಲೆ ಇವೆಲ್ಲವನ್ನೂ ಹೊಂದಬಹುದು. ಭಕ್ತರ ಅಭೀಷ್ಟಗಳನ್ನು ನೆರವೇರಿಸುವ ಆ ಪರಮಾತ್ಮನು ಸಹಾಯ ಮಾಡಿ, ಕಷ್ಟ - ಕಾರ್ಪಣ್ಯಗಳನ್ನು ದೂರಮಾಡಿ, ನಮಗೆ ಆನಂದವನ್ನು ದೊರಕಿಸಿ ಕೊಡುತ್ತಾನೆ. ಈ ಪ್ರಗತಿ ಅಥವಾ ಏಳಿಗೆ ಸದ್ಗುರುವಿನ ಸಹಾಯದಿಂದ ಮಾತ್ರವೇ ಸಾಧ್ಯ. ಆದುದರಿಂದ ನಾವು ಯಾವಾಗಲೂ ಸದ್ಗುರುವಿನ ಧ್ಯಾನ ಮಾಡಬೇಕು.

ಒಂದು ಸಾರಿ ಶ್ರೀಸಾಠೆಯವರಿಗೆ ವ್ಯಾಪಾರದಲ್ಲಿ ಬಹಳ ನಷ್ಟವಾಯಿತು. ಕೆಲವು ಅನಿರೀಕ್ಷಿತ ಮತ್ತು ಅವರ್ಣನೀಯ ಕಾರಣಗಳಿಂದ ತೊಂದರೆಗಳುಂಟಾಗಿ ಬಹಳ ಬೇಸರಗೊಂಡಿದ್ದರು. ಮನೆಯಲ್ಲಿ ವಿಶ್ರಾಂತಿ ದೊರಕದೆ ಇದ್ದುದರಿಂದ ಬೇರೆ ಎಲ್ಲಿಯಾದರೂ ಹೋಗಿ ಬರೋಣವೆಂದು ಅನಿಸಿತ್ತು. ಎಲ್ಲವೂ ಸುಗಮವಾಗಿ ಸುಖ ಸಂತೋಷಗಳಲ್ಲಿರುವಾಗ ಮಾನವನು ಪರಮಾತ್ಮನನ್ನು ಸ್ಮರಿಸುವುದೇ ಇಲ್ಲ. ಕಷ್ಟ - ಕಾರ್ಪಣ್ಯಗಳು ತಲೆದೋರಿದಾಗ ಮಾತ್ರ ಪರಮಾತ್ಮನ

ನೆನಪು ಬರುತ್ತದೆ. ಇದು ಮಾನವನ ಸಹಜ ಸ್ವಭಾವ. ಅವನ ಕರ್ಮ ಸವೆದಿದ್ದರೆ ಮಾತ್ರ ಪರಮಾತ್ಮನು ಸಮಾಧಾನ ಮತ್ತು ಸಂತೋಷವನ್ನು ಕೊಡಬಲ್ಲ ಸದ್ಗುರುವಿನ ಸಂಪರ್ಕಕ್ಕೆ ದಾರಿ ತೋರುವನು. ಶ್ರೀ ಸಾಠೆಯವರಿಗೆ ಇದು ಅನುಭವವಾಯಿತು. ಅವರ ಸ್ನೇಹಿತರು ಶಿರ್ಡಿಗೆ ಹೋಗಿ ಬಾಬಾರವರ ದರ್ಶನ ಪಡೆದರೆ ಎಲ್ಲವೂ ಸರಿಹೋಗುತ್ತದೆ ಎಂದು ಹೇಳಿದರು. ಇದನ್ನು ಮನಗಂಡು ಅವರು ೧೯೧೭ರಲ್ಲಿ ಶಿರ್ಡಿಗೆ ಬಂದರು. ಬಾಬಾರವರ ಶಾಂತಿಯುತವಾದ ಮಂದಸ್ಮಿತ ವದನವನ್ನು ನೋಡಿದ ಕೂಡಲೆ ಆನಂದದಿಂದ ಅವರು ಶಾಂತಿ ಪಡೆದರು. ಬಾಬಾರವರ ದರ್ಶನ ಸೌಲಭ್ಯ ಒದಗಿದುದು ತಮ್ಮ ಪೂರ್ವ ಜನ್ಮದ ಪುಣ್ಯಫಲವೇ ಸರಿ ಎಂದು ಅವರು ಭಾವಿಸಿದರು.

ಶ್ರೀ ಸಾಠೆಯವರು ದೃಢ ಸಂಕಲ್ಪಿಗಳು ಆದುದರಂದ ಅವರು ಗುರುಚರಿತ್ರೆಯನ್ನು ಪಠಣ ಮಾಡಲಾರಂಭಿಸಿದರು. ಆ ಗ್ರಂಥವನ್ನು ಒಂದು ಸಪ್ತಾಹದಲ್ಲಿ ಮುಗಿಸಿದಾಗ ಬಾಬಾರವರು ಆ ದಿನ ರಾತ್ರಿ ಅವರಿಗೆ ಕನಸಿನಲ್ಲಿ ದರ್ಶನ ನೀಡಿದರು. ಅವರು ಬಾಬಾ ತಮಗೆ ಗುರುಚರಿತ್ರೆಯನ್ನು ವಿವರಿಸುತ್ತಿರುವ ದೃಶ್ಯವನ್ನು ಕನಸಿನಲ್ಲಿ ಕಂಡರು. ಎಚ್ಚೆತ್ತು ಕನಸನ್ನು ಪುನ: ನೆನಪಿಗೆ ತಂದುಕೊಂಡು ಸಂತೋಷ ಭರಿತರಾದರು. ಅಜ್ಞಾನ ಅಂಧ:ಕಾರದಲ್ಲಿ ಸಿಕ್ಕಿ ತೊಳಲುತ್ತಿದ್ದ ಆತ್ಮವನ್ನು ಗುರುಚರಿತ್ರೆಯ ವಿವರಣೆಯಿಂದ ಎಚ್ಚರಿಸಿ, ಆ ಅಮೃತವನ್ನು ಪಡೆಯಲು ನೆರವು ನೀಡಿದ ಬಾಬಾರವರ ದಯೆಯನ್ನು ಹೊಗಳಬೇಕಾದುದೇ ಎಂದು ಭಾವಿಸಿದರು. ಮರುದಿನ ಕಾಕಾಸಾಹೇಬರಿಗೆ ತಮ್ಮ ಕನಸನ್ನು ವಿವರಿಸಿ "ಆ ಕನಸಿನ ಅರ್ಥವೇನು ? ಇನ್ನೊಂದು ಬಾರಿ ಸಪ್ತಾಹ ಮಾಡಬೇಕೆ? ಬಾಬಾರವರಲ್ಲಿ ವಿಚಾರಿಸಿ" ಎಂದರು. ಕಾಕಾರವರು ಸಮಯ ನೋಡಿಕೊಂಡು ಬಾಬಾರವರನ್ನು ಕಂಡು "ದೇವರೇ, ನಿಮ್ಮ ದರ್ಶನದಿಂದ ಸಾಠೆಯವರಿಗೆ ಏನು ಸಲಹೆ ನೀಡುವಿರಿ? ಅವರು ಗುರು ಚರಿತ್ರೆಯ ಇನ್ನೊಂದು ಸಪ್ತಾಹ ಮಾಡಬೇಕೆ? ಅವರು

ಅಸಾಮಾನ್ಯ ಭಕ್ತರು. ನಿಮ್ಮ ಅಭಿಪ್ರಾಯ ತಿಳಿಸಿರಿ ಮತ್ತು ಅವರನ್ನು ಆಶೀರ್ವದಿಸಿರಿ" ಎಂದು ವಿನಂತಿಸಿದರು. ಆಗಾ ಬಾಬಾರವರು " ಅವನು ಗ್ರಂಥವನ್ನು ಮತ್ತೊಮ್ಮೆ ಪಠಿಸಲಿ. ಶ್ರದ್ಧೆ – ಭಕ್ತಿಗಳಿಂದ ಅದನ್ನು ಪಠಿಸಿದರೆ ಪರಮಾತ್ಮನು ಅವನಿಗೆ ಒಳ್ಳೆಯದನ್ನು ಮಾಡುತ್ತಾನೆ" ಎಂದು ಉತ್ತರಿಸಿದರು.

ಆ ಸಮಯದಲ್ಲಿ ಹೇಮಾಡಪಂತರು ಮಸೀದಿಯಲ್ಲಿ ಬಾಬಾರವರ ಪಾದಗಳನ್ನು ಒತ್ತುತ್ತಿದ್ದರು. ಬಾಬಾರವರ ಈ ವಚನಗಳನ್ನು ಕೇಳಿ ಅವರು ಮನಸ್ಸಿನಲ್ಲಿ "ಏನು, ಸಾಠೆಯವರು ಒಂದು ವಾರ ಪಠಿಸಿದ್ದಕ್ಕೆ ಪ್ರತಿಫಲ ದೊರಕಿತು. ನಾನು ನಾಲ್ವತ್ತು ವರ್ಷಗಳಿಂದಲೂ ಅದನ್ನು ಪಠಿಸುತ್ತಿದ್ದೇನೆ ನನಗೆ ಪ್ರತಿಫಲವೇ ದೊರಕಿಲ್ಲ. ಅವರ ಏಳು ದಿನಗಳ ಪಠಣದಿಂದಲೇ ಬಯಕೆಗಳು ಇಡೇರಿದವು. ಆದರೆ ನಾನು ಏಳು ವರ್ಷಗಳಿದಂಲೂ ಇಲ್ಲಿಯೇ ಇದ್ದೇನೆ; ಆದರೂ ಕೂಡಾ ಏನೂ ಪ್ರಯೋಜನವಾಗಿಲ್ಲ. ಚಾತಕ ಪಕ್ಷಿಯು ಹೇಗೆ ನೀರಿಗೆ ಹಾತೊರೆಯುತ್ತಿರುವದೋ, ಅದೇ ರೀತಿಯಲ್ಲಿ ನಾನು ಬಾಬಾರವರ ಅಮೃತಧಾರೆಗೆ ಹಾತೊರೆಯುತ್ತಿದ್ದೇನೆ; ಆಶೀರ್ವದಿಸಲ್ಪಡಲು ಕಾತುರನಾಗಿದ್ದೇನೆ" ಎಂದು ಯೋಚಿಸುತ್ತಿದ್ದರು. ಹೇಮಾಡಪಂತರ ಮನದಲ್ಲಿ ಈ ತರದ ಯೋಚನೆ ಸುಳಿಯಲಾರಂಭಿಸಿದ ಕೂಡಲೆ ಅದು ಬಾಬಾ ಅವರಿಗೆ ತಿಳಿಯಿತು. ಅವರಿಗೆ ಭಕ್ತರ ಮನಸ್ಸನ್ನು ಗ್ರಹಿಸುವ ಶಕ್ತಿ ಇದ್ದುದು ಅವರ ಅನೇಕ ಭಕ್ತರ ಅನುಭವ. ಭಕ್ತರ ದುರ್ಭಾವನೆಗಳನ್ನು ಅಡಗಿಸಿ, ಸದ್ಭಾವನೆಗಳನ್ನು ಪ್ರೋತ್ಸಾಹಿಸುತ್ತಿದ್ದರು. ಬಾಬಾರವರು ಕೂಡಲೆ ಹೇಮಾಡಪಂತರ ಮನಸ್ಸನ್ನು ಓದಿ "ನೀನು ಹೋಗಿ ಶ್ಯಾಮ ಅವರಿಂದ ೧೫ ರೂ. ದಕ್ಷಿಣೆ ತೆಗೆದುಕೊಂಡು ಬಾ. ಅಲ್ಲಿಯೇ ಸ್ವಲ್ಪ ಹೊತ್ತು ಆನಂದದಿಂದ ವಿರಮಿಸು" ಎಂದು ಹೇಳಿ ಕಳುಹಿದರು. ಬಾಬಾರವರ ಮನಸ್ಸಿನಲ್ಲಿ ದಯೆ ಮೂಡಿತ್ತು. ಆದುದರಿಂದಲೇ ಈ ತರದ ಆಜ್ಞೆ ಮಾಡಿದರು.

ಹೇಮಾಡಪಂತರು ಕೂಡಲೆ ಮಸೀದಿಯನ್ನು ಬಿಟ್ಟು ಶ್ಯಾಮ ಅವರ ಮನೆಗೆ ಬಂದರು. ಶ್ಯಾಮ ಅವರು ಆಗ ತಾನೇ ಸ್ನಾನ ಮುಗಿಸಿ ಪಂಚೆ ಉಟ್ಟುಕೊಳ್ಳುತ್ತಿದ್ದರು. ಅವರು ಹೊರಗೆ ಬಂದು "ಇದೇನು ಈಗ ಇಲ್ಲಿಗೆ ಬಂದಿರುವೆ? ಮಸೀದಿಯಿಂದ ಬಂದಿರುವಂತೆ ತೋರುತ್ತದೆ. ಒಬ್ಬನೇ ಬಂದಿರುವೆಯಲ್ಲ? ಸ್ವಲ್ಪ ಹೊತ್ತು ಕುಳಿತು ವಿಶ್ರಮಿಸಿಕೊ, ಪೂಜೆ ಮುಗಿಸಿ ಬರುತ್ತೇನೆ." ಎಂದು ಹೇಳಿ ಹೇಮಾಡಪಂತರಿಗೆ ತಾಂಬೂಲ ಸವಿಯಲು ಕೊಟ್ಟು ಪೂಜೆಗೆ ಹೊರಟರು. ಅಲ್ಲಿಯೇ ಕಿಟಕಿಯಲ್ಲಿ ಪ್ರಸಿದ್ಧ ಮರಾಠಿ ಗ್ರಂಥವಾದ ಏಕನಾಥ ಭಾಗವತ ಇತ್ತು. ಸಾಯಿಬಾಬಾರವರ ಸಲಹೆ ಮೇರೆಗೆ ಶ್ರೀಗಳಾದ ಪಾಪೂಸಾಹೇಬ ಜೋಗ ಮತ್ತು ಕಾಕಾ ದಿಕ್ಷಿತ ಅವರು ಪ್ರತಿ ದಿವಸವೂ ಶಿರ್ಡಿಯಲ್ಲಿ ಭಗವದ್ಗೀತೆ ಮತ್ತು ಮರಾಠಿ ಟೀಕಾರ್ಥವಾದ ಬಾವಾರ್ಥ ದೀಪಿಕಾ ಅಥವಾ ಜ್ಞಾನೇಶ್ವರಿ, ನಾಥಭಾಗವತ ಮತ್ತು ಭಾವಾರ್ಥ ರಾಮಾಯಣ ಇವುಗಳನ್ನು ಪಠಿಸುತ್ತಿದ್ದರು. ಭಕ್ತರು ಬಾಬಾ ಅವರಿಗೆ ಪ್ರಶ್ನೆಗಳನ್ನು ಕೇಳಿದಾಗ ಈ ಪುಸ್ತಕಗಳ ಕೆಲವು ಭಾಗಗಳನ್ನು ಬಾಬಾ ಅವರಿಗೆ ಓದಲು ಹೇಳುತ್ತಿದ್ದರು. ಅವುಗಳನ್ನು ಓದಿದಾಗ ಅವರ ಸಮಸ್ಯೆ ಪರಿಹಾರವಾಗುತ್ತಿದ್ದವು. ಹೇಮಾಡಪಂತರೂ ಸಹ ನಾಥ ಭಾಗವತದ ಕೆಲವು ಭಾಗಗಳನ್ನು ಪ್ರತಿ ದಿನವೂ ಪಠಿಸುತ್ತಿದ್ದರು.

ಅಂದು ಹೇಮಾಡಪಂತರು ಕೆಲವು ಭಕ್ತರ ಸಂಗಡ ಮಸೀದಿಗೆ ಹೋಗಬೇಕಾದ ಸಂದರ್ಭವೊದಗಿದುದರಿಂದ ಗ್ರಂಥ ಪಠಣೆ ಪೂರ್ಣಮುಗಿಸಲಾಗಿರಲಿಲ್ಲ. ಶ್ಯಾಮರವರ ಮನೆಗೆ ಬಂದು ಆ ಗ್ರಂಥವನ್ನು ಕೈಗೆ ತೆಗೆದುಕೊಂಡು ತೆರೆದಾಗ ಅವರು ಇನ್ನೂ ಮುಗಿಸದೇ ಇದ್ದ ಭಾಗ ಸರಿಯಾಗಿ ಬಂದಿತು. ಅದನ್ನು ಅವರು ಆನಂದದಿಂದ ಪಠಿಸಿ ಮುಗಿಸಿದರು. ಅಷ್ಟರಲ್ಲಿ ಶ್ಯಾಮ ಪೂಜೆ ಮುಗಿಸಿ ಹೊರಗೆ ಬಂದರು.

ಹೇಮಾಡಪಂತ:– "ನಾನು ಬಾಬಾರವರಿಂದ ಒಂದು ಸಂದೇಶವನ್ನು ತೆಗೆದುಕೊಂಡು ಬಂದಿರುತ್ತೇನೆ. ಅವರು ನಿಮ್ಮಿಂದ ೧೫ ರೂ. ದಕ್ಷಿಣೆ ಕೇಳಿ ತೆಗೆದುಕೊಂಡು ಬಾ ಎಂದು ಹೇಳಿರುತ್ತಾರೆ ಮತ್ತು ನಿಮ್ಮೊಡನೆ ಸ್ವಲ್ಪ ಹೊತ್ತು ಮಾತುಕತೆ ಮುಗಿಸಿಕೊಂಡು ವಿರಾಮದಿಂದ ಬಾ ಎಂದೂ ಹೇಳಿರುತ್ತಾರೆ."

ಶ್ಯಾಮ:–(ಆಶ್ಚರ್ಯದಿಂದ) "ನನ್ನ ಹತ್ತಿರ ಹಣವಿಲ್ಲ. ದಕ್ಷಿಣೆಗೆ ಬದಲಾಗಿ ನನ್ನ ೧೫ ನಮಸ್ಕಾರಗಳನ್ನು ತೆಗೆದುಕೊಂಡು ಹೋಗು."

ಹೇಮಾಡಪಂತ:– "ಸರಿ ನಿಮ್ಮ ೧೫ ನಮಸ್ಕಾರಗಳನ್ನು ತೆಗೆದುಕೊಂಡಿರುತ್ತೇನೆ. ಸ್ವಲ್ಪ ಹೊತ್ತು ಕಾಲ ಕಳೆಯೋಣ."

ಶ್ಯಾಮ:–ಸರಿ, ಕುಳಿತುಕೋ, ಪರಮಾತ್ಮನ ಅಂದರೆ ಬಾಬಾರವರ ಲೀಲೆಗಳು ಅತ್ಯಾಶ್ಚರ್ಯಕರವಾದವುಗಳಲ್ಲವೇ? ನಾನು ಹಳ್ಳಿಯ ಹುಂಬ. ನೀನು ಎಷ್ಟಾದರೂ ನಾಗರಿಕ. ಇಲ್ಲಿಗೆ ಬಂದ ನಂತರ ನಿನಗೂ ಅನೇಕ ಲೀಲೆಗಳ ಅನುಭವಗಳಾಗಿರಬಹುದು. ನಾನು ವಿವರಿಸುವುದೇನಿದೆ? ಎಲೆ ತೆಗೆದುಕೊ. ಸ್ವಲ್ಪ ಹೊತ್ತಿನಲ್ಲಿ ಬಟ್ಟೆ ಧರಿಸಿ ಬರುತ್ತೇನೆ." ಎಂದರು.

ಸ್ವಲ್ಪ ಹೊತ್ತಿನಲ್ಲಿಯೇ ಶ್ಯಾಮ ಹೇಮಾಡಪಂತರ ಹತ್ತಿರ ಬಂದು ಪುನಃ ಮಾತಾಡುತ್ತ ಕುಳಿತರು.

ಅವರು "ಈ ಸಾಯಿಯವರ ಲೀಲೆ ಅಗಾಧವಾದುದು. ಅವರ ಲೀಲೆಗಳಿಗೆ ಅಂತ್ಯವೇ ಇಲ್ಲ. ನಮ್ಮಂಥವರಿಗೇನು ತಿಳಿದಿದೆ? ಬಾಬಾರವರೇ ನೇರವಾಗಿ ಏಕೆ ಹೇಳಬಾರದು? ನಿನ್ನಂಥ ವಿದ್ವಾಂಸನ್ನೇಕೆ ನನ್ನ ಬಳಿಗೆ ಕಳುಹಿಸಬೇಕು? ಅವರ ಮರ್ಮವನ್ನು ತಿಳಿಯಲು ಅಸಾಧ್ಯ. ಒಂದೇ ಮಾತಿನಲ್ಲಿ ಹೇಳುವದಾದರೆ ಅವರನ್ನು ಗ್ರಹಿಸಲು ಮನುಷ್ಯ ಮಾತ್ರರಿಂದ ಸಾಧ್ಯವೇ ಇಲ್ಲ. ಈ ಸಂದರ್ಭದಲ್ಲಿ ನನಗೊಂದು

ಕಥೆ ನೆನಪಿಗೆ ಬರುತ್ತದೆ. ಅದು ನನಗೆ ಸ್ವಂತ ಗೊತ್ತಿದೆ. ಹೇಳುತ್ತೇನೆ ಕೇಳು. ಭಕ್ತನು ಶ್ರದ್ಧೆ ಭಕ್ತಿಯುಳ್ಳವನಾಗಿದ್ದರೆ ಪ್ರತಿಫಲ ಶೀಘ್ರದಲ್ಲಿಯೇ ದೊರಕುತ್ತದೆ. ಕೆಲವು ಸಾರೆ ಬಾಬಾ ಭಕ್ತರನ್ನು ಕಠಿಣ ಪರೀಕ್ಷೆಗೆ ಗುರಿಪಡಿಸಿ ನಂತರ ಉಪದೇಶ ನೀಡುತ್ತಾರೆ" ಎಂದರು.

ಉಪದೇಶವೆಂಬ ಪದವನ್ನು ಕೇಳುತ್ತಿದ್ದಂತೆಯೇ ಹೇಮಾಡಪಂತರಿಗೆ ಗುರುಚರಿತ್ರೆ ಸಂಗತಿ ನೆನಪಿಗೆ ಬಂದು, ನನ್ನನ್ನು ಪರೀಕ್ಷಿಸಿ, ನನ್ನ ಮನಸ್ಸಿಗೆ ಶಾಂತಿಕೊಡಬೇಕೆಂದು ನನ್ನನ್ನು ಇಲ್ಲಿಗೆ ಬಾಬಾ ಕಳುಹಿಸಿರಬಹುದೆಂದೆನಿಸಿತು. ತಕ್ಷಣವೇ ಆ ವಿಚಾರವನ್ನು ಬದಿಗಿಟ್ಟು ಶ್ಯಾಮ ಹೇಳುತ್ತಿದ್ದ ಕಥೆಯನ್ನು ಅವರು ಕೇಳಿದರು.

## ರಾಧಾಬಾಯಿ ದೇಶಮುಖ

ರಾಧಾಬಾಯಿ ಎಂಬ ವೃದ್ಧಳು ಖಾಶಾಬಾ ದೇಶಮುಖರ ತಾಯಿ. ಬಾಬಾ ಅವರ ಕೀರ್ತಿಯನ್ನು ಕೇಳಿ ಅವಳೂ ಸಹ ಸಂಗಮನೇರದ ಜನರ ಜೋತೆಯಲ್ಲಿ ಶಿರ್ಡಿಗೆ ಬಂದಳು. ಬಾಬಾರವರನ್ನು ಮನಸಾರೆ ಪ್ರೀತಿಸುತ್ತಿದ್ದಳು. ಆದುದರಿಂದ ಅವರನ್ನು ತಮ್ಮ ಗುರುವೆಂದು ಭಾವಿಸಿ ಅವಳು ಉಪದೇಶ ಪಡೆಯಬೇಕೆಂಬ ಸಂಕಲ್ಪ ಮಾಡಿದಳು. ಅವಳಿಗೆ ಇನ್ನೇನೂ ಗೊತ್ತಿರಲಿಲ್ಲ. ಬಾಬಾರವರು ತಮ್ಮನ್ನು ಸ್ವೀಕರಿಸಿ, ಉಪದೇಶಿಸದೆ ಇದ್ದರೆ ಮರಣಾಂತಿಕ ಉಪವಾಸವ್ರತ ಮಾಡಬೇಕೆಂದು ನಿರ್ಧರಿಸಿ, ಮನೆಗೆ ಹೋಗಿ ಅಂದಿನಿಂದ ನೀರು ಮತ್ತು ಆಹಾರವನ್ನು ತೊರೆದಳು. ಇದನ್ನು ನೋಡಿ ನನಗೆ ಗಾಬರಿಯಾಯಿತು. ಆದ್ದರಿಂದ ಅವಳ ಪರವಾಗಿ, ಬಾಬಾ ಹತ್ತಿರ ನಾನು ಹೋಗಿ "ದೇವಾ, ಇದು ನಿನ್ನ ಎಂಥ ಲೀಲೆ? ನೀನು ಅನೇಕರನ್ನು ಇಲ್ಲಿಗೆ ಕರೆಯಿಸುವೆ. ಆಶೀರ್ವದಿಸುವೆ. ಆ ವೃದ್ಧಳ ಬಗ್ಗೆ ನಿನಗೆ ತಿಳಿದಿಲ್ಲವೆ? ಅವಳು ನಿನ್ನನ್ನೇ ನಂಬಿರುತ್ತಾಳೆ. ನೀನು ಅವಳನ್ನು ಆಶೀರ್ವದಿಸಿ ಉಪದೇಶ ನೀಡಿದಿದ್ದಲ್ಲಿ ಮರಣಾಂತಿಕ ಉಪವಾಸ ಮಾಡುವೆನೆಂದು ನಿರ್ಧರಿಸಿರುತ್ತಾಳೆ. ಆದುದರಿಂದ ದಯವಿಟ್ಟು ಅವಳನ್ನು

ಆಶೀರ್ವದಿಸು" ಎಂದು ಕೇಳಿದನು. ಬಾಬಾರವರು ಅವಳ ದೃಢಸಂಕಲ್ಪವನ್ನು ತಿಳಿದು, ಅವಳನ್ನು ಕರೆಯಿಸಿ ಈ ಕೆಳಗೆ ಹೇಳಿದಂತೆ ಅವಳನ್ನು ಸಂಭೋಧಿಸಿ ಅವಳ ಮನಸ್ಸನ್ನು ಮಾರ್ಪಾಟು ಮಾಡಿದರು.

"ಮಾತೆಯೆ, ಅನ್ಯಾಯವಾಗಿ ನಿಮ್ಮ ದೇಹವನ್ನು ಏತಕ್ಕೆ ದಂಡಿಸಿಕೊಳ್ಳುತ್ತಿದ್ದೀರಿ? ನೀವೆ ನಿನ್ನ ನಿಜವಾದ ಮಾತೆ. ನಾನು ನಿಮ್ಮ ಪುತ್ರ. ಕನಿಕರವಿಟ್ಟು ನಾನು ಹೇಳುವದನ್ನು ಕೇಳಿರಿ. ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನೀವು ಇದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ನಿಮಗೆ ಒಳ್ಳೆಯದಾಗುತ್ತದೆ."

"ನನಗೆ ಒಬ್ಬ ಗುರು ಇದ್ದರು. ಅವರು ಮಹಾಸಾಧುಗಳೂ ದಯಾಮಯರೂ ಆಗಿದ್ದರು. ಅವರಲ್ಲಿ ನಾನು ಬಹಳ ದಿನಗಳ ಕಾಲ ಸೇವೆ ಮಾಡಿದೆ. ಅದರೂ ಒಂದು ದಿನವಾದರೂ ಅವರು ನನಗೆ ಮಂತ್ರೋಪದೇಶ ಮಾಡಲಿಲ್ಲ. ಆದರೂ ಕೂಡ ಅವರನ್ನು ಬಿಡಬಾರದೆಂದು ದೃಢಸಂಕಲ್ಪ ಮಾಡಿದೆನು. ಒಂದು ದಿನ ನನ್ನ ತಲೆಯನ್ನು ಬೋಳಿಸಿ ನನ್ನಿಂದ ಎರಡು ಕಾಸು ದಕ್ಷಿಣೆ ಕೇಳಿದರು. ಅವುಗಳನ್ನು ನಾನು ಕೂಡಲೆ ಅರ್ಪಿಸಿದೆ. ಅವರು ನಿಜವಾದ ಸಾಧುಗಳಾಗಿದ್ದರೆ ನನ್ನಿಂದ ದಕ್ಷಿಣೆಯನ್ನೇಕೆ ಕೇಳಿದರು? ಎಂದು ಪ್ರಶ್ನಿಸಬಹುದು. ಅವರಿಗೆ ಬೇಕಾದುದು ಹಣವಲ್ಲ. ಅದರಿಂದ ಅವರಿಗೇನು ಪ್ರಯೋಜನ? ಅವರು ಕೇಳಿದ ಎರಡು ಕಾಸುಗಳು ದೃಢ ನಂಬಿಕೆ ಮತ್ತು ತಾಳ್ಮೆಗಳನ್ನು ಸೂಚಿಸುತ್ತಿದ್ದವು. ನಾನು ಅವೆರಡನ್ನೂ ಅರ್ಪಿಸಿದೆನು. ಅವರಿಗೆ ಸಂತೋಷವಾಯಿತು. ನಾನು ಹನ್ನೆರಡು ವರ್ಷಗಳ ಕಾಲ ನನ್ನ ಗುರುವಿನ ಸೇವೆಯನ್ನು ಮಾಡಿದೆ. ಅವರು ನನ್ನನ್ನು ಉದ್ಧರಿಸಿದರು. ಆಹಾರ ಮತ್ತು ಬಟ್ಟೆಗಳಿಗೆ ಕೊರತೆ ಇರಲಿಲ್ಲ. ಅವರು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವದಾದರೆ ಅವರು ಪ್ರೀತಿಯ ಅವತಾರ ಮೂರ್ತಿಗಳಾಗಿದ್ದರು. ಅವರನ್ನು ನಾನು ಹೇಗೆ ವರ್ಣಿಸಲಿ? ಅವರಂಥ ಗುರುಗಳು ವಿರಳ.

ನಾನು ಅವರನ್ನು ನೋಡಿದಾಗ ಅವರು ಮಹಾತಪಸ್ಸಿನಲ್ಲಿ ನಿರತರಾಗಿರುವಂತೆ ತೋರುತ್ತಿದ್ದರು. ಹಗಲಿರುಳೂ ಅವರನ್ನೇ ದ್ರಷ್ಟಿಸಿ ನೋಡುತ್ತಿದ್ದೆ. ನನಗೆ ಹಸಿವು ಬಾಯಾರಿಕೆ ಆಗುತ್ತಲೇ ಇರಲಿಲ್ಲ. ಅವರಿಲ್ಲದೆ ನನಗೆ ಶಾಂತಿ ಇರುತ್ತಿರಲಿಲ್ಲ. ಗುರುವಿನ ಹೊರತಾಗಿ ನನಗೆ ಧ್ಯಾನ ಮಾಡಲು ಬೇರೆ ಏನು ಸರಿಹೋಗುತ್ತಿರಲಿಲ್ಲ. ಅವರೇ ನನ್ನ ಸರ್ವಸ್ವವಾಗಿದ್ದರು. ನನ್ನ ಮನಸ್ಸು ಯಾವಾಗಲೂ ಅವರಲ್ಲಿ ಇಟ್ಟಿದ್ದೆ. ಇದೇ ನನ್ನ ಆದ್ಯ ದಕ್ಷಿಣೆ. ತಾಳ್ಮೆ ಮತ್ತೊಂದು ದಕ್ಷಿಣೆ. ಬಹಳ ದಿನಗಳ ಕಾಲ ತಾಳ್ಮೆಯಿಂದ ಇದ್ದು ಅವರ ಸೇವೆ ಮಾಡುತ್ತಿದ್ದೆ. ತಾಳ್ಮೆಯೇ ಸಂಸಾರ ಸಾಗರವನ್ನು ದಾಟಿಸುವ ದೋಣಿ. ತಾಳ್ಮೆಯೇ ಮನುಷ್ಯನಿಗೆ ಭೂಷಣ. ಅದು ಪಾಪಾಗಳನ್ನು ನಿರ್ಮೂಲ ಮಾಡಿ, ಕಷ್ಟ -ಕಾರ್ಪಣ್ಯಗಳನ್ನು ತೊಲಗಿಸಿ, ಜಯವನ್ನು ಪಡೆಯಲು ಸಹಾಯವೆಸಗುತ್ತದೆ. ತಾಳ್ಮೆಯೇ ಗುಣಗಳ ಗಣಿ. ವಿಶ್ವಾಸ ಮತ್ತು ತಾಳ್ಮೆ (ಶ್ರದ್ಧೆ ಮತ್ತು ಸಬೂರಿ) ಅವಳಿ-ಜವಳಿ ಸಹೋದರಿಗಳಂತೆ.

"ನನ್ನ ಗುರುವು ನನ್ನಿಂದ ಇನ್ನೇನೂ ಬಯಸಲಿಲ್ಲ. ಅವರು ನನ್ನನ್ನು ಸದಾ ರಕ್ಷಿಸುತ್ತಿದ್ದರು. ಕೆಲವು ಸಾರೆ ಅವರೊಡನೆಯೂ ಮತ್ತೆ ಕೆಲವು ಸಾರೆ ಅವರನ್ನು ಅಗಲಿಯೂ ಇದ್ದೇನು. ಆದರೂ ಅವರ ಪ್ರೇಮ ಅಚಲವಾಗಿತ್ತು. ಯಾಗಾಗಲೂ ತಮ್ಮ ಕೃಪಾದೃಷ್ಟಿಯಿಂದ ನನ್ನನ್ನು ಕಾಪಾಡುತ್ತಿದ್ದರು. ತಾಯಿಯೇ! ನನ್ನ ಗುರುವು ನನಗೆ ಯಾವ ಮಂತ್ರವನ್ನೂ ಉಪದೇಶಿಸಲಿಲ್ಲ. ಆದ್ದರಿಂದ ನಾನು ನಿಮಗೆ ಏನು ಉಪದೇಶಿಸಲಿ? ಗುರುವಿನ ಕೃಪಾಕಟಾಕ್ಷವೇ ಸಂತಸದ ಕಾರಣವೆಂದು ತಿಳಿಯಿರಿ. ಯಾರಿಂದಲೂ ಮಂತ್ರ ಅಥವಾ ಉಪದೇಶ ಪಡೆಯಲು ಪ್ರಯತ್ನಿಸಬೇಡಿ. ನನ್ನನ್ನು ತಮ್ಮ ಭಾವನೆಯ ಪ್ರತೀಕವನ್ನಾಗಿ ಮಾಡಿಕೊಂಡು ನನ್ನಲ್ಲಿ ಅಚಲ ವಿಶ್ವಾಸವಿಡಿ. ನನ್ನನ್ನು ಮನಃಪೂರ್ವಕವಾಗಿ ನೋಡಿದರೆ ನಾನು ನಿಮ್ಮನ್ನು ಅದೇ ರೀತಿ ನೋಡುತ್ತೇನೆ. ಈ ಮಸೀದಿಯಲ್ಲಿ ಕುಳಿತು ನಾನಾ ಸದಾ ಸತ್ಯವನ್ನೇ

ನುಡಿಯುತ್ತೇನೆ. ಇದಕ್ಕೆ ಯಾವ ಸಾಧನೆಯೂ ಅಥವಾ ಶಾಸ್ತ್ರಗಳ ಪಾಂಡಿತ್ಯವೂ ಬೇಕಿಲ್ಲ. ಯಾರು ಗುರುವನ್ನೇ ಹರಿಹರ ಬ್ರಹ್ಮಾದಿಗೆಂದು ಆರಾಧಿಸುವರೋ ಅವರು ಆಶೀರ್ವದಿಸಲ್ಪಡುತ್ತಾರೆ". ಈ ರೀತಿ ಉಪದೇಶಿಸಲ್ಪಟ್ಟ ರಾಧಾಬಾಯಿಯು ಸಂಪೂರ್ಣ ವಿಶ್ವಾಸದಿಂದ ತನ್ನ ಉಪವಾಸವನ್ನು ಬಿಟ್ಟಳು. ಇದನ್ನು ಸಮಯಕ್ಕೆ ಸರಿಯಾಗಿ ಕೇಳಿದ ಹೇಮಾಡಪಂತರು ಅಚ್ಚರಿಗೊಂಡರು. ಆನಂದಕ್ಕೆ ಪಾರವಿಲ್ಲದೆ ಅವರು ಕ್ಷಣ ಕಾಲ ಸ್ತಂಭೀಭೂತರಾದರು. ಇದನ್ನು ನೋಡಿದ ಶ್ಯಾಮ ಅವರು "ಏನುಸಮಾಚಾರ? ಏತಕ್ಕೆ ಸುಮ್ಮನಿದ್ದೀಯೆ? ಇನ್ನೆಷ್ಟು ಲೀಲೆಗಳನ್ನು ವಿವರಿಸಲಿ?" ಎಂದರು

ಆ ಸಮಯಕ್ಕೆ ಸರಿಯಾಗಿ ಮಧ್ಯಾಹ್ನದ ಆರತಿ ಸಮಯವಾಯಿತೆಂದು ಮಸೀದಿಯ ಘಂಟೆ ಬಾರಿಸತೊಡಗಿತು. ಇದನ್ನು ಕೇಳಿ ಇಬ್ಬರೂ ಮಸೀದಿಗೆ ಹೊರಟರು. ಎಲ್ಲರೂ ಆರತಿ ಹಾಡುತ್ತಿದ್ದರು. ಶ್ಯಾಮ ಅವರು ಹೇಮಾಡಪಂತರನ್ನು ಸಂಗಡ ಕರೆದುಕೊಂಡು ಮಸೀದಿಗೆ ಬಂದು ಬಾಬಾರವರ ಬಲಗಡೆ ಕುಳಿತರು. ಹೇಮಾಡಪಂತರು ಬಾಬಾರವರ ಮುಂದೆ ಕುಳಿತರು. ಇದನ್ನು ಕಂಡ ಬಾಬಾರವರು ಹೇಮಾಡಪಂತರಿಗೆ ಶ್ಯಾಮ ಅವರಿಂದ ತಂದ ದಕ್ಷಿಣೆಯನ್ನು ಕೊಡಲು ಕೇಳಿದರು. ಹೇಮಾಡಪಂತರು ಶ್ಯಾಮ ಅವರು ಹದಿನೈದು ನಮಸ್ಕಾರಗಳನ್ನು ಮಾತ್ರ ಕೊಟ್ಟಿರುತ್ತಾರೆಂದು ತಿಳಿಸಿದರು. ಆಗ ಬಾಬಾರವರು "ಸರಿ, ನಾನು ಹೇಳಿದ ಪ್ರಕಾರ ಏನಾದರೂ ಮಾತು-ಕತೆ ನಡೆಸಿದಿರಾ? ಹಾಗಿದ್ದರೆ ಯಾವ ವಿಚಾರ ಪ್ರಸ್ತಾಪಿಸಿದಿರಿ?" ಎಂದು ಕೇಳಿದರು. ಘಂಟೆಗಳು ಮತ್ತು ಮೃದಂಗದ ಶಬ್ದ ಮತ್ತು ಹಾಡುಗಳು ಇವೊಂದನ್ನೂ ಲಕ್ಷಿಸದೆ ಹೇಮಾಡಪಂತರು ಆನಂದದಿಂದ ನಡೆದ ವಿಚಾರವೆಲ್ಲವನ್ನೂ ಹೇಳತೊಡಗಿದರು. ಬಾಬಾರವರೂ ಸಹ ಕೇಳುತ್ತಿದ್ದರು. ಹೇಮಾಡಪಂತರು ಮಾತನಾಡಿದುದೆಲ್ಲವನ್ನೂ ಹೇಳುತ್ತ "ನಿಜಕ್ಕೂ ಆ ವೃದ್ಧಳ ಕಥೆಯಿಂದ

ನನ್ನನ್ನು ಪರೋಕ್ಷವಾಗಿ ಆಶೀರ್ವದಿಸಿದ್ದೀರಿ ಬಾಬಾ." ಎಂದರು. ಬಾಬಾರವರು "ಕಥೆ ನಿಜವಾಗಿ ಅದ್ಭುತವಾದದ್ದು. ಆದರೆ ನೀನು ಹೇಗೆ ಆಶೀರ್ವದಿಸಲ್ಪಟ್ಟೆ? ವಿವರಿಸಿ" ಎಂದರು. ಹೇಮಾಡಪಂತರು ಕೇಳಿದ ವಿಷಯವೆಲ್ಲವನ್ನೂ ವಿಶದವಾಗಿ ಹೇಳಿದರು. ಬಾಬಾರವರು ಆನಂದದಿಂದ "ನಿನಗೆ ಆ ಕಥೆಯು ಪೂರ್ಣ ಅರ್ಥವಾಯಿತೆ?" ಎಂದು ಕೇಳಿದರು. ಹೇಮಾಡಪಂತರು "ಹೌದು ಬಾಬಾ, ನನಗೆ ಈಗ ಶಾಂತಿದೊರಕಿದೆ". ಎಂದರು

ಆಗ ಬಾಬಾರವರು, "ನನ್ನ ರೀತಿ ಅದ್ವಿತೀಯವಾದದ್ದು. ಈ ಒಂದು ಕಥೆಯನ್ನು ಜ್ಞಾಪಕದಲ್ಲಿಟ್ಟುಕೊಂಡರೆ ನಿನಗೆ ಉಪಯೋಗವಾಗುತ್ತದೆ. ಆತ್ಮಜ್ಞಾನ ದೊರೆಯಬೇಕಾದರೆ, ಭಕ್ತಿ ಅತ್ಯಾವಶ್ಯಕ; ಇದನ್ನು ನಿರಂತರವಾಗಿ ಅಭ್ಯಾಸಮಾಡಿದರೆ ನಿನ್ನ ವೃತ್ತಿಗಳು ಸಮಾಧಾನವಾಗುತ್ತವೆ. ಆಶಾರಹಿತನಾಗಿ, ನಿನ್ನ ಮನಸ್ಸನ್ನು ಆ ಪರಮಾತ್ಮನಲ್ಲಿಡು. ಆಗ ಗುರಿಯನ್ನು ಸಾಧಿಸಬಹುದು. ಯಾವಾಗಲೂ ನನ್ನ ನಿರಾಕಾರ ರೂಪವನ್ನೇ ಧ್ಯಾನಿಸು. ಇದು ಸಾಧ್ಯವಿಲ್ಲದಿದ್ದರೆ ಹಗಲಿರುಳು ನೀನು ನೋಡುತ್ತಿರುವ ರೂಪವನ್ನೇ ಧ್ಯಾನಿಸು. ಈ ರೀತಿ ಧ್ಯಾನ ಮಾಡುತ್ತಿದ್ದರೆ ನಿನ್ನ ವೃತ್ತಿಗಳು ಒಂದು ದಾರಿಯನ್ನು ಅನುವರ್ತಿಸುತ್ತವೆ. ಆಗ ಧ್ಯಾತ, ಧ್ಯಾನ, ಧ್ಯೇಯ ಇವುಗಳಿಗಿರುವ ವ್ಯತ್ಯಾಸವು ದೂರವಾಗುತ್ತದೆ. ಆಗ ನಿನ್ನ ಮನಸ್ಸು ಬ್ರಹ್ಮನಲ್ಲಿ ಐಕ್ಯವಾಗುತ್ತದೆ.

"ಆಮೆಯು ನದಿಯ ಒಂದು ದಡದಲ್ಲಿದ್ದು, ಅದರ ಮರಿಗಳು ಇನ್ನೊಂದು ದಡದಲ್ಲಿದ್ದರೂ ಅದರ ದೃಷ್ಟಿಮಾತ್ರವೇ ಅವುಗಳಿಗೆ ಆಹಾರವಿದ್ದಂತೆ. ಅದು ಮರಿಗಳಿಗೆ ಹಾಲನ್ನಾಗಲಿ, ಆಹಾರವನ್ನಾಗಲಿ, ಕೊಡಬೇಕಿಲ್ಲ. ಗುರುವಿಗೂ, ಶಿಷ್ಯನಿಗೂ ಅದೇ ರೀತಿ ಸಂಬಂಧವಿದೆ" ಎಂದು ಬಾಬಾ ಹೇಳಿದರು. ಈ ರೀತಿ ಹೇಳುತ್ತಿರುವಾಗ ಆರತಿ ಮತ್ತು ವಾದ್ಯ ಮುಗಿದು ಜನರು ಏಕ-ಕಂಠದಿಂದ "ಜ್ಞಾನಿಯೂ,

ಸಚ್ಚಿದಾನಂದ ರೂಪನೂ ಆದ ಸದ್ಗುರು ಸಾಯಿಬಾಬಾ ಅವರಿಗೆ ಜಯವಾಗಲಿ" ಎಂದು ಘೋಷಿಸಿದರು. ಇದಾದನಂತರ ಪ್ರಸಾದ ವಿನಿಯೋಗವಾಗಯಿತು. ಬಾಪೂಸಾಹೇಬ ಜೋಗ ಅವರು ಯಥಾಪ್ರಕಾರ ಬಾಬಾ ಅವರಿಗೆ ನಮಸ್ಕರಿಸಿ ಸಕ್ಕರೆ ಕೊಟ್ಟರು. ಬಾಬಾ ಆಗ ಸಕ್ಕರೆಯನ್ನು ಹೇಮಾಡಪಂತರಿಗೆ ಕೊಟ್ಟು "ಈ ಕಥೆಯನ್ನು ನೀನು ಮನಸಾರೆ ಜ್ಞಾಪಕದಲ್ಲಿಟ್ಟುಕೋ; ನಿನ್ನ ಜೀವನ ಸಕ್ಕರೆಯಷ್ಟೇ ಸಿಹಿಂಯಾಗುತ್ತದೆ. ನಿನ್ನ ಅಭಿಷ್ಟಗಳೆಲ್ಲವೂ ಸಿದ್ಧಿಸಿ ನೀನು ಸುಖಿಯಾಗಿರುವೆ" ಎಂದು ಆಶೀರ್ವದಿಸಿದರು.

ವಾಚಕ ಮಹಾಶಯರೆ, ಹೇಮಾಡಪಂತರಿಗೆ ಕಲ್ಲುಸಕ್ಕರೆ ದೊರಕಿತು. ನಮಗೆ ಸಾಯಿ ಲೀಲಾಮೃತ ದೊರಕಿತು ಅದನ್ನು ಮನದಣಿಯುವಂತೆ ಸೇವಿಸಿ ಪರಮಾತ್ಮನನ್ನು ಧ್ಯಾನಿಸೋಣ' ಬಾಬಾರವರ ಕೃಪೆಯಿಂದ ಸಂತೋಷದಿಂದಿರೋಣ!

## ಬಾಬಾರವರ ವಚನಗಳು

ಬಾಬಾರವರ ವಚನಗಳು ಅಮೂಲ್ಯವಾದವುಗಳು. ಅವುಗಳನ್ನು ನಾವು ಜ್ಞಾಪಕದಲ್ಲಿಟ್ಟುಕೊಂಡು ಅವುಗಳಂತೆ ನಾವು ವರ್ತಿಸಿದರೆ ನಿಜವಾಗಿ ನಮಗೆ ಒಳ್ಳೆಯದಾಗುತ್ತದೆ. ಅವುಗಳೆಂದರೆ " ಯಾರು ತಮ್ಮ ಋಣಾನುಬಂಧವಿಲ್ಲದೆ ಎಲ್ಲಿಗೂ ಹೋಗಲಾರರು. ಯಾವ ಮನುಷ್ಯನೇ ಆಗಲಿ, ಪ್ರಾಣಿಯೇ ಅಗಲಿ, ನಿಮ್ಮ ಬಳಿ ಬಂದರೆ ನಿರ್ದಯೆಯಿಂದ ಓಡಿಸಬೇಡಿರಿ. ತಕ್ಕ ಮರ್ಯಾದೆ ಮತ್ತು ಆದರದಿಂದ ಸ್ವಾಗತಿಸಿರಿ. ಬಾಯಾರಿಕೆಯಾದವರಿಗೆ ನೀರು ಕೊಟ್ಟರೆ, ಹಸಿದವರಿಗೆ ಆಹಾರ ನೀಡಿದರೆ, ಬಡವರಿಗೆ ಉಡುಪು ಕೊಟ್ಟರೆ, ಅಪರಿಚರಿತ ಪ್ರಯಾಣಿಕರಿಗೆ ನಿಮ್ಮ ಮನೆಯ ಪಡಸಾಲೆಯ ಮೇಲೆ ಮಲಗಿಕೊಳ್ಳಲು ಸ್ಥಳ ಕೊಟ್ಟರೆ ಶ್ರೀ ಹರಿಯು ಸಂತೃಪ್ತನಾಗುವನು. ನಿಮ್ಮಲ್ಲಿಗೆ ಹಣವನ್ನಪೇಕ್ಷಿಸಿ ಯಾರಾದರು ಬಂದರೆ ನಿಮಗೆ ಕೊಡಲು

ಇಷ್ಟವಿಲ್ಲದಿದ್ದರೆ ಕೊಡಬೇಡಿರಿ. ಆದರೆ ವಿನಾಕಾರಣ ಹರಿಹಾಯಬೇಡಿರಿ. ನಿಮ್ಮನ್ನು ಅನೇಕ ಜನರು ನಿಂದಿಸಬಹುದು. ಆದರೂ ಅವರ ಮೇಲೆ ನೀವು ಸಿಟ್ಟು ಮಾಡಬೇಡಿ. ನೀವು ತಾಳ್ಮೆಯಿಂದ ವರ್ತಿಸಿದರೆ ಖಂಡಿತವಾಗಿಯೂ ನಿಮಗೆ ಶಾಂತಿ ದೊರಕುತ್ತದೆ. ಪ್ರಪಂಚವೇ ತಲೆಕೆಳಗಾದರೂ ಸರಿ; ನಿಮ್ಮ ಸ್ಥಳ ಬಿಟ್ಟು ಕದಲಬೇಡಿರಿ. ನಿಂತಲ್ಲಿಯೇ ನಿಂತು ಆಗುಹೋಗುಗಳನ್ನು ಗಮನಿಸಿರಿ. ನನ್ನನ್ನೂ ಮತ್ತು ನಿಮ್ಮನ್ನೂ ಬೇರ್ಪಡಿಸಿರುವ ಗೋಡೆಯನ್ನು ತೆಗೆದುಹಾಕಿರಿ. ಆಗ ನಮ್ಮೀರ್ವರ ಭೆಟ್ಟಿಗೆ ಅವಕಾಶ ಸಿಗುತ್ತದೆ. ನಾನು–ನೀನು ಎಂಬ ವ್ಯತ್ಯಾಸವನ್ನು ನಿರ್ಮೂಲ ಮಾಡಿರಿ. ದೇವರು ದೊಡ್ಡವನು. ಅವನೇ ನಮ್ಮ ಸರ್ವಸ್ವ ಅವನೇನಮ್ಮ ರಕ್ಷಕ. ಅವನ ರೀತಿ–ನೀತಿಗಳು ಅಗಾಧ ಮತ್ತು ಅಮೂಲ್ಯವಾದವುಗಳು. ಅವನೇ ನಮ್ಮ ಅಭಿಷ್ಟಗಳನ್ನೆಲ್ಲ ನೆರವೇರಿಸುತ್ತಾನೆ. ನಾವು ಇಲ್ಲಿ ಒಟ್ಟುಗೂಡಿರುವುದು ನಮ್ಮ ಪೂರ್ವ ಜನ್ಮದ ಋಣಾನುಬಂಧದಿಂದ. ನಾವು ಅನ್ಯೋನ್ಯವಾಗಿ ಕಲೆತು ಪ್ರೀತಿ ಮತ್ತು ಆದರದಿಂದಿರೋಣ. ಈ ಒಂದು ಉದಾತ್ತವಾದ ಗುರಿಯನ್ನು ಯಾವನು ಸಾಧಿಸುತ್ತಾನೆಯೋ, ಅವನೇ ನಿಜವಾದ ಸುಖಿ ಮತ್ತು ಅಮರನು. ಇತರರು ಪಶುಗಳಂತೆ ಉಸಿರಿರುವ ತನಕ ಜೀವಿಸುತ್ತಾರೆ."

## ಸದ್ಭಾವನೆಗೆ ಪ್ರೋತ್ಸಾಹ

ಶ್ರೀ ಸಾಯಿಬಾಬಾರವರು ಸದ್ಭಾವನೆಯನ್ನು ಹೇಗೆ ಪ್ರೋತ್ಸಾಹಿಸುತ್ತಿದ್ದರೆಂಬುದನ್ನು ನಾವು ಗಮನಿಸಬೇಕು. ನೀವು ಅವರಲ್ಲಿ ಮನಃಪೂರ್ವಕವಾಗಿ ಶರಣಾಗತಿ ಹೋದಿದರೆ ಬಾಬಾ ನಿಮಗೆ ಎಷ್ಟು ಸಹಾಯವೆಸಗುತ್ತಾರೆಂಬುದನ್ನು ನೀವೇ ಮನಗಾಣುವಿರಿ. ನೀವು ಬೆಳಿಗ್ಗೆ ಎದ್ದಾಗ ಇರುವ ಸದ್ಭಾವನೆಯನ್ನು ಅಭಿವೃದ್ಧಿಪಡಿಸಿಕೊಂಡು ನೋಡಿರಿ. ಆಗ ನಿಮ್ಮ ಬುದ್ಧಿಯು ವಿಕಾಸ ಹೊಂದಿ ಮನಸ್ಸು ನಿರ್ಮಲವಾಗುತ್ತದೆ. ಹೇಮಾಡಪಂತರು ಇದನ್ನು ಪ್ರಯೋಗಿಸಲು ಪ್ರಯತ್ನಿಸಿದರು. ಒಂದು ದಿನ ಬುಧವಾರ ರಾತ್ರಿ ಮಲಗುವಾಗ

"ನಾಳೆ ಗುರುವಾರ; ಶಿರ್ಡಿ ಪವಿತ್ರವಾದ ಸ್ಥಳ; ಆದುದರಿಂದ ಪವಿತ್ರವಾದ ಶ್ರೀರಾಮ ನಾಮಸ್ಮರಣೆಯಲ್ಲಿ ನಾನು ಕಾಲವನ್ನು ಕಳೆಯಬೇಕು" ಎಂದು ಮನಸ್ಸಿನಲ್ಲಿ ಮಾಡಿಕೊಂಡು ಮಲಗಿದರು. ಮಾರನೇ ದಿನ ಬೆಳಗಾಗುತ್ತಲೇ ತನ್ನಷ್ಟಕ್ಕೆ ತಾನೇ ಏಕಪ್ರಕಾರವಾಗಿ ಶ್ರೀ ರಾಮನಾಮವು ಅವರ ಮುಖದಿಂದ ಹೊರಬರುತ್ತಿತ್ತು. ಅವರಿಗೆ ಸಂತೋಷವಾಯಿತು. ನಂತರ ಬೆಳಗಿನ ಕರ್ತವ್ಯವೆಲ್ಲವನ್ನು ಮುಗಿಸಿಕೊಂಡು, ಪುಷ್ಪಗಳನ್ನು ತೆಗೆದುಕೊಂಡು ಬಾಬಾ ಅವರ ದರ್ಶನ ಪಡೆಯಲು ಮಸೀದಿಗೆ ಹೊರಟರು. ದೀಕ್ಷಿತವಾಡಾ ಬಿಟ್ಟು ಅವರು ಬೂಟಿವಾಡಾ ದಾಟುತ್ತಿರುವಾಗ ಬಾಬಾ ಅವರ ಮುಂದೆ ಔರಂಗಾಬಾದಕರು ಹಾಡುತ್ತಿದ್ದ ಏಕನಾಥರ "ಗುರುಕೃಪಾಂಜನ ಪಾಯೋ ಮೇರಾಭಾಯಿ....."ಎಂಬ ಹಾಡನ್ನು ಕೇಳದರು. ಅಂದರೆ "ಗುರುಕೃಪೆಯ ರೂಪದಲ್ಲಿ ನನಗೆ ಅಂಜನ ದೊರೆತಿದೆ. ಅದು ನನ್ನ ದೃಷ್ಟಿಯನ್ನು ವಿಕಸಿಸಿ ರಾಮದರ್ಶನಕ್ಕೆ ನೆರವು ನೀಡಿದೆ" ಎಂದರ್ಥ. ಸಾಯಿಯವರ ಭಕ್ತರಾದ ಔರಂಗಬಾದಕರ ಈ ಹಾಡನ್ನು ಆಗ ಹಾಡಿದ ಉದ್ದೇಶವೇನು? ನಿಜವಾಗಿಯೂ ಹೇಮಾಡಪಂತರ ಪ್ರತಿಜ್ಞೆಯನ್ನು ಈಡೇರಿಸಲು ಬಾಬಾ ಅದನ್ನೇ ಅವರು ಕೇಳುವ ಹಾಗೆ ಮಾಡಿದುದು ಆಶ್ಚರ್ಯಕರವಲ್ಲವೆ?

ಎಲ್ಲ ಸಂತರು ಶ್ರೀರಾಮನಾಮೋಚ್ಚರಣೆ ಶ್ರೇಷ್ಠವೆಂದು ಹೇಳುತ್ತಾರೆ. ಶ್ರೀರಾಮನಾಮಸ್ಮರಣೆಯಿಂದ ನಮ್ಮ ಕಷ್ಟಗಳೆಲ್ಲವೂ ದೂರವಾಗಿ ನಮ್ಮ ಅಭೀಷ್ಟಗಳು ಕೈಗೂಡುತ್ತವೆ.

## ವಿವಿಧೋಪದೇಶ

ಸಾಯಿಬಾಬ ಅವರು ಉಪದೇಶ ನೀಡಲು ಪ್ರತ್ಯೇಕ ಸ್ಥಳವನ್ನಾಗಲಿ, ಪ್ರತ್ಯೇಕ ಕಾಲವನ್ನಾಗಲಿ ನೋಡುತ್ತಿರಲಿಲ್ಲ. ಸಂದರ್ಭ ಬಂದಾಗೆಲ್ಲ ಉಪದೇಶ ನೀಡುತ್ತಿದ್ದರು. ಒಂದು ಬಾರಿ ಬಾಬಾ ಅವರ ಭಕ್ತನೊಬ್ಬನು

ಇನ್ನೊಬ್ಬನನನ್ನು ಅವನ ಹಿಂದೆ ನಿಂದಿಸುತ್ತಿದ್ದನು. ಸಾಮಾನ್ಯವಾಗಿ ಜನರು ವಿನಾಕಾರಣ ಇನ್ನೊಬ್ಬನನ್ನು ಹಳಿಯುತ್ತಾರೆ. ಇದೇ ದ್ವೇಷಕ್ಕೆ ಮೂಲ ಕಾರಣ. ಸಂತರು ಪರನಿಂದೆಯನ್ನು ಬೇರೊಂದು ವಿಧದಲ್ಲಿ ನೋಡುತ್ತಾರೆ. ಕೊಳೆಯನ್ನು ತೊಳೆಯುವ ಸಾಧನಗಳು ಬೇರೆಬೇರೆಯಾಗಿವೆ. ಅವು- ಮಣ್ಣು, ನೀರು, ಮತ್ತು ಸಾಬೂನು. ಆದರೆ ಪರರ ದೂಷಕನು ಬೇರೊಬ್ಬರ ತಪ್ಪನ್ನು ನಾಲಿಗೆಯಿಂದ ತೊಳೆಯುವನು. ಒಂದು ವಿಧದಲ್ಲಿ ಅವನು ಇನ್ನೊಬ್ಬರನ್ನು ನಿಂದಿಸುವಾಗ ಅವರಿಗೆ ಉಪಕಾರ ಮಾಡುತ್ತಾನೆ. ಸಾಯಿಬಾಬಾ ಅವರು ನಿಂದಿಸುತ್ತಿದ್ದವರನ್ನು ತಿದ್ದುತ್ತಿದ್ದ ರೀತಿಯೇ ಬೇರೆ. ಅವರು ತಮ್ಮ ಆತ್ಮಜ್ಞಾನದಿಂದ ಅವನೇನು ಮಾಡಿದ್ದಾನೆಂಬುದನ್ನು ತಿಳಿದು ಲೇಂಡಿಯ ಬಳಿ ಅವನನ್ನು ಸಂಧಿಸಿದಾಗ ಅವನಿಗೆ ಕೊಳೆಯನ್ನು ತಿನ್ನುತ್ತಿದ್ದ ಹಂದಿಯನ್ನು ತೋರಿಸಿ "ನೋಡು, ಎಷ್ಟು ರುಚಿಯಾಗಿದೆಯೆಂದು ಅದು ಕೊಳೆಯನ್ನು ತಿನ್ನುತ್ತಿದೆ? ನಿನ್ನ ರೀತಿಯೂ ಅದಕ್ಕೆ ಸಮನಾದುದಾಗಿದೆ. ನಿನ್ನ ಸಹೋದರನನ್ನೇ ನೀನು ನಿಂದಿಸುತ್ತಿರುವೆ. ಪೂರ್ವಜನ್ಮದ ಸುಕೃತದಿಂದ ನಿನಗೆ ಈ ಮಾನವ ಜನ್ಮ ಲಭಿಸಿದೆ. ಈ ಜನ್ಮದಲ್ಲಿ ನೀನು ಈ ರೀತಿ ವರ್ತಿಸಿದರೆ ಶಿರ್ಡಿಯು ಯಾವ ರೀತಿಯಲ್ಲಿ ಸಹಾಯ ಮಾಡಬಹುದು?" ಎಂದು ಕೇಳಿದರು. ಭಕ್ತನು ಇದರಿಂದ ಪಾಠ ಕಲಿತುಕೊಂಡನು ಎಂಬುದನ್ನು ಬೇರೆ ಹೇಳುವ ಅಗತ್ಯವಿಲ್ಲ.

ಈ ರೀತಿ ಬಾಬಾ ನಮಗೆ ಸಂದರ್ಭ ಒದಗಿದಾಗ ನೀತಿ ಬೋಧಿಸುತ್ತಿದ್ದರು. ಅದನ್ನು ನಾವು ಗಮನಿಸಿ ಅದರಂತೆ ನಡೆದುಕೊಂಡರೆ ನಮ್ಮ ಆಧ್ಯಾತ್ಮಿಕ ಗುರಿ ನಮ್ಮಿಂದ ದೂರವಿರಲಾರದು.

ತಮ್ಮನ್ನು ಕೇವಲ ಮನುಷ್ಯ ಮಾತ್ರರೆಂದು ತಿಳಿದಿದ್ದ ಕೆಲವರ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ಬಾಬಾ "ಪೃಥ್ವಿ, ಅಪ್, ತೇಜಸ್ಸು, ವಾಯು, ಸ್ವರ್ಗ ಇವುಗಳಲ್ಲಿ ವ್ಯಾಪಿಸಿರುವ ಸರ್ವವ್ಯಾಪಿ ನಾನು" ಎಂದು ಹೇಳಿರುತ್ತಾರೆ.

ದೇವರು ಸಾಯಿ ರೂಪದಲ್ಲಿ ಅವತರಿಸಿದರು. ಯಾರು ಅವರನ್ನು ಯಾವಾಗಲೂ ಸ್ಮರಿಸುತ್ತ ಅವರನ್ನೇ ತಮ್ಮ ಏಕಮಾತ್ರ ಆಶ್ರಯವಾಗಿ ಮಾಡಿಕೊಂಡಿರುತ್ತಾರೆಯೋ ಅವರು ಸಿಹಿ ಮತ್ತು ಸಕ್ಕರೆ, ಅಲೆ ಮತ್ತು ಕಡಲು, ನೇತ್ರ ಮತ್ತು ಕಾಂತಿಯಂತೆ ಅವನಲ್ಲಿ(ದೇವರಲ್ಲಿ) ಏಕಾಗ್ರತೆಯನ್ನು ಮುಟ್ಟುತ್ತಾರೆ. ಯಾರು ಜನನ–ಮರಣಗಳೆಂಬ ವ್ಯೂಹದಿಂದ ತಪ್ಪಿಸಿಕೊಳ್ಳಲಿಚ್ಛಿಸುತ್ತಾರೆಯೋ, ಅಂಥವರು ಸತ್ಯಪರರಾಗಿರಬೇಕು. ಯಾವ ಮನುಷ್ಯನಿಗೂ ನೋವುನ್ನುಂಟು ಮಾಡುವಂಥ ಮತುಗಳನ್ನಾಡಬಾರದು. ಯಾವಾಗಲೂ ಸತ್ಯಪರವಾಗಿ ತಮ್ಮ ತನು, ಮನ, ಧನಗಳನ್ನು ಆ ಭಗವಂತನಲ್ಲಿ ಅರ್ಪಿಸಬೇಕು. ಆಗ ಅವರು ಹೆದರಬೇಕಿಲ್ಲ. ಯಾರು ಸಾಯಿಯವರನ್ನು ಯಾವಾಗಲೂ ಧ್ಯಾನಮಾಡುತ್ತ ಜಪಿಸುತ್ತಾರೆಯೋ, ಹಾಡುತ್ತಾರೆಯೋ, ಇತರ ಯೋಚನೆಗಳಿಲ್ಲದೆ ಏಕಾಗ್ರಚಿತ್ತದಿಂದ ಧ್ಯಾನ ಮಾಡುತ್ತಾರೆಯೋ, ಅವರು ಆತ್ಮಜ್ಞಾನವನ್ನು ಖಂಡತ ವಾಗಿಯೂ ಪಡೆಯುತ್ತಾರೆ.

ಬಾಬಾ ಅನೇಕರಿಗೆ "ನನ್ನನ್ನು ಯಾವಾಗಲೂ ಸ್ಮರಿಸಿರಿ. ನನ್ನಲ್ಲಿ ಆಶ್ರಯಪಡೆಯಿರಿ" ಎಂದು ಹೇಳುತ್ತಿದ್ದರು. 'ದೇವರು ಯಾರು?' ಎಂದು ತಿಳಿಯಲು ಇಚ್ಛಿಸಿದವರಿಗೆ ಶ್ರವಣ ಮತ್ತು ಮನನವನ್ನು ಅಭ್ಯಾಸ ಮಾಡುವಂತೆ ಹೇಳುತ್ತಿದ್ದರು. ಕೆಲವರಿಗೆ ಹರಿನಾಮ ಸ್ಮರಣೆಯನ್ನು ಮಾಡುವಂತೆಯೂ, ಕೆಲವರಿಗೆ ಪರಮಾತ್ಮನ ಲೀಲೆಗಳನ್ನು ಶ್ರವಣ ಮಾಡುವಂತೆಯೂ, ಕೆಲವರಿಗೆ ಹರಿಯ ಪಾದ ಪೂಜೆ ಮಾಡುವಂತೆಯೂ ಮತ್ತೆ ಕೆಲವರಿಗೆ ಉದಾತ್ತವಾದ ಪುರಾಣ ಗ್ರಂಥಗಳಾದ ಜ್ಞಾನೇಶ್ವರಿ ಮುಂತಾದ ಗ್ರಂಥಗಳನ್ನು ಓದುವಂತೆಯೂ ಹೇಳುತ್ತಿದ್ದರು. ಅನೇಕರಿಗೆ ವಿಷ್ಣು ಸಹಸ್ರನಾಮ ಪಠಣ ಮಾಡುವಂತೆ ಹೇಳುತ್ತಿದ್ದರು. ಕೆಲವರನ್ನು ತಮ್ಮ ಹತ್ತಿರ ಕೂಡ್ರಿಸಿ ಕೊಳ್ಳುತ್ತಿದ್ದರು. ಮತ್ತೆ ಕೆಲವರನ್ನು ಖಂಡೋಬ ದೇವಸ್ಥಾನಕ್ಕೆ ಕಳುಹಿಸುತ್ತಿದ್ದರು. ಮಿಕ್ಕವರಿಗೆ ಛಾಂದೋಗ್ಯೋಪನಿಷತ್ತನ್ನಾಗಲೀ, ಗೀತೆಯನ್ನಾಗಲೀ

ಪಠಿಸಲು ಹೇಳುತ್ತಿದ್ದರು. ಅವರ ಉಪದೇಶಗಳಿಗೆ ಮಿತಿಯಿರಲಿಲ್ಲ. ಕೆಲವು ಕುಡುಕರಿಗೆ ಕನಸ್ಸಿನಲ್ಲಿ ಕಾಣಿಸಿಕೊಂಡು ಅವರ ಎದೆಯ ಮೇಲೆ ಕುಳಿತು ನೋವುಮಾಡಿ ಅವರು ಕುಡಿಯುವುದಿಲ್ಲವೆಂದು ಮಾತು ಕೊಟ್ಟ ಹೊರತು ಬಿಡುತ್ತಿರಲಿಲ್ಲ. ಕೆಲವರಿಗೆ ಕನಸ್ಸಿನಲ್ಲಿ "ಗುರುರ್ ಬ್ರಹ್ಮಾದಿ" ಮಂತ್ರದ ಅರ್ಥವನ್ನು ವಿವರಿಸುತ್ತಿದ್ದರು. ಹಠಯೋಗಸಾಧಕರನ್ನು ಬರಮಾಡಿಕೊಂಡು ಅದನ್ನು ಬಿಡುವಂತೆ ಹೇಳಿ ಶಾಂತಿ ಮತ್ತು ತಾಳ್ಮೆಯನ್ನು ಬೋಧಿಸುತ್ತಿದ್ದರು. ಅವರ ರೀತಿ ನೀತಿಗಳನ್ನು ವರ್ಣಿಸಲಸಾಧ್ಯ. ಪ್ರಪಂಚದ ವ್ಯವಹಾರದಲ್ಲಿ ಸಾಮಾನ್ಯವಾಗಿ ತಮ್ಮ ಸ್ವಂತ ನಡುವಳಿಕೆಯಿಂದಲೇ ಬಾಬಾ ಪಾಠ ಕಲಿಸುತ್ತಿದ್ದರು. ಅವುಗಳಲ್ಲಿ ಒಂದನ್ನು ಕೆಳಗೆ ಕೊಟ್ಟಿದೆ.

## ಶ್ರಮಜೀವಿಗಳಿಗೆ ಸಂಭಾವನೆ

ಒಂದು ದಿನ ಮಧ್ಯಾಹ್ನ ಸಾಯಿಬಾಬಾ ಅವರು ರಾಧಾಕೃಷ್ಣಮಾಯಿ ಅವರ ಮನೆ ಬಳಿಗೆ ಬಂದು "ಏಣಿ ತೆಗೆದುಕೊಂಡು ಬನ್ನಿ" ಎಂದರು. ಕೆಲವರು ಏಣಿ ತೆಗೆದುಕೊಂಡು ಬಂದು ಬಾಬಾ ಅವರ ಆಜ್ಞೆಯಂತೆ ಗೋಡೆಗೆ ಒರಗಿಸಿದರು. ಆಗ ಅವರು ವಾಮನ ಗೋಂದಕರ ಅವರ ಮನೆ ಮೇಲೆ ಹತ್ತಿ, ರಾಧಾಕೃಷ್ಣಮಾಯಿ ಅವರ ಮನೆ ಮೇಲೆ ಬಂದು ನಂತರ ಕೆಳಗಿಳಿದರು. ಬಾಬಾ ಅವರ ಈ ನಡತೆ ಯಾರಿಗೂ ಅರ್ಥವಾಗಲಿಲ್ಲ. ರಾಧಾಕೃಷ್ಣಮಾಯಿ ಅವರು ಅಗ ಚಳಿಜ್ವರದಿಂದ ಬಳಲುತ್ತಿದ್ದರು. ಆ ಜ್ವರವನ್ನು ಹೋಗಲಾಡಿಸಲೋಸಗುಗವೇ ಬಾಬಾ ಅವರು ಹಾಗೆ ನಡೆದುಕೊಂಡರು. ಮಾಳಿಗೆಯಿಂದ ಕೆಳಗಿಳಿದ ತಕ್ಷಣ ಬಾಬಾ ಏಣಿಯನ್ನು ತಂದು ಕೊಟ್ಟವನಿಗೆ ಎರಡು ರೂ. ಗಳನ್ನು ಕೊಟ್ಟರು. ಕೆಲವರು ಧೈರ್ಯಮಾಡಿ "ಬಾಬಾ, ಇಷ್ಟು ಕೆಲಸಕ್ಕೆ ಅವನಿಗೆ ಏಕೆ ಅಷ್ಟು ಹಣ ಕೊಟ್ಟಿರಿ?" ಎಂದು ಕೇಳಿದರು. ಆಗ ಅವರು "ಇತರರ ಶ್ರಮವನ್ನು ಯಾರೂ ಪುಕ್ಕಟೆ ಪಡೆಯಬಾರದು" ಎಂದುತ್ತರಿಸಿದರು. ಕೆಲಸಗಾರರಿಗೆ

ಕೂಲಿಯನ್ನು ಧಾರಾಳವಾದ ಮನಸ್ಸಿನಿಂದ ತಪ್ಪದೆ ಕೊಡಬೇಕು. ಬಾಬಾ ಅವರ ತತ್ವವನ್ನು ಅನುಷ್ಠಾನಕ್ಕೆ ತಂದರೆ ಕೆಸಲಗಾರರಿಗೂ ಮಾಲೀಕರಿಗೂ ವಿರಸೇ ಬರುವುದಿಲ್ಲ.

ಶ್ರೀ ಸಾಯಿ ಪ್ರಣಾಮ

# ೨೦ನೇ ಅಧ್ಯಾಯ

## ಸೇವಕಿಯಿಂದ ಸಮಸ್ಯೆ ಪರಿಹಾರ

ಈ ಅಧ್ಯಾಯದಲ್ಲಿ ಕಾಕಾ ಸಾಹೇಬರು ಸೇವಕಿಯಿಂದ ದಾಸಗಣೂ ಮಹಾರಜ ಅವರ ಸಮಸ್ಯೆ ಹೇಗೆ ಪರಿಹರಿಸಲ್ಪಟ್ಟಿತು ಎಂಬುದನ್ನು ಹೇಮ್ಮಾಡಪಂತರು ವಿವರಿಸುತ್ತಾರೆ.

ಶಿರ್ಡಿಯ ಸಾಯಿ ದೇವರು ಮೊದಲು ನಿರಾಕಾರರಾಗಿದ್ದರು. ಭಕ್ತರಿಗೋಸುಗ ಆಕಾರವನ್ನು ತಾಳಿದರು. ಮಾಯೆಯ ಸಹಾಯದಿಂದ ಈ ಪ್ರಪಂಚವೆಂಬ ನಾಟಕದಲ್ಲಿ ನಟರಾಗಿ ಅಭಿನಯಿಸಿದರು. ಆದುದರಿಂದ ನಾವು "ಸಾಯಿ" ಸ್ಮರಣೆ ಮಾಡೋಣ, ಶಿರ್ಡಿಗೆ ಹೋಗಿ ಅಲ್ಲಿಯ ಮಧ್ಯಾಹ್ನದ ಆರತಿಯನ್ನು ನೋಡೋಣ. ಸಾಯಿಬಾಬಾ ಅವರು ಆರತಿಯಾದ ನಂತರ ಮಸೀದಿಯ ಜಗುಲಿ ಕೊನೆಯಲ್ಲಿ ನಿಂತುಕೊಂಡು ದಯಾಪೂರಿತರಾಗಿ ಭಕ್ತರಿಗೆ ಉಧಿಯನ್ನು ಕೊಡುತ್ತಿದ್ದರು. ಭಕ್ತರೂ ಸಹ, ಅಂತೆಯೇ ಪ್ರೀತಿ ಮತ್ತು ಭಕ್ತಿಯಿಂದ ಬಾಬಾ ಅವರ ಚರಣಾರವಿಂದಗಳಿಗೆ ನಮಸ್ಕರಿಸಿ ಉಧಿಯನ್ನು ಪಡೆಯುತ್ತಿದ್ದರು. ಭಕ್ತರ ಮೇಲಿನ ಅವರ ಪ್ರೀತಿಗೆ ಮಿತಿ ಇದ್ದಿರಲಿಲ್ಲ. ಅವರು ಭಕ್ತರನ್ನು ಕುರಿತು "ಓ ಬಾಪೂ, ಊಟಕ್ಕೆ ಹೋಗು; ಅಣ್ಣಾ, ನೀನು ಮನೆಗೆ ಹೋಗು; ಬಾಪೂ, ನೀನು ಆನಂದದಿಂದ ಊಟ ಮಾಡಿ ಬಾ" ಎಂದು ಹೇಳುತ್ತಿದ್ದರು. ಪ್ರತಿಯೊಬ್ಬ ಭಕ್ತರನ್ನು ಬಾಬಾ ಸ್ವತ: ಆದರಿಸುತ್ತಿದ್ದರು.

### ಈಶಾವಾಶೋಪನಿಷತ್

ದಾಸಗಣೂರವರು ಈಶಾವಾಶೋಪನಿಷತ್ ಮೇಲೆ ಮರಾಠಿಯಲ್ಲಿ ಭಾವಾರ್ಥ ಬರೆಯಲು ತೊಡಗಿದರು. ಮುಂದುವರಿಯುವ ಮೊದಲು ಉಪನಿಷತ್ತಿನ ಬೋಧವನ್ನು ಸೂಕ್ಷ್ಮವಾಗಿ ವಿವರಿಸೋಣ. ಈಶಾವಾಶೋಪನಿಷತ್ತನ್ನು ಮಂತ್ರೋಪನಿಷತ್ ಎಂದೂ

ಕರೆಯಬಹುದು. ಏಕೆಂದರೆ ಇದರಲ್ಲಿ ವೇದ ಸಂಹಿತೆಗಳೆಲ್ಲವೂ ಅಡಗಿವೆ. ಇದು ಎಲ್ಲಾ ಗ್ರಂಥಗಳಿಗಿಂತಲೂ ಶ್ರೇಷ್ಠವಾದದ್ದು. ಈಶಾವಾಶೋಪನಿಷತ್ತಿನಲ್ಲಿರುವ ಸತ್ಯಾಂಶಗಳ ಟೀಕೆಗಳೇ ಇನ್ನುಳಿದ ಉಪನಿಷತ್‌ಗಳು. ಉದಾಹರಣೆಗಾಗಿ ಹೇಳುವುದಾದರೆ ಅತಿದೊಡ್ಡ ಬೃಹದಾರಣ್ಯಕ ಉಪನಿಷತ್ತು ಈಶಾವಾಶೋಪನಿಷತ್ತಿನ ಟೀಕಾವ್ಯಾಖ್ಯಾನವೆಂದು ಪಂಡಿತ ಸಾಂತವಾಳೇಕರ ಅವರು ಹೇಳಿರುತ್ತಾರೆ. ಪ್ರೊ. ರಾನಡೆಯವರ ಪ್ರಕಾರ ಈಶಾವಾಶೋಪನಿಷತ್ತು ಸಣ್ಣ ಗ್ರಂಥವಾದರೂ ಅದರಲ್ಲಿ ಅಮೂಲ್ಯವಾದ ಅನೇಕ ನೀತಿಗಳಿವೆ, ಅದರಲ್ಲಿರುವ ೧೮ ಶ್ಲೋಕಗಳಲ್ಲಿ ಅಮೂಲ್ಯವಾದ "ಆತ್ಮ"ದ ಗೂಢ ವಿವರಣೆಯೂ, ದು:ಖ ಮತು ಮೋಹದ ಮಧ್ಯೆ ನಿಶ್ಚಲನಾಗಿ ನಿಂತಿರಬಲ್ಲ ಆದರ್ಶ ಯೋಗಿಯ ವರ್ಣನೆಯೂ, ಕರ್ಮಯೋಗ ತತ್ವವೂ, ಕಡೆಯದಾಗಿ ಜ್ಞಾನ ಮತ್ತು ಕರ್ಮದ ಪರಸ್ಪರ ಸಂಧಾನವೂ ಪ್ರತಿಪಾದಿತವಾಗಿವೆ. ಜ್ಞಾನ ಮತ್ತು ಕರ್ಮದ ನ್ಯಾಯರೀತಿಯ ಸಂಯೋಗವು ಅವುಗಳ ಉದಾತ್ತವಾದ ಏಕೀಕರಣಕ್ಕೆ ಅತ್ಯವಶ್ಯಕವಾದದ್ದು ಎಂಬುದೇ ಉಪನಿಷತ್ತಿನ ಮೂಲದಲ್ಲಿರುವ ಅಮೂಲ್ಯ ಸಂದೇಶ. ಬೇರೆ ವಿಧದಲ್ಲಿ ಹೇಳುವುದಾದರೆ, ಈಶಾವಾಶೋಪನಿಷತ್ತಿನ ಶ್ಲೋಕಗಳು ನೀತಿಯ ಆಧ್ಯಾತ್ಮ ವಿದ್ಯೆಯ ಮತ್ತು ಬ್ರಹ್ಮಜ್ಞಾನದ ಮಿಶ್ರಣವೆಂದು ಹೇಳಬಹುದು. ಈ ಒಂದು ಸಂಕ್ಷಿಪ್ತ ಪರಿಚಯದಿಂದಲೇ ಉಪನಿಷತ್ತನ್ನು ದೇಶಿ ಭಾಷೆಗೆ ಭಾಷಾಂತರ ಮಾಡುವುದು ಎಷ್ಟು ಕಷ್ಟವೆಂಬುದನ್ನು ನಾವು ಊಹಿಸಬಹುದು. ದಾಸಗಣೂ ಅವರು ಪ್ರತಿಯೊಂದು ಶ್ಲೋಕವನ್ನು ಮರಾಠಿಗೆ ಭಾಷಾಂತರ ಮಾಡಿದರು. ಆದರೂ ಅವರಿಗೆ ತೃಪ್ತಿಯಾಗಲಿಲ್ಲ. ಈ ರೀತಿ ಅತೃಪ್ತಿಯಿಂದ ತಮ್ಮ ಅನುಮಾನಗಳನ್ನು ಹೋಗಲಾಡಿಸಿಕೊಳ್ಳಲು ಅನೇಕರನ್ನು ವಿಚಾರಿಸಿದರು. ಯಾರಿಂದಲೂ ಅವರ ಅನುಮಾನಗಳ ಪರಿಹಾರವಾಗದೆ ಅವು ಹಾಗೇಯೇ ಉಳಿದುಕೊಂಡು ಅವರನ್ನು ಮತ್ತಷ್ಟು ಅತೃಪ್ತರನ್ನಾಗಿ ಮಾಡಿದವು.

## ಗುರುವಿನಿಂದಲೇ ಪರಿಹಾರ ಸಾಧ್ಯ

ಈಶಾವಾಶೋಪನಿಷತ್ತು ಎಲ್ಲ ವೇದಗಳ ಆಗರವಾಗಿರುತ್ತದೆ. ಆತ್ಮಜ್ಞಾನದ ವಿಜ್ಞಾನ ಜನನ–ಮರಣಗಳೆಂಬ ಬಂಧನದಿಂದ ನಮ್ಮನ್ನು ಮುಕ್ತರನ್ನಾಗಿ ಮಾಡುವ ಆಯುಧ. ಅದುದರಿಂದ ಯಾರು ಆತ್ಮಜ್ಞಾನವನ್ನು ಪಡೆದಿರುತ್ತಾರೆಯೋ, ಅವರೇ ಸರಿಯಾದ ಅರ್ಥವನ್ನು ನೀಡಬಲ್ಲರು ಎಂದು ದಾಸಗಣೂ ಯೋಚಿಸಿದರು. ಯಾರಿಂದಲೂ ಪರಿಹಾರವಾಗದಂಥ ಅನುಮಾನಗಳನ್ನು ಶ್ರೀಸಾಯಿಬಾಬಾ ಅವರಿಂದ ಪರಿಹರಿಸಿಕೊಳ್ಳಬಹುದೆಂದು ಶಿರ್ಡಿಗೆ ಬಂದು ಈಶಾವಾಶೋಪನಿಷತ್ತಿನ ಭಾಷಾಂತರದಲ್ಲಿ ತಮಗೆ ಬಂದಿರುವ ಅನುಮಾನವನ್ನು ಸೂಕ್ತ ವಿವರಣೆಯಿಂದ ಪರಿಹರಿಸಬೇಕೆಂದು ಬಾಬಾ ಅವರಲ್ಲಿ ಬೇಡಿದರು. ಆಗ ಬಾಬಾ ಅವರು ಅವರನ್ನು ಆಶೀರ್ವದಿಸಿ "ಚಿಂತಿಸಬೇಡ– ಅದರಲ್ಲೇನಿದೆ? ವಿಲೇ ಪಾರ್ಲೆಯಲ್ಲಿರುವ (ಮುಂಬಯಿಯ ಬಡಾವಣೆ) ಕಾಕಾ ಅವರ ಮನೆ ಕೆಲಸದವಳಿಂದ ನಿನ್ನ ಅನುಮಾನ ಪರಿಹಾರವಾಗುತ್ತದೆ – ಹೋಗು" ಎಂದರು. ಆಗ ಅಲ್ಲಿದ್ದವರೆಲ್ಲರೂ ಬಾಬಾ ಹಾಸ್ಯ ಮಾಡುತ್ತಿರಬಹುದು. ನಿರಕ್ಷರಸ್ಥಳಾದ ಸೇವಕಿಯಿಂದ ಹೇಗೆ ಸಂಶಯ ಪರಿಹಾರವಾದೀತು? ಎಂದು ಅನುಮಾನ ಪಟ್ಟರು. ಆದರೆ ದಾಸಗಣೂ ಅವರು ಬಾಬಾ ಅವರು ನುಡಿದದ್ದು ನಿಜವಾಗಲೇ ಬೇಕು ಎಂದುಕೊಂಡು ಶಿರ್ಡಿಯಿಂದ ಹೊರಟರು.

### ಕಾಕಾ ಅವರ ಸೇವಕಿ

ನಂತರ ದಾಸಗಣೂ ಬಾಬಾರವರ ಮಾತಿನಲ್ಲಿ ನಂಬಿಕೆ ಇಟ್ಟು ಶಿರ್ಡಿಯಿಂದ ವಿಲೇಪಾರ್ಲೆಯಲ್ಲಿದ್ದ ಕಾಕಾಸಾಹೇಬ ದೀಕ್ಷಿತರ ಮನೆಗೆ ಬಂದು ತಂಗಿದರು. ಮಾರನೇ ದಿನ ದಾಸಗಣೂರವರು ಮಲಗಿದಾಗ ನಸುಕಿನಲ್ಲಿ (ಅವರು ಪೂಜೆ ಮಾಡುತ್ತಿದ್ದಾಗ ಎಂದು ಕೆಲವರು ಹೇಳಿದ್ದಾರೆ) ಒಬ್ಬ ಹುಡುಗಿ ಇಂಪಾಗಿ ಹಾಡಿದ ಹಾಡು

ಕೇಳಿದರು. ಕೆಂಪು ಬಣ್ಣದ ಸೀರೆ! ಎಷ್ಟು ಚೆನ್ನಾಗಿದೆ! ಜರಿಯೆಷ್ಟ ಹೊಳೆಯುತ್ತಿದೆ! ಎಂಬುದೇ ಆ ಹಾಡಿನ ಭಾವಾರ್ಥ. ಆ ಹಾಡನ್ನು ಕೇಳಿ ಅವರು ಸಂತೋಷದಿಂದ ಹೊರಗೆ ಬಂದು ನೋಡಲು ಸೇವ ನಾಮ್ಯಾನ ತಂಗಿ ಹಾಡುತ್ತಿರುವುದನ್ನು ಕಂಡರು. ಕಾಕಾ ಅವರ ಮನೆಗೆಲಸದವಳಾದ ಆ ಹುಡುಗಿ ಹರಿದ ಸೀರೆಯನ್ನುಟ್ಟುಕೊಂಡು ಪಾತ್ರೆ ತೊಳೆಯುತ್ತ ಹಾಡುತ್ತಿದ್ದಳು. ಅವಳ ಬಡತನ ಮತ್ತು ಆನಂದವನ್ನು ನೋಡಿದ ದಾಸಗಣೂ ಮರುದಿನ ರಾವಬಹದ್ದೂ ಎಂ.ವ್ಹಿ. ಪ್ರಧಾನ ಅವರು ತಮಗಾಗಿ ತಂದಿದ್ದ ಎರಡು ಧೋತರಗಳನ್ನು ನೋಡಿ ಆ ಹುಡುಗಿಗೂ ಒಂದು ಸೀರೆ ತಂದು ಕೊಡುವಂತೆ ಹೇಳಿದರು. ಅದರಂತೆ ಅವರು ಆ ಹುಡುಗಿಗೆ ಒಂದು ಸೀರೆ ತಂದು ಕೊಟ್ಟರು. ಅಂದು ಅವಳ ಆನಂದಕ್ಕೆ ಪಾರವೇ ಇರಲಿಲ್ಲ. ಮಾರನೆ ದಿನ ಆ ಹುಡುಗಿ ಹೊಸ ಸೀರೆಯನ್ನುಟ್ಟುಕೊಂಡು ಎಲ್ಲ ಹುಡುಗಿಯರ ಜೊತೆಯಲ್ಲಿ ಆಟವಾಡಿ ನಲಿಯುತ್ತಿದ್ದಳು. ಮರುದಿನ ಮತ್ತೆ ಆ ಹರಿದ ಸೀರೆಯನ್ನುಟ್ಟುಕೊಂಡೇ ಕೆಲಸಕ್ಕೆ ಬಂದಳು. ಅಂದೂ ಸಹ ಅಷ್ಟೇ ಆನಂದದಿಂದಿದ್ದಳು. ಆಗ ದಾಸಗಣೂರವರ ದಯೆ ಹೊಗಳಿಕೆ ಮಾರ್ಪಾಟಾಯಿತು. ಆ ಬಡ ಹುಡುಗಿಯು ಹರಿದ ಸೀರೆಯನ್ನೇ ಉಟ್ಟುಕೊಳ್ಳಬೇಕಿತ್ತು. ಅವಳಿಗೆ ಹೊಸ ಸೀರೆ ದೊರೆತರೂ ಸಹ ಅದನ್ನು ಪೆಟ್ಟಿಗೆಯಲ್ಲಿ ಇಟ್ಟು ಹರಿದ ಸೀರೆಯನ್ನೇ ಉಟ್ಟುಕೊಂಡು ಬಂದಳಲ್ಲವೇ? ಆದರೂ ಅವಳಲ್ಲಿ ತಿಲ ಮಾತ್ರವೂ ದು:ಖವಿರಲಿಲ್ಲ ಎಂದು ಯೋಚಿಸಿ, ನಮ್ಮ ಸುಖ-ದು:ಖಗಳು ನಮ್ಮ ಮನಸ್ಸನ್ನವಲಂಬಿಸಿರುತ್ತವೆ ಎಂಬುದನ್ನು ದಾಸಗಣೂ ಮನಗಂಡರು ಈ ಘಟನೆಯನ್ನು ಕೂಲಂಕುಷವಾಗಿ ವಿಚಾರಿಸಿ ದೇವರು ಕೊಟ್ಟಿದುದರಲ್ಲಿ ತೃಪ್ತಿ ಪಡೆಯಬೇಕು, ಅವನು ನಮ್ಮನ್ನು ಯಾವಾಗಲೂ ರಕ್ಷಿಸುತ್ತಾನೆ, ಅವನಿಂದ ದೊರೆಯುವುದೆಲ್ಲವೂ ನಮಗೆ ಒಳ್ಳೆಯದಾಗಿ ಪರಿಣಮಿಸುತ್ತದೆ, ಎಂಬುದನ್ನೂ ಸಹ ದಾಸಗಣೂ ಅರಿತರು.

## ಅದ್ವಿತೀಯ ಬೋಧನೆ

ಈ ಮೇಲ್ಕಂಡ ಘಟನೆಯಿಂದ ಬಾಬಾರವರ ಅದ್ವಿತೀಯ ರೀತಿ ವ್ಯಕ್ತವಾಗುತ್ತದೆ. ಅವರು ಶಿರ್ಡಿಯನ್ನು ಬಿಟ್ಟು ಕದಲದೇ ಇದ್ದರೂ ಕೆಲವರನ್ನು ಮಚ್ಛಿಂದ್ರಗಡಕ್ಕೂ ಕೆಲವರನ್ನು ಕೊಲ್ಹಾಪುರಕ್ಕೂ ಸಾಧನೆಯ ಸಲುವಾಗಿ ಕಳುಹಿಸುತ್ತಿದ್ದರು. ಕೆಲವರಿಗೆ ಪ್ರತ್ಯಕ್ಷ ರೂಪದಲ್ಲಿಯೂ ಕೆಲವರಿಗೆ ಜಾಗೃತಾವಸ್ಥೆಯಲ್ಲಿಯೂ, ಕೆಲವರಿಗೆ ಕನಸಿನಲ್ಲಿಯೂ ಕಾಣಿಸಿಕೊಂಡು ಅವರ ಆಸೆಗಳನ್ನೀಡೇರಿಸುತ್ತಿದ್ದರು. ಮೇಲೆ ಹೇಳಿದಂತೆ ದಾಸಗಣೂ ಅವರನ್ನು ಅನುಮಾನ ಪರಿಹಾರಕ್ಕೋಸುಗ ವಿಲೇಪಾರ್ಲೆಯಲ್ಲಿದ್ದ ಕಾಕಾರವರ ಮನೆಗೆಲಸದವಳ ಬಳಿಗೆ ಕಳುಹಿಸಿದರು. ಅವರನ್ನು ಅಲ್ಲಿಗೆ ಕಳುಹಿಸುವ ಅವಶ್ಯಕತೆ ಇರಲಿಲ್ಲ. ಬಾಬಾರವರೇ ನೇರವಾಗಿ ಅನುಮಾನ ಪರಿಹರಿಸಬಹುದಾಗಿತ್ತೆಂದು ಕೇಳುವ ಕೆಲವರಿಗೆ "ಬಾಬಾ ಅವರ ರೀತಿ–ನೀತಿಗಳು ಅತರ್ಕ್ಯವಾದವುಗಳು. ಇಲ್ಲದಿದ್ದರೆ ಕೂಲಿ ಕೆಲಸ ಮಾಡುವವಳು ಮತ್ತು ಅವಳ ಸೀರೆ ಇವುಗಳಲ್ಲಿಯೂ ಪರಮಾತ್ಮನು ವ್ಯಾಪಿಸಿದ್ದಾನೆ ಎಂಬ ಉದಾತ್ತವಾದ ನೀತಿಯನ್ನು ದಾಸಗಣೂ ಅವರು ಹೇಗೆ ಕಲಿಯುತ್ತಿದ್ದರು?" ಎಂದು ನಾವು ಹೇಳಬಯಸುತ್ತೇವೆ.

ಈಗ ಉಪನಿಷತ್ತಿನ ಇನ್ನೊಂದು ಉದಾಹರಣೆಯಿಂದ ಈ ಅಧ್ಯಾಯವನ್ನು ಮುಗಿಸೋಣ.

ನೀತಿ–ತತ್ವಗಳ ಬೋಧನೆಯೇ ಈಶಾವಾಶೋಪನಿಷತ್ತಿನ ಮುಖ್ಯ ಭಾವ. ಅದರಲ್ಲಿರುವ ಆಧ್ಯಾತ್ಮಿಕ ಜ್ಞಾನದ ಆದಾರದಿಂದ ಈ ನೀತಿ–ತತ್ವಗಳು ಹುಟ್ಟಿಕೊಂಡಿವೆ. ಉಪನಿಷತ್ತಿನ ಮೊದಲ ವಾಕ್ಯದಲ್ಲಿಯೇ "ಪರಮಾತ್ಮನು ಸರ್ವವ್ಯಾಪಿ" ಎಂದು ಹೇಳಲಾಗಿದೆ. ದೇವರು ಸರ್ವವ್ಯಾಪಿ. ಅವನು ದಯಪಾಲಿಸುವುದೆಲ್ಲವೂ ನಮಗೆ ಒಳ್ಳೆಯದೇ; ಅವನು ಕೊಟ್ಟಿರುವುದರಲ್ಲಿ ತೃಪ್ತಿ ಪಡೆಯಬೇಕು" ಎಂಬ ನೀತಿ–ತತ್ವ ಅಡಗಿದೆ. ಈ ಉಪನಿಷತ್ತಿನಲ್ಲಿ, ಶಾಸ್ತ್ರಗಳಲ್ಲಿ ಹೇಳಿರುವಂತೆ ಮಾನವನು

ತನ್ನ ಕರ್ಮವನ್ನು ತಾನು ಮಾಡಬೇಕು; ಕರ್ಮಭ್ರಷ್ಟನಾಗಬಾರದು ಎಂಬುದು ನೀತಿ. ಸೋಮಾರಿತನವು ಉಪನಿಷತ್ತಿನ ಪ್ರಕಾರ ಆತ್ಮವನ್ನು ಕೊರೆಯುವ ರೋಗ. ಉಪನಿಷತ್ತು, ಮುಂದುವರೆದು ಯಾರು ತಮ್ಮ ಆತ್ಮದಲ್ಲಿ ಸಕಲ ಜೀವರಾಶಿಗಳನ್ನು ನೋಡಬಲ್ಲರೋ, ಮತ್ತು ಜೀವರಾಶಿಗಳಲ್ಲಿ ಆತ್ಮವನ್ನು ಕಾಣಬಲ್ಲರೋ ಅಂಥವರು ಬುದ್ಧಿಗೇಡಿತನದಿಂದ ನರಳಲಾರದೀತೆ, ಎಂದು ಕೇಳಿದೆ. ಯಾವಾಗ ನಾವು ಸಕಲ ಜೀವರಾಶಿಗಳಲ್ಲಿ "ಆತ್ಮ"ವನ್ನು ನೋಡಲಾರೆವೋ ಆಗ ಅಜ್ಞಾನ, ದುಃಖ ಮತ್ತು ಅಸಹ್ಯತೆ ಉಂಟಾಗುತ್ತವೆ. ಸಕಲ ಜೀವರಾಶಿಗಳು ಒಂದೇ ಎಂಬ ಅಂತರ್ಮುಖಿ ದೃಷ್ಟಿಯುಳ್ಳವನಿಗೆ ಪ್ರಾಪಂಚಿಕ ದುಃಖಗಳೇನೂ ಮಾಡಲಾರವು.

## ಶ್ರೀ ಸಾಯಿ ಪ್ರಣಾಮ

# ೨೧ನೇ ಅಧ್ಯಾಯ

## ವಿನಾಯಕ ಠಾಕೂರ – ಅನಂತಾವ ಪಾಟಣಕರ– ಪಂಢರಪುರದ ವಕೀಲ– ಇವರ ಕಥೆಗಳು

ಪೂರ್ವಜನ್ಮದ ಪುಣ್ಯ ವಿಶೇಷಗಳ ರೂಪದಲ್ಲಿ ನಮ್ಮ ಅದೃಷ್ಟದಿಂದ ನಮಗೆ ಸಾಧು ಸಂತರ ಸಂಪರ್ಕ ಬಂದು ನಮ್ಮ ಕಲ್ಯಾಣವಾಗುತ್ತದೆ ಎಂದು ತೋರಿಸಲು ಗ್ರಂಥಕರ್ತರು ತಮಗೆ ಸಂಭವಿಸಿದ ಒಂದು ಘಟನೆಯನ್ನು ವಿವರಿಸಿರುತ್ತಾರೆ. ಹೇಮಾಡಪಂತರು ಕೆಲವು ಕಾಲ ಬಾಂದ್ರಾದಲ್ಲಿ ಮ್ಯಾಜಿಸ್ಟ್ರೇಟ್ ಆಗಿದ್ದರು. ಪಿರಾ ಮೌಲಾನಾ ಎಂಬ ಪ್ರಸಿದ್ಧ ಮಹಾಯೋಗಿ ಅಲ್ಲಿದ್ದರು. ಹಿಂದೂಗಳು, ಪಾರ್ಸಿಗಳು ಮತ್ತು ಇತರ ಮತದವರು ಅವರಲ್ಲಿಗೆ ಹೋಗಿ ದರ್ಶನ ಪಡೆದು ಬರುತ್ತಿದ್ದರು. ಇನೂಸ ಮುಜಾವಾರ ಎಂಬುವನು ಹೇಮಾಡಪಂತರಿಗೆ ಆ ಸಾಧುವಿನ ದರ್ಶನ ಪಡೆಯುವಂತೆ ಹೇಳುತ್ತಿದ್ದನು. ಆದರೆ ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಕೆಲವು ಕಾಲದ ನಂತರ ಅವರ ಸರದಿ ಬಂದು ಶಿರ್ಡಿಯಲ್ಲಿ ಸಾಯಿ – ದರ್ಬಾರದ ಪ್ರಮುಖ ವ್ಯಕ್ತಿಗಳಾದರು. ದುರದೃಷ್ಟಶಾಲಿಗಳಿಗೆ ಸಾಧು –ಸಂತರ ಸಂಪರ್ಕ ಬರುವುದಿಲ್ಲ. ಅದೃಷ್ಟವಂತರಿಗೆ ಮಾತ್ರ ಅದು ಲಭಿಸುತ್ತದೆ.

## ಸಾಧುಗಳ ವಿಧ್ಯಾಲಯ

ಈ ಪ್ರಪಂಚದಲ್ಲಿ ಬಹಳ ಪುರಾತನ ಕಾಲದಿಂದಲೂ ಸಾಧುಗಳ ವಿಧ್ಯಾಲಯಗಳಿವೆ. ಅನೇಕ ಸಾಧುಗಳು ಅನೇಕ ಸ್ಥಳಗಳಲ್ಲಿ ಅವತರಿಸಿ ಪರಮಾತ್ಮನಿಂದ ನಿಯಮಿಸಲ್ಪಟ್ಟ ಧ್ಯೇಯವನ್ನು ಕಾರ್ಯಗತ ಮಾಡುತ್ತಾರೆ. ಬೇರೆ ಬೇರೆ ಸ್ಥಳಗಳಲ್ಲಿದ್ದರೂ ಸಹ ಅವರೆಲ್ಲರೂ ಒಂದೇ ಈ ಪರಮಾತ್ಮನ ಆಜ್ಞೆಯಂತೆ ಎಲ್ಲರೂ ಒಗ್ಗಟ್ಟಿನಿಂದ ಧ್ಯೇಯ ಸಾಧುಕರಾಗಿ ಕಾರ್ಯತತ್ಪರರಾಗಿರುತ್ತಾರೆ. ಇದನ್ನು ಉದಹರಿಸುವ ಒಂದು ಸಂಗತಿ ಈ ರೀತಿ ಇದೆ.

## ಶ್ರೀ ಠಾಕೂರ

ರೆವಿನ್ಯೂ ಇಲಾಖೆಯಲ್ಲಿ ಗುಮಾಸ್ತರಾಗಿದ್ದ ಶ್ರೀ ವಿನಾಯಕ ಠಾಕೂರರು ಸರ್ವೆ ಪಾರ್ಟಿಯ ಸಂಗಡ ಬೆಳಗಾವಿ ಹತ್ತಿರದ ವಡಗಾವಿಗೆ ಬಂದರು. ಅಲ್ಲಿ ಕರ್ನಾಟದ ಸಾಧುವೊಬ್ಬರನ್ನು ಸಂದರ್ಶಿಸಿ ನಮ್ಕರಿಸಿದರು. ಆ ಸಮಯದಲ್ಲಿ ಅವರು ಶ್ರೋತೃಗಳಿಗೆ ನಿಶ್ಚಲದಾಸರಿಂದ ರಚಿತವಾದ "ವಿಚಾರಸಾಗರ"ದ ಕೆಲವು ಭಾಗಗಳನ್ನು ವಿವರಿಸುತ್ತಿದ್ದರು. ಠಾಕೂರರು ಅವರಿಗೆ ನಮಸ್ಕರಿಸಿ ಹೊರಟಾಗ "ನೀನು ಈ ಪುಸ್ತಕವನ್ನು ಓದಲೇ ಬೇಕು, ಇದನ್ನು ಓದಿದರೆ ನಿನ್ನ ಅಭೀಷ್ಟಗಳೆಲ್ಲವೂ ಈಡೇರುವುವು. ನೀನು ನಿನ್ನ ಕಾರ್ಯಕ್ಕೋಸ್ಕರ ಮುಂದೆ ಉತ್ತರ ದಿಕ್ಕಿಗೆ ಪ್ರಯಾಣ ಮಾಡುವೆ. ನಿನ್ನ ಅದೃಷ್ಟ ಬಲದಿಂದ ನಿನಗೆ ಒಬ್ಬ ಮಹಾಸಾಧುವಿನ ದರ್ಶನವಾಗುತ್ತದೆ. ಅವರು ನಿನಗೆ ಮಾರ್ಗದರ್ಶಕರಾಗಿ ಸಂತಸವನ್ನು ಉಂಟು ಮಾಡುತ್ತಾರೆ" ಎಂದು ಆ ಸಾಧು ನುಡಿದರು. ಇದಾದ ಕೆಲವು ದಿನಗಳ ನಂತರ ಠಾಕೂರರಿಗೆ ಜುನ್ನರಿಗೆ ವರ್ಗವಾಯಿತು. ಜುನ್ನರಿಗೆ ಹೋಗಲು ನ್ಹಾಣೆ ಘಟ್ಟವನ್ನು ದಾಟಬೇಕಿತ್ತು. ಘಟ್ಟ ಬಹಳ ಬಿಕ್ಕಟ್ಟಾಗಿದ್ದರಿಂದ ಅಲ್ಲಿ ಯಾವ ವಾಹನ ಸಂಚಾರಕ್ಕೂ ಆಸ್ಪದವಿರಲಿಲ್ಲ. ಕೋಣದ ಮೇಲೆ ಸವಾರಿ ಮಾಡಿ ಅದನ್ನು ದಾಟಬೇಕಿತ್ತು. ಆದುದರಿಂದ ಅವರು ಸಹ ಕೋಣದ ಸಹಾಯದಿಂದ ಘಟ್ಟ ದಾಟಿದರು. ಜುನ್ನರದಲ್ಲಿ ಕೆಲವು ದಿನ ಕೆಲಸ ಮಾಡಿದರು. ನಂತರ ಕಲ್ಯಾಣಕ್ಕೆ ವರ್ಗವಾಯಿತು. ಅಲ್ಲಿ ನಾನಾಸಾಹೇಬರ ಸಂಪರ್ಕ ಅವರಿಗೆ ಬಂದಿತು. ಅವರಿಂದ ಸಾಯಿಬಾಬಾರವರ ಬಗ್ಗೆ ತಿಳಿದು ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆಯಬೇಕೆಂಬ ಆಕಾಂಕ್ಷೆ ಅವರಲ್ಲಿ ಮೂಡಿತು. ಮರುದಿನ ನಾನಾ ಅವರು ಶಿರ್ಡಿಗೆ ಹೊರಡಬೇಕಿತ್ತು. ಠಾಕೂರರವರನ್ನೂ ಬರಲು ಅಹ್ವಾನಿಸಿದರು. ಆದರೆ ಠಾಕೂರರಿಗೆ ಠಾಣಾ ಸಿವಿಲ್ ನ್ಯಾಯಾಲಯದಲ್ಲಿ ಒಂದು ವಿಚಾರಣೆ ಇದ್ದುದರಿಂದ ಅವರು ಹೊರಡಲಿಲ್ಲ.

ನಾನಾ ಒಬ್ಬರೇ ಶಿರ್ಡಿಗೆ ಹೋದರು. ನಂತರ ಠಾಕೂರರು ಠಾಣಕ್ಕೆ ಹೋಗಿ ನೋಡಿದಾಗ ಮೊಕ್ಕದ್ದಮೆ ಮುಂದೂಡಲ್ಪಟ್ಟಿದ್ದಿತು. ಆಗ ಅವರು ನಾನಾ ಅವರ ಸಂಗಡ ಹೋಗದಿದ್ದುದಕ್ಕೆ ವ್ಯಥೆಪಟ್ಟುಕೊಂಡರು. ನಂತರ ಅವರು ಒಬ್ಬರೇ ಶಿರ್ಡಿಗೆ ಹೊರಟರು. ಅವರು ಶಿರ್ಡಿಗೆ ಬರುವ ಹೊತ್ತಿಗೆ ಚಾಂದೋರಕರ ಹಿಂತಿರುಗಿದ್ದರು. ಅಲ್ಲಿದ್ದ ಕೆಲವು ಸ್ನೇಹಿತರು ಠಾಕೂರರನ್ನು ಬಾಬಾ ಹತ್ತಿರ ಕರೆದುಕೊಂಡು ಹೋದರು. ಠಾಕೂರರು ಬಾಬಾ ಅವರಿಗೆ ನಮಸ್ಕಾರ ಮಾಡಿದರು. ಆಗ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಸರ್ವಜ್ಞ ಮೂರ್ತಿಯಾದ ಬಾಬಾ "ಇಲ್ಲಿಯ ದಾರಿ, ಆ ಕಾನಡಿ ಅಪ್ಪಾ ಹೇಳಿದಷ್ಟು ಸುಗಮವಲ್ಲ. ನ್ಹಾಣೆ ಘಟ್ಟದಲ್ಲಿ ಕೋಣದ ಮೇಲೆ ಸವಾರಿ ಮಾಡಿದಷ್ಟು ಅದು ಸುಲಭವಲ್ಲ. ಆಧ್ಯಾತ್ಮಿಕ ಪಥದಲ್ಲಿ ನೀನು ಬಹಳ ಶ್ರಮಿಸಬೇಕು" ಎಂದರು. ಇದನ್ನು ಕೇಳಿದ ಠಾಕೂರರು "ಕರ್ನಾಟಕ ಸಾಧುವಿನ ಹೇಳಿಕೆ ನನಗೊಬ್ಬನಿಗೆ ಮಾತ್ರ ತಿಳಿದಿದೆ. ಇನ್ನಾರಿಗೂ ತಿಳಿದಿಲ್ಲ. ಬಾಬಾ ಅವರಿಗೆ ಇದು ಹೇಗೆ ಗೊತ್ತಾಯಿತು" ಎಂದು ಯೋಚಿಸಿ ಬಾಬಾ ಅವರ ಸರ್ವಜ್ಞತೆಯನ್ನರಿತು ಆನಂದ ಭರಿತರಾಧರು. ಕರ್ನಾಟಕ ಸಾಧುವಿನ ಹೇಳಿಕೆ ನಿಜವಾಯಿತು.

ಆಗ ಠಾಕೂರರು ಪುನಃ ಬಾಬಾ ಅವರ ಚರಣಗಳಿಗೆ ಎರಗಿ ತಮ್ಮನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸಿಕೊಂಡರು. ಆಗ ಬಾಬಾ "ಅಪ್ಪಾ ಹೇಳಿದುದೆಲ್ಲ ಸರಿ. ಅದನ್ನು ("ವಿಚಾರಸಾಗರ" ಗ್ರಂಥವನ್ನು) ಅಭ್ಯಾಸ ಮಾಡು. ಬರಿ ಪಠಣದಿಂದ ಪ್ರಯೋಜನವಿಲ್ಲ. ನೀನು ಓದಿದುನ್ನು ಕಾರ್ಯರೂಪದಲ್ಲಿ ಮಾಡಿ ತೋರಿಸಬೇಕು. ಗುರುಕೃಪಾರಹಿತ ವಿದ್ಯೆ ಮತ್ತು ಅನುಭವಜ್ಞಾನರಹಿತ ವಿದ್ಯೆ ನಿಷ್ಪ್ರಯೋಜಕ" ಎಂದು ಹೇಳಿದರು. ಠಾಕೂರರು "ವಿಚಾರಸಾಗರ" ಗ್ರಂಥದ ಪಾರಾಯಣ ಮಾತ್ರ ಮಾಡಿದ್ದರು ಆದರೆ ಶಿರ್ಡಿಯಲ್ಲಿ ಅದರ ಪ್ರಾಯೋಗಿಕ ರೀತಿಯನ್ನು ಈಗ ಕಂಡರು.

## ಅನಂತರಾವ ಪಾಟಣಕರ

ಒಮ್ಮೆ ಪುಣೆಯ ಶ್ರೀ ಪಾಟಣಕರರಿಗೆ ಬಾಬಾರವರನ್ನು ಕಾಣಬೇಕೆಂಬ ಆಶೆಯುಂಟಾಯಿತು. ಶಿರ್ಡಿಗೆ ಬಂದು ಬಾಬಾರವರ ದರ್ಶನ ಪಡೆದರು. ಬಾಬಾರವರ ಚರಣಗಳಿಗೆರಗಿ ಪೂಜೆಯ ನಂತರ ಅವರನ್ನು ಕುರಿತು, "ಬಾಬಾ, ನಾನು ಬಹಳ ಓದಿದ್ದೇನೆ, ವೇದ, ವೇದಾಂತ ಮತ್ತು ಉಪನಿಷತ್ತು ಎಲ್ಲವನ್ನೂ ಅಭ್ಯಾಸ ಮಾಡಿರುತ್ತೇನೆ. ಪುರಾಣಗಳೆಲ್ಲವನ್ನೂ ಕೇಳಿರುತ್ತೇನೆ. ಆದರೂ ನನ್ನ ಮನಸ್ಸಿಗೆ ಶಾಂತಿ ದೊರಕಿಲ್ಲ. ನನ್ನ ಎಲ್ಲ ಓದು ನಿಷ್ಪ್ರಯೋಜಕವಾಗಿದೆ. ಮೂಢಾತ್ಮರೇ ನನಗಿಂತ ಎಷ್ಟೋ ಮೇಲು. ನೀವು ಮನಸ್ಸಿಗೆ ಶಾಂತಿಯನ್ನು ಉಂಟು ಮಾಡುವಿರೆಂದು ಕೇಳಿ ನಿಮ್ಮಲ್ಲಿಗೆ ಬಂದಿದ್ದೇನೆ. ನನ್ನ ಮೇಲೆ ದಯೆ ಇಟ್ಟು ನನ್ನನ್ನು ಆಶೀರ್ವದಿಸಿರಿ" ಎಂದು ಬೇಡಿಕೊಂಡರು. ಆಗ ಬಾಬಾ ಅವರಿಗೆ ಈ ಕೆಳಕಂಡ ನೀತಿಕಥೆಯನ್ನು ಹೇಳಿದರು.

## ನವ ವಿಧ ಭಕ್ತಿ

"ಒಂದು ಸಾರೆ ವರ್ತಕನೊಬ್ಬನು ಇಲ್ಲಿಗೆ ಬಂದನು ಅವನ ಮುಂದೆ ಒಂದು ಕುದುರೆ ಲದ್ದಿ ಹಾಕಿತು. ಆ ವರ್ತಕನು ಕೂಡಲೆ ತನ್ನ ಬಟ್ಟೆಯನ್ನು ನೆಲಕ್ಕೆ ಹಾಸಿ, ಆ ಒಂಬತ್ತು ಲದ್ದಿಗಳನ್ನು ಆರಿಸಿಕೊಂಡು ಮನಃಶ್ಯಾಂತಿ ಹೊಂದಿದನು"

ಪಾಟಣಕರರಿಗೆ ಇದರ ಅರ್ಥವಾಗಲಿಲ್ಲ. ಸಮೀಪದಲ್ಲಿಯೇ ಇದ್ದ ದಾದಾ ಕೇಳಕರ ಅವರನ್ನು ವಿಚಾರಿಸಿದರು. ಅದಕ್ಕೆ ಅವರು ನನಗೂ ಸಹ ಇದರ ಪೂರ್ಣ ಅರ್ಥ ಗೊತ್ತಿರುವುದಿಲ್ಲ. ಆದರೆ ಅವರ ಪ್ರೇರಣೆಯಿಂದ ನನಗೆ ತಿಳಿದಷ್ಟು ಮಾತ್ರ ಹೇಳುತ್ತೇನೆ ಎಂದು ಅವರಿಗೆ ಕೆಳಗಿನಂತೆ ಹೇಳಿದರು.

" ಕುದುರೆಯೇ ದೇವರಕೃಪೆ– ಅದು ಹಾಕಿದ ಲದ್ದಿಗಳೆಂದರೆ

ನವ–ವಿಧ ಭಕ್ತಿಗಳು. ಅವು ಶ್ರವಣ, ಕೀರ್ತನ, ಸ್ಮರಣ, ಚರಣ,–ಸೇವನ, ಅರ್ಚನ ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನೆ. ಇವುಗಳಲ್ಲಿ ಯಾವುದೊಂದನ್ನಾದರೂ ಶ್ರದ್ಧೆ ಭಕ್ತಿಯಿಂದ ಅಭ್ಯಾಸ ಮಾಡಿದರೆ ಶ್ರೀಹರಿಯು ಭಕ್ತರ ಮನೆಯಲ್ಲಿ ಅವತರಿಸುತ್ತಾನೆ. ಭಕ್ತಿಯಿಲ್ಲದ ಯಾವುದೇ ಜಪ, ತಪ, ಯೋಗಸಾಧನ ಅಥವಾ ವೇದ– ಉಪನಿಷತ್ ಅಭ್ಯಾಸ ಪ್ರಯೋಜನಕಾರಿಯಲ್ಲ. ನೀನೇ ವರ್ತಕನೆಂದು ಭಾವಿಸಿ ಅವನಂತೆ ನೀನೂ ಸಹ ನವ–ವಿಧ ಭಕ್ತಿಗಳನ್ನು ಅಭ್ಯಾಸ ಮಾಡು; ನಿನ್ನ ಮನಸ್ಸಿನ ಚಂಚಲತೆಯನ್ನು ಬಿಡು, ಅಂದರೆ ಮನಃಶ್ಯಾಂತಿಯನ್ನು ಪಡೆಯುವೆ" ಎಂದರು.

ಮರುದಿನ ಪಾಟಣಕರರು ಬಾಬಾರವರಿಗೆ ನಮಸ್ಕಾರ ಮಾಡಲೆಂದು ಹೋದಾಗ ಅವರು "ಒಂಬತ್ತು ಲದ್ದಿಗಳನ್ನು ಕಟ್ಟಿಕೊಂಡಿಯಾ? ಎಂದು ಕೇಳಿದರು. ಅದಕ್ಕೆ ಅವರು "ನಾನು ದೀನನು. ನನ್ನ ಮೇಲೆ ನಿಮ್ಮ ಕೃಪೆ ಇದ್ದರೆ ಮಾತ್ರ ನಾನು ಅವುಗಳನ್ನು ಕಟ್ಟಿಕೊಳ್ಳಬಹುದು ಎಂದರು. ಆಗ ಬಾಬಾ ಸಂತೋಷದಿಂದ ಅವರನ್ನು ಆಶೀರ್ವದಿಸಿ "ನಿನಗೆ ಶಾಂತಿ ದೊರಕುತ್ತದೆ" ಎಂದರು.

## ಪಂಢರಪುರದ ವಕೀಲ

ಬಾಬಾರವರು ಸರ್ವಜ್ಞತೆಯಿಂದ ಭಕ್ತರನ್ನು ತಿದ್ದುತ್ತಿದ್ದರೆಂಬುದನ್ನು ಈಗ ಪರೀಕ್ಷಿಸೋಣ,

ಒಂದು ದಿನ ಪಂಡರಪುರದ ವಕೀಲರೊಬ್ಬರು ಶಿರ್ಡಿಗೆ ಬಂದು ಮಸೀದಿಯೊಳಗೆ ಪ್ರವೇಶಿಸಿ ಬಾಬಾ ಅವರಿಗೆ ನಮಸ್ಕರಿಸಿ ಬಾಬಾ ಕೇಳದೆ ಇದ್ದರೂ ಸಹ ದಕ್ಷಿಣೆಯನ್ನು ಅರ್ಪಿಸಿದರು. ನಂತರ ಅವರು ಮಸೀದಿಯ ಮೂಲೆಯೊಂದರಲ್ಲಿ ಕುಳಿತು ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದರು. ಸಾಯಿಬಾಬಾ ಕೂಡಲೆ ಅವರ ಕಡೆಗೆ ತಿರುಗಿ "ಈ ಜನರೆಷ್ಟು ವಂಚಕರು! ಇವರು ನನ್ನ ಪಾದಗಳಿಗೆರಗಿ

ದಕ್ಷಿಣೆ ನೀಡಿ ಹೊರಟು ಹೋಗುತ್ತಾರೆ. ಆದರೆ ಅಂತರಂಗದಲ್ಲಿ ತೆಗಳುತ್ತಾರೆ ಇದು ವಿಚಿತ್ರವಲ್ಲವೆ?" ಎಂದರು. ಈ ಮಾತು ವಕೀಲರಿಗೆ ಚುಚ್ಚಿತು. ಬೇರೆ ಯಾರಿಗೂ ಈ ಮಾತಿನ ಅರ್ಥ ವಾಗಲಿಲ್ಲ. ವಕೀಲರು ಅದನ್ನು ಗ್ರಹಿಸಿ ಮೌನದಿಂದ ಇದ್ದರು. ನಂತರ ವಾಡಾಕ್ಕೆ ಹಿಂತಿರುಗುವಾಗ ಅವರು ಕಾಕಾ ಸಾಹೇಬರನ್ನು ಕುರಿತು "ಬಾಬಾರವರ ಮಾತು ಸರಿಯಾಗಿತ್ತು. ಅವರು ನನ್ನನ್ನೇ ಕುರಿತು ಮಾತಾಡಿದ್ದಾರೆ. ಇನ್ನು ಮುಂದೆ ನಾನು ಇತರರ ನಿಂದನೆಯನ್ನು ಬಿಡಬೇಕೆಂದು ಅರ್ಥಸೂಚಿತವಾಗಿದೆ" ಎಂದು ಹೇಳಿ ಈ ಕೆಳಕಂಡಂತೆ ವಿವರಿಸಿದರು.

ಪಂಢರಪುರದ ನ್ಯಾಯಾದೀಶರಾದ ನೂಲಕರರು ತಮ್ಮ ಆರೋಗ್ಯಾಭಿವೃದ್ಧಿಗೋಸ್ಕರ ಶಿರ್ಡಿಯಲ್ಲಿ ಬಂದು ತಂಗಿದ್ದರು. ಅವರು ಒಂದು ದಿನ ಪಂಢರಪುರದ ವಕೀಲ ಗೃಹದಲ್ಲಿ ಕುಳಿತಾಗ ರೋಗವು ಔಷಧಿಗಳಿಲ್ಲದೆ ಫಕೀರರ ದರ್ಶನ ಮಾತ್ರದಿಂದ ಗುಣವಾಗಬಲ್ಲದೆ ? ವಿದ್ವಾಂಸರಾದ ನೂಲಕರ ಹೀಗೆ ನಂಬುವುದು ಸರಿಯೆ? ಎಂದು ಮುಂತಾಗಿ ವಕೀಲರಲ್ಲಿ ಚರ್ಚೆಯಾಯಿತು. ನ್ಯಾಯಾಧೀಶರೂ, ಬಾಬಾ ಅವರೂ ವಕೀಲರ ಉಪಹಾಸಕ್ಕೀಡಾದರು. ಚರ್ಚೆಯಲ್ಲಿ ನಾನು ಪಾತ್ರವಹಿಸಿದ್ದೆ. ಈಗ ಬಾಬಾರವರಿಂದ ಪಾಠ ಕಲಿತಂತಾಯಿತು. ಬಾಬಾ ಅವರ ನುಡಿ ಬೈಗುಳವಾಗಿರದೆ ಅದು ನನಗೆ ಅನುಗ್ರಹವಾಗಿದೆ. ವಿನಾಕಾರಣ ಬೇರೆಯವರನ್ನು ಉಪಹಾಸ ಅಥವಾ ನಿಂದೆ ಮಾಡಕೂಡದೆಂದು ಬಾಬಾ ನನಗೆ ಬುದ್ಧಿ ಕಲಿಸಿದರು ಎಂದು ವಕೀಲರು ದೀಕ್ಷಿತರಿಗೆ ಹೇಳಿದರು.

ಶಿರ್ಡಿಯು ಪಂಢರಪುರದಿಂದ ದೂರದಲ್ಲಿದೆ ಆದರೂ ಬಾಬಾ ತಮ್ಮ ಸರ್ವಜ್ಞತ್ವದಿಂದ ಪಂಢರಪುರದ ವಕೀಲಗೃಹದಲ್ಲಿ ನಡೆದ ಸಂಭಾಷಣೆಯನ್ನು ತಿಳಿದಿದ್ದರು. ನದಿ, ಕಾಡು, ಬೆಟ್ಟ, ಮೊದಲಾದವುಗಳು ಅವರ ದೃಷ್ಟಿಗೆ ಅಡ್ಡಬರುತ್ತಿರಲಿಲ್ಲ. ಅವರು ಎಲ್ಲರ ಇಂಗಿತವನ್ನೂ ತಿಳಿದವರಾಗಿದ್ದರು. ಭಕ್ತನು ಎಲ್ಲಿಯೇ ಇರಲಿ, ಎಷ್ಟೇ

ದೂರದಲ್ಲಿರಲಿ ಸಾಯಿ ಅವರ ದೃಷ್ಟಿಯಿಂದ ದೂರವಿರತ್ತಿರಲಿಲ್ಲ. ಈ ಘಟನೆಯಿಂದ ವಕೀಲರಿಗೆ ಜ್ಞಾನೋದಯವಾಯಿತು. ಸನ್ಮಾರ್ಗ ಪ್ರವರ್ತಕರಾಗಲು ಸಾಧ್ಯವಾಯಿತು.

ಈ ಕಥೆಯು ವಕೀಲರಿಗೆ ಸಂಭಂಧಿಸಿದ್ದಾದರೂ ಎಲ್ಲರಿಗೂ ಅನ್ವಯಿಸುವ ಹಾಗಿದೆ. ಆದುದರಿಂದ ಎಲ್ಲರೂ ಇದನ್ನು ಗಮನಿಸಬೇಕು. ಸನ್ಮಾರ್ಗ ಪ್ರವರ್ತಕರಾಗಲು ಶ್ರಮಿಸಬೇಕು.

**ಶ್ರೀ ಸಾಯಿ ಪ್ರಣಾಮ**

# ೨೨ನೇ ಅಧ್ಯಾಯ

## ಸರ್ಪದಿಂದ ರಕ್ಷಣೆ

### ಬಾಳಾಸಾಹೇಬ ಮಿರೀಕರ–ಬಾಪೂಸಾಹೇಬ ಬೂಟಿ – ಅಮೀರ ಶಕ್ಕರ– ಹೇಮಾಡಪಂತ – ಸರ್ಪಹತ್ಯೆ ಬಗ್ಗೆ ಬಾಬಾ ಅವರ ಅಭಿಪ್ರಾಯ

ಬಾಬಾ ಅವರನ್ನು ಧ್ಯಾನಿಸುವುದು ಹೇಗೆ ಪ್ರಕೃತಿಯ ಮರ್ಮವನ್ನಾಗಲಿ ಪರಮಾತ್ಮನ ರೂಪವನ್ನಾಗಲಿ ಯಾರಿಂದಲೂ ಅಳೆಯುವುದಕ್ಕೆ ಸಾಧ್ಯವಿಲ್ಲ. ವೇದಗಳಿಗಾಗಲಿ ಸಹಸ್ರ ನಾಲಗೆಗಳುಳ್ಳ ಆದಿಶೇಷನಿಗಾಗಲಿ ಅದು ಸಾಧ್ಯವಿಲ್ಲ. ಪರಮಾತ್ಮನ ಪಾದವೇ ಸುಖದ ಸಾಧನವೆಂದಿರುವ ಭಕ್ತರಿಗೆ ಪರಮಾತ್ಮನ ರೂಪ ಗೋಚರವಾಗುವುದು. ಆ ಉದಾತ್ತವಾದ ಜೀವನದ ಗುರಿಯನ್ನು ಸಾಧಿಸಲು ಅವನನ್ನು ಧ್ಯಾನಿಸುವ ಸಾಧನವೊಂದನ್ನು ಬಿಟ್ಟರೆ ಬೇರೆ ಯಾವ ಸಾಧನವನ್ನೂ ಭಕ್ತರು ಅರಿಯರು. ಹೇಮಾಡಪಂತರು ಭಕ್ತಿಯ ಮತ್ತು ಧ್ಯಾನದ ಸುಲಭವಾದ ಮಾರ್ಗವನ್ನು ಈ ರೀತಿ ವಿವರಿಸಿರುತ್ತಾರೆ.

ಕೃಷ್ಣಪಕ್ಷದ ಚಂದ್ರನು ದಿನೇ ದಿನೇ ಕ್ಷೀಣಿಸುತ್ತ ಒಂದು ದಿನ ಕಣ್ಮರೆಯಗುವವನು. ಆ ದಿನವೇ ಅಮವಾಸ್ಯೆ. ನಂತರ ಶುಕ್ಲಪಕ್ಷ ಆರಂಭವಾಗಿ ಚಂದ್ರನು ಪ್ರಕಾಶಿಸತೊಡಗುತ್ತಾನೆ. ಆಗ ಜನಕೋಟಿಯು ಚಂದ್ರನನ್ನು ನೋಡಲು ಹಾತೊರೆಯುತ್ತದೆ. ಪ್ರತಿಪದೆಯ ದಿನ ಚಂದ್ರನು ಕಾಣಿಸುವುದೇ ಇಲ್ಲ. ಮರುದಿನ ಸ್ವಲ್ಪ ಕಾಣುತ್ತಾನೆ. ವೃಕ್ಷದ ಎಲೆಗಳ ಸಂದಿಯಲ್ಲಿ ಕಾತುರರಾಗಿ ನಾವು ನೋಡುತ್ತಿದ್ದರೆ ಆ ಚಂದ್ರನ ಸೊಬಗೇ ಬೇರೆ. ಇದನ್ನೇ ಆಧಾರವಾಗಿಟ್ಟುಕೊಂಡು ಈಗ ಬಾಬಾರವರ ದಿವ್ಯತೇಜ:ಪ್ರತಿಭೆಯನ್ನು ಅವಲೋಕಿಸೋಣ. ಸಾಯಿಬಾಬಾರವರ ಫೋಟೊ ನೋಡಿ! ಎಷ್ಟು ಮುದ್ದಾಗಿದೆ. ಬಲಗಾಲನ್ನು ಎಡಗಾಲಿನ ಮಂಡಿಯ ಮೇಲೆ ಹಾಕಿಕೊಂಡು, ಎಡಗೈ ಬೆರಳುಗಳನ್ನು ಬಲಗಾಲಿನ

ಪಾದದ ಮೇಲಿಟ್ಟುಕೊಂಡು ಕುಳಿತಿದ್ದಾರೆ. ಬಲಗಾಲಿನ ಹೆಬ್ಬೆಟ್ಟಿನ ಮೇಲೆ ಎಡಗೈ ತೋರು ಬೆರಳು ಮತ್ತು ಮಧ್ಯದ ಬೆರಳುಗಳನ್ನು ಇಟ್ಟುಕೊಂಡಿರುತ್ತಾರೆ. ಈ ಸ್ಥಿತಿಯಲ್ಲಿ ಕುಳಿತಿರುವ ಬಾಬಾ "ನೀವು ನನ್ನ ಪ್ರತಿಭೆಯನ್ನು ಕಾಣಬಯಸಿದರೆ ಅಹಂಕಾರ ಮತ್ತು ಮಮಕಾರವನ್ನು ತ್ಯಜಿಸಿರಿ. ತೋರ ಬೆರಳು ಮತ್ತು ಮಧ್ಯದ ಬೆರಳು ಇವುಗಳ ಮಧ್ಯೆ ಕಾಣುವ ಬಲಗಾಲಿನ ಹೆಬ್ಬಟ್ಟಿನ ಮೇಲೆ ನಿಮ್ಮ ಚಿತ್ತವಿಟ್ಟು ಧ್ಯಾನಿಸಿರಿ. ಆಗ ನಿಮಗೆ ಪ್ರತಿಭೆಯ ಅರಿವಾಗುತ್ತದೆ." ಎಂದು ಹೇಳುವಂತಿದೆ ಆನೋಟದ ವೈಖರಿ! ಇದೇ ಭಕ್ತಿ ಮಾರ್ಗದ ಸುಲಭ ಸಾಧನ.

ಈಗ ಬಾಬಾರವರ ಜೀವಿತವನ್ನು ನೋಡೋಣ. ಬಾಬಾರವರು ಅಲ್ಲಿ ವಾಸ್ತವ್ಯ ಮಾಡಿದ ಮೇಲೆ ಶಿರ್ಡಿಯು ಒಂದು ದೊಡ್ಡ ಯಾತ್ರಾಸ್ಥಳವಾಯಿತು. ದೇಶದ ಮೂಲೆ ಮೂಲೆಗಳಿಂದ ಭಕ್ತರು ಬಂದು ಮಸೀದಿಯಲ್ಲಿ ನೆರೆಯುತ್ತಿದ್ದರು. ಬಡವ –ಬಲ್ಲಿದರೆಂಬ ಭೇಧವೇ ಇರಲಿಲ್ಲ. ಬಾಬಾರವರ ಅಪರಿಮಿತವಾದ ಪ್ರೀತಿ, ಅವರ ಆತ್ಯಾಶ್ಚರ್ಯಕರವಾದ ಜ್ಞಾನಸಂಪತ್ತು ಅಂತಾರಾಮಿತ್ವ ಇವುಗಳನ್ನು ಬಣ್ಣಿಸಲು ಯಾರು ಶಕ್ತರು? ಇವೆಲ್ಲದರ ಅನುಭವ ಪಡೆದಿರವವರೆ ಧನ್ಯರು! ಕೆಲವು ಸಾರೆ ಬಾಬಾರವರು ಮೌನವನ್ನು ಧರಿಸಿ ಪರಬ್ರಹ್ಮನನ್ನು ಆರಾಧಿಸುತ್ತಿದ್ದರು. ಕೆಲವು ಸಾರೆ ಜಾಗೃತಾವಸ್ಥೆಯಲ್ಲಿ ಭಕ್ತರೊಡನೆ ಕಲೆತಿರುತ್ತಿದ್ದರು. ಕೆಲವು ಸಾರೆ ನೀತಿ ಕಥೆಗಳನ್ನು ಹೇಳುತ್ತಿದ್ದರು. ಅನೇಕ ಸಾರೆ ಹಾಸ್ಯ ಮತ್ತು ವಿನೋದ ಮಾಡುತ್ತಿದ್ದರು. ಕೆಲವು ಸಾರೆ ಶಾಂತಿಯಿಂದಿರುತ್ತಿದ್ದರು ಮತ್ತೆ ಕೆಲವು ಸಾರೆ ಕುಪಿತರಾಗಿರುತ್ತಿದ್ದರು. ಕೆಲವು ಸಾರೆ ಸಂಕ್ಷಿಪ್ತವಾಗಿ ಬೋಧಿಸುತ್ತಿದ್ದರು. ಕೆಲವು ಸಾರೆ ಸುಮ್ಮನೆ ವಾದಿಸುತ್ತಿದ್ದರು. ಅನೇಕ ಸಾರೆ ಸರಳವಾಗಿರುತ್ತಿದ್ದರು. ಭಕ್ತರಿಗೆ ಅನುಗುಣವಾದ ವಿವಿಧೋಪದೇಶ ನೀಡುತ್ತಿದ್ದರು. ಆದ್ದರಿಂದ ಅವರ ಜೀವನವು ನಮ್ಮ ಬುದ್ಧಿ, ಮಾತು ಮತ್ತು ದೃಷ್ಟಿಗೆ ಮೀರಿದುದಾಗಿತ್ತು. ಅವರನ್ನು ನೋಡಬೇಕೆಂಬ ಬಯಕೆ,

ಮಾತನಾಡಿಸಬೇಕೆಂಬ ಬಯಕೆ ಇವುಗಳಿಗೆ ತೃಪ್ತಿಯೇ ಇಲ್ಲ. ಆದರೂ ಭಕ್ತರು ಪರಮಾನಂದಭರಿತರಾಗಿದ್ದರು. ಮಳೆಯ ಹನಿಗಳನ್ನು ಎಣಿಸಬಹುದು. ಗಾಳಿಯನ್ನು ಚರ್ಮದ ಚೀಲದಲ್ಲಿ ಕಟ್ಟಿಡಬಹುದು ಆದರೆ ಬಾಬಾರವರ ಲೀಲೆಗಳನ್ನು ಅಳತೆ ಮಾಡಲು ಸಾಧ್ಯವಿಲ್ಲ.

ಸಾಯಿಬಾಬಾ ಭಕ್ತರ ವಿಪತ್ತುಗಳನ್ನು ಹೇಗೆ ನಿರೀಕ್ಷಿಸುತ್ತಿದ್ದರು ಮತ್ತು ಅವುಗಳಿಂದ ಅವರನ್ನು ಹೇಗೆ ಪಾರು ಮಾಡುತ್ತಿದ್ದರು ಎಂಬ ವಿಚಾರವನ್ನು ಈಗ ಪರೀಕ್ಷಿಸೋಣ.

## ಬಾಳಾಸಾಹೇಬ ಮಿರೀಕರ

ಸರದಾರ ಕಾಕಾಸಾಹೇಬ ಮೀರಿಕರರ ಮಗ ಬಾಳಾಸಾಹೇಬರು ಚಿಥಳಿಗೆ ಪ್ರಯಾಣ ಮಾಡುತ್ತಿದ್ದರು. ದಾರಿಯಲ್ಲಿ ಹಾಗೆಯೆ ಶಿರ್ಡಿಗೆ ಬಂದು ಬಾಬಾರವರ ದರ್ಶನವನ್ನು ಪಡೆದು ಯೋಗಕ್ಷೇಮವನ್ನು ವಿಚಾರಿಸಿದರು. ಆಗ ಬಾಬಾರವರು ನಮ್ಮ ದ್ವಾರಕಾಮಾಯಿ ನಿನಗೆ ಗೊತ್ತಿದೆಯೆ?" ಎಂದು ಕೇಳಿದರು. ಮಿರೀಕರರಿಗೆ ಅರ್ಥವಾಗಲಿಲ್ಲ. ಸುಮ್ಮನೆ ಕುಳಿತರು. ಪುನಃ ಬಾಬಾರವರು ಮುಂದುವರೆದು "ನೀನು ಈಗ ಕುಳಿತಿರುವುದೇ ದ್ವಾರಕಾಮಾಯಿ. ಅವಳು ತನ್ನ ತೊಡೆಯ ಮೇಲೆ ಕುಳಿತರುವ ಮಕ್ಕಳ ಅಪಾಯಗಳೆಲ್ಲವನ್ನೂ ದೂರಮಾಡುತ್ತಾಳೆ. ಈ ಮಾತೆಯು ದಯಾಮಯಳು ಅವಳ ಭಕ್ತರಿಗೆ ಯಾವ ಕಷ್ಟಗಳೂ ಬರುವುದಿಲ್ಲ. ಅವಳ ತೊಡೆಯ ಮೇಲೆ ಕುಳಿತರೆಂದರೆ ಸಾಕು, ಅವರ ತೊಂದರೆಗಳು ನಿವಾರಣೆಯಾದಂತೆಯೇ; ಅವಳ ನೆರಳಿನಲ್ಲಿ ಆಶ್ರಯ ಪಡೆದವರು ಆಶೀರ್ವಾದ ಪಡೆದಂತೆಯೇ" ಎಂದು ಹೇಳಿದರು. ನಂತರ ಅವರಿಗೆ ಉಧಿಯನ್ನು ಕೊಟ್ಟು ಅವರ ಮಸ್ತಕದ ಮೇಲೆ ಅಭಯ ಹಸ್ತವನ್ನಿಟ್ಟು ಆಶೀರ್ವದಿಸಿದರು. ಮೀರೀಕರು ಇನ್ನೇನು ಹೊರಡುವುದರಲ್ಲಿದ್ದರು. ಆಗ ಬಾಬಾ ಅವರು ಪುನಃ "ಲಂಬು ಭಾವು(ಸರ್ಪ) ನಿನಗೆ ಗೊತ್ತಿದೆಯೇ?" ಎಂದು ಕೇಳಿದರು. ನಂತರ ತಮ್ಮ ಎಡಗೈಮುಷ್ಟಿಯನ್ನು ಸರ್ಪದಂತೆ ಅಲ್ಲಾಡಿಸುತ್ತ "ಅವನು

ಬಹಳ ಭಯಂಕರನು! ಆದರೆ ದ್ವಾರಕಾಮಾಯಿಯ ಮಕ್ಕಳನ್ನೇನು ಮಾಡಬಲ್ಲನು? ದ್ವಾರಕಾಮಾಯಿ ಅವರನ್ನು ಕಾಪಾಡುತ್ತಿರುವಾಗ ಸರ್ಪ ಏನು ಮಾಡಬಲ್ಲದು?" ಎಂದು ಕೇಳಿದರು.

ಅಲ್ಲಿದ್ದವರೆಲ್ಲರೂ ಬಾಬಾರವರ ಈ ಮಾತಿನ ಅರ್ಥ ತಿಳಿಯಲು ಕಾತುರ ರಾಗಿದ್ದರು. ಆದರೆ ಬಾಬಾ ಅವರನ್ನು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ. ಬಾಳಾಸಾಹೇಬರು ಬಾಬಾರವರಿಗೆ ನಮಸ್ಕರಿಸಿ ಶ್ಯಾಮ ಅವರೊಡನೆ ಮಸೀದಿಬಿಟ್ಟು ಹೊರಟರು. ಬಾಬಾರವರು ಶ್ಯಾಮ ಅವರಿಗೆ ಮಿರೀಕರ ಅವರೊಡನೆ ಪ್ರಯಾಣ ಮಾಡುವಂತೆ ಹೇಳಿದರು. ಶ್ಯಾಮ ಅವರು ಈ ವಿಷಯವನ್ನು ಬಾಳಾಸಾಹೇಬರಿಗೆ ತಿಳಿಸಿದಾಗ ಅವರು ಬೇಡವೆಂದರು. ಬಾಳಾಸಾಹೇಬರ ಅಭಿಪ್ರಾಯವನ್ನು ಶ್ಯಾಮ ಅವರು ಬಾಬಾ ಅವರಿಗೆ ತಿಳಿಸಿದರು. ಆಗ ಬಾಬಾರವರು "ಸರಿ, ಹೋಗಬೇಡ. ನಾವು ಯಾವಾಗಲೂ ಒಳ್ಳೆಯದನ್ನು ಎಣಿಸಬೇಕು. ಒಳ್ಳೆಯದನ್ನೇ ಮಾಡಬೇಕು. ಆದರೆ ಏನಾಗಬೇಕೋ ಅದು ಆಗಿಯೇ ಬಿಡುತ್ತದೆ" ಎಂದರು.

ಸ್ವಲ್ಪ ಕ್ಷಣದಲ್ಲಿಯೇ ಬಾಳಾಸಾಹೇಬರು ಪುನ: ಯೋಚಿಸಿ ಶ್ಯಾಮ ಅವರನ್ನು ಕರೆದು ಅವರು ತಮ್ಮ ಜೊತೆಯಲ್ಲಿ ಬರಬಹುದೆಂದರು. ಶ್ಯಾಮ ಇದನ್ನು ಬಾಬಾ ಅವರಿಗೆ ತಿಳಿಸಿ ಅವರ ಅನುಜ್ಞೆ ಪಡೆದು ಬಾಳಾಸಾಹೇಬರ ಸಂಗಡ ಹೊರಟರು. ಚಿಥಳಿಯನ್ನು ರಾತ್ರಿ ೯ ಗಂಟೆಗೆ ತಲುಪಿ ಶ್ರೀ ಮಾರುತಿ ದೇವಸ್ಥಾನದಲ್ಲಿ ತಂಗಿದರು. ಕಛೇರಿಯ ವರಿಷ್ಠರು ಬಂದಿರಲಿಲ್ಲ. ಆದುದರಿಂದ ಮಾತನಾಡುತ್ತ ಕುಳಿತರು. ಬಾಳಾಸಾಹೇಬರು ಪತ್ರಿಕೆಯನ್ನೋದುತ್ತ ಚಾಪೆಯ ಮೇಲೆ ಕುಳಿತಿದ್ದರು. ಆಗ ಅವರ ನಡೆದ ಮೇಲಿದ್ದ ಹೊದಿಕೆಯ ಮೇಲೆ ಯಾರಿಗೂ ತಿಳಿಯದಂತೆ ಒಂದು ಸರ್ಪ ಬಂದು ಕುಳಿತಿತ್ತು, ಅವರ ಜವಾನನು ಇದನ್ನು ನೋಡಿ "ಹಾವು, ಹಾವು" ಎಂದು ಕೂಗಿಕೊಂಡನು. ಬಾಳಾಸಾಹೇಬ ನಡುಗಲಾರಂಭಿಸಿದರು. ಶ್ಯಾಮ ಅವರು ಚಕಿತರಾದರು.

ಸದ್ದಿಲ್ಲದೇ ಕೋಲು ತರಲು ಹೊರಟರು. ಸರ್ಪವು ಬಾಳಾಸಾಹೇಬರನ್ನು ಬಿಟ್ಟು ಕೆಳಗಿಳಿಯಿತು. ಕೂಡಲೆ ಅದನ್ನು ಹೊಡೆದು ಕೊಂದರು. ಈ ಅಪಾಯವನ್ನು ಬಾಬಾ ಅವರು ಮೊದಲೇ ನಿರೀಕ್ಷಿಸಿ ಅದರಿಂದ ಅವರನ್ನು ಪಾರು ಮಾಡಿದರು. ಅಂದಿನಿಂದ ಬಾಳಾಸಾಹೇಬರಿಗೆ ಬಾಬಾ ಅವರಲ್ಲಿದ್ದ ಭಕ್ತಿ ದೃಢವಾಯಿತು.

## ಬಾಪೂಸಾಹೇಬ ಬೂಟಿ

ಪ್ರಸಿದ್ಧ ಜ್ಯೋತಿಷಿಯಾದ ಶ್ರೀ ನಾನಾ ಡೇಂಗಳೆಯವರು ಶಿರ್ಡಿಯಲ್ಲಿ ಬಾಪೂಸಾಹೇಬ ಬೂಟಿ ಅವರಿಗೆ "ಈ ದಿನ ನಿಮಗೆ ಗ್ರಹಗತಿಗಳು ಸರಿಯಾಗಿಲ್ಲ, ಅಪಾಯವಿದೆ" ಎಂದರು. ಬಾಪೂಸಾಹೇಬರು ಇದರಿಂದ ಮನೋವ್ಯಾಕುಲರಾದರು. ಎಂದಿನಂತೆ ಆ ದಿನ ಅವರು ಮಸೀದಿಗೆ ಬಂದಾಗ ಬಾಬಾ ಅವರು "ನಾನಾ ನಿನಗೇನು ಹೇಳಿದರು? ನಿನಗೆ ಈ ದಿನ ಮರಣ ಸಂಭವವಿದೆಯೆಂದು ಹೇಳಿರುತ್ತಾರೆ ಅಲ್ಲವೇ? ನೀನು ಹೆದರಬೇಕಿಲ್ಲ. ಹೇಗೆ ಆ ಮೃತ್ಯುವು ನಿನ್ನನ್ನು ಕೊಲ್ಲುವುದೋ ನೋಡೋಣ" ಎಂದರು. ಆ ದಿನ ಸಂಜೆ ಬಾಪೂಸಾಹೇಬರು ತಮ್ಮ ಕೊಠಡಿಗೆ ಹೋಗಿ ಕುಳಿತಾಗ ಒಂದು ಸರ್ಪವನ್ನು ಕಂಡರು. ಅವರ ಜವಾನನು ಅದನ್ನು ಹೊಡೆಯಲು ಕೈ ಎತ್ತಿದನು. ಬಾಪೂಸಾಹೇಬರು ಒಂದು ದೊಡ್ಡ ಕೋಲನ್ನು ತರಲು ಹೇಳಿದರು. ಜವಾನನು ಕೋಲನ್ನು ತರುವುದರೊಳಗೆ ಸರ್ಪ ಮಾಯವಾಗಿತ್ತು. ಆಗ ಬಾಪೂಸಾಹೇಬರು ಬಾಬಾ ಅವರ ಮಾತುಗಳನ್ನು ಜ್ಞಾಪಕಕ್ಕೆ ತಂದುಕೊಂಡು ಸಂತೋಷಭರಿತರಾದರು.

## ಅಮೀರ ಶಕ್ಕರ

ಕಟುಕರ ಜಾತಿಗೆ ಸೇರಿದ, ಕೋಪರಗಾಂವ ತಾಲೂಕಿನ, ಕೊರಾಳ ಹಳ್ಳಿಯ ಅಮೀರ ಶಕ್ಕರ ಬಾಂದ್ರಾದಲ್ಲಿ ಕಮಿಶನ್ ಏಜಂಟರಾಗಿದ್ದರು. ಅವರು ವಾಯುರೋಗದಿಂದ ನರಳುತ್ತಿದ್ದರು. ದೇವರನ್ನು ಸ್ಮರಿಸಿ

ಬಾಬಾರ ಹತ್ತಿರ ಬಂದು ರೋಗವನ್ನು ಗುಣಪಡಿಸುವಂತೆ ಬೇಡಿಕೊಂಡರು. ಅದಕ್ಕೆ ಸಾಯಿಬಾಬಾ ಅವರಿಗೆ ಚಾವಡಿಯಲ್ಲಿ ತಂಗುವಂತೆ ಹೇಳಿದರು. ಆ ಚಾವಡಿಯು ಅನಾರೋಗ್ಯ ಸ್ಥಳವಾಗಿತ್ತು. ಆದರೆ ಬಾಬಾ ಅವರ ಆಜ್ಞೆಯನ್ನು ಮೀರುವಂತಿರಲಿಲ್ಲ. ಬಾಬಾ ಅವರನ್ನು ಮಸೀದಿಗೆ ಬರಕೊಡಲಿಲ್ಲ. ಆಗಾಗ್ಗೆ ಚಾವಡಿಗೆ ತಾವೇ ಹೋಗಿ ಬರುತ್ತಿದ್ದರು. ರಾತ್ರಿ ಮೆರವಣಿಗೆಯ ನಂತರ ಬಾಬಾ ಅಲ್ಲಿ ಹೋಗಿ ಮಲಗುತ್ತಿದ್ದರು. ಆದುದರಿಂದ ಅಮೀರ ಅವರಿಗೆ ಬಾಬಾ ಅವರ ಭೆಟ್ಟಿ ಆಗಾಗ್ಗೆ ಅಗುತ್ತಲೆ ಇತ್ತು. ಅಮೀರ ಶಕ್ಕರ ಅಲ್ಲಿ ೯ ತಿಂಗಳು ತಂಗಿದ್ದರು. ಅನಂತರ ಬಹುಶ: ಬೇಸರಪಟ್ಟುಕೊಂಡು, ಒಂದು ದಿನ ರಾತ್ರಿ ಯಾರಿಗೂ ಹೇಳದೆ ಶಿರ್ಡಿಯನ್ನು ಬಿಟ್ಟು ಕೋಪರಗಾಂವ ಧರ್ಮಶಾಲೆಗೆ ಹೋಗಿಬಿಟ್ಟರು. ಅಲ್ಲಿ ಮರಣಾವಸ್ಥೆಯಲ್ಲಿದ್ದ ಒಬ್ಬ ಮುದಿ ಫಕೀರನನ್ನು ಅವರು ಕಂಡರು. ಅವನು "ನೀರು! ನೀರು!" ಎಂದು ಕೂಗಿಕೊಳ್ಳುತ್ತಿದ್ದನು. ಅಮೀರ ಶಕ್ಕರ ಅವನಿಗೆ ನೀರು ಕುಡಿಯಲು ಕೊಟ್ಟರು. ನೀರು ಕುಡಿದ ತತ್‌ಕ್ಷಣ ಫಕೀರನು ಮರಣ ಹೊಂದಿದನು. ಶಕ್ಕರರಿಗೆ ಆಗ ದಿಕ್ಕು ತೋಚದಂತಾಯಿತು. ಯಾರಿಗಾದರೂ ಈ ಸಂಗತಿ ತಿಳಿಸಿದರೆ ತಮ್ಮ ಮೇಲೇಯೇ ಆರೋಪ ಬರುತ್ತದೆ ಎಂದು ಭಾವಿಸಿ ಇದು ಬಾಬಾ ಅವರ ಅನುಮತಿಯಿಲ್ಲದೆ ಬಂದಿದ್ದರ ಫಲವೆಂದು ತಿಳಿದು ಪಶ್ಚಾತ್ತಾಪ ಪಟ್ಟುಕೊಂಡು, ಅದೇ ರಾತ್ರಿ ಬಾಬಾ ಅವರ ನಾಮಸ್ಮರಣೆ ಮಾಡುತ್ತ ಬೆಳಗಾಗುವುದರೊಳಗೆ ಶಿರ್ಡಿಗೆ ಬಂದು ತಲುಪಿದರು. ನಂತರ ಬಾಬಾ ಅವರು ಹೇಳಿದಷ್ಟು ದಿನ ಚಾವಡಿಯಲ್ಲಿಯೇ ತಂಗಿ ಪೂರ್ತಿ ಗುಣ ಹೊಂದಿದರು. ಒಂದು ದಿನ ರಾತ್ರಿ "ಓ ಅಬ್ದುಲ್, ಯಾವುದೋ ಒಂದು ಭೂತ ನನಗೆ ಅಪ್ಪಳಿಸುತ್ತಿದೆ," ಎಂದು ಬಾಬಾ ಕೂಗಿಕೊಂಡರು. ಅಬ್ದುಲ್ ದೀಪ ತೆಗೆದುಕೊಂಡು ಬಂದು ಬಾಬಾ ಅವರ ಹಾಸಿಗೆಯ ಸುತ್ತಲೂ ನೋಡಿದನು. ಏನೂ ಕಾಣಿಸಲಿಲ್ಲ. ಬಾಬಾ ಅವನಿಗೆ ಸರಿಯಾಗಿ ನೋಡಲು ಹೇಳಿ ತಮ್ಮ ಸಟಕಾದಿಂದ ನೆಲಕ್ಕೆ

ಹೊಡೆಯುತ್ತಾ ಕುಳಿತರು. ಅಮೀರ ಶಕ್ಕರ ಸರ್ಪ ಬಂದಿರುಬಹುದೆಂದು ಅನುಮಾನಿಸಿದರು. ಅಮೀರರಿಗೆ ಬಾಬಾ ಅವರ ರೀತಿ ನೀತಿಗಳನ್ನು ಗ್ರಹಿಸುವ ಶಕ್ತಿ ಇದ್ದಿತು. ಬಬಾ ಅವರಿಗೆ ಶಕ್ಕರರ ಹಾಸಿಗೆಯ ಹತ್ತಿರ ಒಂದು ಸರ್ಪ ಕಾಣಿಸಿತು. ಅಬ್ದುಲ್‌ನಿಗೆ ಅಲ್ಲಿ ದೀಪವನ್ನು ತರಲು ಹೇಳಿದರು. ದೀಪದ ಬೆಳಕಿನಲ್ಲಿ ಹಾಸಿಗೆಯ ಬಳಿ ಸರ್ಪವೊಂದು ಸುತ್ತಿಕೊಂಡು ಕುಳಿತಿರುವುದು ಕಂಡು ಬಂದಿತು. ಕೂಡಲೇ ಅದನ್ನು ಕೊಲ್ಲಲಾಯಿತು. ಹೀಗೆ ಬಾಬಾ ಸಮಯೋಚಿತ ಎಚ್ಚರಿಕೆ ಕೊಟ್ಟು ಅಮೀರರನ್ನು ಕಾಪಾಡಿದರು.

## ಹಾವು ಮತ್ತು ಚೇಳು

ಬಾಬಾ ಅವರು ತಿಳಿಸಿದ ಪ್ರಕಾರ ಕಾಕಾಸಾಹೆಬ ದೀಕ್ಷಿತರು ಪ್ರತಿದಿನ ಏಕನಾಥರಿಂದ ವಿರಚಿತವಾದ ಭಾಗವತ ಮತ್ತು ಭಾವಾರ್ಥ ರಾಮಾಯಣ ಎಂಬ ಎರಡು ಗ್ರಂಥಗಳನ್ನು ಮಸೀದಿಯಲ್ಲಿ ಪಠಣ ಮಾಡುತ್ತಿದ್ದರು. ತಮ್ಮ ಮಾತೆಯ ಅನುಜ್ಞೆಯಂತೆ ಶ್ರೀ ಹನುಮಾನ ಶ್ರೀರಾಮನ ಮಹತ್ವವನ್ನು ಪರೀಕ್ಷಿಸಿದ ಭಾಗವನ್ನು ಅವರು ಹೇಳುತ್ತಿದ್ದಾಗ ಶ್ರೋತೃಗಳು ಮುಗ್ಧರಾಗಿದ್ದರು. ಅವರಲ್ಲಿ ಹೇಮಾಡಪಂತರು ಒಬ್ಬರಾಗಿದ್ದರು. ಆಗ ದೊಡ್ಡ ಚೇಳೊಂದು – ಅದು ಎಲ್ಲಿಂದ ಬಂದಿತೋ ತಿಳಿಯದು – ಹೇಮಾಡಪಂತರ ನಡದ ಮೇಲೆ ಬಂದು ಕುಳಿತಿತ್ತು. ಮೊದಲು ಅದು ಅವರಿಗೆ ಗೊತ್ತಾಗಲೇ ಇಲ್ಲ. ಪರಮಾತ್ಮನ ಲೀಲೆಗಳನ್ನು ಕೇಳುತ್ತಿರುವವರನ್ನು ಪರಮಾತ್ಮನೇ ರಕ್ಷಿಸುವವನಾಗಿದ್ದರಿಂದ ಅವರಿಗೆ ಚೇಳು ಕುಳಿತಿರುವುದು ಹೇಗೋ ತಿಳಿಯಿತು. ಅದೂ ಸಹ ಕಥೆಯನ್ನು ಶ್ರವಣ ಮಾಡುತ್ತಿರವಂತೆ ಕಾಣುತ್ತಿತ್ತು. ಆಗ ಹೇಮಾಡಪಂತರು ಗಲಾಟೆ ಮಾಡದೆ ಧೋತರವನ್ನು ಮೆಲ್ಲಗೆ ತೆಗೆದು ಚೇಳನ್ನು ಹೊರಗೆ ತಂದು ಚೆಲ್ಲಿದರು.

ಇನ್ನೊಂದು ಸಂದರ್ಭದಲ್ಲಿ ಕೆಲವರು ಒಂದು ರಾತ್ರಿ ದೀಕ್ಷಿತವಾಡಾದ ಅಟ್ಟದ ಮೇಲೆ ಮಾತಾಡುತ್ತ ಕುಳಿತಿದ್ದರು. ಆಗ

ಕಿಟಕಿಯ ಸಂದಿಯಿಂದ ಒಂದು ಭಯಂಕರ ಸರ್ಪವು ಬಂದು ಸುರುಳಿ ಸುತ್ತಿಕೊಂಡು ಕುಳಿತಿತು. ಎಲ್ಲರೂ ಕೋಲು ತರಲು ಹೊರಟರು. ಅದನ್ನು ಹೊಡೆಯಲು ಪ್ರಯತ್ನಪಟ್ಟರು. ಆದರೂ ಅದು ಸಿಗದೆ ಅದೇ ಸಂದಿಯ ಮೂಲಕ ಮಾಯವಾಯಿತು.

## ಬಾಬಾ ಅವರ ಅಭಿಪ್ರಾಯ

ಆಗ ಮುಕ್ತಾರಾಮನೆಂಬ ಭಕ್ತನು ಅದು ತಪ್ಪಿಸಿಕೊಂಡು ಹೋಗಿರುವುದು ಒಳ್ಳೆಯದಾಯಿತೆಂದು ಹೇಳಿದನು. ಅದಕ್ಕೆ ಹೇಮಾಡಪಂತರು ಸರ್ಪಗಳನ್ನು ಕೊಲ್ಲುವುದು ಸರಿ ಎಂದು ವಾದಿಸಿದರು. ಹೀಗೆ ಚರ್ಚೆ ಬಿರುಸಾಗ ನಡೆಯಿತು. ಕೊನೆಗೆ ಎಲ್ಲರೂ ತಮ್ಮ ಮನೆಗೆ ಹಿಂತಿರುಗಿದರು. ಮರುದಿನ ಬಾಬಾ ಮಸೀದಿಯಲ್ಲಿ ಕುಳಿತಾಗ "ನಿನ್ನೆ ರಾತ್ರಿ ವಾಡೆದಲ್ಲಿ ಯಾವ ಚರ್ಚೆ ನಡೆಯಿತು?" ಎಂದು ಕೇಳಿದರು. ಅವರಿಗೆ ವಿಷಯ ತಿಳಿಸಿದಾಗ ಬಾಬಾ "ಚೇಳುಗಳೇ ಇರಲಿ ಸರ್ಪಗಳೇ ಇರಲಿ, ಭಗವಂತನು ಎಲ್ಲ ಪ್ರಾಣಿಗಳಲ್ಲಿಯೂ ಜೀವಿಸಿರುತ್ತಾನೆ. ಅವನೇ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು. ಸಕಲ ಜೀವರಾಶಿಗಳೂ ಅವನ ಆಜ್ಞೆಯನ್ನು ಪಾಲಿಸಲೇಬೇಕು. ಅವನ ಇಚ್ಛೆಯಿಲ್ಲದೆ ಯಾರು ಇತರರಿಗೆ ಕೆಡಕು ಮಾಡಲು ಸಾಧ್ಯವಿಲ್ಲ. ಇಡೀ ಪ್ರಪಂಚ ಅವನ ಆಶ್ರಿತ. ಯಾರು ಸ್ವತಂತ್ರರಲ್ಲ. ಆದುದರಿಂದ ನಾವು ಸಕಲ ಪ್ರಾಣಿಗಳಲ್ಲಿಯೂ ಪ್ರೀತಿ ಮತ್ತು ದಯೆ ತೋರಿಸಬೇಕು. ಅವುಗಳನ್ನು ವಿನಾಕಾರಣ ಕೊಲ್ಲುವುದನ್ನು ಬಿಡಬೇಕು. ದೇವರೇ ಸರ್ವರಕ್ಷಕ" ಎಂದು ಉಪದೇಶಿಸಿದರು.

## ಶ್ರೀ ಸಾಯಿ ಪ್ರಣಾಮ

# ೨೩ನೇ ಅಧ್ಯಾಯ

## ಯೋಗ ಮತ್ತು ಈರುಳ್ಳಿ – ಶ್ಯಾಮ ಅವರಿಗೆ ಸರ್ಪದಂಶ – ಕಾಲರಾ ನಿಯಮೋಲ್ಲಂಘನೆ – ಭಕ್ತಿಯ ಪರೀಕ್ಷೆ

ನಿಜವಾಗಿಯೂ ಈ ಜೀವವು ಸತ್ವ, ರಜಸ್ಸು ಮತ್ತು ತಮೋಗುಣಗಳಿಗಿಂತ ಮೀರಿದ್ದಾಗಿದೆ. ಆದರೆ ಮಾಯೆ ಎಂಬ ಭ್ರಮೆಗೆ ಸಿಕ್ಕಿ ತನ್ನ ಸ್ವಭಾವವನ್ನುಮರೆತು ದೇಹವೇ ಮುಖ್ಯ, ತಾನೇ ಕರ್ತೃ ತಾನೆ ಸುಖಿಯೆಂದು ಭಾವಿಸಿ ಪ್ರಪಂಚದ ವಿಪತ್ತಿನಲ್ಲಿ ಸಿಲುಕಿ ಮುಕ್ತಿ ಮಾರ್ಗವನ್ನರಿಯಲಾರದೆ ಹೋಗುತ್ತಾನೆ – ಈ ಮಾನವ. ಗುರುಚರಣಕ್ಕೆ ಪ್ರೀತಿ ಮತ್ತು ಭಕ್ತಿಯಿಂದ ನಮಿಸುವುದೊಂದೇ ಮುಕ್ತಿಯ ಮೂಲಸಾಧನ. ಪ್ರತಿಭಾನ್ವಿತರಾದ ಶ್ರೀ ಸಾಯಿಬಾಬಾ ತಮ್ಮ ಭಕ್ತರನ್ನು ಸಂತಸಗೊಳಿಸಿ ಅವರನ್ನು ತಮ್ಮ ಸ್ವಭಾವಕ್ಕೆ ಪರಿವರ್ತಿಸುತ್ತಿದ್ದರು.

ನಾವು ಶ್ರೀ ಸಾಯಿಬಾಬಾ ಅವರನ್ನು ಪರಮಾತ್ಮನ ಅವತಾರರೂಪರೆಂದು ತಿಳಿದು ಗೌರವಿಸುತ್ತೇವೆ. ಆದರೆ, ಯಾವಾಗಲೂ "ನಾನು ದೇವರ ಸೇವಕ ಮತ್ತು ವಿಧೇಯ" ಎಂದು ಹೇಳುತ್ತಿದ್ದರು. ಅವರು ಅವತಾರ ರೂಪಿಗಳಾಗಿ ಜನರಿಗೆ ತಮ್ಮ ತಮ್ಮ ಧರ್ಮಗಳನ್ನು ಕಾಚೂ ತಪ್ಪದೆ ಪಾಲಿಸಿಕೊಂಡು ಬರಬೇಕೆಂದು ಹೇಳಿ ಅವರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡಲು ಶ್ರಮಿಸಿದರು. ಅವರು ಯಾರೊಡನೆಯೂ ಪೈಪೋಟಿ ಮಾಡುತ್ತಿರಲಿಲ್ಲ ಮತ್ತು ಯಾರನ್ನೂ ನಿಂದಿಸುತ್ತಿರಲಿಲ್ಲ. ಸಕಲ ಚರಾಚರಗಳಲ್ಲಿ ಪರಮಾತ್ಮನನ್ನು ಕಂಡು ಅವರಲ್ಲಿ ವಿನಯ ನಮ್ರತೆಗಳಿದ್ದವು.

ಮೂಢರನ್ನೂ ಅಧರ್ಮಿಗಳನ್ನೂ ಸರಿಯಾದ ಹಾದಿಗೆ ತರಲೋಸಗ ಮತ್ತು ಧರ್ಮವನ್ನು ಪ್ರತಿಷ್ಠಾಪಿಸಲೋಸುಗ ಸಂತರು ಅವತಾರ ತಾಳುತ್ತಾರೆ ಎಂಬುದು ನಮಗೆ ತಿಳಿದ ವಿಷಯ. ನಾವು

ಪೂರ್ವಜನ್ಮದಲ್ಲಿ ಸುಕೃತ ಮಾಡಿದ್ದರೆ ಮಾತ್ರ ಅಂತಹ ಸಂತರ ಸಂಪರ್ಕ ಲಭಿಸುವುದು.

## ಯೋಗ ಮತ್ತು ಈರುಳ್ಳಿ

ಒಂದು ಸಾರೆ ಯೋಗ ಸಾಧಕರೊಬ್ಬರು ನಾನಾಸಾಹೇಬ ಚಾಂದೋರಕರರ ಸಂಗಡ ಶಿರ್ಡಿಗೆ ಬಂದರು. ಅವರು ಪಾತಂಜಲಿ ಮೊದಲಾದ ಯೋಗ ಶಾಸ್ತ್ರಗಳನ್ನು ಓದಿದ್ದರೇ ಹೊರತು, ಅವರಿಗೆ ಪ್ರಾಯೋಗಿಕ ಪರಿಶ್ರಮವಿರಲಿಲ್ಲ. ತಮ್ಮ ಮನಸ್ಸನ್ನು ಕೇಂದ್ರೀಕರಿಸಿ ಒಂದು ಕ್ಷಣಕಾಲವಾದರೂ ಸಮಾಧಿಸ್ಥಿತಿಯಲ್ಲಿ ಇಡಲಾಗುತ್ತಿರಲಿಲ್ಲ. ಸಾಯಿಬಾಬಾರವರ ಕೃಪೆಯಾದರೆ ದೀರ್ಘಕಾಲ ಸಮಾಧಿ ಸ್ಥಿತಿಯಲ್ಲಿರಬಹುದೆಂದು ಭಾವಿಸಿ ಶಿರ್ಡಿಗೆ ಬಂದು ಮಸೀದಿಯನ್ನು ಅವರು ಪ್ರವೇಶಿಸಿದರು. ಆಗ ಈರುಳ್ಳಿಯನ್ನು ತಿನ್ನುತ್ತಿದ್ದ ಬಾಬಾ ಅವರನ್ನು ಕಂಡ ಕೂಡಲೇ ಅವರು ಮನಸ್ಸಿನಲ್ಲಿ "ಒಣಗಿದ ರೊಟ್ಟಿ ಮತ್ತು ಈರುಳ್ಳಿ ತಿನ್ನುವ ಫಕೀರನಿಂದ ನನಗೆ ಏನು ಪ್ರಯೋಜನ" ಎಂದುಕೊಂಡರು. ಸಾಯಿಬಾಬಾ ಆ ಗೃಹಸ್ಥರ ಇಂಗಿತವನ್ನು ಕಾಕಾ ಸಾಹೇಬರಿಗೆ "ಯಾರಿಗೆ ಈರುಳ್ಳಿಯನ್ನು ತಿಂದು ಜೀರ್ಣಿಸಿಕೊಳ್ಳುವ ಶಕ್ತಿ ಇರುವದೋ ಅವರು ಮಾತ್ರ ಅದನ್ನು ತಿನ್ನಬಲ್ಲರು.; ಇತರರಿಗೆ ತಿನ್ನಲು ಶಕ್ಯವಿಲ್ಲ" ಎಂದು ಹೇಳಿದರು. ಈ ಮಾತು ಕೇಳಿದ ಆ ಸಾಧಕರಿಗೆ ಆಶ್ಚರ್ಯವಾಯಿತು. ಬಾಬಾರವರ ಪಾದಗಳಿಗೆರಗಿ ಶರಣು ಹೊಂದಿದರು. ನಂತರ ಪರಿಶುದ್ಧವಾದ ಮನಸ್ಸಿನಿಂದ ತಮ್ಮ ಕಷ್ಟಗಳೆಲ್ಲವನ್ನೂ ಬಾಬಾ ಅವರಿಗೆ ಹೇಳಿ ಸಮಂಜಸವಾದ ಉತ್ತರ ಪಡೆದರು. ಈ ರೀತಿ ತೃಪ್ತಿಯಿಂದ ಆಶಿರ್ವಾದ ಪಡೆದು, ಉಧಿಯನ್ನು ಸ್ವೀಕರಿಸಿ ಶಿರ್ಡಿಯಿಂದ ಹೋದರು.

## ಶ್ಯಾಮ ಅವರಿಗೆ ಸರ್ಪದಂಶ

ಈ ಹಿಂದಿನ ಅಧ್ಯಾಯದಲ್ಲಿ ಬಾಬಾ ಹೇಗೆ ಅನಾಹುತಗಳನ್ನು

ನಿರೀಕ್ಷಿಸುತ್ತಿದ್ದರು ಮತ್ತು ಮಿರೀಕರರನ್ನು ಹೇಗೆ ಕಾಪಾಡಿದರು ಎಂಬುದನ್ನು ತಿಳಿಸಿದ್ದೇವೆಯಷ್ಟೆ.

ಈಗ ಇದಕ್ಕಿಂತ ಅದ್ಭುತವಾದ ಕಥೆಯನ್ನು ಕೇಳಿರಿ

ಒಂದು ದಿನ ಶ್ಯಾಮ ಅವರು ವಿಷಪೂರಿವಾದ ಸರ್ಪದಿಂದ ಕಚ್ಚಲ್ಪಟ್ಟರು. ಕಿರುಬೆರಳಿಗೆ ಸರ್ಪವು ಕಡಿದಿದ್ದರಿಂದ ವಿಷವು ದೇಹಕ್ಕೆಲ್ಲ ವ್ಯಾಪಿಸಿತು. ಯಾತನೆ ಬಹಳವಾಗಿ ಅವರಿಗೆ ಬದುಕುವ ಭರವಸೆ ಉಳಿಸಿರಲಿಲ್ಲ. ಅವರ ಸ್ನೇಹಿತರು ಎಂದಿನಂತೆ ಅವರನ್ನು ವಿಠೋಬ ದೇವಾಲಯಕ್ಕೆ ಕರೆದುಕೊಂಡು ಹೋಗಬೇಕೆಂದಿದ್ದರು. ಅಷ್ಟರಲ್ಲಿ ಶ್ಯಾಮ ಅವರು ತಮ್ಮ ವಿಠೋಬ – ಬಾಬಾರವರಲ್ಲಿಗೆ ಮಸೀದಿಗೆ ಧಾವಿಸಿದರು. ಬಾಬಾ ಶ್ಯಾಮ ಅವರನ್ನು ನೋಡಿ ಒಮ್ಮೆಲೆ ಬೈಯಲಾರಂಭಿಸಿದರು. ಕೋಪದಿಂದ "ನೀಚನೇ! ಮೇಲೆ ಹತ್ತಬೇಡ! ಎಚ್ಚರಿಕೆಯಿಂದಿರು! ಹೋಗು, ಇಳಿದು ಹೋಗು!" ಎಂದು ಒದರಾಡಿದರು. ಸಾಯಿಬಾಬಾ ಅವರ ಈ ನಡತೆಯನ್ನು ನೋಡಿ ಶ್ಯಾಮ ಎದೆಗುಂದಿದರು. ಮಸೀದಿಯೇ ತಮ್ಮ ಮನೆ – ಬಾಬಾರವರೇ ತಮ್ಮ ಸರ್ವಸ್ವ ಎಂದು ಭಾವಿಸಿದ್ದವರನ್ನು ಈ ರೀತಿ ಓಡಿಸಿದರೆ ಅವರೆಲ್ಲಿಗೆ ಹೋಗಬೇಕು? ಅವರು ಜೀವಿತದ ಆಶೆ ಬಿಟ್ಟು ಮೌನದಿಂದ ನಿಂತರು. ಸ್ವಲ್ಪ ಹೊತ್ತಿನ ನಂತರ ಬಾಬಾ ಶಾಂತಚಿತ್ತರಾಗಿ ಶ್ಯಾಮ ಅವರನ್ನು ಕರೆದುಕೊಂಡು "ಹೆದರಬೇಡ; ಸ್ವಲ್ಪವೂ ಚಿಂತಿಸಬೇಕಿಲ್ಲ; ದಯಾಮಯನಾದ ಫಕೀರನು ನಿನ್ನನ್ನು ರಕ್ಷಿಸುತ್ತಾನೆ. ಮನೆಗೆ ಹೋಗಿ ಸುಮ್ಮನೆ ಕುಳಿತುಕೋ. ನನ್ನ ಮಾತಿನಲ್ಲಿ ನಂಬಿಕೆ ಇಡು; ಚಿಂತೆ ಬಿಡು" ಎಂದು ಹೇಳಿದರು. ನಂತರ ಕಾಕಾಸಾಹೇಬ ತಾತ್ಯಾ ಪಾಟೀಲರನ್ನು ಕರೆದು ಶ್ಯಾಮನು ತನಗೆ ಬೇಕಾದ ಆಹಾರ ತಿನ್ನಲಿ, ಬೇಕಾದ ಹಾಗೆ ಅಡ್ಡಾಡಲಿ ಆದರೆ ರಾತ್ರಿ ಮಲಗಿಕೊಳ್ಳುವದು ಬೇಡ ಎಂದು ಹೇಳಿ ಕಳುಹಿಸಿದರು. ಇದನ್ನು ಪಾಲಿಸಿದ ಶ್ಯಾಮ ಮರುದಿನ ಬೆಳಿಗ್ಗೆ ಗುಣ ಹೊಂದಿದರು. ಬಾಬಾ ಅವರು "ಹೋಗು! ಹೋಗು!

ಇಳಿದು ಹೋಗು" ಎಂದು ಹೇಳಿದ್ದುದು ಶ್ಯಾಮ ಅವರಿಗಲ್ಲ; ಅದು ಸರ್ಪಕ್ಕೆ ಮತ್ತು ಅದರ ಮತ್ತು ಅದರ ವಿಷಕ್ಕೆ ನೇರವಾದ ಆಜ್ಞೆಯಾಗಿತ್ತೆಂಬುದನ್ನು ನಾವು ಗಮನಿಸಬೇಕು. ಇತರರಂತೆ ಅವರು ಮಂತ್ರ ಉಪಯೋಗಿಸಲಿಲ್ಲ. ಅವರ ಮಾತುಗಳೇ ಮಂತ್ರಗಳಾಗಿದ್ದವು.

ಯಾರು ಈ ಕಥೆಯನ್ನಾಗಲಿ ಅಥವಾ ಇದೇ ತರದ ಬೇರೆ ಕಥೆಯನ್ನಾಗಲಿ ಕೇಳುವರೋ ಅವರಿಗೆ ಬಾಬಾರವರಲ್ಲಿ ದೃಢನಂಬಿಕೆ ಉಂಟಾಗುವುದು. ಈ ಮಾಯೆ ಎಂಬ ಸಂಸಾರ ಸಾಗರವನ್ನು ದಾಟಲು ಸುಲಭವಾದ ಸಾಧನವೆಂದರೆ ಸಾಯಿಬಾಬಾರವರ ನಾಮಸ್ಮರಣೆ.

## ಕಾಲಾರಾ ನಿಯಮೋಲ್ಲಂಘನೆ

ಒಂದು ಸಾರೆ ಕಾಲಾರಾ ಅಂಟು ಜಾಡ್ಯವು ಶಿರ್ಡಿಯಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಗ್ರಾಮವಾಸಿಗಳು ಶಿರ್ಡಿ ಮತ್ತಿತರ ಅಕ್ಕಪಕ್ಕದ ಊರುಗಳ ನಡುವೆ ಇದ್ದ ಸಾರಿಗೆ ಸಂಪರ್ಕಗಳನ್ನು ಕಡಿದು ಹಾಕಿದರು. ಊರಿನವರೆಲ್ಲ ಸೇರಿ ಕಾಲರಾ ತಡೆಗಟ್ಟಲು, ಯಾವ ಸೌದೆಗಾಡಿಯೂ ಶಿರ್ಡಿಯೊಳಗೆ ಬರಬಾರದು ಮತ್ತು ಯಾರೂ ಪ್ರಾಣಿವಧೆ ಮಾಡಬಾರದು ಎಂಬ ನಿಯಮಗಳನ್ನು ವಿಧಿಸಿ ಅವುಗಳನ್ನು ಮೀರಿ ನಡೆದವರಿಗೆ ದಂಡ ವಿಧಿಸಬೇಕೆಂದು ತೀರ್ಮಾನಿಸಿದರು. ಬಾಬಾ ಜನರ ಈ ಮೂಢ ನಂಬಿಕೆಯನ್ನು ಅರಿತು ಅವುಗಳನ್ನು ಗಮನಿಸಲೇ ಇಲ್ಲ. ಈ ನಿಯಮ ಜಾರಿಯಲ್ಲಿರುವಾಗಲೇ ಸೌದೆ ಗಾಡಿಯೊಂದು ಶಿರ್ಡಿಗೆ ಬಂದಿತು. ಆಗ ಹಳ್ಳಿಯಲ್ಲಿ ಕಟ್ಟಿಗೆಯ ಅಭಾವವಿತ್ತು. ಆದರೂ ನಿಯಮಕ್ಕನುಸಾರವಾಗಿ ಯಾರೂ ಕಟ್ಟಿಗೆ ಗಾಡಿಯನ್ನು ಊರೊಳಗೆ ಬಿಡಲಿಲ್ಲ. ಇದನ್ನು ನೋಡಿದ ಕೂಡಲೇ ಬಾಬಾ ಸ್ವತ: ಅಲ್ಲಿಗೆ ಬಂದು ಕಟ್ಟಿಗೆ ಗಾಡಿಯನ್ನು ಊರೊಳಗೆ ಕರೆದುಕೊಂಡು ಹೋದರು. ಬಾಬಾ ಅವರನ್ನು ತಡೆಯಲು ಯಾರಿಗೂ ಧೈರ್ಯವಿರಲಿಲ್ಲ. ಧುನಿಗೆ ಕಟ್ಟಿಗೆ ಬೇಕಾಗಿದ್ದುದರಿಂದ ಎಲ್ಲ ಕಟ್ಟಿಗೆಯನ್ನು ಅವರೇ ಕೊಂಡರು.

ಬಾಬಾ ಹಗಲಿರುಳು ಧುನಿಯನ್ನು ಉರಿಸುತ್ತಲೇ ಇದ್ದರು. ಆದುದರಿಂದ ಅವರು ಕಟ್ಟಿಗೆಯನ್ನು ಶೇಖರಿಸಿ ಇಡುತ್ತಿದ್ದರು. ಬಾಬಾರವರ ಮಸೀದಿಗೆ ಯಾರು ಬೇಕಾದರೂ ಬರಬಹುದಾಗಿತ್ತು. ಅವರು ಬಾಗಿಲನ್ನಾಗಲಿ ಬೀಗವನ್ನಾಗಲಿ ಹಾಕುತ್ತಿರಲಿಲ್ಲ. ಕೆಲವು ಬಡವರು ತಮಗೆ ಬೇಕಾದಾಗ ಮಸೀದಿಯಿಂದ ಕಟ್ಟಿಗೆ ತೆಗೆದುಕೊಂಡು ಹೋಗುತ್ತಿದ್ದರು. ಅದಕ್ಕೆ ಬಾಬಾ ಎಂದೂ ಬೇಡವೆನ್ನುತ್ತಿರಲಿಲ್ಲ. ಪ್ರಪಂಚದಲ್ಲೆಲ್ಲ ಪರಮಾತ್ಮ ವ್ಯಾಪಿಸಿರುತ್ತಾನೆ ಎಂಬುದನ್ನು ಅವರು ಮನಗಂಡಿದ್ದರು. ಯಾರಲ್ಲಿಯೂ ದ್ವೇಷ ಬೆಳೆಸುತ್ತಿರಲಿಲ್ಲ. ಬಾಬಾ ವಿರಕ್ತರಾಗಿದ್ದರೂ ಸಾಮಾನ್ಯ ಜನರಂತೆ ಎಲ್ಲರೊಡನೆ ಕಲೆತು ಮಾರ್ಗದರ್ಶಕರಾಗಿದ್ದರು.

## ಭಕ್ತಿಯ ಪರೀಕ್ಷೆ

ಬಾಬಾ ಎರಡನೆಯ ನಿಯಮವನ್ನು ಹೇಗೆ ಮುರಿದರೆಂಬುದನ್ನು ಈಗ ನೋಡೋಣ.

ಈ ನಿಯಮ ಜಾರಿಯಲ್ಲಿರುವಾಗ ಯಾರೋ ಒಬ್ಬರು ಮಸೀದಿಯ ಹತ್ತಿರ ಒಂದು ಆಡನ್ನು ಹೊಡೆದುಕೊಂಡು ಹೋಗುತ್ತಿದ್ದರು. ಅದು ಬಹಳ ಕೃಶವಾಗಿ ಮರಣಾವಸ್ಥೆಯಲ್ಲಿತ್ತು. ಆ ಸಮಯದಲ್ಲಿ ಮಾಲೇಗಾಂವ ಪೀರ ಅಹಮದ–ಬಡೇಬಾಬಾ – ಅವರು ಅಲ್ಲಿದ್ದರು. ಬಾಬಾ ಆ ಆಡನ್ನು ಒಂದೇ ಏಟಿಗೆ ಕಡಿದು ಕೊಲ್ಲಬೇಕೆಂದು ಅವರಿಗೆ ಹೇಳಿದರು. ಬಡೇಬಾಬಾ ಸಾಯಿಬಾಬಾವರಲ್ಲಿ ಬಹಳ ಗೌರವವನ್ನಿಟ್ಟಿದ್ದರು. ಅವರು ಯಾವಾಗಲೂ ಬಾಬಾ ಅವರ ಬಲಗಡೆಗೆ ಕುಳಿತಿರುತ್ತಿದ್ದರು. ಬಡೇಬಾಬಾ ಹುಕ್ಕಾ ಸೇದಿದ ನಂತರವೇ ಅದನ್ನು ಬಾಬಾ ಸೇದುತ್ತಿದ್ದರು. ಮಧ್ಯಾಹ್ನದ ಊಟದ ಸಮಯದಲ್ಲಿ ಎಲೆ ಬಡಿಸಿದ ನಂತರ ಬಾಬಾ ಅವರು ಬಡೇಬಾಬಾ ಅವರನ್ನು ಕರೆದು ಪಕ್ಕದಲ್ಲಿ ಕೂಡ್ರಿಸಿಕೊಂಡು ಊಟ ಮಾಡುತ್ತಿದ್ದರು. ಬಾಬಾ ತಾವು ಪಡೆದ ದಕ್ಷಿಣೆಯಿಂದ

ಪ್ರತಿದಿನವೂ ಅವರಿಗೆ ೫೦.ರೂ.ಗಳನ್ನು ಕೊಡುತ್ತಿದ್ದರು. ಬಡೇಬಾಬಾ ಮಸೀದಿಯಿಂದ ಹೋರಡುವಾಗ ಸ್ವಲ್ಪ ದೂರ ಅವರನ್ನು ಹಿಂಬಾಲಿಸಿ ಹೋಗಿ ಬೀಳ್ಕೊಡುತ್ತಿದ್ದರು. ಅವರ ಮೇಲೆ ಅಷ್ಟೊಂದು ಬಾಬಾರವರ ಪ್ರೀತಿ, ವಿಶ್ವಾಸ ಮತ್ತು ಆದರ! ಬಾಬಾ ಅವರು ಆಡನ್ನು ವಧಿಸು ಎಂದು ಹೇಳಿದುದನ್ನು ಕೇಳಿ ಅವರು, "ಕಾರಣವಿಲ್ಲದೆ ಅದನ್ನೇಕೆ ವಧಿಸಬೇಕು"? ಎಂದು ಹೇಳಿ ನಿರಾಕರಿಸಿದರು. ನಂತರ ಬಾಬಾ ಶ್ಯಾಮ ಅವರಿಗೆ ಆಜ್ಞಾಪಿಸಿದರು. ಶ್ಯಾಮ ಕೂಡಲೇ ರಾಧಾಕೃಷ್ಣಮಾಯಿ ಬಳಿಗೆ ಹೋಗಿ ಚೂರಿಯನ್ನು ತಂದು ಬಾಬಾ ಅವರ ಮುಂದಿಟ್ಟರು. ರಾಧಾಕೃಷ್ಣಮಾಯಿಗೆ ಸಮಾಚಾರ ತಿಳಿಯಿತು. ಆದುದರಿಂದ ಅವರು ಶ್ಯಾಮ ಅವರನ್ನು ಕರೆದು ಚೂರಿಯನ್ನು ಮರಳಿ ಕೊಡುವಂತೆ ಹೇಳಿದಳು. ಶ್ಯಾಮ ಬೇರೆ ಚೂರಿಯನ್ನು ತೆಗೆದುಕೊಂಡು ಬರುವೆನೆಂದು ಹೇಳಿ ಹೊರಟು ಹೋಗಿ ಹಿಂದಿರುಗಲೇ ಇಲ್ಲ. ನಂತರ ಕಾಕಾಸಾಹೇಬರ ಸರತಿ ಬಂದಿತು. ಅವರು ಪುಟವಿಟ್ಟ ಚಿನ್ನ. ಆದರೂ ಪರೀಕ್ಷಿಸಲೇ ಬೇಕಿತ್ತು. ಬಾಬಾ ಅವರು ದೀಕ್ಷಿತರ ಕೈಗೆ ಚೂರಿ ಕೊಟ್ಟು ಆಡನ್ನು ವಧಿಸಲು ಆಜ್ಞೆ ಮಾಡಿದರು. ಕೂಡಲೇ ಕಾಕಾ ಆಜ್ಞೆ ಪಾಲಿಸಲು ಸಿದ್ಧರಾದರು. ಕಾಕಾ ಸಾಹೇಬ ಶುದ್ಧ ಬ್ರಾಹ್ಮಣರು. ಪ್ರಾಣಿವಧೆ ಅವರಿಂದ ಕನಸಿನಲ್ಲಿಯೂ ಆಗದ ವಾತು. ಹಿಂಸಾತ್ಮಕವಿಚಾರಗಳಿಗೆ ಹಿಂಜರಿಯುತ್ತಿದ್ದ ಅವರು ಆಡನ್ನು ವಧಿಸಲು ನಿಶ್ಚಯ ಮಾಡಿದರು. ಅಲ್ಲಿದ್ದವರೆಲ್ಲರೂ, ಮಹಮ್ಮದೀಯರಾದ ಬಡೇ ಬಾಬಾರವರೇ ಸಮ್ಮತಿಸಲಿಲ್ಲ – ಈ ಅಂಜುಬುರುಕ ಬ್ರಾಹ್ಮಣ ಹೇಗೆ ಸಮ್ಮತಿಸಿದರು! ಎಂದು ಅಚ್ಚರಿಗೊಂಡರು. ಧೋತರ ಏರಿಸಿ, ಕೈಯನ್ನು ಮೇಲಕ್ಕೆತ್ತಿ ಬಾಬಾರವರ ಕೊನೆಯ ಆಜ್ಞೆಯನ್ನು ಕಾಕಾ ನಿರೀಕ್ಷಿಸುತ್ತಿದ್ದರು. ಆಗ ಬಾಬಾ "ಏನು ಯೋಚಿಸುತ್ತಿರವೆ? ಕೊಲ್ಲು!" ಎಂದು ನುಡಿದರು. ಆಗ ಕಾಕಾ ತತ್‌ಕ್ಷಣ ಆಡಿಗೆ ಹೊಡೆಯುವದರಲ್ಲಿದ್ದರು. ಕೂಡಲೇ ಬಾಬಾ "ನಿಲ್ಲು, ನೀನೆಷ್ಟು ಕಠಿಣ ಹೃದಯದವನು! ಅದನ್ನೇಕೆ ಕೊಲ್ಲುವೆ?" ಎಂದು ಅವರನ್ನು ತಡೆದರು. ಆಗ ಕಾಕಾಸಾಹೇಬರು

ಚೂರಿಯನ್ನು ಕೆಳಗೆ ಇಟ್ಟು "ಬಾಬಾ, ನಿಮ್ಮ ಅಮೃತ ವಾಣಿಯೇ ನಮಗೆ ಶಾಸನ. ನಮಗೆ ಇತರ ನಿಯಮಗಳು ತಿಳಿದಿಲ್ಲ. ನಾವು ನಿಮ್ಮನ್ನೇ ನಂಬಿರುವೆವು. ಯಾವುದು ಹಿತಕರ ಮತ್ತು ಯಾವುದು ಅಹಿತಕರ ಎಂಬ ಬಗ್ಗೆ ನಮಗೆ ಪರಿವೆ ಇಲ್ಲ. ಮತ್ತು ಅದನ್ನು ಚಿಂತಿಸುವ ಗೊಡವೆಗೂ ಸಹ ನಾವು ಹೋಗುವುದಿಲ್ಲ. ಗುರುವಿನ ಆಜ್ಞೆಯಂತೆ ಚಾಚೂ ತಪ್ಪದೆ ನಡೆದುಕೊಳ್ಳುವುದೇ ನಮ್ಮ ಧರ್ಮ" ಎಂದರು.

ಆಗ ಬಾಬಾ ತಾವೇ ಅದರ ಆಹುತಿಯನ್ನು ಮಾಡುವೆನೆಂದು ಹೇಳಿದರು. ಫಕೀರರು ತಂಗುವ ತಕಿಯಾ ಎಂಬ ಸ್ಥಳದಲ್ಲಿ ಅದರ ಆಹುತಿ ಮಾಡಬೇಕೆಂದು ಎಲ್ಲರೂ ನಿರ್ಧರಿಸಿದರು. ಆದರೆ ಅದು ಮಾರ್ಗದಲ್ಲಿಯೇ ಮರಣಹೊಂದಿತು!

ಹೇಮಾಡಪಂತರು ಶಿಷ್ಯರನ್ನು ಈ ಕೆಳಕಂಡಂತೆ ವಿಂಗಡಿಸಿ ಈ ಅಧ್ಯಾಯವನ್ನು ಮುಗಿಸಿರುತ್ತಾರೆ.

೧) ಉತ್ತಮ ೨) ಮಧ್ಯಮ ಮತ್ತು ೩) ಸಾಮಾನ್ಯ

ಗುರುವಿಗೆ ಏನು ಬೇಕು ಎಂಬುದನ್ನರಿತು ಅವರ ಆಜ್ಞೆಗಾಗಿ ಕಾಯದೆ, ಅವರ ಸೇವೆ ಮಾಡುವವರು, ಮೊದಲನೇ ವರ್ಗಕ್ಕೆ ಸೇರಿದವರು. ಅವರ ಆಜ್ಞೆಯನ್ನು ಬರಿ ಪರಿಪಾಲಿಸುವವರು ಎರಡನೇ ವರ್ಗಕ್ಕೆ ಸೇರಿದವರು. ಗುರುವಿನ ಆಜ್ಞೆಯನ್ನು ಪಾಲಿಸದವರು ಮತ್ತು ತಮ್ಮ ಕರ್ತವ್ಯವನ್ನು ಮುಂದೂಡುವವರು ಮೂರನೇ ವರ್ಗಕ್ಕೆ ಸೇರಿದವರು.

ಶಿಷ್ಯರಿಗೆ ಗುರುವಿನಲ್ಲಿ ದೃಢವಾದ ನಂಬಿಕೆ ಇರಬೇಕು. ಆಗ ಅವರು ತಾಳ್ಮೆಯಿಂದ ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಸಾಧ್ಯವಾಗುವುದು. ಅವರಿಗೆ ಹಠ ಯೋಗ ಮತ್ತು ಇತರ

ಯೋಗಾಧ್ಯಯನಗಳ ಅವಶ್ಯಕತೆ ಇರುವುದಿಲ್ಲ. ಇಂಥ ಭಕ್ತರು ಬಹು ಶೀಘ್ರವಾಗಿ ಮುಕ್ತಿಮಾರ್ಗವನ್ನು ಕ್ರಮಿಸುವರು.

ಮುಂದಿನ ಅಧ್ಯಾಯದಲ್ಲಿ ಬಾಬಾ ಅವರ ಹಾಸ್ಯ ಮತ್ತು ವಿನೋದವನ್ನು ನೋಡೋಣ.

ಶ್ರೀ ಸಾಯಿ ಪ್ರಣಾಮ

# ೨೪ನೇ ಅಧ್ಯಾಯ

## ಬಾಬಾ ಅವರ ಹಾಸ್ಯ – ಹೇಮಾಡಪಂತರ ಪುಟಾಣಿ – ಸುದಾಮ – ಅಣ್ಣಾ ಚಿಂಚಣೀಕರ – ಮಾವಸೀಬಾಯಿ

ಇಂತಹದನ್ನು ಮುಂದೆ ಹೇಳುತ್ತೇವೆ ಎಂದು ಹೇಳುವದು ಒಂದು ತರದ ಅಹಂಕಾರವೇ ಸರಿ. ಅಹಂಕಾರವನ್ನು ಗುರುವಿನ ಪಾದಗಳಿಗೆ ಅರ್ಪಿಸದಿದ್ದರೆ ನಮ್ಮ ಕಾರ್ಯದಲ್ಲಿ ನಾವು ಜಯಗಳಿಸಲಾಗುವುದಿಲ್ಲ. ಅಹಂಕಾರ ರಹಿತರಾದರೆ ಮಾತ್ರ ನಮಗೆ ಜಯ ಖಂಡಿತ.

ಸಾಯಿಬಾಬಾ ಅವರ ಆರಾಧಾನೆಯಿಂದ ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಸುಖಗಳನ್ನು ಹೊಂದಬಹುದು ಮತ್ತು ಶಾಂತಿ ಪಡೆಯಬಹುದು. ಯಾರಿಗೆ ಇವುಗಳನ್ನು ಸಾಧಿಸಬೇಕೆಂಬ ಆಶೆ ಇರುವದೋ ಅಂಥವರು ಸಾಯಿಬಾಬಾ ಅವರ ಲೀಲೆಗಳನ್ನು ಶ್ರವಣ ಮಾಡಿ ಧ್ಯಾನಿಸಬೇಕು. ಇದನ್ನು ಅಭ್ಯಾಸಮಾಡಿದರೆ ಗುರಿ ಸಾಧಿಸಿದಂತೆ.

ಸಾಮಾನ್ಯವಾಗಿ ಹಾಸ್ಯ ಮತ್ತು ವಿನೋದವೆಂದರೆ ಎಲ್ಲರಿಗೂ ಪ್ರಿಯವಾದದ್ದು. ಆದರೆ ತಾವೇ ಹಾಸ್ಯಕ್ಕೆ ಗುರಿಯಾಗಲು ಯಾರು ಇಷ್ಟಪಡುವುದಿಲ್ಲ. ಬಾಬಾ ಅವರ ರೀತಿ ವಿಚಿತ್ರವಾಗಿತ್ತು. ಅವರ ವಿನೋದಗಳು ಬೋಧಪ್ರದವಾಗಿಯೂ ಮನರಂಜಕವಾಗಿಯೂ ಇದ್ದವು. ಆದ್ದರಿಂದ ಭಕ್ತರು ಅನ್ಯಥಾ ಭಾವಿಸುತ್ತಿರಲಿಲ್ಲ. ತಮಗೆ ಸಂಬಂಧಿಸಿದ ಇಂಥ ಒಂದು ಕಥೆಯನ್ನು ಈ ರೀತಿ ಹೇಮಾಡಪಂತರು ವಿವರಿಸಿದ್ದಾರೆ.

### ಪುಟಾಣಿ ಲೀಲೆ

ಪ್ರತಿ ಭಾನುವಾರ ಶಿರ್ಡಿಯಲ್ಲಿ ಸಂತೆ ನಡೆಯುತ್ತಿತ್ತು. ಆ ದಿನ ಮಸೀದಿಯಲ್ಲಿ ಸಹ ಜನಜಂಗುಳಿ ನೆರೆದಿರುತ್ತಿತ್ತು. ಒಂದು ಭಾನುವಾರ ಹೇಮಾಡಪಂತರು ಬಾಬಾ ಅವರ ಮುಂದೆ ಕುಳಿತು ಅವರ

ಕಾಲುಗಳನ್ನು ಒತ್ತುತ್ತಿದ್ದರು. ಶ್ಯಾಮ ಅವರು ಬಾಬಾ ಅವರ ಎಡಗಡೆಗೂ, ವಾಮನರಾವ ಬಾಬಾ ಅವರ ಬಲಗಡೆಗೂ ಕುಳಿತ್ತಿದ್ದರು. ಬಾಪೂಸಾಹೇಬ ಬೂಟಿ ಮತ್ತು ಕಾಕಾಸಾಹೇಬ ದೀಕ್ಷಿತ ಅವರೂ ಸಹ ಹಾಜರಿದ್ದರು. ಆಗ ಶ್ಯಾಮ ಹೇಮಾಡಪಂತರನ್ನು ನೋಡಿ ನಗುತ್ತ "ಇದೇನು, ನಿನ್ನ ಕೋಟಿನ ತೋಳುಗಳಿಗೆ ಕಾಳುಗಳು ಹತ್ತಿವೆ!" ಎಂದು ಕೇಳಿದರು. ಆಗ ಹೇಮಾಡಪಂತರು ತಮ್ಮ ತೋಳನ್ನು ಅಲ್ಲಾಡಿಸಿದರು. ಅಗ ಕೆಲವು ಪುಟಾಣಿ ಕಾಳುಗಳು ಉರುಳಿ ಕೆಳಗೆ ಬಿದ್ದವು. ಎಲ್ಲರೂ ಅವುಗಳನ್ನು ಆರಿಸಲು ಆರಂಭ ಮಾಡಿದರು. ಪುಟಾಣಿ ಕಾಳುಗಳು ತೋಳುಗಳಲ್ಲಿ ಹೇಗೆ ಸೇರಿಕೊಂಡವು ಎಂದು ಎಲ್ಲರಿಗೂ ಆಶ್ಚರ್ಯವಾಯಿತು. ಹೇಮಾಡಪಂತರೂ ಸಹ ಅಲೋಚಿಸಿ ವಿಫಲರಾದರು. ನಂತರ ಈ ರೀತಿ ಸಂಭಾಷಣೆ ನಡೆಯಿತು.

ಬಾಬಾ:– "ಯಾರಿಗೂ ಕೊಡದೆ ತಾನು ಒಬ್ಬನೇ ತಿನ್ನುವ ಅಭ್ಯಾಸವಿಟ್ಟುಕೊಂಡಿದ್ದಾನೆ ಈ ಹೇಮಾಡಪಂತ. ಈ ದಿವಸ ಸಂತೆ. ಆದ್ದರಿಂದ ಕಾಳು ಕೊಂಡು ತಿನ್ನುತ್ತ ಬಂದಿದ್ದಾನೆ. ಅದು ನನಗೆ ಗೊತ್ತು – ಈ ಕಾಳುಗಳೇ ಸಾಕ್ಷಿ. ಇದರಲ್ಲಿ ಆಶ್ಚರ್ಯವೇನು?"

ಹೇಮಾಡಪಂತ:– "ಬಾಬಾ ನಾನು ಒಬ್ಬಂಟಿಗನಾಗಿ ತಿನ್ನುವದನ್ನೇ ಅರಿಯೆನು. ನನ್ನ ಮೇಲೆ ಅಪವಾದವೇಕೆ ? ನಾನು ಇದುವರೆಗೂ ಸಂತೆಯನ್ನೇ ನೋಡಿಲ್ಲ. ಸಂತೆಗೆ ಹೋಗಿಯೂ ಇಲ್ಲ. ಆದ್ದರಿಂದ ನಾನು ಪುಟಾಣಿ ಕೊಳ್ಳಲು ಹೇಗೆ ಸಾಧ್ಯ? ಪುಟಾಣಿಯನ್ನು ನಾನು ತರದೇ ಇದ್ದಾಗ ನಾನೊಬ್ಬನೇ ತಿನ್ನುವ ಪ್ರಶ್ನೆ ಹೇಗೆ ಬರುತ್ತದೆ? ನನ್ನೊಡನೆ ಇರುವವರಿಗೆ ಹಂಚದೆ ನಾನು ಏನನ್ನೂ ತಿನ್ನುವುದಿಲ್ಲ."

ಬಾಬಾ:– "ಹೌದು! ನೀನು ನಿನ್ನೊಡನೆ ಇರುವವರಿಗೆಲ್ಲ ಹಂಚಿ ತಿನ್ನುವೆ ಎಂಬುದು ನಿಜ. ಯಾರೂ ನಿನ್ನ ಸಮೀಪದಲ್ಲಿ ಇಲ್ಲದಿದ್ದರೆ ಏನು ಮಾಡುವೆ? ತಿನ್ನುವ ಮೊದಲು ನನ್ನನ್ನು ಜ್ಞಾಪಿಸಿಕೊಳ್ಳುವೆಯೋ? ನನಗೇನಾದರೂ ಕೊಡುವೆಯೋ?"

## ನೀತಿ

ಇದರಿಂದ ಬಾಬಾ ಯಾವ ನೀತಿಯನ್ನು ಹೇಳಿದ್ದಾರೆಂಬುದನ್ನು ಗಮನಿಸೋಣ. ನಮ್ಮ ಇಂದ್ರಿಯಗಳು ವಿಷಯಗಳಿಂದ ಸಂತೋಷಪಡುವ ಮುನ್ನ ನಾವು ಪರಮಾತ್ಮನನ್ನು ಸ್ಮರಿಸಬೇಕು. ಇಂದ್ರಿಯಗಳು ಅಭಿಲಾಷೆ ಇರದೆ ಇರಲಾರವು. ಆದರೆ ವಿಷಯಗಳನ್ನು ಮೊದಲು ಗುರುವಿಗೆ ಅರ್ಪಣೆ ಮಾಡಿದರೆ ಅವುಗಳಲ್ಲಿ ನಮಗೆ ಮೋಹ ಉಂಟಾಗುವುದಿಲ್ಲ. ಈ ರೀತಿ ಆಶೆ, ಕೃಪಣತೆ, ಕೋಪ, ಎಂಬ ವೃತ್ತಿಗಳನ್ನು ಮೊದಲು ಗುರುವಿಗೆ ಅರ್ಪಿಸಿದರೆ ದೇವರು ನಮಗೆ ಸಹಾಯವೆಸಗುತ್ತಾನೆ. ವಿಷಯವನ್ನು ಭೋಗಿಸುವ ಮೊದಲೆ ನಮ್ಮ ಹತ್ತಿರವೇ ಇರುವ ಬಾಬಾ ಅವರನ್ನು ಸ್ಮರಿಸಿದರೆ ವಿಷಯವು ಭೋಗ್ಯಾರ್ಹವೆ ಎಂಬ ಪ್ರಶ್ನೆ ಉದ್ಭವಿಸುವುದು. ವಿಷಯವು ಭೋಗ್ಯಾರ್ಹವಲ್ಲದಿದ್ದರೆ ಅದನ್ನು ತಿರಸ್ಕರಿಸುವ ಪರಿಜ್ಞಾನ ಉಂಟಾಗುವುದು. ಆಗ ನಮ್ಮ ಕೆಟ್ಟ ಭಾವನೆಗಳು ದೂರವಾಗಿ ಶಾಂತಿ ದೊರೆಯುತ್ತದೆ. ಆಗ ಗುರುವಿನಲ್ಲಿ ಪ್ರೀತಿ ಜನಿಸಿ ಜ್ಞಾನವು ತಾನಾಗಿಯೇ ಉಕ್ಕುತ್ತದೆ. ಜ್ಞಾನ ಉದಯವಾದರೆ ಈ ದೇಹ ಸ್ಮೃತಿಯೆಂಬ ಬಂಧನದಿಂದ ಮುಕ್ತವಾಗಿ ನಮ್ಮ ಬುದ್ಧಿಯು ಚೈತನ್ಯ ಸ್ಮೃತಿಯಲ್ಲಿ ಲೀನವಾಗುತ್ತದೆ. ಆಗ ನಾವು ಹರ್ಷ ಮತ್ತು ತೃಪ್ತಿಯನ್ನು ಪಡೆಯುತ್ತೇವೆ. ಆಗ ಗುರುವಿಗೂ ಪರಮಾತ್ಮನಿಗೂ ವ್ಯತ್ಯಾಸ ಕಂಡು ಬರುವುದಿಲ್ಲ. ಆದ್ದರಿಂದ ಈ ಭೇದಭಾವ ಬದಿಗಿಟ್ಟು ದೇವರು ಮತ್ತು ಗುರು ಇವರು ಒಂದೇ ಎಂಬ ಭಾವನೆಯಿಂದ ಮೇಲೆ ಹೇಳಿದ ರೀತಿಯಲ್ಲಿ ಗುರುವಿನ ಸೇವೆ ಮಾಡಿದರೆ ಪರಮಾತ್ಮನು ಮೆಚ್ಚಿ ನಮಗೆ ಆತ್ಮಜ್ಞಾನವನ್ನು ದಯಪಾಲಿಸುತ್ತಾನೆ. ಸಂಕ್ಷಿಪ್ತವಾಗಿ ಹೇಳುವದಾದರೆ, ಯಾವ ವಸ್ತುವನ್ನೂ ಗುರುವಿನ ಸ್ಮರಣೆಯಿಲ್ಲದೆ ಇಂದ್ರಿಯಗಳಿಗೆ ಅರ್ಪಿಸಬಾರದು. ನಮ್ಮ ಮನಸ್ಸು ಈ ರೀತಿ ತಯ್ಯಾರಾದರೆ ನಮಗೆ ಯಾವಾಗಲೂ ಬಾಬಾರವರ ನೆನಪು ಬಂದು ನಮ್ಮ ಧ್ಯಾನವು ಶೀಘ್ರವಾಗಿ ಬೆಳೆಯುವುದು. ಬಾಬಾ ಅವರ ಸಗುಣರೂಪವು ನಮ್ಮದೇ

ಆಗುವವು. ಈ ರೀತಿ ಬಾಬಾ ಅವರ ರೂಪವನ್ನು ನಮ್ಮ ಮಾನಸಿಕ ದೃಷ್ಟಿಯಲ್ಲಿ ನೆಲೆಗೊಳಿಸಿದಾಗ ಹಸಿವು, ತೃಷೆ ಮತ್ತು ಸಂಸಾರದ ಸುಖ ಎಲ್ಲವೂ ಮಾಯವಾಗಿ ನಮಗೆ ಶಾಂತಿ ದೊರೆಯುತ್ತದೆ.

## ಸುದಾಮ

ಈ ಮೇಲಿನ ಕಥೆಯನ್ನು ಹೇಳುತ್ತಿರುವಾಗ ಹೇಮಾಡಪಂತರಿಗೆ ಇದೇ ನೀತಿಯನ್ನು ನಿರೂಪಿಸಿದ ಸುದಾಮನ ಕಥೆ ನೆನಪಿಗೆ ಬಂದು ಅದನ್ನು ಈ ರೀತಿ ವಿವರಿಸಿರುತ್ತಾರೆ:

ಶ್ರೀಕೃಷ್ಣ ಮತ್ತು ಅವನ ಅಗ್ರಜ ಬಲರಾಮ, ತಮ್ಮ ಸಹ ವಿದ್ಯಾರ್ಥಿಯಾದ ಸುದಾಮನೊಡನೆ ಸಂದೀಪನಿ ಎಂಬ ಗುರುವಿನ ಆಶ್ರಮದಲ್ಲಿ ವಾಸಿಸುತ್ತಿದ್ದರು. ಕೃಷ್ಣ ಮತ್ತು ಬಲರಾಮರು ಒಂದು ದಿನ ಸೌದೆ ತರಲು ಕಾಡಿಗೆ ಹೋದರು. ಆಗ ಋಷಿ ಪತ್ನಿಯು ಮೂವರಿಗೂ ಸಾಕಾಗುವಷ್ಟು ಕಡಲೆ ಕೊಟ್ಟು ಸುದಾಮನನ್ನು ನಂತರ ಕಳುಹಿದಳು. ಕೃಷ್ಣನು ಸುದಾಮನನ್ನು ಕಾಡಿನಲ್ಲಿ ಸಂಧಿಸಿ, "ದಾದಾ, ಬಹಳ ಬಾಯಾರಿಕೆಯಾಗಿದೆ, ನನಗೆ ನೀರು ಬೇಕು" ಎಂದನು. ಅದಕ್ಕೆ ಸುದಾಮನು "ಹೊಟ್ಟೆ ಬರಿದಾಗಿರುವಾಗ ನೀರು ಕುಡಿಯಬಾರದು, ಸ್ವಲ್ಪ ಹೊತ್ತು ವಿಶ್ರಮಿಸಿಕೊ" ಎಂದು ಹೇಳಿದನು. 'ನಾನು ಕಡಲೆ ತಂದಿದ್ದೇನೆ, ತೆಗೆದುಕೋ' ಎಂದು ಆತ ಹೇಳಲೆ ಇಲ್ಲ. ಕೃಷ್ಣನು ಆಯಾಸವಾಗಿದ್ದರಿಂದ ಸುದಾಮನ ತೊಡೆಯ ಮೇಲೆ ಮಲಗಿದನು. ಇದನ್ನು ನೋಡಿದ ಸುದಾಮನು ಕಡಲೆಯನ್ನು ತಿನ್ನಲು ಪ್ರಾರಂಬಿಸಿದನು. ಆಗ ಕೃಷ್ಣನು ಎಚ್ಚರಾಗಿ, "ದಾದಾ ಏನು ತಿನ್ನುತ್ತಿರುವೆ? ಸಪ್ಪಳವೇಕೆ?" ಎಂದು ಕೇಳಿದನು. ಅದಕ್ಕೆ ಸುದಾಮನು "ತಿನ್ನುವುದಕ್ಕೇನಿದೆ? ಚಳಿಯಿಂದ ನಡುಗುತ್ತಿದ್ದೇನೆ. ವಿಷ್ಣು ಸಹಸ್ರನಾಮವನ್ನು ಉಚ್ಚರಸಲೂ ಸಹ ಆಗುವುದಿಲ್ಲ" ಎಂದನು. ಇದನ್ನು ಕೇಳಿ ಸರ್ವಜ್ಞನಾದ ಕೃಷ್ಣನು, "ನಾನೊಂದು ಕನಸನ್ನು

ಕಂಡೆ. ಅದರಲ್ಲಿ ಒಬ್ಬನು ಬೇರೆಯವರಿಗಾಗಿ ಕೊಟ್ಟ ಪದಾರ್ಥವನ್ನು ಅವರಿಗೆ ತಿಳಿಯದಂತೆ ತಿನ್ನುತ್ತಿದ್ದನು. ಅವನನ್ನು ವಿಚಾರಿಸಿದಾಗ " ಏನು ಮಣ್ಣು ತಿನ್ನಲಿ?" ಅಂದನು ಅದಕ್ಕೆ ಇನ್ನೊಬ್ಬನು "ಅದು ಹಾಗೆಯೇ ಅಗಲಿ" ಅಂದನು. ಇದು ಕನಸು ಮಾತ್ರ ನನ್ನನ್ನು ಬಿಟ್ಟು ನೀನೇನು ತಿನ್ನುವುದಿಲ್ಲವೆಂಬುದು ನನಗೆ ಗೊತ್ತಿದೆ. ಕನಸಿನ ಪ್ರೇರಣೆಯಿಂದ ಕೇಳಿದೆನಷ್ಟೆ" ಎಂದನು. ಸುದಾಮನಿಗೆ ಕೃಷ್ಣನ ಸರ್ವಜ್ಞತೆ, ಲೀಲೆಗಳು ಸ್ವಲ್ಪಮಟ್ಟಿಗಾದರೂ ತಿಳಿದಿದ್ದರೆ ಹಾಗೆ ವರ್ತಿಸುತ್ತಿರಲಿಲ್ಲ. ಆದ್ದರಿಂದ ಅವನು ಮಾಡಿದುದನ್ನು ಅನುಭವಿಸಲೇ ಬೇಕಾಯಿತು. ಆದ್ದರಿಂದಲೇ ಸುದಾಮನು ಶ್ರೀಕೃಷ್ಣನ ಸ್ನೇಹಿತನಾಗಿದ್ದರೂ ಸಹ ತನ್ನ ಜೀವಮಾನದಲ್ಲಿ ಅವನು ಕಡು ಬಡತನವನ್ನು ಅನುಭವಿಸಬೇಕಾಯಿತು. ನಂತರ ಕೊನೆಯಲ್ಲಿ, ತಾನೇ ಸ್ವತ: ಮಾಡಿದ ಒಂದು ಹಿಡಿ ಅವಲಕ್ಕಿಯನ್ನು ಶ್ರೀಕೃಷ್ಣನಿಗೆ ಮನ:ಪೂರ್ವಕವಾಗಿ ಅರ್ಪಿಸಿದಾಗ ಶ್ರೀಕೃಷ್ಣನು ಮೆಚ್ಚಿ ಒಂದು ಸುವರ್ಣ ನಗರವನ್ನೇ ಸುದಾಮನಿಗೆ ಕೊಟ್ಟನು.

## ಅಣ್ಣಾ ಚಿಂಚಣೀಕರ ಮತ್ತು ಮಾವಸೀಬಾಯಿ

ಬಾಬಾ ಅವರು ಶಾಂತಿದೂತರ ಪಾತ್ರವನ್ನು ವಹಿಸಿದ ಸರಸ ಘಟನೆಯನ್ನು ಈಗ ಶ್ರೀ ಹೇಮಾಡಪಂತ ವಿವರಿಸಿರುತ್ತಾರೆ. ಅಣ್ಣಾ ಚಿಂಚಣೀಕರ (ದಾಮೋದರ ಬಾಬರೆ) ಎಂಬ ಭಕ್ತನಿದ್ದನು. ಆತ ಬಹಳ ನಿಷ್ಠುರವಾದಿಯಾಗಿದ್ದನು. ಯಾರಿಗೂ ಹೆದರುತ್ತಿರಲಿಲ್ಲ. ಎಲ್ಲ ವ್ಯವಹಾರಗಳನ್ನು ಚೊಕ್ಕಟವಾಗಿ ಇಟ್ಟಿದ್ದನು. ಬಾಹ್ಯದಲ್ಲಿ ನಿರ್ದಯನಾಗಿ ಕಂಡರೂ ಅವನು ಒಳ್ಳೆಯ ಮನಸ್ಸಿನವನಾಗಿದ್ದನು. ಆದುದರಿಂದ ಬಾಬಾ ಅವರು ಅವನನ್ನು ಪ್ರೀತಿಸುತ್ತಿದ್ದರು. ಒಂದು ದಿನ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಬಾಬಾ ಅವರ ಸೇವೆ ಮಾಡುತ್ತಿದ್ದರು. ಅಂತೆಯೇ ಚಿಂಚಣೀಕರ ಸಹ ಬಾಬಾ ಅವರ ಎಡಗೈಯನ್ನು ತಿಕ್ಕುತ್ತಿದ್ದರು. ಬಲಗೈಯನ್ನು ವೇಣೂಬಾಯಿ ಕೌಜಲಗಿ ಎಂಬ

ಮುದುಕಿಯು (ಅವರನ್ನು ಕೆಲವರು ಬಾಬಾ ತಾಯಿ ಎಂದೂ, ಕೆಲವರು ಮಾವಸೀಬಾಯಿ ಎಂದು ಕರೆಯುತ್ತಿದ್ದರು) ತಿಕ್ಕುತ್ತಿದ್ದಳು. ಅವಳ ಆತ್ಮ ಪರಿಶುದ್ಧವಾಗಿತ್ತು. ಅವಳು ಬಾಬಾ ಅವರನ್ನು ತಬ್ಬಿಕೊಂಡು ಅವರ ಹೊಟ್ಟೆಯನ್ನು ತಿಕ್ಕಹತ್ತಿದಳು. ಹೀಗೆ ತಿಕ್ಕುತ್ತಿರುವಾಗ ಹೊಟ್ಟೆ ಮತ್ತು ಬೆನ್ನು ಸೇರಿಕೊಂಡು ಒಂದೇ ಸಮನಾದವು. ಎಡಭಾಗದಲ್ಲಿದ್ದ ಚಿಂಚಣೀಕರ ಅಲುಗಾಡದೇ ನಿಂತಿದ್ದನು. ತಿಕ್ಕುವ ರಭಸದಲ್ಲಿ ಮಾವಸೀಬಾಯಿಯ ಮುಖ ಅತ್ತಿತ್ತ ಹೊರಳಾಡುತ್ತಿತ್ತು. ಹೀಗೆಯೇ ಸೇವೆ ಮಾಡುತ್ತಿದ್ದಾಗ ಮಾವಸೀಬಾಯಿಯ ಮುಖವು ಅಣ್ಣಾ ಅವರ ಮುಖಕ್ಕೆ ತಗುಲಿತು. ಆಗ ಅವಳು "ಈ ಅಣ್ಣಾ ಬಹಳ ತುಂಟ. ನನಗೆ ಮುತ್ತಿಡಲು ಪ್ರಯತ್ನಿಸುತ್ತಿದ್ದಾನೆ. ಮುದಕನಾಗಿದ್ದಾನೆ; ಇವನಿಗೆ ಸ್ವಲ್ಪವೂ ನಾಚಿಕೆ ಇಲ್ಲ" ಎಂದು ಟೀಕಿಸಿದಳು. ಇದನ್ನು ಕೇಳಿ ಅಣ್ಣಾ, ಕೋಪಗೊಂಡು, "ನೀನು ನನಗೆ ತುಂಟನೆಂದೆಯಾ? ನಾನೇನು ಅಷ್ಟು ಮೂರ್ಖನೋ? ನೀನು ಕಾಲು ಕೆದರಿ ಜಗಳವಾಡುತ್ತಿರುವಿ!" ಎಂದನು. ಅಲ್ಲಿ ನೆರೆದವರೆಲ್ಲರೂ ಈ ಹಾಸ್ಯವನ್ನು ನೋಡಿ ಆನಂದಿಸುತ್ತಿದ್ದರು. ಬಾಬಾ ಮಾತ್ರ ಇಬ್ಬರನ್ನೂ ಸಮಭಾವದಿಂದ ಕಾಣುತ್ತಿದ್ದು ಅವರು ಇಬ್ಬರನ್ನೂ ಸಮಾಧಾನಪಡಿಸಲೆತ್ನಿಸಿದರು. ಆಗ ಅವರು ಪ್ರೀತಿಯಿಂದ "ಓ!ಅಣ್ಣಾ, ಅನಾವಶ್ಯಕವಾಗಿ ಯಾಕೆ ಈ ಜಗಳ? ತಾಯಿಯು ಮಗನನ್ನು ಮುತ್ತಿಡುವುದರಲ್ಲಿ ತಪ್ಪೇನು? ನನಗರ್ಥವಾಗುವುದಿಲ್ಲ. ಅದರಲ್ಲಿ ಪಾಪವೇನಿದೆ?" ಎಂದರು. ಇದನ್ನು ಕೇಳಿ ಇಬ್ಬರೂ ಸಮಾಧಾನ ಹೊಂದಿದರು.

## ಭಕ್ತರ ಅಧೀನ

ಬಾಬಾ ತಮ್ಮ ಭಕ್ತರು ತಮ್ಮನ್ನು ಮನಬಂದಂತೆ ಆರಾಧಿಸಲು ಅನುಮತಿ ನೀಡಿದ್ದರು. ಯಾರು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲಾಗುತ್ತಿರಲಿಲ್ಲ. ಒಂದು ಉದಾಹರಣೆಯನ್ನು ಕೊಡುವುದಾದರೆ, ಇನ್ನೊಂದು ಸಂದರ್ಭದಲ್ಲಿ ಮಾವಸೀಬಾಯಿ ಬಾಬಾರವರ

ಹೊಟ್ಟೆಯನ್ನು ತಿಕ್ಕುತ್ತಿದ್ದರು. ಅವಳ ಉಜ್ಜುವ ರಭಸವನ್ನು ನೋಡಿ ಎಲ್ಲರೂ ಗಾಬರಿಗೊಂಡಿದ್ದರು. ಆಗ ಅವರು "ಓ ತಾಯೀ, ಸ್ವಲ್ಪ ಜಾಗರೂಕರಾಗಿ ಹೊಟ್ಟೆ ತಿಕ್ಕಿರಿ. ಇಲ್ಲದಿದ್ದರೆ ನೀವು ಬಾಬಾರವರ ಕರಳುಗಳನ್ನು ಕೀಳುವಿರಿ" ಎಂದರು. ಇದನ್ನು ಕೇಳಿದ ಬಾಬಾ ಕೂಡಲೆ ಆಸನದಿಂದ ಎದ್ದು ತಮ್ಮ ಸಟಕಾ ನೆಲಕ್ಕೆ ಹೊಡೆದರು. ಕೋಪದಿಂದ ಅವರು ಕಣ್ಣುಗಳು ಕೆಂಪಾದವು. ಅವರುಸಟಕಾ ತೆಗೆದುಕೊಂಡು ಒಂದು ತುದಿಯನ್ನು ತಮ್ಮ ಹೊಟ್ಟೆಗೂ ಮತ್ತೊಂದು ತುದಿಯನ್ನು ಕಂಬಕ್ಕೂ ಒರಗಿಸಿ ಬಲವಾಗಿ ಒತ್ತಲಾರಂಭಿಸಿದರು. ಎರಡು ಅಡಿ ಉದ್ದವಾಗಿ ಇದ್ದಿರುವ ಆ ಸಟಕಾ ಬಾಬಾರವರ ಹೊಟ್ಟೆಯೊಳಗೆ ಪೂರ್ತಿ ನಾಟಿತು. ಇದನ್ನು ಕಂಡ ಜನರ ಗಾಬರಿ ಇಮ್ಮಡಿಯಾಯಿತು. ಯಾರಿಗೂ ಬಾಬಾರವರ ಹತ್ತಿರ ಹೋಗುವ ಧೈರ್ಯವಿರಲಿಲ್ಲ. ಬಾಬಾರವರ ಕ್ಷೇಮವನ್ನು ಗಮನದಲ್ಲಿಟ್ಟುಕೊಂಡೇ ಇತರರು ಮಾವಸೀಬಾಯಿಗೆ ಜಾಗರೂಕರಾಗಿರಲು ಹೇಳಿದ್ದರು. ಆದರೆ ಬಾಬಾ ಅದನ್ನು ಸಹಿಸಲಿಲ್ಲ. ಹೀಗೆ ಅವರ ಸದುದ್ದೇಶವು ವಿಪತ್ತಿಗೆ ದಾರಿಯಾಯಿತು. ಅದೃಷ್ಟವಶಾತ್ ಬಾಬಾ ಕೂಡಲೇ ಶಾಂತರಾಗಿ ಸಟಕಾ ತೆಗೆದು ತಮ್ಮ ಆಸನದಲ್ಲಿ ಕುಳಿತರು. ಅಂದಿನಿಂದ ಭಕ್ತರು ಸಾಯಿಬಾಬಾ ಇತರರಿಂದ ಸೇವೆ ಮಾಡಿಸಿಕೊಳ್ಳುತ್ತಿರುವಾಗ ಮಧ್ಯ ಪ್ರವೇಶಿಸುವುದು ತಪ್ಪೆಂದು ಅರಿತರು. ಭಕ್ತರ ಸೇವೆಯ ಬೆಲೆ ಮತ್ತು ಗುಣಗಳನ್ನು ಅಳೆಯುವ ಶಕ್ತಿ ಬಾಬಾ ಹೊರತಾಗಿ ಬೇರೆಯವರಲ್ಲಿ ಇರಲಿಲ್ಲ.

**ಶ್ರೀ ಸಾಯಿ ಪ್ರಣಾಮ**

# ೨೫ನೇ ಅಧ್ಯಾಯ

## ಅಹಮದನಗರದ ದಾಮೂ ಅಣ್ಣಾ ಕಾಸಾರ - ಸಟ್ಟಾ ವ್ಯಾಪಾರ -ಆಮ್ರಲೀಲೆ

ಪರಮಯೋಗಿಶ್ವರರೂ, ಪರಬ್ರಹ್ಮರೂ, ದೇವರ ಅವತಾರ ಪುರುಷರೂ, ದಯಾಸಾಗರರೂ ಆದ ಶ್ರೀ ಸಾಯಿಬಾಬಾ ಅವರಿಗೆ ಸಾಷ್ಟಂಗ ನಮಸ್ಕಾರಮಾಡಿ ಈ ಅಧ್ಯಾಯವನ್ನು ಆರಂಭಿಸುತ್ತೇವೆ. ಆತ್ಮರಾಮರೂ, ಮಂಗಳದಾಯಕ ವಿಷಯಗಳ ತವರುಮನೆಯೂ, ಯೋಗ ಸಂಪನ್ನರೂ ಆದ ಶ್ರೀ ಸಾಯಿಯವರಿಗೆ ಜಯವಾಗಲಿ!

ಸಾಯಿಬಾಬಾ ಯಾವಾಗಲೂ ಕರುಣಾಸಾಗರರಾಗಿದ್ದರು. ಮನ:ಪೂರ್ವಕವಾದ ಭಕ್ತಿಯೊಂದೇ ಅವರಿಗೆ ಬೇಕಾದುದು. ಭಕ್ತರಲ್ಲಿ ನಿಶ್ಚಲ ಭಕ್ತಿ ಮತ್ತು ಧೃಢವಾದ ನಂಬಿಕೆಯಿದ್ದರೆ ಅವರ ಅಭೀಷ್ಟಗಳು ಬೇಗನೇ ಈಡೇರುವವು. ಹೇಮಾಡಪಂತರ ಮನಸ್ಸಿನಲ್ಲಿ ಸಾಯಿಯವರ ಜೀವನ ಚರಿತ್ರೆ ಮತ್ತು ಲೀಲೆಗಳನ್ನು ಬರೆಯಬೇಕೆಂಬ ಆಕಾಂಕ್ಷೆ ಮೂಡಿದ್ದೇ ತಡ, ಅವರು ಅದನ್ನು ಅವರಿಂದ ಬರೆಯಿಸಿದರು. "ಟಿಪ್ಪಣಿ ಮತ್ತು ಲೀಲೆಗಳನ್ನು ಸಂಗ್ರಹಿಸು" ಎಂದು ಬಾಬಾ ಆಜ್ಞಾಪಿಸಿದಾಗ ಅವರಿಗೆ ಸ್ಪೂರ್ತಿ ಬಂದಿತು. ಬುಧ್ಧಿಗೆ ಬಲ ಬಂದು, ಈ ಕೆಲಸದ ಭಾರವನ್ನು ಹೊರುವ ಧೈರ್ಯ ಹುಟ್ಟಿತು. "ನಾನು ಈ ಕೆಲಸ ಯಶಸ್ವಿಯಾಗಿ ಪೂರೈಸಿದ್ದೇನೆ. ಅದೇ ನೀವು ಈಗ ಪಡೆದಿರುವ ಸಾಯಿಲೀಲೆ ಎಂಬ ಅಮೃತವು ಹೊರಹೊಮ್ಮುತ್ತಿರುವ ಸೋಮಕಾಂತಮಣಿ - ಶ್ರೀ ಸಾಯಿ ಸಚ್ಚರಿತೆ. ಈ ಅಮೃತವನ್ನು ಭಕ್ತರು ಮನದಣಿಯುವಂತೆ ಪಾನ ಮಾಡಬಹುದು" ಎಂದು ಹೇಮಾಡಪಂತರು ಹೇಳಿದ್ದಾರೆ.

ಭಕ್ತನು ತನ್ನ ತನು, ಮನ, ಧನಗಳೆಲ್ಲವನ್ನೂ ಅರ್ಪಿಸಿ ಸಾಯಿಬಾಬಾ ಅವರಲ್ಲಿ ಅಚಲ ಭಕ್ತಿ ಇಟ್ಟ ಕೂಡಲೆ ಅವನ ಕಷ್ಟಗಳು ದೂರವಾದಂತೆಯೇ.

ಶ್ರೀ ಸಾಯಿಬಾಬಾ ಅವರೇ ಅವನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಇದನ್ನು ಉದಾಹರಿಸುವ ದಾಮೂ ಅಣ್ಣಾ ಅವರ ಅನುಭವವನ್ನು ಈಗ ಪರೀಕ್ಷಿಸೋಣ.

## ದಾಮೂ ಅಣ್ಣಾ ಕಾಸಾರ

ಈ ಹಿಂದೆ ೬ನೇ ಅಧ್ಯಾಯದಲ್ಲಿ ಶಿರ್ಡಿಯಲ್ಲಿ ಶ್ರೀರಾಮನವಮಿ ಉತ್ಸವವನ್ನು ವಿವರಿಸುವಾಗ ಇವರ ಹೆಸರನ್ನು ಅಲ್ಲಿ ಉಲ್ಲೇಖಿಸಲಾಗಿದೆ. ಇವರು ೧೯೮೫ರಲ್ಲಿ ಶಿರ್ಡಿಗೆ ಹೋಗಿ ಶ್ರೀರಾಮನವಮಿ ಉತ್ಸವವನ್ನು ಆರಂಭಿಸಿ ಪ್ರತಿವರ್ಷವೂ ಆ ಸಮಾರಂಭಕ್ಕೆ ಧ್ವಜವನ್ನು ಒದಗಿಸುತ್ತಿದ್ದರು. ಅಲ್ಲಿಗೆ ಬರುತ್ತಿದ್ದ ಬಡಬಗ್ಗರಿಗೆ ಅನ್ನದಾನ ಮಾಡುತ್ತಲೂ ಇದ್ದರು.

## ಹತ್ತಿ ವ್ಯಾಪಾರ

ದಾಮೂ ಅಣ್ಣಾ ಅವರ ಸ್ನೇಹಿತನೊಬ್ಬನು ಪಾಲುಗಾರಿಕೆಯ ಮೇಲೆ ಹತ್ತಿ ವ್ಯಾಪಾರ ಮಾಡಲು ಅವರನ್ನು ಪ್ರಚೋದಿಸಿದನು. ಒಂದು ಸಟ್ಟಾ ವ್ಯವಹಾರದಲ್ಲಿ ಎರಡು ಲಕ್ಷ ರೂಪಾಯಿಗಳ ಲಾಭ ದೊರಕುವುದೆಂದು ಕಾಗದ ಬರೆದು ತಿಳಿಸಿದ್ದನು. ದಲ್ಲಾಳಿಯೂ ಸಹ ಸಮಯ ಚೆನ್ನಾಗಿದಿಯೆಂದು ಹೇಳಿದ್ದನು. ದಾಮೂ ಅಣ್ಣಾ ಸ್ವಲ್ಪ ಹೊತ್ತು ಯೋಚಿಸಿದರು. ಆದರೆ ಯಾವ ನಿರ್ಧಾರಕ್ಕೂ ಬರಲಾಗಲಿಲ್ಲ. ತಾವು ಬಾಬಾ ಅವರ ಭಕ್ತರಾಗಿದ್ದುದರಿಂದ ಅವರನ್ನು ಈ ವಿಚಾರವಾಗಿ ಕೇಳಬೇಕೆಂದು ಕೂಡಲೆ ಶ್ಯಾಮ ಅವರಿಗೆ ಪತ್ರ ಬರದು ಬಾಬಾ ಅವರ ಅಭಿಪ್ರಾಯವನ್ನು ತಿಳಿಸಿಬೇಕೆಂದು ಕೋರಿದರು. ಮಾರನೇ ದಿನ ಶ್ಯಾಮ ಪತ್ರವನ್ನು ನೋಡಿ, ಬಾಬಾ ಮಸೀದಿಗೆ ಬಂದ ಕೂಡಲೆ ಅದನ್ನು ಅವರ ಮುಂದಿಟ್ಟರು. ಆಗ ಬಾಬಾ "ಈ ಪತ್ರ ಯಾರದು? ಸಮಾಚಾರವೇನು?" ಎಂದು ವಿಚಾರಿಸಲು, ಶ್ಯಾಮ ಅವರು "ನಗರದ ದಾಮೂ ಅಣ್ಣಾ ಅವರು ನಿಮ್ಮಲ್ಲಿ ಕೆಲವು ವಿಷಯಗಳನ್ನು ಅರಿಕೆ ಮಾಡಿಕೊಂಡಿರುತ್ತಾರೆ" ಎಂದರು. ಅದಕ್ಕೆ

ಬಾಬಾ ಅವರು "ಅವನೇನು ಬರೆಯುತ್ತಾನೆ? ಅವನ ಯೋಚನೆ ಏನು? ದೇವರು ಕೊಟ್ಟಿರುವುದರಲ್ಲಿ ತೃಪ್ತಿ ಪಡೆಯದೆ, ಗಗನವನ್ನು ಮುಟ್ಟುವ ಪ್ರಯತ್ನ ನಡೆದಿರುವಂತಿದೆ. ಓದು, ಪತ್ರವನ್ನು ಓದು" ಎಂದರು. ಆಗ ಶ್ಯಾಮ "ನೀವು ಹೇಳಿದುದೇ ಪತ್ರದಲ್ಲಿ ಲಿಖಿತವಾಗಿದೆ. ಓ! ದೇವಾ, ನೀವು ಮಾತ್ರ ಪ್ರಸನ್ನ-ಚಿತ್ತರಾಗಿ ಕುಳಿತು ಬೇರೆಯವರನ್ನು ಗೊಂದಲಕ್ಕೆ ಈಡು ಮಾಡುತ್ತೀರಿ. ಅವರು ಬಳಲಿದಾಗ, ಕೆಲವರನ್ನು ಸಮ್ಮುಖವಾಗಿ ಮತ್ತೆ ಕೆಲವರನ್ನು ಪತ್ರಮುಖೇನ ನೀವು ಬರಮಾಡಿಕೊಳ್ಳುತ್ತೀರಿ. ಪತ್ರದಲ್ಲಿರುವ ವಿಚಾರಗಳು ತಮಗೆ ತಿಳಿದರೂ ಸಹ ನನ್ನನ್ನೇಕೆ ಓದಲು, ಒತ್ತಾಯ ಪಡಿಸುತ್ತಿದ್ದೀರಿ?" ಎಂದರು. ಅದಕ್ಕೆ ಬಾಬಾ "ಓ ಶ್ಯಾಮ! ದಯವಿಟ್ಟು ಪತ್ರ ಓದು. ನನ್ನನ್ನು ನಂಬಿದವರ ಸಂಗಡ ಮನಸ್ಸಿಗೆ ಬಂದ ಹಾಗೆ ಮಾತನಾಡುತ್ತೇನೆ. ಅಷ್ಟೆ" ಎಂದರು.

ಶ್ಯಾಮ ಪತ್ರವನ್ನೋದಿದರು. ಬಾಬಾ ಅವರು ಗಮನವಿಟ್ಟು ಕೇಳಿ, ಕನಿಕರದಿಂದ "ಈ ದಾಮೂ ಅಣ್ಣಾ ಹುಚ್ಚನಾಗಿದ್ದಾನೆ. ದೇವರು ಕೊಟ್ಟಿರುವುದರಲ್ಲಿ ತೃಪ್ತಿ ಪಡೆಯುವಂತೆ ಹೇಳು. ಲಕ್ಷ ರೂಪಾಯಿಗಳಿಗೆ ಚಿಂತಿಸದಿರಲಿ. ಅವನ ಮನೆಯಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಈ ರೀತಿ ಬರೆ" ಎಂದರು. ಶ್ಯಾಮ ಅವರು ಹಾಗೆ ಉತ್ತರ ಬರೆದು ಕಳುಹಿಸಿದರು. ಇದನ್ನು ನೋಡಿದ ದಾಮೂ ಅಣ್ಣಾ ಅವರ ಆಸೆ ಎಲ್ಲ ಮಣ್ಣು ಪಾಲಾಯಿತು. ಬಾಬಾ ಅವರನ್ನು ಈ ಬಗ್ಗೆ ಸಮಾಲೋಚಿಸಿದುದೇ ತಪ್ಪಾಯಿತೆಂದು ಅವರು ಭಾವಿಸಿದರು. ಆದರೆ ಶ್ಯಾಮ ಅವರು ತಮ್ಮ ಉತ್ತರದಲ್ಲಿ ಪತ್ರಮುಖೇನ ಉತ್ತರ ಪಡೆಯುವುದಕ್ಕೂ ಮತ್ತು ಸಮಕ್ಷಮ ಪಡೆಯುವುದಕ್ಕೂ ವ್ಯತ್ಯಾಸವಿದೆ ಎಂದು ಬರೆದಿದ್ದುದರಿಂದ ಕೂಡಲೇ ಶಿರ್ಡಿಗೆ ದಾಮೂ ಅಣ್ಣಾ ಆಗಮಿಸಿದರು. ಬಾಬಾ ಅವರನ್ನು ಸಂದರ್ಶಿಸಿ ಅವರ ಪಾದ ಸಂವಾಹನ ಮಾಡುತ್ತ ಅವರ ಮುಂದೆ ಮೂಕನಂತೆ ಕುಳಿತರು. ಬಾಬಾ ಅವರನ್ನು ಪುನಃ ಕೇಳುವ ಧೈರ್ಯವಿರಲಿಲ್ಲ.

ಆಗ ಮನಸ್ಸಿನಲ್ಲಿಯೇ ಅವರು ಬಾಬಾ ನನಗೆ ಈ ವ್ಯವಹಾರದಲ್ಲಿ ಸಹಾಯವೆಸಗಿದರೆ ಲಾಭದ ಕೆಲವು ಭಾಗವನ್ನು ನಿಮಗೆ ಅರ್ಪಿಸುವೆನೆಂದರು. ಈ ರೀತಿ ದಾಮೂ ಅಣ್ಣಾ ಮನಸ್ಸಿನಲ್ಲಿ ಯೋಚಿಸುತ್ತಿದ್ದಾಗ ಭೂತ-ಭವಿಷ್ಯ-ವರ್ತಮಾನಗಳನ್ನು ತಿಳಿದ ಬಾಬಾ ಅವರಿಗೆ ಅದು ತಿಳಿಯದೆ ಇರಲಿಲ್ಲ. ಮಗುವು ರುಚಿಯಾದ ಪದಾರ್ಥಗಳನ್ನು ಆಶಿಸುತ್ತದೆ. ಆದರೆ ತಾಯಿ ಕಂದನ ಆರೋಗ್ಯಕ್ಕಾಗಿ ಕಹಿ ಗುಳಿಗೆಗಳನ್ನು ತಿನ್ನಿಸುತ್ತಾಳೆ. ಹಾಗೆಯೇ ಬಾಬಾ ದಾಮೂ ಅಣ್ಣಾ ಕಾಸಾರ ಅವರ ಇಂಗಿತವನ್ನರಿತು "ಬಾಪೂ, ನಾನು ಪ್ರಾಪಂಚಿಕ ಭೋಗ ವಸ್ತುಗಳ ಗೊಂದಲದಲ್ಲಿ (ಲಾಭದ ಹಂಚಿಕೆ) ಸಿಕ್ಕಲಿಚ್ಛಿಸುವುದಿಲ್ಲ." ಎಂದರು. ಬಾಬಾ ಅವರ ಅಸಮ್ಮತಿಯನ್ನು ನೋಡಿ ದಾಮೂ ಅಣ್ಣಾ ವ್ಯವಹಾರವನ್ನು ಕೈಬಿಟ್ಟರು.

ನಂತರ ದಾಮೂ ಅಣ್ಣಾ ಅಕ್ಕಿ, ಗೋದಿ ಮುಂತಾದ ಕಿರಾಣಿ ಪದಾರ್ಥಗಳ ವ್ಯಾಪಾರ ಮಾಡಲಿಚ್ಛಿಸಿದರು. ಆಗಲೂ ಸಹ ಬಾಬಾ ತಮ್ಮ ಅಂತರ್‍ದೃಷ್ಟಿಯಿಂದ ಅವರ ಇಂಗಿತ ತಿಳಿದು "ನೀನು ಒಂದು ರೂಪಾಯಿಗೆ ಐದು ಶೇರಿನಂತೆ ಕೊಂಡು ಏಳು ಶೇರಿನಂತೆ ಮಾರಬೇಕಾಗುತ್ತದೆ" ಎಂದರು. ಆದುದರಿಂದ ಅದನ್ನೂ ಕೈಬಿಟ್ಟರು. ಮೊದಮೊದಲು ಧಾನ್ಯಗಳ ಬೆಲೆ ಏರಿದವು. ಬಾಬಾ ಅವರ ಮಾತು ಸುಳ್ಳು ಎಂಬಂತೆ ದರ ಹೆಚ್ಚಾಗುತ್ತಲೇ ಇದ್ದವು. ಎರಡು ಮೂರು ತಿಂಗಳ ನಂತರ ಚೆನ್ನಾಗಿ ಮಳೆಯಾಯಿತು. ಎಲ್ಲೆಲ್ಲಿಯೂ ಮಳೆಯಾಗಿ ಒಮ್ಮೆಲೇ ಧಾನ್ಯಗಳ ಬೆಲೆ ಇಳಿದವು. ಧಾನ್ಯ ಶೇಖರಿಸಿದ ವರ್ತಕರಿಗೆ ನಷ್ಟವಾಯಿತು. ದಾಮೂ ಅಣ್ಣಾ ಅವರ ಸ್ನೇಹಿತನಿಗೆ ಹತ್ತಿ ಸಟ್ಟಾ ವ್ಯಾಪಾರದಲ್ಲಿ ಅಪಾರ ಹಾನಿಯಾಯಿತು. ಆದರೆ ದಾಮೂ ಅಣ್ಣಾ ಪಾರಾದರು. ಇದರಿಂದ ದಾಮೂ ಅಣ್ಣಾ ಅವರಿಗೆ ಬಾಬಾ ಅವರಲ್ಲಿ ಭಕ್ತಿ ಮಿಗಿಲಾಯಿತು.

# ಆಮ್ರಲೀಲೆ

ಗೋವಾದ ಮಾಮಲೇದಾರರಾದ ರಾಳೆ ಎಂಬುವರು ಬಾಬಾ ಅವರಿಗೆ ಶ್ಯಾಮ ಅವರ ಹೆಸರಿನ ಮೇಲೆ ೩೦೦ ಮಾವಿನ ಹಣ್ಣಿನ ಪಾರ್ಸಲ್ ಕಳುಹಿಸಿದ್ದರು. ಅವೆಲ್ಲವೂ ಒಳ್ಳೆಯ ಹಣ್ಣುಗಳಾಗಿದ್ದವು. ಬಾಬಾ ಅವುಗಳಿಂದ ನಾಲ್ಕು ಹಣ್ಣುಗಳನ್ನು ಮಾತ್ರ ತೆಗೆದುಕೊಂಡು ತಮ್ಮ ಮಣ್ಣಿನ ಗಡಿಗೆಯಲ್ಲಿ ಇಟ್ಟರು.

ದಾಮೂ ಅಣ್ಣಾ ಅವರಿಗೆ ಮೂವರು ಪತ್ನಿಯರು.(ಅವರ ಹೇಳಿಕೆ ಪ್ರಕಾರ ಇಬ್ಬರಿದ್ದರೆಂದು ತಿಳಿದು ಬಂದಿದೆ) ಆದರೂ ಸಂತಾನ ಇರಲಿಲ್ಲ. ಅವರೇ ಸ್ವತ: ಜ್ಯೋತಿಷಿಯಾಗಿದ್ದು ತಮ್ಮ ಜಾತಕವನ್ನು ನೋಡಿ ತಮಗೆ ಸಂತಾನ ಪ್ರಾಪ್ತಿಯಿಲ್ಲ ಎಂದು ಮನಗಂಡಿದ್ದರು. ಆದರೆ ಬಾಬಾ ಅವರಲ್ಲಿ ಅವರ ನಿಸ್ಸೀಮ ಭಕ್ತಿ. ಮಾವಿನ ಹಣ್ಣಿನ ಪಾರ್ಸಲ್ ಬಂದು ಎರಡು ತಾಸಿನ ಮೇಲೆ ದಾಮೂ ಅಣ್ಣಾ ಅವರು ಮಸೀದಿಗೆ ಪೂಜೆ ಮಡಲು ಬಂದರು. "ಆ ಹಣ್ಣುಗಳು ದಾಮ್ಯಾನವು ಅವನೇ ಅವುಗಳನ್ನು ತಿಂದು ಸಾಯಲಿ!" ಎಂದು ಬಾಬಾ ನುಡಿದರು. ಇದನ್ನು ಕೇಳಿ ದಾಮೂ ಅಣ್ಣಾ ಅವರಿಗೆ ದಿಗಿಲಾಯಿತು. ಆದರೆ ಆಗ ಅಲ್ಲಿಯೇ ಇದ್ದ ಮ್ಹಾಳಸಾಪತಿ ಅವರು "ಮರಣವೆಂದರೆ, 'ನಾನು – ನನ್ನದು' ಎಂಬ ಅಹಂಕಾರದ ಸಾವು. ಅವನ್ನು ಬಾಬಾ ಅವರ ಪಾದಗಳಿಗೆ ಅರ್ಪಿಸಿದರೆ, ಪರಮಸುಖ ದೊರೆಯುತ್ತದೆ. ಆದುದರಿಂದ ಹಣ್ಣುಗಳನ್ನು ಸ್ವೀಕರಿಸು" ಎಂದರು. ಪೂಜೆ ಮುಗಿದ ನಂತರ ದಾಮೂ ಅಣ್ಣಾ ಮಸೀದಿಗೆ ಬಂದು " ಈ ಹಣ್ಣು ಹಿರಿಯವಳಿಗೆ ಕೊಡಬೇಕೋ ಅಥವಾ ಚಿಕ್ಕವಳಿಗೂ ಎಂಬುದು ತಿಳಿಯಲಿಲ್ಲ" ಎಂದು ಬಾಬಾ ಅವರಿಗೆ ಹೇಳಿದರು. ಆಗ ಬಾಬಾ "ಚಿಕ್ಕವಳಿಗೆ ಅವುಗಳನ್ನು ಕೊಡು. ಈ ಆಮ್ರಲೀಲೆಯಿಂದ ನಿನಗೆ ನಾಲ್ಕು ಗಂಡು ಮತ್ತು ನಾಲ್ಕು ಹೆಣ್ಣು ಮಕ್ಕಳಾಗುತ್ತವೆ" ಎಂದು ಆಶೀರ್ವದಿಸಿದರು. ಕೆಲವು ಕಾಲ ಗತಿಸಿತು. ಬಾಬಾ ಅವರ ಮಾತು ಸತ್ಯವಾಯಿತು. ಜೋತಿರ್ವಿದ್ಯೆಯ ಮಾತು ಸುಳ್ಳಾಯಿತು.

ಬಾಬಾ ಸಮಾಧಿಯಾದ ನಂತರವೂ ಕೂಡ ಅವರ ವಾಕ್ - ಮಹಿಮೆಯನ್ನು ಮೊದಲಿನಂತೆಯೇ ಎಲ್ಲರೂ ಅನುಭವಿಸಬಹುದು.

"ನನ್ನಲ್ಲಿ ನಂಬಿಕೆ ಇಡಿ. ನಾನು ಇಹಲೋಕವನ್ನು ತ್ಯಜಿಸಿದರೂ ಸಹ ನನ್ನ ಸಮಾಧಿಯಲ್ಲಿರುವ ನನ್ನ ಎಲುಬುಗಳು ನಿಮಗೆ ಧೈರ್ಯ ಮತ್ತು ಭರವಸೆ ನೀಡುತ್ತವೆ. ನಿಮ್ಮೊಡನೆ ನಾನೊಬ್ಬನೆ ಅಲ್ಲ, ನನ್ನ ಸಮಾಧಿಯೂ ಸಹ ಮಾತನಾಡುತ್ತದೆ. ನಾನು ನಿಮ್ಮನ್ನು ಅಗಲಿದೆನೆಂದು ನೀವು ಕಳವಳ ಪಡಬೇಕಾಗಿಲ್ಲ. ನನ್ನ ಎಲುಬುಗಳು ನಿಮ್ಮ ಯೋಗಕ್ಷೇಮವನ್ನು ನೋಡುತ್ತವೆ. ನನ್ನನ್ನೇ ಯಾವಾಗಲೂ ಸ್ಮರಿಸಿರಿ, ನನ್ನಲ್ಲಿ ನಂಬಿಕೆ ಇಡಿರಿ. ನಿಮಗೆ ಒಳ್ಳೆಯದಾಗುತ್ತದೆ" ಎಂದು ಸಾಯಿಬಾಬಾ ಹೇಳಿದ್ದಾರೆ.

## ಪ್ರಾರ್ಥನೆ

ಹೇಮಾಡಪಂತರು ಪ್ರಾರ್ಥನೆ ಮಾಡಿ ಈ ಅಧ್ಯಾಯವನ್ನು ಮುಗಿಸಿರುತ್ತಾರೆ.

"ಓ! ಸಾಯಿ ಸದ್ಗುರುವೆ, ಭಕ್ತರ ಕಲ್ಪತರುವೆ, ನಿನ್ನನ್ನೂ ಮತ್ತು ನಿನ್ನ ಪಾದ ದರ್ಶನವನ್ನೂ ಮರೆಯದಂತ ಶಕ್ತಿಯನ್ನು ನೀಡು. ಈ ಸಂಸಾರವೆಂಬ ಅಲೆಗಳ ಮಧ್ಯೆ ಸಿಕ್ಕಿ ತೊಳಲುತ್ತಿರುವ ನಮಗೆ ಮುಕ್ತಿ ದೊರಕಿಸು ದೇವಾ. ನಮ್ಮ ಇಂದ್ರಿಯ ಚಾಪಲ್ಯವನ್ನು ದೂರಮಾಡಿ ನಮ್ಮನ್ನು ಅಂತರ್ಮುಖಿರನ್ನಾಗಿ ಮಾಡಿ, ಆತ್ಮವನ್ನು ಅರಿಯುವಂತೆ ನಮ್ಮನ್ನು ಮಾರ್ಪಡಿಸು. ಇಂದ್ರಿಯ - ನಿಗ್ರಹ ಶಕ್ತಿ ಇಲ್ಲದೆ ಹೋದರೆ ಆತ್ಮಜ್ಞಾನ ಪಡೆಯಲು ಅಸಾಧ್ಯ. ಪುತ್ರ, ಮಿತ್ರ, ಕಳತ್ರ ಯಾರೂ ನಮ್ಮ ಅಂತ್ಯದಲ್ಲಿ ನೆರವಾಗಲಾರರು. ಮುಕ್ತಿ ಮತ್ತು ಆನಂದ ದೊರಕುವುದು ನಿಮ್ಮ ನೆರವಿನಿಂದ ಮಾತ್ರ. ಅರ್ಥಹೀನ ವಾದವಿವಾದ ಮತ್ತು ದುಷ್ಕರ್ಮ ಪ್ರವೃತ್ತಿಯನ್ನು ಪೂರ್ಣ ನಾಶಮಾಡಿ ಯಾವಾಗಲೂ ನಿನ್ನ ನಾಮಸ್ಮರಣೆ ಮಾಡುವಂತೆ ನಮ್ಮ ನಾಲಿಗೆಗಳನ್ನು ಉತ್ತೇಜಿಸು.

ಅಶಾಂತಿಯನ್ನು ತೊಲಗಿಸಿ ನಮ್ಮನ್ನು ನಿಶ್ಚಲ ಮತ್ತು ಪ್ರಸನ್ನಚಿತ್ತರನ್ನಾಗಿರಿಸು. ನಿನ್ನ ದಯೆ ಮತ್ತು ಪೂರ್ವ ಜನ್ಮದ ಪುಣ್ಯ ವಿಶೇಷಗಳ ಪ್ರಯುಕ್ತ ಈಗ ನಿನ್ನ ಲೀಲಾಮೃತದ ಭೋಜನ ಮಾಡಿಸಿ ನಮ್ಮನ್ನು ಅಜ್ಞಾನದ ಸಂಕೋಲೆಯಿಂದ ನೀನು ವಿಮುಕ್ತ ಮಾಡಿದೆ. ನಾವೇ ಧನ್ಯರು!"

## ಸೂಚನೆ

ಈ ಸಂದರ್ಭದಲ್ಲಿ ದಾಮೂ ಅಣ್ಣಾ ಅವರ ಹೇಳಿಕೆಯನ್ನು ಪರಿಶೀಲಿಸುವುದು ಸೂಕ್ತವಾಗಿ ಕಂಡುಬರುತ್ತದೆ.

ನಾನು ಕೆಳಕಂಡ ಎರಡು ಪ್ರಶ್ನೆಗಳನ್ನು ವಿಚಾರ ಮಾಡಿಕೊಂಡು ಬಾಬಾ ಅವರ ಮುಂದೆ ಕುಳಿತಾಗ ದೊರಕಿದ ಉತ್ತರಗಳು ಈ ರೀತಿ ಇದೆ.

೧) ನಿಮ್ಮ ಹತ್ತಿರ ಅನೇಕರು ಗುಂಪು – ಗುಂಪಾಗಿ ಬರುತ್ತಾರೆ. ಅವರೆಲ್ಲರಿಗೂ ಫಲ ದೊರೆಯುವುದೆ?

ಬಾಬಾ ಅವರ ಉತ್ತರ :– "ಪುಷ್ಪ ಭರಿತವಾದ ಮಾವಿನ ವೃಕ್ಷವನ್ನು ನೋಡು. ಆ ಹೂವುಗಳೆಲ್ಲ ಫಲವಾದರೆ ಎಷ್ಟು ಒಳಿತು! ಆದರೆ ಎಲ್ಲವೂ ಹಣ್ಣಾಗುತ್ತವೆಯೆ? ಎಷ್ಟೋ ಪುಷ್ಪಗಳು ಚಳಿ, ಗಾಳಿ, ಬಿಸಿಲು, ಇವುಗಳಿಗೆ ಸಿಕ್ಕಿ ಉದರಿ ಹೋಗುತ್ತವೆ. ಕೆಲವು ಮಾತ್ರ ಫಲವಾಗಿ ಹಣ್ಣಾಗುತ್ತವೆ."

೨) ನೀವು ಸಮಾಧಿ ಹೊಂದಿದರೆ ನಾನೆಷ್ಟು ನಿರಾಧಾರನಾಗುತ್ತೇನೆ. ನಾನು ಬದುಕಿರುವುದು ಹೇಗೆ ಸಾಧ್ಯ?

ಉತ್ತರ :– "ನೀನು ಎಲ್ಲಿಯಾದರೂ ಇರು; ಏನೇ ಮಾಡುತ್ತಿರು; ನನ್ನನ್ನು ನೀನು ಸ್ಮರಿಸಿದಾಗಲೆಲ್ಲ ನಾನು ನಿನ್ನ ಬಳಿಯೇ ಇರುತ್ತೇನೆ."

ಈ ಮಾತನ್ನು ಅವರು ೧೯೧೮ರ ತನಕವೂ ಮತ್ತು ೧೯೧೮ರ ನಂತರವೂ ಪಾಲಿಸಿಕೊಂಡು ಬಂದಿರುತ್ತಾರೆ. ಈಗಲೂ ನನ್ನೊಡನೆ ಇದಾರೆ –ನನಗೆ ಮಾರ್ಗದರ್ಶಕರಾಗಿದ್ದಾರೆ.

ಸುಮಾರು ೧೯೧೦–೧೧ರಲ್ಲಿ ನನ್ನ ಅಣ್ಣ–ತಮ್ಮಂದಿರು ಪಾಲಾಗಿ ನನ್ನಿಂದ ಬೇರೆ ಆದರು. ಅದೇ ಸಮಯದಲ್ಲಿ ನನ್ನ ತಂಗಿಯು ಮೃತಳಾದಳು. ನನ್ನ ಮನೆಯಲ್ಲಿ ಕಳವು ಆಗಿ ಪೋಲೀಸಿನವರಿಂದ ವಿಚಾರಣೆಯಾಯಿತು. ಇವೆಲ್ಲವೂ ಒಟ್ಟಿಗೆ ಸೇರಿ ನನ್ನ ಮನಸ್ಸು ಅಲ್ಲೋಲ–ಕಲ್ಲೋಲವಾಗಿತ್ತು. ಆಗ ಬಹಳ ಜಿಗುಪ್ಸೆಗೊಂಡಿದ್ದೆನು.

ನನ್ನ ತಂಗಿಯ ಮರಣದ ನಂತರ ಆಹಾರವನ್ನು ತೊರೆದಿದ್ದೆ. ಆದರೆ ಬಾಬಾ ಅವರಲ್ಲಿಗೆ ಹೋದಾಗ ಅವರು ತಮ್ಮ ಉಪದೇಶದಿಂದ ನನ್ನನ್ನು ಸಂತಸಗೊಳಿಸಿ ಅಪ್ಪಾ ಕುಲಕರ್ಣಿಯವರ ಮನೆಯಲ್ಲಿ ಹಣೆಗೆ ಗಂಧವಿಟ್ಟು ಹಬ್ಬದ ಊಟ ಮಾಡಲು ಹೇಳಿದರು.

ಮೂವತ್ತು ವರ್ಷಗಳಿಂದಲೂ ಸ್ನೇಹಿತನಾಗಿ ನನ್ನ ಜೊತೆಯಲ್ಲಿಯೇ ಇದ್ದ ಒಬ್ಬನು ನನ್ನ ಪತ್ನಿಯ ಆಭರಣದ ಪೆಟ್ಟಿಗೆಯನ್ನೂ ಮತ್ತು ಅವಳ ಮಂಗಳದಾಯಕ ಮೂಗುತಿಯನ್ನೂ ಸಹ ಕದ್ದನು. ಆಗ ನಾನು ಬಾಬಾರವರ ಫೋಟೋ ಮುಂದೆ ನಿಂತು ಕಣ್ಣೀರಿಟ್ಟೆನು. ಮರು ದಿನವೇ ನನ್ನ ಸ್ನೇಹಿತನು ತೆಗೆದುಕೊಂಡು ಹೋಗಿದ್ದ ಎಲ್ಲ ವಸ್ತುಗಳನ್ನು ಮರಳಿ ತಂದುಕೊಟ್ಟು ನನ್ನ ಕ್ಷಮೆ ಬೇಡಿದನು.

ಶ್ರೀ ಸಾಯಿ ಪ್ರಣಾಮ

# ೨೬ನೇ ಅಧ್ಯಾಯ

## ಭಕ್ತಪಂತ – ಹರಶ್ಚಂದ್ರ ಪಿತಳೆ – ಗೋಪಾಲ ಅಂಬೇಡಕರ ಇವರ ಅನುಭವಗಳು

ನಾವು ಪ್ರಪಂಚದಲ್ಲಿ ನೋಡುವುದೆಲ್ಲವೂ ಆ ಮಾಯೆಯ (ಪರಮಾತ್ಮನ ಕ್ರಿಯಾತ್ಮಕ ಶಕ್ತಿ) ಆಟ. ಕತ್ತಲೆಯಲ್ಲಿ ಹಗ್ಗವನ್ನೂ ಸಹ ಸರ್ಪವೆಂದೇ ಭ್ರಮಿಸುವ ಹಾಗೆ ನಾವು ಆಟವನ್ನು ನೋಡುತ್ತೇವೆ. ಸದ್ಗುರುವು ನಮ್ಮ ಅರಿವಿನ ಕಣ್ಣು ತೆರದು ಅವುಗಳ ನಿಜವಾದ ಜ್ಯೋತಿ ಕಂಡು ಬರುವಂತೆ ನಮಗೆ ಸಹಾಯವೆಸುಗುತ್ತಾನೆ. ಆದುದರಿಂದ ನಮಗೆ ಯಾವಾಗಲೂ 'ಸತ್ಯದೃಷ್ಟಿ' ದಯಪಾಲಿಸುವಂತೆ ಬಾಬಾ ಅವರನ್ನು ಪ್ರಾರ್ಥಿಸೋಣ.

### ಆದರ್ಶ ಆರಾಧನೆ

ಹೇಮಾಡಪಂತರು ಆದರ್ಶವಾದ ಆರಾಧನೆಯನ್ನು ವಿವರಿಸಿರುತ್ತಾರೆ.

ಸದ್ಗುರುವಿನ ಪಾದಪೂಜೆಗೆ ನಾವು ಬಿಸಿನೀರಾದ ಆನಂದಬಾಷ್ಪವನ್ನು ಉಪಯೋಗಿಸೋಣ. ಪ್ರೀತಿ ಎಂಬ ಗಂಧವನ್ನು ಅವನ ಮೈಗೆ ಲೇಪಿಸೋಣ. ನಿಜವಾದ ಭಕ್ತಿ ಎಂಬ ಉಡುಪಿನಿಂದ ಅವನನ್ನು ಅಲಂಕರಿಸೋಣ. ನಮ್ಮ ಅಷ್ಟಸಾತ್ವಿಕ ರಸಭಾವಗಳೆಂಬ ಅಷ್ಟತಾವರೆಗಳನ್ನೂ, ಧೃಡಚಿತ್ತದಿಂದ ಫಲವನ್ನೂ ಅವನಿಗೆ ಅರ್ಪಿಸೋಣ. ಭಕ್ತಿ ಎಂಬ ಸುಗಂಧ ದ್ರವ್ಯವನ್ನು ಅವನ ಶಿರದ ಮೇಲೆ ಚಿಮುಕಿಸೋಣ ಮತ್ತು ಅದನ್ನು ಸೊಂಟಕ್ಕೆ ಕಟ್ಟಿ ನಮ್ಮ ಶಿರವನ್ನು ಅವನ ಚರಣಾರವಿಂದಗಳಲ್ಲಿ ಇಡೋಣ. ಈ ರೀತಿಯಾದ ಸರ್ವಾಭರಣಗಳಿಂದ ಅವನನ್ನು ಅಲಂಕರಿಸಿದ ನಂತರ ಶಕೆಯನ್ನು ಹೋಗಲಾಡಿಸಲು ಭಕ್ತಿ ಎಂಬ ಚಾಮರವನ್ನು ಬೀಸೋಣ. ಇಂಥ ಆರಾಧನೆಯ ನಂತರ "ನಮ್ಮ ಮನಸ್ಸನ್ನು ಅಂತರ್ಮುಖಿಸು.

ಸತ್ಯಮಿಥ್ಯಗಳಿಗಿರುವ ವ್ಯತ್ಯಾಸ ವಿವೇಚಿಸುವ ಸಾಮರ್ಥ್ಯ ನಮಗೆ ದಯಪಾಲಿಸಿ ಪ್ರಾಪಂಚಿಕ ವಸ್ತುಗಳ ಭೋಗಾಪೇಕ್ಷೆಗಳಲ್ಲಿ ವಿರಕ್ತಿಯನ್ನುಂಟು ಮಾಡಿ ಆತ್ಮಜ್ಞಾನವನ್ನು ಹೊಂದಲು ಸಹಾಯ ಮಾಡು. ನಾವು ನಮ್ಮ ತನು, ಮನ, ಧನಗಳೆಲ್ಲವನ್ನು ನಿನಗೆ ಅರ್ಪಿಸಿ ಶರಣಾಗತರಾಗಿದ್ದೇವೆ. ನಮಗೆ ಸುಖ –ದು:ಖಗಳ ಅನುಭವ ದೊರೆಯುವಂಥ ನೇತ್ರಗಳನ್ನು ದಯಪಾಲಿಸು, ಮತ್ತು ನಮ್ಮ ನೇತ್ರಗಳನ್ನು ನಿನ್ನ ನೇತ್ರಗಳಂತೆಯೇ ಮಾರ್ಪಡಿಸು. ನಿನ್ನ ಮನಸ್ಸಿಗೆ ಬಂದಂತೆ ನಮ್ಮ ದೇಹ ಮತ್ತು ಮನಸ್ಸನ್ನು ಹತೋಟಿಯಲ್ಲಿಡು. ನಮ್ಮ ಮನಸ್ಸು ನಿನ್ನ ಪಾದಗಳಲ್ಲಿ ಶಾಂತಿಯಿಂದಿರಲಿ" ಎಂದು ನಾವೆಲ್ಲರೂ ಪ್ರಾರ್ಥಿಸೋಣ.

## ಭಕ್ತಪಂತ

ಬೇರೊಬ್ಬ ಗುರುವಿನ ಶಿಷ್ಯರಾದ ಪಂತ ಎಂಬುವರು ಒಮ್ಮೆ ಶಿರ್ಡಿಗೆ ಬರುವ ಸಂದರ್ಭ ಬಂದಿತು. ಅವರಿಗೆ ಶಿರ್ಡಿಗೆ ಬರುವ ಮನಸ್ಸು ಇದ್ದಿರಲಿಲ್ಲ. ಆದರೆ ಮಾನವನು ಎಣಿಸುವದೊಂದು; ದೈವ ಬಗೆಯುವುದೊಂದು. ಅವರು ಬಿ.ಬಿ.ಸಿ.ಐ. ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಶಿರ್ಡಿ ಯಾತ್ರಿಕರ ಪರಿಚಯವಾಯಿತು. ಅವರೆಲ್ಲರೂ ಇವರನ್ನು ಶಿರ್ಡಿಗೆ ಬರಬೇಕೆಂದು ಬಲವಂತ ಮಾಡಿದರು. ಉಪಾಯ ವಿಲ್ಲದೆ ಒಪ್ಪಿಕೊಳ್ಳಬೇಕಾಯಿತು. ಅವರೆಲ್ಲರೂ ಮುಂಬಯಿಯಲ್ಲಿ ಇಳಿದರು. ಆದರೆ ಪಂತರು ವಿರಾರಿನಲ್ಲಿ ಇಳಿದು, ತಮ್ಮ ಗುರುವಿನ ಅಪ್ಪಣೆ ಪಡೆದು, ಪುನ: ಯಾತ್ರಿಕರ ಗುಂಪನ್ನು ಸೇರಿ ಶಿರ್ಡಿಗೆ ಬಂದರು. ಮಾರನೆಯ ದಿನ ಮಸೀದಿಗೆ ಬಂದರು. ಬಾಬಾರವರ ಹತ್ತಿರ ನೆರೆದಿದ್ದ ಭಕ್ತರ ಸಮುದಾಯವನ್ನು ಕಂಡು ಎಲ್ಲರೂ ಆನಂದಿಸಿದರು. ಆದರೆ ಪಂತರು ಮಾತ್ರ ಮೈಮರೆತು ಮೂರ್ಛೆ ಹೋದರು. ಅವರನ್ನು ಮೂರ್ಛೆಯಿಂದ ಎಚ್ಚರಿಸಲು ಬಹಳ ಜನರು ಪ್ರಯತ್ನ ಪಟ್ಟರು. ನಂತರ ಬಾಬಾ ಅವರು ದಯೆಯಿಂದ ಅವರ

ಮೇಲೆ ನೀರು ಚಿಮುಕಿಸಲು ಪ್ರಜ್ಞೆ ಬಂದು ನಿದ್ರೆಯಿಂದ ಕಣ್ಣು ತಿಕ್ಕುತ್ತ ಎದ್ದು ಕುಳಿತರು. ಇವರು ಬೇರೊಬ್ಬ ಗುರುವಿನ ಭಕ್ತರೆಂದು ಅರಿತ ಸರ್ವಜ್ಞರಾದ ಬಾಬಾ ಅವರಿಗೆ "ಏನೇ ಬರಲಿ, ನಿನ್ನ ಆಧಾರ (ಗುರು) ವನ್ನು ಭದ್ರವಾಗಿ ಹಿಡಿದುಕೋ; ಬಿಡಬೇಡ, ನಿಶ್ಚಲನಾಗಿ ಅವನೊಡನೆ ಐಕ್ಯವಾಗಿರು" ಎಂದು ಹೇಳಿ ಅವರಿಗೆ ತಮ್ಮ ಗುರುವಿನಲ್ಲಿದ್ದ ನಂಬಿಕೆಯನ್ನು ಧೃಡಪಡಿಸಿದರು. ಪಂತರು ಈ ಮಾತಿನ ಅರ್ಥವನ್ನು ಗ್ರಹಿಸಿ ತಮ್ಮ ಗುರುಗಳನ್ನು ಸ್ಮರಿಸಿದರು. ಬಾಬಾರವರ ಈ ದಯೆಯನ್ನು ಪಂತರು ತಮ್ಮ ಜೀವಮಾನದಲ್ಲಿ ಮರೆಯಲೇ ಇಲ್ಲ.

## ಹರಿಶ್ಚಂದ್ರ ಪಿತಳೆ

ಮುಂಬಯಿಯ ಹರಿಶ್ಚಂದ್ರ ಪಿತಳೆಯವರ ಮಗನಿಗೆ ಆಗಾಗ್ಗೆ ಮಲರೋಗ ಬರುತ್ತಿತ್ತು. ಪರದೇಶಿ ಮತ್ತು ಆಯುರ್ವೇದ ವೈದ್ಯರಿಂದ ಔಷಧ ಕೊಡಿಸಿದರೂ ಗುಣ ಕಂಡುಬರಲೇ ಇಲ್ಲ. ಸಂತರನ್ನು ಮೊರೆಹೋಗುವ ಒಂದೇ ಒಂದು ಚಿಕಿತ್ಸಾ ಕ್ರಮ ಉಳಿಯಿತು. ದಾಸಗಣೂ ಅವರ ಕೀರ್ತನೆಯಿಂದ ಬಾಬಾ ಅವರ ಕೀರ್ತಿ ಮುಂಬಯಿ ಪ್ರಾಂತದಲ್ಲೆಲ್ಲ ಹರಡಿತ್ತೆಂದು ಈ ಮೊದಲೇ ತಿಳಿಸಲಾಗಿದೆ. ಈ ಕೀರ್ತನೆಗಳನ್ನು ಕೇಳಿದ ಪಿತಳೆಯವರು ಬಾಬಾ ಅವರ ದರ್ಶನ ಮಾತ್ರದಿಂದಲೇ ಸರ್ವರೋಗ ನಿವಾರಣೆ ಯಾಗುತ್ತದೆಂದು ಭಾವಿಸಿ ಒಂದು ಬುಟ್ಟಿ ತುಂಬಾ ಹಣ್ಣುಗಳನ್ನು ತೆಗೆದುಕೊಂಡು ಕುಟುಂಬ ಸಮೇತ ಶಿರ್ಡಿಗೆ ಬಂದರು. ಮಸೀದಿಗೆ ಹೋಗಿ ತಮ್ಮರೋಗ-ಪೀಡಿತ ಮಗನನ್ನು ಬಾಬಾ ಅವರ ಪಾದಗಳ ಬಳಿ ಮಲಗಿಸಿ, ಅವರ ಮುಂದೆ ಧ್ಯಾನಾಸಕ್ತರಾಗಿ ಕುಳಿತರು. ಬಾಬಾ ಅವರು ಆ ಹುಡುಗನನ್ನು ನೋಡಿದ ಕೂಡಲೇ ಅವನ ಪರಿಸ್ಥಿತಿ ಕೆಟ್ಟಿತು. ಹುಡುಗನು ಕಣ್ಣಿನ ಗುಡ್ಡೆ ಮೇಲಕ್ಕೆ ಹೊರಳಿಸಿ ನಿಸ್ತೇಜನಾಗಿ ಬಿದ್ದುಬಿಟ್ಟನು. ಅವನು ಉಸಿರನ್ನು ತ್ಯಜಿಸಿದನೋ ಎಂಬಂತೆ ಮೈಯೆಲ್ಲ ಬೆವೆತು ಬಾಯಿಯಿಂದ ನೊರೆ ಬರಲಾರಂಭಿಸಿತು. ಇದನ್ನು ಕಂಡು ಮಾತಾಪಿತೃಗಳು

ಗಾಬರಿಗೊಂಡರು. ಈ ತರದ ರೋಗ ಆ ಹುಡಗನಿಗೆ ಸ್ವಲ್ಪ ಕಾಲದಿಂದ ಆಗಾಗ್ಗೆ ಬರುತ್ತಿತ್ತು. ಈಗ ಅದರ ಅವಧಿ ಹೆಚ್ಚಾಯಿತು. ದರೋಡೆಯನ್ನು ಮಾಡಲು ಹೊರಟ ಕಳ್ಳನ ಮೇಲೆ ಆ ಮನೆಯೇ ಉರುಳಿ ಬಿದ್ದಂತೆಯೂ, ವ್ಯಾಘ್ರದ ಹೆದರಿಕೆಯಿಂದ ಓಡಿತ್ತಿದ್ದ ಗೋವು ಕಟುಕನ ಕೈಗೆ ಸಿಕ್ಕಂತೆಯೂ, ಬಿಸಿಲಿನ ಬೇಗೆಯನ್ನು ತಡೆಯಲಾರದೆ ವೃಕ್ಷದ ಕೆಳಗೆ ನೆರಳಿನಲ್ಲಿ ವಿಶ್ರಾಂತಿ ಪಡೆಯಲು ಹೋದ ಪ್ರಯಾಣಿಕನ ಮೇಲೆ ಆ ವೃಕ್ಷವೇ ಉರುಳಿದಂತೆಯೂ, ಪರಮಭಕ್ತನೂ ಪೂಜೆ ಮಾಡಲು ದೇವಾಲಯಕ್ಕೆ ಹೋದಾಗ ಆ ದೇಗುಲವೇ ಅವನ ಮೇಲೆ ಮೊಗಚಿಕೊಂಡಂತೆಯೂ, ಆ ಹುಡುಗನ ತಾಯಿ ಚಿಂತಾಕ್ರಾಂತಳಾಗಿ ರೋದಿಸಿದಳು. ಇದನ್ನು ಕಂಡ ಬಾಬಾ ಅವರು "ಅಮ್ಮಾ, ಏಕೆ ಹೀಗೆ ರೋದಿಸುತ್ತಿ? ಅಳುವುದನ್ನು ನಿಲ್ಲಿಸು. ನಿನ್ನ ಮಗನನ್ನು ಮನೆಗೆ ಕರೆದುಕೊಂಡು ಹೋಗು. ಸ್ವಲ್ಪ ಹೊತ್ತಿನಲ್ಲಿ ಪ್ರಜ್ಞೆ ಬರುತ್ತದೆ." ಎಂದು ಹೇಳಿ ಸಮಾಧಾನ ಪಡಿಸಿದರು. ಬಾಬಾರವರ ಆಜ್ಞೆಯನ್ನು ಪರಿಪಾಲಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಬಾಬಾ ನುಡಿದ ಪ್ರಕಾರ ಹುಡುಗನಿಗೆ ಪ್ರಜ್ಞೆ ಬಂದಿತು. ನಂತರ ಅವರೆಲ್ಲರೂ ಅನುಮಾನ ರಹಿತರಾಗಿ ಬಾಬಾರವರ ಬಳಿಗೆ ಹೋಗಿ ನಮಸ್ಕರಿಸಿದರು. ಆಗ ಬಾಬಾ ಅವರು "ನಿಮ್ಮ ಅನುಮಾನ, ಶಂಕೆ ಎಲ್ಲವೂ ಈಗ ದೂರವಾದವೆ? ಶಾಂತಿ ಹೊಂದಿದಿರಾ? ಶ್ರೀ ಹರಿಯಲ್ಲಿ ಧೃಡವಾದ ನಂಬಿಕೆ ಮತ್ತು ಅಚಲ ವಿಶ್ವಾಸ ಇಟ್ಟವರನ್ನು ಅವನು ಕಾಪಾಡುವನು" ಎಂದರು. ನಂತರ ಪಿತಳೆಯವರು ಎಲ್ಲರಿಗೂ ಸಿಹಿ ತಿನಿಸನ್ನು ಹಂಚಿದರು. ಬಾಬಾ ಅವರಿಗೆ ಒಳ್ಳೆಯ ಫಲ, ಪುಷ್ಪ ಮತ್ತು ವೀಳ್ಯವನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದರು. ಶ್ರೀಮತಿ ಪಿತಳೆಯವರು ಸಾತ್ವಿಕರಾಗಿ ದೇವರಲ್ಲಿ ಭಕ್ತಿ ಇಟ್ಟಿದ್ದರು. ಬಾಬಾ ಅವರನ್ನೇ ದಿಟ್ಟಿಸಿ ನೋಡುತ್ತ ಆನಂದ ಬಾಷ್ಪಗಳನ್ನು ಸುರಿಸುತ್ತ ಕಂಬಕ್ಕೆ ಒರಗಿಕೊಂಡು ಕುಳಿತಿದ್ದರು. ಇವರ ಅಪೂರ್ವ ಭಕ್ತಿ ವಾತ್ಸಲ್ಯಗಳಿಗೆ ಬಾಬಾ ಮನಸೋತರು. ಪರಮಾತ್ಮನ ಹಾಗೆ ಸಂತರೂ ಸಹ ಆರಾಧಿಸುವವರ ಅಧೀನರು.

ಕೆಲವು ದಿನಗಳ ನಂತರ ಪಿತಳೆಯವರು ಕುಟುಂಬ ಸಮೇತ ಹಿಂತಿರುಗಲು ಮಸೀದಿಗೆ ಬಂದು ಬಾಬಾ ಅವರ ಅನುಮತಿ ಬೇಡಿದರು. ಬಾಬಾ ಅವರಿಗೆಲ್ಲರಿಗೂ ಉಧಿಯನ್ನು ಕೊಟ್ಟು ಪಿತಳೆಯವರನ್ನು ಹತ್ತಿರಕ್ಕೆ ಕರೆದು "ಬಾಪೂ, ನಾನು ನಿನಗಾಗಲೇ ಎರಡು ರೂಪಾಯಿ ಕೊಟ್ಟಿರುತ್ತೇನೆ. ಈ ಮೂರು ರೂಪಾಯಿಗಳನ್ನು ತೆಗೆದುಕೊ. ಇವುಗಳನ್ನೂ ಸಹ ಪ್ರತಿದಿನ ಪೂಜೆ ಮಾಡುತ್ತ ಹೋಗು. ಪರಮಾತ್ಮನು ನಿನಗೆ ಒಳ್ಳೆಯದನ್ನು ಮಾಡುತ್ತಾನೆ" ಎಂದರು. ಪಿತಳೆ ಹಣವನ್ನು ಪ್ರಸಾದವಾಗಿ ಸ್ವೀಕರಿಸಿ ಬಾಬಾರವರ ಆಶೀರ್ವಾದ ಪಡೆದರು. ನಂತರ "ಬಾಬಾ ನನಗಾಗಲೇ ಎರಡು ರೂಪಾಯಿ ಕೊಟ್ಟಿದ್ದೇನೆಂದರು. ಅದು ಹೇಗೆ? ನಾನು ಶಿರ್ಡಿಗೆ ಬರುತ್ತಿರವುದು ಇದೇ ಮೊದಲು. ಇದರ ಅರ್ಥವೇನು?" ಎಂದು ಯೋಚನಾಮಗ್ನರಾದರು. ಬಾಬಾ ಅವರೂ ಸಹ ಸುಮ್ಮನಿದ್ದರು. ಪಿತಳೆಯವರು ಮುಂಬಯಿಗೆ ಬಂದು ಶಿರ್ಡಿಯಲ್ಲಿ ನಡೆದುದೆಲ್ಲವನ್ನೂ ತಮ್ಮ ತಾಯಿಗೆ ತಿಳಿಸಿದರು. ಬಾಬಾರವರು ಆಗಲೇ ಎರಡು ರೂಪಾಯಿ ತಮಗೆ ಕೊಟ್ಟಿದ್ದೇನೆಂದು ಹೇಳಿದ್ದನ್ನು ಸಹ ತಾಯಿಗೆ ತಿಳಿಸಿದರು. ಅವರ ತಾಯಿಗೂ ಸಹ ಮೊದಲು ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತು ಯೋಚಿಸಿದ ನಂತರ ಅವರಿಗೆ ಹಳೆಯದೊಂದು ಘಟನೆ ನೆನಪಿಗೆ ಬಂದು, ಮಗನನ್ನು ಕುರಿತು "ನೀನು ಹೇಗೆ ನಿನ್ನ ಮಗನೊಡನೆ ಶಿರ್ಡಿಗೆ ಹೋಗಿ ಬಂದಿರುವೆಯೋ, ಅದೇ ರೀತಿ ನಿನ್ನ ತಂದೆಯವರೂ ಸಹ ನಿನ್ನೊಡನೆ ಅಕ್ಕಲಕೋಟೆ ಮಹಾರಾಜರ ದರ್ಶಪಡೆಯಲು ಹೋಗಿದ್ದರು. ಅವರು ನಿಮ್ಮ ತಂದೆಯವರಿಗೆ ಎರಡು ರೂಪಾಯಿ ಕೊಟ್ಟು ಪೂಜಿಸಲು ಹೇಳಿದ್ದರು. ಅವರೂ ಸಹ ಶುದ್ಧ ಸಾತ್ವಿಕ ಯೋಗಿಗಳೂ, ಮಹಾಜ್ಞಾನಿಗಳೂ ಮತ್ತು ಸಿದ್ಧಪುರಷರೂ ಆಗಿದ್ದರು. ನಿಮ್ಮ ತಂದೆಯವರು ಅವರ ಕೊನೆಯ ದಿನಗಳವರೆಗೆ ಅವುಗಳನ್ನು ಪೂಜಿಸುತ್ತಲೇ ಇದ್ದರು. ನಂತರ ಪೂಜೆಯು ನಿಂತಿತು. ಕೆಲವುಕಾಲದ ಮೇಲೆ ನಮಗೆ ಆ ರೂಪಾಯಿಗಳ ನೆನಪೇ ಬರಲಿಲ್ಲ. ಅಕ್ಕಲಕೋಟೆ

ಮಹಾರಜರೇ ಬಾಬಾರವರ ರೂಪದಲ್ಲಿ ಅವತರಿಸಿ ನಿನ್ನ ಕರ್ತವ್ಯವನ್ನು ನಿನಗೆ ಜ್ಞಾಪಿಸಿರುತ್ತಾರೆ. ನೀನೇ ಅದೃಷ್ಟಶಾಲಿ. ಆದುದರಿಂದ ಇನ್ನು ಮುಂದೆ ನಿನ್ನ ಅನುಮಾನಗಳೆಲ್ಲವನ್ನೂ ತ್ಯಜಿಸು. ಒಳ್ಳೆಯ ನಡತೆಯುಳ್ಳವನಾಗು. ಕುಲದೇವರನ್ನೂ ಮತ್ತು ರೂಪಾಯಿಗಳನ್ನೂ ಪೂಜಿಸುತ್ತ ನಡೆ. ಸಂತರ ಆಶೀರ್ವಾದವೇ ಶ್ರೇಷ್ಠವೆಂದು ಬಗೆದು ಸರಿಯಾದ ಜ್ಞಾನಮಾರ್ಗವನ್ನು ಅವಲಂಬಿಸು. ದಯಾಮಯರಾದ ಶ್ರೀ ಸಾಯಿ ಸಮರ್ಥರು ನಿನ್ನಲ್ಲಿ ಭಕ್ತಿಯನ್ನು ಪುನರುತ್ಥಾನ ಮಾಡಿರುತ್ತಾರೆ." ಎಂದರು. ಮಾತೆಯ ನುಡಿಗಳನ್ನು ಕೇಳಿ ಪಿತಳೆಯವರು ಹರ್ಷಭರಿತರಾದರು.

## ಅಂಬೇಡಕರ

ಗೋಪಾಲರಾವ ಅಂಬೇಡಕರ ಎಂಬುವರು ಬಾಬಾರವರ ಭಕ್ತರಾಗಿದ್ದರು. ಅವರು ಠಾಣಾ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಲ್ಲಿ ೧೦ ವರ್ಷ ಕೆಲಸ ಮಾಡಿ ನಂತರ ಜವ್ಹಾರ್‌ನಲ್ಲಿ ನೌಕರಿಯಿಂದ ನಿವೃತ್ತರಾದರು. ಬೇರೆ ಕೆಲಸ ಹುಡುಕಿ ವಿಫಲರಾಗಿದ್ದರು. ಅನೇಕ ತೊಂದರೆಗಳು ಮೇಲಿಂದ ಮೇಲೆ ಉಂಟಾಗಿದ್ದುದರಿಂದ ಅವರು ಬಹಳ ದು:ಖದಿಂದಿದ್ದರು. ಇದೇ ರೀತಿಯಲ್ಲಿ ಶಿರ್ಡಿಗೆ ಪ್ರತಿವರ್ಷವೂ ಬಂದು ಬಾಬಾ ಅವರಲ್ಲಿ ಮೊರೆ ಇಡುತ್ತ ಏಳು ವರ್ಷಗಳನ್ನು ಕಳೆದರು. ೧೯೧೬ರಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದ್ದರಿಂದ ಅವರು ತಾಳ್ಮೆ ಮೀರಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದರು. ಆದುದರಿಂದ ತಮ್ಮ ಪತ್ನಿಯೊಡನೆ ಶಿರ್ಡಿಗೆ ಬಂದು ಅಲ್ಲಿ ಎರಡು ದಿನಗಳನ್ನು ಕಳೆದರು. ಒಂದು ದಿನ ದೀಕ್ಷಿವಾಡಾದ ಎದುರಿನಲ್ಲಿದ್ದ ಎತ್ತಿನ ಬಂಡಿಯ ಮೇಲೆ ಕುಳಿತು ಬಾವಿಯಲ್ಲಿ ಬಿದ್ದು ಅಸುವನ್ನು ನೀಗಬೇಕೆಂದು ನಿರ್ಧರಿಸಿದರು. ಅವರು ಮಾಡಲೆತ್ನಿಸಿದುದು ಒಂದು ! ಆದರೆ ಬಾಬಾರವರ ಇಚ್ಛೆ ಇನ್ನೊಂದು! ಅಲ್ಲಿಂದ ಸ್ವಲ್ಪವೇ ದೂರದಲ್ಲಿ ಇದ್ದ ಖಾನಾವಳಿ ಮಾಲೀಕರೂ ಬಾಬಾರವರ ಭಕ್ತರೂ ಆದ ಸಗುಣ

ಮೇರು ನಾಯಿಕ ಹೊರಗೆ ಬಂದು ಏಕಾಂಗಿಯಾಗಿ ಕುಳಿತಿದ್ದ ಅಂಬೇಡಕರರನ್ನು ನೋಡಿ ,"ನೀವು ಅಕ್ಕಲಕೋಟೆ ಮಹಾರಾಜರ ಚರಿತ್ರೆಯನ್ನು ಓದಿದ್ದೀರಾ" ಎಂದು ಕೇಳಲು ತಕ್ಷಣವೇ ಅವರಿಂದ ಆ ಪುಸ್ತಕವನ್ನು ಪಡೆದು ಓದಲು ಉಪಕ್ರಮಿಸಿದರು. ಹೀಗೆ ಆ ಪುಸ್ತಕ ಓದುತ್ತಿರುವಾಗ ದೇವಾನುಗ್ರಹವೋ ಎಂಬಂತೆ ಈ ಕೆಳಗಿನ ಉಪಕಥೆಯು ಅವರಿಗೆ ಕಂಡಿತು.

ಅಕ್ಕಲಕೋಟೆ ಮಹಾರಾಜರ ಭಕ್ತರಾದ ಒಬ್ಬರು ಗುಣವಾಗದೆ ಇದ್ದ ರೋಗ ರುಜಿನುಗಳಿಂದ ಬೇಸರಗೊಂಡು ಒಂದು ದಿನ ರಾತ್ರಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದರು. ಆದುದರಿಂದ ಅವರು ಬಾವಿಯ ಹತ್ತಿರ ಬಂದರು. ಆಗ ಅಕ್ಕಲಕೋಟೆ ಮಹಾರಾಜರು ಅವರ ಸಮೀಪಕ್ಕೆ ಬಂದು "ಒಳ್ಳೆಯದೇ ಆಗಲಿ, ಕೆಟ್ಟದೇ ಅಗಲಿ, ನಿನ್ನ ಕರ್ಮದ ಫಲವನ್ನು ಅನುಭವಿಲೇ ಬೇಕು. ಅದನ್ನು ಅನುಭವಿಸಿ ಮುಗಿಸದೇ ಇದ್ದರೆ ಆತ್ಮಹತ್ಯೆಯಿಂದ ಏನೂ ಪ್ರಯೋಜನವಿಲ್ಲ. ಅದಕ್ಕೋಸ್ಕರ ಇನ್ನೊಂದು ಜನ್ಮ ತಾಳಿ ಅದನ್ನು ಮುಗಿಸಬೇಕಾದುದು ಅನಿವಾರ್ಯ. ಆತ್ಮಹತ್ಯೆ ಮಾಡಿಕೊಳ್ಳುವ ಬದಲು ಈ ಜನ್ಮದಲ್ಲಿಯೇ ಸ್ವಲ್ಪಕಾಲ ಪೂರ್ವಜನ್ಮದ ಕರ್ಮಫಲ ಅನುಭವಿಸಿ ವಿಮುಕ್ತನಾಗಬೇಕು" ಎಂದು ಉಪದೇಶ ನೀಡಿದರು.

ಈ ಸಮಯೋಚಿತ ಕಥೆಯನ್ನು ಓದಿ ಅಂಬೇಡಕರರಿಗೆ ಆನಂದವಾಯಿತು. ಮನಸ್ಸು ಬದಲಾಯಿತು. ಬಾಬಾ ಅವರ ಈ ಸೂಚನೆ ಅವರಿಗೆ ದೊರೆಯದೇ ಹೋಗಿದ್ದರೆ ಅವರು ಈ ಪ್ರಪಂಚದಿಂದ ದೂರವಾಗಿರುತ್ತಿದ್ದರೋ ಏನೋ! ಬಾಬಾ ಅವರ ಅಂತರ್ಯಾಮಿತ್ವ, ದಯೆ, ಇವುಗಳಿಂದ ಅವರಿಗೆ ಬಾಬಾ ಅವರಲ್ಲಿ ಭಕ್ತಿ ಧೃಡವಾಯಿತು. ನಂತರ ಅವರು ಬಾಬಾ ಅವರ ಪರಮ ಭಕ್ತರಾದರು. ಅವರ ತಂದೆಯು ಅಕ್ಕಲಕೋಟೆ ಮಹಾರಾಜರ ಭಕ್ತರಾಗಿದ್ದುದರಿಂದ ಅವರೂ ಸಹ ತಮ್ಮ ಪೂರ್ವಜರ ಮೇಲ್ಪಂಕ್ತಿಯನ್ನು

ಅನುಸರಿಸಬೇಕೆಂಬುದೇ ಬಾಬಾ ಅವರ ಆಶಯವಾಗಿದ್ದಿತು. ಅನಂತರ ಜ್ಯೋತಿಷ್ಯವನ್ನು ಅಭ್ಯಾಸ ಮಾಡಿ ಅದರಲ್ಲಿ ಪಾಂಡಿತ್ಯ ಗಳಿಸಿ ಹಣವನ್ನು ಸಂಪಾದಿಸಿ ತಮ್ಮ ಜೀವಿತದ ಕೊನೆಯ ದಿನಗಳನ್ನು ಆನಂದದಿಂದ ಕಳೆದರು.

**ಶ್ರೀ ಸಾಯಿ ಪ್ರಣಾಮ**

# ೨೭ನೇ ಅಧ್ಯಾಯ

**ಭಾಗವತ ಮತ್ತು ವಿಷ್ಣುಸಹಸ್ರನಾಮ ದಯಪಾಲಿಸಿದುದು – ದೀಕ್ಷಿತ ಅವರಿಗೆ ವಿಠ್ಠಲ ದರ್ಶನ – ಗೀತಾ ರಹಸ್ಯ – ಖಾಪರ್ಡೆ ದಂಪತಿಗಳು**

ಬಾಬಾ ಅವರು ತಮ್ಮ ಭಕ್ತರಿಗೆ ಧಾರ್ಮಿಕ ಗ್ರಂಥಗಳನ್ನು ತಮ್ಮ ಸ್ವಹಸ್ತದಿಂದ ಕೊಟ್ಟು ಪುನೀತರನ್ನಾಗಿ ಮಾಡಿ ಹೇಗೆ ಅನುಗ್ರಹಿಸುತ್ತಿದ್ದರು. ಎಂಬುದನ್ನು ಈ ಅಧ್ಯಾಯದಲ್ಲಿ ಹೇಮಾಡಪಂತರು ವಿವರಿಸಿದ್ದಾರೆ.

ಮಾನವನು ಸಾಗರದಲ್ಲಿ ಸ್ನಾನ ಮಾಡಿದರೆ ಸಮಸ್ತ ಪವಿತ್ರ ಕ್ಷೇತ್ರಗಳಲ್ಲಿಯೂ ಮತ್ತು ಪುಣ್ಯನದಿಗಳಲ್ಲಿಯೂ ಮಿಂದ ಪುಣ್ಯ ದೊರಕುತ್ತದೆ. ಅವನು ಸದ್ಗುರುವಿಗೆ ನಮಿಸಿದರೆ ತ್ರಿಮೂರ್ತಿಗಳಿಗೂ ಮತ್ತು ಪರಬ್ರಹ್ಮನಿಗೂ ನಮಸ್ಕರಿಸಿದ ಪುಣ್ಯ ಲಭಿಸುತ್ತದೆ. ಆದುದರಿಂದ ಭಕ್ತರ ಕಲ್ಪತರುವೂ, ವರ ಕಾಮಧೇನುವೂ, ಜ್ಞಾನ ಸಾಗರರೂ ಆದ ಶ್ರೀ ಸಾಯಿಬಾಬಾ ಅವರಿಗೆ ಜಯತು! ಓ ಸಾಯಿ, ನಿನ್ನ ಕಥೆಗಳಲ್ಲಿ ನಮಗೆ ಪ್ರೀತಿಯನ್ನು ಹುಟ್ಟಿಸು. ಚಾತಕ ಪಕ್ಷಿಯು ಮಳೆಯ ನೀರನ್ನು ಕುಡಿದು ಸಂತೋಷ ಪಡುವಂತೆ ವಾಚಕರೂ ಮತ್ತು ಶ್ರವಣ ಮಾಡುವವರೂ ನಿನ್ನ ಕಥೆಗಳನ್ನು ಸಹ ಅದೇ ತರದ ರುಚಿಯಿಂದ ಸ್ವಾದಿಸುವಂತಾಗಲಿ, ನಿನ್ನ ಲೀಲೆಗಳನ್ನು ಕೇಳುತ್ತ ಅವರ ಶರೀರವು ಬೆವರಲಿ, ನಯನಗಳಿಂದ ಆನಂದಬಾಷ್ಪ ಹರಿಯಲಿ, ಪ್ರಾಣಗಳು ನಿಶ್ಚಲವಾಗಲಿ, ಮನಸ್ಸು ಶಾಂತಿ ಪಡೆಯಲಿ, ಅವರು ರೋಮಾಂಚಿತರಾಗಿ ಶೋಕಿಸಿ ರೋದಿಸಲಿ ಚಿಕ್ಕದು –ದೊಡ್ಡದು ಎಂಬ ಭೇದಭಾವ ತೊಲಗಲಿ – ಈ ರೀತಿ ಅವರು ಮತ್ತು ಅವರ ಕುಟುಂಬವೂ ಸಾತ್ವಿಕ ಪ್ರೇರೇಪಣೆಯನ್ನು ಹೊಂದುವಂತಾಗಲಿ. ಇವು ಲಭಿಸಿದ್ದಾದರೆ ಅವರಿಗೆ ಗುರುವಿನ ಕೃಪಾಕಟಾಕ್ಷ ಲಭಿಸಿತೆಂದೇ ಅರ್ಥ.

ಈ ತರದ ಅನುಕಂಪವು ನಿಮ್ಮಲ್ಲಿ ಉಂಟಾದಾಗ ಗುರುವು ಮೆಚ್ಚಿ ನಿಮ್ಮ ಗುರಿಯಾದ ಸಾಕ್ಷಾತ್ಕಾರದತ್ತ ನಿಮ್ಮನ್ನು ಒಯ್ಯುವನು. ಬಾಬಾ ಅವರಿಗೆ ಸಂಪೂರ್ಣ ಶರಣಾಗತಿ ಹೊಂದುವದೇ ಮಾಯೆ ಎಂಬ ಬಂಧನದಿಂದ ಮುಕ್ತರಾಗಲು ಒಳ್ಳೆಯ ದಾರಿ. ಇದು ವೇದಗಳಿಂದ ಸಾಧ್ಯವಿಲ್ಲ. ಸದ್ಗುರುವಿನಿಂದ ಮಾತ್ರ ಸಾಧ್ಯ.

## ಪವಿತ್ರ ಗ್ರಂಥಗಳ ದಯಪಾಲನೆ

ಸಾಯಿಬಾಬಾ ವಿವಿಧ ರೂಪದಲ್ಲಿ ಉಪದೇಶಗಳನ್ನು ಹೇಗೆ ನೀಡುತ್ತಿದ್ದರು ಎಂಬುದನ್ನು ಈಗಾಗಾಲೇ ವಿವರಿಸಿದ್ದೇನೆ. ಈಗ ಅದರಲ್ಲಿ ಒಂದು ಮುಖ್ಯ ರೀತಿಯನ್ನು ನೋಡೋಣ. ಭಕ್ತರು ತಾವು ಪಠಿಸಲಿಚ್ಛಿಸಿದ ಗ್ರಂಥಗಳನ್ನು ಬಾಬಾರವರ ಕೈಗಿತ್ತು, ಅವು ಅವರಿಂದ ಸ್ಪರ್ಶಿಸಲ್ಪಟ್ಟು ಪವಿತ್ರವಾದ ನಂತರ ಅವುಗಳನ್ನು ಓದುವ ವಾಡಿಕೆ ಇತ್ತು. ಆ ಗ್ರಂಥಗಳನ್ನು ಪಠಿಸುವಾಗ ಬಾಬಾ ಸ್ವತ: ತಮ್ಮೊಡನೆ ಇರುತ್ತಾರೆಂದು ಭಕ್ತರ ಭಾವನೆ. ಒಂದು ಸಾರೆ ಕಾಕಾ ಮಹಾಜನಿ ಅವರು ಏಕನಾಥ ವಿರಚಿತ ಭಾಗವತ ಗ್ರಂಥದೊಡನೆ ಶಿರ್ಡಿಗೆ ಬಂದರು. ಶ್ಯಾಮ ಅವರು ಆ ಗ್ರಂಥವನ್ನು ಓದಲು ಬಯಸಿ ಅದನ್ನು ಎರವಲಾಗಿ ಪಡೆದು ಬಾಬಾ ಅವರಲ್ಲಿಗೆ ತಂದರು. ಆಗ ಬಾಬಾ ಅವರು ಅದನ್ನು ತೆಗೆದುಕೊಂಡು ಸ್ವಲ್ಪ ಪುಟಗಳನ್ನು ತಿರುವಿಹಾಕಿ, "ಇದನ್ನು ನೀನೇ ಇಟ್ಟುಕೋ"ಎಂದರು. ಅದಕ್ಕೆ ಶ್ಯಾಮ ಅವರು ಅದು ತಮ್ಮದಲ್ಲವೆಂದೂ, ಕಾಕಾ ಅವರಿಗೆ ಅದನ್ನು ಪುನ: ಕೊಡಬೇಕೆಂದೂ ತಿಳಿಸಿದರು. ಆಗ ಬಾಬಾ ಅವರು, "ಬೇಡ, ಬೇಡ, ನಿನಗೆ ಕೊಟ್ಟಿದ್ದೇನೆ. ಅದನ್ನು ಭದ್ರವಾಗಿ ಕಾಪಾಡು, ನೀನೇ, ಇಟ್ಟುಕೊ; ಅದರಿಂದ ನಿನಗೆ ಪ್ರಯೋಜನವಿದೆ" ಎಂದರು. (ಈ ರೀತಿ ಬಾಬಾ ಅವರು ಶ್ಯಾಮ ಅವರಿಗೆ ಅನೇಕ ಗ್ರಂಥಗಳನ್ನು ದಯಪಾಲಿಸಿದ್ದರು.) ಕೆಲವು ದಿನಗಳ ನಂತರ ಕಾಕಾ ಮಹಾಜನಿ ಅವರು ಏಕನಾಥ ಭಾಗವತದ ಮತ್ತೊಂದು ಪ್ರತಿಯನ್ನು ತಂದು ಬಾಬಾ ಅವರ ಕೈಗಿತ್ತರು. ಆಗ ಬಾಬಾ ಅವರು

ಅದನ್ನು ಸ್ಪರ್ಶಿಸಿ "ಇದನ್ನು ಕಾಪಾಡು" ಎಂದು ಹೇಳಿ ಹಿಂತಿರುಗಿಸಿದರು. ಕಾಕಾ ಅವರು ಅದನ್ನು ಪ್ರಸಾದವಾಗಿ ಸ್ವೀಕರಿಸಿ ನಮಸ್ಕರಿಸಿದರು.

## ಶ್ಯಾಮ ಅವರಿಗೆ ವಿಷ್ಣು ಸಹಸ್ರನಾಮ

ಶ್ಯಾಮ ಅವರು ಬಾಬಾ ಅವರ ಆಪ್ತ ಭಕ್ತರಾಗಿದ್ದರು. ಆದುದರಿಂದ ಬಾಬಾ ಅವರಿಗೆ ವಿಷ್ಣು ಸಹಸ್ರನಾಮವನ್ನು ಅನುಗ್ರಹಿಸಬೇಕೆಂದು ಮನಸ್ಸು ಮಾಡಿದರು.

ಒಂದು ಸಲ ರಾಮದಾಸಿ ಎಂಬುವರು (ಸಂತ ರಾಮದಾಸರ ಶಿಷ್ಯರು) ಶಿರ್ಡಿಗೆ ಬಂದು ನೆಲೆಸಿದರು. ಪ್ರತಿ ದಿನ ಮುಂಜಾನೆ ಎದ್ದು ಮುಖ ತೊಳೆದು ಸ್ನಾನ–ಸಂಧ್ಯಾ ವಂದನೆಗಳನ್ನು ಮುಗಿಸಿ, ವಿಷ್ಣು ಸಹಸ್ರನಾಮವನ್ನೂ ಮತ್ತು ಆಧ್ಯಾತ್ಮ ರಾಮಾಯಣವನ್ನೂ ಬಹಳ ಬಕ್ತಿಯಿಂದ ಓದುತ್ತಿದ್ದರು. ಕೆಲವು ದಿನಗಳ ನಂತರ ಬಾಬಾ ಅವರು ಶ್ಯಾಮ ಅವರಿಗೆ ವಿಷ್ಣು ಸಹಸ್ರನಾಮವನ್ನು ದಯಪಾಲಿಸಬೇಕೆಂದು ಮನಸ್ಸು ಮಾಡಿ ರಾಮದಾಸಿಯನ್ನು ತಮ್ಮ ಬಳಿಗೆ ಕರೆದು, ತಮಗೆ ಬಹಳ ಹೊಟ್ಟೆ ನೋವಾಗಿದೆ ಎಂದೂ, ಸೋನಾಮುಖಿ ತಿನ್ನದಿದ್ದರೆ ಅದು ಕಡಿಮೆಯಾಗಲಾರದೆಂದೂ ಹೇಳಿ ಅದನ್ನು ತರಲು ಅವರನ್ನು ಪೇಟೆಗೆ ಕಳುಹಿಸಿದರು. ಆಗ ರಾಮದಾಸಿ ಪುಸ್ತಕವನ್ನು ಬದಿಗಿಟ್ಟು ಪೇಟೆಗೆ ಹೋದರು. ಅವರು ಹೋದ ಕೂಡಲೆ ಬಾಬಾ ರಾಮದಾಸಿಯ ಜಾಗಕ್ಕೆ ಹೋಗಿ ವಿಷ್ಣು ಸಹಸ್ರನಾಮ ಪುಸ್ತಕ ತೆಗೆದುಕೊಂಡು, ಶ್ಯಾಮ ಅವರನ್ನು ಕರೆದು,"ಶ್ಯಾಮಾ, ಇದು ಬಹಳ ಬೆಲೆಯುಳ್ಳದ್ದೂ ಪವಿತ್ರವಾದ್ದೂ ಆಗಿದೆ. ನಾನು ನಿನಗೆ ಇದನ್ನು ಬಹುಮಾನವಾಗಿ ಕೊಡುತ್ತೇನೆ. ಇದನ್ನು ಓದು. ಒಂದು ಸಾರಿ ನನಗೆ ಎದೆ ನೋವು ಜಾಸ್ತಿಯಾಗಿ ಬದುಕುವ ಭರವಸೆಯೇ ಇರಲಿಲ್ಲ. ಆಗ ಈ ಪುಸ್ತಕವನ್ನು ನನ್ನ ಎದೆಗೆ ಒತ್ತಿಕೊಂಡೆನು. ನನಗೆ ಎಂಥ ವಿರಾಮ ದೊರಕಿತು ನಿನಗೆ ಗೊತ್ತೆ? ದೇವರೇ ಕೆಳಗಿಳಿದು ಬಂದು

ನನ್ನನ್ನು ರಕ್ಷಿಸಿದಂತೆ ಭಾಸವಾಯಿತು. ನೀನು ಇದನ್ನು ನಿಧಾನವಾಗಿ ಶ್ರದ್ಧೆ ಮತ್ತು ಭಕ್ತಿಯಿಂದ ಓದು. ದಿನಕ್ಕೊಂದು ಬಾರಿಯಾದರೂ ವಿಷ್ಣುನಾಮವನ್ನುಚ್ಚರಿಸು. ನಿನಗೆ ಕಲ್ಯಾಣವಾಗುತ್ತದೆ" ಎಂದು ಹೇಳಿ ಅವರು ಕೈಗೆ ಪುಸ್ತಕ ಕೊಟ್ಟರು. ಆಗ ಶ್ಯಾಮ ಅವರು ಪುಸ್ತಕದ ಮಾಲೀಕರು ರಾಮದಾಸಿ ಎಂದು; ಅವರು ಹುಂಬರೂ, ತಲೆತಿರುಕರೂ ಆದುದರಿಂದ ತಮ್ಮೊಡನೆ ಜಗಳಾಡುವರಂದೂ, ಜೊತೆಗೆ ತಮಗೆ ಸಂಸ್ಕೃತ ಸರಿಯಾಗಿ ಅರ್ಥವಾಗುವುದಿಲ್ಲವೆಂದೂ ಹೇಳಿ ಪುಸ್ತಕ ತೆಗೆದುಕೊಳ್ಳಲು ನಿರಾಕರಿಸಿದರು.

ರಾಮದಾಸಿಯ ಮೇಲೆ ತಮ್ಮನ್ನು ಎತ್ತಿ ಕಟ್ಟಬೇಕೆಂದು ಬಾಬಾ ಇಚ್ಛಿಸಿದ್ದಾರೆಂದು ಶ್ಯಾಮ ಭಾವಿಸಿದರು. ಬಾಬಾ ಅವರ ಇಂಗಿತ ಅವರಿಗೆ ಹೇಗೆ ತಿಳಿದೀತು? ಶ್ಯಾಮ ಅವರ ಕೊರಳಿಗೆ ವಿಷ್ಣು ಸಹಸ್ರನಾಮವೆಂಬ ಹಾರ ಹಾಕಿ ಅವರನ್ನು ಸಂಸಾರ ಬಂಧನದಿಂದ ಮುಕ್ತರನ್ನಾಗಿ ಮಾಡುವುದೇ ಬಾಬಾ ಅವರ ಆಶಯವಾಗಿತ್ತು. ಪರಮಾತ್ಮನ ನಾಮದ ಮಹಿಮೆ ಎಲ್ಲರಿಗೂ ತಿಳಿದೇ ಇದೆ. ಅದು ನಮ್ಮನ್ನು ಪಾಪ ಕರ್ಮಗಳಿಂದ ದೂರ ಮಾಡಿ, ಜನನ ಮರಣಗಳಿಂದ ನಮ್ಮನ್ನು ಮುಕ್ತ ಮಾಡುತ್ತದೆ.ಇದಕ್ಕಿಂತ ಸುಲಭವಾದ ಸಾಧನ ಬೇರೊಂದಿಲ್ಲ. ಅದಕ್ಕೆ ಯಾವ ವಿಧವಾದ ಸಾಮಾನು–ಸರಂಜಾಮುಗಳ ಅವಶ್ಯಕತೆಯಿಲ್ಲ. ಅದಕ್ಕೆ ನಿಬಂಧನೆಗಳಿಲ್ಲ. ಅದು ಎಷ್ಟು ಸುಲಭ ಸಾಧ್ಯವೊ, ಅಷ್ಟೇ ಪರಿಣಾಮಕಾರಿ. ಆದುದರಿಂದಲೇ ಬಾಬಾ ಶ್ಯಾಮ ಅವರಿಗೆ ಅದನ್ನು ತೆಗೆದುಕೊಳ್ಳಲು ಒತ್ತಾಯ ಪಡಿಸಿದರು.

ರಾಮದಾಸಿ ಸೋನಾಮುಖಿಯೊಡನೆ ಹಿಂತಿರುಗಿದರು. ಆ ಸಂದರ್ಭದಲ್ಲಿ ಅಲ್ಲಿಯೇ ಇದ್ದ ಅಣ್ಣಾ ಚಿಂಚಣೀಕರ ನಾರದರ ಪಾತ್ರ ವಹಿಸಿ ನಡೆದ ಸಮಾಚಾರ ಕೂಡಲೇ ಅವರಿಗೆ ತಿಳಿಸಿದರು. ಇದನ್ನು ಕೇಳಿ ರಾಮದಾಸಿ ಬಹಳ ಕೋಪಗೊಂಡು ಶ್ಯಾಮ ಅವರ ಬಳಿಗೆ ಬಂದು "ಈ ಪುಸ್ತಕವನ್ನು ಪಡೆಯಲೋಸುಗ ಬಾಬಾ ಅವರಿಗೆ

ಹೊಟ್ಟೆನೋವೆಂದು ಸುಳ್ಳು ಹೇಳಿ, ನನ್ನನ್ನು ಸೋನಾಮುಖಿ ತರಲು ಕಳಿಸಲು ನೀವೇ ಕಾರಣರು" ಎಂದು ಗದ್ದರಿಸಿದರು. ಶ್ಯಾಮ ಅವರನ್ನು ತೆಗಳಲು ಶುರು ಮಾಡಿದರು. ಪುಸ್ತಕವನ್ನು ಮರಳಿ ಕೊಡದಿದ್ದರೆ ನಿಮ್ಮ ತಲೆ ಒಡೆಯುವೆನೆಂದರು. ಆಗ ಶ್ಯಾಮ ಶಾಂತ ರೀತಿಯಂದ ಅವರೊಡನೆ ಮಾತಾಡಿ ವಿಫಲರಾದರು. ನಂತರ ಬಾಬಾ ರಾಮದಾಸಿಯನ್ನು ಕುರಿತು "ರಾಮದಾಸಿ, ಹೀಗೇಕೆ ವರ್ತಿಸುತ್ತೀ? ಏತಕ್ಕೆ ಕೋಪಗೊಂಡಿರುವೆ? ಶ್ಯಾಮ ನಮ್ಮ ಹುಡುಗನೇ ಅಲ್ಲವೆ? ಅನಾವಶ್ಯವಕವಾಗಿ ಅವನನ್ನೇಕೆ ತೆಗಳುವೆ? ಇದೇನು, ಈಚೆಗೆ ಬಹಳ ಜಗಳಗಂಟನಾಗಿರುವೆ? ನಿನಗೆ ಮೃದು ನುಡಿ ಬಾರವೆ? ಪ್ರತಿನಿತ್ಯವೂ ಪವಿತ್ರ ಗ್ರಂಥಗಳನ್ನು ಪಠಿಸುತ್ತೀ; ಆದರೂ ನಿನ್ನ ಮನಸ್ಸು ಶುಚಿಯಾಗಿಲ್ಲ. ನಿನ್ನ ಕ್ರೋಧಕ್ಕೆ ಯಾವುದೇ ಮಿತಿ ಇದ್ದಂತಿಲ್ಲ. ನೀನೆಂಥ ರಾಮದಾಸಿಯೋ! ಸಕಲ ವಸ್ತುಗಳಲ್ಲಿಯೂ ವಿರಕ್ತಿಯನ್ನು ತೋರಿಸಬೇಕು ನಿಜವಾದ ರಾಮದಾಸಿಗೆ ಮಮತೆ ಇರುವುದಿಲ್ಲ. ಕೇವಲ ಒಂದು ಪುಸ್ತಕಕ್ಕಾಗಿ ಶ್ಯಾಮನೊಡನೆ ನೀನು ಜಗಳಾಡುತ್ತಿ! ಹೋಗು, ನಿನ್ನ ಸ್ಥಾನದಲ್ಲಿ ಕುಳಿತುಕೋ. ಹಣದಿಂದ ಎಷ್ಟಾದರೂ ಪುಸ್ತಕ ಕೊಳ್ಳಬಹುದು; ಜನರನ್ನು ಕೊಳ್ಳಲು ಸಾಧ್ಯವೆ? ಸರಿಯಾಗಿ ಯೋಚಿಸಿ ನೋಡು. ವಿವೇಕಶಾಲಿಯಾಗು. ಆ ಪುಸ್ತಕದ ಬೆಲೆ ಏನು? ಶ್ಯಾಮನು ಇದ್ದಕೆ ಸಂಬಂದಪಟ್ಟವನಲ್ಲ. ನಾನೇ ಆ ಪುಸ್ತಕವನ್ನು ಅವನಿಗೆ ಕೊಟ್ಟೆನು. ನೀನು ಈಗಾಗಲೇ ವಿಷ್ಣು ಸಹಸ್ರನಾಮವನ್ನು ಬಾಯಿಪಾಠ ಮಾಡಿರುವಿ. ಶ್ಯಾಮನೂ ಸಹ ಅದನ್ನೋದಿ ಲಾಭ ಪಡೆಯಲಿ" ಎಂದು ಹೇಳಿದರು.

ಎಂಥ ಮಧುರವಾಣಿ ಬಾಬಾ ಅವರದು! ಇದರ ಪರಿಣಾಮ ಆಶ್ಚರ್ಯಕರವಾಯಿತು. ರಾಮದಾಸಿಯು ಕೂಡಲೇ ಶಾಂತನಾಗಿ ಶ್ಯಾಮ ಅವರನ್ನು ಕರೆದು ವಿಷ್ಣು ಸಹಸ್ರನಾಮಕ್ಕೆ ಬದಲಾಗಿ "ಪಂಚರತ್ನ" ಗೀತೆಯನ್ನು ಕೊಡಲು ಕೇಳಿದನು ಅದಕ್ಕೆ ಶ್ಯಾಮ ಒಂದೇ ಏಕೆ ಹತ್ತು ಪ್ರತಿಗಳನ್ನು ಕೊಡುವೆನು ಎಂದರು.

ಈ ರೀತಿ ಇಬ್ಬರಿಗೂ ರಾಜಿಯಾಯಿತು. ರಾಮದಾಸಿಯು ಪಂಚರತ್ನ ಗೀತೆಯನ್ನು ಏಕೆ ಕೇಳಿದನು? ಪ್ರತಿನಿತ್ಯವೂ ಬಾಬಾರವರ ಮುಂದೆ ಏಕೆ ಧಾರ್ಮಿಕ ಗ್ರಂಥಗಳನ್ನು ಓದುತ್ತಿದ್ದನು? ಶ್ಯಾಮ ಅವರೊಡನೆ ಜಗಳಾಡಿದ ಪ್ರಸಂಗವೇಕೆ? ಎಂಬ ಪ್ರಶ್ನೆ ಉದ್ಭವಿಸಬಹುದು. ಹೀಗೆ ನಡೆಯದಿದ್ದರೆ ವಿಷ್ಣುಸಹಸ್ರನಾಮದ ಮಹತ್ವ ವ್ಯಕ್ತವಾಗುತ್ತಿರಲಿಲ್ಲ. ಈ ರೀತಿ ಬಾಬಾರವರ ಉಪದೇಶದ ವೈಖರಿ ಅದ್ವಿತೀಯವಾಗಿದ್ದಿತು. ನಂತರ ಶ್ಯಾಮ ಆ ಪುಸ್ತಕ ಓದಿ ಚೆನ್ನಾಗಿ ಅರ್ಥ ಮಾಡಿಕೊಂಡು ಪುಣೆಯ ಎಂಜಿನಿಯರಿಂಗ್ ಕಾಲೇಜಿನ ಪ್ರೊ. ಜಿ.ಜಿ. ನಾರ್ಕೆ ಅವರಿಗೆ ವಿವರಿಸಲು ಸಮರ್ಥರಾದರು!

## ವಿಠ್ಠಲ ದರ್ಶನ

ಒಂದು ದಿನ ಕಾಕಾ ಸಾಹೇಬರು ಬೆಳಿಗ್ಗೆ ಸ್ನಾನವಾದ ಬಳಿಕ ಜಪ ಮಾಡುತ್ತಿದ್ದಾಗ ವಿಠ್ಠಲನ ದರ್ಶನವಾಯಿತು. ನಂತರ ಮಸೀದಿಗೆ ಹೋದಾಗ ಸಾಯಿಬಾಬಾ "ವಿಠ್ಠಲನ ದರ್ಶನವಾಯಿತೆ? ಅವನು ಬಹು ತುಂಟ, ಭದ್ರವಾಗಿ ಹಿಡಿದುಕೋ ಇಲ್ಲದಿದ್ದರೆ ತಪ್ಪಿಸಿಕೊಳ್ಳುವನು" ಎಂದರು. ಸರಿಯಾಗಿ ಮಧ್ಯಾಹ್ನದ ಹೊತ್ತಿಗೆ ಒಬ್ಬನು ಪಂಢರಪುರದ ವಿಠ್ಠಲನ ೨೦ –೨೫ ಫೋಟೋ ಮಾರಲು ಶಿರ್ಡಿಗೆ ಬಂದನು. ಕಾಕಾ ಕೂಡಲೇ ಆ ಫೋಟೋ ನೋಡಿ ಅವು ತಾವು ಧ್ಯಾನಾಸಕ್ತರಾಗಿದ್ದಾಗ ಕಂಡ ವಿಠ್ಠಲನ ಮೂರ್ತಿಯಂತೆಯೇ ಇದ್ದುದನ್ನು ಕಂಡು ಚಕಿತಾದರು. ಆಗ ಬಾಬಾ ಅವರ ಮಾತುಗಳು ನೆನಪಿಗೆ ಬಂದವು. ಆದುದರಿಂದ ಕೂಡಲೇ ಭಕ್ತಿಯಿಂದ ಒಂದು ಫೋಟೋ ಕೊಂಡು ಪೂಜಾಗೃಹದಲ್ಲಿ ಇಟ್ಟು ಪೂಜಿಸತೊಡಗಿದರು.

## ಗೀತಾ ರಹಸ್ಯ

ಬಾಬಾ ಬ್ರಹ್ಮವಿದ್ಯೆ ಅಭ್ಯಾಸ ಮಾಡುವವರನ್ನು ಯಾವಾಗಲೂ ಬಹಳ ಪ್ರೀತಿಸುತ್ತಿದ್ದರು. ಒಂದು ಸಾರೆ ಬಾಪೂಸಾಹೇಬ ಜೋಗ

ಅವರಿಗೆ ಲೋಕಮಾನ್ಯ ತಿಳಕ ಅವರಿಂದ ರಚಿತವಾದ "ಗೀತಾರಹಸ್ಯ" ಎಂಬ ಪುಸ್ತಕವು ಅಂಚೆ ಮೂಲಕ ಬಂದಿತು. ಅವರು ಹಾಗೆಯೆ ಅದನ್ನು ಕಂಕುಳದಲ್ಲಿ ಇಟ್ಟುಕೊಂಡು ಬಾಬಾರವರ ದರ್ಶನ ಪಡೆಯಲು ಮಸೀದಿಗೆ ಬಂದರು. ಆಗ ಪುಸ್ತಕವು ಜಾರಿ ಬಾಬಾರವರ ಹತ್ತಿರ ಬಿದ್ದಿತು. ಬಾಬಾ ಅವರು ಅದೇನೆಂದು ಕೇಳಲು ಬಾಪೂಸಾಹೇಬ ಕಟ್ಟನ್ನು ಬಿಚ್ಚಿ ಪುಸ್ತಕವನ್ನು ಬಾಬಾ ಅವರ ಕೈಗಿತ್ತರು. ಆಗ ಬಾಬಾ ತಮ್ಮ ಕಿಸೆಯಿಂದ ಒಂದು ರೂಪಾಯಿಯನ್ನು ತೆಗೆದು ಆ ಪುಸ್ತಕದ ಮೇಲಿಟ್ಟು ಅದನ್ನು ಅವರಿಗೆ ಕೊಟ್ಟು " ಇದನ್ನು ಪೂರ್ತಿಯಾಗಿ ಓದು; ನಿನಗೆ ಒಳ್ಳೆಯದಾಗುತ್ತದೆ" ಎಂದರು.

## ಖಾಪರ್ಡೆ ದಂತಿಗಳು

ಖಾಪರ್ಡೆಯವರ ವಿಚಾರವನ್ನು ಸ್ವಲ್ಪ ಹೇಳಿ ಈ ಅಧ್ಯಾಯವನ್ನು ಮುಗಿಸೋಣ. ಒಂದು ಸಾರೆ ದಾದಾಸಾಹೇಬ ಖಾಪರ್ಡೆಯವರು ಕುಟುಂಬ ಸಮೇತ ಶಿರ್ಡಿಗೆ ಬಂದು ಕೆಲವು ಕಾಲ ಅಲ್ಲಿ ವಾಸಿಸಿದ್ದರು. ದಾದಾಸಾಹೇಬರು ಸಾಮಾನ್ಯರಲ್ಲ. ಅವರೂ ದಿಲ್ಲಿ ರಾಜ್ಯ ಪರಿಷತ್ತಿನ ಸದಸ್ಯರೂ, ಅಮರಾವತಿಯ ಪ್ರಸಿದ್ಧ ವಕೀಲರೂ ಸುಪ್ರಸಿದ್ಧ ಭಾಷಣಕಾರರೂ ಸಹ ಆಗಿದ್ದರು. ಆದರೆ ಬಾಬಾರವರ ಎದುರಿಗೆ ಮಾತನಾಡಲು ಅವರಿಗೆ ಧೈರ್ಯವಿರಲಿಲ್ಲ. ಅನೇಕರು ಬಾಬಾ ಅವರೊಡನೆ ವಾದಿಸುತ್ತಿದ್ದರು. ಆದರೆ ಖಾಪರ್ಡೆ, ನೂಲಕರ, ಬೂಟಿ ಇವರು ಮಾತ್ರ ಮೌನದಿಂದ ಇರುತ್ತಿದ್ದರು. ಅವರು ಸೌಮ್ಯವಾಗಿಯೂ, ವಿನಯಸಂಪನ್ನರಾಗಿಯೂ ಇದ್ದರು. ಪಂಚದಶಿ (ವಿದ್ಯಾರಣ್ಯದಿಂದ ರಚಿತವಾದ ವೇದಾಂತದ ತಿರುಳು)ಯನ್ನು ಸ್ಪಷ್ಟವಾಗಿ ವಿವರಿಸಬಲ್ಲವರಾದ ದಾದಾಸಾಹೇಬ ಬಾಬಾರವರು ಎದರು ಒಂದು ಮಾತು ಸಹ ಆಡುತ್ತಿರಲಿಲ್ಲ. ಮಾನವನು ಎಷ್ಟೇ ವಿದ್ವಾಂಸನಾಗಿದ್ದರೂ ಬ್ರಹ್ಮಜ್ಞಾನ ಪಡೆದವನ ಸರಿಸಮಾನ ನಿಲ್ಲಲಾರನು. ಪಾಂಡಿತ್ಯವು ಬ್ರಹ್ಮಜ್ಞಾನದ ಎದುರು ಪ್ರಕಾಶಿಸಲಾರದು. ದಾದಾ ಸಾಹೇಬ ನಾಲ್ಕು

ತಿಂಗಳೂ ಶ್ರೀಮತಿ ಖಾಪರ್ಡೆ ಏಳು ತಿಂಗಳೂ ಶಿರ್ಡಿಯಲ್ಲಿ ತಂಗಿದ್ದರು. ಶ್ರೀಮತಿ ಖಾಪರ್ಡೆಯವರು ನಿಶ್ಚಲವಾದ ಭಕ್ತಿಯುತರಾಗಿದ್ದು ಬಾಬಾ ಅವರನ್ನು ಅತಿಶಯವಾಗಿ ಪ್ರೀತಿಸುತ್ತಿದ್ದರು. ಪ್ರತಿನಿತ್ಯ ತಾವೇ ಸ್ವತ: ಬಾಬಾ ಅವರಿಗೆ ನೈವೇದ್ಯ ತಂದು ಅರ್ಪಿಸಿ ಅವರು ಊಟ ಮಾಡಿದ ನಂತರವೇ ತಾವು ಊಟ ಮಾಡುತ್ತಿದ್ದರು. ಇವರ ನಿಶ್ಚಲವಾದ ಭಕ್ತಿಯನ್ನು ಕಂಡ ಬಾಬಾ ಇದನ್ನು ಇತರರಿಗೂ ತೋರಿಸಬೇಕೆಂದು ಮನಸ್ಸು ಮಾಡಿದರು. ಒಂದು ದಿನ ಶ್ರೀಮತಿಯವರು ಪೂರಿ, ಪಲ್ಯ, ಅನ್ನ ಸಾರು ಮುಂತಾದವುಗಳನ್ನು ಮಸೀದಿಗೆ ತಂದರು. ಬಾಬಾ ಬಹಳ ಹೊತ್ತು ಕಾಯುತ್ತಿದ್ದು ಇವರು ಬಂದಕೂಡಲೆ ಊಟ ಮಾಡಲು ಕುಳಿತು ಅವರು ತಂದ ಪದಾರ್ಥ ತಿನ್ನಲು ಆರಂಭಿಸಿದರು. ಆಗ ಶ್ಯಾಮ "ದೇವಾ, ಈ ಭೇದವೇಕೆ? ಇತರರು ತಂದ ನೈವೇದ್ಯವನ್ನು ಕಣ್ಣೆತ್ತಿಯೂ ಸಹ ನೋಡದೆ, ಶ್ರೀಮತಿ ಖಾಪರ್ಡೆಯವರ ಆಹಾರವನ್ನು ಮಾತ್ರ ಸ್ವೀಕರಿಸುತ್ತಿದ್ದೀರಿ. ಇದು ನ್ಯಾಯವೆ ಹೇಳಿ?" ಎಂದು ಕೇಳಿದರು. ಆಗ ಬಾಬಾ "ಇದು ನಿಜವಾಗಿಯೂ ವಿಶೇಷವಾದ ಅಡಿಗೆ. ಈ ಮಹಿಳೆಯು ಮೊದಲು ಒಬ್ಬ ವರ್ತಕನ ಹಸುವಾಗಿ ಬಹಳ ಕಾಲ ಹಾಲು ಕೊಡುತ್ತಿದ್ದಳು. ನಂತರ ತೋಟಗಾರನ ವಂಶದಲ್ಲಿಯೂ, ಕ್ಷತ್ರಿಯ ಕುಲದಲ್ಲಿಯೂ ಹುಟ್ಟಿ ವರ್ತಕನನ್ನು ಮದುವೆಯಾದಳು. ನಂತರ ಬ್ರಾಹ್ಮಣ ಕುಲದಲ್ಲಿ ಹುಟ್ಟಿದಳು. ಇವಳನ್ನು ಬಹಳ ಕಾಲದ ನಂತರ ನೋಡುತ್ತಿದ್ದೇನೆ. ಆದುದರಿಂದ ಅವಳ ಪ್ರೀತಿಯ ಎರಡು ತುತ್ತುಗಳನ್ನು ಸ್ವೀಕರಿಸುತ್ತಿದ್ದೇನೆ" ಎಂಬುದಾಗಿ ವಿವರಿಸಿದರು. ಹೀಗೆ ಹೇಳಿ ಊಟ ಮುಗಿಸಿ ತೃಪ್ತಿಯಿಂದ ಆಸನದಲ್ಲಿ ಬಂದು ಕುಳಿತರು. ಆ ಮೇಲೆ ಶ್ರೀಮತಿ ಖಾಪರ್ಡೆ ಬಾಬ ಅವರ ಪಾದಸಂಸವಾದನ ಮಾಡುತ್ತ ಕುಳಿತರು. ಇದನ್ನು ನೋಡಿ ಶ್ಯಾಮ "ಸೇವೆ ಚೆನ್ನಾಗಿ ನಡೆಯುತ್ತಿದೆ. ದೇವರೂ ಮತ್ತು ಭಕ್ತರೂ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಸೇವೆ ಮಾಡುತ್ತಿರುವ ಈ ಧೃಶ್ಯವೇ ರಮ್ಯ! ಅದ್ಭುತವಾದುದು!" ಎಂದರು. ಅವರ ನಿಸ್ಪೃಹ ಸೇವೆಯನ್ನು ಸ್ವೀಕರಿಸಿದ

ಬಾಬಾ ತಾಯಿಯವರನ್ನು ಕುರಿತು, ಮೃದುವಾಗಿ "ರಾಜಾರಾಮ! ರಾಜಾರಾಮ!" ಎಂದು ನುಡಿದರೆ ಸಾಕು, ನಿಮ್ಮ ಕಷ್ಟಗಳೆಲ್ಲವೂ ದೂರವಾಗುತ್ತವೆ ಎಂದು ಹೇಳಿದರು. ಧಾರ್ಮಿಕ ವಿಚಾರಗಳ ಅನುಭವ ಇಲ್ಲದವರಿಗೆ ಇದು ಸಾಮಾನ್ಯವಾಗಿ ಕಾಣಬಹುದು. ಆದರೆ ನಿಜವಾಗಿಯೂ ಹಾಗಲ್ಲ. ಇದೇ ಅಮೂಲ್ಯವಾದ ಶಕ್ತಿಪಾತ ಅಂದರೆ ಗುರುವು ಶಿಷ್ಯನಿಗೆ ತನ್ನ ಶಕ್ತಿಯನ್ನು ವರ್ಗಾಯಿಸಸುವುದು. ಬಾಬಾರವರ ವಾಕ್ಯಗಳು ಎಂತಹ ಪರಿಣಾಮಕಾರಿ! ಒಂದೇ ಕ್ಷಣದಲ್ಲಿ ಅವು ಖಾಪರ್ಡೆ ತಾಯಿಯ ಹೃದಯದಲ್ಲಿ ನೆಲೆಸಿದವು. ಈ ಕಥೆ ಗುರುವಿಗೂ ಶಿಷ್ಯನಿಗೂ ಇರಬೇಕಾದ ಸಂಬಂಧ ವಿವರಿಸುತ್ತದೆ.

**ಶ್ರೀ ಸಾಯಿ ಪ್ರಣಾಮ**

# ೨೮ನೇ ಅಧ್ಯಾಯ

## ಲಖಮೀಚಂದ – ಬರ್ಹಾಂಪೂರದ ಮಹಿಳೆ – ಮೇಘ

ಶ್ರೀ ಸಾಯಿಯವರು ಮೇರೆಯುಳ್ಳವರಲ್ಲ. ಪರಿಮಿತವಾದವರೆಲ್ಲ. ಇರುವೆ ಮುಂತಾದ ಕ್ರಿಮಿ ಕೀಟಗಳಿಂದ ಹಿಡಿದು ಬ್ರಹ್ಮನವರೆಗೂ ಇರುವ ಚರಾಚರಗಳಲ್ಲಿಯೂ ವ್ಯಾಪಿಸಿರುತ್ತಾರೆ. ಸಾಯಿಬಾಬಾ ಅವರು ವೇದಜ್ಞಾನದಲ್ಲಿಯೂ, ಬ್ರಹ್ಮಜ್ಞಾನದಲ್ಲಿಯೂ ಪರಿಣಿತರಾಗಿದ್ದರು. ಇವೆರಡರಲ್ಲಿಯೂ ಪರಿಣಿತರಾಗಿದ್ದುದರಿಂದ ಅವರನ್ನು ಸದ್ಗುರು ವೆಂದು ಕರೆಯುವುದು ಸೂಕ್ತವಾಗಿದೆ. ಯಾರು ತಮ್ಮ ಭಕ್ತರನ್ನು ಜಾಗೃತಗೊಳಿಸಿ ಬ್ರಹ್ಮಜ್ಞಾನವನ್ನು ನೀಡದೆ ಇರುತ್ತಾರೆಯೋ, ಅಂಥವರನ್ನು ಸದ್ಗುರುವೆಂದು ಕರೆಯಲು ಬರುವುದಿಲ್ಲ. ಜನ್ಮವನ್ನು ಕೊಡುವವನು ತಂದೆ, ಆದರೆ ಹಿಂದೆಯೇ ಸಾವೂ ಬರುತ್ತದೆ ಆದರೆ ಸದ್ಗುರುವು ಜನನ – ಮರಣಗಳಿಂದ ನಮ್ಮನ್ನು ದೂರಮಾಡುತ್ತಾನೆ. ಆದುದರಿಂದ ಅವನು ಎಲ್ಲರಿಗಿಂತಲೂ ದಯಾಮಯನು.

ಬಾಬಾ ಅವರು ಅನೇಕ ಸಲ "ಭಕ್ತನು ಎಲ್ಲಿಯೇ ಇರಲಿ, ಎಷ್ಟೇ ದೂರದಲ್ಲಿರಲಿ, ಸಾವಿರಾರು ಮೈಲಿಗಳಾಚೆ ಇರಲಿ, ಹುಡುಗ ಗುಬ್ಬಿಯ ಕಾಲಿಗೆ ದಾರವನ್ನು ಕಟ್ಟಿ ಎಳೆಯುವಂತೆ ಅವನನ್ನು ಶಿರ್ಡಿಗೆ ಬರಮಾಡಿಕೊಳ್ಳುತ್ತೇನೆ" ಎಂದು ಹೇಳಿದ್ದಾರೆ. ಇಂಥಹ ಮೂರು ಗುಬ್ಬಿಗಳನ್ನು ಈಗ ನೋಡೋಣ.

### ೧.ಲಾಲಾ ಲಖಮೀಚಂದ

ಇವರು ಮೊದಲು ಮುಂಬಯಿಯ ಶ್ರೀ ವೆಂಕಟೇಶ ಮುದ್ರಣಾಲಯದಲ್ಲಿ ಯೂ ನಂತರ ರೇಲ್ವೆ ಇಲಾಖೆಯಲ್ಲಿಯೂ, ಇದಾದ ಮೇಲೆ ರ್‍ಯಾಲಿ ಬಂಧುಗಳಲ್ಲಿಯೂ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದರು. ೧೯೧೦ರಲ್ಲಿ ಇವರಿಗೆ ಬಾಬಾ ಅವರ ಸಂಪರ್ಕ

ಉಂಟಾಯಿತು. ಇದಕ್ಕೆ ಒಂದೆರಡು ತಿಂಗಳುಗಳ ಹಿಂದೆ ಸಾಂತಾಕ್ರೂಜದಲ್ಲಿ ಇದ್ದಾಗ ಇವರು ಕನಸಿನಲ್ಲಿ ಗಡ್ಡ ಬಿಟ್ಟುಕೊಂಡಿದ್ದ ಒಬ್ಬ ಮುದಿ ಫಕೀರನನ್ನು ಕಂಡರು. ಕೆಲವು ದಿನಗಳ ನಂತರ ಅವರ ಸ್ನೇಹಿತರಾದ ಶ್ರೀ ದತ್ತಾತ್ರೇಯ ಬಿಜೂರ ಅವರ ಮನೆಗೆ ದಾಸಗಣೂ ಅವರ ಕೀರ್ತನೆ ಕೇಳಲು ಹೋದರು. ಅಲ್ಲಿ ಬಾಬಾ ಅವರ ಫೋಟೋ ಕಂಡರು. ಅವರು ಕನಸಿನಲ್ಲಿ ಕಂಡ ಸಾಧುವೂ ಅದೇ ರೀತಿ ಇದ್ದುದನ್ನು ಕಂಡು ಆಶ್ಚರ್ಯಚಕಿತರಾದರು. ಕಾರಣ ಕನಸಿನಲ್ಲಿ ಕಾಣಿಸಿದವರು ಸಾಯಿಬಾಬಾ ಅವರೇ ಎಂದು ನಿರ್ಧರಿಸಿಕೊಂಡರು. ಈ ದರ್ಶನ ಮತ್ತು ದಾಸಗಣೂ ಅವರ ಕೀರ್ತನೆ ಅವರನ್ನು ಶಿರ್ಡಿಗೆ ಹೋಗುವಂತೆ ಪ್ರೇರೇಪಿಸದವು. ಯಾರು ಸದ್ಗುರವನ್ನು ಹುಡುಕುತ್ತ ಆಧ್ಯಾತ್ಮಿಕ ವಿಚಾರದಲ್ಲಿ ಆಸಕ್ತಿಯನ್ನು ತೋರಿಸುತ್ತಾರೆಯೋ ಅಂಥವರಿಗೆ ದೇವರು ಸಹಾಯ ಮಾಡುತ್ತಾನೆ. ಅದೇ ದಿನ ರಾತ್ರಿ ಸುಮಾರು ೮ ಗಂಟೆಗೆ ಅವರ ಸ್ನೇಹಿತ ಶಂಕರರಾವ ಅವರು ಬಂದು ಶಿರ್ಡಿಗೆ ತಮ್ಮ ಜೊತೆಯಲ್ಲಿ ಬರಲು ಕೇಳಿದರು. ಆಗ ಅವರಿಗೆ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ. ಶಿರ್ಡಿಗೆ ಹೊರಡಲು ನಿರ್ಧರಿಸಿ ತಮ್ಮ ಸಹೋದರನಿಂದ ೧೫ ರೂಪಾಯಿಗಳ ಸಾಲ ತೆಗೆದುಕೊಂಡು ಹೊರಟರು. ರೈಲಿನಲ್ಲಿ ಅವರು ಮತ್ತು ಶಂಕರರಾವ ಅವರು ದೇವರ ನಾಮವನ್ನು ಹಾಡುತ್ತ ಶಿರ್ಡಿಯ ಹತ್ತಿರವಿದ್ದ ತಮ್ಮ ಹಳ್ಳಿಗೆ ಹಿಂತಿರುಗುತ್ತಿದ್ದ ನಾಲ್ಕು ಜನ ಮಹಮ್ಮದೀಯರಲ್ಲಿ ಬಾಬಾ ಅವರ ಬಗ್ಗೆ ಕೇಳಿದರು. ಅವರು ಸಾಯಿಬಾಬಾ ಒಬ್ಬ ದೊಡ್ಡ ಸತ್ಪುರುಷ ಎಂದು ಹೇಳಿದರು. ಬಾಬಾ ಅವರಿಗೆ ಅರ್ಪಿಸಲೋಸುಗ ಕೋಪರಗಾಂವದಲ್ಲಿ ಅವರಿಬ್ಬರು ಒಳ್ಳೆಯ ಹಣ್ಣುಗಳನ್ನು ಕೊಳ್ಳಬೇಕೆಂದಿದ್ದರು. ಆದರೆ ಅಲ್ಲಿನ ಪ್ರಕೃತಿಯ ರಮ್ಯವಾದ ಸೊಬಗನ್ನು ನೋಡಿ ಮೈಮರೆತು ಹಣ್ಣುಗಳನ್ನು ಕೊಳ್ಳಲೇ ಇಲ್ಲ. ಶಿರ್ಡಿಯನ್ನು ಸಮೀಪಿಸತ್ತಲೇ ಹಣ್ಣುಗಳ ನೆನಪಾಯಿತು. ಆಗ ಆ ಸಮಯಕ್ಕೆ ಸರಿಯಾಗಿ ಹಣ್ಣು ಮಾರುವ ಒಬ್ಬ ಹಣ್ಣು ಮುದುಕಿ

ಹಿಂದೆ ಓಡಿ ಬರುತ್ತಿದ್ದಳು. ಆಗ ಟಾಂಗ ನಿಲ್ಲಿಸಿ ಅವಳಿಂದ ಕೆಲವು ಹಣ್ಣು ಕೊಂಡರು. ನಂತರ ಆ ಮುದುಕಿ " ಉಳಿದುದೆಲ್ಲವನ್ನೂ ತೆಗೆದುಕೊಂಡು ನನ್ನ ಪರವಾಗಿ ಬಾಬಾ ಅವರಿಗೆ ಅರ್ಪಿಸಿ" ಎಂದು ಎಲ್ಲವನ್ನೂ ಕೊಟ್ಟಳು. ಅವರಿಗೆ ತಾವು ಹಣ್ಣುಗಳನ್ನು ಕೊಂಡುಕೊಳ್ಳಲು ನಿರ್ಧರಿಸಿದ್ದುದು, ಮರೆತಿದ್ದು ಮತ್ತು ಸಮಯಕ್ಕೆ ಸರಿಯಾಗಿ ಹಣ್ಣು ದೊರಕಿದುದು ಇದೆಲ್ಲವನ್ನು ಸ್ಮರಿಸಿ ಆಶ್ಚರ್ಯವಾಯಿತು. ಕನಸಿನಲ್ಲಿ ಕಂಡ ಸಾಧುವಿಗೂ, ಈ ಮಹಿಳೆಗೂ ಸಂಬಂಧವಿರಬೇಕೆಂದು ಯೋಚಿಸಿದರು. ನಂತರ ಶಿರ್ಡಿಗೆ ಬಂದು ಮಸೀದಿಯ ಮೇಲೆ ಹಾರಾಡುತ್ತಿದ್ದ ಧ್ವಜವನ್ನು ನೋಡಿ ನಮಸ್ಕರಿಸಿದರು. ಪೂಜಾ ಸಾಮಗ್ರಿಗಳೊಡನೆ ಮಸೀದಿಯೊಳಗೆ ಪ್ರವೇಶಿಸಿ ಬಾಬಾ ಅವರನ್ನು ಪೂಜಿಸಿದರು. ಆಗ ಅವರ ಮನಸ್ಸಿಗೆ ನೆಮ್ಮದಿಯಾಯಿತು. ಸುವಾಸನೆಯುಳ್ಳ ಪುಷ್ಪಕ್ಕೆ ಜೇನು ಅಂಟಿಕೊಂಡಂತೆ ಬಾಬಾ ಅವರ ಪಾದಗಳಲ್ಲಿ ಅವರು ಐಕ್ಯರಾದರು. ಆಗ ಬಾಬಾ ಅವರು "ಠಕ್ಕನೇ, ನನ್ನ ಭಜನೆ ಮಾಡುತ್ತಿ. ಆದರೆ ಬೇರೆಯವರೊಂದಿಗೆ ಏಕೆ ನನ್ನ ವಿಷಯದ ಪ್ರಸ್ತಾಪ? ಪ್ರತಿಯೊಂದನ್ನು ನಾವೇ ಸ್ವಂತ ನಮ್ಮ ಕಣ್ಣುಗಳಿಂದ ನೋಡಬೇಕು. ಇತರರನ್ನು ಕೇಳುವ ಅಗತ್ಯವೇನು? ಮಾರವಾಡಿಯಿಂದ ಸಾಲ ತೆಗೆದುಕೊಂಡು ನನ್ನ ದರ್ಶನ ಪಡೆಯುವ ಅವಶ್ಯಕತೆ ಏನಿತ್ತು? ಈಗ ನಿನ್ನ ಆಶೆ ತೃಪ್ತಿಯಾಯಿತೆ?" ಎಂದು ಕೇಳಿದರು. ಇದನ್ನು ಕೇಳಿದ ಲಖಮೀಚಂದರಿಗೆ ಬಾಬಾ ಅವರ ಸರ್ವಜ್ಞತ್ವವು ವೇದ್ಯವಾಯಿತು. ತಮ್ಮ ಮನೆಯಿಂದ ಶಿರ್ಡಿಯವರೆಗೂ ನಡೆದ ವಿಷಯ ಬಾಬಾ ಅವರಿಗೆ ಹೇಗೆ ಗೊತ್ತಾಯಿತು ಎಂಬುದನ್ನು ತಿಳಿಯಲು ಅವರು ಶಕ್ತರಾಗಲಿಲ್ಲ. ತಮ್ಮ ದರ್ಶನ ಪಡೆಯುವುದಕ್ಕೆ ಅಥವಾ ಯಾತ್ರೆ ಮಾಡುವುದಕ್ಕೆ ಯಾರೂ ಸಾಲ ಮಾಡಬಾರದೆಂಬುದೇ ಬಾಬಾ ಅವರ ಇಚ್ಛೆಯಾಗಿದ್ದಿತು.

### ಶಿರಾ

ಲಖಮಿಚಂದರು ಮಧ್ಯಾಹ್ನ ಊಟಕ್ಕೆ ಕುಳಿತಾಗ ಭಕ್ತರೊಬ್ಬರಿಂದ

ಶಿರಾ ಪ್ರಸಾದ ದೊರಕಿತು ಅದನ್ನು ಸಂತೋಷದಿಂದ ಸ್ವೀಕರಿಸಿದರು. ಮರುದಿನವೂ ಅದು ಮತ್ತೆ ಸಿಗುವುದೇನೋ ಎಂದು ಕಾಯ್ದು ವಿಫಲರಾದರು. ಅದನ್ನು ತಿನ್ನಬೇಕೆಂಬ ಆಶೆ ಹೆಚ್ಚಾಯಿತು. ಮಾರನೇ ದಿನ ಮಧ್ಯಾಹ್ನ ಆರತಿ ಸಮಯ ಬಾಪೂಸಾಹೇಬರು ಸಾಯಿಬಾಬಾ ಅವರಿಗೆ "ಈ ದಿನ ನೈವೇದ್ಯಕ್ಕೆ ಏನು ತರಲಿ" ಎಂದು ಕೇಳಲು ಬಾಬಾ "ಶಿರಾ ತೆಗೆದುಕೊಂಡು ಬಾ" ಎಂದರು. ಆಗ ಜೋಗರು ಪಾತ್ರೆ ತುಂಬ ಶಿರಾ ತಂದರು. ಲಖಮೀಚಂದರಿಗೆ ಬಹಳ ಹಸಿವಾಗಿದ್ದಿತು. ಅಲ್ಲದೇ ಬೆನ್ನು ನೋವಿನಿಂದ ಸಂಕಟ ಪಡುತ್ತಿದ್ದರು. ಆಗ ಸಾಯಿಬಾಬಾ ಅವರನ್ನು ಕುರಿತು "ಈ ಶಿರಾ ತೆಗೆದುಕೊ; ಬೆನ್ನಿಗೆ ಔಷಧ ಬೇಕಾಗಿದೆ" ಎಂದರು. ಆಗಲೂ ಸಹ ಬಾಬಾ ಅವರು ತಮ್ಮ ಮನೋ-ಇಂಗಿತ ಅರಿತದ್ದನ್ನು ಕಂಡು ಆಶ್ಚರ್ಯ ಚಕಿತರಾದರು.

## ಬಾಬಾ ಅವರಿಗೆ ದೃಷ್ಟಿ

ಈ ಸಂದರ್ಭದಲ್ಲಿ ಲಖಮೀಚಂದ ಒಂದು ದಿನ ಚಾವಡಿ ಮೆರವಣಿಗೆಯನ್ನು ನೋಡಿದರು. ಆಗ ಬಾಬಾ ಅವರು ಕೆಮ್ಮಿನಿಂದ ನರಳುತ್ತಿದ್ದರು. ಬಾಬಾರವರಿಗೆ ದೃಷ್ಟಿ ಆಗಿದೆಯೆಂದು ಅವರು ಭಾವಿಸಿದರು. ಬಾಬಾ ಅವರು ಮಸೀದಿಯಲ್ಲಿ ಶ್ಯಾಮ ಅವರನ್ನು ಕುರಿತು "ನಿನ್ನೆ ನಾನು ಕೆಮ್ಮಿನಿಂದ ನರಳುತ್ತಿದ್ದೆ; ಯಾರದೋ ಕೆಟ್ಟ ದೃಷ್ಟಿ ಇರಬೇಕಲ್ಲವೇ?" ಎಂದರು.

ಇದನ್ನು ಕಂಡ ಲಖಮೀಚಂದರು ಬಾಬಾ ಅವರ ಪಾದಗಳಿಗೆ ಎರಗಿ "ನಿಮ್ಮ ದರ್ಶನದಿಂದ ನಾನು ಧನ್ಯನಾದೆ. ನಾನೇ ಭಾಗ್ಯವಂತ. ಯಾವಾಗಲೂ ದಯಾಮಯರಾಗಿ ನನ್ನನ್ನು ಕಾಪಾಡಿ. ನಿಮ್ಮ ಹೊರತಾಗಿ ನನಗೆ ಬೇರೆ ದೇವರಿಲ್ಲ. ನಮ್ಮ ಮನಸ್ಸು ಯಾವಾಗಲೂ ನಿಮ್ಮ ಭಜನೆಯಲ್ಲಿಯೇ ನಿರತವಾಗಿರಲಿ. ಯಾವಾಗಲೂ ನಿಮ್ಮ

ದಯೆಯಿಂದ ನಮ್ಮ ಕಷ್ಟಗಳೆಲ್ಲವೂ ದೂರವಾಗಿರಲಿ. ಯಾವಾಗಲೂ ನಿಮ್ಮ ನಾಮಸ್ಮರಣೆ ಮಾಡುವ ಯೋಗ ದೊರಕಲಿ" ಎಂದರು. ಆಮೇಲೆ ಬಾಬಾ ಅವರ ಆಶೀರ್ವಾದ ಮತ್ತು ಉಧಿಯನ್ನು ಪಡೆದು ದಾರಿಯಲ್ಲಿ ಬಾಬಾ ಅವರ ಕೀರ್ತಿಯನ್ನು ಹಾಡುತ್ತ ಮನೆ ಸೇರಿದರು. ಈ ರೀತಿ ಅವರು ಬಾಬಾರವರ ಪರಮ ಭಕ್ತರಾಗಿ ಶಿರ್ಡಿಗೆ ಹೋಗುವವರ ಜೊತೆಯಲ್ಲಿ ಹೂವು, ಕರ್ಪೂರ ಇವುಗಳನ್ನು ತಪ್ಪದೆ ಕಳುಹಿಸಹತ್ತಿದರು.

## ಬರ್ಹಾಂಪೂರದ ಮಹಿಳೆ

ಬರ್ಹಾಂಪೂರದ ಮಹಿಳೆಯೊಬ್ಬಳು ಬಾಬಾ ಅವರು ತಮ್ಮ ಬಾಗಿಲಿಗೆ ಭಿಕ್ಷೆಗೆ ಬಂದಿರುವುದನ್ನು ಕನಸಿನಲ್ಲಿ ಕಂಡಳು. ಎದ್ದು ನೋಡಲು ಬಾಗಿಲ ಬಳಿ ಯಾರು ಇರಲಿಲ್ಲ. ಅವಳು ಆನಂದಭರಿತಳಾಗಿ ಮನೆಯವರೆಲ್ಲರಿಗೂ ಕನಸಿನಲ್ಲಿ ಹೇಳಿದಳು. ಅವಳ ಪತಿಯು ಅಂಚೆ ಇಲಾಖೆಯಲ್ಲಿ ಕೆಲಸದಲ್ಲಿದ್ದನು. ನಂತರ ಅವನಿಗೆ ಅಂಕೋಲಕ್ಕೆ ವರ್ಗವಾಯಿತು. ಆಗ ದಂಪತಿಗಳೀರ್ವರೂ ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನವನ್ನು ಪಡೆಯಲು ನಿಶ್ಚಯ ಮಾಡಿದರು. ಹಾಗೆಯೇ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಗೋಮತಿ ತೀರ್ಥ ಸ್ನಾನ ಮಾಡಿ, ಶಿರ್ಡಿಗೆ ಬಂದು ಎರಡು ತಿಂಗಳು ತಂಗಿದರು. ಪ್ರತಿದಿನ ಮಸೀದಿಗೆ ಹೋಗಿ ಇಬ್ಬರೂ ಬಾಬಾ ಅವರ ಪೂಜೆ ಮಾಡಿ ಆನಂದದಿಂದ ಕಾಲ ಕಳೆಯುತ್ತಿದ್ದರು. ಬಾಬಾ ಅವರಿಗೆ ಕಿಚಡಿಯನ್ನು ಅರ್ಪಿಸಲೋಸುಗವೇ ಅವರು ಶಿರ್ಡಿಗೆ ಬಂದಿದ್ದರು. ಆದರೆ ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಆ ಮಹಿಳೆಗೆ ಇದನ್ನು ತಡೆಯಲಾಗಲಿಲ್ಲ. ಕೊನೆಗೆ ಹದಿನೈದನೆ ದಿನ ಕಿಚಡಿ ತಯಾರಿಸಿ ಮಧ್ಯಾಹ್ನ ಮಸೀದಿಗೆ ತೆಗೆದುಕೊಂಡು ಬಂದಳು. ಅಷ್ಟು ಹೊತ್ತಿಗೆ ಬಾಬಾ ಅವರು ಇತರರೊಡನೆ ಆಗಲೇ ಊಟಕ್ಕೆ ಕುಳಿತಿದ್ದರು. ತೆರೆ ಹಾಕಿದಾಗ ಯಾರಿಗೂ ಒಳಗೆ ಹೋಗಲು ಅನುಮತಿ ಇರಲಿಲ್ಲ.

ಆದರೆ ಅವಳು ಧೈರ್ಯ ಮಾಡಿ ಒಳಗೆ ನುಗ್ಗಿದಳು. ಬಾಬಾ ಅವರು ಕೂಡಲೇ ಅವಳಿಂದ ಕಿಚಡಿ ತೆಗೆದುಕೊಂಡು ಸಂತೋಷದಿಂದ ಊಟ ಮಾಡತೊಡಗಿದರು. ಇದನ್ನು ನೋಡಿ ಅಲ್ಲಿದ್ದವರೆಲ್ಲರೂ ಆಶ್ಚರ್ಯಗೊಂಡರು. ಇದರಿಂದ ತಮ್ಮ ಭಕ್ತರಲ್ಲಿ ಬಾಬಾ ಅವರಿಗೆ ಎಂಥ ಪ್ರೀತಿ ಮತ್ತು ವಾತ್ಸಲ್ಯ ಗಳಿದ್ದವೆಂಬುದು ವ್ಯಕ್ತವಾಗುತ್ತದೆ.

## ಮೇಘಾ

ಈಗ ಮೂರನೇ ಪಕ್ಷಿಯನ್ನು ನೋಡೋಣ. ವಿರಾಮಗಾಂವದ ಮೇಘಾ ಎಂಬುವರು ರಾವಬಹಾದ್ದೂರ ಸಾಠೆಯವರಲ್ಲಿ ಕೆಲಸಕ್ಕಿದ್ದರು. ಅವರು ಶಿವಭಕ್ತರಾಗಿದ್ದು ಯಾವಾಗಲೂ "ಓಂ ನಮಃ ಶಿವಾಯ" ಎಂಬ ಪಂಚಾಕ್ಷರಿಯನ್ನು ಜಪಿಸುತ್ತಿದ್ದರು. ಅವರಿಗೆ ಗಾಯತ್ರಿ ಜಪವಾಗಲಿ, ಸಂಧ್ಯಾವಂದನೆಯಾಗಲಿ ಬರುತ್ತಿರಲಿಲ್ಲ. ಆದರೂ ಸಾಠೆಯವರು ಶ್ರದ್ಧೆ ವಹಿಸಿ, ಸಂಧ್ಯಾವಂದನೆ, ಗಾಯತ್ರಿ ಜಪ ಇವುಗಳನ್ನು ಅವರಿಗೆ ಕಲಿಸಿದ್ದರು. ಸಾಠೆಯವರು, ಶಿವನೇ ಸಾಕ್ಷಾತ್ತಾಗಿ ಬಾಬಾ ಅವರ ರೂಪದಲ್ಲಿ ಅವತರಿಸಿರುವನೆಂದು ಹೇಳಿ ಅವರನ್ನು ಶಿರ್ಡಿಗೆ ಹೊರಡಿಸಿದರು. ಬಡೋಚ ರೇಲ್ವೆ ನಿಲ್ದಾಣದಲ್ಲಿ ಸಾಯಿಬಾಬಾ ಮಹಮ್ಮದೀಯರೆಂದು ಅವರಿಗೆ ತಿಳಿದಾಗ ತಮ್ಮ ಧರ್ಮಕ್ಕೆ ಭಂಗ ಬರುವುದೆಂದು ಮೇಘಾ ಅಲ್ಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರು. ಆದರೆ ಸಾಠೆಯವರು ಅವರನ್ನು ಹೋಗಲು ಒತ್ತಾಯಪಡಿಸಿ ತಮ್ಮ ಮಾವ ಕೇಳಕರಿಗೆ ಪರಿಚಯ ಪತ್ರಕೊಟ್ಟು ಕಳುಹಿಸಿ ಮೇಘಾ ಅವರಿಗೆ ಬಾಬಾ ಅವರ ದರ್ಶನ ಮಾಡಿಸಬೇಕೆಂದು ತಿಳಿಸಿದರು. ಮೇಘಾ ಅವರು ಶಿರ್ಡಿಯನ್ನು ತಲುಪಿ ಮಸೀದಿಗೆ ಹೋದಾಗ ಬಾಬಾ ಅವರು ಉಗ್ರ ಸ್ವರೂಪ ಧಾರಣ ಮಾಡಿ, ಕೈಯಲ್ಲಿ ಕಲ್ಲು ತೆಗೆದುಕೊಂಡು " ಈ ನೀಚನನ್ನು ಓಡಿಸಿ" ಎಂದು ಹೇಳಿದರು. ಮತ್ತು ಮೇಘನನ್ನು ಕುರಿತು "ನೀನು ಬ್ರಾಹ್ಮಣೋತ್ತಮ! ನಾನು ಕೀಳು ಮಹಮ್ಮದೀಯ! ನೀನು ಇಲ್ಲಿಗೆ ಬಂದರೆ ನಿನ್ನ ಜಾತಿ ಕೆಟ್ಟು

ಹೋಗುತ್ತದೆ; ಆದುದರಿಂದ ಹೊರಡು" ಎಂದರು ಈ ಮಾತನ್ನು ಕೇಳಿದ ಮೇಘಾ ಆಶ್ಚರ್ಯದಿಂದ ನಡುಗಲಾರಂಭಿಸಿದರು. ತಮ್ಮ ಮನಸ್ಸಿನಲ್ಲಿದ್ದದು ಬಾಬಾ ಅವರಿಗೆ ಹೇಗೆ ಗೊತ್ತಾಯಿತೆಂದು ವಿಚಾರ ಮಾಡಿ ಆಶ್ಚರ್ಯಚಕಿತರಾದರು. ಅಲ್ಲಿಯೇ ನೆಲಸಿ ತಮ್ಮದೇ ಆದ ರೀತಿಯಲ್ಲಿ ಬಾಬಾ ಅವರ ಸೇವೆ ಮಾಡಹತ್ತಿದರು. ಆದರೂ ಅವರಿಗೆ ಶಾಂತಿ ದೊರೆಯಲಿಲ್ಲ. ನಂತರ ಊರಿಗೆ ಹಿಂತಿರುಗಿ ತ್ರಿಂಬಕದಲ್ಲಿ ಎರಡುವರೆ ವರ್ಷ ಕಳೆದು ಶಿರ್ಡಿಗೆ ಮರಳಿ ಬಂದರು. ಆ ಬಾರಿ ದಾದಾ ಕೇಳಕರ ಅವರ ಸಹಾಯದಿಂದ ಮಸೀದಿಗೆ ಪ್ರವೇಶ ಕೊರಕಿತು. ಬಾಬಾ ಅವರು ಮೇಘಾ ಅವರ ಮನಸ್ಸನ್ನು ಮಾರ್ಪಡಿಸಿ ಅದ್ಭುತ ಪರಿಣಾಮ ಉಂಟು ಮಾಡಿದರು. ಅಂದಿನಿಂದ ಮೇಘಾ ಬಾಬಾ ಅವರನ್ನು ಶಿವನೆಂದೇ ಪೂಜಿಸತೊಡಗಿದರು. ಶಿವನಿಗೆ ಪ್ರಿಯವಾದ ಬಿಲ್ವ ಪತ್ರಿಗಳನ್ನು ಪ್ರತಿದಿನ ೫ -೬ ಮೈಲಿಗಳಾಚೆಗೆ ಹೋಗಿ ತರುತ್ತಿದ್ದರು. ಶಿರ್ಡಿಯ ಸಮಸ್ತ ದೇವತಾರ್ಚನೆಯನ್ನು ಮಾಡಿ ಮಸೀದಿಗೆ ಬಂದು ಬಾಬಾ ಅವರಿಗೆ ಪೂಜಿಸಿ ನಂತರ ಅವರ ಪಾದ ತೀರ್ಥವನ್ನು ಸೇವಿಸುವುದು ಅವರ ದೈನಂದಿನವಾಗಿತ್ತು. ಒಂದು ಸಾರೆ ಖಂಡೋಬ ದೇವಸ್ಥಾನದ ಬಾಗಿಲು ಹಾಕಿದ್ದರಿಂದ ನೇರವಾಗಿ ಬಾಬಾ ಅವರಿಗೆ ಪೂಜೆ ಸಲ್ಲಿಸಲು ಬಂದರು. ಆಗ ಬಾಬಾ ಅವರು ತಮ್ಮ ಪೂಜೆ ನಿರಾಕರಿಸಿ "ಈಗ ಬಾಗಿಲು ತೆರೆದಿದೆ ಮೊದಲು ಅಲ್ಲಿ ಪೂಜೆ ಮಾಡಿ ಬಾ" ಎಂದು ತಿರುಗಿ ಕಳಿಸಿದರು.

## ಗಂಗಾಸ್ನಾನ

ಅಂದು ಮಕರ ಸಂಕ್ರಾಂತಿ ಮೇಘ ಅವರಿಗೆ ಬಾಬಾ ಅವರ ಮೈಗೆ ಗಂಧವನ್ನು ಲೇಪಿಸಿ ಗಂಗಾಜಲದಲ್ಲಿ ಸ್ನಾನ ಮಾಡಿಸಬೇಕೆಂದು ಆಸೆಯಾಯಿತು. ಬಾಬಾ ಅವರು ಮೊದಲು ಇದಕ್ಕೊಪ್ಪಲಿಲ್ಲ. ಆದರೆ ಬಹಳ ಒತ್ತಾಯ ಮಾಡಿದ್ದರಿಂದ ಒಪ್ಪಿದರು. ಗೋದಾವರಿ ನದಿಯಿಂದ ನೀರು ತರಲು ಶಿರ್ಡಿಯಿಂದ ೮ ಮೈಲು ಮೇಘಾ

ಹೋಗಬೇಕಾಗುತ್ತಿತ್ತು. ಮೇಘಾ ನೀರು ತಂದು ಬಾಬಾ ಅವರಿಗೆ ಸ್ನಾನಕ್ಕೆ ಸಿದ್ಧರಾಗಲು ಹೇಳಿದರು. ಆಗ ತಾವು ಫಕೀರರೆಂದೂ ಗಂಗಾಸ್ನಾನದಿಂದ ಏನೂ ಪ್ರಯೋಜನವಿಲ್ಲ ಎಂದೂ ಹೇಳಿದರು. ಆದರೂ ಮೇಘಾ ಒಪ್ಪಲಿಲ್ಲ. ಕಡೆಗೆ ಬಾಬಾ ಅನುಮತಿಸಿ ಒಂದು ಹಲಗೆಯ ಮೇಲೆ ಕುಳಿತು ತಮ್ಮ ತಲೆಯನ್ನು ಮುಂದಕ್ಕೆ ಚಾಚಿ "ಮೇಘಾ ನನ್ನದೊಂದು ಬಿನ್ನಹ: ಶಿರಸ್ಸೇ ಶರೀರದ ಮುಖ್ಯ ಅಂಗ; ಆದುದರಿಂದ ಶಿರದ ಮೇಲೆ ಮಾತ್ರ ನೀರನ್ನು ಸುರಿದರೆ, ಪೂರ್ತಿ ಸ್ನಾನ ಮಾಡಿದಂತೆಯೇ" ಎಂದರು. "ಹಾಗೆಯೇ ಆಗಲಿ" ಎಂದು ಮೇಘಾ ಬಾಬಾ ಅವರ ತಲೆಯ ಮೇಲೆ ನೀರನ್ನು ಸುರಿಯುತ್ತ ಆನಂದ ಪರವಶರಾಗಿ ಮೈಮರೆತು "ಹರ ಹರ ಗಂಗೆ" ಎಂದು ಕೊಡವನ್ನು ಮೇಲಕ್ಕೆತ್ತಿ ಮೈಮೇಲೆಲ್ಲ ನೀರು ಸುರಿದರು. ನಂತರ ಕೊಡವನ್ನು ಕೆಳಗಿಟ್ಟು ನೋಡಲಾಗಿ ಬಾಬಾರವರ ಶಿರವು ಮಾತ್ರ ಒದ್ದೆಯಾಗಿತ್ತೆ ವಿನ: ಅವರ ಮೈ ಸ್ವಲ್ಪವೂ ನೆನೆದಿರಲಿಲ್ಲ!

## ತ್ರಿಶೂಲ ಮತ್ತು ಪಿಂಡಿ

ಮೇಘಾ ಬಾಬಾ ಅವರನ್ನು ಮಸೀದಿಯಲ್ಲಿ ಪ್ರತ್ಯಕ್ಷವಾಗಿಯೂ ವಾಡಾದಲ್ಲಿ ಫೋಟೋ ರೂಪದಲ್ಲಿಯೂ ಪೂಜಿಸುತ್ತಿದ್ದರು. ಈ ರೀತಿ ಒಂದು ವರ್ಷ ಕಳೆದರು. ಅವರ ಭಕ್ತಿಯನ್ನು ಮೆಚ್ಚಿದ ಬಾಬಾರವರು ಅವರ ನಂಬಿಕೆಯನ್ನು ದೃಢ ಪಡಿಸಲೋಸಗ ಅವರಿಗೆ ದರ್ಶನ ನೀಡಿದರು. ಬೆಳಗು ಮುಂಜಾನೆ ಇನ್ನೂ ಮೇಘಾ ಮಲಗಿರುವಾಗಲೇ ಬಾಬಾ ಅವರ ದರ್ಶನವಾಯಿತು. ಬಾಬಾ ಅವರು ಅಕ್ಷತೆಯನ್ನೆರಚಿ "ಮೇಘ, ತ್ರಿಶೂಲವನ್ನು ಬರೆ" ಎಂದು ಹೇಳಿ ಮಾಯವಾದರು. ಮೇಘಾ ಎಚ್ಚತ್ತು ನೋಡಲಾಗಿ, ಬಾಬಾ ಕಾಣಲೇ ಇಲ್ಲ. ಆದರೆ ಅಕ್ಷತೆ ಬಿದ್ದಿರುವುದನ್ನು ನೋಡಿದರು. ನಂತರ ಮಸೀದಿಗೆ ಹೋಗಿ ಬಾಬಾ ಅವರಿಗೆ ಈ ವಿಷಯ ತಿಳಿಸಿ ತ್ರಿಶೂಲವನ್ನು ಬರೆಯಲು ಅನುಮತಿ ಬೇಡಿದರು. ಆಗ ಬಾಬಾ ಅವರು " ನೀನು ಅನುಭವಿಸಿದುದು

ಕನಸು ಅಲ್ಲ – ನನ್ನ ನಿಜವಾದ ಆಜ್ಞೆ, ನನ್ನ ವಚನಗಳು ಯಾವಾಗಲೂ ಅರ್ಥಗರ್ಭಿತವಾಗಿರುತ್ತವೆ, ಪೊಳ್ಳಾಗಿರುವುದಿಲ್ಲ" ಎಂದರು. ಅದಕ್ಕೆ ಮೇಘಾ "ನೀವು ನನ್ನನ್ನು ಎಚ್ಚರಿಸಲು ಬಂದಿದ್ದೀರಿ ಎಂದು ನಾನು ಭಾವಿಸಿದೆ" ಎಂದರು. ಆಗ ಬಾಬಾ ಅವರು "ನನ್ನ ಪ್ರವೇಶಕ್ಕೆ ಬಾಗಿಲುಗಳು ತಡೆಯಲ್ಲ. ಯಾರು ನನ್ನನ್ನೇ ನಂಬಿ, ನನ್ನನ್ನೇ ಮನನ ಮಾಡುತ್ತಿರುತ್ತಾರೆಯೋ, ಅಂಥವರ ಯೋಗ-ಕ್ಷೇಮವನ್ನು ನಾನು ಸದಾ ನೋಡುತ್ತೇನೆ" ಎಂದರು.

ಮೇಘಾ ವಾಡಾಕ್ಕೆ ಹೋಗಿ, ಬಾಬಾ ಅವರ ಫೋಟೋದ ಮುಂದೆ ತ್ರಿಶೂಲವನ್ನು ಬರೆದರು. ಮರುದಿನ ಪುಣೆಯ ರಾಮದಾಸಿ ಎಂಬ ಭಕ್ತನು ಬಂದು ಬಾಬಾ ಅವರಿಗೆ ವಂದಿಸಿ, ಶಿವನ ಪ್ರತಿಮೆಯನ್ನು ಅವರಿಗೆ ಕೊಟ್ಟನು. ಅದೇ ಸಮಯಕ್ಕೆ ಸರಿಯಾಗಿ ಮೇಘಾ ಮಸೀದಿಗೆ ಬಂದರು. ಆಗ ಬಾಬಾ ಮೇಘಾ ಅವರಿಗೆ "ನೋಡು, ಶಂಕರನು ಬಂದಿದ್ದಾನೆ, ಅವನನ್ನು ಕಾಪಾಡು," ಎಂದರು ತ್ರಿಶೂಲವನ್ನು ಹಿಂಬಾಲಿಸಿ ಶಿವಮೂರ್ತಿ ಬಂದಿದ್ದನ್ನು ಕಂಡ ಮೇಘಾ ಆಶ್ಚರ್ಯಚಕಿತರಾದರು. ಅದೇ ಸಮಯದಲ್ಲಿ ದೀಕ್ಷಿತವಾಡಾದಲ್ಲಿ ಬಾಬಾ ಅವರ ಸ್ಮರಣೆ ಮಾಡುತ್ತಿರುವಾಗ ಶಿವಮೂರ್ತಿ ಪಿಂಡಿ ತ್ರಿಶೂಲದ ಹತ್ತಿರ ಗೋಚರವಾದಂತಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ಬಾಬಾ ಅವರಿಂದ ಅನುಗ್ರಹ ಪಡೆದು ಮೇಘಾ ಶಿವಮೂರ್ತಿಯನ್ನು ತಂದರು. ಆ ಮೂರ್ತಿಯು ಈ ಪೂರ್ವದಲ್ಲಿ ತಮಗೆ ಗೋಚರವಾದ ಶಿವಮೂರ್ತಿಯಂತೆಯೇ ಇತ್ತು. ಆದುದರಿಂದ ಅವರು ಸಂತೋಷಭರಿತರಾದರು. ಇದಾದ ಸ್ವಲ್ಪ ದಿನಗಳ ನಂತರ ಬಾಬಾ ಅವರು ಮೇಘಾ ಪೂಜಿಸುತ್ತಿದ್ದ ಫೋಟೋದ ಮುಂದೆ ಶಿವಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಮೇಘಾ ಅವರಿಗೆ ಶಿವಪೂಜೆ ಪ್ರಿಯವಾಗಿದ್ದಿತು. ತ್ರಿಶೂಲವನ್ನು ಬರೆಸುವುದರಿಂದಲೂ ಶಿವಮೂರ್ತಿಯ ಪ್ರತಿಷ್ಠಾಪನೆಯಿಂದಲೂ ಬಾಬಾ ಮೇಘಾ ಅವರ ಭಕ್ತಿಯನ್ನು ವೃದ್ಧಿಪಡಿಸಿದರು.

ಈ ರೀತಿ ಅನವರತವಾಗಿ ಬಾಬಾ ಅವರ ಪೂಜೆಯನ್ನು ಮಾಡುತ್ತ ಮೇಘಾ ೧೯೧೨ರಲ್ಲಿ ಸ್ವರ್ಗಸ್ಥರಾದರು. ಆಗ ಬಬಾ ಅವರ ದೇಹದ ಮೇಲೆ ಕೈ ಆಡಿಸಿ "ಇವನು ನನ್ನ ನಿಜವಾದ ಭಕ್ತನಾಗಿದ್ದ!" ಎಂದರು. ಬಾಬಾ ತಮ್ಮ ಸ್ವಂತ ಖರ್ಚಿನಲ್ಲಿ ಆಗ ಬ್ರಾಹ್ಮಣರಿಗೆ ಸಂತರ್ಪಣೆಯಾಗಬೇಕೆಂದು ತಿಳಿಸಿದರು. ಆ ಆಜ್ಞೆಯನ್ನು ಕಾಕಾ ದೀಕ್ಷಿತ ಅವರು ನೆರವೇರಿಸಿದರು.

**ಶ್ರೀ ಸಾಯಿ ಪ್ರಣಾಮ**

# ೨೯ನೇ ಅಧ್ಯಾಯ

## ಮದ್ರಾಸಿ ಭಜನ ಮೇಳ – ಬಾಬು ತೆಂಡೂಲಕರ –ಕ್ಯಾಪ್ಟನ್ ಹಾಟೆ ವಾಮನ ನಾರ್ವೇಕರ ಇವರ ಅನುಭವಗಳು.

ಸುಮಾರು ೧೯೧೬ರಲ್ಲಿ ರಾಮದಾಸಿ ಪಂಥದ ಭಜನ ಮೇಳವು ಪುಣ್ಯಕ್ಷೇತ್ರ ಕಾಶಿಯಾತ್ರೆಗೆ ಹೊರಟಿತ್ತು. ಆ ಗುಂಪಿನಲ್ಲಿ ಮೂವರಿದ್ದರು. (ಪತಿ, ಪತ್ನಿ, ಮತ್ತು ಮಗಳು) ಅವರ ಹೆಸರು ಗೊತ್ತಾಗಿಲ್ಲ. ಶಿರ್ಡಿಯಲ್ಲಿ ಮಹಾಯೋಗಸಂಪನ್ನರೂ, ದಯಾಮಯರೂ, ಆದ ಬಾಬಾ ಅವರು ಪ್ರತಿದಿನ ಭಕ್ತರಿಗೆ ಹಣ ಹಂಚುತ್ತಿರುವರೆಂದು ತಿಳಿಯಿತು. ಬಾಬಾ ಅವರು ದಕ್ಷಿಣೆ ರೂಪದಲ್ಲಿ ಪಡೆದ ಹಣದಲ್ಲಿ ಪ್ರತಿದಿನವೂ ಅಮಾನಿ ಎಂಬ ಹುಡುಗಿಗೆ ೧ ರೂಪಾಯಿ, ಭಕ್ತ ಕೊಂಡಾಜಿಯವರ ಮಗಳಿಗೆ ೧ ರೂಪಾಯಿ, ಅಮಾನಿ ತಾಯಿಯವರಿಗೆ ೧೦ರೂಪಾಯಿಗಳಿಂದ ೨೦ ರೂಪಾಯಿ ಮತ್ತು ಕೆಲವು ಭಕ್ತರಿಗೆ ೫೦ ರೂಪಾಯಿಗಳಂತೆ ಹಂಚುತ್ತಿದ್ದರು. ಇದನ್ನು ಕೇಳಿ ಭಜನ ಮೇಳದವರು ಶಿರ್ಡಿಗೆ ಬಂದು ಭಜನೆ ಮಾಡಿದರು. ಆದರೆ ಅವರ ಅಂತರಂಗದಲ್ಲಿ ಹಣದಾಸೆ ಅತಿಯಾಗಿತ್ತು. ಮೇಳದವರೆಲ್ಲರೂ ಹಣದಾಸೆಯಿಂದ ಇದ್ದರೂ ಆ ಗುಂಪಿನ ಯಜಮಾನನ ಪತ್ನಿಗೆ ಮಾತ್ರ ಹಣದಾಸೆ ಇರಲಿಲ್ಲ. ಬಾಬಾ ಅವರನ್ನು ಅವಳು ಬಹುವಾಗಿ ಪ್ರೀತಿಸುತ್ತಿದ್ದಳು. ಅವಳ ನಿಶ್ಚಲವಾದ ಭಕ್ತಿಯನ್ನು ಕಂಡ ಬಾಬಾ ಅವರು ಅವಳಿಗೆ ಅವಳ ಪ್ರೀತಿಯ ದೇವರ ದರ್ಶನವನ್ನು ದಯಪಾಲಿಸಿಸಬೇಕೆಂದು ನಿರ್ಣಯಿಸಿ ಅವಳಿಗೆ ಶ್ರೀರಾಮನಂತೆ ಗೋಚರಿಸಿದರು. ಇದನ್ನು ಕಂಡ ಅವಳು ಬಹಳ ಆನಂದಭರಿತಳಾದಳು. ನಯನಗಳಲ್ಲಿ ಆನಂದಬಾಷ್ಪ ಉಕ್ಕಿತು. ಸಂತೋಷದಿಂದ ಕೈ ಮುಗಿದಳು. ಅಲ್ಲಿ ನೆರೆದವರೆಲ್ಲರೂ ಅವಳ ಆನಂದ ಸ್ಥಿತಿಯನ್ನು ನೋಡಿ ಆಶ್ಚರ್ಯಪಟ್ಟರು. ಕಾರಣ ತಿಳಿಯಲಿಲ್ಲ. ಅವಳ ಪತಿಗೆ ಸಾಯಿಬಾಬಾ ಹೇಗೆ ತನಗೆ ಶ್ರೀರಾಮಚಂದ್ರನ ದರ್ಶನವನ್ನು ದಯಪಾಲಿಸಿದರೆಂಬುದನ್ನು ತಿಳಿ ಹೇಳಿದಳು. ಆಗ

ಅವನು "ಇದು ಕೇವಲ ಭ್ರಮೆ; ಅದು ಹೇಗೆ ಸಾಧ್ಯ? ಎಲ್ಲರೂ ಸಾಯಿಬಾಬಾ ಅವರನ್ನು ಕಂಡರು. ಅದರೆ ನಿನಗೆ ಮಾತ್ರ ಶ್ರೀರಾಮಚಂದ್ರನಂತೆ ಕಂಡರೆ?" ಎಂದು ಪರಿಹಾಸ್ಯ ಮಾಡಿದನು. ಆದರೆ ಅವಳು ಕೋಪಗೊಳ್ಳಲಿಲ್ಲ. ಅವಳಗೆ ಬಾಬಾ ಅವರು ಆಗಾಗ್ಗೆ ಶ್ರೀ ರಾಮನ ರೂಪದಲ್ಲಿ ದರ್ಶನವನ್ನು ನೀಡುತ್ತಿದ್ದರು.

## ಅಪೂರ್ವ ಸ್ವಪ್ನ

ಕೆಲವು ದಿನಗಳ ನಂತರ ಅವಳ ಪತಿಗೆ ಒಂದು ಕನಸು ಬಿದ್ದಿತು. ಅವನು ಒಂದು ದೊಡ್ಡ ಪಟ್ಟಣದಲ್ಲಿ ಪೋಲೀಸರಿಂದ ಬಂಧಿಸಲ್ಪಟ್ಟು ಜೈಲುವಾಸ ಮಾಡುತ್ತಿದ್ದನು. ಬಂದಿಖಾನೆಯ ಹೊರಗಡೆ ಬಾಬಾ ಅವರು ನಿಂತಿದ್ದರು. ಬಾಬಾ ಅವರನ್ನು ನೋಡಿ ರಾಮದಾಸಿ ದೀನ–ಕಂಠದಿಂದ "ನಿಮ್ಮ ಕೀರ್ತಿಯನ್ನು ಕೇಳಿ ಇಲ್ಲಿಗೆ ಬಂದಿದ್ದೇನೆ; ನಮಗೆ ಇಂಥ ಸಂಕಟ ಬರಬೇಕೆ? ನೀವಿದ್ದರೂ ಸಹ ನಮಗೆ ಸಂಕಟಗಳೆ? ಎಂದು ಕೇಳಿದನು. ಅದಕ್ಕೆ ಬಾಬಾ ಅವರು "ನಿನ್ನ ಕರ್ಮದ ಫಲವನ್ನು ಅನುಭವಿಸಲೇಬೇಕು" ಎಂದು ಉತ್ತರಿಸಿದರು. ಆಗ ಅವರು "ಬಾಬಾ ಇಂಥ ಕಷ್ಟ ಒದಗುವ ಪಾಪವನ್ನೆಂದೂ ನಾನು ಈ ಜನ್ಮದಲ್ಲಿ ಮಾಡಿರುವುದಿಲ್ಲ" ಎಂದನು. ಅದಕ್ಕೆ ಬಾಬಾ ಅವರು ಈ ಜನ್ಮದಲ್ಲಿ ಮಾಡದಿದ್ದರೂ ಪೂರ್ವಜನ್ಮದಲ್ಲಿ ಪಾಪಕೃತ್ಯ ಮಾಡಿರಬಹುದು" ಎಂದರು. ಅದಕ್ಕೆ ಅವನು "ನನಗೆ ಪೂರ್ವಜನ್ಮದ ನೆನಪಿಲ್ಲ; ಹಾಗೆ ಪೂರ್ವಜನ್ಮದಲ್ಲಿ ನಾನು ಪಾಪವನ್ನೆಸಗಿದ್ದರೂ ಸಹ ಒಣ ಹುಲ್ಲನ್ನು ಸುಡುವಂತೆ ನೀವು ಅದನ್ನೇಕೆ ಸುಡಬಾರದು?" ಎಂದನು. ಅದಕ್ಕೆ ಬಾಬಾ ಅವರು "ನಿನಗೆ ನಂಬಿಕೆ ಇದೆಯೋ?" ಎಂದು ಪ್ರಶ್ನಿಸಿದರು. ಅವನು "ಇದೆ" ಎಂದುತ್ತರಿಸಿದನು. ಆಗ ಬಾಬಾ ಅವರಿಗೆ ಕಣ್ಣು ಮುಚ್ಚಿಕೊಳ್ಳಲು ಹೇಳಿದರು. ಅವನು ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ, ಏನೋ ಕೆಳಗೆ ಬಿದ್ದ ಶಬ್ದ. ಕಣ್ಣು ತೆರೆದು ನೋಡಲಾಗಿ ಬಂಧನದಿಂದ ಬಿಡುಗಡೆ! ಅಗ ಅವನು ಬಹಳ

ಹೆದರಿಕೆಯಿಂದ ಬಾಬಾ ಅವರನ್ನು ಎವೆಯಿಕ್ಕದೆ ನೋಡಿದ. ಆಗ ಬಾಬಾ "ಸರೀಯಾಗಿ ಸಿಕ್ಕಿದ್ದೀಯೆ. ಈಗ ಪುನ: ನಿನ್ನನ್ನು ಬಂಧಿಸುತ್ತಾರೆ" ಎಂದು ಹೇಳಿದರು. ಆಗ ಅವನು ಬಾಬಾ ಅವರನ್ನು ಕುರಿತು, "ನಿಮ್ಮ ಹೊರತು ನನಗಾರೂ ರಕ್ಷಕರಿಲ್ಲ"ಎಂದು ಬೇಡಿಕೊಂಡ. ಬಾಬಾ ಅವರು ಪುನ: ಅವನಿಗೆ ಕಣ್ಣುಮುಚ್ಚಿಕೊಳ್ಳುವಂತೆ ಹೇಳಿದರು ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡ ನಂತರ ನೋಡಲಾಗಿ ಭಂದನದಿಂದ ಮುಕ್ತನಾಗಿ ಬಾಬಾರವರ ಪಕ್ಕದಲ್ಲಿದ್ದನು. ಆಗ ಆತ ಬಾಬಾ ಅವರಿಗೆ ನಮಸ್ಕರಿಸಿದ. ಆಗ ಬಾಬಾ ಅವರು "ಈ ನಮಸ್ಕಾರಕ್ಕೂ ಹಿಂದಿನದಕ್ಕೂ ವ್ಯತ್ಯಾಸವಿದೆಯೇ? ಯೋಚನೆ ಮಾಡಿ ಉತ್ತರ ಹೇಳು" ಎಂದರು. ಅದಕ್ಕೆ ಅವನು "ಬೇಕಾದಷ್ಟು ವ್ಯತ್ಯಾಸವಿದೆ. ಮೊದಲು ಮಾಡಿದ ನಮಸ್ಕಾರ ಹಣದಾಸೆಯದು. ಈಗಿನದು ನಿಮ್ಮನ್ನು ಪರಮಾತ್ಮನೆಂದು ಭಾವಿಸಿ ಮಾಡಿದ್ದು. ಮೊದಲಿನದು ಹಿಂದೂಗಳನ್ನು ನಾಶ ಮಾಡುತ್ತಿರುವ ಮಹಮ್ಮದೀಯರೆಂದು ಭಯದಿಂದ ಮಾಡಿದ್ದುದಾಗಿದೆ" ಎಂದನು ಆಗ ಬಾಬಾ "ನಿನಗೆ ಮಹಮ್ಮದೀಯ ದೇವರಲ್ಲಿ ನಂಬಿಕೆ ಇದೆಯೆ?" ಎಂದು ಕೇಳಿದರು. ಅದಕ್ಕೆ ಅವನು "ಇಲ್ಲ" ಎಂದು ಉತ್ತರಿಸಿದ. ಆಗ ಬಾಬಾ ಅವರು "ನೀನು ಮನೆಯಲ್ಲಿ ಪಂಜಾ ಪೂಜಿಸುತ್ತಿಲ್ಲವೆ? 'ಕಾಡಬೀಬಿ' ಎಂಬ ಮಹಮ್ಮದೀಯ ದೇವತೆಯನ್ನು ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ನೀನು ಪೂಜಿಸುವುದಿಲ್ಲವೇ?" ಎಂದು ಕೇಳಿದರು. ಅವನು ಒಪ್ಪಿಕೊಂಡು, ಆಗ ಬಾಬಾರವರು "ಇನ್ನೇನು ಬೇಕು?" ಎಂದು ಕೇಳಿದರು. ಅವನು ಗುರು ರಾಮದಾಸರನ್ನು ನೋಡಲಪೇಕ್ಷಿಸಿದ. ಆಗ ಬಾಬಾ ಅವರು ಅವನಿಗೆ ಹಿಂತಿರುಗಿ ನೋಡಲು ಹೇಳಿದರು. ಹಿಂತಿರುಗಿ ನೋಡಿದಾಗ ಅವನು ಕಂಡಿದುದೇನು? ಗುರು ರಾಮದಾಸರನ್ನು ! ಇನ್ನೇನು ನಮಸ್ಕಾರ ಮಾಡಬೇಕೆಂದು ಹೋದಾಗ ರಾಮದಾಸರು ಮಾಯವಾಗಿದ್ದರು. ಆಗ ಅವನು ಕುತೂಹಲದಿಂದ ಬಾಬಾರವರನ್ನು ಕುರಿತು "ನೀವು ಬಹಳ ವೃದ್ಧರಂತೆ ಕಾಣುತ್ತೀರಿ. ನಿಮ್ಮ ವಯಸ್ಸೆಷ್ಟು?"

ಎಂದು ಕೇಳಿದ. ಅದಕ್ಕೆ ಬಾಬಾ ಅವರು "ಏನು ಮುದುಕನಾಗಿರುವೆನೆ? ಹಾಗಾದರೆ ನನ್ನ ಜೊತೆಯಲ್ಲಿ ಓಡಿ ಬಾ" ಎಂದರು. ಬಾಬಾ ಓಡಲು ಪ್ರಾರಂಭಿಸಿದರು. ಅವನೂ ಹಿಂಬಾಲಿಸಿದ. ಓಡುತ್ತ ಓಡುತ್ತ ಬಾಬಾ ಮಾಯವಾದರು. ಆಗ ಅವನಿಗೆ ಎಚ್ಚರವಾಯಿತು.

ಎಚ್ಚರವಾಗಿ ನೋಡಲು 'ಯಾರೂ ಕಾಣಿಸಲಿಲ್ಲ. ಕನಸಿನಲ್ಲಿ ಕಂಡಿದ್ದನ್ನೆಲ್ಲ ಕೂಲಂಕುಷವಾಗಿ ಯೋಚಿಸತೊಡಗಿದ. ಅವನ ಮನೋಭಾವ ಬದಲಾಯಿತು. ಆತ ಬಾಬಾ ಅವರ ಮಹಿಮೆ ತಿಳಿದುಕೊಂಡನು. ಮುಂದೆ ಅನುಮಾನ ದೂರವಾಗಿ ಆತ ಅವರ ಪರಮಭಕ್ತನಾದ. ದೃಶ್ಯ ಕೇವಲ ಸ್ವಪ್ನ. ಆದರೆ ನಡೆದ ಸಂಭಾಷಣೆಗಳು ಪರಿಣಾಮಕಾರಿಯಾದವು. ಮರುದಿನದ ಆರತಿ ಸಮಯಕ್ಕೆ ಮಸೀದಿಗೆ ಹೋದಾಗ ಅವನಿಗೆ ಬಾಬಾ ಎರಡು ರೂಪಾಯಿಗಳನ್ನು ಮತ್ತು ಬರ್ಫಿ ಕೊಟ್ಟು ಆಶೀರ್ವದಿಸಿದರು.. "ದೇವರು ನಿನಗೆ ಅನಂತವಾದ ಐಶ್ವರ್ಯವನ್ನು ನೀಡುವನು: ನಿನಗೆಲ್ಲವೂ ಒಳ್ಳೆಯದಾಗುತ್ತದೆ." ಎಂದು ಹೇಳಿದರು. ಅವರಿಗೆ ಶಿರ್ಡಿಯಲ್ಲಿ ಹೆಚ್ಚು ಹಣ ದೊರಕಲಿಲ್ಲ. ಆದರೆ ಜೀವನಾದ್ಯಂತ ಬಾಬಾ ಅವರ ಆಶೀರ್ವಾದ ಫಲಿಸಿತು. ನಂತರ ಅವನಿಗೆ ಬೇಕಾದಷ್ಟು ಹಣ ದೊರಕಿತು. ಎಲ್ಲರೂ ಯಾತ್ರೆಯನ್ನು ಮುಗಿಸಿ ಸ್ವಸ್ಥಾನ ಸೇರಿಕೊಂಡರು.

## ಬಾಬಾ ತೆಂಡೂಲಕರ

ಮುಂಬಯಿ ಬಾಂದ್ರಾದ ರಘುನಾಥ ತೆಂಡೂಲಕರ ಅವರ ಹೆಂಡತಿ ಬಾಬಾ ಅವರ ಭಕ್ತರಾಗಿದ್ದರು. ಶ್ರೀಮತಿ ಸಾವಿತ್ರಿಬಾಯಿ ತೆಂಡೂಲಕರ ಅವರು ಸಾಯಿಲೀಲೆಗಳನ್ನು ೮೦೦ ಪಾದಗಳಲ್ಲಿ "ಶ್ರೀ ಸಾಯಿನಾಥ ಭಜನಮಾಲಾ" ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ತೆಂಡೂಲಕರ ಅವರ ಮಗ ಬಾಬು ಮೆಡಿಕಲ್ ಪರೀಕ್ಷೆಗೆ ಕುಳಿತಿದ್ದು ಹಗಲಿರುಳೂ ಓದುತ್ತಿದ್ದನು. ಕೆಲವು ಜ್ಯೋತಿಷಿಗಳನ್ನು

ವಿಚಾರಿಸಿದಾಗ ಅವರು ಈ ಸಾರೆ ಗ್ರಹಗತಿಗಳು ಸರಿಯಾಗಿಲ್ಲವೆಂದೂ, ಮುಂದಿನ ಸಾರೆ ಪರೀಕ್ಷೆಯಲ್ಲಿ ಜಯ ಪಡೆಯಬಹುದೆಂದು ಅವನಿಗೆ ಹೇಳಿದರು. ಇದು ಅವನ ಮನಸ್ಸನ್ನು ಕಲಕಿತು. ಕೆಲವು ದಿನಗಳ ನಂತರ ಅವನ ತಾಯಿ ಶಿರ್ಡಿಗೆ ಬಂದರು. ಬಾಬಾ ಅವರನ್ನು ಸಂದರ್ಶಿಸಿ ಇತರ ವಿಚಾರಗಳೊಂದಿಗೆ ಮಗನ ವಿಚಾರವನ್ನೂ ಪ್ರಸ್ತಾಪಿಸಿದರು. ಇದನ್ನು ಕೇಳಿದ ಬಾಬಾ "ನನ್ನಲ್ಲಿ ನಂಬಿಕೆ ಇಡುವಂತೆ ನಿನ್ನ ಮಗನಿಗೆ ಹೇಳು. ಜಾತಕ ಜ್ಯೋತಿಷ್ಯವನ್ನು ಸುಡು. ಚೆನ್ನಾಗಿ ಓದಿ ಪರೀಕ್ಷೆಗೆ ಕುಳಿತುಕೊಳ್ಳಲಿ, ಖಂಡಿತ ಈ ಸಾರೆ ತೇರ್ಗಡೆಯಾಗುತ್ತಾನೆ. ನನ್ನ ಮಾತಿನಲ್ಲಿ ನಂಬಿಕೆ ಇಡಲಿ. ನಿರಾಶನಾಗುವುದು ಬೇಡ" ಎಂದರು. ಸಾವಿತ್ರಿಬಾಯಿ ಬಾಬಾ ಅವರ ಸಂದೇಶವನ್ನು ಮಗನಿಗೆ ತಿಳಿಸಿದರು. ಅವನು ಕಷ್ಟಪಟ್ಟು ಬಹಳ ಓದಿ ಪರೀಕ್ಷೆಗೆ ಕುಳಿತನು. ಆದರೆ ತೇರ್ಗಡೆಯಾಗುವೆನೋ ಇಲ್ಲವೋ ಎಂಬ ಅನುಮಾನದಿಂದ ಅವನು ಮೌಖಿಕ ಪರೀಕ್ಷೆಗೆ ಹೋಗಲೇ ಇಲ್ಲ. ಆದರೆ ಪರೀಕ್ಷಕರು ಲಿಖಿತ ಪರೀಕ್ಷೆಯಲ್ಲಿ ಚೆನ್ನಾಗಿ ಅಂಕಗಳು ಬಂದಿರುವವೆಂದೂ ಮೌಖಿಕಕ್ಕೆ ಬರಬೇಕೆಂದೂ ಹೇಳಿ ಕಳುಹಿಸಿದರು. ಈ ರೀತಿ ಉತ್ಸಾಹಗೊಂಡು ಬಾಬು ಮೌಖಿಕವನ್ನು ಸಹ ಮುಗಿಸಿ ತೇರ್ಗಡೆ ಹೊಂದಿದನು. ಇದು ಬಾಬಾ ಅವರ ಮಹಿಮೆ ಅಲ್ಲವೇ? ಹೀಗೆ ಅನುಮಾನಗಳು ಮತ್ತು ಕಷ್ಟಗಳು ನಮ್ಮ ನಂಬಿಕೆಯನ್ನು ಧೃಡಪಡಿಸಲೋಸುಗ ನಮ್ಮನ್ನು ಆವರಿಸುತ್ತವೆ. ಮತ್ತು ನಮ್ಮನ್ನು ಪರೀಕ್ಷಿಸುತ್ತವೆ. ನಾವು ನಿಶ್ಚಲವಾಗಿ ನಂಬಿಕೆಯಿಂದ ಬಾಬಾ ಅವರನ್ನು ಅವಲಂಬಿಸಿದರೆ ನಮ್ಮ ಪ್ರಯತ್ನಗಳೆಲ್ಲವೂ ಫಲಿಸುತ್ತವೆ.

ಈ ಹುಡುಗನ ತಂದೆ ರಘುನಾಥರಾವ ಮುಂಬಯಿಯಲ್ಲಿ ಒಂದು ವಿಲಾಯಿತಿ ಮಾರಾಟದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಬಹಳ ವಯಸ್ಸಾಗಿದ್ದುದರಿಂದ ಸರಿಯಾಗಿ ಕೆಲಸ ಮಾಡಲು ಸ್ವಲ್ಪ ವಿರಾಮ ಬೇಕಿತ್ತು, ರಜಾ ಪಡೆದರು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಕಾರಣ ಅವರು ನಿವೃತ್ತಿ ಹೊಂದಬೇಕಾಯಿತು.

ಪ್ರಾಮಾಣಿಕವಾಗಿ ಅವರು ಸೇವೆ ಮಾಡಿದ್ದರಿಂದ ಆ ಸಂಸ್ಥೆಯ ಮುಖ್ಯಾಧಿಕಾರಿಯು ಅವರಿಗೆ ವಿರಾಮ ವೇತನ ಕೊಡಬೇಕೆಂದು ತೀರ್ಮಾನಿಸಿದರು. ವಿರಾಮ ವೇತನ ನಿಶ್ಚಿತ ಮಾಡಿರಲಿಲ್ಲ. ಅವರಿಗೆ ೧೫೦ ರೂಪಾಯಿ ಸಂಬಳ ಬರುತ್ತಿತ್ತು. ಆದುದರಿಂದ ವಿರಾಮ ವೇತನವು೭೫ ರೂಪಾಯಿ ಸಿಗಬಹುದೆಂದು ತಿಳಿದು ಜೀವನವನ್ನು ಮುಂದೆ ಹೇಗೆ ನಡೆಸುವುದೆಂದು ಚಿಂತಾಕ್ರಾಂತರಾಗಿದ್ದರು. ಆಗ ಬಾಬಾ ಅವರು ಶ್ರೀಮತಿ ತೆಂಡೂಲಕರ ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು "ನಿಮ್ಮ ಪತಿಗೆ ೧೦೦ ರೂಪಾಯಿ ವಿರಾಮ ವೇತನ ದೊರಕಿದರೆ ಸಂತೋಷವಾಗುತ್ತದೆಯೇ?" ಎಂದು ಕೇಳಿದರು. ಅದಕ್ಕೆ ಅವರು "ಬಾಬಾ ನಮ್ಮನ್ನೇಕೆ ಕೇಳುವಿರಿ. ನಿಮ್ಮಲ್ಲಿ ನಮಗೆ ಸಂಪೂರ್ಣ ನಂಬಿಕೆಯಿದೆ." ಬಾಬಾ ೧೦೦ ರೂಪಾಯಿ ಎಂದು ಹೇಳಿದ್ದರೂ ಅವರಿಗೆ ಮುಂದೆ ೧೧೦ ರೂಪಾಯಿಗಳ ವಿರಾಮ ವೇತನ ದೊರೆಯಿತು. ಬಾಬಾ ಅವರಿಗೆ ಭಕ್ತರಲ್ಲಿ ಇಂಥ ಅಪರಿಮಿತವಾದ ಪ್ರೀತಿ ಇದ್ದಿತು.

## ಕ್ಯಾಪ್ಟನ್ ಹಾಟೆ

ಬಿಕಾನೇರದ ಕ್ಯಾಪ್ಟನ್ ಹಾಟೆ ಅವರು ಬಾಬಾ ಅವರ ಭಕ್ತರಾಗಿದ್ದರು. ಒಂದು ದಿನ ಬಾಬಾರವರು ಅವರಿಗೆ ಸ್ವಪ್ನದಲ್ಲಿ ಗೋಚರಿಸಿ "ನನ್ನ ಜ್ಞಾಪಕವಿದೆಯೆ?" ಎಂದು ಕೇಳಲು, ಹಾಟೆ ಅವರು ಬಾಬಾ ಅವರ ಪಾದಗಳನ್ನು ಹಿಡಿದುಕೊಂಡು "ಮಗುವು ತಾಯಿಯನ್ನು ಮರೆತು ಹೇಗೆ ಜೀವಿಸಬಹುದು?" ಎಂದು ಕೇಳಿ ತೋಟಕ್ಕೆ ಹೋಗಿ ತರಕಾರಿ ತಂದು ಬಾಬಾ ಅವರಿಗೆ ಅಡಿಗೆ ಸಿದ್ಧಪಡಿಸಲು ತಯಾರಾದರು. ಆ ಸಮಯಕ್ಕೆ ಸರಿಯಾಗಿ ಎಚ್ಚರವಾಯಿತು. ಆಗ ಅವರು ಸೀದಾ ಪದಾರ್ಥಗಳನ್ನು ಶಿರ್ಡಿಗೆ ಕಳುಹಿಸಲು ನಿರ್ಧರಿಸಿದರು. ಸ್ವಲ್ಪ ದಿನಗಳ ನಂತರ ಗ್ವಾಲಿಯರಿಗೆ ಬಂದರು. ಆಗ ಅಲ್ಲಿಂದ ಶಿರ್ಡಿಗೆ ಹೋಗುವವರ ಸಂಗಡ ೧೨

ರೂಪಾಯಿಗಳನ್ನು ಕೊಟ್ಟು ಎರಡು ರೂಪಾಯಿಗಳನ್ನು ತರಕಾರಿಗೆ ಉಪಯೋಗಿಸಿ ಇನ್ನುಳಿದ ೧೦ ರೂಪಾಯಿಗಳನ್ನು ಬಾಬಾರವರಿಗೆ ದಕ್ಷಿಣೆ ಅರ್ಪಿಸಲು ಹೇಳಿದರು. ಅವರ ಸ್ನೇಹಿತನು ಶಿರ್ಡಿಗೆ ಬಂದು ತರಕಾರಿ ಕೊಂಡರು. ಆದರೆ ವಾಲಪಾಪಡಿ ಪಲ್ಯ ದೊರೆಯಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಆಕಸ್ಮಾತ್ತಾಗಿ ಬಂದ ಒಬ್ಬ ಮಹಿಳೆಯ ಹತ್ತಿರ ಪಾಪಾಡಿ ಶೇಂಗಾ ದೊರೆತವು. ನಂತರ ಅದೆಲ್ಲವನ್ನೂ ತೆಗೆದುಕೊಂಡು ಮಸೀದಿಗೆ ಹೋಗಿ ಹಾಟೆ ಅವರ ಪರವಾಗಿ ಬಾಬಾ ಅವರಿಗೆ ನೈವೇದ್ಯ ಅರ್ಪಿಸಿದನು. ಶ್ರೀ ನಿಮೋಣಕರ ಅವರು ಆ ತರಕಾರಿಗಳನ್ನು ಉಪಯೋಗಿಸಿ ಅಡಿಗೆ ತಯಾರು ಮಾಡಿ ಬಾಬಾ ಅವರಿಗೆ ಬಡಿಸಿದರು. ಬಾಬಾ ಅವರು ವಾಲಪಾಪಡಿಯನ್ನು ಮಾತ್ರ ತಿನ್ನುತ್ತಿದ್ದುದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಈ ಸಮಾಚಾರವನ್ನು ತಮ್ಮ ಮಿತ್ರರಿಂದ ತಿಳಿದುಕೊಂಡ ಮೇಲೆ ಹಾಟೆ ಅವರು ಆನಂದಭರಿತರಾದರು.

## ಪವಿತ್ರವಾದ ರೂಪಾಯಿ

ಇನ್ನೊಂದು ಸಾರೆ ಹಾಟೆ ಅವರಿಗೆ ಬಾಬಾ ಅವರಿಂದ ಸ್ಪರ್ಶಿಸಲ್ಪಟ್ಟ ಪವಿತ್ರವಾದ ಒಂದು ರೂಪಾಯಿ ಪಡೆಯಬೇಕೆಂಬ ಆಶೆಯಾಯಿತು. ಆಗ ಅವರು ಶಿರ್ಡಿಗೆ ಹೊರಟಿದ್ದ ಒಬ್ಬ ಮಿತ್ರನ ಜೊತೆಗೆ ಒಂದು ರೂಪಾಯಿಯನ್ನು ಕೊಟ್ಟು ಕಳುಹಿಸಿದರು. ಅವನು ಶಿರ್ಡಿ ತಲುಪಿ, ಬಾಬಾ ಅವರ ದರ್ಶನವನ್ನು ಪಡೆದು ದಕ್ಷಿಣೆ ಕೊಡಲು ಬಾಬಾ ಅವರು ಅದನ್ನು ತಮ್ಮ ಕಿಸೆಯಲ್ಲಿ ಇಟ್ಟುಕೊಂಡರು. ನಂತರ ಹಾಟೆ ಅವರು ಕೊಟ್ಟ ರೂಪಾಯಿಯನ್ನು ಕೊಡಲು ಅದನ್ನು ತಿರುಗಿಸಿ ನೋಡಿ, ಮೇಲಕ್ಕೆಸೆದು ಆಟವಾಡುತ್ತ ಉಧಿಯೊಡನೆ ಆ ರೂಪಾಯಿಯನ್ನು ಹಿಂತಿರುಗಿಸಿ ಇದನ್ನು ಅದರ ಮಾಲೀಕನಿಗೆ ಕೊಡು ಎಂದರು. "ಅವನಿಂದ ನನಗೇನೂ ಬೇಕಿಲ್ಲ. ಅವನು ಶಾಂತಿ ಮತ್ತು ತೃಪ್ತಿಯಿಂದ ರಲಿ"ಎಂದರು. ಅವನು ಗ್ವಾಲಿಯರ್‌ಗೆ ಬಂದು ನಡೆ ಎಲ್ಲ ಸಂಗತಿ ಹಾಟೆ ಅವರಿಗೆ ತಿಳಿಸಿ ಬಾಬಾ ಅವರಿಂದ ಸ್ಪರ್ಶಿಸಲ್ಪಟ್ಟ ಪವಿತ್ರವಾದ ನಾಣ್ಯವನ್ನು ಕೊಟ್ಟನು.

## ವಾಮನ ನಾರ್ವೇಕರ

ವಾಮನ ನಾರ್ವೇಕರ ಬಾಬಾ ಅವರನ್ನು ಬಹಳ ಪ್ರೀತಿಸುತ್ತಿದ್ದರು. ಒಮ್ಮೆ ಅವರು ಶ್ರೀರಾಮಕಂಠೀವರಹವನ್ನು ತಂದು ಸಾಯಿಬಾಬಾ ಅವರ ಹಸ್ತಸ್ಪರ್ಶದಿಂದ ಅದನ್ನು ಪವಿತ್ರ ಗೊಳಿಸಿ ಒಯ್ಯಬೇಕೆಂದು ಬಾಬಾ ಅವರ ಕೈಗಿತ್ತರು. ಬಾಬಾ ಅದನ್ನು ಸುಮ್ಮನೆ ಜೇಬಿನಲ್ಲಿ ಹಾಕಿಕೊಂಡರು. ಆಗ ಶ್ಯಾಮ ಬಾಬಾ ಅವರಿಗೆ ನಾರ್ವೇಕರರ ಉದ್ದೇಶ ತಿಳಿಸಿ ಅದನ್ನು ಹಿಂತಿರುಗಿಸಬೇಕೆಂದು ಬೇಡಿದರು. ಆಗ ಬಾಬಾ "ಅವನೀಗೇಕೆ ಇದನ್ನು ಮರಳಿ ಕೊಡಬೇಕು? ನಾವೇ ಇಟ್ಟುಕೊಳ್ಳೋಣ; ಅವನು ೨೫ ರೂಪಾಯಿಗಳನ್ನು ಕೊಟ್ಟರೆ ಅದನ್ನು ಕೊಡುತ್ತೇನೆ." ಎಂದುರು. ಆಗ ವಾಮನ ೨೫ ರೂಪಾಯಿಗಳನ್ನು ಬಾಬಾ ಅವರ ಮುಂದಿಟ್ಟರು. ಆಗ ಬಾಬಾ "ಇದರ ಬೆಲೆ ೨೫ ರೂಪಾಯಿಗಳಿಗಿಂತಲೂ ಅಧಿಕವಾದುದು. ಶ್ಯಾಮ, ಇದನ್ನು ನೀನೇ ತೆಗೆದುಕೋ; ಇದು ನಿನ್ನ ಹತ್ತಿರ ಇರಲಿ ಇದನ್ನು ಪೂಜಾಗೃಹದಲ್ಲಿಟ್ಟು ಪೂಜಿಸು" ಎಂದರು. ಬಾಬಾ ಅವರ ಈ ವಿಚಿತ್ರ ನಡೆತೆಯ ಬಗ್ಗೆ ಯಾರಿಗೂ ಮಾತನಾಡುವ ಧೈರ್ಯವಿರಲಿಲ್ಲ. ಯಾರಿಗೆ ಯಾವುದು ಯೋಗ್ಯ ಮತ್ತು ಅರ್ಹವಾದುದು ಎಂಬುದು ಅವರಿಗೆ ಮಾತ್ರ ಗೊತ್ತು.

**ಶ್ರೀ ಸಾಯಿ ಪ್ರಣಾಮ**

# ೩೦ನೇ ಅಧ್ಯಾಯ

## ವಾಣಿಯ ಕಾಕಾಜಿ ವೈದ್ಯ – ಮುಂಬಯಿಯ ರಾಮಲಾಲಾ

ಶಾಂತಿಸಾಗರರೂ ಭಕ್ತಪಾಲರೂ ಆದ ಸಾಯಿಯವರಿಗೆ ಪ್ರಣಾಮ. ಅವರ ದರ್ಶನ ಮಾತ್ರದಿಂದಲೇ ಸಂಸಾರ ಸಾಗರದ ಹೆದರಿಕೆಯು ನಾಶವಾಗಿ ನಮ್ಮ ವಿಪತ್ತುಗಳೆಲ್ಲವೂ ದೂರವಾಗುತ್ತವೆ. ಅವರು ಮೂಲತ: ನಿರ್ಗುಣರು. ಭಕ್ತರಿಗೋಸುಗ ಅವರು ರೂಪ ತಾಳಿದರು. ತಮ್ಮ ಭಕ್ತರಿಗೆ ಆತ್ಮಜ್ಞಾನವನ್ನು ಕೊಡುವದೇ ಸಂತರ ದ್ಯೇಯ. ಆದರೆ ಸಾಯಿಬಾಬಾ ಅವರಿಗೆ ಈ ದ್ಯೇಯ ಸ್ವಾಭಾವಿಕವಾಗಿದ್ದಿತು. ಅವರ ಪಾದಗಳಲ್ಲಿ ಆಶ್ರಯ ಪಡೆದವರ ಕಷ್ಟಗಳೆಲ್ಲವೂ ದೂರವಾಗುತ್ತಿದ್ದವು. ಅನೇಕರು ಬಾಬಾ ಅವರನ್ನು ಸ್ಮರಿಸಿಕೊಂಡು ಅನೇಕ ಕಡೆಗಳಿಂದ ಬಂದು ಅವರ ಸಮ್ಮುಖದಲ್ಲಿ ಧರ್ಮ ಗ್ರಂಥಗಳನ್ನು ಪಾರಾಯಣ ಮಾಡುತ್ತಿದ್ದರು. ಗಾಯತ್ರಿ ಮಂತ್ರವನ್ನು ಜಪಿಸುತ್ತಿದ್ದರು. ಗುಣಹೀನರಾದ ನಮಗೆ ಭಕ್ತಿಯೇ ಗೊತ್ತಿರುವುದಿಲ್ಲ. ಇತರರು ಕೈಬಿಟ್ಟರೂ ಸಹ ಸಾಯಿಬಾಬಾ ಅವರು ನಮ್ಮ ಕೈ ಬಿಡುವುದಿಲ್ಲ ಎಂಬುದು ನಮಗೆ ತಿಳಿದಿದೆ. ಅವರ ದಯೆಯನ್ನು ಪಡೆದವರು ವಿಚಾರ, ವಿವೇಕ ಎಂಬ ಜ್ಞಾನ ಸಂಪಾದನೆ ಮಾಡುತ್ತಾರೆ.

ಸಾಯಿಬಾಬಾ ಅವರಿಗೆ ಭಕ್ತರ ಬಯಕೆಗಳು ತಿಳಿದಿವೆ. ಅದನ್ನವರು ಕೈಗೂಡಿಸುತ್ತಾರೆ. ಆದುದರಿಂದ ನಾವು ಅವರನ್ನು ಪ್ರಾರ್ಥಿಸಿ ಅವರ ಮುಂದೆ ಧ್ಯಾನಾಸೀನರಾಗೋಣ. ನಮ್ಮ ತಪ್ಪುಗಳೆಲ್ಲವನ್ನೂ ಕ್ಷಮಿಸಿ ನಮ್ಮನ್ನು ಅವರು ಪ್ರೇಮದಿಂದ ಮುಕ್ತ ಮಾಡಲಿ. ಬಾಬಾ ಅವರನ್ನು ಪ್ರಾರ್ಥಿಸಿದರೆ ಅವರ ದಯೆಯಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗುವುವು.

ದಯಾಸಾಗರರಾದ ಶ್ರೀ ಸಾಯಿಬಾಬಾ ತಮ್ಮನ್ನು ಅನುಗ್ರಹಿಸಿದುದರ ಫಲವೇ "ಶ್ರೀ ಸಾಯಿ ಸಚ್ಚರಿತೆ" ಎಂದು ಹೇಳಿದ್ದಾರೆ

ಶ್ರೀ ಹೇಮಾಡಪಂತ. ಇಲ್ಲದಿದ್ದರೆ ತಮಗೆ ಇಂಥ ಕಾರ್ಯ್ಯವನ್ನು ಕೈಗೊಳ್ಳುವ ಯೋಗ್ಯತೆ ಇರಲಿಲ್ಲವೆಂದು ಅವರು ಒಪ್ಪಿಕೊಂಡಿದ್ದಾರೆ. ಆದರೆ ಸಾಯಿಬಾಬಾ ಅವರೇ ಸಮಸ್ತ ಹೊಣೆಯನ್ನು ಹೊತ್ತಿದ್ದರಿಂದ ಅವರಿಗೆ ಕಾರ್ಯದ ಭಾರವೇ ಗೊತ್ತಾಗಲಿಲ್ಲ. ಕಷ್ಟಪಡಬೇಕಾಗಲಿಲ್ಲ. ಶಕ್ತಿಯುತವಾದ ಜ್ಞಾನಜ್ಯೋತಿಯು ನುಡಿ ಮತ್ತು ಲೇಖಣಿಯನ್ನು ಪ್ರೇರೇಪಿಸುತ್ತಿರುವಾಗ ಅನುಮಾನಕ್ಕೆ ಆಸ್ಪದವಿಲ್ಲ. ಶ್ರೀ ಸಾಯಿಬಾಬಾ ಅವರು ಹೇಮಾಡಪಂತರ ಸೇವೆಯನ್ನು ಪುಸ್ತಕ ರೂಪದಲ್ಲಿ ಪಡೆದರು. ಇದು ಅವರ ಪೂರ್ವಜನ್ಮದ ಪುಣ್ಯ ವಿಶೇಷವೇ ಸರಿ!

ಈ ಕೆಳಗಿನ ಕಥೆಯು ಬರೀ ಕಥೆಯಲ್ಲ – ಅಮೃತ! ಇದನ್ನು ಸ್ವಾದಿಸುವವರಿಗೆ ಸಾಯಿಬಾಬಾ ಅವರ ದಿವ್ಯ ಶಕ್ತಿ ಮಹತ್ವ ಮತ್ತು ಸರ್ವಜ್ಞತ್ವ ಅರ್ಥವಾಗುವುವು. ವಾದಮಾಡಲಿಚ್ಛಿಸುವವರು ಈ ಕಥೆಯನ್ನು ಓದದಿರುವುದೇ ಮೇಲು. ಇಲ್ಲಿ ಬೇಕಾಗಿರುವುದು ತರ್ಕವಲ್ಲ – ನಿಶ್ಚಲ ಭಕ್ತಿ ಮತ್ತು ಧೃಡ ವಿಶ್ವಾಸ.

ಯಾರು ಸಂತರ ಭಕ್ತರೋ, ಅಂಥವರಿಗೆ ಈ ಕಥೆ ಪ್ರಿಯವೆನಿಸುತ್ತದೆ. ಇತರರಿಗೆ ಅದು ಕಟ್ಟು–ಕಥೆಯಂತೆ ತೋರುತ್ತದೆ.

## ವಾಣಿಯ ಕಾಕಾಜಿ ವೈದ್ಯ

ನಾಸಿಕ ಜಿಲ್ಲೆಯ ವಾಣಿಯಲ್ಲಿ ಕಾಕಾಜಿ ವೈದ್ಯರೆಂಬುವರಿದ್ದರು. ಅವರು ಅಲ್ಲಿಯ ಸಪ್ತಶೃಂಗಿಯ ದೇವತೆಯ ಆರಾಧಕರಾಗಿದ್ದರು. ಅವರಿಗೆ ಕಷ್ಟಗಳ ಮೇಲೆ ಕಷ್ಟಗಳು ಬಂದು ಮನಸ್ಸು ಸ್ಥಿಮಿತದಲ್ಲಿರಲಿಲ್ಲ. ಒಂದು ದಿನ ಸಂಜೆ ದೇವತೆಯ ಗುಡಿಗೆ ಹೋಗಿ ತಮ್ಮ ಚಿಂತೆಯನ್ನು ಹೋಗಲಾಡಿಸಿ ಮನಸ್ಸಿಗೆ ಶಾಂತಿ ದೊರಕಿಸೆಂದು ಅವರು ದೇವಿಗೆ ಪ್ರಾರ್ಥಿಸಿದರು. ದೇವತೆಯು ಅವರ ಭಕ್ತಿಗೆ ಮೆಚ್ಚಿ ಅದೇ ರಾತ್ರಿ ಅವರ ಸ್ವಪ್ನದಲ್ಲಿ ಗೋಚರವಾಗಿ, "ನೀನು ಬಾಬಾ ಅವರಲ್ಲಿಗೆ ಹೋಗು; ಶಾಂತಿ ದೊರೆಯುತ್ತದೆ" ಎಂದು ಹೇಳಿದಳು. ಈ ಬಾಬಾ ಯಾರು

ಎಂದು ಕೇಳುವಷ್ಟರಲ್ಲಿ ಅವರು ಎಚ್ಚೆತ್ತರು. ನಂತರ ಬಾಬಾ ಅಂದರೆ ತ್ರಿಂಬಕೇಶ್ವರ ಎಂದು ಭಾವಿಸಿ ಅವರು ಅಲ್ಲಿಗೆ ಹೋಗಿ ಹತ್ತು ದಿನಗಳವರೆಗೆ ನೆಲಸಿದರು. ಅಲ್ಲಿರುವಾಗ ಪ್ರತಿದಿನವೂ ಸ್ನಾನಮಾಡಿ ಶಿವಲಿಂಗಕ್ಕೆ ಅಭಿಷೇಕ ಮಾಡಿ ಪೂಜೆ ಮಾಡುತ್ತಿದ್ದರು. ಆದರೂ ಶಾಂತಿ ದೊರೆಯಲಿಲ್ಲ. ಅನಂತರ ತಮ್ಮ ಊರಿಗೆ ಮರಳಿ ಬಂದು ಪುನ: ದೇವತೆಯನ್ನು ಪ್ರಾರ್ಥಿಸಿದರು. ಅದೇ ರಾತ್ರಿ ಆ ದೇವತೆ ಮತ್ತೆ ಕನಸಿನಲ್ಲಿ ಕಾಣಿಸಿಕೊಂಡು "ತ್ರಿಂಬಕೇಶ್ವರಕ್ಕೆ ಏಕೆ ಹೋದೆ? ನಾನು ಹೇಳಿದ್ದುದು ಬಾಬಾ ಅವರಲ್ಲಿಗೆ; ಅಂದರೆ ಶಿರ್ಡಿಯ ಶ್ರೀ ಸಾಯಿಬಾಬಾ" ಎಂದು ಹೇಳಿ ಮಾಯವಾದಳು. ಶಿರ್ಡಿಗೆ ಹೇಗೆ ಹೋಗುವುದು, ಅವರನ್ನು ಸಂದರ್ಶಿಸುವುದು ಹೇಗೆ, ಎಂಬುದೇ ಅವರಿಗೆ ಸಮಸ್ಯೆಯಾಯಿತು. ಯಾರಿಗಾದರೂ ಸಂತರ ದರ್ಶನ ಪಡೆಯಬೇಕೆಂಬ ಬಯಕೆ ಸಂತರೇಕೆ, ದೇವರೇ ಅವರ ಬಯಕೆಗಳನ್ನು ಕೈಗೂಡಿಸುವನು! ನಿಜವಾಗಿ ನೋಡಿದರೆ ಸಂತನೂ ಪರಮಾತ್ಮನೂ ಇಬ್ಬರೂ ಒಂದೇ. ಇವರಿಬ್ಬರಲ್ಲಿ ಸ್ವಲ್ಪವೂ ಭೇಧವಿಲ್ಲ. ಯಾರಾದರೂ ತಾವೇ ಹೋಗಿ ಸಂತರ ದರ್ಶನ ಪಡೆಯುತ್ತೇವೆಂದರೆ ಅದು ಆತ್ಮಪ್ರಶಂಸೆಯೆ. ಬೇರೆ ಏನೂ ಅಲ್ಲ. ಸಂತರು ಇಚ್ಛಿಸದಿದ್ದಲ್ಲಿ ಯಾರು ತಾನೆ ಅವರನ್ನು ಕಾಣಲು ಸಾಧ್ಯ? ಸಂತರನ್ನು ಕಾಣಬೇಕೆಂಬ ಬಯಕೆ ಹೆಚ್ಚಾದರೆ ಅವನನಲ್ಲಿ ಭಕ್ತಿ ಶ್ರದ್ಧೆ ಮತ್ತಷ್ಟು ಹೆಚ್ಚಿ ಅವನ ಬಯಕೆ ಈಡೇರುತ್ತದೆ. ನಮ್ಮ ಮನೆಗಳಿಗೆ ಯಾರನ್ನಾದರೂ ಆಮಂತ್ರಿಸಿದರೆ, ಅವರ ಸ್ವಾಗತಕ್ಕೆ ನಾವು ಎಲ್ಲವನ್ನೂ ಅಣಿಮಾಡಿಕೊಂಡಿರುತ್ತಿರುವ ಹಾಗೆ ಕಾಕಾಜಿ ವೈದ್ಯರ ಬರುವಿಗಾಗಿ ಶಿರ್ಡಿಯಲ್ಲಿ ಎಲ್ಲವೂ ಸಿದ್ಧವಾಗಿತ್ತು.

## ಶ್ಯಾಮ ಅವರ ಹರಕೆಗಳು

ಕಾಕಾಜಿಯವರು ಈ ರೀತಿ ಯೋಚಿಸುತ್ತಿರುವಾಗ ಅವರನ್ನು ಶಿರ್ಡಿಗೆ ಕರೆದುಕೊಂಡು ಹೋಗಲೋಸಗ ಅಪರಿಚಿತನೊಬ್ಬನು ಅವರ

ಮನೆಗೆ ಬಂದನು. ಅವರೇ ಬಾಬಾರವರ ಪರಮ ಭಕ್ತ ಶ್ಯಾಮ. ಅವರು ಈ ಸಮಯಕ್ಕೆ ಸರಿಯಾಗಿ ಕಾಕಾಜಿಯವರ ಮನೆಗೆ ಹೇಗೆ ಬಂದರೆಬುದನ್ನು ಈಗ ನೋಡೋಣ. ಚಿಕ್ಕಂದಿನಲ್ಲಿ ಶ್ಯಾಮ ಅವರಿಗೆ ಬಹಳ ಜ್ವರ ಬಂದಾಗ ಅವರ ತಾಯಿಯು ಮಗನಿಗೆ ಗುಣವಾಗಲಿ ಎಂದು ತಮ್ಮ ಕುಲದೇವತೆಯಾದ ಸಪ್ತಶೃಂಗಿಗೆ ಹರಕೆಯನ್ನು ಹೊತ್ತಿದ್ದರು. ಅಂದರೆ ಜೊತೆಯಲ್ಲಿ ಮಗನನ್ನು ಕರೆದುಕೊಂಡು ಬಂದು ದೇವಿಯ ಪಾದಗಳಿಗೆ ಅರ್ಪಿಸಿ ಸೇವೆ ಮಾಡುತ್ತೇನೆಂದು ಬೇಡಿಕೊಂಡಿದ್ದಳು. ಕೆಲವು ದಿನಗಳ ಮೇಲೆ ಅವರಿಗೆ ಎರಡೂ ಸ್ತನಗಳಲ್ಲಿ ರೋಗವಾಗಿ ಬಹಳ ನೋವನ್ನನುಭವಿಸಿದರು. ಆಗ ಅವರು ಸಪ್ತಶೃಂಗಿಗೆ ಬೆಳ್ಳಿಯ ಸ್ತನಗಳನ್ನು ಮಾಡಿಸಿ ಅರ್ಪಿಸುವೆನೆಂದು ಬೇಡಿಕೊಂಡಿದ್ದರು. ಆದರೆ ಈ ಎರಡೂ ಹರಕೆಗಳನ್ನು ಪೂರೈಸಿರಲಿಲ್ಲ. ಕಡೆಗೆ ಅವರು ಮರಣಾವಸ್ಥೆಯಲ್ಲಿದ್ದಾಗ ಮಗ ಶ್ಯಾಮನನ್ನು ಕರೆದ ಈ ಹರಕೆಗಳನ್ನು ಪೂರೈಸಲು ಹೇಳಿ, ಅವರಿಂದ ವಚನ ತೆಗೆದುಕೊಂಡು ಪ್ರಾಣ ಬಿಟ್ಟರು. ಕೆಲವು ದಿನಗಳ ನಂತರ ಶ್ಯಾಮ ಇದೆಲ್ಲವನ್ನು ಮರೆತು ಬಿಟ್ಟಿದ್ದರು. ಹೀಗೆ ೩೦ ವರ್ಷ ಕಳೆದವು. ಆ ಕಾಲಕ್ಕೆ ಸರಿಯಾಗಿ ಪ್ರಸಿದ್ಧ ಜ್ಯೋತಿಷಿಯೊಬ್ಬರು ಶಿರ್ಡಿಗೆ ಬಂದು ತಂಗಿದರು. ಅವರು ಹೇಳಿದ ಭವಿಷ್ಯವು ಶ್ರೀಮಾನ್ ಬೂಟಿ ಮತ್ತಿತರರ ವಿಷಯದಲ್ಲಿ ನಿಜವಾಗಿತ್ತು. ಶ್ಯಾಮ ಅವರ ತಮ್ಮ ಬಾಪಾಜಿಯವರಿಗೆ ಆ ಜ್ಯೋತಿಷಿ "ನಿಮ್ಮ ಅಣ್ಣ ಸಪ್ತಶೃಂಗಿಗೆ ಎರಡು ಹರಕೆಗಳನ್ನು ಸಲ್ಲಿಸುವೆನೆಂದು ನಿಮ್ಮ ತಾಯಿಗೆ ವಾಗ್ದಾನ ಮಾಡಿರುತ್ತಾರೆ. ಆದರೆ ಅವುಗಳನ್ನು ಇನ್ನೂ ಸಲ್ಲಿಸಲಿಲ್ಲ" ಎಂದು ಹೇಳಿದರು. ಬಾಪಾಜಿಯು ಶ್ಯಾಮ ಅವರಿಗೆ ಈ ಬಗ್ಗೆ ತಿಳಿಸಿದರು. ಇನ್ನು ಕಾಲ ವಿಳಂಬ ಮಾಡುವುದು ಸರಿಯಲ್ಲ ಎಂದು ತಿಳಿದು ಶ್ಯಾಮ ಅಕ್ಕಸಾಲಿಗನ ಬಳಿ ಹೋಗಿ ಎರಡು ಬೆಳ್ಳಿಯ ಸ್ತನಗಳನ್ನು ಮಾಡಿಸಿದರು. ನಂತರ ತಮ್ಮ ಸಪ್ತಶೃಂಗಿ ಎಂದು ಭಾವಿಸಿದ್ದ ಬಾಬಾ ಹತ್ತಿರ ಹೋಗಿ ಅವುಗಳನ್ನು ಅವರ ಮುಂದಿಟ್ಟು ತಮ್ಮನ್ನು ಕೃತಾರ್ಥರನ್ನಾಗಿ ಮಾಡುವಂತೆ ಬೇಡಿದರು.

ಆಗ ಬಾಬಾರವರು "ನೀನೇ ಸ್ವತ: ವಾಣಿಗೆ ಹೋಗಿ ಸಪ್ತಶ್ರಂಗಿಯ ದೇವಿಗೆ ಅವುಗಳನ್ನು ಅರ್ಪಿಸಿ ಬಾ" ಎಂದರು. ಈ ರೀತಿ ಬಾಬಾರವರ ಆಶೀರ್ವಾದವನ್ನು ಪಡೆದು ವಾಣಿಗೆ ಬಂದು ಅರ್ಚಕರನ್ನು ಹುಡುಕುತ್ತ ಕಾಕಾಜಿ ಕಡೆಗೆ ಬಂದರು. ಆಗ ಕಾಕಾಜಿಯವರಿಗೂ ಬಾಬಾ ಅವರನ್ನು ಕಾಣಬೇಕೆಂಬ ಕಳವಳ ಹೆಚ್ಚಾಗಿತ್ತು. ಆ ಸಮಯಕ್ಕೆ ಸರಿಯಾಗಿ ಶ್ಯಾಮ ತಮ್ಮ ಕಾರ್ಯಾರ್ಥವಾಗಿ ಅಲ್ಲಿಗೆ ಬಂದರು!

ಕಾಕಾಜಿಯವರು ಶ್ಯಾಮ ಅವರ ಊರು, ಕುಲ ಮತ್ತು ಗೋತ್ರಗಳನ್ನು ವಿಚಾರಿಸಿ ನಂತರ ಅವರನ್ನು ಆನಂದದಿಂದ ತಬ್ಬಿಕೊಂಡರು. ಅವರ ಪ್ರೀತಿ ಚಿಮ್ಮಿತು. ಶ್ಯಾಮ ತಮ್ಮ ಹರಕೆ ಪೂರೈಸಿ ಪೂಜೆ ಮುಗಿದ ನಂತರ ಇಬ್ಬರೂ ಸಾಯಿಲೀಲೆಗಳ ಕುರಿತು ಮಾತನಾಡಿದರು. ನಂತರ ಇಬ್ಬರೂ ಶಿರ್ಡಿಗೆ ಹೊರಟರು. ಮಸೀದಿ ತಲುಪಿದ ಕೂಡಲೆ ಕಾಕಾಜಿಯವರು ಬಾಬಾ ಅವರ ಪಾದಗಳಿಗೆ ನಮಸ್ಕರಿಸಿದರು. ದೇವತೆ ವಾಣಿಯಂತೆ ಬಾಬಾ ಅವರ ದರ್ಶನ ಪಡೆದ ಮರುಕ್ಷಣದಲ್ಲಿಯೇ ಅವರ ಮನಸ್ಸು ನೆಮ್ಮದಿ ಪಡೆಯಿತು. ಅವರು ಆನಂದಪರವಶರಾದರು. ಆಗ ಕಾಕಾಜಿ "ಇದೆಂತಹ ಅದ್ಭುತ ಶಕ್ತಿ! ಬಾಬಾ ಏನನ್ನೂ ಹೇಳಲಿಲ್ಲ. ಪ್ರಶ್ನೋತ್ತರಗಳಿಲ್ಲ; ಆಶೀರ್ವಾದ ಹೇಳಲಿಲ್ಲ; ಕೇವಲ ದರ್ಶನ ಮಾತ್ರದಿಂದಲೇ ನನಗೆ ಇಷ್ಟು ಸಂತೋಷ ಆಯಿತು!" ಎಂದುಕೊಂಡರು. ತಮ್ಮ ದೃಷ್ಟಿಯನ್ನು ಬಾಬಾ ಅವರ ಚರಣಗಳಲ್ಲಿ ಇಟ್ಟಿದ್ದರಿಂದ ಅವರೊಡನೆ ಏನೂ ಮಾತನಾಡಲೇ ಇಲ್ಲ. ಬಾಬಾ ಅವರ ಲೀಲೆ ಗಳನ್ನು ಕೇಳುತ್ತ ಆನಂದಪರವಶರಾದರು. ಬಾಬಾ ಅವರಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಿ ಚಿಂತೆಯಿಂದ ಮುಕ್ತರಾಗಿ ಶಾಂತಿಯನ್ನು ಪಡೆದರು. ಶಿರ್ಡಿಯಲ್ಲಿ ಹನ್ನೆರಡು ದಿನಗಳ ಕಾಲ ಉಳಿದು ನಂತರ ಬಾಬಾ ಅವರ ಆಶೀರ್ವಾದ ಮತ್ತು ಉಧಿಯನ್ನು ಪಡೆದು ಸ್ವಗ್ರಾಮಕ್ಕೆ ಹಿಂತಿರುಗಿದರು.

## ರಾಹತಾದ ಖುಶಾಲಭಾವು

ಬೆಳಗಿನ ಜಾವದ ಕನಸು ಸಾಮಾನ್ಯವಾಗಿ ನನಸಾಗುವುದೆಂದು ಕೆಲವರ ನಂಬಿಕೆ. ಆದರೆ ಬಾಬಾ ಅವರ ಕನಸುಗಳಿಗೆ ಕಾಲದ ಪರಿಮಿತಿ ಇರಲಿಲ್ಲ.

ಬಾಬಾ ಅವರು ಒಂದು ದಿನ ಕಾಕಾಸಾಹೇಬರನ್ನು ಕುರಿತು ರಾಹತಾದ ಖುಶಾಲಭಾವುರನ್ನು ನೋಡಿ ಬಹು ದಿನಗಳಾದವು ಎಂದು ಹೇಳಿ ಅವರನ್ನು ಶಿರ್ಡಿಗೆ ಕರೆತರುವಂತೆ ಆಜ್ಞಾಪಿಸಿದರು. ಅದರಂತೆ ಕಾಕಾಸಾಹೇಬರು ಟಾಂಗಾ ಮಾಡಿಕೊಂಡು ರಾಹತಾಕ್ಕೆ ಹೋಗಿ ಖುಶಾಲಭಾವು ಅವರಿಗೆ ಬಾಬಾ ಅವರ ಸಂದೇಶ ತಿಳಿಸಿದರು. ಇದನ್ನು ಕೇಳಿದ ಖುಶಾಲಭಾವು ಆಚ್ಚರಿಗೊಂಡರು. ಆಗ ತಾನೆ ಊಟಮಾಡಿ ಮಲಗಿದಾಗ ಬಾಬಾ ಅವರ ಕನಸಿನಲ್ಲಿ ಕಾಣಿಸಿಕೊಂಡು "ಶಿರ್ಡಿಗೆ ಬಾ" ಎಂದರು. ಎಂದು ತಮಗೆ ಬಿದ್ದ ಕನಸನ್ನು ವಿವರಿಸಿದರು. "ಕುದುರೆ ಇರಲಿಲ್ಲ" ಆದುದರಿಂದ ಬಾಬಾ ಅವರಿಗೆ ತಿಳಿಸಿ ಬರಲು ನನ್ನ ಮಗನನ್ನು ಕಳುಹಿಸಿದ್ದೇನೆ" ಎಂದು ಹೇಳಿದರು. ದೀಕ್ಷಿತರು "ನಿಮ್ಮನ್ನು ಕರೆದುಕೊಂಡು ಹೋಗಲೋಸುಗವೇ ನಾನು ಈಗ ಬಂದಿದ್ದೇನೆ" ಎಂದರು. ನಂತರ ಇಬ್ಬರೂ ಶಿರ್ಡಿಗೆ ಬಂದರು.

## ಪಂಜಾಬಿ ರಾಮಲಾಲ

ಒಂದು ಸಾರಿ, ಮುಂಬಯಿಯ ಪಂಜಾಬಿ ಬ್ರಾಹ್ಮಣರಾದ ರಾಮಲಾಲರಿಗೆ ಬಾಬಾ ಅವರು ಕನಸಿನಲ್ಲಿ ಕಾಣಿಸಿಕೊಂಡರು. ಅವರಿಗೆ ಶಿರ್ಡಿಗೆ ಬರುವಂತೆ ಹೇಳಿದರು. ಬಾಬಾ ಅವರು ಅವರಿಗೆ ಸತ್ಪುರುಷರಂತೆ ಕಾಣಿಸಿಕೊಂಡರು. ಅವರಿಗೆ ಹೋಗಲು ಇಚ್ಛೆಯಾಯಿತು. ಆದರೆ ಎಲ್ಲಿಗೆ ಹೋಗಬೇಕೆಂಬುದನ್ನು ತಿಳಿಯದಾಯಿತು. ಯಾರು ದರ್ಶನಕ್ಕೆ ಆಹ್ವಾನಿಸುತ್ತಾರೆಯೋ, ಅವರು ಎಲ್ಲವನ್ನೂ ಸಜ್ಜುಗೊಳಿಸುತ್ತಾರಷ್ಟೆ! ಇಲ್ಲಿಯೂ ಸಹ ಅದೇ

ರೀತಿಯಾಯಿತು. ಅದೇ ದಿನ ಮಧ್ಯಾಹ್ನ ಒಂದು ಅಂಗಡಿಯಲ್ಲಿ ಇದ್ದ ಬಾಬಾ ಅವರು ಫೋಟೋ ರಾಮಲಾಲ ನೋಡಿದರು. ಫೋಟೋ ಕನಸಿನಲ್ಲಿ ಕಾಣಿಸಿಕೊಂಡ ಸತ್ಪುರುಷರನ್ನು ಹೋಲುತ್ತಿತ್ತು. ಈ ಬಗ್ಗೆ ವಿಚಾರಿಸಿದಾಗ, ಆ ಫೋಟೋ ಶಿರ್ಡಿಯ ಶ್ರೀ ಸಾಯಿಬಾಬಾ ಅವರದೆಂದು ಗೊತ್ತಾಗಲು ಮರುದಿನವೇ ರಾಮಲಾಲ ಶಿರ್ಡಿಗೆ ಪ್ರಯಾಣ ಮಾಡಿದರು. ನಂತರ ಕೊನೆಯವರೆಗೆ ಅವರು ಶಿರ್ಡಿಯಲ್ಲಿಯೇ ವಾಸ ಮಾಡಿದರು.

ಈ ರೀತಿ ಬಾಬಾ ತಮ್ಮ ಭಕ್ತರನ್ನು ಶಿರ್ಡಿಗೆ ಬರಮಾಡಿಕೊಂಡು ಅವರವರ ಬಯಕೆಗಳನ್ನು ಈಡೇರಿಸುತ್ತಿದ್ದರು.

**ಶ್ರೀ ಸಾಯಿಪ್ರಣಾಮ**

# ೩೧ನೇ ಅಧ್ಯಾಯ

## ಬಾಬಾ ಅವರು ಸಮ್ಮುಖದಲ್ಲಿ – ಸನ್ಯಾಸಿ ವಿಜಯಾನಂದ – ಬಾಳಾರಾಮ ಮಾನಕರ – ನೂಲಕರ – ಮೇಘಾ – ವ್ಯಾಘ್ರ – ಮೊದಲಾದವರ ಪರಲೋಕ ಯಾತ್ರೆ

ಮನುಷ್ಯ ತನ್ನ ಅಂತ್ಯಕಾಲದಲ್ಲಿ ಮಾಡುವ ವಿಚಾರಗಳಿಗೆ ತಕ್ಕಂತೆ ಫಲವನ್ನು ಪಡೆಯುತ್ತಾನೆ. ಆ ಸಮಯದಲ್ಲಿ ಅವನು ಭಗವತ್ಪಾದಗಳಲ್ಲಿ ತನ್ನ ಧ್ಯಾನವನ್ನಿಟ್ಟರೆ ಜನ್ಮ ಹೀನನಾಗಿ ಮತ್ತೆ ಜನ್ಮ ತಾಳುವುದಿಲ್ಲ. ಆದ್ದರಿಂದಲೇ ಸಂತರು ನಮಗೆ ನಾಮಸ್ಮರಣ ಮಾಡಲು ಉಪದೇಶಿಸುತ್ತಾರೆ. ಕೆಲವು ಸಲ ನಮ್ಮ ಅಂತ್ಯ ಕಾಲದಲ್ಲಿ ನಾವು ಹೌಹಾರಿ ಪರಮಾತ್ಮನನ್ನು ಮರೆತು ನಮ್ಮ ಇಡೀ ಜೀವನ ವ್ಯರ್ಥವಾಗಬಹುದಾಗಿದೆ. ಇದನ್ನು ತಪ್ಪಿಸುವ ಸಲುವಾಗಿ ನಾವು ನಾಮ ಸ್ಮರಣದ ಅಭ್ಯಾಸ ಇಟ್ಟುಕೊಳ್ಳಬೇಕು. ನಮ್ಮ ಅಂತ್ಯದಲ್ಲಿ ನಾವು ಸಂತರಿಗೆ ಸಂಪೂರ್ಣವಾಗಿ ಶರಣಾಗತರಾದರೆ ಅವರು ನಮಗೆ ಸದ್ಗತಿ ದೊರೆಯಲು ಸಹಾಯವೆಸಗುತ್ತಾರೆ. ಇದು ಈ ಕೆಳಗಿನ ಕಥೆಗಳಿಂದ ಸ್ಪಷ್ಟವಾಗುತ್ತದೆ.

### ವಿಜಯಾನಂದ

ವಿಜಯಾನಂದರೆಂಬ ಮದ್ರಾಸಿ ಸನ್ಯಾಸಿಯು ಒಮ್ಮೆ ಮಾನಸ ಸರೋವರಕ್ಕೆ ಹೊರಟರು. ದಾರಿಯಲ್ಲಿ ಬಾಬಾರವರ ಕೀರ್ತಿಯನ್ನು ಕೇಳಿ ಶಿರ್ಡಿಗೆ ಬಂದು ತಂಗಿದ್ದರು. ಅಲ್ಲಿ ಹರಿದ್ವಾರದ ಸೋಮದೇವಸ್ವಾಮಿಯವರನ್ನು ಬೇಟಿ ಮಾಡಿ ಮಾನಸ ಸರೋವರದ ಪ್ರಯಾಣದ ಬಗ್ಗೆ, ವಿಚಾರಿಸಿದರು. ಅವರು ಮಾನಸ ಸರೋವರಕ್ಕೆ ಪ್ರಯಾಣ ಮಾಡಬೇಕಾದರೆ ದಾರಿಯಲ್ಲಿ ಬಹಳ ಕಷ್ಟವನ್ನು ಅನುಭವಿಸಬೇಕೆಂದು ಹೇಳಿ ಅಲ್ಲಿಯ ಹವಾಗುಣ, ಜನಗಳ ನಡತೆ ಎಲ್ಲವನ್ನೂ ವಿವರಿಸಿದರು. ಇದನ್ನು ಕೇಳಿ ಅವರು ಮಾನಸ

ಸರೋವರಕ್ಕೆ ಹೋಗುವ ವಿಚಾರ ಬಿಟ್ಟರು. ನಂತರ ಬಾಬಾರವರ ಬಳಿಗೆ ಹೋಗಿ ನಮಸ್ಕಾರ ಮಾಡಿದರು. ಆಗ ಬಾಬಾರವರು ಕೋಪದಿಂದ "ಈ ಸನ್ಯಾಸಿಯನ್ನು ಇಲ್ಲಿಂದ ಹೊರದೂಡಿ" ಎಂದರು. ವಿಜಯಾನಂದರಿಗೆ ಬಾಬಾ ಅವರ ಮಾತಿನ ಅರ್ಥವಾಗಲಿಲ್ಲ. ಸ್ವಲ್ಪ ನೊಂದುಕೊಂಡು ಅಲ್ಲಿಯೇ ಎಲ್ಲವನ್ನೂ ನೋಡುತ್ತ ಕುಳಿತರು. ಆಗ ಬಾಬಾರವರ ಬೆಳಗಿನ ದರ್ಬಾರ ನಡೆದಿತ್ತು. ಭಕ್ತರೆಲ್ಲರೂ ನೆರೆದಿದ್ದರು. ಅವರು ಅನೇಕ ರೀತಿಯಲ್ಲಿ ಬಾಬಾರವರನ್ನು ಪೂಜಿಸುತ್ತಿದ್ದರು.

ಕೆಲವರು ಅವರ ಪಾದಪೂಜೆ ಮಾಡಿ ತೀರ್ಥ ತೆಗೆದುಕೊಳ್ಳುತ್ತಲೂ, ಮತ್ತೆ ಕೆಲವರು ಗಂಧವನ್ನು ಲೇಪಿಸುತ್ತಲೂ, ಜಾತಿ–ಮತ ಭೇದವನ್ನು ತೊರೆದು ಸೇವೆ ಮಾಡುತ್ತಿದ್ದರು. ಬಾಬಾರವರು ಕೋಪಗೊಂಡಿದ್ದರೂ ಸಹ ವಿಜಯಾನಂದರು ಬಾಬಾರವರ ಮೇಲಿನ ಪ್ರೀತಿಯಿಂದ ಮಸೀದಿಯಲ್ಲಿಯೇ ಕುಳಿತರು.

ಈ ರೀತಿ ಶಿರ್ಡಿಯಿಲ್ಲಿ ಎರಡು ದಿನ ಕಳೆದವು. ಆಗ ಅವರ ತಾಯಿಯವರು ಅತಿ ಅಜಾರಿ ಇರುವರೆಂದು ಪತ್ರ ಬಂದಿತು. ವಿಜಯಾನಂದರು ಬಹಳ ನೊಂದುಕೊಂಡು ಆ ಸಮಯದಲ್ಲಿ ತಾಯಿಯ ಬಳಿ ತಮಗೆ ಇರಲು ಸಾಧ್ಯವಿಲ್ಲ ಎಂದು ಪಶ್ಚಾತ್ತಾಪ ಮಾಡಿಕೊಂಡರು. ಅದರೆ ಬಾಬಾರವರ ಅನುಮತಿ ಇಲ್ಲದೆ ಹೊರಡುವ ಹಾಗಿರಲಿಲ್ಲ. ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಬಾಬಾ ಹತ್ತಿರ ಹೋಗಿ ಹೊರಡಲು ಅನುಮತಿ ಬೇಡಿದರು. ಸರ್ವಜ್ಞರಾದ ಬಾಬಾ ಇದನ್ನರಿತು "ನೀನು ತಾಯಿಯನ್ನು ಬಹಳವಾಗಿ ಪ್ರೀತಿಸುವೆ, ಹಾಗಾದರೆ ಸನ್ಯಾಸವನ್ನೇಕೆ ಸ್ವೀಕರಿಸಿದೆ? ವ್ಯಾಮೋಹ ಮತ್ತು ಮಮತೆ ಸನ್ಯಾಸತ್ವಕ್ಕೆ ವಿರೋಧವಾದವುಗಳಲ್ಲವೇ? ನೀನು ಕೊಠಡಿಗೆ ಹೋಗಿ ಸುಮ್ಮನೆ ಕುಳಿತುಕೋ; ತಾಳ್ಮೆಯಿಂದ ಕೆಲವು ದಿನ ಕಳೆ; ವಾಡಾದಲ್ಲಿ ಅನೇಕ ದರೋಡೆಗಾರರಿದ್ದಾರೆ; ಬಾಗಿಲು ಹಾಕಿಕೋ; ಇಲ್ಲದಿದ್ದರೆ

ಲೂಟಿಮಾಡುತ್ತಾರೆ. ಐಶ್ವರ್ಯ ಮತ್ತು ಸುಖವು ಶಾಶ್ವತವಲ್ಲ. ಮಾನವನಾಗಿ ಹುಟ್ಟಿದ ಮೇಲೆ ಸಾವು ಖಂಡಿತ. ಮೋಹ ಮತ್ತು ಮಮತೆಯನ್ನು ತ್ಯಜಿಸು. ಯಾರು ಶ್ರೀ ಹರಿಯನ್ನೇ ಸ್ಮರಿಸುತ್ತಾರೆಯೋ ಅವನ ಸಹಾಯಕ್ಕೆ ದೇವರು ಹೋಗುತ್ತಾನೆ. ನೀನು ನಿನ್ನ ಪೂರ್ವಜನ್ಮ ಪುಣ್ಯದ ವಿಶೇಷದಿಂದ ಇಲ್ಲಿಗೆ ಬಂದಿರುವೆ. ನಾನು ಹೇಳಿದುದನ್ನು ಗಮನಿಸಿ ನಿನ್ನ ಜೀವಿತೋದ್ದೇಶವನ್ನು ಸಾಧಿಸು. ನಿಷ್ಕಾಮಿಯಾಗಿ ನಾಳೆಯಿಂದ ಭಾಗವತ ಪಾರಾಯಣ ಮಾಡು. ಬಿಡದೆ ಮೂರು ಸಪ್ತಾಹಗಳನ್ನಾಚರಿಸು. ದೇವರು ಮೆಚ್ಚಿ ನಿನ್ನ ದು:ಖಗಳನ್ನು ನಿರ್ಮೂಲ ಮಾಡುತ್ತಾನೆ. ಅಗ ಭ್ರಮೆಯು ಮರೆಯಾಗುತ್ತದೆ. ಶಾಂತಿ ಲಭಿಸುತ್ತದೆ" ಎಂದರು. ನಂತರ ಅವನ ಮರಣದ ಕಾಲವು ಸಮೀಪಿಸಿತೆಂಬುದನ್ನು ತಮ್ಮ ಜ್ಞಾನದೃಷ್ಟಿಯಿಂದ ಬಾಬಾ ತಿಳಿದು ವಿಜಯಾನಂದರಿಗೆ ಯಮದೇವನು ಮೆಚ್ಚುವ 'ಶ್ರೀರಾಮ ವಿಜಯ' ವನ್ನು ಪಾರಾಯಣ ಮಾಡಲು ಹೇಳಿದರು. ಮರುದಿನ ಬೆಳಿಗ್ಗೆ ಸ್ನಾನಮಾಡಿ ಲೇಂಡಿ ತೋಟದ ಪ್ರಶಾಂತವಾದ ವಾತಾವರಣದಲ್ಲಿ ವಿಜಯಾನಂದರು ಭಾಗವತ ಪಾರಾಯಣವನ್ನು ಆರಂಭಿಸಿದರು. ಹೀಗೆ ಎರಡು ಸಪ್ತಾಹ ಮಾಡಿ ಬಳಲಿದ್ದರು. ನಂತರ ಒಂದು ದಿನ ವಾಡಾಕ್ಕೆ ಹಿಂತಿರುಗಿ ಬಡೇಬಾಬಾ ಅವರ ತೊಡೆಯ ಮೇಲೆ ಮಲಗಿದಾಗ ಪರಮಾತ್ಮನ ಸಾನಿಧ್ಯವನ್ನು ಹೊಂದಿದರು. ಬಾಬಾರವರು ಒಂದು ದಿನದ ಮಟ್ಟಿಗೆ ದೇಹವನ್ನು ಕಾಪಾಡುವಂತೆ ಆಜ್ಞೆ ಮಾಡಿದರು. ನಂತರ ಪೋಲಿಸರು ಬಂದು ಪರೀಕ್ಷಿಸಿ ಅಂತ್ಯಕ್ರಿಯೆಗೆ ಅನುಮತಿ ನೀಡಿದರು. ನಂತರ ಮೃತದೇಹವನ್ನು ಸಕಲ ಸಂಪ್ರದಾಯಕ್ಕನುಸಾರವಾಗಿ ತಕ್ಕ ಸ್ಥಳದಲ್ಲಿ ಸಮಾಧಿ ಮಾಡಲಾಯಿತು. ಈ ರೀತಿ ಬಾಬಾ ಆ ಸನ್ಯಾಸಿಗೆ ಸದ್ಗತಿಯನ್ನು ಕೊಟ್ಟರು.

## ಬಾಳಾರಾಮ ಮಾನಕರ

ಬಾಳಾರಾಮ ಮಾನಕರ ಬಾಬಾರವರ ಪರಮ ಭಕ್ತಾಗಿದ್ದರು.

ತಮ್ಮ ಪತ್ನಿಯು ಕಾಲವಾದ ನಂತರ ಮನೆಯ ಜವಬ್ದಾರಿಯನ್ನು ಮಗನಿಗೊಪ್ಪಿಸಿ ಶಿರ್ಡಿಗೆ ಬಂದು ನೆಲೆಸಿದರು. ಅವರ ಅಚಲ ಭಕ್ತಿಯನ್ನು ಮನಗಂಡ ಬಾಬಾ ಆ ಸನ್ಯಾಸಿಗೆ ಅನುಗ್ರಹ ಮಾಡಬೇಕೆಂದು ಇಚ್ಛಿಸಿ ಅವರಿಗೆ ಹನ್ನೆರಡು ರೂಪಾಯಿಗಳನ್ನು ಕೊಟ್ಟು ಮಚ್ಛೇಂದ್ರಗಡದಲ್ಲಿ ವಾಸಿಸುವಂತೆ ಹೇಳಿದರು. ಮಾನಕರರಿಗೆ ಅಲ್ಲಿ ಹೋಗಲು ಇಷ್ಟವಿರಲಿಲ್ಲ. ಬಾಬಾರವರು ಅಲ್ಲಿಗೆ ಹೋಗುವುದರಿಂದ ಪ್ರಯೋಜನ ಇದೆ ಎಂದು ಹೇಳಿ ದಿನಕ್ಕೊಮ್ಮೆಯಾದರೂ ಗಡದ ಮೇಲೆ ಕುಳಿತು ಧ್ಯಾನಾಸಕ್ತರಾಗಲು ಅವರಿಗೆ ಹೇಳಿದರು. ಮಾನನಕರು ಬಾಬಾರವರ ಮಾತಿನಲ್ಲಿ ನಂಬಿಕೆ ಇಟ್ಟು ಮಚ್ಛೇಂದ್ರಗಡಕ್ಕೆ ಬಂದರು. ಅಲ್ಲಿ ಪ್ರಕೃತಿಯ ರಮ್ಯವಾದ ಸೊಬಗನ್ನೂ ಮತ್ತು ಪ್ರಶಾಂತವಾದ ವಾತಾವರಣವನ್ನೂ ನೋಡಿ ಬಾಬಾರವರು ಹೇಳಿದಂತೆ ಧ್ಯಾನ ಮಾಡಲು ಯೋಗ್ಯಸ್ಥಳವೆಂದು ಭಾವಿಸಿದರು. ಕೆಲವು ದಿನಗಳ ನಂತರ ಅವರಿಗೆ ಜ್ಞಾನೋದಯವಾಯಿತು. ಸಾಮಾನ್ಯವಾಗಿ ಭಕ್ತರು ಸಮಾಧಿ–ಸ್ಥಿತಿಯಲ್ಲಿ ದೇವರ ಸಾಕ್ಷಾತ್ಕಾರವಾಗುತ್ತದೆ. ಆದರೆ ಮಾನಕರಿಗೆ ಸಾಮಾನ್ಯ ಸ್ಥಿತಿಯಲ್ಲಿ ದೇವರ ಸಾಕ್ಷಾತ್ಕಾರವಾಯಿತು. ಅವರಿಗೆ ಬಾಬಾರವರ ದರ್ಶನವಾಯಿತು. ಮಾನಕರರು ಬಾಬಾರವರನ್ನು ನೋಡಿ, "ನನ್ನನ್ನೇಕೆ ಇಲ್ಲಿಗೆ ಬರಮಾಡಿದಿರಿ?" ಎಂದು ಕೇಳಲು ಬಾಬಾ ಅವರು "ಶಿರ್ಡಿಯಲ್ಲಿದ್ದಾಗ ನಿನ್ನ ಮನಸ್ಸಿನಲ್ಲಿ ಅನೇಕ ಯೋಚನೆಗಳು ಬರಲಾರಂಭಿಸಿದವು; ನಿನ್ನ ಮನಸ್ಸನ್ನು ಸ್ಥಿಮಿತತಕ್ಕೆ ತರಲೋಸುಗವೇ ನಿನ್ನನ್ನು ಇಲ್ಲಿಗೆ ಬರಮಾಡಿದೆ. ಪಂಚಭೂತಗಳನ್ನೊಳಗೊಂಡ ಈ ಮೂರುವರೆ ಅಡಿ ವ್ಯಕ್ತಿ ಶಿರ್ಡಿಯಲ್ಲಿ ಮಾತ್ರ ಇರುವನೆಂದು ತಿಳಿದುಕೊಂಡೆಯಾ? ನೀನು ಈಗ ನೋಡುತ್ತಿರುವುದು ಬಾಬಾ ಅವರನ್ನೋ ಅಥವಾ ಬೇರೆಯವರನ್ನೋ ಎಂಬುದನ್ನು ನೀನೇ ನಿರ್ಧರಿಸು" ಎಂದರು. ನಂತರ ಮಾನಕರ ಅವರು ಬಾಂದ್ರಾಕ್ಕೆ ಪ್ರಯಾಣ ಬೆಳೆಸಿದರು. ಪುಣೆಯಿಂದ ದಾದರಿಗೆ ರೈಲಿನಲ್ಲಿ ಹೋಗಬೇಕೆಂದು ರೇಲ್ವೆ ನಿಲ್ದಾಣಕ್ಕೆ ಬಂದರು. ಟಿಕೆಟ್ಟು ಕೊಳ್ಳುವ ಜಾಗದಲ್ಲಿ ಬಹಳ ನೂಕು –ನುಗ್ಗಲಿತ್ತು.

ಬೇಗನೆ ಟಿಕೆಟ್ಟು ದೊರೆಯಲಿಲ್ಲ. ಆಗ ಹಳ್ಳಿಯವನೊಬ್ಬನು ಅವನ ಹತ್ತಿರ ಬಂದು "ಎಲ್ಲಿಗೆ ಹೋಗಬೇಕು" ಎಂದು ಕೇಳಲು "ದಾದರಿಗೆ" ಎಂದು ಮಾನಕರ ಹೇಳಿದರು. ಆಗ ಅವನು "ನನಗೆ ಬಹಳ ಜರೂರಾದ ಕೆಲಸವಿದೆ. ನಾನು ಈಗ ಹೋಗಲಾರೆ, ದಯಮಾಡಿ ನನ್ನ ಟಿಕೆಟ್ಟನ್ನು ತೆಗೆದುಕೊಳ್ಳಿರಿ" ಎಂದನು. ಮಾನಕರ ಟಿಕೆಟ್ಟನ್ನು ತೆಗೆದುಕೊಂಡು ಅವನಿಗೆ ಹಣ ಕೊಡುವರಷ್ಟರಲ್ಲಿ ಅವನು ಗದ್ದಲಲ್ಲಿ ಎಲ್ಲಿಯೋ ಮಾಯವಾದನು. ಮಾನಕರ ಹುಡುಕಿದರೂ ಕಾಣಲೇ ಇಲ್ಲ. ರೈಲು ಹೊರಡುವ ತನಕ ಅವರನ್ನು ಹುಡುಕಾಡಿದರು. ಆದರೂ ಅವನ ಪತ್ತೆಯೇ ಆಗಲಿಲ್ಲ. ಮಾನಕರರಿಗೆ ಇದು ಎರಡನೆಯ ಸಾರಿ ಆದ ಸಾಕ್ಷಾತ್ಕಾರ. ಮಾನಕರ ತಮ್ಮ ಮನೆಗೆ ಹೋಗಿ ಕೆಲವು ದಿನ ಇದ್ದು ನಂತರ ಶಿರ್ಡಿಗೆ ಬಂದು ಬಾಬಾ ಅವರ ಸೇವೆ ಮಾಡ ಹತ್ತಿದರು. ಕೊನೆಗೆ ಬಾಬಾ ಅವರ ಆಶೀರ್ವಾದದಿಂದ ಅವರ ಸಮ್ಮುಖದಲ್ಲಿಯೇ ಇಹಲೋಕವನ್ನು ತ್ಯಜಿಸುವ ಯೋಗ ಅವರಿಗೆ ದೊರಕಿತು.

## ತಾತ್ಯಾಸಾಹೇಬ ನೂಲಕರ

ಹೇಮಾಡಪಂತರು ಇವರ ವಿಚಾರವಾಗಿ ಹೆಚ್ಚು ವಿವರಗಳನ್ನು ಕೊಟ್ಟಿಲ್ಲ. ಅವರು ಶಿರ್ಡಿಯಲ್ಲಿ ಹೇಗೆ ಕಾಲವಾದರೆಂಬುದನ್ನು ಮಾತ್ರ ತಿಳಿಸಿರುತ್ತಾರೆ. "ಸಾಯಿಲೀಲಾ" ಮಾಸ ಪತ್ರಿಕೆಯಲ್ಲಿ ಈ ಕೆಳಕಂಡ ವಿವರಣೆಯಿದೆ.

ಸುಮಾರು ೧೯೦೯ರಲ್ಲಿ ಪಂಡರಪುರದಲ್ಲಿ ನಾನಾಸಾಹೇಬ ಚಾಂದೋರಕರ ಅವರು ಮಾಮಲೇದಾರರಾಗಿದ್ದಾಗ, ಇವರು ಅಲ್ಲಿ ನ್ಯಾಯಾಧೀಶರಾಗಿದ್ದರು. ಇಬ್ಬರೂ ಬಹಳ ಸ್ನೇಹಿತರಾಗಿದ್ದರು. ತಾತ್ಯಾ ಅವರಿಗೆ ಸಾಧು -ಸಂತರಲ್ಲಿ ನಂಬಿಕೆ ಇರಲಿಲ್ಲ. ಆದರೆ ನಾನಾಸಾಹೆಬ ಚಾಂದೊರಕರ ಸಾಧು -ಸಂತರ ಭಕ್ತರಾಗಿದ್ದರು. ನಾನಾ ಅವರು ಅವರಿಗೆ ಶ್ರೀ ಸಾಯಿಲೀಲೆಗಳನ್ನು ವಿವರಿಸಿ, ಒಮ್ಮೆ

ಶಿರ್ಡಿಗೆ ಹೋಗಿ ದರ್ಶನ ಪಡೆಯಬೇಕೆಂದು ಪ್ರೇರೇಪಿಸಿದರು. ಆಗ ಅವರು ಎರಡು ಶರತ್ತುಗಳ ಮೇಲೆ ಶಿರ್ಡಿಗೆ ಹೋಗಲು ಒಪ್ಪಿದರು. ಅವು ಯಾವುವೆಂದರೆ, ೧) ಬ್ರಾಹ್ಮಣನಾದವನು ಅಡಿಗೆ ಮಾಡಲು ತಮ್ಮ ಜೊತೆಯಲ್ಲಿ ಬರಬೇಕು. ಮತ್ತು ೨) ಬಾಬಾ ಅವರಿಗೆ ಅರ್ಪಿಸಲು ಒಳ್ಳೆಯ ನಾಗಾಪುರದ ಕಿತ್ತಳೆ ಹಣ್ಣುಗಳು ದೊರೆಯಬೇಕು. ಇವೆರಡೂ ಶರತ್ತುಗಳು ದೇವರ ಕೃಪೆಯಿಂದ ನೆರವೇರಿದವು. ಆಗ ತಾತ್ಯಾ ಅವರು ಶಿರ್ಡಿಗೆ ಹೊರಡಲೇಬೇಕಾಯಿತು. ಮೊದಲು ಮೊದಲು ಬಾಬಾ ಅವರ ಮೇಲೆ ಕೋಪಗೊಂಡರು. ಆಗಾಗ್ಗೆ ತಾತ್ಯಾ ಅವರಿಗೆ ಈ ರೀತಿಯಾದ ಪ್ರಸಂಗಗಳು ಸಂಭವಿಸುತ್ತಿದ್ದವು. ನಂತರ ಬಾಬಾ ಅವರು ದೇವರ ಅವತಾರ ಎಂದು ಅವರು ತಮ್ಮ ಸ್ವಂತ ಅನುಭವದಿಂದಲೇ ಅರಿತರು. ಬಾಬಾ ಅವರಲ್ಲಿ ಆಸಕ್ತಿ ಹುಟ್ಟಿ ತಮ್ಮ ಅಂತ್ಯಕಾಲದ ತನಕ ಶಿರ್ಡಿಯಲ್ಲಿಯೇ ತಂಗಿದರು. ಅಂತ್ಯಕಾಲ ಸಮೀಪಿಸುತ್ತಿರುವಾಗ ಅವರ ಹತ್ತಿರ ಕುಳಿತು ಪುಣ್ಯಗ್ರಂಥಗಳ ಪಾರಾಯಣ ಮಾಡಿ ಅವರಿಗೆ ಬಾಬಾ ಅವರ ಪಾದ ತೀರ್ಥವನ್ನು ಕುಡಿಸಲಾಯಿತು. ಆಗ ಬಾಬಾ ಅವರು ಅವರ ಅಂತ್ಯವನ್ನರಿತು "ತಾತ್ಯಾ ನಮ್ಮನ್ನು ಬಿಟ್ಟು ಅಗಲಿದನು. ಅವನಿಗೆ ಪುನರ್ಜನ್ಮವಿಲ್ಲ" ಎಂದರು.

## ಮೇಘಾ

ಈ ಹಿಂದೆ ೨೮ನೇ ಅಧ್ಯಾಯದಲ್ಲಿಯೇ ಮೇಘಾನ ಕಥೆಯನ್ನು ವಿವರಿಸಿದ್ದೇವೆ. ಮೇಘಾ ತೀರಿಕೊಂಡ ನಂತರ ಶಿರ್ಡಿಯ ಜನರೆಲ್ಲರೂ ಅವನ ಅಂತ್ಯ ಮೆರವಣಿಗೆಯಲ್ಲಿ ಭಾಗವಹಿಸಿದರು. ಬಾಬಾ ಅವರೂ ಸಹ ಜನರೊಡನೆ ಸ್ಮಶಾನಕ್ಕೆ ಹೋಗಿ ಅವನ ಮೃತ ದೇಹದ ಮೇಲೆ ಪುಷ್ಪಗಳನ್ನು ಹಾಕಿದರು. ದಹನ ಕ್ರಿಯೆಗಳಾದ ನಂತರ ಬಾಬಾ ಅವರೂ ಸಹ ಸಾಮಾನ್ಯ ಮನುಷ್ಯರಂತೆ ಕಣ್ಣೀರು ಸುರಿಸಿದರು.

ಭಕ್ತರಿಗೆ ಸದ್ಗತಿಯನ್ನು ನೀಡಿದ ಅನೇಕ ಸಂತರನ್ನು ನಾವು ನೋಡಿದ್ದೇವೆ. ಆದರೆ ಬಾಬಾ ಅವರ ರೀತಿ ಅಪೂರ್ವವಾಗಿದ್ದಿತು.

## ವ್ಯಾಘ್ರ

ಬಾಬಾ ಅವರ ಮಹಾ ಸಮಾಧಿಯ ಮೊದಲು ಏಳು ದಿನಗಳ ಮುಂಚೆ ಈ ಘಟನೆ ಸಂಭವಿಸಿತು. ಕೆಲವು ದರವೇಶಿಗಳು ಒಂದು ಹುಲಿಯನ್ನು ಸರಪಳಿಯಿಂದ ಕಟ್ಟಿ ಚಕ್ಕಡಿ ಗಾಡಿಯಲ್ಲಿ ಹಾಕಿ ಶಿರ್ಡಿಗೆ ತಂದರು. ಅದನ್ನು ಆ ದರವೇಶಿಗಳು ಹಳ್ಳಿಗಳಲ್ಲಿ ಪ್ರದರ್ಶಿಸಿ ದೊರೆತ ಹಣದಿಂದ ತಮ್ಮ ಉಪಜೀವನ ಮಾಡುತ್ತಿದ್ದರು. ಅದು ರೋಗದಿಂದ ನರಳುತ್ತಿತ್ತು. ಎಷ್ಟೋ ಔಷಧಿ ಕೊಡಿಸಿದರೂ ಗುಣವಾಗಲಿಲ್ಲ. ಬಾಬಾ ಅವರ ಕೀರ್ತಿಕೇಳಿ ಆ ಹುಲಿಯೊಂದಿಗೆ ಅವರು ಬಾಬಾ ಅವರ ಕಡೆಗೆ ಬಂದರು. ಬಾಬಾ ಅವರ ಅನುಮತಿ ಪಡೆದು ಅದನ್ನು ಅವರ ಬಳಿಗೆ ತಂದರು. ಮಸೀದಿಯಲ್ಲಿ ಕಾಲಿಡುತ್ತಲೇ ಅದು ಬಾಬಾ ಅವರ ದಿವ್ಯತೇಜಸ್ಸನ್ನು ಸಹಿಸಲಾರದೆ ತಲೆಯನ್ನು ಕೆಳಗೆ ಮಾಡಿ ಅವರನ್ನು ಪ್ರೀತಿಯಿಂದ ನೋಡಿತು. ನಂತರ ಬಾಲವನ್ನು ಅಲ್ಲಾಡಿಸಿ ಅದನ್ನು ಮೂರು ಸಲ ನೆಲಕ್ಕೆ ಹೊಡೆದು, ಶುದ್ದಿ ತಪ್ಪಿ ಬಿದ್ದ ಕೂಡಲೇ ಅದರ ಜೀವ ಹೋಯಿತು. ಇದರಿಂದ ಆ ದರವೇಶಿಗೆ ಅತೀವ ದು:ಖವಾಯಿತು. ಆದರೆ ಅದು ಬಾಬಾ ಅವರ ಬಳಿ ತನ್ನ ಪ್ರಾಣ ಬಿಟ್ಟಿದುದು ಅದರ ಪುಣ್ಯವಿಶೇಷವೇ ಸರಿ ಎಂದು ಅವರು ನಂತರ ಮನಗಂಡರು. ಹುಲಿಯು ದರವೇಶಿಗಳಿಗೆ ಪೂರ್ವಜನ್ಮದಲ್ಲಿ ಋಣಿಯಾಗಿದ್ದಿತು. ಅವರ ಋಣ ತೀರಿಸಿದ ನಂತರ ಅದು ಬಾಬಾ ಅವರ ಸಮ್ಮುಖದಲ್ಲಿ ಅಸು ನೀಗಿತು. ಸಂತರ ಪಾದಗಳಿಗೆರಗಿ ಪ್ರಾಣ ಬಿಡುವ ಜೀವರಾಶಿಗಳೇ ಧನ್ಯ!

ಈ ಘಟನೆ ನಡೆದ ಏಳು ದಿನಗಳ ನಂತರ ಬಾಬಾ ಅವರ ದೇಹಾವಸಾನ ಆಯಿತು.

## ಶ್ರೀ ಸಾಯಿ ಪ್ರಣಾಮ

# ೩೨ನೇ ಅಧ್ಯಾಯ

## ಗುರು ಮತ್ತುದೇವರ ಅನ್ವೇಷಣೆ – ಗೋಖಲೆಬಾಯಿಯ ಉಪವಾಸ

ಸಾಯಿಬಾಬಾ ಅವರು ಒಂದು ಕಾಡಿನಲ್ಲಿ ತಮ್ಮ ಗುರುವಿನಿಂದ ಹೇಗೆ ಪರಮಾತ್ಮನ ಸಾಕ್ಷಾತ್ಕಾರ ಪಡೆದರು ಮತ್ತು ಗೋಖಲೆಯವರ ಉಪವಾಸ ವ್ರತವನ್ನು ಹೇಗೆ, ಮುರಿದರು ಎಂಬುದನ್ನು ಹೇಮಾಡಪಂತರು ಇಲ್ಲಿ ವಿವರಿಸುತ್ತಾರೆ.

ಇಲ್ಲಿ ಹೇಮಾಡಪಂತರು ಈ ಸಂಸಾರವನ್ನು ಬೇರು ಮೇಲಕ್ಕೂ ಕೊಂಬೆಗಳು ಕೆಳಕ್ಕೂ ಇರುವ ಅಶ್ವತ್ಥಮರದ ಉಪಮೆಯಿಂದ ವಿವರಿಸಿರುತ್ತಾರೆ. ಈ ಅಶ್ವತ್ಥಮರದ ಆದಿ ಅಂತ್ಯಗಳು ಗೊತ್ತಿರುವುದಿಲ್ಲ. ನಮ್ಮ ವಿರಕ್ತಿಯೆಂಬ ಬಲವಾದ ಖಡ್ಗದಿಂದ ಈ ವೃಕ್ಷದ ಬೇರುಗಳನ್ನು ಕಡಿದರೆ ಪುನ: ಮರಳಿ ಬರಲಾಗದಂತಹ ಮಾರ್ಗವು ನಮಗೆ ಲಭಿಸುತ್ತದೆ.

ಈ ಪಥದಲ್ಲಿ ಸಾಗಬೇಕಾದರೆ ಮಾರ್ಗದರ್ಶನ ಅಗತ್ಯ. ನಾವು ಎಷ್ಟೇ ವಿದ್ಯಾವಂತರಾಗಿರಲಿ, ಪಾಂಡಿತ್ಯವನ್ನು ಪಡೆದಿರಲಿ, ಮಾರ್ಗದರ್ಶನ ಬೆಂಬಲವಿಲ್ಲದೆ ನಾವು ನಮ್ಮ ನಿಶ್ಚಿತ ಗುರಿಯನ್ನು ಕ್ಷೇಮದಿಂದ ಮುಟ್ಟಲಾರೆವು. ಸರಿಯಾದ ಮಾರ್ಗತೋರಿಸುವ ಮಾರ್ಗದರ್ಶಕನಿದ್ದರೆ ಪ್ರಯಾಣವು ಸುಗಮವಾಗುತ್ತದೆ.

ಬಾಬಾ ಅವರೆ ಹೇಳಿದ ಅವರ ಸ್ವಂತ ಅನುಭವವು ಆಶ್ಚರ್ಯಕರವಾಗಿದೆ. ಇದನ್ನು ಭಕ್ತಿ –ಶ್ರದ್ಧೆಯಿಂದ ಕೇಳುವವರಿಗೆ ಮುಕ್ತಿಮಾರ್ಗದೊರೆಯುತ್ತದೆ.

### ಅನ್ವೇಷಣೆ

ಒಮ್ಮೆ ನಾವು ನಾಲ್ವರು ಧಾರ್ಮಿಕ ಗ್ರಂಥಗಳನ್ನು ಅಭ್ಯಾಸ

ಮಾಡುತ್ತಿದ್ದೆವು. ಇದರಿಂದ ಜ್ಞಾನವುಂಟಾಗಿ ಬ್ರಹ್ಮನನ್ನು ಕುರಿತು ಚರ್ಚೆ ಆರಂಭಿಸಿದೆವು. ಒಬ್ಬನು, "ನಮ್ಮ ಸ್ವಂತ ಪ್ರಯತ್ನದಿಂದಲೇ ಆತ್ಮಜ್ಞಾನವನ್ನು ಪಡೆಯಬೇಕು. ಇತರರಿಗೆ ಅಧೀನ ರಾಗಬಾರದು" ಎಂದನು. ಎರಡನೆಯವನು, "ಯಾರು ತಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಶಕ್ತಿಯುಳ್ಳವರಾಗಿರುತ್ತಾರೆಯೋ ಅವರು ಆಶೀರ್ವದಿಸಲ್ಪಡುತ್ತಾರೆ. ಇತರರ ಸಹಾಯ ಬೇಕಿಲ್ಲ" ಎಂದನು. ಮೂರನೆಂಯವನು "ಈ ಪ್ರಪಂಚವು ಯಾವಾಗಲೂ ಬದಲಾವಣೆಯಾಗುತ್ತಲಿದೆ. ನಿರಾಕಾರನು ನಿತ್ಯನು ಸತ್ಯ – ಮಿಥ್ಯಗಳ ವಿವೇಚನೆ ನಮಗೆ ಇರಬೇಕು" ಎಂದನು. ನಾಲ್ಕನೇಯವನಾದ ನಾನು (ಬಾಬಾ) ಪುಸ್ತಕ ಜ್ಞಾನ ನಿಷ್ಪ್ರಯೋಜಕ ಎಂದು ಹೇಳಿ, ಮುಂದುವರೆದು "ನಮ್ಮ ಕರ್ತವ್ಯಗಳನ್ನು ನಾವು ಮಾಡೋಣ. ನಮ್ಮ ದೇಹ, ಮನಸ್ಸು ಮತ್ತು ಪಂಚ – ಪ್ರಾಣಗಳನ್ನು ಗುರುವಿನ ಪಾದಗಳಲ್ಲಿ ಅರ್ಪಿಸೋಣ. ಗುರುವೇ ಸರ್ವಾಂತರ್ಯಾಮಿ; ಗುರುವೇ ದೇವರು. ಈ ಧೃಡ ನಂಬಿಕೆ ಉಂಟಾಗಬೇಕಾದರೆ ಗುರುವಿನಲ್ಲಿ ಅಪರಿಮಿತವಾದ ಭಕ್ತಿ ಮತ್ತು ಪ್ರೀತಿ ಅಗತ್ಯ" ಎಂದನು. ಈ ರೀತಿ ಚರ್ಚಿಸುತ್ತ ನಾವೂ ನಾಲ್ಕೂ ಜನ ದೇವರನ್ನು ಹುಡುಕುತ್ತ ಒಂದು ಕಾಡಿನಲ್ಲಿ ಹೊರಟೆವು. ಉಳಿದ ಮೂವರು ತಮ್ಮ ಸ್ವಂತ ಪ್ರಯತ್ನ ಮಾಡಲು ಯತ್ನಿಸಿದರು. ಆಗ ಕಾಡು ನಿವಾಸಿ(ವನಜಾರಿ) ಒಬ್ಬನು ನಮ್ಮನ್ನು ದಾರಿಯಲ್ಲಿ ಸಂಧಿಸಿ, "ಈ ಉರಿಬಿಸಿಲಿನಲ್ಲಿ ಎಲ್ಲಿಗೆ ಹೋಗುತ್ತಿದ್ದೀರಿ?" ಎಂದು ಪ್ರಶ್ನಿಸಿದನು. "ಕಾಡಿನಲ್ಲಿ ಹುಡುಕುವುದಕ್ಕೆ" ಎಂದು ಉತ್ತರ ಕೊಟ್ಟೆವು. ಅವನು "ಏನು ಹುಡುಕಾಡಲು?" ಎಂದು ವಿಚಾರಿಸಿದನು. ನಾವು ಅವನಿಗೆ ಮತ್ತೆ ಹಾರಿಕೆಯ ಉತ್ತರ ಕೊಟ್ಟೆವು. ಗೊತ್ತು –ಗುರಿ ಇಲ್ಲದೆ ನಾವು ಅಲೆಯುತ್ತಿರುವೆವೆಂದು ಕನಿಕರದಿಂದ ಅವನು "ಕಾಡಿನಲ್ಲಿ ಪರಿಚಯವಿಲ್ಲದೆ ಏಕಾಂಗಿಯಾಗಿ ಅಲೆಯುವುದು ಸುಲಭವಲ್ಲ. ನೀವು ಇಲ್ಲಿ ಸಂಚರಿಸಬೇಕಾದರೆ, ಈ ದಾರಿಯಲ್ಲಿ ನುರಿತ ಮಾರ್ಗದರ್ಶಕನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕು. ವಿನಾಕಾರಣ ಈ

ಉರಿಬಿಸಿಲಿನಲ್ಲಿ ಅಲೆದು ಯಾಕೆ ಬಳಲುವಿರಿ? ನೀವು ಹುಡುಕಲು ಹೊರಟಿರುವ ಉದ್ದೇಶ ನನಗೆ ಹೇಳುವುದು ಬೇಡ. ಸ್ವಲ್ಪ ಹೊತ್ತು ಕುಳಿತುಕೊಳ್ಳಿ; ಆಹಾರ ತೆಗೆದುಕೊಂಡು ಕೆಲವು ಕಾಲ ವಿಶ್ರಮಿಸಿ, ಅನಂತರ ಹೊರಡಿ. ಯಾವಾಗಲೂ ತಾಳ್ಮೆಯಿಂದಿರಿ" ಎಂದನು. ಅವನ ಮೃದು ನುಡಿಗಳನ್ನು ಲೆಕ್ಕಿಸದೆ ಮುಂದೆ ನಡೆದೆವು. ನಾವು ಸ್ವಯಂ ಪರಿಪೂರ್ಣರು; ನಮಗೆಲ್ಲ ಗೊತ್ತಿದೆ, ಬೇರೊಬ್ಬರ ಅಗತ್ಯ ಇಲ್ಲ ಎಂಬ ಅಹಂಭಾವದಿಂದ ಅಲೆಯತೊಡಗಿದೆವು. ಹೀಗೆ ಅಲೆಯುತ್ತ ದಟ್ಟವಾದ ಅರಣ್ಯದ ಮಧ್ಯದಲ್ಲಿ ಹಾದಿ ತಪ್ಪಿದೆವು. ಅದೃಷ್ಟವಶಾತ್ ನಾವು ಹೊರಟ ಸ್ಥಳಕ್ಕೆ ಬಂದು ಸೇರಿದೆವು. ಆ ವನಜಾರಿ ನಮ್ಮನ್ನು ಪುನ: ಸಂಧಿಸಿ "ನಿಮ್ಮ ಬುದ್ಧಿಯನ್ನೇ ನಂಬಿಕೊಂಡು ದಾರಿ ತಪ್ಪಿದಿರಿ; ವಿಷಯ ಸಣ್ಣದಿರಲಿ, ದೊಡ್ಡದಿರಲಿ, ನಮಗೆ ಸರಿಯಾದ ಮಾರ್ಗ-ದೊರೆಯಲು ಮಾರ್ಗದರ್ಶನ ಅಗತ್ಯ ಹಸಿದ ಹೊಟ್ಟೆಯಲ್ಲಿ ಯಾವುದೇ ವಸ್ತುವಿನ ಅನ್ವೇಷಣೆಯನ್ನು ಮಾಡಬಾರದು. ದೇವರು ಇಚ್ಛಿಸದಿದ್ದಲ್ಲಿ ನಮ್ಮನ್ನು ಯಾರೂ ಸಂಧಿಸುವುದಿಲ್ಲ. ಆಹಾರವನ್ನು ಕೊಡಲು ಬಂದರೆ ತಿರಸ್ಕರಿಸಕೂಡದು. ಬಡಿಸಿದ ಅನ್ನವನ್ನು ಬಿಸಾಟಬಾರದು. ಕೆಲಸಕ್ಕೆ ಹೊರಡುವಾಗ ಆಹಾರವನ್ನು ಕೊಡಲು ಬಂದರೆ ಅದು ಒಳ್ಳೆಯ ಶಕುನ, ಕೆಲಸ ಜಯವಾಗುವುದು" ಎಂದು ಹೇಳಿ ಪುನ: ಆಹಾರವನ್ನು ಕೊಟ್ಟು, ಸ್ವಲ್ಪ ವಿಶ್ರಮಿಸಲು ಹೇಳಿದನು. ಅವನ ಆಹಾರವನ್ನು ಸ್ವೀಕರಿಸದೆ ಆ ಮೂವರು ಹೊರಡಲು ಸಿದ್ಧರಾದರು. ನನಗೆ ಅಲೆದು ಹಸಿವು ಬಾಯಾರಿಕೆ ಆಗಿತ್ತು. ಆ ಕಾಡು ಮನುಷ್ಯನ ಪ್ರೀತಿ ವಿಶ್ವಾಸಗಳು ನನ್ನ ಹೃದಯವನ್ನು ಕಲಕಿದವು. ಮನಸ್ಸು ಕರಗಿತು. ಅವನು ಕೀಳು ಮಟ್ಟದ ಜಾತಿಗೆ ಸೇರಿದವನಾದರೂ ಸಹ ಅವನ ಹೃದಯದಲ್ಲಿ ಪ್ರೀತಿ ವಿಶ್ವಾಸಗಳಿದ್ದವು. ನಾನು ಅವನ ಆಹಾರವನ್ನು ಸ್ವೀಕರಿಸಿದೆನು. ನೀರು ಕುಡಿದೆನು. ಆಗ ಜ್ಞಾನೋದಯದ ನಾಂದಿಯಾಯಿತು.

ಆಗ ಗುರುವು ನನ್ನ ಮುಂದೆ ನಿಂತು "ಏನು ಚರ್ಚೆ ನಡೆಯಿತು?" ಎಂದು ಕೇಳಿದರು. ನಡೆದುದೆಲ್ಲವನ್ನೂ ಅವರಿಗೆ ನಾನು ವಿವರಿಸಿದೆ. ಆಗ ಅವರು "ನಿನಗೆ ನನ್ನೊಡನೆ ಬರಲು ಇಷ್ಟವಿದ್ದರೆ ನಿನಗೆ ಬೇಕಾದುದನ್ನು ತೋರಿಸುತ್ತೇನೆ. ನಾನು ಹೇಳುವುದನ್ನು ಯಾರು ಅಚಲ ವಿಶ್ವಾಸದಿಂದ ನಂಬುತ್ತಾರೆಂಯೋ ಅವರು ವಿಜಯಶಾಲಿಗಳಾಗುತ್ತಾರೆ". ಎಂದು ಹೇಳಿದರು. ನಾನು ಅದಕ್ಕೆ ಒಪ್ಪಿಕೊಂಡೆನು. ಅವರು ನನ್ನನ್ನು ಒಂದು ಬಾವಿಯ ಹತ್ತಿರ ಕರೆದುಕೊಂಡು ಹೋಗಿ ನನ್ನ ಕಾಲುಗಳಿಗೆ ಹಗ್ಗ ಕಟ್ಟಿ ಹತ್ತಿರ ಇದ್ದ ಮರದಿಂದ ತಲೆ ಕೆಳಗೆ ಮಾಡಿ ತೂಗು ಹಾಕಿದರು. ನಾನು ನೀರಿನಿಂದ ಸ್ವಲ್ಪ ಮೇಲಕ್ಕಿದ್ದೆ. ಕೈಗೆ ನೀರು ಸಿಗುವಂತಿರಲಿಲ್ಲ. ಈ ರೀತಿ ನನ್ನನ್ನು ತೂಗು ಹಾಕಿ, ಎಲ್ಲಿಯೋ ಹೊರಟು ಹೋದರು. ಮುಂದೆ ನಾಲ್ಕೈದು ಗಂಟೆಗಳ ನಂತರ ಬಂದು ಮೇಲಕ್ಕೆತ್ತಿ ಹಗ್ಗವನ್ನು ಬಿಚ್ಚಿ "ಚೆನ್ನಾಗಿ ಇದ್ದೀಯಾ" ಎಂದು ಕೇಳಿದರು. "ಅಮಿತಾನಂದದಲ್ಲಿದ್ದೆ! ಅದನ್ನು ನನ್ನಂಥ ಪಾಮರನು ಹೇಗೆ ವಿವರಿಸಲು ಸಾಧ್ಯ?" ಎಂದು ಕೇಳಿದೆನು. ಇದನ್ನು ಕೇಳಿದ ಗುರುವು ಸಂತೋಷದಿಂದ ನನ್ನನ್ನು ಸಮೀಪಕ್ಕೆ ಬರಮಾಡಿಕೊಂಡು ತಲೆಸವರಿ ಅಪ್ಪಿಕೊಂಡರು. ಹಕ್ಕಿ ತನ್ನ ಮರಿಯನ್ನು ನೋಡುವಂತೆ ನನ್ನನ್ನು ನೋಡಿದರು. ತಮ್ಮ ಗುರುಕುಲಕ್ಕೆ ಸೇರಿಸಿಕೊಂಡರು. ಗುರುಕುಲ ಎಷ್ಟು ರಮ್ಯವಾಗಿತ್ತು! ಅಲ್ಲಿರುವಾಗ ನಾನು ನನ್ನ ಮಾತಾಪಿತರರನ್ನು ಮರೆತೆನು. ಮೋಹ–ಮಮತೆಗಳು ದೂರವಾದವು. ಮುಕ್ತನಾದೆನು. ಯಾವಾಗಲೂ ಅವರೊಡನೆ ಇದ್ದು ಗುರುವಿನ ಅನನ್ಯ ಅವಧಾನಗಳನ್ನು ಆಚರಿಸತೊಡಗಿದೆ. ನನ್ನ ಗುರುವೇ ನನಗೆ ತಾಯಿ, ತಂದೆ ಮತ್ತು ಬಳಗ–ಸರ್ವಸ್ವವೂ ಅವರೇ. ಸಮಸ್ತ ಇಂದ್ರಿಯಗಳು ತಮ್ಮ ಸ್ಥಳವನ್ನು ಬಿಟ್ಟು, ನನ್ನ ನೇತ್ರಗಳಲ್ಲಿ ಒಂದುಗೂಡಿ ನನ್ನ ದೃಷ್ಟಿಯು ಗುರುವಿನಲ್ಲಿ ನೆಲೆಗೊಳ್ಳುವಂತೆ ಆಯಿತು. ಆ ರೀತಿ ಗುರುವೇ ನನ್ನ ಧ್ಯಾನದ ವಸ್ತುವಾದರು.

ಬೇರೆ ತರದ ಅನೇಕ ಶಾಲೆಗಳಿವೆ. ಶಿಷ್ಯರು ಅಲ್ಲಿಗೆ ಜ್ಞಾನ ಸಂಪಾದನೆಗೋಸ್ಕರ ಹೋಗಿ ಹಣವನ್ನು ವೆಚ್ಚಮಾಡಿ ಕೊನೆಗೆ ನಿರಾಶರಾಗುತ್ತಾರೆ. ಅಲ್ಲಿ ಗುರುವು ತನ್ನ ಜ್ಞಾನವನ್ನು ಪ್ರಶಂಸೆ ಮಾಡಿಕೊಳ್ಳುತ್ತಾನೆ. ತಮ್ಮ ಘನತೆಯನ್ನು ತಾನೇ ಹೊಗಳಿಕೊಳ್ಳುತ್ತಾನೆ. ಎಲ್ಲವೂ ತೋರಿಕೆ ಮಾತ್ರ. ಅವನ ಹೃದಯವು ಮಾತ್ರ ಮೃದುವಾಗಿರುವುದಿಲ್ಲ. ಶಿಷ್ಯರ ಮುಂದೆ ಆತ್ಮಪ್ರಶಂಸೆ ಮಾಡಿಕೊಂಡು ಅವರ ಹೃದಯವನ್ನಾಕರ್ಷಿಸಲು ಪ್ರಯತ್ನ ಪಡುತ್ತಾನೆ. ಆದರೆ ಅದು ಶಿಷ್ಯರಿಗೆ ಉಪಯೋಗವಿಲ್ಲ. ಆತ್ಮಜ್ಞಾನದ ದೃಷ್ಟಿಯಿಂದ ಅವನಲ್ಲಿ ಯಾವ ಸತ್ವವೂ ಇರುವುದಿಲ್ಲ. ಇಂಥ ಶಾಲೆಗಳಿಂದ ಶಿಷ್ಯರಿಗೆ ಆಗುವ ಪ್ರಯೋಜನವಾದರೂ ಏನು? ಆದರೆ ಈ ಹಿಂದೆ ತಿಳಿಸಿದ ಗುರುವಿನ ವಿಷಯವೇ ಬೇರೆ. ಅವರು ಅದ್ವಿತೀಯ ಗುಣದ ವ್ಯಕ್ತಿ. ಅವರ ದಯೆಯಿಂದ ಜ್ಞಾನವು ತನಗೆ ತಾನಾಗಿಯೇ ಲಭಿಸುತ್ತದೆ.

ಈ ನಾಲ್ಕು ಜನಗಳಲ್ಲಿ ಒಬ್ಬ ಕೆಲವು ಧಾರ್ಮಿಕ ವಿಧಿಗಳನ್ನು ಹೇಗೆ ಆಚರಿಸಬೇಕೆಂಬುದನ್ನು ಅರಿತವನಿದ್ದ. ಇನ್ನೊಬ್ಬನು ಜ್ಞಾನವನ್ನು ಪಡೆದಿರುವೆನೆಂಬ ಅಹಂಭಾವ ಇದ್ದವನಾಗಿದ್ದ. ಮೂರನೆಯವ ಪರಮಾತ್ಮನೇ ಸರ್ವ ಕ್ರಿಯಾತ್ಮಕನು ಎಂದು ನಂಬಿದ್ದ. ಅವರು ಚರ್ಚೆ ಮಾಡುತ್ತಿದ್ದಾಗ ಪರಮಾತ್ಮನ ಪ್ರಶ್ನೆ ಉದ್ಭವಿಸಿ ಅವರು ದೇವರ ಅನ್ವೇಷಣೆಗೆ ತೊಡಗಿದರು. ವಿವೇಕಶಾಲಿಯೂ ವಿಚಾರಪರರೂ ಆದ ಅವತಾರ ರೂಪಿ ಸಾಯಿಬಾಬಾ ನಾಲ್ಕನೇಯವರು. ಅವರೇ ಸ್ವತಃ ಬ್ರಹ್ಮನ ಅವತಾರ ರೂಪಿಯಾಗಿದ್ದರೂ ಇತರರೊಡನೆ ಸೇರಿ ಹಾಗೆ ಏಕೆ ವರ್ತಿಸಿದರೆಂದು ಕೆಲವರು ಕೇಳಬಹುದು. ಅದಕ್ಕೆ ಬಾಬಾ ಅವರು ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಮತ್ತು ಅವರಿಗೆ ಪಾಠ ಕಲಿಸುವುದಕ್ಕಾಗಿ ಈ ರೀತಿ ಮಾಡಿದರೆಂದು ಹೇಳಬಹುದು. ಅವರೇ ಅವತಾರ ರೂಪಿಯಾಗಿ ಕೆಳಮಟ್ಟದ ವನಜಾರಿಯ ಆದರಾತಿಥ್ಯವನ್ನು ಸ್ವೀಕರಿಸಿ ಆಹಾರವನ್ನು "ಬ್ರಹ್ಮ" ನೆಂದು ಬಗೆದು ಊಟ ಮಾಡಿದರು.

ಆ ವನಚಾರಿಯು ಆದರಾತಿಥ್ಯವನ್ನು ಸ್ವೀಕರಿಸದೆ ಹೋದ ಮೂವರು ಹೇಗೆ ಕಷ್ಟಪಟ್ಟರು ಎಂಬುದನ್ನು ತಿಳಿಯಪಡಿಸಿದ್ದಾರೆ. ಗುರುವಿನ ಸಹಾಯವಿಲ್ಲದೆ ಜ್ಞಾನಾರ್ಜನೆ ಮಾಡಲು ಅಸಾಧ್ಯವೆಂದು ಕಾರ್ಯರೂಪದಲ್ಲಿ ತೋರಿಸಿದ್ದಾರೆ.

ತಾಯಿ, ತಂದೆ ಮತ್ತು ಪರಮಾತ್ಮನನ್ನು ಪೂಜಿಸಿ ಗೌರವಿಸಬೇಕೆಂದೂ ಧಾರ್ಮಿಕ ಗ್ರಂಥಗಳ ಪಠಣ ಮಾಡಬೇಕೆಂದೂ ಶ್ರುತಿಯಲ್ಲಿ ಹೇಳಿದೆ. ಮನಶ್ಶುದ್ಧಿಯನ್ನು ಹೊಂದಿದರೆ ಮಾತ್ರ ಆತ್ಮಜ್ಞಾನ ದೊರಕುತ್ತದೆ. ಇಂದ್ರಿಯಗಳಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ ಆತ್ಮವನ್ನು ಸಂಧಿಸಲಾರವು. ಅದಕ್ಕೆ ಗುರುವಿನ ದಯೆ ಅತ್ಯಗತ್ಯ. ವಿಷಯದ ವಸ್ತುಗಳಾದ ಧರ್ಮ, ಅರ್ಥ, ಕಾಮ ಇವುಗಳನ್ನು ನಾನು ನಮ್ಮ ಸ್ವಪ್ರಯತ್ನದಿಂದ ಹೊಂದಬಹುದು. ಆದರೆ ಮೋಕ್ಷವನ್ನು ಪಡೆಯಲು ಗುರುವಿನ ಸಹಾಯ ಅತ್ಯಗತ್ಯ. ಬಾಬಾರವರ ದರ್ಬಾರಿನಲ್ಲಿ ಅನೇಕರು ಬಂದು ತಮ್ಮ ಪಾತ್ರವನ್ನು ವಹಿಸಿದರು. ಜ್ಯೋತಿಷಿಗಳು ಬಂದು ಭವಿಷ್ಯ ನುಡಿಯುತ್ತಿದ್ದರು, ಅಧಿಕಾರಿಗಳೂ, ಕುಲೀನರೂ, ಸಾಮಾನ್ಯರೂ, ಸನ್ಯಾಸಿಗಳೂ, ಯೋಗಿಗಳೂ, ಬಡವರೂ, ಸಂಗೀತಗಾರರೂ ಬಾಬಾರವರ ದರ್ಶನಕ್ಕಾಗಿ ಬರುತ್ತಿದ್ದರು. ಅಲ್ಲದೆ ಕುರುಡರು, ಕುಂಟರು ನಾಟಕದವರು ಕೂಡಾ ಬಂದು ಬಾಬಾ ಅವರ ಅನುಗ್ರಹ ಪಡೆದು ಕೃತಾರ್ಥರಾಗುತ್ತಿದ್ದರು.

## ಗೋಖಲೆಯವರ ಉಪವಾಸ

ಬಾಬಾ ಎಂದೂ ಉಪವಾಸ ಮಾಡುತ್ತಿರಲಿಲ್ಲ. ಇತರರನ್ನು ಸಹ ಉಪವಾಸ ಮಾಡಲು ಬಿಡುತ್ತಿರಲಿಲ್ಲ. ಉಪವಾಸ ಮಾಡುವವನ ಮನಸ್ಸು ನೆಮ್ಮದಿಯಿಂದ ಇರುವುದಿಲ್ಲ. ಆದ್ದರಿಂದ ಅವನು ಪಾರಮಾರ್ಥಿಕ ಜ್ಞಾನವನ್ನು ಪಡೆಯುವುದು ಹೇಗೆ ತಾನೆ ಸಾಧ್ಯ? ಬರಿಯ ಹೊಟ್ಟೆಯಲ್ಲಿದ್ದರೆ ಪರಮಾತ್ಮನ ಸಾಕ್ಷಾತ್ಕಾರವಾಗಲಾರದು. ಆತ್ಮವನ್ನು ಮೊದಲು ತೃಪ್ತಿಪಡಿಸಬೇಕು. ಆಹಾರದ ಅಂಶವು ಸ್ವಲ್ಪ

ಮಟ್ಟಿಗಾದರೂ ಉದರದಲ್ಲಿಲ್ಲದಿದ್ದರೆ ನಾವು ಯಾವ ನೇತ್ರಗಳಿಂದ ಪರಮಾತ್ಮನನ್ನು ನೋಡಬೇಕು? ಯಾವ ನಾಲಿಗೆಯಿಂದ ಅವನ ಗುಣಗಳನ್ನು ಹೊಗಳಬೇಕು? ಯಾವ ಕರ್ಣಗಳಿಂದ ಅವನ ಗುಣ ಕೀರ್ತನೆಯನ್ನು ಆಲಿಸಬೇಕು? ಸಂಕ್ಷಿಪ್ತವಾಗಿ ಹೇಳುವದಾದರೆ, ನಮ್ಮ ಸರ್ವ ಅವಯವಗಳಿಗೆ ತಕ್ಕ ಆಹಾರ ದೊರೆತು ಅವು ತೃಪ್ತಿಯಿಂದಿದ್ದಾಗ ಮಾತ್ರ ಪರಮಾತ್ಮನನ್ನು ಕೂಡಲು ಅವಶ್ಯವಾದ ಭಕ್ತಿ ಮತ್ತು ಇತರ ಮಾರ್ಗಗಳನ್ನು ಅನುಸರಿಸಬಹುದು. ಆದುದರಿಂದ ಉಪವಾಸ ಮಾಡುವುದಾಗಲಿ ಅತಿಯಾಗಿ ತಿನ್ನುವುದಾಗಲಿ ಒಳ್ಳೆಯದಲ್ಲ. ಆಹಾರದಲ್ಲಿ ಸಂಯಮವಿದ್ದರೆ ದೇಹಕ್ಕೂ ಒಳ್ಳೆಯದು; ಮನಸ್ಸಿಗೂ ಒಳ್ಳೆಯದು.

ಶ್ರೀಮತಿ ಗೋಖಲೆಯವರು ಬಾಬಾ ಭಕ್ತರಾದ ಕಾಶೀಬಾಯಿ ಕಾನಿಟಕರ ಅವರಿಂದ ಪರಿಚಯ ಪತ್ರ ಪಡೆದು ಶಿರ್ಡಿಗೆ ಬಂದರು. ಬಾಬಾ ಅವರ ಮುಂದೆ ಮೂರು ದಿನ ಉಪವಾಸ ಮಾಡಬೇಕೆಂದು ಅವರ ನಿರ್ಧಾರ. ಇದಕ್ಕೆ ಹಿಂದಿನ ದಿನ ಬಾಬಾ ದಾದಾ ಕೇಳಕರ ಅವರನ್ನು ಕುರಿತು "ಹೋಳಿ ದಿನದಂದು ನಾನು ನನ್ನ ಮಕ್ಕಳನ್ನು ಉಪವಾಸ ಮಾಡಲು ಬಿಡುವುದಿಲ್ಲ. ಹಾಗೆ ಅವರು ಉಪವಾಸ ಮಾಡುವುದಾದರೆ ನಾನು ಏಕೆ ಇಲ್ಲಿರಬೇಕು?" ಎಂದು ಕೇಳಿದ್ದರು. ಮರುದಿನ ಶ್ರೀಮತಿ ಗೋಖಲೆಯವರು ಬಾಬಾ ಕೇಳಕರ ಅವರ ಸಂಗಡ ಬಾಬಾ ಅವರ ಬಳಿಗೆ ಹೋಗಿ ನಿಂತಾಗ ಅವರು "ಉಪವಾಸ ಮಾಡಬೇಕಾದ ಅಗತ್ಯವಿಲ್ಲ. ದಾದಾ ಅವರ ಮನೆಗೆ ಹೋಗಿ ಹೂರಣದ ಹೋಳಿಗೆಯನ್ನು ಮಾಡಿ, ಮಕ್ಕಳಿಗೂ ಕೊಟ್ಟು ನೀನೂ ಸಹ ಊಟ ಮಾಡು" ಎಂದರು. ಹುಣ್ಣಿಮೆ ದಿನ ಆಗಲೇ ಪ್ರಾರಂಭವಾಗಿದ್ದವು. ದಾದಾ ಅವರ ಪತ್ನಿಯು ಅಸ್ಪರ್ಶವಾಗಿ ಮನೆಗೆ ಅಡಿಗೆ ಮಾಡಲು ಯಾರೂ ಇರಲಿಲ್ಲ. ಬಾಬಾ ಅವರ ಮಡಿ ಸಮಯೋಚಿತವಾಗಿದ್ದಿತು. ಶ್ರೀಮತಿ ಗೋಖಲೆಯವರು ಅವರ ಮನೆಗೆ ಹೋಗಿ ಅಡುಗೆ ತಯಾರಿಸಿ ಎಲ್ಲರೊಡನೆ ತಾವೂ ಊಟ ಮಾಡಿದರು.

ಬಾಬಾ ತಮ್ಮ ಬಾಲ್ಯ ಜೀವನದ ಬಗ್ಗೆ ಈ ರೀತಿ ಹೇಳಿರುತ್ತಾರೆ :

"ನಾನಿನ್ನೂ ಚಿಕ್ಕವನಾಗಿದ್ದೆ. ಉದರ ನಿರ್ವಹಣೆಗೆ ಕೆಲಸ ಹುಡುಕುತ್ತ ಬೀಡಗಾಂವಕ್ಕೆ ಹೋದೆ. ಅಲ್ಲಿ ನನಗೊಂದು ಕೆಲಸ ದೊರಕಿತು. ಬಹಳ ಕಷ್ಟಪಟ್ಟು ಕೆಲಸ ಮಾಡಿದೆ. ಮಾಲಕ ನನ್ನ ಕೆಲಸವನ್ನು ಮೆಚ್ಚಿದನು. ನನ್ನೊಡನೆ ಇನ್ನೂ ಮೂವರು ಕೆಲಸ ಮಾಡುತ್ತಿದ್ದರು. ಒಬ್ಬನಿಗೆ ೫೦ ರೂ. ಇನ್ನೊಬ್ಬನಿಗೆ ೧೦೦ ರೂ. ಮೂರನೆಯವರಿಗೆ ೧೫೦ ರೂ. ಸಂಬಳ ಕೊಡುತ್ತಿದ್ದರು. ನನಗೆ ಇದೆಲ್ಲದರ ಎರಡರಷ್ಟು ಕೊಟ್ಟರು. ನನ್ನ ಬುದ್ಧಿವಂತಿಕೆ ಮತ್ತು ದಕ್ಷತೆಯನ್ನು ನೋಡಿ ಮಾಲಕ ಪ್ರೀತಿಯಿಂದ ನನಗೆ ಬಟ್ಟೆ, ಪೇಟಾ, ಒಂದು ಶಲ್ಯ ಇವುಗಳನ್ನು ಬಹುಮಾನವಾಗಿ ಕೊಟ್ಟರು. ಆದರೆ ನಾನು ಅವುಗಳನ್ನು ಉಪಯೋಗಿಸದೆ ಹಾಗೆಯೇ ಇಟ್ಟೆನು. ಮಾನವರು ಕೊಡುವುದು ಬಹುಕಾಲ ಉಳಿಯಲಾರದು. ಆದರೆ ನನ್ನ ಸರಕಾರ (ದೇವರು) ಕೊಡುವುದು ಮಾತ್ರ ಕೊನೆಯ ತನಕ ಉಳಿಯುತ್ತದೆ ಮತ್ತು ಪರಿಪೂರ್ಣವಾದುದಾಗಿರುತ್ತದೆ. ಮಾನವನು ಕೊಡುವ ಯಾವ ಬಹುಮಾನವೂ ದೇವರು ದಯಪಾಲಿಸುವ ಬಹುಮಾನಕ್ಕೆ ಸರಿಯಾಗಲಾರದು. ನನ್ನ ದೇವರು ತೆಗೆದುಕೋ, ತೆಗೆದುಕೋ ಎಂದು ಎಷ್ಟು ಹೇಳಿದರೂ ನನ್ನ ಹೇಳಿಕೆಯನ್ನು ಯಾರು ಗಮನಿಸುವುದಿಲ್ಲ. ನನ್ನ ಭಂಡಾರ ಧಾರ್ಮಿಕ ಸಂಪತ್ತು ಅದು ಯಾವಾಗಲೂ ತುಂಬಿರುತ್ತದೆ. ಅದನ್ನು ಅಗೆದು ಗಾಡಿಯಲ್ಲಿ ತುಂಬಿಕೊಂಡು ಹೋಗಿ ಎಂದು ಹೇಳುತ್ತಾನೆ. ಪುಣ್ಯವಂತ ಮಾತೆಯ ಪುತ್ರನು ಮಾತ್ರ ಈ ಐಶ್ವರ್ಯವನ್ನು ಪಡೆಯಲು ಸಾಧ್ಯ. ನನ್ನ ಫಕೀರನ ನುಡಿಗಳೇ ಭಗವಂತನ ಲೀಲೆಗಳು ನನ್ನ ದೇವರು ವಿಶಿಷ್ಟನಾದವನು. ನನ್ನ ವಿಚಾರವೇನು? ಮಣ್ಣಿನಿಂದ ಹುಟ್ಟಿದ ಈ ದೇಹ ಒಂದು ದಿನ ಮಣ್ಣಿನೊಡನೆ ಸೇರುತ್ತದೆ. ಉಸಿರು ವಾಯುವಿನೊಡನೆ ಐಕ್ಯವಾಗುತ್ತದೆ. ಈ ಸಮಯ ಪುನ: ಬರಲಾರದು. ನಾನೆಲ್ಲಿಯೋ ಹೋಗುತ್ತೇನೆ. ಎಲ್ಲಿಯೋ ಕುಳಿತುಕೊಳ್ಳುತ್ತೇನೆ. ಆದರೆ ಮಾಯೆಯು ನನ್ನನ್ನು ಬಿಡುವುದಿಲ್ಲ.

ನನ್ನ ಭಕ್ತರ ಬಗ್ಗೆ ನನಗೆ ಚಿಂತೆ ಇರುತ್ತದೆ. ನನ್ನ ವಚನಗಳನ್ನು ಸ್ಮರಿಸುವವರಿಗೆ ಅಮೋಘವಾದ ಆನಂದ ದೊರೆಯುತ್ತದೆ."

**ಶ್ರೀ ಸಾಯಿ ಪ್ರಣಾಮ**

# ೩೩ನೇ ಅಧ್ಯಾಯ

## ಚೇಳುಕಡಿತ ಮತ್ತು ಗ್ರಂಥಿ ಜ್ವರ ಗುಣವಾದುದು – ಜಾಮನೇರ ಪವಾಡ – ನಾರಾಯಣರಾವ ಅವರ ರೋಗ – ಅಪ್ಪಾಸಾಹೇಬ ಕುಲಕರ್ಣಿ ಬಾಳಾಬುವಾ – ಹರಿಭಾವು ಕರ್ಣಿಕ ಇವರ ಕಥೆಗಳು

ಮಹಾಯೋಗಿಗಳ ದಯಾಪೂರಿತ ದೃಷ್ಟಿಯು ನಮ್ಮ ಪಾಪಗಳನ್ನು ಹೋಗಲಾಡಿಸಿ ನಮ್ಮನ್ನು ಪುನೀತರನ್ನಾಗಿ ಮಾಡುತ್ತದೆ. ಅವರೊಡನೆ ಆಡುವ ಸಾಮಾನ್ಯ ಸಂಭಾಷಣೆಯು ನಮಗೆ ಸದುಪದೇಶವಾಗಿ ಶಾಶ್ವತವಾದ ಆನಂದವು ದೊರಕುವಂತಾಗುತ್ತದೆ. ಅವರಲ್ಲಿ " ನಮ್ಮದು ನಿಮ್ಮದು" ಎಂಬ ತಾರತಮ್ಯ ಇರುವುದಿಲ್ಲ. ಅವರು ಋಣವನ್ನು ನಾವು ಜನ್ಮಜನ್ಮಾಂತರಗಳಲ್ಲಿಯೂ ತೀರಿಸಲಾಗುವುದಿಲ್ಲ.

## ಉಧಿಯ ಮಹಿಮೆ

ಬಾಬಾ ಅವರು ಸರ್ವರಿಂದಲೂ ದಕ್ಷಿಣೆಯನ್ನು ಪಡೆದು ಅದನ್ನು ದಾನ ಧರ್ಮಗಳಿಗೆ ಉಪಯೋಗಿಸಿ ಉಳಿದ ಹಣದಲ್ಲಿ ಕಟ್ಟಿಗೆ ತೆಗೆದುಕೊಳ್ಳುತ್ತಿದ್ದರೆಂಬುದನ್ನು ಆಗಲೇ ತಿಳಿಸಿದ್ದೇವೆ. ಕಾಷ್ಟವನ್ನು ಅಗ್ನಿಕುಂಡ (ಧುನಿ) ಯಲ್ಲಿ ಹಾಕಿ ಅದನ್ನು ಅನವರತವೂ ಬಾಬಾ ಉರಿಸುತ್ತಿದ್ದರು. ಈ ಧುನಿಯ ಬೂದಿಯೇ 'ಉಧಿ' ಭಕ್ತರು ಶಿರ್ಡಿ ಬಿಟ್ಟು ಹೊರಡುವಾಗ ಬಾಬಾ ಇದನ್ನು ಅವರಿಗೆ ಕೊಡುತ್ತಿದ್ದರು.

ಬಾಬಾ ಅವರು ಈ ಉಧಿಯಿಂದ ಏನನ್ನು ಸೂಚಿಸಿರುತ್ತಾರೆ ಎಂಬುದನ್ನು ಈಗ ಪರ್ಯಾಲೋಚಿಸೋಣ. ಇದರಿಂದ ಈ ಪ್ರಪಂಚದಲ್ಲಿ ಎಲ್ಲವೂ ಬೂದಿಯಂತೆ ನಶ್ವರವಾದುದು ಎಂದು ಬಾಬಾ ತಿಳಿಸಿರುತ್ತಾರೆ. ಎಂದಾದರೊಮ್ಮೆ ಪಂಚೇಂದ್ರಿಯಗಳನ್ನೊಳಗೊಂಡ ಈ ದೇಹವು ಭೋಗಾಪೇಕ್ಷೆಗಳ ನಂತರ ನೆಲಕ್ಕುರಳಿ ಬೂದಿಯಾಗುವುದು ಖಂಡಿತ. ಇದನ್ನು ಜ್ಞಾಪಿಸಲೋಸುಗವೇ ಬಾಬಾ ಅವರು ಉಧಿ ಹಂಚುತ್ತಿದ್ದರು. ಬ್ರಹ್ಮನೊಬ್ಬನೇ ನಿತ್ಯನು. ಈ ಪ್ರಪಂಚವು

ಅನಿತ್ಯವಾದುದು. ಈ ಪ್ರಪಂಚದಲ್ಲಿ ಪುತ್ರನಾಗಲಿ, ಮಾತಾ-ಪಿತರಾಗಲಿ, ಪತ್ನಿಯಾಗಲಿ, ಯಾರೂ ನಮ್ಮವರಲ್ಲ. ಈ ಪ್ರಪಂಚಕ್ಕೆ ಬರುವಾಗ ನಾವು ಒಬ್ಬರೇ ಬಂದೆವು; ಹೋಗುವಾಗಲೂ ಒಬ್ಬರೇ ಹೋಗುತ್ತೇವೆ. ಎಂದೂ ಬಾಬಾ ತಿಳಿಸುತ್ತಾರೆ. ಉಧಿಯಿಂದ ಬಾಬಾರವು ಅನೇಕ ಭೌತಿಕ ಮತ್ತು ಮಾನಸಿಕ ರೋಗಗಳನ್ನು ಗುಣ ಮಾಡುತ್ತಿದ್ದರು. ಮತ್ತು ಈಗಲೂ ಗುಣವಾಗುತ್ತಿವೆ. ಸತ್ಯ ಮತ್ತು ಮಿಥ್ಯದ ವಿವೇಚನೆಯ ತತ್ವವನ್ನೂ, ವಿರಕ್ತಿಯನ್ನೂ ಈ ಉದಿ ಮತ್ತು ದಕ್ಷಿಣೆಯ ರೂಪದಿಂದ ಭಕ್ತರಿಗೆ ತಿಳಿಸಲು ಬಾಬಾ ಪ್ರಯತ್ನಪಟ್ಟರು. ಉಧಿಯು ವಿವೇಚನೆಯನ್ನೂ, ದಕ್ಷಿಣೆಯು ವಿರಕ್ತಿಯನ್ನೂ ಉಪದೇಶಿಸುತ್ತದೆ. ಈ ಪ್ರಪಂಚವೆಂಬ ಮಾಯೆಯ ಸಾಗರವನ್ನು ದಾಟಬೇಕಾದರೆ ಇವೆರಡೂ ಅವಶ್ಯಕ ಸಾಯಿಬಾಬಾ ತಮ್ಮ ಭಕ್ತರಿಂದ ದಕ್ಷಿಣೆ ಕೇಳಿ ತೆಗೆದುಕೊಂಡು ಅವರು ಹೊರಡುವಾಗ ಉಧೀ ಕೊಟ್ಟು ಕಳುಹಿಸುತ್ತಿದ್ದರು. ಸ್ವಲ್ಪ ಉಧಿಯನ್ನು ಭಕ್ತರ ಹಣೆಗೆ ಹಚ್ಚಿ ತಲೆ ಸವರಿ ಆಶೀರ್ವದಿಸುತ್ತಿದ್ದರು. ಬಾಬಾ ಅವರು ಕೆಲವು ಸಲ ಆನಂದಭರಿತರಾಗಿ ಉಧಿಯನ್ನು ಕುರಿತು ಹಾಡುತ್ತಿದ್ದರು.

"ರಮತೆ ರಾಮ ಆಯೋಜಿ ಆಯೋಜಿ"

"ಉದಿಯಾಂಕಿ ಗೋನಿಯಾ ಲಾವ್ಹೋಜಿ"

ಎಂದು ಸ್ಪಷ್ಟವಾಗಿಯೂ ಮಧುರವಾಗಿಯೂ ಬಾಬ ಹಾಡುತ್ತಿದ್ದರು.

ಇದು ಉಧಿಯ ಅಧ್ಯಾತ್ಮಿಕ ಸ್ವರೂಪ. ಇದಕ್ಕೆ ವ್ಯವಹಾರಿಕ ಅರ್ಥವೂ ಸಹ ಉಂಟು. ಇದರಿಂದ ಸಂಪತ್ತು, ಅಭಿವೃದ್ಧಿಮುಂತಾದ ಅನೇಕ ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಗುರಿಗಳೆರಡನ್ನೂ ಹೊಂದಬಹುದಾಗಿದೆ. ಈಗ ಉಧಿಯ ಮಹಿಮೆಯನ್ನು ಕುರಿತು ಕೆಲವು ಅನುಭವಗಳನ್ನು ನೋಡೋಣ.

ನಾಶಿಕದ ಶ್ರೀ ನಾರಾಯಣರಾವ ಜಾನಿ ಅವರು ಬಾಬಾ ಅವರ ಪರಮ ಭಕ್ತರಾಗಿದ್ದರು. ಇವರು ಬಾಬಾ ಅವರ ಮತ್ತೊಬ್ಬ ಭಕ್ತರಾದ ಶ್ರೀ ರಾಮಚಂದ್ರ ವಾಮನ ಮೋಡಕ ಎಂಬವರ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಒಂದು ಸಲ ಅವರು ತಮ್ಮ ಮಾತೆಯೊಂದಿಗೆ ಶಿರ್ಡಿಗೆ ಬಂದರು. ಆಗ ಬಾಬಾ ಅವರು "ಬೇರೆಯವರ ನೌಕರಿ ಕೆಲಸ ಮಾಡುವುದು ಸಾಕು. ನೀನೇ ಸ್ವತಂತ್ರ ಉದ್ಯೋಗ ಆರಂಭಿಸು" ಎಂದರು. ಕೆಲವು ದಿನಗಳ ನಂತರ ಬಾಬಾರವರ ಮಾತು ನಿಜವಾಯಿತು. ಮೋಡಕ ಅವರು ನೌಕರಿ ಬಿಟ್ಟು ನಾರಾಯಣರಾವ್ ಸ್ವತ: "ಆನಂದಾಶ್ರಮ" ಎಂಬ ಹೊಟೇಲನ್ನು ಆರಂಭಿಸಿದರು. ಅದು ಬಹಳ ಚೆನ್ನಾಗಿ ನಡೆಯಿತು. ಒಂದು ದಿನ ಅವರ ಸ್ನೇಹಿತರೊಬ್ಬರಿಗೆ ಚೇಳು ಕಚ್ಚಿತು. ನೋವು ಬಲವಾಯಿತು. ಉಧಿಯು ಇಂಥ ಸಂದರ್ಭಗಳಲ್ಲಿ ಬಹಳ ಗುಣಕಾರಿಯಾದುದು. ಅದನ್ನು ಚೇಳು ಕಚ್ಚಿದ ಸ್ಥಳದಲ್ಲಿ ಹಚ್ಚಿದರೆ ಬೇಗನೆ ಗುಣವಾಗುವುದು. ಇದನ್ನರಿತ ನಾರಾಯಣರಾವ ಜಾನಿ ಉಧಿಯನ್ನು ಹುಡುಕಿ ವಿಫಲರಾದರು. ಆಗ ಬಾಬಾ ಅವರು ಫೋಟೋದ ಮುಂದೆ ಹೋಗಿ ಅಲ್ಲಿ ಉರಿಯುತ್ತಿದ್ದ ಊದಬತ್ತಿಯ ಬೂದಿಯನ್ನು ತೆಗೆದುಕೊಂಡು ಬಾಬಾ ಅವರ ಸಹಾಯವನ್ನು ಪ್ರಾರ್ಥಿಸಿ ಅದನ್ನೇ ಉಧಿಯೆಂದು ಭಾವಿಸಿ ಚೇಳು ಕಡಿದ ಭಾಗಕ್ಕೆ ಹಚ್ಚಿದರು. ಸ್ವಲ್ಪ ಹೊತ್ತಿನಲ್ಲಿಯೇ ಸ್ನೇಹಿತರಿಗೆ ಗುಣವಾಯಿತು.

## ಗ್ರಂಥಿ ಜ್ವರ

ಬಾಂದ್ರಾದಲ್ಲಿ ಸಾಯಿಬಾಬಾ ಅವರ ಭಕ್ತನೊಬ್ಬನಿಗೆ ಬೇರೆ ಒಂದು ಊರಿನಲ್ಲಿ ಇದ್ದ ತನ್ನ ಮಗಳಿಗೆ ಗ್ರಂಥಿ ಜ್ವರ ಅಂಟಿದೆ ಎಂದು ತಿಳಿಯಿತು. ಅವನ ಹತ್ತಿರ ಆಗ ಉಧಿ ಇರಲಿಲ್ಲ. ಅದಕ್ಕೋಸ್ಕರ ನಾನಾಸಾಹೇಬರಿಗೆ ಹೇಳಿ ಕಳುಹಿಸಿದನು. ಈ ಸುದ್ದಿ ನಾನಾ ಅವರಿಗೆ ಠಾಣಾ ರೇಲ್ವೆ ನಿಲ್ದಾಣದ ಬಳಿ ಮುಟ್ಟಿತು. ಆಗ ಅವರ ಹತ್ತಿರವೂ ಉಧಿ ಇರಲಿಲ್ಲ. ಅವರು ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಬಾಬಾ

ಅವರನ್ನು ಧ್ಯಾನಿಸಿ ತಮ್ಮ ಪತ್ನಿಯ ಹಣೆಗೆ ಹಚ್ಚಿ ಅದನ್ನೇ ತನ್ನ ಸ್ನೇಹಿತರಿಗೆ ಕೊಟ್ಟರು. ಅವರು ಇದನ್ನು ತೆಗೆದುಕೊಂಡು ತನ್ನ ಮಗಳ ಮನೆಗೆ ಹೋಗಿ ನೋಡಲು ನಾನಾಸಾಹೇಬರು ಠಾಣಾ ರೇಲ್ವೆ ನಿಲ್ದಾಣದಲ್ಲಿ ಬಾಬಾ ಅವರ ಸಹಾಯವನ್ನು ಅಪೇಕ್ಷಿಸಿ ಪ್ರಾರ್ಥನೆ ಮಾಡಿದ್ದಾಗಿನಿಂದ ಮಗಳಿಗೆ ಗುಣ ಬರುತ್ತಿದ್ದುದನ್ನು ನೋಡಿ ಆನಂದ ಪರವಶರಾದರು.

## ಜಾಮನೇರ ಪವಾಡ

ಶಿರ್ಡಿಯಿಂದ ನೂರು ಮೈಲು ದೂರದಲ್ಲಿದ್ದ ಖಾನದೇಶ ಜಿಲ್ಲೆಯ ಜಾಮನೇರದಲ್ಲಿ ಸುಮಾರು ೧೯೦೪-೫ ರಲ್ಲಿ ಶ್ರೀ ನಾನಾಸಾಹೇಬ ಚಾಂದೋಡಕರ ಮಾಮಲೇದಾರರಾಗಿದ್ದರು. ಅಲ್ಲಿ ಅವರ ಮಗಳಾದ ಮೈನಾತಾಯಿ ಪ್ರಸವ ವೇದನೆಯಿಂದ ಪರಿಸ್ಥಿತಿ ಹದಗೆಟ್ಟು ೪-೫ ದಿನ ನರಳುತ್ತಿದ್ದಳು. ನಾನಾ ಅವಳಿಗೆ ಅನೇಕ ಔಷಧಿ ಕೊಡಿಸಿದರೂ ಗುಣವಾಗಲಿಲ್ಲ. ಆಗ ಬಾಬಾ ಅವರನ್ನು ಧ್ಯಾನಿಸಿ ಅವರ ಸಹಾಯ ಬೇಡಿದರು. ಆಗ ಶಿರ್ಡಿಯಲ್ಲಿ ಬಾಪೂಗೀರ ಬುವಾ ಎಂಬ ಗೋಸಾವಿ ಖಾನದೇಶಕ್ಕೆ ಹೊರಡಲು ಸಿದ್ಧರಾಗಿದ್ದರು. ಆಗ ಬಾಬಾ ಅವರು ಅವರನ್ನು ಕರೆದು "ದಾರಿಯಲ್ಲಿ ಜಾಮನೇರಿಗೆ ಹೋಗಿ ಅಲ್ಲಿ ವಿಶ್ರಮಿಸಿ ಉಧಿಯನ್ನು ಮತ್ತು ಅರತಿಯನ್ನೂ ನಾನಾಸಾಹೇಬರಿಗೆ ಕೊಡು" ಎಂದರು. ಬಾಪೂಗೀರ ಬುವಾ ತಮ್ಮ ಹತ್ತಿರ ಕೇವಲ ಎರಡು ರೂಪಾಯಿಗಳಿದ್ದು ಜಳಗಾಂವ ತನಕ ಮಾತ್ರ ಪ್ರಯಾಣ ಬೆಳೆಸಬಹುದೆಂದೂ, ಅಲ್ಲಿಂದ ೩೦ ಮೈಲಿಗಳಿರುವ ಜಾಮನೇರಿಗೆ ಹೋಗಲು ಸಾಧ್ಯವಿಲ್ಲವೆಂದೂ ತಿಳಿಸಿದರು. ಅದಕ್ಕೆ ಬಾಬಾ "ಹೆದರಬೇಡ, ಎಲ್ಲವೂ ಸರಿ ಹೋಗುತ್ತದೆ" ಎಂದರು. ಆಗ ಬಾಬಾ ಅವರು ಶ್ಯಾಮ ಅವರನ್ನು ಕರೆದು ಬೇಗ ಆರತಿ ಬರೆಯುವಂತೆ ಹೇಳಿ (ಮಾಧವ ಅಡಕರ ಬರೆದಿರುವ ಪ್ರಸಿದ್ಧ ಆರತಿ) ಅದರ ಪ್ರತಿಯನ್ನು ಉಧಿಯೊಡನೆ ಅವರ ಕೈಗಿತ್ತು ನಾನಾಸಾಹೇಬರಿಗೆ ಕೊಡಲು ಹೇಳಿದರು. ಬಾಬಾ

ಅವರ ಮಾತಿನಲ್ಲಿ ಪೂರ್ಣ ನಂಬಿಕೆ ಇಟ್ಟು ಬಾಪೂಗೀರ ಅವರು ಜಳಗಾಂವಕ್ಕೆ ರಾತ್ರಿ ಎರಡು ಗಂಟೆಗೆ ಬಂದರು. ಆಗ ಅವರ ಹತ್ತಿರ ಎರಡು ಆಣೆಗಳು ಮಾತ್ರ ಇದ್ದವು. ಅಷ್ಟು ಹೊತ್ತಿಗೆ ಸರಿಯಾಗಿ, ಬಾಪೂಗೀರ ಬುವಾ ಎಂಬುವರಾರು? ಎಂದು ಕೇಳುತ್ತ ಒಬ್ಬ ಸಿಪಾಯಿ ಬಂದನು. ಆಗ ಬಾಪೂಗೀರ ಅವರು ಅವನ ಕಡೆಗೆ ಹೋಗಿ ತಾವೇ ಬಾಪೂಗೀರರೆಂದು ಹೇಳಿಕೊಂಡರು. ಆಗ ಅವನು ತಾನು ನಾನಾಸಾಹೇಬರಿಂದ ಕಳುಹಿಸಲ್ಪಟ್ಟಿರುವೆನೆಂದು ಹೇಳಿ, ಗೋಸಾವಿಯನ್ನು ಕರೆದುಕೊಂಡು ಹೋಗಿ ಸುಂದರವಾದ ಕುದುರೆಗಳನ್ನು ಕಟ್ಟಿದ ಟಾಂಗಾದಲ್ಲಿ ಕೂಡ್ರಿಸಿಕೊಂಡು ಹೊರಟನು. ಟಾಂಗಾ ಜೋರಾಗಿ ಸಾಗಿತು. ಬೆಳಗು ಮುಂಜಾನೆ ಅವರು ಒಂದು ಹಳ್ಳದ ಹತ್ತಿರ ಬಂದರು. ಶಿಪಾಯಿ ಕುದುರೆಗಳಿಗೆ ನೀರು ಕುಡಿಸಲು ಅವುಗಳನ್ನು ಬಿಚ್ಚಿ ಹಳ್ಳಕ್ಕೆ ಒಯ್ದನು. ನಂತರ ತಾನು ತಂದಿದ್ದ ಬುತ್ತಿಯನ್ನು ಬಿಚ್ಚಿ ಬಾಪೂಗೀರ ಅವರಿಗೆ ಕೊಟ್ಟು ಊಟ ಮಾಡಲು ಹೇಳಿದನು. ಅವನ ಗಡ್ಡ, ಮೀಸೆ, ಉಡುಪುಗಳನ್ನು ನೋಡಿ ಅವನು ಮಹಮ್ಮದೀಯನೆಂದು ಗೋಸಾವಿ ಭಾವಿಸಿ ಅನುಮಾನಿಸಲು ಅವನು ತಾನು ಹಿಂದೂ ಎಂದೂ, ನಾನಾ ಅವರೇ ಆಹಾರವನ್ನು ಕಳುಹಿಸಿದ್ದರೆಂದೂ ಹೇಳಿದನು. ನಂತರ ಇಬ್ಬರೂ ಉಪಹಾರ ಮಾಡಿ ಪುನಃ ಹೊರಟರು. ಸೂರ್ಯೋದಯಕ್ಕೆ ಜಾಮನೇರ ಮುಟ್ಟಿದರು. ಆಗ ಬಾಪೂಗೀರ ಮೂತ್ರ ವಿಸರ್ಜನೆಗೆ ಹೋದರು. ಅವರು ಪುನಃ ಬರುವಷ್ಟರಲ್ಲಿ ಟಾಂಗಾ ಅಥವಾ ಶಿಪಾಯಿ ಯಾರೂ ಕಾಣಲಿಲ್ಲ. ನಂತರ ನಾನಾರವರ ಮನೆಯನ್ನು ಹುಡುಕಿಕೊಂಡು ಹೋಗಿ ತಾವು ಶಿರ್ಡಿಯ ಬಾಪೂಗೀರರೆಂದೂ ಬಾಬಾ ಅವರು ಉದಿ ಮತ್ತು ಆರತಿಯನ್ನು ಕೊಟ್ಟು ಕಳುಹಿಸಿರುತ್ತಾರೆಂದೂ ಹೇಳಿ ಅವನ್ನು ಅವರ ಕೈಗಿತ್ತರು. ಆಗ ಶ್ರೀಮತಿ ಮೈನಾತಾಯಿಗೆ ನೋವು ಬಲವಾಗಿತ್ತು. ಕೂಡಲೆ ಉಧಿಯನ್ನು ನೀರಿನಲ್ಲಿ ಹಾಕಿ ಅವಳಿಗೆ ಕುಡಿಯಲು ಕೊಟ್ಟು ಆರತಿ ಹಾಡಿದರು. ಬಾಬಾ ಅವರ ಸಹಾಯವು ಬಹಳ

ಸಮಯೋಚಿತವಾಗಿದೆ ಎಂದುಕೊಂಡರು. ಸ್ವಲ್ಪ ಹೊತ್ತಿನಲ್ಲಿಯೇ ಮೈನಾತಾಯಿಗೆ ನಿರ್ವಿಘ್ನ ಪ್ರಸೂತಿಯಾಯಿತು. ನಂತರ ಗೋಸಾವಿ ನಾನಾಸಾಹೇಬರನ್ನು ಕುರಿತು " ನೀವು ಶಿಪಾಯಿ ಮತ್ತು ಟಾಂಗಾ ಕಳುಹಿಸಿದುದಕ್ಕೆ ನನ್ನ ಅಭಿನಂದನೆಗಳು" ಎಂದರು. ಆಗ ನಾನಾ ಅಚ್ಚರಿಗೊಂಡು "ಶಿರ್ಡಿಯಿಂದ ಯಾರೂ ಬರುವುದು ನನಗೆ ತಿಳಿದಿರಲಿಲ್ಲ. ನಾನು ಯಾರನ್ನೂ ಕಳುಹಿಸಿರಲಿಲ್ಲ!" ಎಂದರು. ಇದು ಎಂತಹ ಪವಾಡ!

## ಭಕ್ತ ನಾರಾಯಣರಾವ

ಭಕ್ತ ನಾರಾಯಣರಾವ ಅವರಿಗೆ ತಮ್ಮ ಜೀವಿತಕಾಲದಲ್ಲಿ ಎರಡು ಸಾರಿ ಬಾಬಾ ಅವರ ದರ್ಶನ ಪಡೆಯುವ ಸುಯೋಗ ಲಭಿಸಿತು. ೧೯೧೮ರಲ್ಲಿ ಬಾಬಾ ಅವರ ಸಮಾಧಿಯಾದ ನಂತರ ಮೂರು ವರ್ಷದ ಮೇಲೆ ಅವರು ಪುನ: ಶಿರ್ಡಿಗೆ ಬರಲು ಪ್ರಯತ್ನ ಪಟ್ಟರು ಸಾಧ್ಯವಾಗಲಿಲ್ಲ. ಬಾಬಾ ಅವರ ಮಹಾಸಮಾಧಿಯಾದ ಒಂದು ವರ್ಷದೊಳಗೆ ನಾರಾಯಣರಾವ ಅಸ್ವಸ್ಥರಾಗಿ ಹಾಸಿಗೆ ಹಿಡಿದರು. ಅನೇಕ ಔಷಧಿಗಳನ್ನು ತೆಗೆದುಕೊಂಡರೂ ಗುಣವಾಗಲಿಲ್ಲ. ಆಗ ಒಂದು ದಿನ ರಾತ್ರಿ ಬಾಬಾ ಅವರು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು "ಚಿಂತೆಯನ್ನು ಬಿಡು. ನಾಳೆಯಿಂದಲೇ ಗುಣವಾಗುತ್ತದೆ; ಇನ್ನೊಂದು ವಾರದಲ್ಲಿ ನೀನು ಎದ್ದು ಕುಳಿತುಕೊಳ್ಳಲು ಸಮರ್ಥನಾಗುವೆ" ಎಂದರು. ಕನಸು ನನಸಾಯಿತು.

ಬಾಬಾ ಅವರು ದೇಹ ನಿಮಿತ್ತ ಜೀವಂತರಾಗಿದ್ದರೆ ಅಥವಾ ಅದನ್ನು ತ್ಯಜಿಸಿದುದರಿಂದ ಕಾಲವಾದರೆ? ಇಲ್ಲ ......ಅವರು ನಿತ್ಯರು. ಮೃತ್ಯುಂಜಯರು. ಯಾರಾದರೂ ಅವರನ್ನು ಒಂದು ಸಲ ಮನಸಾರೆ ಪ್ರೀತಿಸಿದರೆ, ಅವರ ಬಳಿಗೆ ಧಾವಿಸಿ ಬಾಬಾ ಸಹಾಯವೆಸಗುತ್ತಾರೆ.

## ಅಪ್ಪಾಸಾಹೇಬ ಕುಲಕರ್ಣಿ

೧೯೧೭ರಲ್ಲಿ ಅಪ್ಪಾಸಾಹೇಬ ಕುಲಕರ್ಣಿ ಅವರ ಸಮಯ ಬಂದಿತು. ಅವರಿಗೆ ಠಾಣಾ ಜಿಲ್ಲೆಗೆ ವರ್ಗವಾಯಿತು. ಅಂದಿನಿಂದ ಅವರು ಬಾಳಾಸಾಹೇಬ ಭಾಟೆಯವರು ಕೊಟ್ಟ ಬಾಬಾ ಅವರ ಫೋಟೋ ಶ್ರದ್ಧೆ ಮತ್ತು ಭಕ್ತಿಯಿಂದ ಪೂಜೆ ಮಾಡುತ್ತಿದ್ದರು. ಪ್ರತಿದಿನವೂ ಫೋಟೋಕ್ಕೆ ಗಂಧ, ಪುಷ್ಪ, ನೈವೇದ್ಯ ಅರ್ಪಿಸುತ್ತಿದ್ದರು. ಅವರು ಯಾವಾಗಲೂ ಬಾಬಾ ಅವರನ್ನೇ ಎವೆಯಿಕ್ಕದೆ ಧ್ಯಾನಿಸುತ್ತಿದ್ದರು. ಬಾಬಾ ಅವರ ಫೋಟೋ ಶ್ರದ್ಧೆಯಿಂದ ನೋಡಿದರೆ ಅವರನ್ನು ಪ್ರತ್ಯಕ್ಷ ನೋಡಿದಂತೆಯೇ ಎಂದು ಹೇಳಿದರೆ ತಪ್ಪಾಗಲಾರದು. ಈ ಕೆಳಕಂಡ ಕಥೆಯು ಇದನ್ನು ಉದಾಹರಿಸುತ್ತದೆ.

## ಬಾಳಾಬುವಾ ಸುತಾರ

ಮುಂಬಯಿಯ ಭಜನಕಾರರಾದ ಬಾಳಾಬುವಾ ಸುತಾರ ಎಂಬುವರು ಮೊಟ್ಟ ಮೊದಲು ೧೯೧೭ರಲ್ಲಿ ಶಿರ್ಡಿಗೆ ಬಂದರು. ಅವರು ಬಾಬಾ ಅವರಿಗೆ ನಮಸ್ಕಾರಿಸಿದಾಗ ಬಾಬಾ "ಇವನನ್ನು ನಾನು ನಾಲ್ಕು ವರ್ಷಗಳಿಂದಲೂ ಬಲ್ಲೆ" ಎಂದರು. ಶಿರ್ಡಿಗೆ ಅದೇ ಅವರ ಮೊದಲ ಬೆಟ್ಟಿಯಾದುದರಿಂದ ಬಾಳಾಬುವಾ ಅವರಿಗೆ ಆಶ್ಚರ್ಯವಾಯಿತು. ಯೋಚಿಸತೊಡಗಿದರು. ಅನಂತರ ನಾಲ್ಕು ವರ್ಷಗಳ ಹಿಂದೆ ಸಾಯಿಬಾಬಾ ಅವರ ಫೋಟೋಕ್ಕೆ ನಮಸ್ಕರಿಸಿದ್ದು ಜ್ಞಾಪಕಕ್ಕೆ ಬಂದಿತು. ಆಗ ಅವರಿಗೆ ಬಾಬಾ ಅವರ ಮಾತುಗಳ ಅರ್ಥವಾಯಿತು. ಆಗ ಅವರು "ಸಂತರು ಎಂಥ ಜ್ಞಾನಿಗಳು! ಸರ್ವಾಂತರ್ಯಾಮಿಗಳು! ಅವರಿಗೆ ತಮ್ಮ ಭಕ್ತರ ಮೇಲೆ ಎಷ್ಟು ಪ್ರೀತಿ! ನಾನು ಬಾಬಾ ಅವರ ಫೋಟೋಕ್ಕೆ ನಮಸ್ಕರಿಸಿದ್ದೆ. ಶ್ರದ್ಧೆ ಭಕ್ತಿಗಳಿಂದ ಫೋಟೋ ನೋಡಿದರೆ ಅವರನ್ನೆ ಸ್ವತಃ ನೋಡಿದಂತೆ" ಎಂದು ಮನಸ್ಸಿನಲ್ಲಿ ಅಂದುಕೊಂಡರು.

ಈಗ ಮತ್ತೆ ಅಪ್ಪಾಸಾಹೇಬ ಕುಲಕರ್ಣಿ ಅವರ ಕಥೆ: ಅವರು ಠಾಣಾದಲ್ಲಿ ಇದ್ದಾಗ ಭೀವಂಡಿಗೆ ಆಗಾಗ್ಗೆ ಹೋಗಬೇಕಾಗುತ್ತಿತ್ತು. ಹೋದರೆ ಒಂದು ವಾರದ ತನಕ ಹಿಂತಿರುಗುತ್ತಿರಲಿಲ್ಲ. ಈ ರೀತಿ ಠಾಣಾದಿಂದ ಅವರು ಊರಿಗೆ ಹೋದಾಗ ಒಂದು ಆಶ್ಚರ್ಯಕರವಾದ ಘಟನೆ ನಡೆಯಿತು. ಮಧ್ಯಾಹ್ನದ ಸಮಯ, ಫಕೀರನೊಬ್ಬನು ಅಪ್ಪಾಸಾಹೇಬರ ಮನೆಗೆ ಬಂದನು. ಅವನ ರೂಪ-ರೇಖೆಗಳು ಬಾಬಾ ಅವರ ಫೋಟೋ ಹೋಲುತ್ತಿದ್ದವು. ಆಗ ಕುಲಕರ್ಣಿಯವರ ಮಕ್ಕಳು "ನೀವು ಶಿರ್ಡಿಯ ಸಾಯಿಬಾಬಾ ಏನು?" ಎಂದು ಕೇಳಿದರು. ಅದಕ್ಕೆ ಫಕೀರನು "ಅಲ್ಲ..... ನಾನು ಅವರ ಶಿಷ್ಯ. ಬಾಬಾ ಅವರು ನಿಮ್ಮ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಾ ಎಂದು ಹೇಳಿ ಕಳುಹಿಸಿದ್ದಾರೆ" ಎಂದನು. ನಂತರ ದಕ್ಷಿಣೆ ಕೇಳಿದನು. ಶ್ರೀಮತಿ ಕುಲಕರ್ಣಿ ಅವರು ಅವನಿಗೆ ಒಂದು ರೂಪಾಯಿ ಕೊಟ್ಟರು. ಆಗ ಅವನು ಅವರಿಗೆ ಒಂದು ಉಧಿ ಪಟ್ಟಣವನ್ನು ಕೊಟ್ಟು "ಪ್ರತಿದಿನವೂ, ಬಾಬಾ ಅವರ ಫೋಟೋದ ಮುಂದಿಟ್ಟು ಇದನ್ನು ಪೂಜೆ ಮಾಡಿ" ಎಂದು ಹೇಳಿ ಹೊರಟು ಹೋದನು.

ಅಪ್ಪಾಸಾಹೇಬರ ಕುದುರೆಗೆ ಬಹಳ ಕಾಯಿಲೆಯಾಗಿದ್ದುದರಿಂದ ಅವರು ಭೀವಂಡಿಯಿಂದ ಕೆಲಸಕ್ಕಾಗಿ ಮುಂದೆ ಪ್ರಯಾಣ ಮಾಡಲಾಗಲಿಲ್ಲ. ಆದುದರಿಂದ ಅವರು ಮನೆಗೆ ಹಿಂತಿರುಗಿದರು. ಪತ್ನಿಯಿಂದ ಫಕೀರನ ವಿಷಯವೆಲ್ಲವೂ ತಿಳಿಯಿತು. ಅವರ ಹೆಂಡತಿ ಫಕೀರನಿಗೆ ಒಂದು ರೂಪಾಯಿ ದಕ್ಷಿಣೆ ಕೊಟ್ಟಿದುದನ್ನೂ ತಿಳಿಸಿದಳು. ಆಗ ಅಪ್ಪಾ "ನಾನಿದ್ದರೆ ಹತ್ತು ರೂಪಾಯಿಗಳಿಗಿಂತ ಕಡಿಮೆ ದಕ್ಷಿಣೆ ಕೊಡುತ್ತಿರಲಿಲ್ಲ." ಎಂದರು. ಕೂಡಲೆ ಆಹಾರವನ್ನು ಕೂಡಾ ತೆಗೆದುಕೊಳ್ಳದೆ ಫಕೀರನನ್ನು ಹುಡುಕಲು ಹೊರಟರು. ಅವನು ಸಿಗಲಿಲ್ಲ. ಬರಿಯ ಹೊಟ್ಟೆಯಲ್ಲಿ ಪರಮಾತ್ಮನ ಅನ್ವೇಷಣೆ ಮಾಡಬಾರದೆಂದು ಬಾಬಾ ಹೇಳಿದ್ದು ಅವರು ಸ್ಮರಿಸಿಕೊಂಡರು. ಕಾರಣ ಊಟವಾದ

ನಂತರ ಕುಲಕರ್ಣಿಯವರು ವಿಹಾರಕ್ಕೋಸ್ಕರ ತಮ್ಮ ಸ್ನೇಹಿತ ಚಿತ್ರೆಯರೊಡನೆ ಹೊರಟರು. ಆಗ ಫಕೀರನೊಬ್ಬನು ಇವನ ಹತ್ತಿರ ಬಂದನು. ಅವನು ಬಾಬಾ ಅವರನ್ನೇ ಹೋಲುತ್ತಿದ್ದನು. ಅವನು ಇವರ ಹತ್ತಿರ ಬಂದು ದಕ್ಷಿಣೆಗೋಸುಗ ಕೈ ಚಾಚಿದನು. ಕುಲಕರ್ಣಿಯವರು ಒಂದು ರೂಪಾಯಿ ಕೊಟ್ಟರು. ಪುನಃ ಕೇಳಿದನು. ಎರಡು ರೂಪಾಯಿ ಕೊಟ್ಟರು. ಅವನಿಗಿನ್ನೂ ಬೇಕಾಗಿದ್ದಿತು. ಆದುದರಿಂದ ಮತ್ತೆ ಮತ್ತೆ ಕೈಚಾಚುತ್ತಲೇ ಇದ್ದನು. ಆಗ ಚಿತ್ರೆಯವರಿಂದ ಮೂರು ರೂಪಾಯಿ ಸಾಲ ಪಡೆದು ಕೊಟ್ಟರು. ಹೀಗೆ ಒಟ್ಟು ಒಂಬತ್ತು ರೂಪಾಯಿಗಳನ್ನು ಕೊಟ್ಟರು. ಆದರೂ ಅವನಿಗೆ ತೃಪ್ತಿಯಾದಂತೆಯೇ ತೋರಲಿಲ್ಲ. ಆಗ ಕುಲಕರ್ಣಿ ಮನೆಗೆ ಬಂದು ಹತ್ತು ರೂಪಾಯಿ ನೋಟನ್ನು ಕೊಟ್ಟರು. ಫಕೀರನು ಆ ಹತ್ತು ರೂಪಾಯಿಗಳ ನೋಟನ್ನು ತೆಗೆದುಕೊಂಡು ಮೊದಲು ಅವರು ಕೊಟ್ಟ ಒಂಭತ್ತು ರೂಪಾಯಿಗಳನ್ನು ಮರಳಿ ಕೊಟ್ಟು ಹೊರಟು ಹೋದನು. ಅಪ್ಪಾ ಅವರು ತಾವು ಫಕೀರನಿಗೆ ಹತ್ತು ರೂಪಾಯಿಗಳಿಗಿಂತ ಕಡಿಮೆ ಕೊಡುತ್ತಿರಲಿಲ್ಲವೆಂದು ಈ ಹಿಂದೆ ತಮ್ಮ ಪತ್ನಿಯ ಮುಂದೆ ಹೇಳಿದ್ದರಲ್ಲವೆ? ಆದುದರಿಂದಲೇ ಅವನು ಆ ರೀತಿ ಮಾಡಿದುದು. ಇಲ್ಲಿ ಒಂಭತ್ತು ಅಂಕಿಯು ಅರ್ಥಗರ್ಭಿತವಾಗಿದೆ. ಇದು ನವರಸಗಳ ಭಕ್ತಿಗಳ ಪ್ರತೀಕ.

ಬಾಬಾ ಅವರು ತಮ್ಮ ಕೊನೆಗಾಲದಲ್ಲಿ ಲಕ್ಷ್ಮೀಬಾಯಿ ಸಿಂಧೆಯವರಿಗೆ ಒಂಬತ್ತು ರೂಪಾಯಿಗಳನ್ನು ಕೊಟ್ಟಿದುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಅಪ್ಪಾಸಾಹೇಬರು ಉಧಿಯ ಪೊಟ್ಟಣವನ್ನು ಬಿಚ್ಚಿ ನೋಡಿದರು. ಅದರಲ್ಲಿ ಹೂವು ಮತ್ತು ಅಕ್ಷತೆಗಳಿದ್ದವು. ಕೆಲವು ಕಾಲದ ನಂತರ ಅವರು ಶಿರ್ಡಿಗೆ ಹೋದಾಗ ಬಾಬಾ ಅವರ ಒಂದು ಕೂದಲೆಳೆಯನ್ನು ತೆಗೆದುಕೊಂಡು ಬಂದು ಅವೆಲ್ಲವನನೂ ಒಂದು ತಾಯಿತದಲ್ಲಿ ಹಾಕಿ

ತೋಳಿಗೆ ಕಟ್ಟಿಕೊಂಡರು. ಆಗ ಅವರಿಗೆ ಉಧಿಯ ಶಕ್ತಿಯ ಅರಿವಾಯಿತು. ಅವರು ಬಹಳ ಸಮರ್ಥರಿದ್ದರು. ಅವರಿಗೆ ಮೊದಲು ನಾಲ್ವತ್ತು ರೂಪಾಯಿಯ ಸಂಬಳ ಮಾತ್ರ ದೊರಕುತ್ತಿತ್ತು. ಬಾಬಾ ಅವರ ಫೋಟೋ ಮತ್ತು ಉಧಿ ದೊರಕಿದ ನಂತರ ಅದು ನಾಲ್ವತ್ತು ರೂಪಾಯಿಗಳ ಎಷ್ಟೋ ಮಡಿ ಹೆಚ್ಚಾಯಿತು. ಪ್ರಾಪಂಚಿಕ ಸುಖದ ಜೊತೆಯಲ್ಲಿ ಅವರ ಆಧ್ಯಾತ್ಮಿಕ ಬೆಳವಣಿಗೆಯೂ ಆಯಿತು. ಆದ್ದರಿಂದ ಬಾಬಾ ಅವರ ಉಧಿಯನ್ನು ದೊರಕಿಸಿ ನಾವು ನಿತ್ಯವೂ ಸ್ನಾನವಾದ ನಂತರ ಅದನ್ನು ಹಣೆಗೆ ಹಚ್ಚಿಕೊಂಡು ಸ್ವಲ್ಪ ಉಧಿಯನ್ನು ನೀರಿನಲ್ಲಿ ಬೆರೆಸಿ ಪವಿತ್ರ ತೀರ್ಥವೆಂದು ಸೇವಿಸಬೇಕು.

## ಹರಿಭಾವು ಕರ್ಣಿಕ

ಠಾಣಾ ಜಿಲ್ಲೆಯ ಶ್ರೀ ಹರಿಭಾವು ಕರ್ಣಿಕ ಅವರು ೧೯೧೭ರ ಗುರು ಪೌರ್ಣಿಮೆಯ ದಿನ ಶಿರ್ಡಿಗೆ ಬಂದು ಬಾಬಾ ಅವರನ್ನು ಪೂಜಿಸುತ್ತಿದ್ದರು. ಅವರು ಬಾಬಾ ಅವರಿಗೆ ಬಟ್ಟೆ ಮತ್ತು ದಕ್ಷಿಣೆಗಳನ್ನು ಅರ್ಪಿಸಿ ಅವರ ಆಶೀರ್ವಾದ ಪಡೆದು ಮಸೀದಿಯಿಂದ ಕೆಳಗೆ ಇಳಿಯುತ್ತಿದ್ದರು. ಆದರೆ ಬಾಬಾ ಅವರಿಗೆ ಮೊತ್ತೊಂದು ರೂಪಾಯಿ ದಕ್ಷಿಣೆಯನ್ನು ಅರ್ಪಿಸಬೇಕೆಂದು ಮಾಡಿಕೊಂಡು ಹಿಂತಿರುಗುವಾಗ ಅವರ ಹಿಂದೆಯೇ ಇದ್ದ ಶ್ಯಾಮ ಅವರು ಒಂದುಸಾರೆ ಬಾಬಾ ಅವರಿಂದ ಆಶೀರ್ವಾದ ಪಡೆದ ನಂತರ ಮತ್ತೆ ಹಿಂತಿರುಗಿ ಬರಬಾರದೆಂದು ಹೇಳಿದರು. ಆದ್ದರಿಂದ ಹಾಗೆಯೇ ಊರಿಗೆ ಹೊರಟರು. ನಾಶಿಕದಲ್ಲಿ ಕಾಳಾರಾಮನ ದರ್ಶನಕ್ಕೆಂದು ಅವರು ದೇವಾಲಯಕ್ಕೆ ಹೋದರು. ಅಲ್ಲಿ ದೇವಸ್ಥಾನದ ಬಾಗಿಲಬಳಿ ಕುಳಿತು ಭಜನೆ ಮಾಡುತ್ತಿದ್ದ ಸಂತ ಶ್ರೀ ನರಸಿಂಗ ಮಹಾರಾಜರು ಅಂದು ತಮ್ಮ ಭಜನೆಯನ್ನು ನಿಲ್ಲಿಸಿ ಭಕ್ತರನ್ನು ಬಿಟ್ಟು, ಇವರ ಹತ್ತಿರ ಬಂದು ಕೈಹಿಡಿದು "ನನ್ನ ಒಂದು ರೂಪಾಯಿ ಕೊಡು" ಎಂದರು. ಕರ್ಣಿಕ

ಅವರು ಆಶ್ಚರ್ಯಗೊಂಡು ತಾವು ಕೊಡಬಯಸಿದ್ದ ಒಂದು ರೂಪಾಯಿಯನ್ನು ಬಾಬಾ ಅವರೆ ತೆಗೆದುಕೊಳ್ಳುತ್ತಿದ್ದಾರೆ ಎಂದು ಬಹಳ ಆನಂದದಿಂದ ಕೊಟ್ಟರು.

ಈ ಕಥೆಯಿಂದ ಸಂತರೆಲ್ಲರೂ ಒಂದೆ; ಅವರೆಲ್ಲರೂ ಒಂದೇ ಧ್ಯೇಯದಿಂದ ಜೀವಿಸುತ್ತಾರೆ ಎಂಬುದು ತಿಳಿದು ಬರುತ್ತದೆ.

ಶ್ರೀ ಸಾಯಿ ಪ್ರಣಾಮ

# ೩೪ನೇ ಅಧ್ಯಾಯ

## ಉಧಿಯ ಮಹತ್ವ (ಮುಂದುವರಿದುದು)

### ಕರುಳು ಹುಣ್ಣು – ಡಾ. ಪಿಳ್ಳೆ– ಶ್ಯಾಮ ಅವರ ನಾದಿನಿ – ಇರಾಣಿ ಹುಡುಗಿ ಹರ್ದಾದ ವೃದ್ಧ–ಮುಂಬಯಿಯ ಮಹಿಳೆ

ಉಧಿಯು ಎಷ್ಟು ಗುಣಕಾರಕ ವಸ್ತು ಎಂಬುದನ್ನು ಈ ಅಧ್ಯಾಯದಲ್ಲಿ ಮತ್ತೆ ವಿವರಿಸಲಾಗಿದೆ.

### ಕರುಳು ಹುಣ್ಣು

ನಾಸಿಕ ಜಿಲ್ಲೆಯ ಮಾಲೇಗಾಂವದಲ್ಲಿ ಪದವೀಧರರಾದ ಡಾಕ್ಟರರೊಬ್ಬರಿದ್ದರು. ಅವರ ತಂಗಿಯ ಮಗನು ಕರುಳು ಹುಣ್ಣಿನ ರೋಗದಿಂದ ನರಳುತ್ತಿದ್ದನು. ಡಾಕ್ಟರರೂ ಮತ್ತು ಇತರ ವೈದ್ಯರೂ ಅನೇಕ ತರದ ಔಧಿಗಳನ್ನು ಕೊಟ್ಟರು. ಅವನಿಗೆ ಶಸ್ತ್ರ ಚಿಕಿತ್ಸೆ ಸಹ ಆಯಿತು. ಗುಣ ಕಂಡು ಬರಲಿಲ್ಲ. ಎಲ್ಲ ರೋಗಗಳನ್ನು ತಮ್ಮ ದೃಷ್ಟಿ ಮಾತ್ರದಿಂದಲೇ ಗುಣಪಡಿಸಬಲ್ಲ ಶ್ರೀ ಸಾಯಿಬಾಬಾ ಅವರ ಬಳಿಗೆ ಹೋಗಲು ಅವರ ಕೆಲವು ಸ್ನೇಹಿತರು ಸಲಹೆ ನೀಡಿದರು. ಆದುದರಿಂದ ಅವರ ತಮ್ಮ ಪತ್ನಿ ಮತ್ತು ಮಗನೊಂದಿಗೆ ಶಿರ್ಡಿಗೆ ಬಂದರು. ಮಗನನ್ನು ಬಾಬಾ ಅವರ ಚರಣಾರವಿಂದಗಳಲ್ಲಿಟ್ಟು ಪ್ರಾರ್ಥಿಸಿದರು. ಆಗ ದಯಾಮಯರೂ, ಶಾಂತಿ ಸ್ವರೂಪರು ಆದ ಬಾಬಾ ಅವರು "ಮಸೀದಿಯಲ್ಲಿ ಶರಣು ಬಂದವರಿಗೆ ಈ ಜನ್ಮದಲ್ಲಿ ಕಷ್ಟ ಬರಲಾರದು. ಈಗ ನೀವು ಕಷ್ಟಮುಕ್ತರಾಗುತ್ತೀರಿ ಈ ಉಧಿಯನ್ನು ಹುಡುಗನಿಗೆ ಹಚ್ಚಿರಿ; ಒಂದು ವಾರದೊಳಗೆ ಗುಣ ಕಂಡು ಬರುತ್ತದೆ. ಪರಮಾತ್ಮನಲ್ಲಿ ನಂಬಿಕೆ ಇಡಿ. ಇದು ಮಸೀದಿಯಲ್ಲ; ದ್ವಾರಕಾಮಾಯಿ ಯಾರು ಈ ದ್ವಾರಕಾಮಾಯಿಯಲ್ಲಿ ಕಾಲಿಡುತ್ತಾರೆಯೋ ಅವರ ಕಷ್ಟಗಳೆಲ್ಲವೂ ನಿವಾರಣೆಯಾದಂತೆಯೇ" ಎಂದು ಹೇಳಿ ಸಂತೈಸಿದರು ಮಗನನ್ನು ಬಾಬಾ ಅವರ ಮುಂದೆ ಕೂಡ್ರಿಸಿದರು. ಬಾಬಾ ಅವರು

ಹುಡುಗನಿಗೆ ನೋವಿನ ಜಾಗದಲ್ಲಿ ಕೈ ಆಡಿಸಿ ಅವನ ಕಡೆಗೆ ಪ್ರೀತಿಯ ನೋಟವನ್ನು ಬೀರಿದರು. ಅವನಿಗೆ ಇದರಿಂದ ಸ್ವಲ್ಪ ಗುಣ ಬಂದು ಕೆಲವು ದಿನಗಳ ನಂತರ ಪೂರ್ತಿ ಗುಣವಾಯಿತು. ನಂತರ ಅವರು ಬಾಬಾ ಅವರ ಆಶೀರ್ವಾದ ಪಡೆದು ತಮ್ಮ ಊರಿಗೆ ಹಿಂತಿರುಗಿದರು. ಇದನ್ನು ಕೇಳಿದ ಹುಡುಗನ ಚಿಕ್ಕಪ್ಪನು ಆಶ್ಚರ್ಯಗೊಂಡು ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆಯಲು ಹೊರಟಿದ್ದರು. ಆದರೆ ಕೆಲವರು ಮಾಲೀಗಾಂವ ಮತ್ತು ಮನಮಾಡಗಳಲ್ಲಿ ಬಾಬಾ ಅವರ ವಿರುದ್ಧ ಅಪಪ್ರಚಾರ ಮಾಡಿ ಮನಸ್ಸನ್ನು ಕೆಡಿಸಿದರು. ಆದುದರಿಂದ ಶಿರ್ಡಿಗೆ ಹೋಗುವ ತಮ್ಮ ನಿರ್ಣಯವನ್ನು ಬದಲಿಸಿ ಅವರು ನೇರವಾಗಿ ಮುಂಬಯಿಗೆ ಬಂದರು. ಅವರು ರಜಾದಿನಗಳನ್ನು ಆಲಿಬಾಗದಲ್ಲಿ ಕಳೆಯಬೇಕೆಂದು ಇಚ್ಛಿಸಿದ್ದರು. ಆದರೆ ಅವರು ಮುಂಬಯಿಯಲ್ಲಿ ತಂಗಿದ್ದಾಗ ಸತತವಾಗಿ ಮೂರು ದಿನ ರಾತ್ರಿ "ಇನ್ನೂ ನನ್ನನ್ನು ನಂಬಲಾರೆಯಾ?" ಎಂಬ ಧ್ವನಿ ಅವರಿಗೆ ಕೇಳಿಸಿತು. ಆಗ ಅವರು ತಮ್ಮ ಮನಸ್ಸನ್ನು ಬದಲಿಸಿ ಶಿರ್ಡಿಗೆ ಹೊರಡಲು ನಿರ್ಧರಿಸಿದರು. ಆದರೆ ಅಂದು ಅವರು ಬಹಳ ರೋಗದಿಂದ ನರಳುತ್ತಿದ್ದ ಒಬ್ಬ ರೋಗಿಯನ್ನು ಉಪಚರಿಸಬೇಕಾಗಿತ್ತು. ಆದ್ದರಿಂದ ಶಿರ್ಡಿಗೆ ಹೋಗುವುದನ್ನು ಸ್ವಲ್ಪ ಮುಂದೂಡಬೇಕಾಗುವುದು ಎಂದು ಭಾವಿಸಿದರು. ಆಗ ಅವರು ಈ ದಿವಸವೇ ರೋಗಿಗೆ ಗುಣವಾದರೆ ನಾಳೆಯೇ ಶಿರ್ಡಿಗೆ ಹೊರಡುವೆನೆಂದು ನಿರ್ಣಯ ಮಾಡಿಕೊಂಡರು. ಅದೇ ಕ್ಷಣದಲ್ಲಿಯೇ ರೋಗಿಗೆ ಜ್ವರ ಕಡಿಮೆಯಾಗಿ ಸಾಮಾನ್ಯ ಸ್ಥಿತಿಗೆ ಬಂದನು. ಆಗ ತಮ್ಮ ನಿರ್ಧಾರದಂತೆ ಶಿರ್ಡಿಗೆ ಹೊರಟರು. ಮಸೀದಿಯನ್ನು ಪ್ರವೇಶಿಸಿ ಬಾಬಾ ಅವರ ದರ್ಶನ ಪಡೆದು ನಮಸ್ಕಾರ ಮಾಡಿದರು. ಅಲ್ಲಿ ಅವರು ನಾಲ್ಕು ದಿನ ಇದ್ದು ನಂತರ ಬಾಬಾ ಅವರ ಉಧಿಯನ್ನೂ, ಆಶೀರ್ವಾದವನ್ನೂ ಪಡೆದು ಹಿಂತಿರುಗಿದರು. ಅಲ್ಲಿಂದ ಬಂದ ಹದಿನೈದು ದಿನಗಳಲ್ಲಿಯೇ ಅವರಿಗೆ ವಿಜಾಪುರಕ್ಕೆ ಮೇಲಿನ ಹುದ್ದೆಗೆ ವರ್ಗವಾಯಿತು. ಈ ರೀತಿ ಅವರಿಗೆ ಬಾಬಾ ಅವರಲ್ಲಿ ಭಕ್ತಿ ನೆಲೆಗೊಂಡಿತು.

## ಡಾಕ್ಟರ ಪಿಳ್ಳೆ

ಡಾ. ಪಿಳ್ಳೆಯವರು ಬಾಬಾ ಅವರ ಆತ್ಮೀಯ ಭಕ್ತರಾಗಿದ್ದರು ಬಾಬಾ ಅವರು ಅವರನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಮತ್ತು ಅವರಿಗೆ 'ಭಾವೂ' ಎಂದು ಕರೆಯುತ್ತಿದ್ದರು. ಸಮಸ್ತ ವಿಚಾರಗಳನ್ನೂ ಅವರೊಡನೆ ಚರ್ಚಿಸುತ್ತಿದ್ದರು. ಮತ್ತು ಅವರುನ್ನು ಯಾವಾಗಲೂ ತಮ್ಮ ಪಕ್ಕದಲ್ಲಿಯೇ ಕೂಡ್ರಿಸಿಕೊಳ್ಳುತ್ತಿದ್ದರು. ಒಮ್ಮೆ ಅವರ ಕಾಲಿಗ ನಾರುಗಳಾಗಿ ಬಹಳ ವ್ಯಥೆಯಾಗಿದ್ದಿತು. ವೇದನೆಯಿಂದ ಅವರು ನರಳುತ್ತಿದ್ದರು. ಅವರು ಕಾಕಾಸಾಹೇಬರನ್ನು ಕುರಿತು "ನನಗೆ ತಡೆಯಲಾರದಷ್ಟು ನೋವಾಗುತ್ತಿದೆ. ಮರಣವೇ ಲೇಸೆಂದೆನಿಸುತ್ತದೆ ಇದು ನನ್ನ ಪೂರ್ವಜನ್ಮದ ಕರ್ಮ ಫಲ. ಬಾಬಾ ಅವರ ಹತ್ತಿರ ಹೋಗಿ ಈ ಪೂರ್ವಜನ್ಮದ ಕರ್ಮವನ್ನು ಮುಂದಿನ ಹತ್ತು ಜನ್ಮಗಳಿಗ ವರ್ಗಾಯಿಸಿ ನೋವನ್ನು ನಿಲ್ಲಿಸಿರೆಂದು ಕೇಳಿರಿ" ಎಂದು ಹೇಳಿದಿರು ಆಗ ದೀಕ್ಷಿತರು ಬಾಬಾ ಹತ್ತಿರ ಬಂದು ಪಿಳ್ಳೆಯವರ ಬೇಡಿಕೆಯನ್ನು ತಿಳಿಸಿದರು. ಆಗ ಕರುಣೆಯಿಂದ ಬಾಬಾ ಅವರಿಗೆ "ಧೈರ್ಯವಾಗಿ ಇರುವಂತೆ ಹೇಳು. ಮುಂದಿನ ಹತ್ತು ಜನ್ಮಗಳೇಕೆ? ಇನ್ನು ಕೇವಲ ಹತ್ತು ದಿನ ನೋವು ತಡೆದರೆ ಸಾಕು; ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಸುಖಗಳನ್ನು ನೀಡಲು ನಾನಿರುವಾಗ ಅವನು ಏಕೆ ಮರಣವನ್ನು ಇಚ್ಛಿಸಬೇಕು? ಯಾರ ಹೆಗಲಿನ ಮೇಲಾದರೂ ಕೂಡ್ರಿಸಿ ಅವನನ್ನು ಇಲ್ಲಿಗೆ ಕರೆದುಕೊಂಡು ಬಾ. ಅವನ ಕಷ್ಟವನ್ನು ನಿವಾರಣೆ ಮಾಡುವೆ' ಎಂದು ಹೇಳಿ ಕಳುಹಿಸಿದರು.

ಕಾಕಾ ಅವರು ಡಾ. ಪಿಳ್ಳೆಯವರನ್ನು ಕರೆತಂದು ಬಾಬಾ ಅವರ ಬಳಿ ಕೂಡ್ರಿಸಿದರು. ಆಗ ಬಾಬಾ ಅವರು ಅವರಿಗೆ ತಮ್ಮ ಒರಗುವ ದಿಂಬನ್ನು ಕೊಟ್ಟು "ಶಾಂತಿಯಿಂದ ಇಲ್ಲಿ ಮಲಗು. ಪೂರ್ವ ಜನ್ಮದ ಕರ್ಮಫಲವನ್ನು ಅನುಭವಿಸಿ ಮುಗಿಸುವದೇ ಸೂಕ್ತವಾದ ಚಿಕಿತ್ಸೆ ನಮ್ಮ ಕರ್ಮಗಳೇ ನಮ್ಮ ಸುಖ -ದು:ಖಗಳಿಗೆ ಕಾರಣ. ಏನೇ

ಬರಲಿ ತಾಳ್ಮೆಯಿಂದ ಸಹಿಸಬೇಕು; ಎದೆಗುಂದಬಾರದು. ದೇವರು ದೊಡ್ಡವನು. ಅವನನ್ನು ಅನವರತವೂ ಧ್ಯಾನಿಸುತ್ತಿರು. ಅವನು ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ನಿನ್ನ ತನು ಮನ ಮತ್ತು ಧನ ಇವೆಲ್ಲವನ್ನೂ ಅವನಿಗೆ ಅರ್ಪಿಸಿ ಶರಣಾಗತನಾಗು" ಎಂದರು. ಈ ಮೊದಲು ನಾನಾಸಾಹೇಬ ಚಾಂದೋರಕರ ಅವರು ಡಾಕ್ಟರರ ಕಾಲಿಗೆ ಪಟ್ಟಿ ಸುತ್ತಿದ್ದರು. ಅದನ್ನು ನೋಡಿ ಬಾಬಾ ಅವರು "ಅವನೊಬ್ಬ ಹುಚ್ಚ; ಆ ಕಟ್ಟನ್ನು ಬಿಚ್ಚಿ ಎಸೆ. ಇಲ್ಲದಿದ್ದರೆ ಮರಣ ಹೊಂದುವೆ. ಈಗ ಒಂದು ಕಾಗೆ ಬಂದು ನಿನ್ನ ಕಾಲನ್ನು ಕುಕ್ಕುತ್ತದೆ; ಆಗ ನಿನಗೆ ಗುಣವಾಗುತ್ತದೆ" ಎಂದರು. ಈ ರೀತಿ ಸಂಭಾಷಣೆ ನಡೆದಾಗ ಮಸೀದಿಯನ್ನು ಗುಡಿಸುವ ಅಬ್ದುಲ್ಲನು ದೀಪಗಳನ್ನು ಹಚ್ಚುತ್ತ ಆಕಸ್ಮಾತ್ ಪಿಳ್ಳೆಯವರ ಕಾಲನ್ನು ತುಳಿದನು. ಅದರಿಂದ ಕಾಲಿನಲ್ಲಿದ್ದ ನಾರುಗಳೆಲ್ಲವೂ ಹೊರಗೆ ಬಂದವು. ಡಾ. ಪಿಳ್ಳೆ ನೋವು ತಡೆಯಲಾಗದೆ ಕೂಗಿಕೊಂಡರು ಸ್ವಲ್ಪ ಹೊತ್ತಿನ ಮೇಲೆ ಅವರು ಒಮ್ಮೆ ಹಾಡುವುದನ್ನೂ, ಒಮ್ಮೆ ಅಳುವುದನ್ನೂ, ಆರಂಭ ಮಾಡಿದರು. ಆಗ ಬಾಬಾ ಅವರು "ನೋಡು ಭಾವುವಿಗೆ ಗುಣವಾಗಿದೆ; ಹಾಡುತ್ತಿದ್ದಾನೆ" ಎಂದರು. ಆಗ ಪಿಳ್ಳೆಯವರು "ಕಾಗೆ ಯಾವಾಗ ಬರುವುದು?" ಎಂದು ಅಂಜುತ್ತ ಕೇಳಲು ಬಾಬಾ "ಕಾಗೆ ಬಂದಿದ್ದನ್ನು ನೋಡಲಿಲ್ಲವೇ? ಪುನ: ಬರುವುದಿಲ್ಲ. ಅಬ್ದುಲ್ಲನೇ ಕಾಗೆ; ಈಗ ನೀನು ವಾಡಾಕ್ಕೆ ಹೋಗಿ ವಿಶ್ರಮಿಸಿಕೊ– ಗುಣವಾಗುತ್ತದೆ." ಎಂದು ಹೇಳಿ ಕಳುಹಿಸಿದರು. ಡಾ. ಪಿಳ್ಳೆ ನೋವಿಗೆ ಉಧಿ ಹಚ್ಚಿದರು. ಮತ್ತು ಅದನ್ನು ನೀರಿನಲ್ಲಿ ಬೆರೆಸಿ ಕುಡಿಯಲು ಆರಂಭ ಮಾಡಿದರು. ಬೇರೆ ಯಾವ ಔಷಧವನ್ನೂ ತೆಗೆದುಕೊಳ್ಳಲಿಲ್ಲ. ಹತ್ತು ದಿನಗಳೊಳಗೆ ಅವರು ಪೂರ್ಣ ಗುಣಹೊಂದಿದರು.

## ಶ್ಯಾಮ ಅವರ ನಾದಿನಿ

ಶ್ಯಾಮ ಅವರ ಕಿರಿಯ ಸಹೋದರರಾದ ಬಾಪೂಜಿ ಸಾವೂಲ್‌ಬಾವಿ

ಊರ ಹತ್ತಿರ ವಾಸಿಸುತ್ತಿದ್ದರು. ಒಂದು ಸಾರಿ ಅವರ ಪತ್ನಿಗೆ ಪ್ಲೇಗ್ ಅಂಟಿಕೊಂಡಿತು. ಜ್ವರ ಬಹಳವಾಗಿತ್ತು, ಪ್ಲೇಗ ಗುಳ್ಳೆಗಳು ಬೆಳೆದಿದ್ದವು. ಆಗ ಬಾಪೂಜಿ ಶಿರ್ಡಿಯಲ್ಲಿ ಅಣ್ಣ ಶ್ಯಾಮ ಅವರ ಬಳಿಗೆ ಓಡಿ ಹೋಗಿ ಸಹಾಯವನ್ನಪೇಕ್ಷಿಸಿದನು. ಆಗ ಅವರು ಗಾಬರಿಗೊಂಡು, ಕೂಡಲೆ ಬಾಬಾ ಅವರ ಹತ್ತಿರ ಹೋಗಿ ಪ್ಲೇಗನ್ನು ಗುಣಪಡಿಸುವಂತೆ ಇಬ್ಬರೂ ಬೇಡಿಕೊಂಡರು. ಆಗ ಬಾಬಾ "ಈಗ ಬಹಳ ರಾತ್ರಿಯಾಗಿದೆ ನೀನು ಹೋಗಬೇಡ. ಅವಳಿಗೆ ಸ್ವಲ್ಪ ಉಧಿ ಕಳುಹಿಸಿ ಕೊಡು; ಜ್ವರಕ್ಕೆ ಮತ್ತು ಗುಳ್ಳೆಗಳಿಗೆ ಏಕೆ ಹೆದರಬೇಕು? ದೇವರೆ ನಮ್ಮ ಗುರು – ತಂದೆ. ಅವಳಿಗೆ ಗುಣವಾಗುವುದು. ಈಗ ಊರಿಗೆ ನೀನು ಹೋಗಲೇ ಬೇಡ; ಬೆಳಿಗ್ಗೆ ನೋಡಿಕೊಂಡು ಕೂಡಲೇ ಮರಳಿ ಬಾ" ಎಂದು ಹೇಳಿದರು.

ಶ್ಯಾಮ ಅವರಿಗೆ ಬಾಬಾ ಅವರ ಉಧಿಯಲ್ಲಿ ಪೂರ್ಣ ವಿಶ್ವಾಸವಿತ್ತು. ಆದುದರಿಂದ ತಮ್ಮನಿಗೆ ಉಧಿಯನ್ನು ಕೊಟ್ಟು ಕಳುಹಿಸಿದರು. ಆ ಗುಳ್ಳೆಗಳ ಮೇಲೆ ಅದನ್ನು ಹಚ್ಚಿ ಸ್ವಲ್ಪ ಉಧಿಯನ್ನು ನೀರಿಗೆ ಬೆರಸಿ ರೋಗಿಗೆ ಕೊಡಲಾಯಿತು. ಆ ಕ್ಷಣವೇ ರೋಗಿಗೆ ಮೈಯೆಲ್ಲ ಬೆವರು ಬಂದು ಜ್ವರ ಕಡಿಮೆಯಾಗಿ ನಿದ್ರೆ ಬಂದಿತು. ಮರುದಿನ ಬೆಳಿಗ್ಗೆ ಜ್ವರ ಮಾಯವಾಗಿ ಮನೆಗೆಲಸದಲ್ಲಿ ತೊಡಗಿದ್ದ ಅವಳನ್ನು ನೋಡಿ ಬಾಪೂಜಿಯವರು ಆಶ್ಚರ್ಯಗೊಂಡರು. ಅದೇ ದಿನ ಬೆಳಿಗ್ಗೆ ಶ್ಯಾಮ ಬಾಬಾ ಅವರ ಅಪ್ಪಣೆ ಪಡೆದು ಬಂದು ಅವಳು ಚಹ ಮಾಡುತ್ತಿದ್ದದನ್ನು ನೋಡಿ ಆಶ್ಚರ್ಯಪಟ್ಟರು. ತಮ್ಮನನ್ನು ಕೇಳಲಾಗಿ ಉಧಿಯಿಂದ ಅವಳಿಗೆ ಸಂಪೂರ್ಣ ಗುಣವಾಯಿತೆಂದು ಹೇಳಿದರು. ಆಗ "ಬೆಳಿಗ್ಗೆ ಹೋಗಿ ಕೂಡಲೇ ಮರಳಿ ಬಾ" ಎಂದು ಬಾಬಾ ಅವರು ಮಾತಿನ ಮರ್ಮವನ್ನು ಶ್ಯಾಮ ತಿಳಿದುಕೊಂಡರು.

ಶ್ಯಾಮ ಚಹ ಕುಡಿದು ಶಿರ್ಡಿಗೆ ಹಿಂತಿರುಗಿ ಬಾಬಾ ಅವರಿಗೆ ವಂದಿಸಿ "ಹೇ ದೇವಾ! ನಿಮ್ಮ ನಾಟಕವೇನು? ನೀವೇ ಮೊದಲು

ಬಿರುಗಾಳಿಯನ್ನೆಬ್ಬಿಸಿ, ನಂತರ ನೀವೇ ಅದನ್ನು ಶಾಂತ ಮಾಡುತ್ತೀರಿ" ಅನ್ನಲು ಬಾಬಾ "ಕರ್ಮದ ದಾರಿ ಬಹಳ ರಹಸ್ಯವಾದುದು. ನಾನೇನೂ ಮಾಡದಿದ್ದರೂ ಅವರವರ ಅದೃಷ್ಟದಂತಾಗುತ್ತದೆ. ಅದಕ್ಕೆ ನಾನು ಅವುಗಳ ವೀಕ್ಷಕನು ಮಾತ್ರ, ಪರಮಾತ್ಮನೇ ಸರ್ವನಾಟಕ ಸೂತ್ರಧಾರಿ. ಅವನು ದಯಾಮಯನು. ನಾನೇನು ದೇವರೂ ಅಲ್ಲ ಅಥವಾ ಪರಮಾತ್ಮನೂ ಅಲ್ಲ; ನಾನು ಅವನ ಸೇವಕ. ಯಾವಾಗಲೂ ಅವನನ್ನೇ ಸ್ಮರಿಸುತ್ತೇನೆ. ಯಾರು ತಮ್ಮ ಅಹಂಭಾವಗಳನ್ನು ತಳ್ಳಿ ದೇವರನ್ನು ನಂಬಿ ಅವನಲ್ಲಿ ಶರಣಾಗತಿ ಹೊಂದುತ್ತಾರೆಯೋ ಅವರಿಗೆ ವಿಪತ್ತುಗಳು ದೂರವಾಗಿ ಬಂಧನದಿಂದ ಮುಕ್ತರಾಗುತ್ತಾರೆ" ಎಂದು ಉತ್ತರಿಸಿದರು.

## ಇರಾಣಿಯವರ ಪುತ್ರಿ

ಈಗ ಮುಂಬಯಿಯ ಇರಾಣಿಯವರ ಅನುಭವ ನೋಡೋಣ. ಅವರ ಹಿರಿಯ ಮಗಳಿಗೆ ಪ್ರತಿ ಗಂಟೆಗೂ ಮಲರೋಗವು ಬರುತ್ತಿತ್ತು. ಆ ರೋಗ ಬಂದಾಗ ಅವಳು ಕುಗ್ಗಿ ಮಾತನಾಡಲೂ ಸಹ ಶಕ್ತಿಯಿಲ್ಲದೆ ಮೂರ್ಛೆ ಬೀಳುತ್ತಿದ್ದಳು. ಯಾವ ಚಿಕಿತ್ಸೆಯಿಂದಲೂ ಗುಣ ಕಾಣಲಿಲ್ಲ. ಕಾರಣ ಅವರ ಕೆಲವು ಸ್ನೇಹಿತರು ಉಧಿಯನ್ನು ಶಿಫಾರಸು ಮಾಡಿ ವಿಲೇಪಾರ್ಲೆಯಲ್ಲಿದ್ದ ಕಾಕಾಸಾಹೇಬ ದೀಕ್ಷಿತ ಅವರಿಂದ ಅದನ್ನು ತೆಗೆದುಕೊಂಡು ಬರಲು ಹೇಳಿದರು. ಅದನ್ನು ನೀರಿನಲ್ಲಿ ಹಾಕಿ ಅವಳಿಗೆ ಕುಡಿಯಲು ಕೊಟ್ಟರು. ಇದಾದ ನಂತರ ಮೊದಲು ಗಂಟೆಗೊಮ್ಮೆ ಬರುತ್ತಿದ್ದ ರೋಗವು ಎಳು ಗಂಟೆಗಳಿಗೊಮ್ಮೆ ಬರಲು ಆರಂಭವಾಗಿ ಬರುಬರುತ್ತ ಕೆಲವು ದಿನಗಳ ನಂತರ ಪೂರ್ತಿ ಗುಣವಾಯಿತು.

## ಮೂತ್ರಕೋಶದಲ್ಲಿ ಕಲ್ಲು

ಹರ್ದಾದ ಸಮೀಪ ಒಂದು ಗ್ರಾಮದಲ್ಲಿ ಒಬ್ಬ ವೃದ್ಧ ಗೃಹಸ್ಥರು ಮೂತ್ರಕೋಶದ ಕಲ್ಲಿನಿಂದ ಬಹಳ ನರಳುತ್ತಿದ್ದರು. ಇಂಥ ಕಲ್ಲುಗಳನ್ನು ಸಾಮಾನ್ಯವಾಗಿ ಶಸ್ತ್ರ ಚಿಕಿತ್ಸೆಯಿಂದ ತೆಗೆದು ಹಾಕುತ್ತಾರೆ. ಆದುದರಿಂದ

ಅವರ ಸ್ನೇಹಿತರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಹೇಳಿದರು. ಆಗಲೇ ಅವರಿಗೆ ಬಹಳ ವಯಸ್ಸಾಗಿ ಕೃಶರಾಗಿದ್ದರು. ಕಾರಣ ಶಸ್ತ್ರ ಚಿಕಿತ್ಸೆಗೆ ಅವರು ಸಮ್ಮತಿಸಲಿಲ್ಲ. ಆ ಸಮಯಕ್ಕೆ ಸರಿಯಾಗಿ, ಆ ಊರಿನ ಇನಾಮದಾರರು ಅಲ್ಲಿಗೆ ಬಂದರು. ಅವರು ಬಾಬಾ ಅವರ ಭಕ್ತರಾಗಿದ್ದುದರಿಂದ ಯಾವಾಗಲೂ ಉಧಿಯನ್ನು ತಮ್ಮ ಹತ್ತಿರ ಇಟ್ಟುಕೊಂಡು ಇರುತ್ತಿದ್ದರು. ಕೆಲವು ಸ್ನೇಹಿತರ ಹೇಳಿಕೆಯಂತೆ ಆ ವೃದ್ಧನ ಮಗನು ಇನಾಮದಾರರಿಂದ ಸ್ವಲ್ಪ ಉಧಿ ತಂದು, ಅದನ್ನು ನೀರಿನಲ್ಲಿ ಹಾಕಿ, ತನ್ನ ತಂದೆಗೆ ಕುಡಿಸಿದನು. ಅದನ್ನು ಸೇವಿಸಿದ ಐದು ನಿಮಿಷಗಳಲ್ಲಿಯೇ ಆ ಕಲ್ಲು ಕರಗಿ ಮೂತ್ರ ರೂಪದಲ್ಲಿ ಹೊರಗೆ ಬಂದಿತು. ಅಂದಿನಿಂದ ಅವರ ಬೇನೆ ಕೊನೆಗೊಂಡಿತು.

## ಮುಂಬಯಿಯ ಮಹಿಳೆ

ಮುಂಬಯಿಯ ಕಾಯಸ್ಥ ಪ್ರಭು ಮತದ ಮಹಿಳೆಯೊಬ್ಬಳಿಗೆ ಹೆರಿಗೆ ಸಮಯದಲ್ಲಿ ಪ್ರತಿಸಲ ಬಹಳ ಯಾತನೆಯಾಗುತ್ತಿತ್ತು. ಗರ್ಭಿಣಿಯಾಗಿದ್ದಾಗ ಅವಳು ಬಹಳ ಹೆದರುತ್ತಿದ್ದಳು. ಆಗ ಕಲ್ಯಾಣದ ಸಾಯಿಭಕ್ತ ಶ್ರೀರಾಮ ಮಾರುತಿ ಅವರು ಮುಂದಿನ ಹೆರಿಗೆಗೆ ಶಿರ್ಡಿಗೆ ಅವಳನ್ನು ಕರೆದುಕೊಂಡು ಹೋಗುವಂತೆ ಅವಳ ಪತಿಗೆ ಹೇಳಿದರು. ಅವಳು ಗರ್ಭಿಣಿಯಾದಳು. ದಂಪತಿಗಳೀರ್ವರೂ ಶಿರ್ಡಿಗೆ ಬಂದು ಬಾಬಾ ಅವರ ಸೇವೆ ಮಾಡಹತ್ತಿದರು. ಹೆರಿಗೆ ಸಮಯ ಬಂದಿತು. ತಡೆಯಲಾರದಷ್ಟು ನೋವಾಯಿತು. ಏನೂ ತೋಚಲಿಲ್ಲ. ಅವಳು ಬಾಬಾ ಅವರನ್ನು ಪ್ರಾರ್ಥಿಸಿದಳು. ಆ ಸಮಯಕ್ಕೆ ಸರಿಯಾಗಿ, ಪಕ್ಕದ ಮನೆಯ ಹೆಂಗಸೊಬ್ಬಳು ಬಂದು ಬಾಬಾ ಅವರನ್ನು ಪ್ರಾರ್ಥಿಸಿ ಸ್ವಲ್ಪ ಉಧಿಯನ್ನು ನೀರಿಗೆ ಬೆರೆಸಿ ಕುಡಿಸಿದಳು. ಕೇವಲ ಐದು ನಿಮಿಷಗಳಲ್ಲಿ ಸುಖವಾಗಿ ಹೆರಿಗೆಯಾಯಿತು. ಆದರೆ ಕೂಸು ಮಾತ್ರ ಗರ್ಭದಲ್ಲಿಯೇ ಮರಣ ಹೊಂದಿತ್ತು. ಸುಖವಾದ ಹೆರಿಗೆ ಆಗಿದ್ದರಿಂದ ಬಾಬಾ ಅವರನ್ನು ಹೃತ್ಪೂರ್ವಕವಾಗಿ ದಂಪತಿಗಳು ವಂದಿಸಿದರು.

**ಶ್ರೀ ಸಾಯಿ ಪ್ರಣಾಮ**

# ೩೫ನೇ ಅಧ್ಯಾಯ

## ಬಾಬಾ ಅವರ ಪರೀಕ್ಷೆ – ಕಾಕಾ ಮಹಾಜನಿಯವರ ಮಿತ್ರ – ಅನಿದ್ರತೆ ಬಾಳಾ ಪಾಟೀಲ ನೇವಾಸಕರ

ಈ ಅಧ್ಯಾಯದಲ್ಲಿಯೂ ಉಧಿಯ ಮಹತ್ವವನ್ನು ಚರ್ಚಿಸಲಾಗಿದೆ. ಇಲ್ಲಿ ಬಾಬಾ ಅವರು ಇಬ್ಬರನ್ನು ಅವರಿಗೆ ಆಶೀರ್ವದಿಸಿದ ವಿಷಯವನ್ನು ತಿಳಿಸಲಾಗಿದೆ.

### ಬಾಬಾ ಅವರ ಪರೀಕ್ಷೆ

ನಮ್ಮ ಆಧ್ಯಾತ್ಮಿಕ ವಿಚಾರದಲ್ಲಿ ಪ್ರಗತಿ ಹೊಂದಲು ಮತಭೇದಗಳು ಅಡ್ಡಿಯಾಗಿರುತ್ತವೆ. ಪರಮಾತ್ಮನು ಆಕಾರವುಳ್ಳವನು ಎಂದು ಹೇಳುವುದೆ ಭ್ರಮೆ; ಸಂತರು ಸಾಮಾನ್ಯ ಮನುಷ್ಯರೆಂದೂ, ದೇವರು ನಿರಾಕಾರವೆಂದೂ ಕೆಲವರು ಹೇಳಿರುವುದನ್ನು ಕೇಳಿರುತ್ತೇವೆ. ಹಾಗಿದ್ದರೆ ನಾವು ಸಂತರ ಮುಂದೆ ತಲೆಬಾಗಿ ಅವರಿಗೆ ದಕ್ಷಿಣೆಯನ್ನೇಕೆ ಕೊಡಬೇಕು? ಇತರರಿಂದಲೂ ಈ ಆಕ್ಷೇಪಣೆ ಬಂದಿದೆ. ಈ ರೀತಿಯಾದ ಆಕ್ಷೇಪಣೆಗಳನ್ನು ಸಾಯಿಬಾಬಾ ಅವರ ಬಗ್ಗೆಯೂ ಸಹ ನಾನು ಸ್ವತಃ ಕೇಳಿದ್ದೇನೆ ಮತ್ತು ಕೇಳುತ್ತಲೂ ಇದ್ದೇನೆ. "ನಾವು ಶಿರ್ಡಿಗೆ ಹೋದಾಗ ಬಾಬಾ ಅವರು ನಮ್ಮನ್ನು ದಕ್ಷಿಣೆ ಕೇಳಿದರು. ಹಾಗೆ ಕೇಳುವುದು ಸಂತರಿಗೆ ತರವಲ್ಲ" ಎಂದು ಹೇಳಿದವರು ಕೆಲವರಿದ್ದಾರೆ. ಬಾಬಾ ಅವರನ್ನು ತೆಗಳಲು ಶಿರ್ಡಿಗೆ ಹೋಗಿ ನಂತರ ಅವರ ಪ್ರಾರ್ಥನೆ ಮಾಡಿ ಬಂದವರೂ ಅನೇಕರಿದ್ದಾರೆ. ಇಂತಹ ಎರಡು ಉದಾಹರಣೆಗಳನ್ನು ಈಗ ನೋಡೋಣ.

### ಮಹಾಜನಿ ಅವರ ಮಿತ್ರ

ಕಾಕಾ ಮಹಜನಿಯವರ ಮಿತ್ರರೊಬ್ಬರು ನಿರಾಕಾರನಾದ ಪರಮಾತ್ಮನ ಆರಾಧಕರಾಗಿ ವಿಗ್ರಹ ಪೂಜೆಯನ್ನು ವಿರೋಧಿಸುತ್ತಿದ್ದರು.

ಅವರು ಬಾಬಾ ಅವರಿಗೆ ನಮಸ್ಕರಿಸುವುದಿಲ್ಲ ಮತ್ತು ದಕ್ಷಿಣೆ ಕೊಡುವುದಿಲ್ಲ ಎಂಬ ಎರಡು ಶರ್ತುಗಳ ಮೇಲೆ ಮಹಾಜನಿಯವರ ಸಂಗಡ ಶಿರ್ಡಿಗೆ ಹೊರಡಲೊಪ್ಪಿದರು. ಮಹಾಜನಿ ಅವರು ಅದಕ್ಕೆ ಸಮ್ಮತಿಸಿ ಇಬ್ಬರೂ ಶನಿವಾರ ರಾತ್ರಿ ಹೊರಟು ಮರುದಿನ ಬೆಳಿಗ್ಗೆ ಶಿರ್ಡಿ ತಲುಪಿದರು. ಅವರಿಬ್ಬರೂ ಮಸೀದಿ ಮೆಟ್ಟಲುಗಳನ್ನು ಹತ್ತುತ್ತಿದ್ದಂತೆಯೇ ಬಾಬಾ ಅವರಿಗೆ "ಕಾಯಾವೆ ಜೀ" (ಅಹಾ! ಬನ್ನಿ ರಾಯರೆ!) ಎಂದರು. ಅವರ ಧ್ವನಿಯು ಮಧುರವಾಗಿತ್ತು, ಅದು ಕಾಕಾ ಮಹಾಜನಿಯವರ ಸ್ನೇಹಿತರ ತಂದೆಯವರ ಧ್ವನಿಯಂತಿತ್ತು. ಇದು ಅವರಿಗೆ ತಮ್ಮ ದಿವಂಗತ ತಂದೆಯ ನೆನಪನ್ನು ಮೂಡಿಸಿತು. ಅವರಿಗೆ ಸಂತೋಷ ಉಕ್ಕಿತು. ಆ ಧ್ವನಿಯಲ್ಲಿ ಅಂಥ ಶಕ್ತಿ ಅಡಗಿತ್ತು! ಮಿತ್ರನು ಆಶ್ಚರ್ಯಚಕಿತನಾಗಿ "ಇದು ನನ್ನ ತಂದೆಯ ವಾಣಿ. ಇದರಲ್ಲಿ ಅನುಮಾನವೇ ಇಲ್ಲ" ಎಂದು ನಿರ್ಧರಿಸಿ ತಮ್ಮ ಶರ್ತು ಮರೆತು ಬಾಬಾ ಅವರ ಚರಣಗಳಿಗೆ ನಮಿಸಿದರು.

## ದಕ್ಷಿಣೆ

ನಂತರ ಬಾಬಾ ಮಹಾಜನಿ ಅವರಿಂದ ಮುಂಜಾನೆ ಒಂದು ಸಾರೆ ಮತ್ತು ಅವರು ಹೊರಡುವಾಗ ಒಂದುಸಾರೆ ದಕ್ಷಿಣೆ ಕೇಳಿದರು. ಅವರ ಮಿತ್ರರಿಂದ ಅವರು ದಕ್ಷಿಣೆ ಕೇಳಲೇ ಇಲ. ಆಗ ಆ ಮಿತ್ರನು ಕಾಕಾ ಅವರಿಗೆ "ಬಾಬಾ ನಿಮ್ಮಿಂದಲೇ ಎರಡು ಸಾರೆ ದಕ್ಷಿಣೆ ಕೇಳಿದರು. ಅದಕ್ಕೆ ಕಾಕಾ "ಬಾಬಾ ಅವರನ್ನು ನೀವೇ ಕೇಳಿ" ಎಂದರು. ಆಗ ಬಾಬಾ ಅವರು ಇದೇನು ಕಿವಿಮಾತು ಎಂದು ಕೇಳಲು ಮಿತ್ರನು "ನಾನೂ ದಕ್ಷಿಣೆ ಕೊಡಬೇಕೆ?" ಎಂದು ಕೇಳಿದನು. ಆಗ ಬಾಬಾ ಅವರು " ಅದನ್ನು ನಿನಗೆ ಕೊಡಲು ಮನಸ್ಸಿರಲಿಲ್ಲ; ಆದುದರಿಂದ ನಿನಗೆ ಕೇಳಲಿಲ್ಲ. ಈಗ ನಿನಗೆ ಕೊಡಬೇಕೆನಿಸಿದರೆ ಕೊಡಬಹುದು" ಎಂದರು. ಆಗ ಅವನು ಕಾಕಾ ಅವರಷ್ಟೇ ಅಂದರೆ ೧೭ರೂಪಾಯಿ ದಕ್ಷಿಣೆ ಕೊಟ್ಟನು. ಆಗ ಬಾಬಾ ಅವರು "ನನ್ನ ಮತ್ತು ನಿನ್ನ ಮಧ್ಯೆ

ಇರುವ ಅದೃಶ್ಯ ಗೋಡೆಯನ್ನು ಕೆಡವಿಹಾಕು; ಆಗ ನಾವಿಬ್ಬರೂ ಪರಸ್ಪರ ಅರಿಯಬಹುದು" ಎಂದು ಹೇಳಿ ಹೊರಡಲು ಅನುಮತಿ ನೀಡಿದರು.

ಆಗ ಆಕಾಶವು ಮೋಡಗಳಿಂದ ಭಯಂಕರವಾಗಿ ಕಂಡರೂ ಸಹ ಬಾಬಾ ಅವರಿಗೆ ಸುಖ ಪ್ರಯಾಣ ಕೋರಿದರು. ಅವರು ಮುಂಬಯಿಗೆ ಬಂದು ತಮ್ಮ ಮನೆಯ ಬಾಗಿಲು – ಕಿಟಕಿಗಳನ್ನು ತೆರೆದು ನೋಡಲಾಗಿ ಅಲ್ಲಿ ಎರಡು ಗುಬ್ಬಿಗಳು ಮೃತಹೊಂದಿ ಬಿದ್ದಿರುವುದನ್ನು ಕಂಡರು. ಮೂರನೆಯ ಗುಬ್ಬಿ ಆಗ ತಾನೇ ಹಾರಿ ಹೋಯಿತು. ನಾವು ಕಿಟಕಿಗಳನ್ನು ಮುಚ್ಚಿ ಹೋಗದಿದ್ದರೆ ಎಲ್ಲ ಗುಬ್ಬಿಗಳೂ ಉಳಿಯುತ್ತಿದ್ದವು. ಅವುಗಳ ಹಣೇಬರಹ. ಆದರೆ ಮೂರನೇಯದನ್ನು ರಕ್ಷಿಸಲೋಸುಗವೇ ಬಾಬಾ ನಮ್ಮನ್ನು ತೀವ್ರ ಕಳಿಸಿರಬಹುದು ಎಂದು ಅವರು ಭಾವಿಸಿದರು.

## ಮಹಾಜನಿ ಅವರ ಯಜಮಾನ

ಮುಂಬಯಿಯ ಸಲಹಾ ವಕೀಲ ಠಕ್ಕರ ಧರಮಸಿ ಜೇಠಾಭಾಯಿ ಅವರಲ್ಲಿ ಕಾಕಾ ಮ್ಯಾನೇಜರ ಆಗಿದ್ದರು. ಯಜಮಾನ ಮತ್ತು ನೌಕರ ಇಬ್ಬರೂ ಪರಸ್ಪರ ಸಖ್ಯದಿಂದಿದ್ದರು. ಕಾಕಾರವರು ಆಗಾಗ್ಗೆ ಶಿರ್ಡಿಗೆ ಹೋಗಿ ಅಲ್ಲಿ ಸ್ವಲ್ಪ ದಿನ ತಂಗಿ ಬಾಬಾ ಅಪ್ಪಣೆ ಕೊಟ್ಟಾಗ ಹಿಂತಿರುಗುತ್ತಿದ್ದರು. ಇದು ಠಕ್ಕರ ಧರಮಸಿ ಅವರಿಗೆ ತಿಳಿದಿತ್ತು. ಕುತೂಹಲದಿಂದ ಬಾಬಾ ಅವರನ್ನು ಪರೀಕ್ಷಿಸಲೋಸುಗ ಠಕ್ಕರರು ಹೋಳಿ ರಜಾದಿನಗಳಲ್ಲಿ ಕಾಕಾ ಅವರೊಡನೆ ಶಿರ್ಡಿಗೆ ಹೊರಡಬೇಕೆಂದು ನಿರ್ಧರಿಸಿದರು. ಕಾಕಾ ತಮ್ಮೊಡನೆ ಹಿಂತಿರುಗಿ ಬರುವದು ಖಚಿತವಾಗಿರಲಿಲ್ಲವಾದುದರಿಂದ ಇನ್ನೊಬ್ಬನನ್ನು ಸಂಗಡ ಕರೆದುಕೊಂಡು ಮೂವರು ಶಿರ್ಡಿಗೆ ಹೊರಟರು. ಕಾಕಾ ಜೊತೆಗೆ ಎರಡು ಸೇರು ದ್ರಾಕ್ಷೆ ತಂದಿದ್ದರು. ಶಿರ್ಡಿಗೆ ಬಂದ ಮೇಲೆ ಎಲ್ಲರೂ

ಬಾಬಾ ಅವರ ದರ್ಶನಕ್ಕೊಸ್ಕರ ಮಸೀದಿಗೆ ಹೋದರು. ಆಗ ಅಲ್ಲಿ ಬಾಬಾಸಾಹೇಬ ತರ್ಖಡ ಅವರೂ ಇದ್ದರು. ಠಕ್ಕರ ಅವರು ತರ್ಖಡರಿಗೆ "ಇಲ್ಲಿಗೆ ಏಕೆ ಬಂದಿರಿ?" ಎಂದು ಕೇಳಲು, "ದರ್ಶನಕ್ಕೆ" ಎಂದು ತರ್ಖಡ ಉತ್ತರವಿತ್ತರು. ಆಗ ಠಕ್ಕರ ಅವರು ಪುನ: "ಇಲ್ಲೇನಾದರೂ ಪವಾಡ ಜರುಗಿತೆ?" ಎಂದು ಕೇಳಿದರು. ಅದಕ್ಕೆ ಶ್ರೀ ತರ್ಖಡ ಅವರು ಪವಾಡವನ್ನು ನೋಡುವುದು ತಮ್ಮ ಉದ್ದೇಶವಲ್ಲವೆಂದು ಹೇಳಿ ಇಲ್ಲಿ ಭಕ್ತರ ಬಯಕೆ ಈಡೇರುತ್ತದೆ ಎಂದರು. ಆಗ ಕಾಕಾ ಬಾಬಾ ಅವರಿಗೆ ನಮಸ್ಕರಿಸಿ ತಾವು ತಂದ ದ್ರಾಕ್ಷೆ ಅರ್ಪಿಸಿದರು. ಬಾಬಾ ಅವರು ಅವುಗಳನ್ನು ಎಲ್ಲರಿಗೂ ಹಂಚಲು ಹೇಳಿದರು. ಠಕ್ಕರ ಅವರಿಗೂ ದ್ರಾಕ್ಷೆ ಬಂದಿತು. ಡಾಕ್ಟರರು ದ್ರಾಕ್ಷೆಯನ್ನು ಚೆನ್ನಾಗಿ ತೊಳೆಯದೆ ತಿನ್ನಬಾರದೆಂದು ಹೇಳಿದ್ದರಿಂದ ಠಕ್ಕರ ಅವರಿಗೆ ಅದನ್ನು ಹಾಗೆಯೇ ತಿನ್ನಲು ಮನಸ್ಸೊಪ್ಪಲಿಲ್ಲ. ಅಂತೆಯೇ ಅದನ್ನು ತಿರಸ್ಕರಿಸುವ ಮನಸ್ಸೂ ಇರಲಿಲ್ಲ. ಈ ರೀತಿ ಅವರು ಗೊಂದಲದಲ್ಲಿ ಬಿದ್ದರು: ಅನಿವಾರ್ಯವಾಗಿ ಅದನ್ನು ಬಾಯಿಯಲ್ಲಿ ಹಾಕಿಕೊಂಡರು. ಆದರೆ ಬೀಜಗಳನ್ನೇನು ಮಾಡಬೇಕೆಂದು ಗೊತ್ತಾಗಲಿಲ್ಲ. ಮಸೀದಿಯಲ್ಲಿ ಉಗುಳುವ ಹಾಗಿರಲಿಲ್ಲ. ಆದುದರಿಂದ ಮನಸ್ಸಿಲ್ಲದೆ ಅವರು ಬೀಜ ನುಂಗಿದರು. ಆಗ ಅವರು ಮನಸ್ಸಿನಲ್ಲಿ "ಬಾಬಾರವರು ನಿಜವಾದ ಯೋಗಿಗಳಾಗಿದ್ದರೆ ನನಗೆ ದ್ರಾಕ್ಷೆ ಇಷ್ಟವಿಲ್ಲವೆಂಬುದು ಅವರಿಗೆ ತಿಳಿಯದೆ ಇರುತ್ತಿತ್ತೇ? ನನ್ನ ಮೇಲೆ ಈ ಒತ್ತಾಯವೇಕೇ?" ಎಂದರು. ಈ ಯೋಚನೆ ಅವರ ಮನಸ್ಸಿನಲ್ಲಿ ಸುಳಿಯುತ್ತಿರುವಾಗಲೇ ಬಾಬಾ ಅವರಿಗೆ ಪುನ: ಸ್ವಲ್ಪ ದ್ರಾಕ್ಷೆ ಕೊಟ್ಟರು. ಠಕ್ಕರ ಅವುಗಳನ್ನು ತಿನ್ನದೇ ಕೈಯಲ್ಲಿ ಸುಮ್ಮನೆ ಇಟ್ಟುಕೊಂಡರು. ಬಾಬಾ ತಿನ್ನಲು ಹೇಳಿದರು. ಆಗ ಅವುಗಳನ್ನು ಅನಿವಾರ್ಯವಾಗಿ ತಿಂದರು. ಈಗ ಅವುಗಳಲ್ಲಿ ಬೀಜವಿಲ್ಲದಿದ್ದನ್ನು ಕಂಡು ಆಶ್ಚರ್ಯಚಕಿತರಾದರು.! ಅವರು ಪವಾಡ ನೋಡಲು ಅಪೇಕ್ಷಿಸಿದ್ದರಲ್ಲವೆ?" ಬಾಬಾರವರು ನನ್ನ ಇಂಗಿತವನ್ನರಿತು ದ್ರಾಕ್ಷೆಯಲ್ಲಿ ಬೀಜವಿಲ್ಲದಂತೆ ಮಾಡಿದರು" ಎಂದು ಠಕ್ಕರು

ತಿಳಿದುಕೊಂಡರು. ಇದು ಅದ್ಭುತ ಶಕ್ತಿ! ಮತ್ತೊಮ್ಮೆ ಪರೀಕ್ಷಿಸಲೋಸುಗ ಅವರು ಕಾಕಾ ಅವರಿಗೆ "ನೀವು ತಂದಿದ್ದ ದ್ರಾಕ್ಷೆ ಎಂತಹದು?" ಎಂದು ಕೇಳಲು ಅವರು ಸಬೀಜ ದ್ರಾಕ್ಷೆ ಎಂದು ಉತ್ತರಿಸಿದರು. ಇದನ್ನು ಕೇಳಿದ ಠಕ್ಕರ ಅವರಿಗೆ ಮತ್ತಷ್ಟು ಆಶ್ಚರ್ಯವಾಯಿತು. ತಮ್ಮ ನಂಬಿಕೆಯನ್ನು ಧೃಡಪಡಿಸಿಕೊಳ್ಳಲೋಸುಗ ಶ್ರೀ ಠಕ್ಕರ ಅವರು ಮತ್ತೊಮ್ಮೆ "ಬಾಬಾ ಅವರು ನಿಜವಾದ ಸಂತರಿದ್ದರೆ ಈ ಸಾರೆ ದ್ರಾಕ್ಷೆಯನ್ನು ಮೊದಲು ಕಾಕಾ ಅವರಿಗೆ ಕೊಡಲಿ" ಎಂದು ಮನಸ್ಸಿನಲ್ಲಿ ಅಂದುಕೊಂಡರು. ಆ ಸಲವೂ ಸಹ ಬಾಬಾ ಅವರ ಇಂಗಿತವನ್ನರಿತು ಹಂಚುವುದನ್ನು ಮೊದಲು ಕಾಕಾ ಅವರಿಂದ ಆರಂಭಿಸಲು ಹೇಳಿದರು. ಈ ಪವಾಡಗಳು ಶ್ರೀ ಠಕ್ಕರ ಅವರಿಗೆ ಸಾಕಷ್ಟು ನಂಬಿಕೆ ಹುಟ್ಟಿಸಿದವು.

ಶ್ಯಾಮ ಅವರು ಠಕ್ಕರರನ್ನು ಕಾಕಾರವರ ಯಜಮಾನರೆಂದು ಬಾಬಾ ಅವರಿಗೆ ಪರಿಚಯ ಮಾಡಿಕೊಟ್ಟರು. ಆಗ ಬಾಬಾ "ಇವರು ಎಂಥ ಯಜಮಾನರು? ಅವರಿಗೆ ಬೇರೆ ಯಜಮಾನನಿದ್ದಾನೆ?" ಎಂದು ಹೇಳಿದರು. ಕಾಕಾ ಸಂತಸಗೊಂಡರು. ಠಕ್ಕರ ಅವರು ಬಾಬಾ ಅವರಿಗೆ ನಮಸ್ಕರಿಸಿ ವಾಡಾಕ್ಕೆ ಹಿಂತಿರುಗಿದರು.

ಮಧ್ಯಾಹ್ನದ ಆರತಿ ನಂತರ ಎಲ್ಲರೂ ಹೊರಡಲು ಅನುಮತಿ ಪಡೆಯಲು ಬಾಬಾ ಅವರ ಕಡೆಗೆ ಬಂದರು. ಶ್ಯಾಮ ಠಕ್ಕರ ಅವರ ಪರವಾಗಿ ಮಾತನಾಡಿದರು. ಆಗ ಬಾಬಾ ಅವರು "ಚಂಚಲಚಿತ್ತದ ಮನುಷ್ಯನೊಬ್ಬನಿದ್ದನು. ಅವನು ಆರೋಗ್ಯವಾಗಿಯೂ, ಐಶ್ವರ್ಯವಂತನಾಗಿಯೂ ಇದ್ದನು. ಆದರೂ ಸಲ್ಲದ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಂಡು ಅಶಾಂತಿಯಿಂದ ಇದ್ದನು ಅವನ ಸ್ಥಿತಿಯನ್ನು ಕಂಡು ಕನಿಕರ ಪಟ್ಟು ನಾನು ಅವನಿಗೆ "ನಿನ್ನ ಮನಸ್ಸನನ್ನು ಒಂದು ಕಡೆ ನಿಶ್ಚಿತವಾಗಿ ಇಡು. ಹೀಗೇಕೆ ಚಂಚಲನಾಗಿರವೆ? ಒಂದೇ ಸ್ಥಳವನ್ನು ನಂಬು ಎಂದು ಹೇಳಿದೆನು" ಎಂದು ಉತ್ತರ ಕೊಟ್ಟರು.

ಬಾಬಾ ಅವರು ತಮ್ಮನ್ನೇ ಉದ್ದೇಶಿಸಿ ಮಾತನಾಡಿದರು ಎಂಬುದು ಠಕ್ಕರ ಅವರಿಗೆ ತಿಳಿಯಿತು. ಅವರಿಗೆ ಕಾಕಾ ಅವರೂ ಸಹ ತಮ್ಮ ಜೊತೆಯಲ್ಲಿ ಹಿಂತಿರುಗಬೇಕೆಂದು ಮನಸ್ಸಿತ್ತು. ಬಾಬಾ ಠಕ್ಕರ ಜೊತೆಯಲ್ಲಿ ಹೊರಡಲು ಕಾಕಾ ಅವರಿಗೆ ಆಜ್ಞಾಪಿಸಿದರು. ಇದರಿಂದ ಠಕ್ಕರಿಗೆ ಸಮಾಧಾನವಾಯಿತು.

ಆಗ ಬಾಬಾ ಕಾಕಾ ಅವರಿಂದ ೧೫ ರೂ ದಕ್ಷಿಣೆ ಕೇಳಿ ತೆಗೆದುಕೊಂಡರು. ನಂತರ ಕಾಕಾ ಅವರನ್ನು ಕುರಿತು " ನಾನು ಯಾರಿಂದಲಾದರೂ ಒಂದು ರುಪಾಯಿ ದಕ್ಷಣೆ ತೆಗೆದುಕೊಂಡರೆ ಅದರ ಹತ್ತರಷ್ಟು ಹಿಂತಿರುಗಿಸಬೇಕಾಗುತ್ತದೆ. ನಾನು ಉಚಿತವಾಗಿ ಏನನ್ನೂ ಪಡೆಯವುದಿಲ್ಲ. ವಿವೇಚನೆ ಇಲ್ಲದೆ ಯಾರನ್ನೂ ಕೇಳುವುದಿಲ್ಲ. ನನ್ನ ಗುರುವು ಅಜ್ಞೆ ಮಾಡಿದವರಿಂದ ಮಾತ್ರ ದಕ್ಷಿಣೆ ಪಡೆಯುತ್ತೇನೆ. ನನ್ನ ಗುರುವಿಗೆ ಅವನು ಋಣಿಯಾಗಿದ್ದರೆ ಮಾತ್ರ ಅವನಿಂದ ದಕ್ಷಿಣೆ ಪಡೆಯುತ್ತೇನೆ. ದಾನಿಯು ಬೀಜ ಬಿತ್ತಿ ಮುಂದೆ ಸುಗ್ಗಿಯ ಪೈರನ್ನು ಪಡೆಯುತ್ತಾನೆ. ನೀವು ಪೂರ್ವಜನ್ಮದಲ್ಲಿ ಕೊಡದೆ ಇದ್ದರೆ ಈ ಜನ್ಮದಲ್ಲಿ ನಿಮಗೆ ಸಿಗಲಾರದು. ಅದುದರಿಂದ ತೆಗೆದುಕೊಳ್ಳಲು ಮುಖ್ಯ ಸಾಧನ– ಕೊಡುವುದು. ದಕ್ಷಿಣೆಯನ್ನು ಕೊಡುವುದರಿಂದ ವೈರಾಗ್ಯವು ವೃದ್ಧಿಯಾಗುತ್ತದೆ. ಆದರಿಂದ ಭಕ್ತಿ ಮತ್ತು ಜ್ಞಾನ ದೊರೆಯತ್ತವೆ. ಒಂದು ಕೊಟ್ಟು ಹತ್ತರಷ್ಟು ಪಡೆಯಿರಿ" ಎಂದು ಹೇಳಿದರು. ಇದನ್ನು ಕೇಳಿ ಠಕ್ಕರ ಅವರು ತಮ್ಮ ನಿರ್ಧಾರವನ್ನು ಬದಲಾಯಿಸಿ ೧೫.ರೂ ದಕ್ಷಿಣೆ ಕೊಟ್ಟರು. ತಮ್ಮ ಅನುಮಾನಗಳ ಪರಿಹಾರವಾಗಿದ್ದುದನ್ನು ಕಂಡು ಶಿರ್ಡಿಗೆ ಬಂದಿದ್ದು ಒಳಿತಾಯಿತು ಎಂದು ಸಮಾಧಾನ ಪಟ್ಟರು. ಎಲ್ಲ ಕಾರ್ಯವನ್ನೂ ಅವರೇ ಮಾಡುತ್ತಿದ್ದರೂ ಸಹ ಬಾಬಾ ವೈರಾಗ್ಯದಿಂದ ಇರುತ್ತಿದ್ದರು. ನಮಸ್ಕಾರ ಮಾಡಲಿ– ಬಿಡಲಿ, ದಕ್ಷಿಣೆ ಕೊಡಲಿ–ಬಿಡಲಿ ಎಲ್ಲರೂ ಅವರು ದೃಷ್ಟಿಯಲ್ಲಿ ಒಂದೇ. ಯಾರನ್ನೂ ಅವರು ಅವಮಾನಪಡಿಸುತ್ತಿರಲಿಲ್ಲ. ಅಥಾವ ತಮ್ಮನ್ನು ಪೂಜಿಸುತ್ತಿರುವರೆಂದು ಸಂತೋಷ ಪಡುತ್ತಿರಲಿಲ್ಲ.

## ಅನಿದ್ರತೆ

ಬಾಂದ್ರಾದ ಕಾಯಸ್ಥ ಪ್ರಭು ಜಾತಿಯನೊಬ್ಬನು ಬಹಳ ಕಾಲದಿಂದ ಅನಿದ್ರತೆಯಿಂದ ನರಳುತ್ತಿದ್ದನು. ಅವನು ಹಾಸಿಗೆಯ ಮೇಲೆ ಮಲಗಿಕೊಂಡ ಕೂಡಲೆ ಅವನ ಗತಿಸಿದ ಅಜ್ಜ ಕಾಣಿಸಿಕೊಂಡು, ಬೈದು ಶಾಪ ಕೊಡುತ್ತಿರುವಂತೆ ಭಾಸವಾಗುತ್ತಿತ್ತು. ಇದು ಅವನ ನಿದ್ರೆಯನ್ನು ಭಂಗಮಾಡಿ ಇಡೀ ರಾತ್ರಿ ವೇದನೆ ಮಾಡುತ್ತಿತ್ತು. ಅವನು ಬಹಳ ಚಿಂತೆಯಲ್ಲಿದ್ದನು. ಈ ಬಗ್ಗೆ ಬಾಬಾ ಅವರ ಭಕ್ತರೊಬ್ಬರನ್ನು ವಿಚಾರಿಸಿದನು. ಆಗ ಅವರು ಉಧಿಯೇ ದಿವ್ಯೌಷಧವೆಂದು ಸಲಹೆ ಮಾಡಿದರು. ಮತ್ತು ಸ್ವಲ್ಪ ಉಧಿಯನ್ನು ಕೊಟ್ಟು, ರಾತ್ರಿ ಮಲಗುವಾಗ ಸ್ವಲ್ಪ ಹಣೆಗೆ ಹಚ್ಚಿಕೊಂಡು ಉಧಿ ಪೊಟ್ಟಣವನ್ನು ತಲೆದಿಂಬಿನ ಕೆಳಗೆ ಇಟ್ಟುಕೊಳ್ಳುವಂತೆ ಹೇಳಿದರು. ಅವರು ಇದರಂತೆ ಮಾಡಿ ಆ ರಾತ್ರಿ ಸುಖವಾಗಿ ನಿದ್ರೆ ಬಂದುದನ್ನು ನೋಡಿ ಆಶ್ಚರ್ಯಗೊಂಡರು. ಅವರು ಈ ಕ್ರಮವನ್ನು ಮುಂದುವರೆಸಿದರು. ರಾತ್ರಿ ಮಲಗುವಾಗ ಹಾಸಿಗೆ ಹತ್ತಿರ ಬಾಬಾ ಫೋಟೋ ತೂಗು ಹಾಕಿದರು. ಪ್ರತಿದಿನವೂ ಆ ಫೋಟೋ ಪೂಜೆ ಮಾಡ ಹತ್ತಿದರು. ಮತ್ತು ಗುರವಾರ ಹಾರ ಮತ್ತು ನೈವೇದ್ಯಗಳನ್ನು ಅರ್ಪಿಸ ಹತ್ತಿದರು. ಅನಂತರ ಅವರು ಸುಖವಾಗಿದ್ದರು.

## ಬಾಳಾಜಿ ಪಾಟೀಲ ನೇವಾಸಕರ

ಬಾಳಾಜಿ ನೇವಾಸಕರ ಬಾಬಾ ಅವರ ಪರಮ ಭಕ್ತನಾಗಿದ್ದನು. ಅವನು ಬಾಬಾ ಅವರಿಗೆ ಶ್ರೇಷ್ಠತಮವಾದ, ನಿಸ್ವಾರ್ಥವಾದ ಸೇವೆ ಸಲ್ಲಿಸಿದನು. ಬಾಬಾ ಅವರು ಹಾದು ಹೋಗುತ್ತಿದ್ದ ಶಿರ್ಡಿಯ ದಾರಿಯನ್ನು ಅಚ್ಚು ಕಟ್ಟಾಗಿ ಗುಡಿಸಿ ಶುಚಿಯಾಗಿಟ್ಟಿದ್ದನು. ಇವನ ನಂತರ ಈ ಕೆಲಸವನ್ನು ರಾಧಾಕೃಷ್ಣಮಾಯಿ ಮತ್ತು ಅಬ್ದುಲ್ ಇವರು ಮಾಡ ಹತ್ತಿದರು. ಬಾಳಾಜಿ ಸುಗ್ಗಿ ಮಾಡಿಕೊಂಡು ಧಾನ್ಯವೆಲ್ಲವನ್ನೂ

ಮೊದಲು ಬಾಬಾ ಅವರಿಗೆ ಅರ್ಪಿಸುತ್ತಿದ್ದನು. ನಂತರ ಬಾಬಾ ಅವರು ಕೊಟ್ಟಷ್ಟು ಧಾನ್ಯ ಮಾತ್ರ ತೆಗೆದುಕೊಂಡು ಹೋಗಿ ಸಂಸಾರ ನಿರ್ವಹಣೆ ಮಾಡುತ್ತಿದ್ದನು. ಇದನ್ನು ಅವನು ಬಹಳ ಕಾಲದವರೆಗೆ ನಡೆಸಿಕೊಂಡು ಹೋದನು. ಇವನ ನಂತರ ಅವನ ಮಗನೂ ಸಹ ತಂದೆಯನ್ನು ಅನುಸರಿಸಿ ನಡೆದುಕೊಂಡನು.

## ಉಧಿಯ ಶಕ್ತಿ

ಅಂದು ಬಾಳಾಜಿಯವರ ಶ್ರಾದ್ಧ. ಅನೇಕ ಅತಿಥಿಗಳು ಮನೆಗೆ ಬಂದರು. ಅಡಿಗೆ ಮಾಡಿದುದಕ್ಕಿಂತ ಮೂರರಷ್ಟು ಜನ ಕೂಡಿದ್ದರು. ಶ್ರೀಮತಿ ನೇವಾಸಕರ ಅವರಿಗೆ ದಿಕ್ಕು ತೋಚದಂತಾಯಿತು. ಮಾಡಿರುವ ಅಡಿಗೆ ಎಲ್ಲರಿಗೂ ಸಾಕಾಗುವದಿಲ್ಲವೆಂದೂ, ತಮ್ಮ ಮನೆತನದ ಗೌರವಕ್ಕೆ ಭಂಗ ಬಂದಿತೆಂದೂ ಅವರು ವ್ಯಾಕುಲದಿಂದ ಇದ್ದರು. ಆಗ ಅವರ ಅತ್ತೆಯವರು "ಹೆದರಬೇಡ ಇದು ಬಾಬಾ ಅವರ ಆಹಾರ. ನಮ್ಮದಲ್ಲ. ಆಹಾರದ ಪಾತ್ರೆಗಳನ್ನು ಬಟ್ಟೆಯಿಂದ ಮುಚ್ಚು. ಅವುಗಳ ಮೇಲೆ ಉಧಿಯನ್ನು ಸಿಂಪಡಿಸು. ನಂತರ ಊಟ ಬಡಿಸು. ಸಾಯಿಬಾಬಾ ಅವರು ನಮ್ಮನ್ನು ಈ ಕಷ್ಟದಿಂದ ಪಾರು ಮಾಡುವರು" ಎಂದು ಸಮಾಧಾನ ಹೇಳಿದರು. ಹಾಗೆ ಮಾಡಲು ಆಹಾರವು ಎಲ್ಲರಿಗೂ ಸಾಕಾಗಿ ಇನ್ನೂ ಹೆಚ್ಚಿಗೆ ಉಳಿದು ಹೋಯಿತು. ಭಕ್ತಿಯಂತೆ ಅನುಭವ!

## ಸರ್ಪರೂಪದಲ್ಲಿ ಸಾಯಿಬಾಬಾ

ಶಿರ್ಡಿಯ ರಘು ಪಾಟೀಲ ಎಂಬುವರು ಒಮ್ಮೆ ಬಾಳಾಜಿ ಪಾಟೀಲರನ್ನು ಕಾಣಲು ನೇವಾಸಕ್ಕೆ ಹೋಗಿದ್ದರು. ಆ ರಾತ್ರಿ ದನದ ಕೊಟ್ಟಿಗೆಯಲ್ಲಿ ಒಂದು ಸರ್ಪ ಬುಸುಗುಟ್ಟುತ್ತಿದ್ದುದನ್ನು ಕಂಡರು. ದನಕರುಗಳು ಗಾಬರಿಯಿಂದ ಅತ್ತಿತ್ತ ಓಡಾಡ ಹತ್ತಿದವು. ಮನೆಯವರೆಲ್ಲ ಗಾಬರಿಯಾದರು. ಆದರೆ ಬಾಳಾಜಿಯವರು ಮಾತ್ರ ಸಾಯಿಬಾಬಾ ಅವರೇ ಸರ್ಪ ರೂಪದಲ್ಲಿ ಬಂದಿದ್ದಾರೆಂದು ಭಾವಿಸಿ ಒಂದು ಲೋಟ

ಹಾಲನ್ನು ಮುಂದೆ ತಂದಿಟ್ಟು "ಬಾಬಾ! ಏಕೆ ಬುಸುಗುಟ್ಟುತ್ತ ಸಪ್ಪಳ ಮಾಡುತ್ತಿರುವಿರಿ? ನೀವು ನಮ್ಮನ್ನು ಹೆದರಿಸುವಿರಾ? ಈ ಹಾಲನ್ನು ಶಾಂತಿಯಿಂದ ಕುಡಿಯಿರಿ." ಎಂದು ಹೇಳಿ ಅಲ್ಲಿಯೇ ಕುಳಿತರು. ಅಲ್ಲಿದ್ದವರೆಲ್ಲರೂ ಭಯದಿಂದ ಏನೂ ಮಾಡಲು ತೋಚದೆ ಮೂಕರಂತೆ ನಿಂತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಆ ಸರ್ಪವು ಹಾಲನ್ನು ಕುಡಿದು ಮಾಯವಾಯಿತು. ಎಲ್ಲಿಗೆ ಹೋಯಿತೆಂಬುದು ಯಾರಿಗೂ ತಿಳಿಯಲಿಲ್ಲ. ದನದ ಕೊಟ್ಟಿಗೆಯಯನ್ನೆಲ್ಲ ಹುಡುಕಿದರೂ ಅದು ಸಿಗಲಿಲ್ಲ.

ಬಾಳಾಜಿಯವರಿಗೆ ಇಬ್ಬರು ಪತ್ನಿಯರೂ ಮತ್ತು ಕೆಲವು ಚಿಕ್ಕ ಮಕ್ಕಳೂ ಇದ್ದರು. ಅವರು ನೇವಾಸದಿಂದ ಬಾಬಾ ಅವರ ದರ್ಶನಕ್ಕೋಸುಗ ಶಿರ್ಡಿಗೆ ಆಗಾಗ ನಡೆದು ಬರುತ್ತಿದ್ದರು. ಅವರಿಗೆ ಬಾಬಾ ಅವರು ಸೀರೆ ಕುಪ್ಪಸಗಳನ್ನು ಕೊಂಡು ತಂದು ಅವುಗಳನ್ನು ಕೊಟ್ಟು ಆಶೀರ್ವದಿಸುತ್ತಿದ್ದರು.

ಶ್ರೀ ಸಾಯಿ ಪ್ರಣಾಮ.

# ೩೬ನೇ ಅಧ್ಯಾಯ

## ಇಬ್ಬರು ಗೋವಾದವರು– ಶ್ರೀಮತಿ ಔರಂಗಾಬಾದಕರ ಅವರ ಕಥೆಗಳು

ಒಮ್ಮೆ ಗೋವಾದಿಂದ ಇಬ್ಬರು ಬಾಬಾ ಅವರ ದರ್ಶನಕ್ಕೋಸ್ಕರ ಶಿರ್ಡಿಗೆ ಬಂದು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಇಬ್ಬರೂ ಒಟ್ಟಿಗೆ ಬಂದಿದ್ದರೂ ಕೂಡ ಬಾಬಾ ಒಬ್ಬನಿಂದ ಮಾತ್ರ ದಕ್ಷಿಣೆ ಕೇಳಿ ತೆಗೆದುಕೊಂಡರು. ಇನ್ನೊಬ್ಬನು ತಾನಾಗಿಯೇ ೧೫ ರೂ ಗಳನ್ನು ದಕ್ಷಿಣೆ ಕೊಡಲು ಬಂದಾಗ ಬಾಬಾ ಅದನ್ನು ತೆಗೆದುಕೊಳ್ಳಲಿಲ್ಲ. ಇದನ್ನು ಕಂಡು ಎಲ್ಲರೂ ವಿಸ್ಮಿತರಾದರು. ಆ ಸಮಯದಲ್ಲಿ ಅಲ್ಲಿಯೇ ಇದ್ದ ಶ್ಯಾಮ ಅವರು ಬಾಬ ಅವರನ್ನು ಕುರಿತು "ಇದೇನು? ಇಬ್ಬರೂ ಒಟ್ಟಿಗೆ ಬಂದಿರುತ್ತಾರೆ. ಒಬ್ಬನನ್ನು ಮಾತ್ರ ಕೇಳಿ ಅವನಿಂದ ದಕ್ಷಿಣೆ ಪಡೆದಿರಿ. ಇನ್ನೊಬ್ಬನು ತಾನೇ ಸ್ವತ: ಮುಂದಾಗಿ ದಕ್ಷಿಣೆ ಕೊಡಲು ಬಂದರೂ ನಿರಾಕರಿಸುತ್ತೀರಿ? ಇದೇಕೆ ಈ ಭೇದಭಾವ?" ಎಂದು ಕೇಳಿದನು. ಅದಕ್ಕೆ ಬಾಬಾ ಅವರು "ಶ್ಯಾಮ – ನಿನಗೆ ಏನೂ ತಿಳಿಯದು; ನಾನು ಯಾರಿಂದಲೂ ಪುಕ್ಕಟೆ ಏನೂ ತೆಗೆದುಕೊಳ್ಳುವುದಿಲ್ಲ. ಈ ಮಸೀದಿಮಾಯಿ ಸಾಲ ತೀರಿಸುವಂತೆ ಕೇಳುತ್ತಾಳೆ. ಸಾಲಗಾರನು ಸಾಲವನ್ನು ತೀರಿಸಿ ಋಣ ಮುಕ್ತಾನಾಗುತ್ತಾನೆ. ನನಗೆ ಮನೆ, ಮಠ ಮತ್ತು ಸಂಸಾರ ಏನೂ ಇಲ್ಲ. ನನಗೇನು ಬೇಕು? ನಾನುಸರ್ವ ಸ್ವತಂತ್ರನು. ಋಣ–ದೋಷ ಮತ್ತು ಹತ್ಯೆ ಇವುಗಳಿಗೆ ಪ್ರಾಯಶ್ಚಿತ್ತ ಭೋಗಿಸಲೇ ಬೇಕು. ಅದನ್ನು ತಪ್ಪಿಸಿಕೊಳ್ಳಲು ಅಸಾಧ್ಯ" ಎಂದು ಹೇಳಿ, ತಮ್ಮದೇ ಆದ ರೀತಿಯಲ್ಲಿ ಮುಂದುವರಿದು ಈ ರೀತಿ ತಿಳಿಸಿದರು:

"ಮೊದಲು ಅವನು ಬಹಳ ಬಡವನಾಗಿದ್ದನು. ದೇವರ ದಯೆಯಿಂದ ಕೆಲಸ ದೊರೆತರೆ, ಮೊದಲನೆಯ ತಿಂಗಳ ಸಂಬಳದಲ್ಲಿ ೧೫ ರೂ. ಗಳನ್ನು ದೇವರಿಗೆ ಅರ್ಪಿಸುವೆನೆಂದು ಹರಕೆ ಹೊತ್ತನು.

ನಂತರ ಬಡ್ತಿ ದೊರತು ೧೫ ರೂ ಗಳಿಂದ ೩೦, ೬೦, ೧೦೦, ೨೦೦, ೬೦೦ ರೂ ಸಂಬಳ ದೊರಕಿತು. ಪ್ರಗತಿಯ ಸಂತಸದಲ್ಲಿ ಅವನು ಹರಕೆಯನ್ನು ಮರೆತು ಬಿಟ್ಟನು. ಅವನ ಕರ್ಮವು ಅವನನ್ನು ಇಲ್ಲಿಗೆ ಬರಮಾಡಿದೆ- ಆದುದರಿಂದಲೇ ಅವನಿಂದ ನಾನೇ ಕೇಳಿ ೧೫ ರೂ. ದಕ್ಷಿಣೆ ಪಡೆದೆನು" ಎಂದರು.

## ಇನ್ನೊಂದು ಕಥೆ

"ಸಮುದ್ರದ ದಡದಲ್ಲಿ ಅಲೆದಾಡುತ್ತ ಕೊನೆಗೆ ನಾನೊಂದು ಮನೆಯ ಕಟ್ಟೆಯ ಮೇಲೆ ಕುಳಿತೆನು. ಮಾಲಿಕನು ನನ್ನನ್ನು ಸ್ವಾಗತಿಸಿ ಹೊಟ್ಟೆತುಂಬ ಆಹಾರ ನೀಡಿ, ಮಲಗಲು ಶುಚಿಯಾದ ಸ್ಥಳ ತೋರಿದನು. ಅಲ್ಲಿ ಒಂದು ಮಾಡ(ಫಡತಾಳ) ಇತ್ತು. ಅದರ ಹತ್ತಿರ ಮಲಗಿಕೊಂಡೆನು. ನಾನು ಗಾಢ ನಿದ್ರೆಯಲ್ಲಿ ಇದ್ದಾಗ ಆ ಮನುಷ್ಯನು ಗೋಡೆಯನ್ನೊಡೆದು ಒಳಗೆ ಬಂದನು. ನನ್ನ ಕಿಸೆ ಕತ್ತರಿಸಿ ಹಣವನ್ನು ತೆಗೆದುಕೊಂಡು ಹೋದನು. ಬೆಳಗ್ಗೆ ಎಚ್ಚರವಾಗಿ ನಾನು ನೋಡಿದಾಗ ನನ್ನ ೩೦,೦೦೦ ರೂಪಾಯಿಗಳು ಕಳವಾಗಿದ್ದವು. ಇದರಿಂದ ಬಹಳವಾಗಿ ದು:ಖಿಸಿದೆನು. ಅನ್ನ ಆಹಾರಗಳನ್ನು ತ್ಯಜಿಸಿ ಹದಿನೈದು ದಿನ ಅದನ್ನೇ ಕುರಿತು ಚಿಂತಿಸಿದೆನು. ಅಷ್ಟರಲ್ಲಿ ಫಕೀರನೊಬ್ಬನು ಬಂದು ನನ್ನ ದು:ಖಕ್ಕೆ ಕಾರಣವೇನೆಂದು ಕೇಳಿದನು. ಎಲ್ಲ ವಿಚಾರವನ್ನೂ ಅವನಿಗೆ ತಿಳಿಸಿದೆನು. ಆಗ ಅವನು "ನೀನು ನನ್ನ ಮಾತಿನ ಪ್ರಕಾರ ನಡೆದರೆ ನಿನ್ನ ಹಣ ನಿನಗೆ ಪುನ: ದೊರಕುವುದು. ನೀನೊಬ್ಬ ಫಕೀರನ ಕಡೆಗೆ ಹೋಗು; ಅವನ ಗುರುತನ್ನು ಹೇಳುತ್ತೇನೆ. ಅವನಲ್ಲಿ ಸಂಪೂರ್ಣ ಶರಣಾಗತನಾಗು" ಎಂದನು. ಅವನು ಹೇಳಿದಂತೆ ನಾನು ನಡೆದುಕೊಂಡೆನು. ನನ್ನ ಹಣವು ಸಿಕ್ಕಿತು. ನಂತರ ಆ ಮನೆಯನ್ನು ಬಿಟ್ಟು ಸಮುದ್ರದ ದಡಕ್ಕೆ ಬಂದುನೋಡಿದೆನು. ಹಡಗಿನೊಳಗೆ ಹೋಗಲು ಸಾಧ್ಯವಾಗಲಿಲ್ಲ. ದಟ್ಟಣೆ ಹೆಚ್ಚಾಗಿತ್ತು. ಅಪರಿಚಿತ ಶಿಪಾಯಿ ಒಬ್ಬನು ನನ್ನ ಪರವಾಗಿ ಮಧ್ಯಸ್ಥಿಕೆ ವಹಿಸಿದ್ದರಿಂದ

ಹಡಗಿನಲ್ಲಿ ಸ್ಥಳ ದೊರಕಿತು. ಇನ್ನೊಂದು ಊರನ್ನು ತಲುಪಿ ಅಲ್ಲಿಂದ ರೈಲಿನಲ್ಲಿ ಬಂದು ಮಸೀದಿ ಮಾಯಿಯನ್ನು ಸೇರಿದ್ದೇನೆ" ಎಂದರು.

ಕಥೆ ಮುಗಿಸಿ ಬಾಬಾ ಅವರು ಅತಿಥಿಗಳಿಗೆ ಊಟ ಉಪಚಾರದ ಅಣಿ ಮಾಡಲು ಶ್ಯಾಮ ಅವರಿಗೆ ಹೇಳಿದರು. ಶ್ಯಾಮ ಅವರು ಅವರಿಬ್ಬರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಭೋಜನ ಮಾಡಿಸಿದರು. ಆಗ ಶ್ಯಾಮ ಅವರು " ಬಾಬಾ ಅವರ ಕಥೆ ಬಹಳ ಗೂಢವಾಗಿತ್ತು. ಬಾಬಾ ಎಂದೂ ಸಮುದ್ರಕ್ಕೆ ಹೋಗಿಯೇ ಇಲ್ಲ. ೩೦,೦೦೦ರೂಪಾಯಿ ಅವರಲ್ಲಿ ಇರಲೇ ಇಲ್ಲ. ಅವರು ಪ್ರಯಾಣ ಮಾಡಿಯೂ ಇಲ್ಲ. ಹಣವನ್ನು ಕಳೆದುಕೊಂಡೂ ಇಲ್ಲ" ಎಂದು ಹೇಳಿ ಅವರ ಮಾತಿನ ಅರ್ಥ ತಿಳಿಯಿತೆ? ಎಂದು ಪ್ರಶ್ನಿಸಿದರು. ಆಗ ಅವರಿಬ್ಬರೂ ಮನ ಕರಗಿ ಕಣ್ಣೀರು ಸುರಿಸಿದರು. ಇಬ್ಬರೂ ಗದ್ಗದ ಕಂಠದಿಂದ "ಬಾಬಾ ಅವರು ಅಂತರ್ಯಾಮಿಗಳು. ಬಾಬಾ ಪರಬ್ರಹ್ಮರು. ಅವರು ಹೇಳಿದುದೆಲ್ಲವೂ ನಮ್ಮ ಬಗ್ಗೆಯೇ. ಅದೆಲ್ಲವೂ ನಮಗೆ ಸಂಬಂಧಿಸಿದ್ದುದೇ ಆಗಿದೆ. ಇದು ಅವರಿಗೆ ಹೇಗೆ ತಿಳಿಯಿತೆಂಬುದೇ ಪರಮಾಶ್ಚರ್ಯದ ಸಂಗತಿ. ಬೋಜನದ ನಂತರ ವಿವರವನ್ನು ತಿಳಿಸುವೆವು" ಎಂದರು.

ಭೋಜನವಾದ ನಂತರ ತಾಂಬೂಲ ತಿನ್ನುತ್ತ ಅವರು ತಮ್ಮ ಕಥೆಗಳನ್ನು ಹೇಳಲಾರಂಭಿಸಿದರು. ಒಬ್ಬನು "ಸಮುದ್ರ ಪಟ್ಟಿಯ ಮೇಲೆ ನನ್ನ ಊರು ಘಟ್ಟದ ಮೇಲೆ ಇದೆ. ನಾನು ನೌಕರಿ ಹುಡುಕಲು ಗೋವಾಕ್ಕೆ ಹೋದೆ. ನನಗೆ ಕೆಲಸ ಸಿಕ್ಕರೆ ಸಾಕೆಂದು ಶ್ರೀ ದತ್ತಾತ್ರೇಯ ದೇವರಿಗೆ ಹರಕೆ ಹೊತ್ತೆ. ಮೊದಲನೇ ತಿಂಗಳ ಸಂಬಳವನ್ನು ಅವನಿಗೆ ಅರ್ಪಿಸುವುದಾಗಿ ಬೇಡಿಕೊಂಡಿದ್ದೆ. ದೇವರ ದಯೆಯಿಂದ ನನಗೆ ಉದ್ಯೋಗ ದೊರಕಿತು. ಈಗ ಬಾಬಾ ಅವರು ಹೇಳಿದಂತೆ ನನಗೆ ಬಡ್ತಿಗಳೂ ದೊರಕಿದವು. ನಾನು ನನ್ನ ಹರಕೆಯನ್ನು ಮರೆತೆ. ಆದರೆ ಬಾಬಾ ಅವರು ಈ ರೀತಿ ಅದನ್ನು ನನಗೆ ಜ್ಞಾಪಿಸಿ ನನ್ನಿಂದ

ಹದಿನೈದು ರೂಪಾಯಿ ಕೇಳಿದ್ದಾರೆ. ನಾನು ಕೊಟ್ಟಿರುವುದು ದಕ್ಷಿಣೆಯಲ್ಲ – ಹಳೆಯ ಋಣವನ್ನು, ನನ್ನ ಹರಕೆಯನ್ನು ತೀರಿಸಿದ್ದೇನೆ" ಎಂದನು.

## ಫಕೀರನ ಸಲಹೆ

ಬಾಬಾ ಎಂದೂ ಹಣವನ್ನು ಬೇಡುತ್ತಿರಲಿಲ್ಲ ಮತ್ತು ತಮ್ಮ ಭಕ್ತರನ್ನು ಹಣ ಬೇಡಲು ಬಿಡುತ್ತಿರಲಿಲ್ಲ. ಹಣವು ಆಧ್ಯಾತ್ಮಿಕ ಪ್ರಗತಿಗೆ ಅಪಾಯಕರವೆಂದು ತಿಳಿದು ಅವರುಭಕ್ತರನ್ನು ಬಂಧನದಲ್ಲಿ ಸಿಲುಕಿಸಲು ಆಸ್ಪದ ಕೊಡುತ್ತಿರಲಿಲ್ಲ. ಈ ಸಂದರ್ಭದಲ್ಲಿ ಭಗತ ಮ್ಹಾಳಸಾಪತಿಯವರ ಅನುಭವವನ್ನು ನೋಡೋಣ. ಭಗತ ಮ್ಹಾಳಸಾಪತಿಯವರು ಕಡು-ಬಡವರಾಗಿದ್ದರು. ಬಾಬಾ ಅವರು ಅವರಿಗೆ ಹಣ ಕೂಡಿಡಲು ಆಸ್ಪದ ನೀಡಲಿಲ್ಲ. ದಕ್ಷಿಣೆಯಿಂದ ಬಂದ ಹಣದಲ್ಲಿ ಅವರಿಗೆ ಏನೂ ಬಾಬಾ ಕೊಡುತ್ತಿರಲಿಲ್ಲ. ಒಂದು ಸಾರೆ ವ್ಯಾಪಾರಿಯೊಬ್ಬನು ಬಂದು ಬಾಬಾ ಅವರಿಗೆ ಮ್ಹಾಳಸಾಪತಿಗೆ ಕೊಡಲು ಅಪಾರ ಹಣವನ್ನು ಕೊಟ್ಟನು. ಆದರೆ ಮ್ಹಾಳಸಾಪತಿಯವರು ಅದನ್ನು ತೆಗೆದುಕೊಳ್ಳಲು ಬಾಬಾ ಸಮ್ಮತಿಸಲಿಲ್ಲ.

ಆನಂತರ ಎರಡನೇಯವನು, "ನಮ್ಮ ಅಡಿಗೆಯವನು ನನ್ನಲ್ಲಿ ೩೫ ವರ್ಷಗಳಿಂದ ಬಹಳ ವಿಶ್ವಾಸದಿಂದ ಕೆಲಸ ಮಾಡುತ್ತಿದ್ದನು. ದುದೃಷ್ಟವಶಾತ್ ಅವನು ದುರ್ಮಾರ್ಗಪ್ರವರ್ತಕನಾಗಿ ಒಂದು ದಿನ ನನ್ನ ಎಲ್ಲ ಹಣವನ್ನು ದೋಚಿಕೊಂಡು ಹೋದನು. ನಾನು ರಾತ್ರಿ ಮಲಗಿದಾಗ ಹೇಗೋ ಬಂದು ನಾನು ಗಳಿಸಿದ ೩೦,೦೦೦ ರೂ.ಗಳನ್ನು ಅಪಹರಿಸಿದನು. ಬಾಬಾ ಅವರು ಅಷ್ಟು ಹಣ ಎಂದು ಸರಿಯಾಗಿ ಹೇಳಿದ್ದಾರೆ. ಅದು ಹೇಗೆ ಅವರಿಗೆ ತಿಳಿಯಿತೋ ನಾನರಿಯೆ. ನಾನು ಹಗಲಿರುಳೂ ವ್ಯಥೆಪಡುತ್ತ ಕುಳಿತಿದ್ದೆ. ವಿಚಾರಣೆಯಿಂದ ಪ್ರಯೋಜನವಾಗಲಿಲ್ಲ. ಹೀಗೆಯೇ ಹದಿನೈದು ದಿನ ಕಳೆದವು. ಒಂದು ದಿನ ನನ್ನ ಮನೆ ಅಂಗಳದಲ್ಲಿ ನಾನು

ಯೋಚಿಸುತ್ತ ಕುಳಿತಿದ್ದೆ. ಆಗ ಒಬ್ಬ ಫಕೀರನು ಬಂದು ನನ್ನ ವ್ಯಾಕುಲತೆಯ ಕಾರಣವನ್ನು ಕೇಳಿದನು. ನಡೆದುದೆಲ್ಲವನ್ನೂ ಅವನಿಗೆ ಹೇಳಿದೆನು. ಆಗ ಅವನು ಶಿರ್ಡಿಯಲ್ಲಿ ಸಾಯಿಬಾಬಾ ಎಂಬ ಮಹಾತ್ಮರಿದ್ದಾರೆ. ಅವರಿಗೆ ಹರಕೆ ಹೊತ್ತು ನೀನು ಅತಿಹೆಚ್ಚಾಗಿ ಪ್ರೀತಿಸುವ ಆಹಾರವನ್ನು ಅವರ ದರ್ಶನ ಪಡೆಯುವ ತನಕ ಸ್ವೀಕರಿಸುವುದಿಲ್ಲವೆಂದು ಸಂಕಲ್ಪ ಮಾಡು, ಎಂದು ಹೇಳಿದನು. ನಾನು ಅವನು ಹೇಳಿದಂತೆ ಹರಕೆ ಹೊತ್ತು 'ಬಾಬಾ, ನನ್ನ ಕಳೆದುಹೋದ ಮಾಲು ಸಿಗದ ಹೊರತು ಮತ್ತು ನಿಮ್ಮ ದರ್ಶನ ಪಡೆಯದ ಹೊರತು ನಾನು ಅನ್ನ ಸೇವಿಸುವುದಿಲ್ಲ. ಎಂದು ನಿರ್ಧಾರ ಮಾಡಿಕೊಂಡೆನು.

"ಇದಾದ ನಂತರ ಹದಿನೈದು ದಿನ ಕಳೆದವು ಆಗ ಓಡಿಹೋದ ಅಡಿಗೆಯವನು ಪುನಃ ನನ್ನ ಕಡೆಗೆ ಬಂದು ನನ್ನ ಹಣವನ್ನು ಹಿಂತಿರುಗಿಸಿದನು. ನಾನು ತಲೆಕೆಟ್ಟು ಈ ರೀತಿ ವರ್ತಿಸಿದೆ. ನಾನು ನಿಮ್ಮ ಪಾದಗಳಿಗೆ ಎರಗುತ್ತೇನೆ. ಕ್ಷಮಿಸಿ ಎಂದನು. ಹೀಗೆ ಎಲ್ಲವೂ ಸರಿಯಾಯಿತು. ಈ ಹಿಂದೆ ನನ್ನನ್ನು ಸಂಧಿಸಿದ ಫಕೀರನು ಪುನಃ ನನಗೆ ಕಾಣಲೇ ಇಲ್ಲ. ಅವನ ದರ್ಶನಕೆ ತವಕ ಪಡುತ್ತಿದ್ದೆ, ಬಹಳ ದೂರದಿಂದ ನನಗೆ ಸಹಾಯ ಮಾಡಲು ಬಂದ ಫಕೀರನೇ ಬಾಬಾ ಅವರೆಂದು ಊಹಿಸಲು ಸಂದೇಹವಿಲ್ಲ. ನನ್ನನ್ನು ನೋಡಿ ನನ್ನ ಕಳೆದು ಹೋದ ದ್ರವ್ಯವನ್ನು ಮರಳಿ ಕೊಡಿಸಲು ಯತ್ನಿಸಿದ ಬಾಬಾ ಅವರು ನನ್ನ ಮೂವತ್ತೈದು ರೂಪಾಯಿಗಳಿಗೆ ಆಶೆ ಪಡುತ್ತಾರೆಯೇ? ಎಂದಿಗೂ ಇಲ್ಲ. ಹೀಗೆ ಯಾರಿಂದಲೂ ಏನೂ ಅಪೇಕ್ಷಿಸದೆ ನಮ್ಮನ್ನು ಧಾರ್ಮಿಕ ಪಥದ ಕಡೆಗೆ ಸಾಗಿಸಲು ಬಾಬಾ ನಿರಂತರ ಪ್ರಯತ್ನ ಪಡುತ್ತಿದ್ದಾರೆ.

"ಕಳೆದು ಹೋದ ಧನವೆಲ್ಲ ಮರಳಿ ದೊರೆತು ನನಗೆ ಪರಮಾನಂದವಾಯಿತು. ಈ ರೀತಿ ಆನಂದದ ಉನ್ಮಾದದಲ್ಲಿ ಹರಕೆಯನ್ನು ಮರೆತೆ. ಮುಂದೆ ನಾನು ಒಂದು ದಿನ ಕೊಲಾಬಾದಲ್ಲಿ

ವಿಶ್ರಮಿಸುತ್ತಿದ್ದಾಗ ಬಾಬಾ ಅವರನ್ನು ಕನಸಿನಲ್ಲಿ ಕಂಡೆ. ಆಗ ನಾನು ಶಿರ್ಡಿಗೆ ಹೋಗಬೇಕೆಂಬುದು ನೆನಪಾಯಿತು. ಗೋವಾಕ್ಕೆ ಹೋಗಿ ಅಲ್ಲಿಂದ ಶಿರ್ಡಿಗೆ ಹೊರಡಬೇಕೆಂದು ನಿರ್ಧರಿಸಿದೆ. ಮುಂಬಯಿಗೆ ಹೋಗುವ ಹಡಗನ್ನು ಹತ್ತಲು ಬಂದರಿಗೆ ಹೋದೆ. ಸ್ಥಳವಿರಲಿಲ್ಲ. ಎಲ್ಲ ಸ್ಥಳ ಭರ್ತಿಯಾಗಿತ್ತು. ಅಪರಿಚಿತನಾದ ಜವಾನನೊಬ್ಬನ ಮಧ್ಯಸ್ಥಿಕೆಯಿಂದ ನನಗೆ ಅದರಲ್ಲಿ ಸ್ಥಳ ದೊರಕಿತು. ಮುಂಬಯಿಗೆ ಬಂದಿಳಿದೆ. ಅಲ್ಲಿಂದ ರೈಲಿನಲ್ಲಿ ಇಲ್ಲಿಗೆ ಬಂದೆ. ಬಾಬಾ ಅವರು ಸರ್ವಜ್ಞರೆಂಬುದು ಖಚಿತವಾದುದು. ನಾವು ಯಾರು ನಮ್ಮ ಮನೆ ಎಲ್ಲಿದೆ ಎಲ್ಲವೂ ಅವರಿಗೆ ತಿಳಿದಿದೆ. ನನ್ನ ಕಳೆದು ಹೋದ ದ್ರವ್ಯ ಪುನಃ ದೊರಕಿದುದು ನನ್ನ ಭಾಗ್ಯವೇ ಸರಿ! ಅನೇಕ ವರ್ಷಗಳಿಂದ ಬಾಬಾ ನಿಮ್ಮೊಡನೆಯೇ ಇದ್ದು ತಮ್ಮ ಮಾತುಕಥೆಗಳಿಂದ ನಿಮ್ಮನ್ನು ಆನಂದಪಡಿಸುತ್ತ ಇದ್ದಾರೆ. ಆದುದರಿಂದ ನೀವೇ ಧನ್ಯರು. ಬಾಬಾ ಅವರನ್ನು ಶಿರ್ಡಿಗೆ ಎಳೆದು ತಂದ ನಿಮ್ಮ ಪುಣ್ಯ ಫಲ ಅಗಾಧವಾದುದು. ಸಾಯಿಯೇ ನಮ್ಮ ದತ್ತ, ನನಗೆ ನನ್ನ ಮರೆತ ಹರಕೆಯನ್ನು ಜ್ಞಾಪಿಸಿದರು. ಹಡಗಿನಲ್ಲಿ ಸ್ಥಳ ದೊರಕಿಸಿ ಇಲ್ಲಿಗೆ ನನ್ನನ್ನು ಬರಮಾಡಿಕೊಂಡಿದ್ದಾರೆ. ಇದು ಅವರ ಸರ್ವಜ್ಞತೆಯ ಮತ್ತು ಸರ್ವಶಕ್ತಿಯ ದೃಷ್ಟಾಂತವಲ್ಲವೆ ?" ಎಂದನು.

## ಶ್ರೀಫಲದಿಂದ ಸಂತತಿ

ಸೊಲ್ಲಾಪುರದ ಸಖಾರಾಮ ಅವರ ಪತ್ನಿಗೆ ೨೭ ವರ್ಷಗಳಿಂದಲೂ ಸಂತಾನ ಇರಲಿಲ್ಲ. ಕಂಡ ದೇವರಿಗೆಲ್ಲ ಕೈ ಮುಗಿದು ಹರಕೆ ಹೊತ್ತು ನಿರಾಶರಾಗಿದ್ದರು. ಕೊನೆಯ ಪ್ರಯತ್ನವೆಂದು ತಮ್ಮ ಮಲಮಗನಾದ ವಿಶ್ವನಾಥನೊಡನೆ ಶಿರ್ಡಿಗೆ ಬಂದು ಬಾಬಾ ಅವರ ಸೇವೆ ಮಾಡುತ್ತ ಎರಡು ತಿಂಗಳು ಕಳೆದರು. ಅವರು ಮಸೀದಿಗೆ ಹೋದಾಗಲೆಲ್ಲ ಭಕ್ತಕೋಟಿಯು ಬಾಬಾ ಅವರನ್ನು ಮುತ್ತಿರುವುದನ್ನು ನೋಡುತ್ತಿದ್ದರು. ಅವರಿಗೆ ಬಾಬಾ ಅವರೊಬ್ಬರೇ ಇರುವಾಗ ಸಂಧಿಸಿ

ತಮ್ಮ ಬಯಕೆಯನ್ನು ಅವರಲ್ಲಿ ವ್ಯಕ್ತಪಡಿಸಿ ಆಶೀರ್ವಾದ ಪಡೆಯಬೇಕೆಂದು ಇಚ್ಛಿಸಿದ್ದರು. ಆದರೆ ಇಂಥ ಸಂದರ್ಬ ಬಹುಕಾಲದವರೆಗೆ ದ್ಹೊರಕಲೇ ಇಲ್ಲ. ಕೊನೆಗೆ ತಮ್ಮ ಪರವಾಗಿ ಬಾಬಾ ಅವರ ಜೊತ್ತೆಗೆ ಮಾತನಾಡಬೇಕೆಂದು ಅವರು ಶ್ಯಾಮ ಅವರಿಗೆ ವಿನಂತಿಸಿಕೊಂಡರು. ಆಗ ಶ್ಯಾಮ ಅವರು ಬಾಬಾ ಅವರ ದರ್ಬಾರು ಎಲ್ಲರಿಗೂ ತೆರೆದಿದೆ. ಆದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇನೆಂದು ಹೇಳಿ ನಿಮಗೆ ದೇವರು ಆಶೀರ್ವದಿಸಲಿ ಎಂದರು. ಮತ್ತು "ಬಾಬಾ ಅವರ ಊಟದ ಸಮಯಕ್ಕೆ ಸರಿಯಾಗಿ ತೆಂಗಿನಕಾಯಿ, ಗಂಧದಕಡ್ಡಿ ತೆಗೆದುಕೊಂಡು ಮಸೀದಿಗೆ ಬನ್ನಿ ; ನಾನು ನಿಮಗೆ ಸಂಜ್ಞೆ ಮಾಡಿದ ಕೂಡಲೆ ನೀವು ಒಳಗೆ ಬರಬೇಕು." ಎಂದು ಶ್ರೀಮತಿ ಔರಂಗಾಬಾದಕರರಿಗೆ ಹೇಳಿದರು. ಮುಂದೆ ಒಂದು ದಿನ ಬಾಬಾ ಊಟ ವಮಾಡಿದ ನಂತರ ಬಾಬಾ ತಮ್ಮ ಕೈ ತೊಳೆದುಕೊಳ್ಳುವಾಗ ಶ್ಯಾಮ ನೀರು ಹಾಕುತ್ತಿದ್ದರು. ಆಗ ಬಾಬಾ ಶ್ಯಾಮ ಅವರ ಕೆನ್ನೆ ಚಿವುಟಿದರು. ಶ್ಯಾಮ ಅವರು ಕೋಪಗೊಂಡು "ಬಾಬಾ, ಈ ರೀತಿ ಚಿವುಟುವುದು ನಿಮಗೆ ತರವೆ? ಹೀಗೆ ಹಿಂಸಿಸುವ ದೇವರು ನಮಗೆ ಬೇಡ. ನಾವೇನು ನಿಮ್ಮ ಸೇವಕರೇ? ಆತ್ಮೀಯತೆಯ ಫಲ ಇದೇ ಏನು?" ಎಂದರು. ಅದಕ್ಕೆ ಬಾಬಾ "ಶ್ಯಾಮ , ಈ ಹಿಂದಿನ ೭೨ ಜನ್ಮಗಳಿಂದಲೂ ನೀವು ನನ್ನೊಡನೆಯೇ ಇರುತ್ತೀ; ಇದಕ್ಕೆ ಮುಂಚೆ ನಿನ್ನನ್ನು ಎಂದಾದರೂ ಚಿವುಟಿದ್ದನೆ? ಈಗ ಸುಮ್ಮನೆ ಮುಟ್ಟಿದ್ದಕ್ಕೆ ನನ್ನ ಮೇಲೆ ಇಷ್ಟೊಂದು ಕೋಪವೇ?" ಎಂದರು. ನಂತರ ಶ್ಯಾಮ ಅವರು "ನಮಗೆ ಯಾವಾಗಲೂ ಮುದ್ದುಗಳನ್ನು ಕೊಡುತ್ತ ಸಿಹಿಯನ್ನು ತಿನಿಸುವ ದೇವರು ಮಾತ್ರ ಬೇಕು. ನಿಮ್ಮಿಂದ ನಮಗೆ ಸುಖ, ಸ್ವರ್ಗಲೋಕದ ವಿಮಾನ ಅಥವಾ ಇನ್ನಿತರ ಮರ್ಯಾದೆಗಳು ಬೇಕಿಲ್ಲ; ನಿಮ್ಮ ಚರಣಗಳಲ್ಲಿ ನಮ್ಮ ಧೃಡನಂಬಿಕೆಯು ಸದಾ ಜಾಗೃತವಿರಲಿ ಅಷ್ಟೆ ಸಾಕು" ಎನ್ನಲು ಬಾಬಾ ಅವರು "ಅದಕ್ಕೋಸ್ಕರವೇ ನಾನು ಇಲ್ಲಿ ಬಂದಿರುವುದು; ನಾನು ನಿನಗೆ

ಆಹಾರ ಕೊಟ್ಟು ರಕ್ಷಿಸಿದ್ದೇನೆ. ನಿನ್ನಲ್ಲಿ ನನಗೆ ಪ್ರೀತಿ ಮಮತೆ ಇದೆ" ಎಂದರು.

ಕೈ ತೊಳೆದುಕೊಂಡ ಮೇಲೆ ಬಾಬಾ ತಮ್ಮ ಆಸನದ ಮೇಲೆ ಕುಳಿತರು. ಶ್ಯಾಮ ಅವರು ಶ್ರೀಮತಿ ಔರಂಗಾಬಾದಕರ ಅವರನ್ನು ಕರೆದರು. ಅವರು ಬಂದು ಬಾಬಾ ಅವರಿಗೆ ನಮಸ್ಕರಿಸಿ ತೆಂಗಿನಕಾಯಿ ಮತ್ತು ಗಂಧದ ಕಡ್ಡಿಯನ್ನು ಬಾಬಾ ಅವರಿಗೆ ನಿವೇದಿಸಿದರು. ಬಾಬಾ ಅವರು ಆ ತೆಂಗಿನಕಾಯಿಯನ್ನು ಅಲ್ಲಾಡಿಸಿದರು. ಅದರ ತಿರುಳು ಅಲಾಡುತ್ತಿತ್ತು. ಆಗ ಅವರು "ನೋಡು ಶ್ಯಾಮ, ಇದರ ತಿರುಳು ಅಲ್ಲಾಡುತ್ತಿದೆ. ಅದೇನು ಸೂಚಿಸುತ್ತದೆ?" ಎಂದು ಕೇಳಲು ಶ್ಯಾಮ, "ಅದರಂತೆಯೇ ತನ್ನ ಗರ್ಭದಲ್ಲಿ ಶಿಶುವು ಹೊರಳಾಡಲಿ ಎಂದು ಈ ಮಹಿಳೆಯು ಪ್ರಾರ್ಥಿಸುತ್ತಿದ್ದಾಳೆ; ಆಶೀರ್ವದಿಸಿರಿ. ಆ ತೆಂಗಿನಕಾಯಿಯನ್ನು ಕೊಡಿ" ಎಂದರು.

ಬಾಬಾ:– "ತೆಂಗಿನಕಾಯಿ ಸಂತತಿ ದೊರಕಿಸುತ್ತದೆಯೆ? ನೀವೆಂಥ ಮೂಢರು!"

ಶ್ಯಾಮ:– "ನಿಮ್ಮ ನುಡಿಯೇ ನಿಮ್ಮ ಆಶೀರ್ವಾದ. ಅದು ಸಂತಾನ ನೀಡುವುದೆಂದು ನನಗೆ ಗೊತ್ತಿದೆ. ಸುಮ್ಮನೆ ನನ್ನೊಡನೆ ವಾದ ಮಾಡುತ್ತಿದ್ದೀರಿ. ಏನ: ಆಶೀರ್ವದಿಸುತ್ತಿಲ್ಲ."

ಸ್ವಲ್ಪ ಹೊತ್ತು ಈ ರೀತಿ ಸಂಭಾಷಣೆ ನಡೆಯಿತು. ಬಾಬಾ ಅವರು ತೆಂಗಿನಕಾಯಿಯನ್ನು ಶ್ರೀಮತಿ ಔರಂಗಾಬಾದಕರ ಅವರಿಗೆ ಆಶೀರ್ವಾದವಾಗಿ ಕೊಡಬೇಕೆಂದು ಕೇಳುತ್ತಲೇ ಇದ್ದರು. ಕಟ್ಟಕಡೆಗೆ ಬಾಬ ಸೋತು "ಅವಳಿಗೆ ಸಂತತಿ ಲಭಿಸುತ್ತದೆ" ಎಂದರು.

ಶ್ಯಾಮ:– "ಯಾವಾಗ?"

ಬಾಬಾ:– "ಇನ್ನು ೧೨ ತಿಂಗಳೊಳಗೆ!"

ಅನಂತರ ತೆಂಗಿನಕಾಯಿಯನ್ನು ಒಡೆಯಲಾಯಿತು. ಒಂದು ಭಾಗವನ್ನು ಬಾಬಾ ಅವರಿಗೆ ಇಟ್ಟುಕೊಂಡು ಇನ್ನೊಂದು ಭಾಗವನ್ನು ಶ್ರೀಮತಿಯವರಿಗೆ ಕೊಡಲಾಯಿತು. ಆಗ ಶ್ಯಾಮ ಅವರು ಶ್ರೀಮತಿ ಔರಂಗಾಬಾದಕರ ಕಡೆಗೆ ತಿರುಗಿ ತಾಯೀ ನನ್ನ ಮಾತಿಗೆ ನೀವೇ ಸಾಕ್ಷಿ; ಇಂದಿನಿಂದ ೧೨ ತಿಂಗಳೊಳಗೆ ನಿಮಗೆ ಸಂತಾನ ಪ್ರಾಪ್ತಿಯಾಗದಿದ್ದರೆ ಈ ದೇವರ ತಲೆಯ ಮೇಲೆ ತೆಂಗಿನಕಾಯಿ ಒಡೆದು ಅವನನ್ನು ಮಸೀದಿಯಿಂದ ಓಡಿಸುತ್ತೇನೆ. ಇದಕ್ಕೆ ತಪ್ಪಿದರೆ ನಾನು ಮಾಧವನಲ್ಲ. ನಾನು ಹೇಳಿದುದನ್ನು ಶೀಘ್ರದಲ್ಲಿಯೇ ಮನಗಾಣುವಿರಿ" ಎಂದರು.

ಒಂದು ವರ್ಷದೊಳಗೆ ಶ್ರೀಮತಿ ಔರಂಗಾಬಾದಕರ ಅವರಿಗೆ ಪುತ್ರ ಸಂತಾನವಾಯಿತು. ಐದನೆಯ ತಿಂಗಳಲ್ಲಿ ತಾಯಿ ಮಕ್ಕಳಿಬ್ಬರೂ ಪತಿಯೊಂದಿಗೆ ಬಾಬಾ ಅವರ ದರ್ಶನಕ್ಕೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ ಐದುನೂರು ರೂಪಾಯಿಗಳನ್ನು ಕಾಣಿಕೆಯಾಗಿ ಅರ್ಪಿಸಿದರು. ಈ ಹಣವನ್ನು ಬಾಬಾ ಅವರ ಕುದುರೆ 'ಶ್ಯಾಮಕರ್ಣ'ನಿಗೆ ವಸತಿ ಸ್ಥಾನ ಕಟ್ಟಲು ಉಪಯೋಗಿಸಲಾಯಿತು.

ಶ್ರೀ ಸಾಯಿ ಪ್ರಣಾಮ

# ೩೭ನೇ ಅಧ್ಯಾಯ

## ಚಾವಡಿ ಮೆರವಣಿಗೆ

ಈ ಅಧ್ಯಾಯದಲ್ಲಿ ಹೇಮಾಡಪಂತರು ವೇದಾಂತದ ವಿಚಾರಗಳನ್ನು ಪೀಠಿಕೆಯಲ್ಲಿ ವಿವರಿಸಿ ನಂತರ ಚಾವಡಿ ಮೆರವಣಿಗೆಯನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಸಾಯಿಬಾಬಾ ಅವರ ನಿತ್ಯ ಜೀವನವೇ ಧನ್ಯವಾದದ್ದು. ಅವರ ರೀತಿ –ನೀತಿಗಳು ವರ್ಣನಾತೀತ. ಅವರು ಕೆಲವು ವೇಳೆ ಬ್ರಹ್ಮಾನಂದದಲ್ಲಿ ತಲ್ಲೀನರಾಗಿದ್ದು, ಇನ್ನಿತರ ಸಮಯದಲ್ಲಿ ಆತ್ಮಜ್ಞಾನದಿಂದ ತೃಪ್ತರಾಗಿರುತ್ತಿದ್ದರು. ಕೆಲವು ವೇಳೆ ತಮ್ಮ ಕಾರ್ಯವನ್ನು ನಿರ್ವಹಿಸುತ್ತ ನಿಶ್ಚಿಂತರಾಗಿರುತ್ತಿದ್ದರು. ಮತ್ತು ಕೆಲವು ವೇಳೆ ಸುಮ್ಮನೆ ಕುಳಿತಿರುತ್ತಿದ್ದರು. ಆದರೆ ಸೋಮಾರಿಗಳಾಗಿರಲಿಲ್ಲ. ಅವರು ಯಾವಾಗಲೂ ಆತ್ಮದಲ್ಲಿಯೇ ತಲ್ಲೀನರಾಗಿರುತ್ತಿದ್ದರು. ಸಾಗರದಂತೆ ಅವರು ಶಾಂತಿಯುತರಾಗಿ ಕಂಡು ಬಂದರೂ ಅಪಾರವಾದ ಆಳದಲ್ಲಿ ಇರುತ್ತಿದ್ದರು. ಬಾಬಾ ಅವರ ರೀತಿಯನ್ನು ವರ್ಣಿಸಲು ಯಾರಿಗೆ ಸಾಧ್ಯ? ಪುರುಷರನ್ನು ಸಹೋದರರರಂತೆಯೂ ಹೆಂಗಸರನ್ನೂ ತಾಯಿ –ತಂಗಿಯರಂತೆಯೂ ಕಾಣುತ್ತಿದ್ದರು. ಅವರು ಶುದ್ಧ ಬ್ರಹ್ಮಚಾರಿಗಳಾಗಿದ್ದರು. ಅವರೊಡನೆ ಕಾಲ ಕಳೆದಾಗ ನಮಗೆ ಲಭಿಸಿದ ಜ್ಞಾನವು ಚಿರಾಯುವಾಗಲಿ. ಸದಾ ಭಕ್ತಿ–ಶ್ರದ್ಧೆಗಳಿಂದ ಅವರ ಪಾದ ಸೇವೆಯನ್ನು ಮಾಡೋಣ. ಚರಾಚರಗಳಲ್ಲಿಯೂ ಅವರನ್ನು ಕಂಡು ಅವರನ್ನು ನಾವು ಪ್ರೀತಿಸೋಣ

## ಅವಿಸ್ಮರಣೀಯ ದೃಶ್ಯ

ಬಾಬಾ ಮಲಗುವ ರೀತಿಯನ್ನು ಈಗಾಗಲೇ ವಿವರಿಸಿದ್ದೇನೆ. ಅವರು ಒಂದು ದಿನ ಮಸೀದಿಯಲ್ಲಿಯೂ ಮತ್ತೊಂದು ದಿನ ಚಾವಡಿಯಲ್ಲಿಯೂ ಮಲಗುತ್ತಿದ್ದರು. ಈ ತರದ ವಾಡಿಕೆ ಅವರ

ಮಹಾಸಮಾಧಿಯ ತನಕವೂ ಜರುಗಿತು. ೧೯೦೯ ನೇ ಡಿಸೆಂಬರ ೧೦ ನೇ ತಾರೀಖಿನಿಂದ ಭಕ್ತರು ಬಾಬಾ ಅವರನ್ನು ಚಾವಡಿಯಲ್ಲಿ ಪೂಜಿಸ ತೊಡಗಿದರು. ಅವರ ದಯೆಯಿಂದ ಅದನ್ನು ಇಲ್ಲಿ ವರ್ಣಿಸಿದ್ದೇನೆ.

ಬಾಬಾ ಅವರು ಚಾವಡಿಗೆ ಮಲಗಲು ಹೋಗುವ ಸಮಯದಲ್ಲಿ ಭಕ್ತರು ಮಸೀದಿಯಲ್ಲಿ ನೆರೆದು ಮೊದಲು ಭಜನೆ ಮಾಡುತ್ತಿದ್ದರು. ಅವರ ಹಿಂದೆ ಒಂದು ಸಣ್ಣ ರಥವೂ, ಬಲಭಾಗದಲ್ಲಿ ಬಾಬಾ ಅವರ ಮುಂದೆ ತುಲಸೀ ಬೃಂದಾವನವೂ, ಇವುಗಳ ಮಧ್ಯೆ ಭಜನೆ ಮಾಡುವ ಭಕ್ತಕೋಟಿಯೂ ಕಂಗೊಳಿಸುತ್ತಿತ್ತು. ಭಜನೆ ಮಾಡಲು ಗಂಡಸರು, ಹೆಂಗಸರು, ಮುದುಕರು, ಚಿಕ್ಕಮಕ್ಕಳು ಎಲ್ಲರೂ ನೆರೆಯುತ್ತಿದ್ದರು. ಕೆಲವರು ತಾಳಗಳನ್ನೂ, ಮತ್ತೆ ಕೆಲವರು ಚಿಪಳಿಗಳನ್ನೂ, ಇತರರು ಮೃದಂಗ, ಖಂಜೀರಿ ಮತ್ತು ಡೊಳ್ಳುಗಳನ್ನೂ ಬಾರಿಸಿ ಭಜನೆ ಮಾಡುತ್ತಿದ್ದರು. ಆಯಸ್ಕಾಂತ ರೂಪಿಯಾದ ಬಾಬಾ ಅವರು ಭಕ್ತರೆಲ್ಲರನ್ನೂ ಆಕರ್ಷಿಸುತ್ತಿದ್ದರು. ಅಂಗಳದಲ್ಲಿ ಕೆಲವರು ದೀಪಗಳನ್ನು ಹಚ್ಚುತ್ತಲೂ ಮತ್ತೆ ಕೆಲವರು ಪಲ್ಲಕ್ಕಿಯನ್ನು ಶೃಂಗರಿಸುತ್ತಲೂ ಕೆಲವರು ದಂಡವನ್ನು ಹಿಡಿದುಕೊಂಡು ಬಾಬಾ ಅವರ ಜಯಘೋಷವನ್ನು ಮಾಡುತ್ತಲೂ ಇದ್ದರು. ಮಸೀದಿಯ ಮೂಲೆ ಮೂಲೆಗಳೂ ಸಹ ಶೃಂಗರಿಸಲ್ಪಟ್ಟು, ಸುತ್ತಲೂ ದೀಪಗಳು ಕಂಗೊಳಿಸುತ್ತಿದ್ದವು. ಬಾಬಾ ಅವರ ಪ್ರೀತಿಯ ಅಶ್ವವಾದ ಶ್ಯಾಮಕರ್ಣನೂ ಸಹ ಅಲಂಕರಿಸಲ್ಪಟ್ಟು ಹೊರಗಡೆ ನಿಂತಿರುತ್ತಿದ್ದನು. ತಾತ್ಯಾ ಪಾಟೀಲರು ತಮ್ಮ ಸ್ನೇಹಿತರೊಂದಿಗೆ ಬಂದು ಬಾಬಾ ಅವರಿಗೆ ಸಿದ್ಧರಾಗಲು ಹೇಳುತ್ತಿದ್ದರು. ತಾತ್ಯಾ ಅವರು ಬಂದು ಕೈ ಹಿಡಿದು ಎಬ್ಬಿಸಿ ಕರೆದುಕೊಂಡು ಹೋಗುವ ತನಕ ಬಾಬಾ ಅವರು ಸುಮ್ಮನೆ ಕುಳಿತಿರುತ್ತಿದ್ದರು. ತಾತ್ಯಾ ಬಾಬಾ ಅವರನ್ನು 'ಮಾಮಾ' ಎಂದು ಕರೆಯುತ್ತಿದ್ದರು. ಬಾಬಾ ಅವರು ತಮ್ಮ ಸಾಮಾನ್ಯ ಉಡುಪಾದ ಕಫನಿಯನ್ನು ಧರಿಸಿ ತಮ್ಮ ಸಟಕಾ ಕಂಕುಳದಲ್ಲಿರಿಸಿ ಚಿಲುಮೆ

ತೆಗೆದುಕೊಂಡು ಹೊರಡಲು ಅನುವಾಗುತ್ತಿದ್ದರು. ನಂತರ ತಾತ್ಯಾ ಜರದ ಶೆಲ್ಲೆ ಹೊದಿಸಿದ ನಂತರ ಬಾಬಾ ಮಸೀದಿಯ ಗೋಡೆಯ ಹತ್ತಿರವಿದ್ದ ಕಟ್ಟಿಗೆಯನ್ನು ತಮ್ಮ ಬಲಗಾಲಿನ ಬೆರಳಿನಿಂದ ತಳ್ಳಿ, ದೀಪ ಆರಿಸಿ, ಚಾವಡಿಗೆ ಹೊರಡುತ್ತಿದ್ದರು. ಆಗ ಎಲ್ಲ ವಿಧವಾದ ಪಕ್ಕ ವಾದ್ಯಗಳು ಮೊಳಗುತ್ತಿದ್ದವು. ಅಗ್ನಿ ಕ್ರೀಡೆಯ ಪದಾರ್ಥಗಳು ವಿವಿಧ ಬಣ್ಣದ ಜ್ವಾಲೆಯಿಂದ ನರ್ತಿಸತೊಡಗುತ್ತಿದ್ದವು. ಭಕ್ತಕೋಟಿಯು ಬಾಬಾ ಅವರ ಗುಣಗಾನ ಮಾಡುತ್ತ ಮುಂದುವರಿಯುತ್ತಿತ್ತು. ಕೆಲವರು ನೃತ್ಯ ಮಾಡುತ್ತ ಸಾಗುತ್ತಿದ್ದರು. ಭಾಲದಾರರು ಬಾಬಾ ಮಸೀದಿಯ ಬಾಗಿಲಿಗೆ ಬಂದ ಕೂಡಲೆ ಜಯಘೋಷ ಮಾಡುತ್ತಿದ್ದರು. ಬಾಬಾ ಅವರ ಇಕ್ಕೆಲಗಳಲ್ಲಿಯೂ ಭಕ್ತರು ನಿಂತು ಚಾಮರ ಬೀಸುತ್ತಿದ್ದರು. ದಾರಿಯುದ್ದಕ್ಕೂ ಬಟ್ಟೆ ಹಾಸುತ್ತಿದ್ದರು. ಅದರ ಮೇಲೆ ಬಾಬಾ ಅವರು ನಿಧಾನವಾಗಿ ಹೆಜ್ಜೆಯಿಡುತ್ತ ಮುಂದುವರಿಯುತ್ತಿದ್ದರು. ತಾತ್ಯಾ ಪಾಟೀಲ ಬಾಬಾ ಅವರ ಬಲಗೈಯನ್ನೂ, ಮ್ಹಾಳಸಾಪತಿಯವರು ಅವರ ಎಡಗೈಯನ್ನೂ ಹಿಡಿದುಕೊಂಡು ಹೋಗುತ್ತಿದ್ದರು. ಬಾಪೂಸಾಹೇಬ ಜೋಗ ಅವರು ಅವರ ಹಿಂದೆ ಶ್ವೇತ ಛತ್ರವನ್ನು ಹಿಡಿದುಕೊಂಡು ಬರುತ್ತಿದ್ದರು. ಈ ರೀತಿ ವೈಭವಯುತರಾಗಿ ಬಾಬಾ ಚಾವಡಿಗೆ ಸಾಗುತ್ತಿದ್ದರು. ಶೃಂಗರಿಸಲ್ಪಟ್ಟ ಶ್ಯಾಮಕರ್ಣನು ಬಾಬಾ ಅವರಿಗೆ ದಾರಿಯನ್ನು ತೋರಿಸುತ್ತ ಸಾಗುತ್ತಿದ್ದನು. ಬಾಬಾ ಅವರ ಹಿಂದೆ ಗಾಯಕರು ಮೊದಲಾದವರು ಹಿಂಬಾಲಿಸುತ್ತಿದ್ದರು. ಸಂಗೀತಕ್ಕೆ ಸರಿಯಾಗಿ ಹೊಂದುವಂತೆ ಹರಿನಾಮವು ನಭೋಮಂಡಲವನ್ನೆಲ್ಲ ಪಸರಿಸಿರುತ್ತಿತ್ತು. ಅಂತಯೇ ಬಾಬಾ ಅವರ ನಾಮವೂ ಸಹ ಪಸರಿಸಿರುತ್ತಿತ್ತು. ಈ ರೀತಿ ಮೆರವಣಿಗೆ ಚಾವಡಿಯ ಮೂಲೆಗೆ ಬಂದಾಗ ಭಕ್ತಕೋಟಿಯು ಸಂತಸದಿಂದ ನಲಿಯುತ್ತಿತ್ತು.

ಆಗ ಬಾಬಾ ಅವರು ಚಾವಡಿ ಎದುರಿನಲ್ಲಿ ನಿಂತು ಅಪೂರ್ವವಾದ ಕಾಂತಿಯಿಂದ ಕಂಗೊಳಿಸುತ್ತಿದ್ದರು. ಬಾಬಾ ಅವರ

ವದನಾರವಿಂದವು ಅರುಣೋದಯದ ರವಿಯ ಹಾಗೆ ಪ್ರಕಾಶಮಾನವಾಗಿರುತ್ತಿತ್ತು. ಅವರು ನಿಶ್ಚಲಚಿತ್ತರಾಗಿ ಉತ್ತರಾಭಿಮುಖವಾಗಿ ಚಾವಡಿಯ ಎದುರಿಗೆ ಯಾರನ್ನೋ ಕರೆಯುತ್ತಿರುವಂತೆ ನಿಂತಿರುತ್ತಿದ್ದರು. ವಾದ್ಯ ಘೋಷಗಳು ನಡೆದಾಗ ಬಾಬಾ ಅವರೂ ಆಗಾಗ್ಗೆ ತಾಳ ಹಾಕುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಕಾಕಾ ಸಾಹೇಬರ ದೀಕ್ಷಿತರು ಬೆಳ್ಳಿಯ ತಟ್ಟೆಯಲ್ಲಿ ಹೂವನ್ನು ತಂದು ಆಗಾಗ್ಗೆ ಬಾಬಾ ಅವರ ಮೈ ಮೇಲೆ ಚೆಲ್ಲುತ್ತಿದ್ದರು. ಆಗ ಬಾಬಾ ಅವರ ಅಪೂರ್ವ ಶೋಭೆಯನ್ನು ನೋಡಿ ಭಕ್ತಜನರು ಮನದಣಿಯುವಂತೆ ಆನಂದಿಸುತ್ತಿದ್ದರು. ಬಣ್ಣಿಸಲು ಪದಗಳ ಅಭಾವವೇನೋ ಎಂಬಂತಿತ್ತು. ಆ ವೈಭವದ ಪರಮಾವಧಿ! ತಾತ್ಯಾ ಪಾಟೀಲರು ದೀಪಗಳನ್ನು ಹಿಡಿದುಕೊಂಡು ಬಾಬಾ ಅವರ ಬಲಗಡೆಗೂ ಮ್ಹಾಳಸಾಪತಿಯವರು ಅವರ ಶಲ್ಯದ ಅಂಚನ್ನು ಹಿಡಿದುಕೊಂಡು ಬಾಬಾ ಅವರ ಎಡಗಡೆಗೂ ಬರುತ್ತಿದ್ದರು. ಬಾಬಾ ಅವರು ನಿಧಾನವಾಗಿ ಹೆಜ್ಜೆ ಇಡುತ್ತ ಚಾವಡಿ ಸೇರುತ್ತಿದ್ದರು. ಈ ದೃಶ್ಯ ಈಗಿಲ್ಲ ಪುನ: ನೋಡಲಾರೆವು. ಆದರೆ ಅದನ್ನು ಮನಸ್ಸಿನಲ್ಲಿ ರೂಪಿಸಿಕೊಂಡು ತೃಪ್ತಿ ಪಡೆಯಬಹುದು.

ಚಾವಡಿಯೂ ಸಹ ಶೃಂಗರಿಸಲ್ಪಡುತ್ತಿತ್ತು. ಚಾವಡಿಯನ್ನು ತಲುಪುತ್ತಲೇ ತಾತ್ಯಾ ಅವರು ಬಾಬಾ ಅವರ ಆಸನವನ್ನು ಸಜ್ಜುಗೊಳಿಸುತ್ತಿದ್ದರು. ಅವರಿಗೆ ನಿಲುವಂಗಿಯನ್ನು ತೊಡಿಸುತ್ತಿದ್ದರು. ನಂತರ ಇತರ ಭಕ್ತರು ಅವರವರ ಮನ ಬಂದಂತೆ ಬಾಬಾ ಅವರನ್ನು ಪೂಜಿಸ ತೊಡಗುತ್ತಿದ್ದರು. ಕೆಲವರು ಬಾಬಾ ಅವರಿಗೆ ಕಿರೀಟ ಧಾರಣೆ ಮಾಡುತ್ತಿದ್ದರು. ಕೆಲವರು ಹಾರ ತುರಾಯಿಗಳನ್ನು ಅರ್ಪಿಸುತ್ತಿದ್ದರು. ಕೆಲವರು ಆಭರಣಗಳನ್ನು ತೊಡಿಸುತ್ತಿದ್ದರು. ಕೆಲವರು ಹಣೆಗೆ ನಾಮ ಹಚ್ಚುತ್ತಿದ್ದರು. ಕೆಲವರು ಆಗಾಗ್ಗೆ ವಿಧವಿಧವಾದ ಉಡುಪುಗಳನ್ನು ಸುತ್ತುತ್ತಿದ್ದರು. ಈ ಎಲ್ಲ ಶೃಂಗಾರದಿಂದ ಬಾಬಾ ಅದ್ವಿತೀಯ ಶೋಭೆಯಿಂದ ಪ್ರಕಾಶಿಸುತ್ತಿದ್ದರು.

ನಾನಾ ಸಾಹೇಬ ನಿಮೋಣಕರ ಅವರು ಶ್ವೇತಛತ್ರಿಯನ್ನು ಅವರ ತಲೆಯ ಮೇಲೆ ಹಿಡಿದು ತಿರುಗಿಸುತ್ತಿದ್ದರು. ಬಾಪೂಸಾಹೇಬ ಜೋಗರವರು ಅವರ ಪೂಜೆ ಮಾಡಿ ಅವರ ಹಣೆ ಮತ್ತು ಕೈಗಳಿಗೆ ಚಂದನವನ್ನು ಲೇಪಿಸಿ ತಾಂಬೂಲ ಸವಿಯಲು ಕೊಡುತ್ತಿದ್ದರು. ಆಗ ಬಾಬಾ ಆಸನದಲ್ಲಿ ಅಲುಗಾಡದೆ ಕುಳಿತಿರುತ್ತಿದ್ದರು. ಇತರರು ಅವರ ಪಾದದ ಬಳಿ ಕುಳಿತು ಸೇವೆ ಮಾಡುತ್ತಿದ್ದರು. ಕೆಲವರು ಚಾಮರ ಬೀಸುತ್ತಿದ್ದರು. ಶ್ಯಾಮ ಅವರು ಹುಕ್ಕಾ ಅಣಿಮಾಡಿ ತಾತ್ಯಾ ಅವರಿಗೆ ಕೊಡುತ್ತಿದ್ದರು. ಅವರು ಅದನ್ನು ಒಂದು ಸಲ ಎಳೆದು ನಂತರ ಬಾಬ ಅವರಿಗೆ ಕೊಡುತ್ತಿದ್ದರು. ನಿಜಕ್ಕೂ ಆ ಚಿಲುಮೆ ಧನ್ಯವಾದುದು. (ಏಕೆಂದರೆ ಮೊದಲು ಅದು ಕುಂಬಾರನ ಕೈಯಲ್ಲಿ ಸಿಕ್ಕು ಬೆಂಕಿಯಲ್ಲಿ ಸುಟ್ಟ ನಂತರ ಅದು ತನ್ನ ಪುಣ್ಯ ಫಲ ಎಂದು ಬಾಬಾ ಅವರ ಕೈಯಲ್ಲಿ ಬರುತ್ತಿತ್ತು.)

ಈ ಸಮಾರಂಭದ ನಂತರ ಭಕ್ತರು ಹಾರ ತುರಾಯಿಗಳನ್ನು ಅರ್ಪಿಸುತ್ತಿದ್ದರು. ಷಡ್ಗುಣಪರಿಪೂರ್ಣರೂ, ವೀತರಾಗರೂ, ಮೋಹದಿಂದ ಮುಕ್ತರೂ ಆದ ಬಾಬಾ ಅವರಿಗೆ ಇವುಗಳಲ್ಲಿ ಆಸಕ್ತಿ ಇರಲಿಲ್ಲ. ಆದರೆ ಭಕ್ತರ ಪ್ರೀತಿಗೋಸ್ಕರ ಅವರವರ ಮನಬಂದಂತೆ ತಮ್ಮನ್ನು ಪೂಜಿಸಲು ಬಾಬಾ ಅನುಮತಿ ನೀಡುತ್ತಿದ್ದರು.

ಕೊನೆಯದಾಗಿ ಬಾಪೂಸಾಹೇಬ ಜೋಗ ಅವರು ಆರತಿ ಬೆಳಗುತ್ತಿದ್ದರು. ವಾದ್ಯಗಳು ಮೊಳಗಿ ಆರತಿಯ ನಂತರ ಭಕ್ತರು ಬಾಬಾ ಅವರ ಆಶೀರ್ವಾದ ಪಡೆದು ಹಿಂತಿರುಗಿ ಹುಕ್ಕಾ ಮುಂದತಾದವುಗಳನ್ನು ಕೊಟ್ಟು ತಾತ್ಯಾ ಹೊರಡಲು ಸಿದ್ಧರಾಗುತ್ತಿದ್ದರು. ಆಗ ಬಾಬಾ ಅವರನ್ನು ಕರೆದು "ನನ್ನನ್ನು ಕಾಪಾಡು, ಮನೆಗೆ ಹೋಗು ಆದರೆ ರಾತ್ರಿ ಆಗಾಗ್ಗೆ ಬಂದು ವಿಚಾರಿಸು" ಎಂದು ಹೇಳುತ್ತಿದ್ದರು. ತಾತ್ಯಾ ಅನುಮತಿಸಿ ಮನೆಗೆ ಹೊರಡುತ್ತಿದ್ದರು. ಆನಂತರ ಬಾಬಾ ಅವರು ೫೦-೬೦ ದುಪಟಿಗಳನ್ನು ಒಂದರ ಮೇಲೊಂದು

ಹಾಕಿ ಮೆತ್ತಗಿರುವ ಹಾಸಿಗೆಯನ್ನು ತಾವೇ ಸ್ವತ: ಸಿದ್ಧಪಡಿಸಿಕೊಂಡು ವಿಶ್ರಮಿಸುತ್ತಿದ್ದರು.

ಶ್ರೀ ಸಾಯಿಬಾಬಾ ಅವರನ್ನೂ ಮತ್ತು ಚಾವಡಿ ಮೆರವಣಿಗೆಯನ್ನೂ ಪ್ರತಿ ದಿನವೂ ರಾತ್ರಿ ಮಲಗಿಕೊಳ್ಳುವಾಗ ಸ್ಮರಿಸಿಕೊಂಡು ಸುಖ ಪಡೆಯಿರೆಂದು ವಾಚಕರಲ್ಲಿ ವಿನಂತಿಸಿ ಈ ಅಧ್ಯಾಯವನ್ನು ಮುಗಿಸಿ ನಾವು ವಿಶ್ರಮಿಸುತ್ತೇವೆ.

**ಶ್ರೀ ಸಾಯಿ ಪ್ರಣಾಮ**

# ೩೮ನೇ ಅಧ್ಯಾಯ

## ಅನ್ನದಾನ – ಬಾಬಾ ಅವರಿಂದ ಅಡಿಗೆ – ಹಿಂದೂ ದೇವತೆಗಳಿಗೆ ಗೌರವ –ಭಕ್ತರೊಡನೆ ಊಟ

ಈ ಹಿಂದೆ ಬಾಬಾ ಅವರ ಚಾವಡಿ ಮೆರವಣಿಗೆಯನ್ನು ವಿವರಿಸಿದ್ದೇವಷ್ಟೆ. ಈಗ ಬಾಬಾ ಅವರ ಅಡಿಗೆಯ ವಿಧಾನವನ್ನು ಹೇಮಾಡಪಂತರು ವರ್ಣಿಸಿದ್ದಾರೆ.

ಚರಣಾಶ್ರಿತತ್ರಿತಾಪಹರರೂ, ಭಕ್ತೇಷ್ಟ ಸಂಪಾದನತತ್ಪರರೂ, ಸಕಲ ಜಗದಾ ನಂದಕರರೂ ಆದ ಶ್ರೀ ಸಾಯಿಬಾಬಾ ಅವರಿಗೆ ವಂದನೆಗಳು. ದ್ವೈತ ದಲನ, ಭಕ್ತಮನಮೋಹನ ಭವಾಪಹರಣ ಮತ್ತು ಕರುಣಾಧನರಾದ ಸಾಯಿಬಾಬಾ ಅವರಿಗೆ ಜಯವಾಗಲಿ.

### ಅನ್ನದಾನ

ಬೇರೆ ಬೇರೆ ಯುಗಗಳಿಗೆ ಬೇರೆಬೇರೆ ಸಾಧನೆಗಳು ನಿಯಮಿತವಾಗಿವೆ. ಕೃತಯುಗಕ್ಕೆ ತಪವೂ, ತ್ರೇತಾಯುಗಕ್ಕೆ ಜ್ಞಾನವೂ, ದ್ವಾಪರಕ್ಕೆ ಯಜ್ಞವೂ, ಕೊನೆಯದಾಗಿ ಕಲಿಯುಗಕ್ಕೆ ದಾನವೂ ನಿಯಮಿಸಲ್ಪಟ್ಟಿವೆ. ದಾನಗಳಲ್ಲಿ ಅನ್ನದಾನವೇ ಶ್ರೇಷ್ಠವಾದುದು. ಮಧ್ಯಾಹ್ನದಲ್ಲಿ ನಮಗೆ ಊಟ ಸಿಗದಿದ್ದರೆ ತಳಮಳಗೊಳ್ಳುತ್ತೇವೆ. ಅದೇ ರೀತಿ ಸಕಲ ಜೀವರಾಶಿಗಳಿಗೂ ಸಹ ಅನುಭವವಾಗುತ್ತದೆ. ಇದನ್ನು ತಿಳಿದು ಯಾರು ಬಡವರಿಗೂ, ಹಸಿದವರಿಗೂ ಆಹಾರವನ್ನು ನೀಡುವರೋ ಅವರೇ ಉತ್ತಮ ಧರ್ಮಿಷ್ಠರು. ಆಹಾರವೇ ಬ್ರಹ್ಮ ಆಹಾರದಿಂದಲೇ ಸಮಸ್ತ ಜೀವರಾಶಿಗಳ ಸೃಷ್ಟಿಯಾಗಿರುವುದು ಮತ್ತು ಜೀವಿಸಿರುವುದು. ಅವು ಮರಣದ ನಂತರ ಅದೇ ಆಹಾರವನ್ನು ಪ್ರವೇಶಿಸುತ್ತವೆ. ಎಂಬುದಾಗಿ ತೈತ್ರೇಯ ಉಪನಿಷತ್ತಿನಲ್ಲಿ ಹೇಳಲಾಗಿದೆ. ಮಧ್ಯಾಹ್ನದ ಹೊತ್ತಿನಲ್ಲಿ ನಮ್ಮ ಮನೆ ಬಾಗಿಲಿಗೆ ಅತಿಥಿ ಬಂದರೆ ಅವನನ್ನು ಆದರಿಸಿ ಆಹಾರ ನೀಡುವುದು ನಮ್ಮ ಆದ್ಯ ಕರ್ತವ್ಯ.

ಸಂಪತ್ತು ದಾನ ವಸ್ತುದಾನ ಆಸ್ತಿದಾನ ಮುಂತಾದ ದಾನಗಳನ್ನು ಮಾಡಲು ವಿವೇಚನೆ ಇರಬೇಕು. ಆದರೆ ಆಹಾರದ ವಿಷಯದಲ್ಲಿ ಈ ವಿವೇಚನೆಯ ಅಗತ್ಯವಿಲ್ಲ. ನಿಮ್ಮ ಮನೆ ಬಾಗಿಲಿಗೆ ಮಧ್ಯಾಹ್ನದ ಹೊತ್ತಿನಲ್ಲಿ ಯಾರೇ ಬರಲಿ, ಅವರಿಗೆ ಕೂಡಲೇ ಆಹಾರ ನೀಡಬೇಕು. ಕುರುಡ, ಕುಂಟ, ಹೆಳವ ಯಾರೇ ಬಂದರೂ ಅವರಿಗೆ ಮೊದಲು ನೀಡಿ ನಂತರ ಇತರರಿಗೂ, ಬಂಧು–ಬಳಗದವರಿಗೂ ಬಡಿಸಬೇಕು. ಅವರಿಗೆ ಮೊದಲು ನೀಡುವುದರಿಂದ ಬರುವ ಪುಣ್ಯ ಇನ್ನಿತರರಿಗೆ ನೀಡುವುದರಿಂದ ಬರುವ ಪುಣ್ಯಕ್ಕಿಂತಲೂ ಹೆಚ್ಚು. ಅನ್ನದಾನವಿಲ್ಲದ ಇತರ ದಾನ ಅಷ್ಟು ಶ್ರೇಷ್ಠವಲ್ಲ. ಅದು ಶಶಿ ಇಲ್ಲದ ನಿಶೆಯ ನಕ್ಷತ್ರಗಳಂತೆಯೂ ಕಮಲವಿಲ್ಲದ ಸರೋವರದಂತೆಯೂ ಸಹಧರ್ಮಿಣಿ ಇಲ್ಲದ ಸಂಸಾರದಂತೆಯೂ, ಕುಂಕುಮವಿಲ್ಲದ ಸುವಾಸಿನಿಯಂತೆಯೂ, ಪ್ರೇಮವಿಲ್ಲದ ಭಜನೆಯಂತೆಯೂ ಇರುತ್ತದೆ. ಆದುದರಿಂದ ಅನ್ನದಾನವೇ ಶ್ರೇಷ್ಠತಮವಾದುದು. ಬಾಬಾ ಅವರು ಆಹಾರವನ್ನು ತಯಾರಿಸಿ ಎಲ್ಲರಿಗೂ ಹೇಗೆ ಹಂಚುತ್ತಿದ್ದರು ಎಂಬುದನ್ನು ಈಗ ನೋಡೋಣ.

## ಬಾಬಾ ಅವರಿಂದ ಅಡಿಗೆ

ಬಾಬಾ ಅವರು ತಮಗೆ ಬೇಕಾದಷ್ಟು ಆಹಾರವನ್ನು ಭಿಕ್ಷೆ ಬೇಡಿ ತಂದು ಜೀವಿಸುತ್ತಿದ್ದರೆಂಬುದನ್ನು ಆಗಲೇ ತಿಳಿಸಿದ್ದೇವೆ. ಆದರೆ ಅವರಿಗೆ ಮನಸ್ಸು ಬಂದಾಗ ಮೊದಲಿನಿಂದ ಕೊನೆಯವರೆಗೆ ತಾವೇ ಸ್ವತ: ಅಡಿಗೆ ಮಾಡಿ ಮಸೀದಿಯಲ್ಲಿ ಇದ್ದವರೆಲ್ಲರಿಗೂ ಸ್ವತ: ಬಡಿಸುತ್ತಿದ್ದರು. ಯಾರನ್ನೂ ಅವರು ಅವಲಂಬಿಸುತ್ತಿರಲಿಲ್ಲ. ಯಾರಿಗೂ ತೊಂದರೆ ಕೊಡುತ್ತಿರಲಿಲ್ಲ. ಸ್ವತ: ಪೇಟೆಗೆ ಹೋಗಿ ಪದಾರ್ಥಗಳನ್ನು ತಾವೇ ತೆಗೆದುಕೊಂಡು ಬರುತ್ತಿದ್ದರು. ಅವರೇ ಅರೆಯುತ್ತಿದ್ದರು. ಮಸೀದಿಯ ಅಂಗಳದಲ್ಲಿ ಒಂದು ಒಲೆಯನ್ನು ಹಾಕಿ ಉರಿ ಹೊತ್ತಿಸಿ ಅದರ ಮೇಲೆ ಹಂಡೆ ಇಟ್ಟು ಅಳತೆಯಾಗಿ ನೀರು ತುಂಬಿ ಆಹಾರ

ಪದಾರ್ಥಗಳನ್ನು ಕುದಿಸುತ್ತಿದ್ದರು. ಮಸೀದಿಯಲ್ಲಿ ಎರಡು ಹಂಡೆ ಇದ್ದವು. ಒಂದು ದೊಡ್ಡದು ಮತ್ತೊಂದು ಸಣ್ಣದು. ದೊಡ್ಡದರಲ್ಲಿ ನೂರು ಜನರಿಗೂ, ಚಿಕ್ಕದರಲ್ಲಿ ಐವತ್ತು ಜನರಿಗೂ ಸಾಲುವಷ್ಟು ಆಹಾರವು ತಯಾರಾಗುತ್ತಿತ್ತು. ಕೆಲವು ಸಾರೆ ಬರಿ ಅನ್ನ ಕೆಲವು ಸಾರೆ ಮಾಂಸ ಮಿಶ್ರಿತ ಪುಲಾವ್ ತಯಾರಿಸುತ್ತಿದ್ದರು. ಕೆಲವು ಸಾರೆ ಅನ್ನದ ಗಂಜಿಗೆ ಗೋಧಿ ಹಿಟ್ಟನ್ನು ಮಿಶ್ರಣ ಮಾಡಿ, ಹಸಿಮೆಣಸಿನಕಾಯಿ ಅರೆದು ಹಾಕಿ ಅಂಬಲಿ ತಯಾರಿಸುತ್ತಿದ್ದರು. ಆಹಾರದ ಜೊತೆಗೆ ಈ ಅಂಬಲಿಯನ್ನೂ ಸಹ ಬಡಿಸುತ್ತಿದ್ದರು. ಆಹಾರವು ಸರಿಯಾಗಿ ಬೆಂದಿದೆಯೊ ಇಲ್ಲವೋ ಎಂದು ನೋಡಲು ತಮ್ಮಂಗಿಯ ತೋಳನ್ನು ಮೇಲಕ್ಕೆ ಸರಿಸಿ ಕುದಿಯುತ್ತಿದ್ದ ಹಂಡೆಯೊಳಗಿನ ಪದಾರ್ಥದಲ್ಲಿ ಕೈ ಹಾಕಿ ಚೆನ್ನಾಗಿ ಕಲಕುತ್ತಿದ್ದರು. ಅದರೂ ಅವರ ಕೈ ಸುಡುತ್ತಿರಲಿಲ್ಲ. ಮುಖ ಕುಂದುತ್ತಿರಲಿಲ್ಲ. ಆಹಾರವನ್ನು ಮೊದಲು ತಾತ್ಯಾ ಪಾಟೀಲ ಮತ್ತು ಮ್ಹಾಳಸಾಪತಿಯವರಿಗೆ ಕಳುಹಿಸಿ ಉಳಿದುದನ್ನು ಎಲ್ಲರಿಗೂ ಸ್ವಹಸ್ತದಿಂದ ಬಡಿಸುತ್ತ ತೃಪ್ತಿ ಪಡೆಯುತ್ತಿದ್ದರು. ಈ ರೀತಿ ಬಾಬಾ ಅವರ ಹಸ್ತದಿಂದ ಆಹಾರವನ್ನು ಪಡೆದು ಜನರು ನಿಜಕ್ಕೂ ಧನ್ಯರು!

"ಬಾಬಾ ಸಸ್ಯಾಹಾರ ಮತ್ತು ಮಾಂಸಾಹಾರಗಳನ್ನು ಎಲ್ಲ ಭಕ್ತರಿಗೂ ಕೊಡುತ್ತಿದ್ದರೆ?" ಎಂದು ಕೆಲವರು ಅನುಮಾನದಿಂದ ಪ್ರಶ್ನೆ ಕೇಳಬಹುದು. ಇದಕ್ಕೆ ಬಹು ಸುಲುಭ ಮತ್ತು ನೇರವಾದ ಉತ್ತರ ಇದೆ. ಯಾರಿಗೆ ಮಾಂಸಾಹಾರದ ರೂಢಿ ಇತ್ತೋ ಅಂಥವರಿಗೆ ಮಾತ್ರ ತಮ್ಮ ಹಂಡೆಯಿಂದ ಮಾಂಸಾಹಾರ ನೀಡುತ್ತಿದ್ದರು. ಬೇರೆಯವರಿಗೆ ಅದರ ಸ್ಪರ್ಶ ಕೂಡ ಮಾಡಗೊಡುತ್ತಿರಲಿಲ್ಲ. ಮಾಂಸಾಹಾರವನ್ನು ಅಪೇಕ್ಷಿಸುವ ಮನೋಭಾವವನ್ನೂ ಸಹ ಹುಟ್ಟಿಸುತ್ತಿರಲಿಲ್ಲ. ಗುರುವು ಕೊಟ್ಟ ಪ್ರಸಾದವನ್ನು ತಾನು ಸೇವಿಸುವುದು ಯೋಗ್ಯವೋ ಅಯೋಗ್ಯವೋ ಎಂದು ಯೋಚಿಸುವವನು ಸದ್ಗತಿಯನ್ನು

ಹೊಂದಲಾರನು. ಕೆಲವು ಸಲ ಬಾಬಾ ಈ ಬಗ್ಗೆ ತಮ್ಮ ಭಕ್ತರನ್ನು ಪರೀಕ್ಷಿಸಿದ್ದಾರೆ.

## ಭಕ್ತ ಪರೀಕ್ಷೆ

ಅಂದು ಏಕಾದಶಿ. ಬಾಬಾ ಅವರು ದಾದಾ ಕೇಳಕರ ಅವರನ್ನು ಕರೆದು "ನೀನೇ ಸ್ವತ: ಹೋಗಿ ಮಾಂಸವನ್ನು ತೆಗೆದುಕೊಂಡು ಬಾ" ಎಂದು ಹೇಳಿ ಹಣ ಕೊಟ್ಟರು. ದಾದಾ ಕೇಳಕರರು ಆಚಾರ-ಶೀಲ ಬ್ರಾಹ್ಮಣರು. ಸದ್ಗುರುವಿಗೆ ಧನ, ಧ್ಯಾನ, ಉಡುಪು ಇವುಗಳನ್ನು ಮಾತ್ರ ಅರ್ಪಿಸಿದರೆ ಸಾಲದು. ಅವರ ಆಜ್ಞೆಗಳು ಏನೇ ಆಗಿರಲಿ, ಅವುಗಳನ್ನು ಪಾಲಿಸಬೇಕೆಂದೂ ಅವರು ಅರಿತ್ತಿದ್ದರು. ಅವರ ಆಜ್ಞೆಯನ್ನು ಪಾಲಿಸುವುದೇ ನಿಜವಾದ ದಕ್ಷಿಣೆ ಎಂದು ಭಾವಿಸಿ ಸಂತೋಷದಿಂದ ಹೊರಟರು. ಆಗ ಬಾಬಾ ಅವರು ಅವರನ್ನು ಹಿಂದಕ್ಕೆ ಕರೆದು "ನೀನು ಹೋಗಬೇಡ, ಬೇರೆ ಯಾರನ್ನಾದರೂ ಕಳುಹಿಸು" ಎಂದರು. ಆಗ ದಾದಾ ತಮ್ಮ ಮನೆ ಜವಾನ ಪಾಂಡುನನ್ನು ಕಳುಹಿಸಿದರು. ಬಾಬಾ ಅವರು ಪುನ: ಅವನನ್ನು ಕರೆದು ಅವನನ್ನೂ ತಡೆದರು. ಇನ್ನೊಂದು ಸಂದರ್ಭದಲ್ಲಿ ಬಾಬಾ ಅವರು ಕೇಳಕರರನ್ನು ಕರೆದು "ಈ ಪುಲಾವ್ ಹೇಗಿದೆ ನೋಡು" ಎಂದರು. ದಾದಾ ಕೇಳಕರ "ಸರಿಯಾಗಿದೆ" ಎಂದರು. ಆಗ ಬಾಬಾ ಅವರು "ಏನು, ನೀನು ರುಚಿ ನೋಡಿಯೂ ಸಹ ಇಲ್ಲ, ಚೆನ್ನಾಗಿದೆ ಎಂಬುದು ಹೇಗೆ ತಿಳಿಯಿತು? ಮುಚ್ಚಳ ತೆಗೆದು ನೋಡು" ಎಂದು ಹೇಳಿ ಅವರ ಕೈಯನ್ನು ಆ ಪಾತ್ರೆಯೊಳಗೆ ಹಾಕಿ "ಸ್ವಲ್ಪ ತೆಗೆದು ತಟ್ಟೆಗೆ ಹಾಕು; ಗೊಣಗುಟ್ಟಬೇಡ; ನಿನ್ನ ಆಚಾರವನ್ನು ಬದಿಗಿಡು" ಎಂದರು.

ತಾಯಿಗೆ ನಿಜವಾದ ಪ್ರೇಮ ಅಂಕುರಿಸಿದಾಗ ಮಗುವನ್ನು ಚಿವುಟುತ್ತಾಳೆ. ಅದು ಅಳಲು ಆರಂಭಿಸಿದರೆ, ಆಗ "ನನ್ನ ಕಂದ, ಅಳಬೇಡ, ಅಳಬೇಡ" ಎಂದು ತಬ್ಬಿಕೊಳ್ಳುತ್ತಾಳೆ. ಹಾಗೆಯೇ ಬಾಬಾ

ಅವರಲ್ಲಿ ನಿಜವಾದ ಮಾತ್ರ -ಪ್ರೇಮ ಅಂಕುರಿಸಿ, ಕೇಳಕರ ಅವರನ್ನು ಕೀಟಲೆ ಮಾಡಿದರು ಅಷ್ಟೆ. ನಿಜವಾಗಿಯೂ ಯಾವ ಗುರುಗಳೂ ತಮ್ಮ ಶಿಷ್ಯರಿಗೆ ನಿಷಿದ್ಧವಾದ ಆಹಾರ ಸೇವಿಸಲು ಹೇಳಿ ಅವರನ್ನು ಕೆಡಿಸಲಾರರು.

ಈ ಹಂಡೆ ಲೀಲೆಯು ಸುಮಾರು ೧೯೧೧ರ ತನಕ ಜರುಗಿ ನಂತರ ನಿಂತು ಹೋಯಿತು. ಹಿಂದೆ ಹೇಳಿದಂತೆ ದಾಸಗಣೂ ಅವರ ಕೀರ್ತನೆಯಿಂದ ಬಾಬಾ ಅವರ ಕೀರ್ತಿ ದೇಶದ ಮೂಲೆ-ಮೂಲೆಗಳಿಗೂ ವ್ಯಾಪಿಸಿ ಭಕ್ತಕೋಟಿಯು ಶಿರ್ಡಿಯಲ್ಲಿ ನೆರೆಯಲಾರಂಭಿಸಿತು. ಭಕ್ತರೇ ಅನೇಕ ತರದ ವಸ್ತುಗಳನ್ನೂ ಅನೇಕ ವಿಧವಾದ ನೈವೇದ್ಯವನ್ನೂ ಅರ್ಪಿಸಲು ತರಹತ್ತಿದರು. ಇವು ಸಾಕಷ್ಟು ಬಂದು, ಎಲ್ಲರಿಗೂ ಹಂಚಿದ ನಂತರವೂ ಹೆಚ್ಚಾಗಿ ಉಳಿಯ ಹತ್ತಿದವು. ಈ ನೈವೇದ್ಯವನ್ನು ಬಾಬಾ ಹೇಗೆ ದೇವಾಲಯಗಳಲ್ಲಿ ಮತ್ತು ದೇವತೆಗಳಲ್ಲಿ ಇಟ್ಟ ಗೌರವವನ್ನು ವಿವರಿಸುವ ನಾನಾಸಾಹೇಬ ಚಾಂದೋರಕರರ ಕಥೆಯನ್ನು ನೋಡೋಣ.

## ಹಿಂದೂ ದೇವತೆಗಳಿಗೆ ಗೌರವ

ಕೆಲವರು ಸಾಯಿಬಾಬಾ ಅವರು ಬ್ರಾಹ್ಮಣರೆಂದೂ ಮತ್ತೆ ಕೆಲವರು ಮುಸಲ್ಮಾನರೆಂದೂ ಹೇಳುತ್ತಿದ್ದರು. ಆದರೆ ಅವರು ಯಾವ ಮತ ಪಂಗಡಕ್ಕೂ ಸೇರಿರಲಿಲ್ಲ. ಅವರು ಯಾವಾಗ ಜನ್ಮ ತಾಳಿದರು, ಅವರ ಮತ ಯಾವುದು, ಅವರ ಮಾತಾಪಿತೃಗಳು ಯಾರು ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅದು ಈಗಲೂ ಗೊತ್ತಾಗಿಲ್ಲ. ಕಾರಣ ಅವರು ಬ್ರಾಹ್ಮಣ ಅಥವಾ ಮುಸಲ್ಮಾನರು ಎಂದು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ ಅವರು ಮಹಮ್ಮದೀಯರೆಂದು ಅನ್ನುವುದದರೆ, ಅವರು ಯಾವಾಗಲೂ ಅಗ್ನಿಕುಂಡ ಉರಿಸುತ್ತಿದ್ದರು. ಅವರ ಹತ್ತಿರ ತುಳಸಿ ವೃಂದಾವನವಿತ್ತು. ಶಂಖ ಗಂಟೆಗಳನ್ನು ಬಾರಿಸಲು ಅನುಮತಿ ಇತ್ತಿದ್ದರು. ಈ ವಿಧವಾದ ಹಿಂದೂಗಳ

ಪೂಜೆಗೆ ಅನುಮತಿ ನೀಡುತ್ತಿದ್ದರೆ? ಮಹಮ್ಮದೀಯರೆನ್ನುವುದಾದರೆ ಕಿವಿಗಳನ್ನೇಕೆ ಚುಚ್ಚಿಸಿಕೊಂಡಿದ್ದರು? ಹಿಂದೂ ದೇವಾಲಯಗಳನ್ನು ದುರಸ್ತಿಪಡಿಸಲು ತಮ್ಮ ಸ್ವಂತ ಹಣವನ್ನು ಏಕೆ ವ್ಯಯ ಮಾಡುತ್ತಿದ್ದರು? ಅದಕ್ಕೆ ವಿರುದ್ಧವಾಗಿ ಹಿಂದೂ ದೇವಾಲಯ ಮತ್ತು ಹಿಂದೂ ದೇವತೆಗಳಿಗೆ ಅಗೌರವವನ್ನು ಅವರು ಎಂದಿಗೂ ಸಹಿಸುತ್ತಿರಲಿಲ್ಲ.

ಒಮ್ಮೆ ನಾನಾಸಾಹೇಬ ಚಾಂದೋರಕರ ಅವರು ತಮ್ಮ ನಾದಿನಿಯ ಪತಿಯಾದ ಬನ್ನೀವಾಲೆಯವರೊಡನೆ ಶಿರ್ಡಿಗೆ ಬಂದರು. ಅವರು ಮಸೀದಿಗೆ ಹೋಗಿ ಬಾಬಾ ಅವರಿಗೆ ನಮಸ್ಕರಿಸಿ ಮಾತನಾಡಲು ಆರಂಭಿಸಿದ ಕೂಡಲೇ ಬಾಬಾ ಅವರು ನಾನಾ ಅವರನ್ನು ಕುರಿತು "ಇಷ್ಟು ದಿನ ನನ್ನ ಸಂಗಡವಿದ್ದರೂ ಸಹ ನೀನು ಈ ರೀತಿ ಮಾಡಬಹುದೇ?" ಎಂದರು. ನಾನಾ ಅವರಿಗೆ ಮಾತಿನ ಅರ್ಥವಾಗಲಿಲ್ಲ. ಆದುದರಿಂದ ಅವರು ವಿವರಣೆ ಕೇಳಿದರು. ಆಗ ಬಾಬಾ ಅವರು "ನೀನು ಕೋಪರಗಾಂವಕ್ಕೆ ಬಂದು ಅಲ್ಲಿಂದ ಶಿರ್ಡಿಗೆ ಹೇಗೆ ಬಂದೆ?" ಎಂದು ಕೇಳಲು, ನಾನಾ ಅವರಿಗೆ ಕೂಡಲೆ ತಮ್ಮ ತಪ್ಪಿನ ಅರಿವಾಯಿತು. ಅವರು ಸಾಮಾನ್ಯವಾಗಿ ಶಿರ್ಡಿಗೆ ಬರುವಾಗ ದಾರಿಯಲ್ಲಿ ಗೋದಾವರಿ ನದಿಯ ದಡದಲ್ಲಿದ್ದ ಕೋಪರಗಾಂವದ ಶ್ರೀದತ್ತರ ಗುಡಿಯನ್ನು ಸಂದರ್ಶಿಸಿ ಬರುತ್ತಿದ್ದರು. ಆದರೆ ಈ ಸಾರೆ ತಮ್ಮ ಸಂಬಂಧಿಗಳು ಶ್ರೀದತ್ತರ ಭಕ್ತಾಗಿದ್ದರೂ ಸಹ ಶಿರ್ಡಿಗೆ ಬರುವುದು ತಡವಾಗಬಾರದೆಂದು ಬಗೆದು ಅವರನ್ನು ನೇರವಾಗಿ ಕರೆದುಕೊಂಡು ಬಂದಿದ್ದರು. ಆಗ ಅವರು ನಡೆದ ವಿಷಯವೆಲ್ಲವನ್ನೂ ತಿಳಿಸಿ, ಗೋದಾವರಿಯಲ್ಲಿ ಸ್ನಾನ ಮಾಡುವಾಗ ಕಾಲಿಗೆ ಮುಳ್ಳು ಚುಚ್ಚಿ ಬಹಳ ನೋವಾಯಿತೆಂದು ಹೇಳಿ ತಮ್ಮ ತಪ್ಪು ಒಪ್ಪಿಕೊಂಡರು. ಆಗ ಬಾಬಾ ಅವರು ಅದೇ ತಕ್ಕ ಶಿಕ್ಷೆ ಎಂದು ಹೇಳಿ ಮುಂದೆ ಎಚ್ಚರಿಕೆಯಿಂದ ಇರಲು ಹೇಳಿದರು.

## ಭಕ್ತರೊಡನೆ ಊಟ

ಈಗ ಪ್ರಸಾದ ವಿನಿಯೋಗದ ವಿಚಾರ, ಮಧ್ಯಾಹ್ನದ ಆರತಿಯಾದ ನಂತರ ಬಾಬಾ ಅವರು ಉಧಿಯನ್ನು ಕೊಟ್ಟು ಆಶೀರ್ವದಿಸಿ ಎಲ್ಲರನ್ನೂ ಕಳುಹಿಸುತ್ತಿದ್ದರು. ನಂತರ ಮಸೀದಿಯ ಒಳಗೆ ಹೋಗಿ ತಮ್ಮ ಇಕ್ಕೆಲಗಳಲ್ಲಿ ಭಕ್ತರನ್ನು ಕೂಡ್ರಿಸಿಕೊಂಡು ಊಟ ಮಾಡುತ್ತಿದ್ದರು. ಭಕ್ತರು ತಾವು ತಂದ ಎಲ್ಲ ನೈವೇಧ್ಯವನ್ನು ಚೆನ್ನಾಗಿ ಬೆರೆಸಿ ಬಾಬಾ ಅವರ ಮುಂದೆ ಇಡುತ್ತಿದ್ದರು. ಆಗ ಬಾಬಾ ಅವರು ಅದನ್ನು ಮೊದಲು ದೇವರಿಗೆ ಅರ್ಪಿಸಿ ನಂತರ ಸ್ವೀಕರಿಸುತ್ತಿದದರು. ಕೆಲವು ಭಾಗವನ್ನು ಹೊರಗಡೆ ಕಾಯುತ್ತಿದ್ದ ಭಕ್ತರಿಗೆ ಹಂಚಿ ಉಳಿದುದನ್ನು ಒಳಗಡೆ ನೆರೆದ ಭಕ್ತರಿಗೆ ಹಂಚುತ್ತಿದ್ದರು. ಬಾಬಾ ಅವರು ಶ್ಯಾಮ ಮತ್ತು ನಾನಾಸಾಹೇಬ ನಿಮೋಣಕರ ಅವರನ್ನು ಬಡಿಸಲು ನೇಮಿಸಿದ್ದರು. ಅವರು ತಮ್ಮ ಕರ್ತವ್ಯವನ್ನು ಶಿರಸಾ ವಹಿಸಿ ನೆರವೇರಿಸುತ್ತಿದ್ದರು. ಈ ರೀತಿ ಭಕ್ತರು ತೃಪ್ತಿ ಹೊಂದುತ್ತಿದ್ದರು.

ನಿತ್ಯ ಪವಿತ್ರವಾಗಿತ್ತು – ಆ ಪ್ರಸಾದ!

## ಮಜ್ಜಿಗೆ

ಒಂದು ಸಾರೆ ಹೇಮಾಡಪಂತರು ಬಾಬಾ ಅವರ ಜೊತೆಯಲ್ಲಿ ಹೊಟ್ಟೆತುಂಬ ಊಟ ಮಾಡಿದರು. ಆಗ ಬಾಬಾ ಅವರು ಅವರಿಗೆ ಒಂದು ಲೋಟಾದಲ್ಲಿ ಮಜ್ಜಿಗೆಯನ್ನು ತರಿಸಿ ಅದನ್ನು ಅವರಿಗೆ ಕೊಟ್ಟರು. ಅದರ ಬಿಳೀ ಬಣ್ಣವು ಅವರಿಗೆ ಮೆಚ್ಚಿಗೆಯಾಯಿತು. ಆದರೆ ಅದಕ್ಕೆ ಹೊಟ್ಟೆಯಲ್ಲಿ ಸ್ಥಳವಿಲ್ಲವಲ್ಲ ಎಂದು ಚಿಂತಿಸಿದರು. ಅದರೂ ಸ್ವಲ್ಪ ರುಚಿ ನೋಡಿದರು. ಅವರ ಮನೋಬಾವವನ್ನು ಕಂಡ ಬಾಬಾ ಅವರು, "ಇಂತಹ ಸಂದರ್ಬ ಮತ್ತೊಮ್ಮೆ ದೊರಕಲಾರದು; ಪೂರ್ತಿ ಕುಡಿದು ಬಿಡು" ಎಂದರು. ಹೇಮಾಡಪಂತರು ಪೂರ್ತಿ ಕುಡಿದರು. ಬಾಬಾ ಅವರ ಭವಿಷ್ಯ

ನಿಜವಾಯಿತು. ಯಾಕೆಂದರೆ ಸ್ವಲ್ಪ ದಿನಗಳಲ್ಲಿಯೇ ಬಾಬಾ ಪರಲೋಕ ಯಾತ್ರೆ ಮಾಡಿದರು.

ಹೇಮಾಡಪಂತರು ಒಂದು ಲೋಟಾ ಮಜ್ಜಿಗೆ ಕುಡಿದರು. ಆದರೆ ಅವರು ಸಾಯಿಲೀಲೆ ಎಂಬ ಅಮೃತವನ್ನು ನಮಗೆ ಸಮೃದ್ಧಿಯಾಗಿ ಒದಗಿಸಿದ್ದಾರೆ. ಆದುದರಿಂದ ನಾವು ಅವರಿಗೆ ಕೃತಾರ್ಥರಾಗಿರಬೇಕು. ನಾವು ಈ ಸಾಯಿಲೀಲಾಮೃತವನ್ನು ಸೇವಿಸಿ ಸಂತಸದಿಂದಿರೋಣ.

**ಶ್ರೀ ಸಾಯಿ ಪ್ರಣಾಮ**

# ೩೯ನೇ ಅಧ್ಯಾಯ

## ಬಾಬಾ ಅವರ ಸಂಸ್ಕೃತ ಜ್ಞಾನ
## ಗೀತೆಯ ಶ್ಲೋಕದ ಅರ್ಥ – ಬೂಟಿವಾಡಾ

ಈ ಅಧ್ಯಾಯದಲ್ಲಿ ಗೀತೆಯ ಒಂದು ಶ್ಲೋಕದ ಅರ್ಥವನ್ನು ವಿವರಿಸಲಾಗಿದೆ. ಬಾಬಾ ಅವರಿಗೆ ಸಂಸ್ಕೃತವು ತಿಳಿದಿರಲಿಲ್ಲವೆಂದು ಹೇಳಿದ ಕೆಲವರ ಆಕ್ಷೇಪಣೆಯನ್ನು ಬದಿಗೊತ್ತಿ ಅವರ ಸಂಸ್ಕೃತ ಜ್ಞಾನವು ಹೇಗಿತ್ತು ಎಂಬುದನ್ನು ಇಲ್ಲಿ ಹೇಮಾಡಪಂತರು ವಿವರಿಸಿದ್ದಾರೆ.

ಶ್ರೀ ಸಾಯಿಬಾಬಾ ಅವರು ತಮ್ಮ ಮಹಾಸಮಾಧಿಯ ತನಕ ಅಲ್ಲಿ ಜೀವಿಸಿದ ಆ ದ್ವಾರಕಾಮಾಯಿ ಮತ್ತು ಶಿರ್ಡಿ ಗ್ರಾಮವು ನಿಜಕ್ಕೂ ಪುಣ್ಯ ಪಡೆದಿದ್ದುವೆಂದೇ ಹೇಳಬಹುದು. ಅವರಿಂದ ಆಶೀರ್ವದಿಸಲ್ಪಟ್ಟ ಶಿರ್ಡಿವಾಸಿಗಳೇ ಧನ್ಯರು. ಶಿರ್ಡಿಯು ಮೊದಲು ಕೇವಲ ಒಂದು ಸಣ್ಣ ಹಳ್ಳಿಯಾಗಿತ್ತು. ಬಾಬಾ ಅವರ ಸಂಪರ್ಕದಿಂದ ಅದು ಕೀರ್ತಿಯನ್ನು ಪಡೆದುಒಂದು ಪವಿತ್ರ ಯಾತ್ರಾಸ್ಥಳವಾಯಿತು. ಶಿರ್ಡಿಯ ಜನರು ಸ್ನಾನ ಮಾಡುವಾಗ, ಓದುವಾಗ, ಉಳುವಾಗ, ಬಿತ್ತುವಾಗ, ರಾಶಿ ಮಾಡುವಾಗ – ಎಲ್ಲ ಸಂದರ್ಭಗಳಲ್ಲಿ ಸಾಯಿಬಾಬಾ ಅವರ ಗುಣಗಾನ ಮಾಡುತ್ತ ಆನಂದದಿಂದ ಇದ್ದರು.

## ಬಾಬಾ ಅವರ ಗೀತಾ ವ್ಯಾಖ್ಯಾನ

ಬಾಬಾ ಅವರಿಗೆ ಸಂಸ್ಕೃತದ ಜ್ಞಾನ ಇತ್ತೆಂದು ಯಾರಿಗೂ ತಿಳಿದಿರಲಿಲ್ಲ. ಒಂದು ದಿವಸ ನಾನಾಸಾಹೇಬ ಚಾಂದೋರಕರ ಅವರಿಗೆ ಭಗವದ್ಗೀತೆಯ ಒಂದು ಶ್ಲೋಕವನ್ನು ವಿವರಿಸಿ ಎಲ್ಲರನ್ನೂ ಬೆರಗುಗೊಳಿಸಿದರು – ಬಾಬಾ

ನಾನಾಸಾಹೇಬರು ಪವಿತ್ರವಾದ ವೇದಾಂತವನ್ನು ಬಹುಮಟ್ಟಿಗೆ ಬಲ್ಲವರಾಗಿದ್ದರು. ಅವರು ಗೀತೆ ಮತ್ತು ಅದರ ಮೇಲಿನ ಟೀಕೆಗಳನ್ನು

ಸಹ ತಿಳಿದು ಬಹಳ ಅಹಂಭಾವದಿಂದ ಇದ್ದರು. ಇದು ಬಾಬಾ ಅವರಿಗೆ ಗೊತ್ತಿಲ್ಲವೆಂದೂ ಮತ್ತು ಅವರಿಗೆ ಸಂಸ್ಕೃತವೇ ಬಾರದೆಂದೂ ಅವರು ತಿಳಿದಿದ್ದರು. ಬಾಬಾ ಅವರು ಈ ಗುಳ್ಳೆಯನ್ನು ಒಡೆದರು. ಒಂದು ದಿನ ಮಸೀದಿಯ ತುಂಬ ಭಕ್ತರು ನೆರೆದಿದ್ದರು. ಆಗ ನಾನಾ ಅವರು ಬಾಬಾ ಅವರ ಪಾದ ಸೇವೆ ಮಾಡುತ್ತ ಕುಳಿತಿದ್ದರು.

ಬಾಬಾ: "ನಾನಾ, ಅದೇನು ಗೊಣಗುಟ್ಟುತ್ತಿರುವೆ?"

ನಾನಾ: "ಒಂದು ಸಂಸ್ಕೃತ ಶ್ಲೋಕ ಹೇಳುತ್ತಿದ್ದೇನೆ."

ಬಾಬಾ: "ಯಾವ ಶ್ಲೋಕ?"

ನಾನಾ: "ಭಗವದ್ಗೀತೆಯದು."

ಬಾಬಾ: "ಜೋರಾಗಿ ಹೇಳು."

ನಾನಾ: **"ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ||**

ಭಗವದ್ಗೀತೆ ೪(೩೪)

(ವಂದನಪೂರ್ವಕವಾಗಿ ಪುನ: ಪುನ: ಪ್ರಶ್ನೆಗೈದು ಸೇವೆಯನ್ನು ಮಾಡಿ ಅದನ್ನು ನೀನು ತಿಳಿ. ತತ್ವದರ್ಶಿಗಳಾದ ಜ್ಞಾನಿಗಳು ನಿನಗೆ ಜ್ಞಾನವನ್ನು ಉಪದೇಶಿಸುವರು.)

ಬಾಬಾ: "ಅದರ ಅರ್ಥ ಗೊತ್ತಿದೆಯೆ?"

ನಾನಾ: "ಗೊತ್ತಿದೆ."

ಬಾಬಾ: "ಎಲ್ಲಿ ಹೇಳು."

ನಾನಾ: "ಅದರ ಅರ್ಥ ಇದು: ಸಾಷ್ಟಾಂಗ ನಮಸ್ಕಾರದಿಂದ, ವಿಚಾರಣೆಯಿಂದ ಮತ್ತು ಸೇವೆ ಮಾಡುವುದರಿಂದ ಜ್ಞಾನವೇನೆಂಬುದನ್ನು ತಿಳಿ. ಆಗ ನೈಜವಾದ ಜ್ಞಾನ ಸಂಪಾದನೆ

ಮಾಡಿದವರು ಜ್ಞಾನೋಪದೇಶ ಮಾಡುತ್ತಾರೆ."

ಬಾಬಾ: " ನಾನಾ, ನನಗೆ ಅದರ ತಾತ್ಪರ್ಯ ಬೇಕಿಲ್ಲ; ಪ್ರತಿಪದಾರ್ಥ ಹೇಳು." ಆಗ ನಾನಾಸಾಹೇಬ ಪ್ರತಿಪದಾರ್ಥವನ್ನು ತಿಳಿಸಿದರು.

ಬಾಬಾ: " ಪರಿಪ್ರಶ್ನೆ ಎಂದರೇನು?"

ನಾನಾ: "ವಿಚಾರ ಮಾಡುವುದು."

ಬಾಬಾ: "ಪ್ರಶ್ನೆ ಎಂದರೇನು?"

ನಾನಾ: "ಅದೇ ಉತ್ತರ. ಪ್ರಶ್ನಿಸುವುದು."

ಬಾಬಾ: "ಪರಿಪ್ರಶ್ನೆ ಎಂದರೂ ಅರ್ಥ; ಪ್ರಶ್ನೆ ಎಂಬೂದಕ್ಕೂ ಅದೇ ಅರ್ಥವೇ? ಹಾಗಿದ್ದಲ್ಲಿ ವ್ಯಾಸರು 'ಪರಿ' ಎಂದೇಕೆ ಸೇರಿಸಿದರು? ವ್ಯಾಸರ ತಲೆ ಕೆಟ್ಟಿತ್ತೇ?"

ನಾನಾ: "ಪರಿಪ್ರಶ್ನೆ ಎಂಬುದಕ್ಕೆ ಬೇರೆ ಅರ್ಥ ನನಗೆ ತಿಳಿಯದು."

ಬಾಬಾ: "ಉಪದೇಕ್ಷಂತಿ ತೇ ಜ್ಞಾನಂ ಎಂದು ಓದುವಾಗ, ಜ್ಞಾನವೆಂಬ ಪದಕ್ಕೆ ಬದಲಾಗಿ ಬೇರೆ ಯಾವುದೇ ಪದವನ್ನು ಓದುವೆಯಾ?"

ನಾನಾ: "ಹೌದು"

ಬಾಬಾ: " ಆ ಪದ ಯಾವುದು?"

ನಾನಾ: "ಅಜ್ಞಾನ"

ಬಾಬಾ: "ಅದರಿಂದ ಶ್ಲೋಕಕ್ಕೆ ಬೇರೆ ಅರ್ಥವಿದೆಯೇ?"

ನಾನಾ: "ಇದೆ, ಆದರೆ ಶಂಕರ ಭಾಷ್ಯದಲ್ಲಿ ಅಂತಹ ರಚನೆಯನ್ನು ಕೊಟ್ಟಿಲ್ಲ."

ಬಾಬಾ: "ಅವರು ಕೊಡದಿದ್ದರೆ ಪರವಾಗಿಲ್ಲ. ಅಜ್ಞಾನವೆಂಬ ಪದವನ್ನು ಉಪಯೋಗಿಸುವುದರಿಂದ ಒಳ್ಳೆಯ ಅರ್ಥ ದೊರಕಬಹುದಾದರೆ ಉಪಯೋಗಿಸಲು ಅಭ್ಯಂತರವೇನು?"

ನಾನಾ: "ಅಜ್ಞಾನದ ಪದ ಉಪಯೋಗಿಸಿ ಅರ್ಥ ಮಾಡಲು ನನಗೆ ಸಾಧ್ಯವಿಲ್ಲ."

ಬಾಬಾ: "ಶ್ರೀಕೃಷ್ಣನು ಅರ್ಜುನನಿಗೆ ಜ್ಞಾನಿಗಳಿಗೆ ಏಕೆ ನಮಸ್ಕಾರ ಮಾಡಲು ಹೇಳಿದನು? ವಿಚಾರಣೆ ಮತ್ತು ಸೇವೆ ಮಾಡಲು ಏಕೆ ಹೇಳಿದನು? ಕೃಷ್ಣನೇ ಸ್ವತಃ ತತ್ವದರ್ಶಿಯಾಗಿರಲಿಲ್ಲವೇ? ಜ್ಞಾನದ ಪ್ರತೀಕವೇ ಅವನಾಗಿರಲಿಲ್ಲವೇ?

ನಾನಾ: "ಅಹುದು ನನಗರ್ಥವಾಗಿಲ್ಲ."

ಬಾಬಾ: "ಇದು ನಿನಗೆ ತಿಳಿದಿಲ್ಲವೆ?"

ನಾನಾ ಅವರ ಗರ್ವಭಂಗವಾಗಯಿತು. ಆಗ ಬಾಬಾ ಅವರು:

(೧) ಜ್ಞಾನಿಗಳಿಗೆ ನಮಿಸುವುದೊಂದೇ ಸಾಲದು; ನಾವು ಸದ್ಗುರುವಿಗೆ ಪೂರ್ಣಶರಣಾಗತರಾಗಿರಬೇಕು.

(೨) ವಿಚಾರಣೆ ಮಾಡುವುದು ಮಾತ್ರವೇ ಸಾಲದು. ವಿಚಾರಣೆಯು ಗಂಭಿರವಾಗಿರಬೇಕು; ಗುರುಗಳನ್ನು ಪರೀಕ್ಷಿಸುವ ಉದ್ದೇಶವಿರಬಾರದು. ಕುಚೋದ್ಯಕ್ಕಾಗಿ ಇರಬಾರದು ಮೋಕ್ಷ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಸಂಬಂಧಪಟ್ಟಿದ್ದಾಗಿ ಇರಬೇಕು.

(೩) ಸೇವೆಯನ್ನು ಮಾಡುವಾಗ 'ನಾವು ಮಾಡುತ್ತಿದ್ದೇವೆ' ಎಂಬ ಮನೋಭಾವ ಇರಬಾರದು. ಈ ದೇಹವು ಗುರುವಿನದು; ಅವನ ಸೇವೆಗಾಗಿಯೇ ಇದು ಮೀಸಲು ಎಂಬ ಮನೋಭಾವ ತಾಳಬೇಕು.

ಇದನ್ನು ಅನುಸರಿಸಿದರೆ ಸದ್ಗುರುವು ಹಿಂದಿನ ಶ್ಲೋಕದಲ್ಲಿ ಹೇಳಿದ ಜ್ಞಾನದ ಅರ್ಥವನ್ನು ಸ್ಪಷ್ಟಪಡಿಸುವನು.

ನಾನಾ ಅವರಿಗೆ ಇದರ ಅರ್ಥವಾಗಲೇ ಇಲ್ಲ.

ನಾನಾ: "ಜ್ಞಾನೋಪದೇಶವೆಂಬುದು ಹೇಗೆ ಇದ್ದೀತು?"

ಬಾಬಾ: "ಅಜ್ಞಾನವನ್ನು ನಾಶ ಮಾಡುವುದೇ ಜ್ಞಾನ. ಕತ್ತಲೆಯನ್ನು ಹೋಗಲಾಡಿಸುವುದೇ ಬೆಳಕು. ದ್ವೈತಭಾವನೆಯನ್ನು ನಾಶಮಾಡುವುದೇ ಅದ್ವೈತ. ದ್ವೈತವನ್ನು ನಾಶಮಾಡಬೇಕೆಂದಾಗ ಅದ್ವೈತದ ವಿಚಾರ ಎತ್ತುವೆವು. ಕತ್ತಲೆಯನ್ನು ಹೋಗಲಾಡಿಸಲು ಬೆಳಕು ಬೇಕು. ಅದ್ವೈತದ ಸ್ಥಿತಿಯನ್ನು ತಿಳಿಯಬೇಕಾದರೆ ದ್ವೈತಭಾವನೆಯು ನಿರ್ಮೂಲವಾಗಬೇಕು."

ಶಿಷ್ಯನೂ ಸಹ ಗುರುವಿನಂತೆಯೇ ಜ್ಞಾನದ ಪ್ರತೀಕ. ಇದರಲ್ಲಿಯ ವ್ಯತ್ಯಾಸ ಅವರ ಮನೋಭಾವ, ಶ್ರೇಷ್ಠ ಅರಿವು, ತತ್ವ ಮತ್ತು ಐಶ್ವರ್ಯ ಯೋಗಗಳಲ್ಲಿ ಅಡಗಿರುತ್ತದೆ. ಶಕ್ತಿಯು ದೈವಿಕ, ಸದ್ಗುರುವು ನಿರ್ಗುಣನು, ಸಚ್ಚಿದಾನಂದನು.

ಮಾನವರನ್ನು ಉದ್ಧರಿಸಿ ಲೋಕೋದ್ಧಾರ ಮಾಡಲು ಅವನು ಮಾನವನಾಗಿ ಅವತರಿಸುತ್ತಾನೆ. ಅವನ ನೈಜತ್ವವಾಗಲಿ, ದೈವಿಕ ಶಕ್ತಿಯಾಗಲಿ, ಯೋಗ್ಯತೆಯಾಗಲಿ, ಕುಗ್ಗದಂತಿರುವವು. ಶಿಷ್ಯನೂ ಸಹ ಅದೇ ಸ್ವರೂಪವುಳ್ಳವನೇ. ಆದರೆ ಅವನು (ಶಿಷ್ಯ) ಅಸಂಖ್ಯಾತ ಜನ್ಮಗಳನ್ನೆತ್ತಿ ಶುದ್ಧ ಚೈತನ್ಯವನ್ನರಿಯದೆ ಅಜ್ಞಾನದಲ್ಲಿ ಬಿದ್ದಿರುತ್ತಾನೆ. ಅವನಿಗೆ "ನಾನೇ ಜೀವ, ಪ್ರಾಣಿ, ನಮ್ರತೆಯುಳ್ಳವನು" ಎಂಬ ಕಲ್ಪನೆ ಬರುತ್ತದೆ. ಗುರುವು ಅವನನ್ನು ಈ ಅಜ್ಞಾನವೆಂಬ ಸುಳಿಯಿಂದ ತಪ್ಪಿಸಿ ಉಪದೇಶ ನೀಡಬೇಕು. ಕೊನೆಯಿಲ್ಲದ ಜನ್ಮಜನ್ಮಾಂತರಗಳಲ್ಲಿಯೂ "ನಾನೇ ಜೀವ ನಾನೇ ಪ್ರಾಣಿ" ಎಂದು ನಂಬಿರುವ ಶಿಷಯನಿಗೆ ಗುರುವು ಅವನ ನೂರಾರು ಜನ್ಮಗಳಲ್ಲಿ "ನೀನೇ ದೇವರು; ನೀನೇ ದೊಡ್ಡವನು; ಸಂಪನ್ನನು" ಎಂದು ಬೋಧಿಸಿ, ಅವನ್ನು ದಿಗ್ಬಂಧಿತನನ್ನಾಗಿ ಮಾಡುತ್ತಾನೆ. ಆಗ ಅವನಿಗೆ ಅರಿವು

ಉಂಟಾಗುತ್ತದೆ. "ನಾನು ದೇಹ, ನಾನು ಜೀವ ಮಾತ್ರ- ಈ ಪ್ರಪಂಚ ಮತ್ತು ಪರಮಾತ್ಮನೆಂಬುದು ನನ್ನಿಂದ ಬೇರೆಯಾದದ್ದು" ಎಂಬ ಶಿಷ್ಯನ ಭ್ರಮೆಯು, ಅವನಲ್ಲಿ ಜನ್ಮ ಜನ್ಮಾಂತರಗಳಿಂದ ಹುಟ್ಟಿಬಂದ ದೋಷ. ಈ ಭ್ರಮೆ ಮತ್ತು ದೋಷವನ್ನು ಬೇರು ಸಹಿತ ನಿರ್ಮೂಲ ಮಾಡಲು ಅವನು ವಿಚಾರಣೆ ಮಾಡತೊಡಗಬೇಕು. ಅಜ್ಞಾನವೆಂಬುದು ಹೇಗೆ ಹುಟ್ಟಿತು, ಅದೆಲ್ಲಿದೆ, ಇದನ್ನು ಅವನಿಗೆ ತೋರಿಸುವುದೇ ಗುರುವಿನ ಉಪದೇಶ. ಇದಕ್ಕೆ ಸಂಬಂಧಪಟ್ಟ ಉದಾಹರಣೆಗಳು ಈ ರೀತಿ ಇವೆ.

೧. ನಾನೇ ಜೀವ.

೨. ಶರೀರವೇ ಆತ್ಮ.

೩. ದೇವರು, ಜೀವ ಮತ್ತು ಪ್ರಪಂಚ ಎಂಬುವು ಭಿನ್ನವಾದವುಗಳು.

೪. ನಾನು ದೇವರಲ್ಲ.

೫. ಶರೀರವು ಆತ್ಮವಲ್ಲವೆಂಬುದನ್ನು ನಾನು ಅರಿಯೆ.

೬. ಪರಮಾತ್ಮ, ಜೀವ, ಪ್ರಪಂಚ ಶರೀರ, ಇವು ಒಂದೇ ಎಂಬುದನ್ನು ನಾನರಿಯೆ.

ಈ ದೋಷಗಳನ್ನು ನಿರ್ಮೂಲ ಮಾಡಿದ್ದರೆ ದೇವರು, ಜೀವ ಪ್ರಪಂಚ, ಶರೀರ ಇವುಗಳೇನೆಂಬುದನ್ನು ಶಿಷ್ಯನು ಅರಿಯಲಾರ. ಅವುಗಳಿಗಿರುವ ಸಂಬಂಧವೂ ಅವನಿಗೆ ಅರಿವಾಗುವುದಿಲ್ಲ. ಇಂಥ ಅಜ್ಞಾನವನ್ನು ಹೋಗಲಾಡಿಸಲು ಅವನಿಗೆ ಉಪದೇಶವು ಅಗತ್ಯ ಅವನ ದೋಷಗಳನ್ನು ನಿರ್ಮೂಲವಮಾಡಿ ಅಜ್ಞಾನವನ್ನು ಹೋಗಲಡಿಸುವುದೇ ಉಪದೇಶ.

ಬಾಬಾ ಅವರು ಮುಂದುವರಿದು (೧) ಪ್ರಣಿಪಾತವೆಂದರೆ ಶರಣಾಗತಿ ಎಂದು ಅರ್ಥ, (೨) ಶರಣಾಗತಿ ಎಂದರೆ ತನು, ಮನ ಮತ್ತು ಧನದ ಅರ್ಪಣೆ. (ಶ್ರೀ ಕೃಷ್ಣನು ಅರ್ಜುನನಿಗೆ ಜ್ಞಾನಿಗಳ ಕಡೆಗೆ ಹೋಗಲು ಏಕೆ ಸೂಚಿಸಿದನು ಎಂಬುದಕ್ಕೆ ಸದ್ಭಕ್ತನು ಸಮಸ್ತ ಚರಾಚರಗಳನ್ನೂ, ಜ್ಞಾನಿಗಳನ್ನೂ ಪರಮಾತ್ಮನೆಂದೇ ತಿಳಿಯುವನು ಎಂದು ಬಾಬಾ ವಿವರಿಸಿದರು.

## ಸಮಾಧಿ ಮಂದಿರ ಬೂಟಿವಾಡಾ

ತಾವು ಮಾಡಲಿಚ್ಛಿಸಿದ ವಿಷಯಗಳ ಬಗ್ಗೆ ಬಾಬಾ ಅವರು ಎಂದೂ ಮುಂಚಿತವಾಗಿ ಸೂಚಿಸುತ್ತಿರಲಿಲ್ಲ. ಗಡಿಬಿಡಿ ಮಾಡುತ್ತಿರಲಿಲ್ಲ. ಆದರೆ ಜನರು ಆಶ್ಚರ್ಯ ಪಡುವಂತೆ ಸಮಯ ಸಂದರ್ಭಗಳನ್ನೂ, ವಾತಾವರಣಗಳನ್ನೂ, ನಿರ್ಮಿಸಿಕೊಳ್ಳುತ್ತಿದ್ದರು. ಸಮಾಧಿ ಮಂದಿರದ ನಿರ್ಮಾಣ ಇದನ್ನು ಉದಾಹರಿಸುತ್ತದೆ.

ನಾಗಪುರದ ಲಕ್ಷಾಧೀಶರಾದ ಶ್ರೀಮಾನ್ ಬಾಪೂಸಾಹೇಬ ಬೂಟಿಯವರು ಕುಟುಂಬ ಸಮೇತ ಶಿರ್ಡಿಗೆ ಬಂದು ವಾಸ ಮಾಡತೊಗಿದರು. ಅವರಿಗೆ ತಮ್ಮದೇ ಆದ ಒಂದು ಧರ್ಮಶಾಲೆಯನ್ನು ಅಲ್ಲಿ ಕಟ್ಟಿಸಬೇಕೆಂಬ ಬಯಕೆ ಮನದಲ್ಲಿ ಮೂಡಿತು. ಕೆಲವು ದಿನಗಳ ನಂತರ ಅವರು ದೀಕ್ಷಿತವಾಡಾದಲ್ಲಿ ಮಲಗಿರುವಾಗ ಕನಸಿನಲ್ಲಿ ಬಾಬಾ ಅವರು ದರ್ಶನ ನೀಡಿ "ನಿನ್ನದೇ ಆದ ಒಂದು ಧರ್ಮಶಾಲೆಯನ್ನು ದೇವಸ್ಥಾನ ಸಹಿತ ಕಟ್ಟಬಹುದು" ಎಂದರು. ಅಲ್ಲಿಯೇ ಮಲಗಿದ್ದ ಶ್ಯಾಮ ಅವರಿಗೂ ಅದೇ ತರಹದ ಕನಸಾಯಿತು. ಬಾಪೂಸಾಹೇಬರು ಅಳುತ್ತಿದ್ದ ಶ್ಯಾಮ ಅವರನ್ನು ನೋಡಿ ಏಕೆ ಅಳುತ್ತಿದ್ದೀರಿ ಎಂದು ಪ್ರಶ್ನಿಸಿದರು. ಆಗ ಶ್ಯಾಮ "ಬಾಬಾ ಅವರು ನನ್ನ ಸಮೀಪಕ್ಕೆ ಬಂದು ದೇವಸ್ಥಾನ ಸಹಿತವಾದ ವಾಡಾ ಒಂದನ್ನು ನಿರ್ಮಿಸು ಎಂದು ಆಜ್ಞಾಪಿಸಿದರು" ಎಂದರು. "ಅವರ ವಾಣಿಯನ್ನು ಕೇಳಿ ಆನಂದಭರಿತನಾದೆ. ಆದುದರಿಂದಲೇ ಆನಂದಬಾಷ್ಪ ಸುರಿಯುತ್ತಿದೆ"

ಎಂದೂ ಹೇಳಿದರು. ಈರ್ವರ ಕನಸೂ ಒಂದೇ ಆದದ್ದನ್ನು ಕಂಡು ಬೂಟಿಯವರಿಗೆ ಅಚ್ಚರಿಯಾಯಿತು. ಕೂಡಲೇ ವಾಡಾ ನಿರ್ಮಾಣಕ್ಕೋಸ್ಕರ ಶ್ಯಾಮ ಅವರೊಡನೆ ಕಲೆತು ಒಂದು ಯೋಜನೆ ತಯಾರಿಸಿದರು. ಕಾಕಾಸಾಹೇಬ ದೀಕ್ಷಿತರೂ ಒಪ್ಪಿದರು. ಅದನ್ನು ಬಾಬಾ ಅವರ ಮುಂದೆ ಇರಿಸಲಾಯಿತು. ಬಾಬಾ ಅವರು ಒಪ್ಪಿಗೆ ಕೊಟ್ಟರು ಶ್ಯಾಮ ಅವರ ನೇತೃತ್ವದಲ್ಲಿ ವಾಡಾ ನಿರ್ಮಾಣ ಕಾರ್ಯ ಆರಂಭವಾಗಿ ಛಾವಣಿ ತನಕ ಬಂದಿತು. ಒಂದು ದಿನ ಬಾಬಾ ಅವರು ಲೇಂಡಿಗೆ ಹೋಗುತ್ತಿರುವಾಗ ಕಟ್ಟಡಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಮೇಲ್ವಿಚಾರಣೆಯನ್ನು ಬಾಪೂಸಾಹೇಬರೇ ವಹಿಸಿಕೊಂಡರು. ಕೆಲಸ ಸಾಗುತ್ತಿರುವಾಗ ಮಧ್ಯದ ಅಂಗಳದಲ್ಲಿ ಮುರಳೀಧರನ ಪ್ರತಿಮೆಯನ್ನಿಡಬೇಕೆಂದು ಬೂಟಿಯವರಿಗೆ ವಿಚಾರ ಮೂಡಿತು. ಇದನ್ನು ಬಾಬಾ ಅವರಿಗೆ ತಿಳಿಸಲು ಶ್ಯಾಮ ಅವರಿಗೆ ಹೇಳಿದರು. ಶ್ಯಾಮ ಅವರು ಬಾಬಾ ಅವರನ್ನು ಕೇಳಲಾಗಿ ಅವರು ಸಮ್ಮತಿಸಿದರು. ದೇವಾಲಯ ಪೂರ್ತಿಯಾದ ನಂತರ ನಾನೇ ಅಲ್ಲಿಗೆ ಬಂದು ವಾಸಿಸುವೆನೆಂದು ಬಾಬಾ ನುಡಿದರು. ನಂತರ ದೃಷ್ಟಿಸಿ ವಾಡಾ ನೋಡಿ "ನಾವೇ ಅದನ್ನು ಉಪಯೋಗಿಸೋಣ; ಅಲ್ಲಿಯೇ ವಾಸಿಸೋಣ" ಎಂದು ಹೇಳಿದರು. ಆಗ ಶ್ಯಾಮ ಅವರು ಮಧ್ಯದ ಅಂಗಳದಲ್ಲಿ ಪೂಜಾಸ್ಥಳಕ್ಕೆ ತಳಪಾಯ ಹಾಕಲು ಈ ದಿವಸ ಯೋಗ್ಯವಾಗಿದೆಯೇ? ಎಂದು ಕೇಳಲು ಬಾಬಾ ಅವರು "ಸರಿ" ಎಂದರು. ಶ್ಯಾಮ ಹಿಂತಿರುಗಿ ವಾಡಾಕ್ಕೆ ಬಂದು, ಪೂಜೆ ಮಾಡಿ ತೆಂಗಿನಕಾಯಿ ಒಡೆದು ಕಾರ್ಯವನ್ನು ಆರಂಭಿಸಿದರು. ಸಮಯಕ್ಕೆ ಸರಿಯಾಗಿ ಎಲ್ಲವೂ ಮುಗಿಯಿತು. ಮುರಲೀಧರನ ಪ್ರತಿಮೆ ತಯಾರಿಕೆಗೂ ಹೇಳಿದ್ದರು. ಆದರೆ ಆ ಪ್ರತಿಮೆ ತಯಾರಾಗುವ ಮೊದಲೇ ಪರಿಸ್ಥಿತಿ ಬದಲಾಯಿತು. ಬಾಬಾ ಅವರು ತೀವ್ರ ಜ್ವರದಿಂದ ಹಾಸಿಗೆ ಹಿಡಿದರು. ಬಾಪೂಸಾಹೇಬರು ತಮ್ಮ ವಾಡಾ ಬಾಬಾ ಅವರ ಪಾದಧೂಳಿಯಿಂದ ಪವಿತ್ರವಾಗುವುದೋ ಇಲ್ಲವೋ ಎಂದು

ಕಳವಳದಿಂದಿದ್ದರು. ಬಾಬಾ ಅವರು ಗತಿಸುವ ಮೊದಲು ನನ್ನನ್ನು ವಾಡಾಕ್ಕೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಆದುದರಿಂದ ಅವರೆಲ್ಲರಿಗೂ ಸಮಾಧಾನವಾಯಿತು. ಬಾಬಾ ಇಹಲೋಕವನ್ನು ತ್ಯಜಿಸಿದ ನಂತರ ತಕ್ಕ ಮರ್ಯಾದೆಗಳಿಂದ ಮತ್ತು ಸಂಭ್ರಮದಿಂದ ಮುರಲೀಧರನ ಪ್ರತಿಮೆಗೋಸ್ಕರ ಮೀಸಲಾಗಿದ್ದ ಸ್ಥಳದಲ್ಲಿ ಅವರನ್ನು ಸಮಾಧಿ ಮಾಡಲಾಯಿತು. ನಿಜವಾಗಿಯೂ ಬಾಬಾ ಮುರಲೀಧರನಾದರು. ಇದೇ ಈಗಿರುವ ಮಹಾಸಮಾಧಿಮಂದಿರ.

ಬಾಬಾ ಅವರ ಪರಮ ಪವಿತ್ರವಾದ ಶರೀರವು ಸಮಾಧಿ ಮಾಡಲ್ಪಟ್ಟಿರುವ ವಾಡಾದ ನಿರ್ಮಾಪಕರಾದ ಶ್ರೀಮಾನ್ ಬೂಟಿಯವರೇ ಧನ್ಯರು.

**ಶ್ರೀ ಸಾಯಿ ಪ್ರಣಾಮ**

# ೪೦ನೇ ಅಧ್ಯಾಯ

## ಬಾಬಾ ಸನ್ಯಾಸಿ ರೂಪದಲ್ಲಿ ಉದ್ಯಾಪನಾ ಸಮಾರಂಭದಲ್ಲಿ ಹಾಜರಿದ್ದುದು - ತಮ್ಮ ಫೋಟೋದ ರೂಪದಲ್ಲಿ ಹೇಮಾಡಪಂತರ ಮನೆಗೆ ಬಂದುದು

ಬಾಬಾ ಅವರು ತಮ್ಮ ಭಕ್ತರಾದ ಬಾಳಾಸಾಹೇಬ ದೇವ ಅವರ ತಾಯಿಯ ಉದ್ಯಾಪನಾ ಸಮಾರಂಭಕ್ಕೆ ಹೇಗೆ ಹೋಗಿದ್ದರು. ಮತ್ತು ಬಾಂದ್ರಾದಲ್ಲಿ ಹೇಮಾಡಪಂತರ ಮನೆಗೆ ಹೋಳಿ ಹುಣ್ಣಿಮೆಯ ಔತಣಕ್ಕೆ ಹೇಗೆ ಬಂದರು ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಿದೆ.

ಯಾರು ಲೌಕಿಕ ಮತ್ತು ಪಾರಮಾರ್ಥಿಕ ಉಪದೇಶಗಳನ್ನು ಕೊಡುತ್ತ ಭಕ್ತರು ತಮ್ಮ ಜೀವನದ ಗುರಿಯನ್ನು ಮುಟ್ಟುವಂತೆ ಮಾಡಿದರೋ, ಯಾರು ತಮ್ಮ ಅಭಯ ಹಸ್ತವನ್ನು ಭಕ್ತರ ಮಸ್ತಕದ ಮೇಲಿಟ್ಟು ತಮ್ಮ ಶಕ್ತಿಯನ್ನು ವರ್ಗಾಯಿಸಿ, ಪಡೆಯಲು ಅಸಾಧ್ಯವಾದ ವಸ್ತುಗಳನ್ನು ಅವರು ಪಡೆಯುವಂತೆ ಮಾಡುತ್ತಿದ್ದರೋ ಯಾರು ತಮ್ಮ ಭಕ್ತರನ್ನು ಆಲಿಂಗಿಸಿಕೊಂಡು, ಭಕ್ತರು ತಾವೇ-ತಾವೇ ಭಕ್ತರು ಎಂಬ ಏಕೀಭಾವದಿಂದಿದ್ದರೋ, ಅಂತಹ ಶ್ರೀ ಸಾಯಿಬಾಬಾ ಅವರೇ ಧನ್ಯರು.

### ಉದ್ಯಾಪನಾ ಸಮಾರಂಭ

ಶ್ರೀ ಬಿ.ವಿ. ದೇವ ಅವರು ಠಾಣ ಜಿಲ್ಲೆಯ ಡಹಾಣುವಿನಲ್ಲಿ ಮಾಮಲೇದಾರರಾಗಿದ್ದರು. ಅವರ ತಾಯಿಯು ೨೫-೩೦ ಹರಕೆಗಳನ್ನು ಮಾಡಿಕೊಂಡಿದ್ದು ಆ ಸಂಬಂಧವಾಗಿ ಉದ್ಯಾಪನಾ ಸಮಾರಂಭ ಆಚರಿಸಬೇಕಿತ್ತು. ೧೦೦-೨೦೦ ಜನ ಬ್ರಾಹ್ಮಣರ ಸಂತರ್ಪಣೆಯೇ ಈ ಸಮಾರಂಭ. ಶ್ರೀ ದೇವ ಅವರು ಒಂದು ದಿನ ನಿಶ್ಚಯಿಸಿ ಸಾಯಿಬಾಬಾ ಅವರು ಈ ಸಮಾರಂಭಕ್ಕೆ ಬರದಿದ್ದರೆ ಸಮಾರಂಭವು ಶೋಭಿಸುವುದಿಲ್ಲವೆಂದು ಅವರನ್ನೂ ಸಹ ಊಟಕ್ಕೆ

ಕರೆದುಕೊಂಡು ಬರುವಂತೆ ಶಿರ್ಡಿಯಲ್ಲಿಯ ಬಾಪೂಸಾಹೇಬರಿಗೆ ಪತ್ರ ಬರೆದರು. ಬಾಬಾ ಅವರು ಆಮಂತ್ರಣ ನೋಡಿ "ನನ್ನನ್ನು ಸ್ಮರಿಸುವವರ ಬಳಿ ನಾನು ಸದಾ ಇರುತ್ತೇನೆ; ನನಗೆ ವಾಹನ ಸೌಕರ್ಯದ ಅಗತ್ಯವಿಲ್ಲ. ನನ್ನನ್ನು ಪ್ರೀತಿಯಿಂದ ಆಹ್ವಾನಿಸಿದವರ ಹತ್ತಿರ ನಾನು ಶೀಘ್ರವಾಗಿ ಓಡುತ್ತೇನೆ. ನಾನು, ನೀನು ಮತ್ತು ಇನ್ನೊಬ್ಬನು ಜೊತೆಗೂಡಿ ಬರುತ್ತೇವೆಂದು ಉತ್ತರ ಬರೆದು ಹಾಕು" ಎಂದರು. ಶ್ರೀ ಜೋಗ ಅವರು ಅದರಂತೆ ದೇವ ಅವರಿಗೆ ಉತ್ತರಿಸಿದರು. ಇದನ್ನು ನೋಡಿ ದೇವ ಅವರು ಆನಂಧಭರಿತರಾದರು. ಆದರೆ ಬಾಬಾ ರಾಹತಾ, ರುಯಿ, ನೀಮಗಾಂವದಿಂದ ಆಚೆಗೆ ಎಲ್ಲಿಗೂ ಹೋಗಿರಲಿಲ್ಲ. ಆದರೂ ಸಿದ್ಧ-ಪುರುಷರಾದ ಬಾಬಾ ಅವರಿಗೆ ಯಾವುದೂ ಅಸಾಧ್ಯವಿಲ್ಲ. ಯಾವ ರೂಪದಲ್ಲಿಯಾದರೂ ಬಂದು ತಮ್ಮ ಅಭಿಷ್ಟವನ್ನು ನೆರವೇರಿಸುತ್ತಾರೆಂದು ಶ್ರೀ ದೇವ ದೃಢ ಮನಸ್ಸಿನಿಂದಿದ್ದರು.

ಇದಕ್ಕೆ ಕೆಲವು ದಿನಗಳ ಹಿಂದೆ ಗೋಸಂರಕ್ಷಣಾ ಕಾರ್ಯಕರ್ತನೆಂದು ಹೇಳಿಕೊಂಡು ಒಬ್ಬ ಸನ್ಯಾಸಿಯು ಡಹಾಣುವಿನ ರೇಲ್ವೆ ಸ್ಟೇಶನ್ ಮಾಸ್ತರರ ಬಳಿ ಚಂದಾ ಎತ್ತಲು ಬಂದಿದ್ದನು. ಅವರು "ದೇವ ಮಾಮಲೇದಾರರ ಕಡೆಗೆ ಹೋಗಿ; ನಿಮ್ಮ ಕಾರ್ಯ ಸುಗಮವಾಗುತ್ತದೆ" ಎಂದು ಹೇಳುತ್ತಿರುವಾಗ, ಅದೇ ಸಮಯಕ್ಕೆ ಸರಿಯಾಗಿ ದೇವ ಅವರು ಅಲ್ಲಿಗೆ ಬಂದರು.

ಸ್ಟೇಶನ್ ಮಾಸ್ತರರು ಸನ್ಯಾಸಿಗೆ ದೇವ ಅವರ ಪರಿಚಯ ಮಾಡಿಕೊಟ್ಟರು. ಇಬ್ಬರೂ ಕೆಲವು ಕಾಲ ಮಾತುಕತೆ ನಡೆಸಿದರು. ಆಗ ದೇವ ಅವರು "ಈಗ ತಾನೇ ನರೋತ್ತಮ ಶೆಟ್ಟಿ ಬೇರೆ ಕಾರ್ಯಕ್ಕೆ ಚಂದಾ ಎತ್ತಿದ್ದಾರೆ. ಆದ್ದರಿಂದ ಈಗಲೇ ಇನ್ನೊಂದು ಸಲ ಚಂದಾ ಎತ್ತುವದು ಸೂಕ್ತವಲ್ಲ. ಇನ್ನು ೩-೪ ತಿಂಗಳ ನಂತರ ಬನ್ನಿರಿ" ಎಂದು ಹೇಳಿ ಕಳುಹಿಸಿದ್ದರು.

ಮುಂದೆ ಒಂದು ತಿಂಗಳ ನಂತರ ಸನ್ಯಾಸಿಯು ಬೆಳಿಗ್ಗೆ ೧೦ ಘಂಟೆಗೆ ಸರಿಯಾಗಿ ದೇವ ಅವರ ಮನೆ ಬಾಗಿಲಿಗೆ ಬಂದನು. ದೇವ ಅವರು ಚಂದಾ ಎತ್ತಲು ಆತ ಬಂದಿದ್ದಾನೆಂದು ಭಾವಿಸಿದರು. ಆದರೆ ಆ ಸನ್ಯಾಸಿಯು ಉದ್ಯಾಪನಾ ಸಮಾರಂಭದ ಸಿದ್ಧತೆಯನ್ನು ನೋಡಿ ತಾನು ಚಂದಾ ಎತ್ತಲು ಬಂದಿರದೆ ಊಟಕ್ಕೆ ಬಂದಿರುವುದಾಗಿ ತಿಳಿಸಿದನು. ಆಗ ದೇವ ಅವರು "ಸರಿ, ಬಹಳ ಸಂತೋಷ; ನಿಮ್ಮದೇ ಮನೆ ಎಂದು ಭಾವಿಸಿ ಊಟಕ್ಕೆ ಅಗತ್ಯವಾಗಿ ಬನ್ನಿರಿ" ಎಂದರು. ಆಗ ಸನ್ಯಾಸಿಯು "ನನ್ನೊಡನೆ ಇನ್ನೂ ಇಬ್ಬರಿದ್ದಾರೆ" ಎಂದನು. ಆಗ ದೇವ ಅವರು "ಅವರನ್ನೂ ಸಂಗಡ ಕರೆದುಕೊಂಡು ಬನ್ನಿರಿ" ಎಂದರು. ನಂತರ ಭೋಜನ ಇನ್ನೂ ಎರಡು ಗಂಟೆ ಕಾಲ ಇದ್ದುದರಿಂದ "ಆ ವೇಳೆಗೆ ಹೇಳಿ ಕಳುಹಿಸಲೇ?" ಎಂದು ದೇವ ಕೇಳಲು ಸನ್ಯಾಸಿಯು ತಾನೇ ನಿಯಮಿತ ಕಾಲಕ್ಕೆ ಬರುತ್ತೇನೆಂದು ತಿಳಿಸಿದನು. ದೇವ ಅವರು ಸರಿಯಾಗಿ ಹನ್ನೆರಡು ಗಂಟೆಗೆ ಬನ್ನಿರಿ ಎಂದರು. ಆ ಪ್ರಕಾರ ಹನ್ನೆರಡು ಗಂಟೆಗೆ ಸರಿಯಾಗಿ ಮೂವರು ಬಂದು ಊಟ ಮುಗಿಸಿ ಹೊರಟು ಹೋದರು.

ಸಮಾರಂಭ ಮುಕ್ತಾಯವಾದ ನಂತರ ದೇವ ಅವರು ಸಾಯಿಬಾಬಾ ತಮ್ಮ ಮಾತಿನಂತೆ ನಡೆದುಕೊಳ್ಳಲಿಲ್ಲವೆಂದು ಖೇದದಿಂದ ಶ್ರೀ ಜೋಗ ಅವರಿಗೆ ಪತ್ರ ಬರೆದರು. ಜೋಗ ಅವರು ಬಾಬಾ ಅವರ ಹತ್ತಿರ ಹೋಗಿ ಆ ಪತ್ರವನ್ನು ಅವರ ಮುಂದಿಟ್ಟರು. ಅದನ್ನು ಒಡೆದು ನೋಡುವ ಮೊದಲೇ ಬಾಬಾ ಅವರು " ಹಾ! ಏನು, ನಾನು ಹೋಗಲು ಮಾತುಕೊಟ್ಟು ಮೋಸಗೊಳಿಸಿದ್ದೇನೆಯೇ? ನಾನು ಇಬ್ಬರ ಸಂಗಡ ಹೋಗಿ ಭೋಜನದಲ್ಲಿ ಭಾಗವಹಿಸಿ ಸಂತೃಪ್ತಿಯಿಂದ ಹಿಂದಿರುಗಿದ್ದೇನೆ. ಅವನು ನನ್ನನ್ನು ಗುರುತಿಸಲಿಲ್ಲ. ಹಾಗಿದ್ದರೆ ನನ್ನನ್ನು ಆಮಂತ್ರಿಸಿದ್ದಾದರೂ ಏಕೆ? ಆ ಸನ್ಯಾಸಿಯೂ ಚಂದಾ ಎತ್ತಲು ಬಂದಿದ್ದಾನೆಂದು ಆತನು ಭಾವಿಸಿದಾಗ ನಾನು ಊಟಕ್ಕೆ ಬರುವೆನೆಂದು

ತಿಳಿಸಿ ಅವನ ಅನುಮಾನವನ್ನು ಪರಿಹಾರ ಮಾಡಲಿಲ್ಲವೇ? ನಂತರ ನಾವು ಮೂವರು ಊಟ ಮಾಡಿ ಬರಲಿಲ್ಲವೇ? ನಾನು ಮಾತಿನಂತೆ ನಡೆಯಲು ಸರ್ವಸ್ವವನ್ನು ತ್ಯಾಗ ಮಾಡಬಲ್ಲೆ. ನಾನೆಂದೂ ಆಡಿದ ಮಾತಿಗೆ ತಪ್ಪಲಾರೆ" ಎಂದು ಹೇಳಿದರು. ಈ ಉತ್ತರವನ್ನು ಕೇಳಿದ ಜೋಗ ಆನಂದಭರಿತರಾಗಿ ಮರುಟಪಾಲಿಗೆ ಧೇವ ಅವರಿಗೆ ಉತ್ತರ ಬರೆದರು. ಅದನ್ನು ಓದಿ ದೇವ ಅವರಿಗೆ ಅತ್ಯಾನಂದವಾಯಿತು. ನೇತ್ರಗಳಿಂದ ಆನಂದಬಾಷ್ಪಗಳು ಹರಿದವು. ವೃಥಾ ಬಾಬಾ ಅವರನ್ನು ನಿಂದಿಸಿದ್ದಕ್ಕಾಗಿ ವ್ಯಥೆ ಪಟ್ಟುಕೊಂಡರು. ನಡೆದ ಘಟನೆಯನ್ನು ನೆನೆಸಿಕೊಂಡು ಅಚ್ಚರಿಗೊಂಡರು.

## ಹೇಮಾಡಪಂತರ ಹೋಳಿ ಔತಣ

ಈಗ ಬಾಬಾ ಅವರು ತಮ್ಮ ಫೋಟೋ ರೂಪದಲ್ಲಿ ತಮ್ಮ ಭಕ್ತನೊಬ್ಬನ ಅಭೀಷ್ಟವನ್ನು ಹೇಗೆ ನೆರವೇರಿಸಿದರು ಎಂಬುದನ್ನು ನೋಡೋಣ. ಅಂದು ೧೯೧೭ರ ಪೂರ್ಣಿಮೆ. ಬೆಳಗಿನ ಜಾವದ ಸಮಯದಲ್ಲಿ ಹೇಮಾಡಪಂತರಿಗೆ ಈ ರೀತಿ ಕನಸು ಬಿದ್ದಿತು. ಬಾಬಾ ಅವರು ಸನ್ಯಾಸಿ ರೂಪದಲ್ಲಿ ಅವರ ಕನಸಿನಲ್ಲಿ ಕಾಣಿಸಿಕೊಂಡು ಅವರನ್ನು ಎಚ್ಚರಿಸಿ, ನಿನ್ನಲ್ಲಿಗೆ ಊಟಕ್ಕೆ ಬರುತ್ತೇನೆಂದು ತಿಳಿಸಿದರು. ನಂತರ ಬೆಳಗಾಗಿ ಎಚ್ಚರಾದಾಗ ಸಾಯಿಬಾಬಾ ಅವರಾಗಲಿ, ಸನ್ಯಾಸಿಯಾಗಲಿ ಕಾಣಲಿಲ್ಲ. ನಂತರ ಕನಸನ್ನು ಜ್ಞಾಪಿಸಿಕೊಂಡರು. ಸನ್ಯಾಸಿಯು ಹೇಳಿದ ಪ್ರತಿ ಶಬ್ದವೂ ಸ್ಮೃತಿ ಪಥಕ್ಕೆ ಬಂದವು. ಅವರು ಏಳು ವರ್ಷಗಳಿಂದ ಬಾಬಾ ಅವರ ಸಂಪರ್ಕ ಪಡೆದರೂ ಮತ್ತು ಸದಾ ಬಾಬಾ ಅವರನ್ನು ಧ್ಯಾನಿಸುತ್ತಿದ್ದರೂ ಸಹಾ ಬಾಬಾ ಅವರು ತಮ್ಮ ಮನೆಗೆ ಊಟಕ್ಕೆ ಬರಬಹುದೆಂದು ತಿಳಿದಿರಲಿಲ್ಲ. ಕೂಡಲೆ ತಮ್ಮ ಹೆಂಡತಿಗೆ ಈ ದಿನ ಹೋಳಿ ಹಬ್ಬವಾದುದರಿಂದ ಒಬ್ಬ ಸನ್ಯಾಸಿ ಅತಿಥಿಯಾಗಿ ಊಟಕ್ಕೆ ಬರುವರೆಂದು ಹೆಚ್ಚು ಅಡಿಗೆ ಮಾಡಲು ಹೇಳಿದರು. ಆಗ ಅವಳು ಯಾರು, ಎಲ್ಲಿಂದ ಬರುತ್ತಾರೆ ಎಂದುಕೇಳಲು

ತಮ್ಮ ಕನಸ್ಸನ್ನು ಹೇಮಾಡಪಂತ ಅವಳಿಗೆ ವಿವರಿಸಿದರು. ಅವಳು ಅನುಮಾನದಿಂದ "ಬಾಬಾ ಅವರು ಶಿರ್ಡಿಯ ರುಚಿಕರವಾದ ಊಟ ಬಿಟ್ಟು ನಮ್ಮ ಮನೆಯ ಸಾದಾ ಊಟಕ್ಕೆಂದಾದರೂ ಬರುತ್ತಾರೆಯೇ? ಎಂದು ಕೇಳಿದಳು. ಆಗ ಹೇಮಾಡಪಂತರು "ಬಾಬಾ ಅವರೇ ಸ್ವತ: ಬರದಿದ್ದರೂ ಯಾರಾದರೂ ಒಬ್ಬ ಅತಿಥಿ ರೂಪದಲ್ಲಿ ಬರಬಹುದೆಂದೂ, ಹೆಚ್ಚಿಗೆ ಅಡಿಗೆ ಮಾಡುವುದರಿಂದ ನಷ್ಟವೇನೂ ಇಲ್ಲ" ಎಂದರು.

ಮಧ್ಯಾಹ್ನದ ಹೊತ್ತಿಗೆ ಅಡಿಗೆ ತಯಾರಾಗಿತ್ತು. ದೇವರ ಪೂಜೆ ನೆರವೇರಿಸಿ ಎರಡು ಸಾಲು ಎಲೆ ಹಾಕಿದರು. ಮನೆಯವರೆಲ್ಲ ತಮ್ಮ ತಮ್ಮ ಮಣೆಗಳ ಮೇಲೆ ಕುಳಿತರು. ಆಹಾರ ಬಡಿಸಿದರು. ಎಲ್ಲರೂ ಅತಿಥಿಯ ಬರವನ್ನೇ ಕಾಯುತ್ತಿದ್ದರು. ಮಧ್ಯಾಹ್ನ ಮೀರುತ್ತಿತ್ತು. ಅತಿಥಿಯ ಸುಳಿವೇ ಇರಲಿಲ್ಲ. ನಂತರ ಬಾಗಿಲು ಹಾಕಿ ತುಪ್ಪ ಬಡಿಸಿದರು. ಇನ್ನೇನು ಎಲ್ಲರೂ ಊಟ ಮಾಡಲಾರಂಭಿಸಿದರು ಎನ್ನುವ ಸಮಯಕ್ಕೆ ಸರಿಯಾಗಿ ಬಾಗಿಲ ಬಡಿದ ಸಪ್ಪಳ ಕೇಳಿಸಿತು. ಹೇಮಾಡಪಂತರು ಹೋಗಿ ಬಾಗಿಲು ತೆರೆದು ನೋಡಲಾಗಿ ಅಲಿಮಹಮ್ಮದ ಮತ್ತು ಇಸ್ಮೂಮುಜಾವರ ಅವರನ್ನು ಕಂಡರು. ಮನೆಯವರೆಲ್ಲ ಊಟಕ್ಕೆ ಕುಳಿತಿರುವುದನ್ನು ನೋಡಿ ತೊಂದರೆ ಕೊಟ್ಟಿದ್ದಕ್ಕಾಗಿ ಅವರು ಕ್ಷಮೆ ಬೇಡಿ "ಊಟ ಮಾಡಲು ನಿಮಗೆ ಎಲ್ಲರೂ ಕಾಯುತ್ತಿದ್ದಾರೆ ಇದನ್ನು ತೆಗೆದುಕೊಳ್ಳಿ" ಎಂದು ಹಳೇ ಕಾಗದದಲ್ಲಿ ಸುತ್ತಿದ್ದ ಫೋಟೋ ಒಂದನ್ನು ಹೇಮಾಡಪಂತರ ಕೈಗಿತ್ತು "ನಂತರ ವಿವರವಾಗಿ ತಿಳಿಸುವೆವು. ಊಟ ಮುಗಿಸಿ ಬನ್ನಿ" ಎಂದು ಹೇಳಿ ಹೋದರು. ಹೇಮಾಡಪಂತರು ಅದನು ಬಿಚ್ಚಿ ನೋಡಲಾಗಿ ಶ್ರೀ ಸಾಯಿಬಾಬಾ ಅವರ ಸುಂದರ ಫೋಟೋ ಕಂಡು ಆನಂದಭರಿರಾದರು. ನಂತರ ಆ ಫೋಟೋ ಕಣ್ಣುಗಳಿಗೆ ಒತ್ತಿಕೊಂಡು ಭೋಜನ ಗೃಹಕ್ಕೆ ಬಂದು ಅತಿಥಿಗಾಗಿ ಕಾದಿರಿಸಿದ್ದ ಸ್ಥಳದಲ್ಲಿ ಅದನ್ನಿಟ್ಟು

ನೈವೇದ್ಯ ಅರ್ಪಿಸಿ ಎಲ್ಲರೂ ಊಟ ಮಾಡಲಾರಂಭಿಸಿದರು. ಕನಸಿನಲ್ಲಿ ಹೇಳಿದಂತೆ ಸ್ವತ: ಬಾಬಾ ಅವರೇ ತಮ್ಮ ಮನೆಗೆ ಊಟಕ್ಕೆ ಬಂದಿರುವರೆಂದು ಭಾವಿಸಿ ಎಲ್ಲರೂ ಅನನ್ಯವಾಗಿ ಫೋಟೋಕ್ಕೆ ವಂದಿಸಿದರು.

ಅಲಿ ಮಹಮ್ಮದ ಅವರಿಗೆ ಈ ಫೋಟೋ ಹೇಗೆ ದೊರಕಿತು, ಹೇಮಾಡಪಂತರಿಗೆ ಏಕೆ ಅದನ್ನು ಕೊಟ್ಟರು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುತ್ತೇನೆ.

**ಶ್ರೀ ಸಾಯಿ ಪ್ರಣಾಮ**

# ೪೧ನೇ ಅಧ್ಯಾಯ

## ಅಲಿ ಮಹಮ್ಮದರಿಂದ ವಿವರಣೆ – ದೇವ ಅವರಿಂದ ಚಿಂದಿ ಕಳವು

ಈ ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಘಟನೆ ನಡೆದ ಒಂಬತ್ತು ವರ್ಷಗಳ ನಂತರ ಅಲಿ ಮಹಮ್ಮದ ಅವರು ಹೇಮಾಡಪಂತರಿಗೆ ಬೆಟ್ಟಿಯಾಗಿ ಈ ಕೆಳಕಂಡ ಕಥೆ ಹೇಳಿದರು.

ಅಲಿ ಮಹಮ್ಮದ ಒಂದು ದಿವಸ ಮುಂಬಯಿಯ ಬೀದಿಯಲ್ಲಿ ಹೋಗುವಾಗ ಫೋಟೋ ಮಾರುತ್ತಿದ್ದವನಿಂದ ಆ ಫೋಟೋ ಕೊಂಡ ತಂದು ಬಾಂದ್ರಾದಲ್ಲಿ ತಮ್ಮ ಮನೆಯಲ್ಲಿ ತೂಗು ಹಾಕಿದ್ದರು. ಬಾಬಾ ಅವರನ್ನು ಬಹುವಾಗಿ ಪ್ರೀತಿಸುತ್ತಿದ್ದುದರಿಂದ ನಿತ್ಯವೂ ಆ ಫೋಟೋ ಮೂಲಕ ಅವರನ್ನು ಪೂಜಿಸುತ್ತಿದ್ದರು. ಈ ಫೋಟೋ ಅವರು ಹೇಮಾಡಪಂತರಿಗೆ ಕೊಡುವ ಮೂರು ತಿಂಗಳ ಮುಂಚೆ ಅವರು ಕಾಲು ಊದಿಕೊಂಡು ಬಹಳ ನರಳುತ್ತಿದ್ದರು. ಶಸ್ತ್ರಚಿಕಿತ್ಸೆಯ ನಂತರ ಅವರ ಭಾವ ಪೀರಭಾಯಿ ನೂರಮಹಮ್ಮದ ಅವರ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಮೂರು ತಿಂಗಳ ಕಾಲ ಅವರ ಮನೆಯ ಬಾಗಿಲಿಗೆ ಬೀಗ ಹಾಕಿತ್ತು. ಯಾರೂ ವಾಸವಿರಲಿಲ್ಲ. ಆ ಮನೆಯಲ್ಲಿ ಬಾಬಾ ಅಬ್ದುಲ್ ಹರಿಮಾನ, ಮೌಲಾನಾ ಸಾಬ ಮಹಮ್ಮದ ಹುಸೇನ್ ಸಾಯಿಬಾಬಾ ಮತ್ತು ತಾಜುದ್ದೀನ್ ಬಾಬಾ ಅಲ್ಲದೆ ಇತರ ಕೆಲವು ಸಂತರ ಫೋಟೋಗಳಿದ್ದವು. ಕಾಲಚಕ್ರದ ಸುಳಿ ಇವುಗಳನ್ನೂ ಸಹ ಬಿಡಲಿಲ್ಲ. ಆದರೆ ಬಾಬಾ ಅವರ ಫೋಟೋ ಹೇಗೆ ಪಾರಾಯಿತು ಎಂಬುದನ್ನು ಇಲ್ಲಿಯ ತನಕ ಯಾರೂ ವಿವರಿಸಿಲ್ಲ. ಅದು ಅವರ ಅಂತರ್ಯಾಮಿತ್ವ ಮತ್ತು ಸರ್ವಜ್ಞತ್ವನ್ನು ಸೂಚಿಸುತ್ತದೆ.

ಅವರು ಮಹಮ್ಮದ ಹುಸೇನ್ ಥಾರಿಯಾ ಎಂಬವರಿಂದ ಅಬ್ದುಲ್ ರಹಿಮಾನ ಅವರ ಫೋಟೋ ಪಡೆದಿದ್ದರು. ಅದನ್ನು

ಅವರ ಭಾವನವರಿಗೆ ಕೊಟ್ಟರು. ನೂರ ಮಹಮ್ಮದ ಪೀರಭಾಯಿಯವರು ಅದನ್ನು ತಮ್ಮ ಮೇಜಿನ ಒಳಗೆ ಎಂಟು ವರ್ಷಗಳ ಕಾಲ ಇಟ್ಟಿದ್ದರು. ಒಂದುಸಾರೆ ಅವರು ಅದನ್ನು ನೋಡಿ ಛಾಯಾಗ್ರಾಹಕರಲ್ಲಿ ತೆಗೆದುಕೊಂಡು ಹೋಗಿ ಅದರ ನೂರಾರು ಪ್ರತಿಗಳನ್ನು ಮಾಡಿಸಿ ತಮ್ಮ ಬಂಧು–ಬಳಗದವರೆಲ್ಲರಿಗೂ ಹಂಚಿದರು. ನೂರ ಮಹಮ್ಮದ ಸಂತ ಅಬ್ದುಲ್ ರಹಿಮಾನ ಅವರ ಶಿಷ್ಯರಾಗಿದ್ದರು. ಒಂದು ದಿನ ಅವರು ತಮ್ಮ ಗುರುಗಳಿಗೆ ಅದರ ಪ್ರತಿಯೊಂದನ್ನು ಕೊಡಲು ಹೋದಾಗ ಅವರು ಕೋಪಗೊಂಡು ಅವರನ್ನು ಹೊಡೆಯಲು ಬಂದರು. ಆಗ ನೂರ ಮಹಮ್ಮದ ಅವರಿಗೆ ಇಷ್ಟೊಂದು ಹಣ ಖರ್ಚುಮಾಡಿ ಗುರುವಿನ ಕೋಪಕ್ಕೆ ಪಾತ್ರನಾದೆ ಎಂದು ವ್ಯಥೆಯಾಯಿತು. ಅವರು ಗುರುಗಳು ವಿಗ್ರಹ ಆರಾಧಕರಲ್ಲದಿದ್ದುದರಿಂದ ಅವುಗಳನ್ನು ಕೂಡಲೇ ಒಂದು ದೋಣಿಯಲ್ಲಿ ತೆಗೆದುಕೊಂಡು ಹೋಗಿ ನಡುಸಮುದ್ರದಲ್ಲಿ ಮುಳುಗಿಸಿದರು. ತಮ್ಮ ಬಂಧು–ಬಳಗ ಮತ್ತು ಶಿಷ್ಯರೆಲ್ಲರಿಂದಲೂ ಆ ಪ್ರತಿಗಳನ್ನು ತರಿಸಿ ಒಬ್ಬ ಮೀನುಗಾರನ ಕೈಗೆ ಕೊಟ್ಟು ಸಮುದ್ರದಲ್ಲಿ ಮುಳುಗಿಸಲು ಹೇಳಿದರು. ಆ ಸಮಯದಲ್ಲಿ ಆಲಿ ಮಹಮ್ಮದ ಅವರು ಭಾವನವರಾದ ನೂರ ಮಹಮ್ಮದ ಅವರ ಮನೆಯಲ್ಲಿದ್ದರು. ಆಲಿ ಮಹಮ್ಮದ ಎಲ್ಲ ಫೋಟೋಗಳನ್ನು ಒಗೆದು ಬಿಟ್ಟರೆ ಕಷ್ಟಗಳು ಪರಿಹಾರವಾಗುತ್ತವೆಂದು ಕೇಳಿ ತಮ್ಮ ಮ್ಯಾನೇಜರರನ್ನು ಕರೆಸಿ ಬಾಂದ್ರಾದಲ್ಲಿ ತಮ್ಮ ಮನೆಯಲ್ಲಿದ್ದ ಎಲ್ಲ ಫೋಟೊಗಳನ್ನು ಸಮುದ್ರದಲ್ಲಿ ಚೆಲ್ಲಿದರು.

ಆದರೆ ಎರಡು ತಿಂಗಳ ನಂತರ ಆಲಿ ಮಹಮ್ಮದ ಅವರು ತಮ್ಮ ಮನೆಗೆ ಹಿಂತಿರುಗಿದಾಗ ಬಾಬಾ ಅವರ ಫೋಟೊ ಮಾತ್ರ ಉಳಿದಿದ್ದನ್ನು ಕಂಡು ಅಚ್ಚರಿಗೊಂಡರು. ಎಲ್ಲ ಫೋಟೋಗಳನ್ನು ತೆಗೆದುಕೊಂಡು ಹೋದ ಮ್ಯಾನೇಜರ್ ಬಾಬಾ ಅವರ ಫೋಟೋ ಅಷ್ಟೇ ಹೇಗೆ ಬಿಟ್ಟು ಹೋದರು. ಎಂಬುದು ಅವರಿಗೆ ತಿಳಿಯಲೇ

ಇಲ್ಲ. ಆಗ ವಿಚಾರ ಮಾಡತೊಡಗಿದರು. ಕೂಡಲೇ ಅದನ್ನು ತೆಗೆದು ತಮ್ಮ ಭಾವವನವರು ಬಂದು ಅದನ್ನೂ ಸಮುದ್ರದಲ್ಲಿ ಚೆಲ್ಲಬಹುದು ಎಂಬ ಭಯದಿಂದ ಗೂಡಿನಲ್ಲಿ ಮುಚ್ಚಿಟ್ಟರು. ಮುಂದೆ ಏನೂ ಮಾಡಬೇಕೆಂದು ಯೋಚಿಸುತ್ತಿರುವಲ್ಲಿ ಬಾಬಾ ಅವರೇ ಬಂದು "ಮೌಲಾನಾ ಇಸ್ಮೂ ಮುಜಾವರ ಅವರಲ್ಲಿಗೆ ಹೋಗಿ ಪರಿಹಾರ ಪಡೆ ಎಂದು ಸೂಚಿಸುವಂತಾಯಿತು.ಕೂಡಲೇ ಅವರಲ್ಲಿಗೆ ಧಾವಿಸಿದರು. ಮೌಲಾನಾ ಮುಜಾವರ ಅವರು ಆ ಫೋಟೋ ದಾಭೋಲಕರ ( ಹೇಮಾಡಪಂತ) ಅವರಿಗೆ ಕೊಟ್ಟರೆ ಸರಿಯಾಗಿ ಕಾಪಾಡುತ್ತಾರೆ ಎಂದು ತಿಳಿಸಿದ್ದುದರಿಂದ ಅದನ್ನು ಹೇಮಾಡಪಂತರ ಕಡೆಗೆ ಹೋಳಿ ಹುಣ್ಣಿಮೆ ದಿನ ತಂದು ಕೊಟ್ಟರು.

ಈ ಕೆಳಕಂಡ ಕಥೆಯು ಆಧ್ಯಾತ್ಮಿಕ ವಿಚಾರಗಳಲ್ಲಿ ಆಸ್ತರಾಗಿದ್ದ ಭಕ್ತರನ್ನು ಬಾಬಾ ಹೇಗೆ ಕಾಣುತ್ತಿದ್ದರು ಮತ್ತು ಅವರ ಕಷ್ಟಗಳನ್ನು ಹೇಗೆ ನಿವಾರಿಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ.

## ಚಿಂದಿ ಕಳವು– ಜ್ಞಾನೇಶ್ವರಿ ಪಠಣ

ಒಂದು ಸಾರೆ ಡಹಾಣುವಿನ ಮಾಮಲೇದಾರರಾದ ಬಾಳಾಸಾಹೇಬ ದೇವ ಅವರಿಗೆ ಇತರ ಧಾರ್ಮಿಕ ಗ್ರಂಥಗಳ ಜೊತೆಗೆ ಜ್ಞಾನೇಶವರಿಯನ್ನು ಪಠಿಸಬೇಕೆಂದು ಎನಿಸಿತು. ಅವರಿಗೆ ಪ್ರತಿದಿನವೂ ಭಗವದ್ಗೀತೆಯ ಒಂದು ಭಾಗವನ್ನೂ ಮತ್ತು ಇತರ ಗ್ರಂಥಗಳ ಕೆಲವು ಭಾಗವನ್ನೂ ಓದಲು ಸಾಧ್ಯವಾಗಿತ್ತು. ಆದರೆ ಜ್ಞಾನೇಶ್ವರಿಯನ್ನು ಮುಟ್ಟಿದರೆ ಆನೇಕ ತೊಂದರೆಗಳು ಬಂದು ಅದನ್ನು ಓದಲಾಗುತ್ತಲೇ? ಇರಲಿಲ್ಲ. ಮೂರು ತಿಂಗಳು ರಜಾ ಪಡೆದು ಶಿರ್ಡಿಗೆ ಬಂದರು. ನಂತರ ತಮ್ಮ ಊರಿಗೆ ಹಿಂತಿರುಗಿದರು. ಆಗಲೂ ಜ್ಞಾನೇಶ್ವರಿಯನ್ನು ಓದುವುದಕ್ಕೆ ಅಡ್ಡಿ– ಆತಂಕಗಳು ಒದಗಿ ಅವರನ್ನು ನಿರಾಶರನ್ನಾಗಿ ಮಾಡಿದವು. ಕೊನೆಗೆ ಅವರು ಬಾಬಾ ಅವರೇ ಆ ಪುಸ್ತಕವನ್ನು

ಓದು ಎಂದು ಹೇಳುವ ತನಕ ಜ್ಞಾನೇಶ್ವರಿಯನ್ನು ಮುಟ್ಟುವುದಿಲ್ಲ ಎಂದು ಧೃಡ ಸಂಕಲ್ಪ ಮಾಡಿದರು. ನಂತರ ಫೆಬ್ರವರಿ ೧೯೧೪ರಲ್ಲಿ ಕುಟುಂಬ ಸಮೇತ ಶಿರ್ಡಿಗೆ ಬಂದರು. ಆಗ ಬಾಪೂಸಾಹೇಬ ಜೋಗ "ಏನು ಸ್ವಾಮಿ, ನೀವು ಪ್ರತಿದಿನ ಜ್ಞಾನೇಶವರಿಯನ್ನು ಓದುತ್ತಿಲ್ಲವೇ?" ಎಂದು ದೇವ ಅವರಿಗೆ ಕೇಳಿದರು. "ಜ್ಞಾನೇಶ್ವರಿ ಓದಲು ನನಗೆ ಬಹಳೇ ಇಷ್ಟ ಆದರೆ ಇನ್ನೂವರೆಗೆ ಅದು ಸಾಧ್ಯವಾಗಿಲ್ಲ. ಅದನ್ನು ಓದಲು ಬಾಬಾ ನನಗೆ ಅನುಮತಿ ಕೊಟ್ಟ ನಂತರ ನಾನು ಓದುತ್ತೇನೆ" ಎಂದು ದೇವ ಉತ್ತರ ಕೊಟ್ಟರು. ಆಗ ಜೋಗ ಅವರು ಒಂದು ಜ್ಞಾನೇಶ್ವರಿ ಗ್ರಂಥವನ್ನು ತಂದು ಬಾಬಾ ಅವರಿಗೆ ಕೊಡಿ, ಅದನ್ನು ಬಾಬಾ ತಿರುಗಿ ಕೊಟ್ಟನಂತರ ಅದನ್ನು ಓದಲು ಪ್ರಾರಂಭಿಸಿ ಎಂದು ದೇವ ಅವರಿಗೆ ಉಪಾಯ ಸೂಚಿಸಿದರು. ಆದರೆ "ಬಾಬಾ ನನಗೆ ಸ್ಪಷ್ಟವಾಗಿ ಓದು ಎಂದು ಹೇಳದ ವಿನ: ನಾನು ಯಾವುದೇ ಉಪಾಯವನ್ನು ಮಾಡುವುದಿಲ್ಲ" ಎಂದು ಹೇಳಿ ಬಾಬ ಅವರನ್ನು ನಂಬಿ ದೇವ ಸದ್ಭಕ್ತಿಯಿಂದ ಇದ್ದರು.

ನಂತರ ದೇವ ಅವರು ಬಾಬಾ ಅವರ ದರ್ಶನ ತೆಗೆದುಕೊಂಡು ನಮಸ್ಕಾರ ಮಾಡಿ ಒಂದು ರೂಪಾಯಿ ದಕ್ಷಿಣೆ ಕಟ್ಟರು. ಬಾಬಾ ಅವರು ಇಪ್ಪತ್ತು ರೂಪಾಯಿಗಳನ್ನು ಕೇಳಿದರು. ಅದನ್ನೂ ಕೊಟ್ಟರು. ನಂತರ, ಆ ರಾತ್ರಿ ಬಾಲಕರಾಮ ಅವರನ್ನು ಸಂಧಿಸಿ ಕುತೂಹಲದಿಂದ ಅವರು ಹೇಗೆ ಬಾಬಾ ಅವರ ಅನುಗ್ರಹವನ್ನು ಸಂಪಾದಿಸಿದರೆಂದು ಕೇಳಲು ಅವರು ಮರುದಿನ ಆರತಿ ನಂತರ ಎಲ್ಲವನ್ನೂ ವಿವರವಾಗಿ ತಿಳಿಸುವೆನೆಂದರು ಮರುದಿನ ದೇವ ಪುನ: ಬಾಬಾ ಅವರ ದರ್ಶನಕ್ಕೆ ಹೋದಾಗ ಅವರು ಇಪ್ಪತು ರೂಪಾಯಿಗಳ ದಕ್ಷಿಣೆ ಕೇಳಿದರು. ದೇವ ಅವರು ಮನ:ಪೂರ್ವಕವಾಗಿ ದಕ್ಷಿಣೆ ಕೊಟ್ಟರು. ಮಸೀದಿಯಲ್ಲಿ ಬಹಳ ಜನ ನೆರೆದಿದ್ದುದರಿಂದ ದೇವ ಅವರು ಒಂದ ಕಡೆ ಕುಳಿತರು. ಬಾಬಾ ಅವರು ಅವರನ್ನು ಹತ್ತಿರ ಕರೆದು, ಶಾಂತರಾಗಿ ಸುಮ್ಮನೆ ಕುಳಿತಿರಲು ಹೇಳಿದರು. ಅದರಂತೆ ದೇವ ಅವರು ನಡೆದುಕೊಂಡರು.

ಆರತಿಯಾದ ನಂತರ ಎಲ್ಲರೂ ಹೊರಟರು. ನಂತರ ದೇವ ಅವರು ಪುನ: ಬಾಲಕರಾಮ ಅವರನ್ನು ಸಂಧಿಸಿ ಪುನ: ವಿಚಾರ ಮಾಡಿದರು. ಬಾಲಕರಾಮ ಉತ್ತರ ಕೊಡಲು ಸುರು ಮಾಡುವಷ್ಟರಲ್ಲಿ ಬಾಬಾ ಅವರು ಸೇವಕ ಚಂದ್ರೂನನ್ನು ಕಳುಹಿಸಿ ದೇವ ಅವರನ್ನು ಬರಮಾಡಿಕೊಂಡರು. ಆಗ ಬಾಬಾ ಅವರು ಯಾವ ವಿಚಾರ ಚರ್ಚಿಸುತ್ತಿದ್ದಿ? ಎಂದು ಕೇಳಲು ಬಾಲಕರಾಮನೊಡನೆ ಮಾತಾಡುತ್ತಿದ್ದು ತಮ್ಮ ಕೀರ್ತಿಯನ್ನು ಕೇಳುತ್ತಿದ್ದೆ ಎಂದರು. ಬಾಬ ಅವರು ಪುನ: ಇಪ್ಪತ್ತೈದು ರೂ. ದಕ್ಷಿಣೆ ಕೇಳಿದರು. ಅದನ್ನೂ ದೇವ ಕೊಟ್ಟರು. ನಂತರ ಬಾಬಾ ದೇವ ಅವರನ್ನು ಒಳಗೆ ಕರೆದುಕೊಂಡು ಹೋಗಿ,"ನನ್ನ ಚಿಂದಿಯನ್ನು ನನಗೆ ಗೊತ್ತಿಲ್ಲದಂತೆ ಕಳವುಮಾಡಿರುವೆಯಾ?" ಎಂದು ಆರೋಪಿಸಿದರು. ದೇವ ತಾವು ಕಳವು ಮಾಡಿಲ್ಲ ಎಂದರು. ಬಾಬಾ ಅವರು ಮತ್ತೊಮ್ಮೆ ಹುಡುಕುವಂತೆ ಹೇಳಿದರು. ಅವರು ಪುನ: ಹುಡುಕಿದರು. ಸಿಗಲಿಲ್ಲ. ಆಗ ಬಾಬಾ ಅವರು ಕೋಪಗೊಂಡು "ಇಲ್ಲಿ ಯಾರೂ ಇಲ್ಲ; ನೀನೇ ಕಳ್ಳ, ಇಷ್ಟೊಂದು ವಯಸ್ಸಾಗಿದೆ; ತಲೆ ಕೂದಲೆಲ್ಲ ಬೆಳ್ಳಗಾಗಿವೆ ಕದಿಯಲೋಸುಗ ಇಲ್ಲಿ ಬಂದೆಯಾ?" ಎಂದರು. ಇದಾದ ನಂತರ ಬಾಬಾ ಕೋಪದಿಂದ ತೆಗಳಾರಂಭಿಸಿದರು. ಸುಮರು ಒಂದುಗಂಟೆಯ ನಂತರ ಅವರು ದೇವ ಅವರನ್ನು ವಾಡಾಕ್ಕೆ ಹೋಗಲು ಹೇಳಿದರು. ಅವರು ವಾಡಾಕ್ಕೆ ಹಿಂತಿರುಗಿ ನೆಡದ ಎಲ್ಲ ಸಂಗತಿಯನ್ನು ಜೋಗ ಮತ್ತು ಬಾಲಕರಾಮ ಅವರಿಗೆ ತಿಳಿಸಿದರು. ಮಧ್ಯಾಹ್ನ ಬಾಬಾ ಅವರು ಎಲ್ಲರನ್ನೂ ಬರಮಾಡಿಕೊಂಡು "ನನ್ನ ಮಾತುಗಳು ಆ ಮುದಕನಿಗೆ ನೋವನ್ನುಂಟು ಮಾಡಿರಬಹುದು. ಅವನೇ ಕಳ್ಳನಾದುದರಿಂದ ಎದುರಾಗಿ ಒಂದು ಮಾತನನೂ ಸಹ ಆಡಲಿಲ್ಲ" ಎಂದರು. ಪುನ: ದೇವ ಅವರಿಂದ ಹನ್ನೆರಡು ರೂಪಾಯಿ ದಕ್ಷಿಣೆ ಕೇಳಿದರು. ದೇವ ಅವರು ದಕ್ಷಿಣೆ ಬೇರೆಯವರ ಕಡೆಯಿಂದ ಸಂಗ್ರಹಿಸಿ ಕೊಟ್ಟರು. ನಮಸ್ಕಾರ ಮಾಡಿ ಅವರು ಮುಂದೆ ಕುಳಿತರು. ಆಗ ಅವರು "ನೀನು ಈಗ ಏನು ಮಾಡುತ್ತಿದ್ದಿ?" ಎಂದು ಕೇಳಲು

ದೇವ ಅವರು, "ಏನೂ ಇಲ್ಲ" ಎಂದು ಉತ್ತರವಿತ್ತರು. ಆಗ ಬಾಬಾ ಅವರು "ವಾಡಾದಲ್ಲಿ ಕುಳಿತು ಇಂದಿನಿಂದ ಪ್ರತಿದಿನವೂ ಜ್ಞಾನೇಶ್ವರಿಯನ್ನು ಪಠಿಸು. ಪಠಿಸುವಾಗ ಭಕ್ತಿ ಮತ್ತು ಶ್ರದ್ಧೆಯಿಂದ ಅದರ ಅರ್ಥವನ್ನು ಬೇರೆಯವರಿಗೆ ಹೇಳು. ನಾನು ಇಲ್ಲಿ ಕುಳಿತು ನಿನಗೆ ಜರತಾರಿ ಶಲ್ಯ ಬಹುಮಾನ ಕೊಡಬೇಕೆಂದಿರುವಾಗ, ನೀನು ಇತರರ ಬಟ್ಟೆಯನ್ನೇಕೆ ಕದಿಯಬೇಕು? ಈ ಚೋರತನವೇಕೆ?" ಎಂದರು.

ಇದನ್ನು ಕೇಳಿದ ದೇವ ಪರಮಾನಂದದಿಂದ ಬಾಬಾ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ " ನನ್ನನ್ನು ನಿಮ್ಮ ಮಗನೆಂದು ಭಾವಿಸಿ ಜ್ಞಾನೇಶ್ವರಿ ಪಠಣದಲ್ಲಿ ನೆರವಾಗಬೇಕು" ಎಂದು ಬೇಡಿದರು. ಆಗ ಅವರಿಗೆ ಬಾಬಾ ಅವರು ಹೇಳಿದ "ಚಿಂದಿ ಕಳ್ಳತನ" ಎಂಬುದರ ಅರ್ಥವಾಯಿತು. ಬಾಲಕರಾಮ ಅವರಲ್ಲಿ ದೇವ ವಿಚಾರಿಸಿದುದೇ ಚಿಂದಿ ಕಳವು. ಬಾಬಾ ಅವರಿಗೆ ಈ ನಡತೆ ಹಿಡಿಸಲಿಲ್ಲ. ಅವರು ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಲು ಸಿದ್ಧರಿರುವಾಗ ಬೇರೊಬ್ಬರಲ್ಲಿ ವಿಚಾರಿಸುವದು ಅನಾವಶ್ಯಕ. ಆದುದರಿಂದಲೇ ಅವರು ಕೋಪಗೊಂಡುದುದು. ದೇವ ಅವರು ಬಾಬಾ ಅವರಕೋಪ ಮತ್ತು ತೆಗಳಿಕೆ ಅವರಿಂದ ಕೊಡಲ್ಪಟ್ಟ ಆಶೀರ್ವಾದವೆಂದು ಭಾವಿಸಿದರು.

ಈ ಸಂಗತಿ ಇಲ್ಲಿಗೆ ಮುಗಿಯಲಿಲ್ಲ. ಬಾಬಾ ಅವರು ಓದಲು ಆಜ್ಞಾಪಿಸಿ ಸುಮ್ಮನಾಗಲಿಲ್ಲ. ಒಂದು ವರ್ಷದೊಳಗೆ ದೇವ ಅವರಲ್ಲಿಗೆ ಹೋಗಿ ಅವರ ಪ್ರಗತಿಯ ಬಗ್ಗೆ ವಿಚಾರಿಸಿದರು. ೧೯೧೪ನೇ ಎಪ್ರಿಲ್ ೨ನೇ ದಿನ ಗುರುವಾರ ಬೆಳಗಿನ ಜಾವದಲ್ಲಿ ಕನಸಿನಲ್ಲಿ ದರ್ಶನವಿತ್ತು "ಪೋಥಿ(ಜ್ಞಾನೇಶ್ವರಿ) ಅರ್ಥವಾಯಿತೇ?" ಎಂದು ಕೇಳಿದರು. ದೇವ ಅವರು ಇಲ್ಲ ಎಂದರು. ಆಗ ಅವರು "ಹಾಗಾದರೆ ಎಂದು ಅರ್ಥ ಮಾಡಿಕೊಳ್ಳುವೆ?" ಎಂದು ಕೇಳಿದರು. ದೇವ ಅವರು ಅಳುತ್ತ "ನಿಮ್ಮ

ಅನುಗ್ರಹವಿಲ್ಲದೆ ಯಾವುದೂ ಸಾಧ್ಯವಾಗುವುದಿಲ್ಲ. ಇದು ಸತ್ಯ" ಎಂದರು ಆಗ ಬಾಬಾ ಅವರು "ನೀನು ಓದುವಾಗ ಬಹಳ ಅವಸರದಿಂದ ಓದುತ್ತೀ! ಈಗ ನನ್ನ ಸಮ್ಮುಖದಲ್ಲಿ ಓದು" ಎನ್ನಲು ದೇವ "ಯಾವುದನ್ನು ಓದಲಿ?" ಎಂದು ಕೇಳಿದರು. ಬಾಬಾ ಅವರು "ಆಧ್ಯಾತ್ಮವನ್ನು ಓದು" ಎಂದರು. ದೇವ ಪುಸ್ತಕ ತರಲು ಹೊರಟರು. ಅಷ್ಟರಲ್ಲಿ ಎಚ್ಚರವಾಯಿತು. ಇದರಿಂದ ದೇವ ಅವರಿಗೆ ಆದ ಸಂತೋಷವನ್ನು ವಾಚಕರೇ ಊಹಿಸಬಹುದು.

ಶ್ರೀ ಸಾಯಿ ಪ್ರಣಾಮ

# ೪೨ನೇ ಅಧ್ಯಾಯ

## ಸಾಯಿ ಅವರ ಮಹಾಸಮಾಧಿ

**ಮುನ್ಸೂಚನೆ – ರಾಮಚಂದ್ರ ಪಾಟೀಲ ಮತ್ತು ತಾತ್ಯಾಕೋತೆ ಅವ ರ ಮರಣ ತಡೆದುದು – ಲಕ್ಷ್ಮೀಬಾಯಿ ಸಿಂಧೆಯವರಿಗೆ ದಾನ ಕೊನೆಯ ಗಳಿಗೆಗಳು.**

ಈ ಹಿಂದಿನ ಕಥೆಗಳಿಂದ ಗುರುವಿನ ದಯೆ ಇದ್ದರೆ ಈ ಭವಸಾಗರ ಬಂಧನದಿಂದ ನಾವು ಮುಕ್ತರಾಗಿ ಮುಕ್ತಿ ಮಾರ್ಗವನ್ನು ಸೇರಿ ಆನಂದಿದಂದ ಇರಬಹದು ಎಂಬುದು ವೇಧ್ಯವಾಗುತ್ತದೆ. ನಾವು ಯಾವಾಗಲೂ ಸದ್ಗುರುವಿನ ಚರಣ ಕಮಲಗಳನ್ನು ಸ್ಮರಿಸುತ್ತಿದ್ದರೆ ನಮ್ಮ ಕಷ್ಟಗಳು ಕೊನೆಗಾಣುತ್ತವೆ. ಅದು ಮೃತ್ಯವನ್ನು ದೂರಮಾಡುತ್ತದೆ. ಆದುದರಿಂದ ತಮ್ಮ ಯೋಗಕ್ಷೇಮವನ್ನು ಬಯಸುವ ಎಲ್ಲರೂ ಶ್ರೀ ಸಾಯಿ ಸಮರ್ಥರ ಕಥೆಗಳನ್ನು ಶ್ರದ್ಧೆಯಿಂದ ಕೇಳಬೇಕು.

### ಮುನ್ಸೂಚನೆ

ಇಲ್ಲಿಯ ತನಕ ಬಾಬಾ ಅವರ ಜೀವನದ ಬಗ್ಗೆ ಕೇಳಿದಿರಿ. ಈಗ ಬಾಬಾ ಅವರ ಮಹಾಸಮಾಧಿಯ ಬಗ್ಗೆ ಕೇಳಿರಿ.

ಬಾಬಾ ಅವರಗೆ ೧೯೧೮ನೇ ಸೆಪ್ಟಂಬರ ೨೮ನೇ ತಾರೀಖಿಗೆ ಜ್ವರ ಬಂದಿತು. ಈ ಜ್ವರವು ೨–೩ ದಿನಗಳ ತನಕ ಕಾಡಿತು. ನಂತರ ಬಾಬಾ ಅವರು ಆಹಾರವನ್ನು ತ್ಯಜಿಸಿ, ಬರಬರುತ್ತ ಕೃಶರಾದರು. ಮುಂದೆ ೧೭ನೇ ದಿನ ಅಂದರೆ ೧೯೧೮ನೇ ಅಕ್ಟೋಬರ ೧೫ನೇ ತಾರೀಖಿನ ದಿನ ಮಧ್ಯಾಹ್ನ ೨–೩೦ ನಿಮಿಷಕ್ಕೆ ಸರಿಯಾಗಿ ಅವರು ಇಹಲೋಕವನ್ನು ತ್ಯಜಿಸಿದರು.(ಪ್ರೊ. ಜಿ.ಜಿ.) ನಾರ್ಕೆಯವರು ೧೯೧೮ನೇ ನವೆಂಬರ ೫ನೇ ತಾರೀಖು ದಾದಾ ಖಾರ್ಪಡೆಯವರಿಗೆ ಈ ಬಗ್ಗೆ ಪತ್ರ ಬರೆದಿದ್ದಾರೆ. ಇದನ್ನು 'ಸಾಯಿಲೀಲಾ' ಪತ್ರಿಕೆಯಲ್ಲಿ

ಪ್ರಕಟಿಸಿದೆ) ಇದಕ್ಕೆ ಎರಡು ವರ್ಷಗಳ ಹಿಂದೆಯೇ, ಅಂದರೆ ೧೯೧೬ರಲ್ಲಿ ಬಾಬಾ ಅವರು ತಮ್ಮ ಮರಣದ ಮುನ್ಸೂಚನೆ ಕೊಟ್ಟಿದ್ದರು. ಆದರೆ ಅದು ಆಗ ಯಾರಿಗೂ ಅರ್ಥವಾಗಲಿಲ್ಲ. ಅದು ಈ ರೀತಿ ಇದೆ;

ಅಂದು ವಿಜಯದಶಮಿ. ಸಾಯಂಕಾಲ ಜನರು ಸೀಮೋಲ್ಲಂಘನದಿಂದ ಹಿಂತಿರುಗಿದಾಗ ಬಾಬಾ ಅವರು ಕೋಪಗೊಂಡರು. ತಮ್ಮ ಎಲ್ಲ ಬಟ್ಟೆಗಳನ್ನು ಕಳೆದು ಉರಿಯತ್ತಿದ್ದ ಧುನಿಯಲ್ಲಿ ಹಾಕಿದರು. ಇದರಿಂದ ಅಗ್ನಿಧೇವನು ಪ್ರಜ್ವಲಿಸಿ ಬಾಬಾ ಅವರು ಹೆಚ್ಚು ಪ್ರಕಾಶಿಸತೊಡಗಿದರು. ಅವರು ನಗ್ನರಾಗಿ ನಿಂತು ಕಣ್ಣುಗಳಿಂದ ಕಿಡಿಕಾರುತ್ತ "ಈಗ ನೋಡಿ! ನಾನು ಮುಸಲ್ಮಾನನೋ ಅಥವಾ ಹಿಂದುವೋ ನಿರ್ಧರಿಸಿ!" ಎಂದರು ಎಲ್ಲರೂ ಭಯದಿಂದ ನಡುಗ ಹತ್ತಿದರು. ಸ್ವಲ್ಪ ಹೊತ್ತಿನ ನಂತರ ಭಾಗೋಜಿ ಸಿಂಧೆ ಅವರು ಧೈರ್ಯದಿಂದ ಬಾಬಾರವರ ಹತ್ತಿರ ಹೋಗಿ ಅವರಿಗೆ ಕೌಪಿನವನ್ನು ಸುತ್ತಿ "ಬಾಬಾ ಏನಿದು? ಈ ದಿನ ಸೀಮೋಲ್ಲಂಘನವಲ್ಲವೇ?" ಎಂದರು. ಆಗ ಬಾಬಾ ಅವರು ತಮ್ಮ ಸಟಕಾ ನೆಲಕ್ಕೆ ಹೊಡೆದು "ಇದೇ ನನ್ನ ಸಿಮೋಲ್ಲಂಘನ" ಎಂದರು. ರಾತ್ರಿ ಸುಮಾರು ೧೧ ಗಂಟೆಯವರೆಗೂ ಬಾಬಾ ಶಾಂತರಾಗಲೇ ಇಲ್ಲ. ಅಂದು ಚಾವಡಿ ಮೆರವಣಿಗೆ ನಡೆಯುವುದೋ ಇಲ್ಲವೋ ಎಂದು ಭಕ್ತರು ಚಿಂತಿಸಹತ್ತಿದರು. ಒಂದು ಗಂಟೆಯ ನಂತರ ಬಾಬಾ ಶಾಂತರಾಗಿ, ಉಡುಪುಗಳನ್ನು ಧರಿಸಿ, ಮೆರವಣಿಗೆಗೆ ಸಿದ್ಧರಾದರು. ಇದರಿಂದ ಬಾಬಾ ಅವರು ತಮ್ಮ ಸೀಮೋಲ್ಲಂಘನಕ್ಕೆ ದಸರೆಯ ದಿನವೇ ಯೋಗ್ಯವೆಂದು ಭಾವಿಸಿ ಅದರ ಮುನ್ಸೂಚನೆ ನೀಡಿದ್ದರು. ಆದರೆ ಪಾಮರರಿಗೆ ಹೇಗೆ ಅರ್ಥವಾದೀತು?

ಇನ್ನೊಂದು ಘಟನೆ ಈ ರೀತಿ ಇದೆ.

## ರಾಮಚಂದ್ರ ಪಾಟೀಲ ಮತ್ತು ತಾತ್ಯಾಪಾಟೀಲ ಅವರ ಮರಣ ಪರಿಹಾರ

ಇದಾದ ಕೆಲವು ದಿನಗಳ ನಂತರ ರಾಮಚಂದ್ರ ಪಾಟೀಲರಿಗೆ ಕಾಯಿಲೆಯಾಗಿ ಬಹಳ ನರಳುತ್ತಿದ್ದರು. ಎಷ್ಟೋ ಔಷಧಿಗಳನ್ನು ಸೇವಿಸಿದರು. ಆದರೂ ಸಹ ಗುಣವಾಗಲಿಲ್ಲ. ಜಿಗುಪ್ಸೆ ಹೊಂದಿಜೀವನದ ಕೊನೆಯನ್ನು ಎದುರು ನೋಡುತ್ತಿದ್ದರು. ಒಂದು ದಿನ ಮಧ್ಯರಾತ್ರಿ ಬಾಬಾ ಅವರು ಅವರ ತಲೆ ದಿಂಬಿನ ಬಳಿ ನಿಂತರು. ಪಾಟೀಲರು ಅವರ ಪಾದ ಹಿಡಿದು "ನನಗೆ ಜೀವನ ಆಶೆ ಉಳಿದಿಲ್ಲ. ನಾನು ಯಾವಾಗ ಮರಣ ಹೊಂದುವೆ; ತಿಳಿಸಿರಿ" ಎಂದು ಕೇಳಲು ಬಾಬಾ ಅವರು "ಹೆದರಬೇಡ; ನಿನ್ನ ಮರಣ ಶಾಸನವನ್ನು ಹಿಂತೆಗೆದುಕೊಂಡಿದ್ದೇನೆ. ನೀನು ಶೀಘ್ರದಲ್ಲಿಯೇ ಗುಣ ಹೊಂದುವೆ. ಆದರೆ ನನಗೆ ತಾತ್ಯಾ ಅವನದೇ ಚಿಂತೆಯಾಗಿದೆ. ಅವನು ೧೯೧೮ನೇ ವಿಜಯ ದಶಮಿಯ ದಿನ ಕಾಲವಾಗುತ್ತಾನೆ. ಇದನ್ನು ಅವನಿಗಾಗಲಿ, ಇನ್ನಿತರರಿಗಾಲಿ ತಿಳಿಸಬೇಡ. ಅವನು ಹೆದರಬಹುದು"ಎಂದರು. ರಾಮಚಂದ್ರ ಪಾಟೀಲರು ಗುಣಮುಖರಾದರು. ಆದರೆ ತಾತ್ಯಾ ಪಾಟೀಲ ಇನ್ನೆರಡು ವರ್ಷಗಳಲ್ಲಿ ಸಾಯುತ್ತಾರೆ. ಎಂದು ರಾಮಚಂದ್ರ ಚಿಂತಿಸಹತ್ತಿದರು. ಅವರು ಈ ವಿಷಯವನ್ನು ಬಾಳಾ ಶಿಂಪಿಯವರ ಹೊರತಾಗಿ ಬೇರೆ ಯಾರಿತೂ ತಿಳಿಸಿರಲಿಲ್ಲ. ತಾತ್ಯಾ ಅವರ ಸಾವಿನ ಬಗ್ಗೆ ಇಬ್ಬರೂ ಹೆದರಿಕೆಯಿಂದ ಇದ್ದರು.

ರಾಮಚಂದ್ರ ಪಾಟೀಲ ಸಂಪೂರ್ಣವಾಗಿ ಗುಣ ಹೊಂದಿದರು. ಕಾಲವು ಬೇಗನೆ ಉರುಳಿತು. ೧೯೧೮ನೇ ದಸರಾ ದಿನಗಳು ಸಮೀಪಿಸಿದವು. ಬಾಬಾ ಅವರು ಹೇಳಿದಂತೆ ತಾತ್ಯಾ ರೋಗ ಪೀಡಿತರಾದರು. ಅದುದರಿಂದ ಅವರಿಗೆ ಬಾಬಾ ಅವರ ದರ್ಶನಕ್ಕೆ ಬರಲಾಗಲಿಲ್ಲ. ಬಾಬಾ ಅವರೂ ಸಹ ಅಸ್ವಸ್ಥರಾಗಿ ಹಾಸಿಗೆ ಹಿಡಿದರು. ತಾತ್ಯಾ ಅವರು ಬಾಬಾ ಅವರಲ್ಲಿ ನಂಬಿಕೆ ಇಟ್ಟಿದ್ದರು. ವಿಜಯ

ದಶಮಿ ಸಮೀಪಿಸುತ್ತಲೇ ರಾಮಚಂದ್ರ ಪಾಟೀಲರೂ, ಬಾಳಾ ಶಿಂಪಿ ಅವರು ಗಾಬರಿಯಾದರು. ವಿಜಯ ದಶಮಿ ಉದಯವಾಯಿತು. ತಾತ್ಯಾ ಅವರ ನಾಡಿ ಮಿಡಿತ ಕಮ್ಮಿಯಾಗಹತ್ತಿತು. ಅವರು ಪರಲೋಕವನ್ನೈದುವ ಸ್ಥಿತಿಯಲ್ಲಿದ್ದರು. ಆದರೆ ಒಂದು ವಿಚಿತ್ರ ಸಂಗತಿ ನಡೆಯಿತು. ತಾತ್ಯಾ ಅವರು ಬದುಕಿದರು. ಬಾಬಾ ಅವರು ಪರಲೋಕವನ್ನೈದಿದರು. ಬಾಬಾ ಅವರು ತಾತ್ಯಾ ಅವರಿಗೋಸುಗ ತಮ್ಮ ಪ್ರಾಣ ಬಿಟ್ಟರು ಎಂದು ಭಕ್ತರು ಭಾವಿಸಿದರು. ಬಾಬಾ ಈ ರೀತಿ ಏಕೆ ಮಾಡಿದರು ಎಂಬುದು ಅವರೊಬ್ಬರಿಗೇ ತಿಳಿದ ವಿಷಯ. ತಮ್ಮ ಮರಣದ ಬಗ್ಗೆ ತಮ್ಮ ಹೆಸರಿಗೆ ಬದಲಾಗಿ ತಾತ್ಯಾ ಅವರ ಹೆಸರನ್ನು ಸೂಚಿಸಿ ಈ ಹಿಂದೆಯೇ ಬಾಬ ಮುನ್ಸೂಚನೆ ಕೊಟ್ಟರೆಂದು ಕಂಡು ಬರುತ್ತದೆ.

ಮರುದಿನ ೧೬ನೇ ಅಕ್ಟೋಬರದಂದು ಬಾಬಾ ಅವರು ಪಂಢರಪುರದಲ್ಲಿದ್ದ ದಾಸಗಣೂ ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡು "ಮಸೀದಿಯು ಉರುಳಿತು; ಶಿರ್ಡಿಯ ಗಾಣಿಗರೂ ಮತ್ತು ಇತರರೂ ನನ್ನನ್ನು ಕಾಡತೊಡಗಿದರು. ಆದುದರಿಂದ ನಾನು ಆ ಜಾಗ ಬಿಟ್ಟು ಇಲ್ಲಿಗೆ ಬಂದಿರುತ್ತೇನೆ. ನೀನು ಬೇಗ ಬಂದು ನನ್ನನ್ನು ಬಕುಲ ಹೂವುಗಳಿಂದ ಮುಚ್ಚು" ಎಂದರು. ದಾಸ ಗಣೂ ಅವರಿಗೆ ಪತ್ರದಿಂದ ಕೂಡ ವರ್ತಮಾನ ತಿಳಿಯಿತು. ಕೂಡಲೆ ಅವರು ಶಿರ್ಡಿಗೆ ಆಗಮಿಸಿ ಬಾಬಾ ಅವರ ಮಹಾಸಮಾಧಿಯ ಮುಂದೆ ಸಂಪೂರ್ಣದಿನ ಭಜನೆ ಮಾಡಿದರು. ನಂತರ ತಾವೇ ಹರಿನಾಮದ ಆಕಾರದಲ್ಲಿ ಒಂದು ಬಕುಲ ಹೂವಿನ ಮಾಲೆಯನ್ನು ತಯರಿಸಿ ಅವರ ಮಹಾಸಮಾಧಿಗೆ ಅರ್ಪಿಸಿ ಅವರ ಹೆಸರಿನಲ್ಲಿ ಸಂತರ್ಪಣೆ ಮಾಡಿಸಿದರು.

## ಲಕ್ಷ್ಮೀಬಾಯಿಯವರಿಗೆ ದಾನ

ದಸರಾ ಹಬ್ಬದ ವಿಜಯ ದಶಮಿ ಹಿಂದೂಗಳಿಗೆ ಶ್ರೇಷ್ಠವಾದ ದಿನ. ಬಾಬಾ ಅವರು ತಮ್ಮ ಸೀಮೋಲ್ಲಂಘನಕ್ಕೆ ಸರಿಯಾದ ದಿನವನ್ನೇ

ಆರಿಸಿಕೊಂಡರು. ಇದಕ್ಕೆ ಮುಂಚೆ ಅವರು ತೋರಿಕೆಗೆ ಬಳಲುತ್ತಿದ್ದರು. ಆದರೆ ಅಂತರಂಗದಲ್ಲಿ ಅವರು ಜಾಗೃತರಾಗಿದ್ದರು ಕೊನೆಯ ಗಳಿಗೆಯ ಮುಂಚೆ ಸ್ವಲ್ಪ ಹೊತ್ತಿನಲ್ಲಿ ಯಾರ ಸಹಾಯವೂ ಇಲ್ಲದೆ ಬಾಬಾ ಎದ್ದು ನಿಂತುಕೊಂಡಿದ್ದರು. ಆಗ ಭಕ್ತರಿಗೆ ಸ್ವಲ್ಪ ಆನಂದವಾಗಿತ್ತು. ಬಾಬಾ ಅವರಿಗೆ ಮರಣ ಸಮೀಪಿಸಿತೆಂದು ತಿಳಿದಿತ್ತು. ಆದುದರಿಂದ ಲಕ್ಷ್ಮೀಬಾಯಿ ಸಿಂಧೆಯವರಿಗೆ ಸ್ವಲ್ಪ ಹಣ ದಾನ ಕೊಡಬೇಕೆಂದು ಇಚ್ಛೈಸಿದರು.

ಲಕ್ಷ್ಮೀಬಾಯಿ ಬಹಳ ಒಳ್ಳೆಯ ಸಾಧ್ವಿಗಳಾಗಿದ್ದರು. ಹಗಲಿರುಳೆನ್ನದೆ ಮಸೀದಿಯಲ್ಲಿ ಕೆಲಸ ಮಾಡುತ್ತಿದ್ದರು. ಭಗತ ಮ್ಹಾಳಸಾಪತಿ, ತಾತ್ಯಾ, ಲಕ್ಷ್ಮೀಬಾಯಿ ಈ ಮೂವರನ್ನು ಬಿಟ್ಟರೆ, ಇನ್ನಾರೂ ರಾತ್ರಿ ವೇಳೆಯಲ್ಲಿ ಮಸೀದಿಗೆ ಹೋಗಲು ಅವಕಾಶವಿರಲಿಲ್ಲ. ಒಂದು ದಿನ ಬಾಬಾ ಅವರು ತಾತ್ಯಾವರೊಂದಿಗೆ ಮಸೀದಿಯಲ್ಲಿ ಕುಳಿತಿರುವಾಗ ಲಕ್ಷ್ಮೀಬಾಯಿ ಸಿಂಧೆಯವರು ಬಂದು ನಮಸ್ಕರಿಸಿದರು. ಆಗ ಬಾಬಾ ಅವರು "ಲಕ್ಷ್ಮೀ, ನನಗೆ ಹಸಿವಾಗಿದೆ" ಎಂದು ಹೇಳಲು, ಅವಳು, "ಬಾಬಾ, ಸ್ವಲ್ಪ ತಾಳಿ. ರೊಟ್ಟಿಯನ್ನು ತೆಗೆದುಕೊಂಡು ಬರುತ್ತೇನೆ" ಎಂದು ಹೇಳಿ ಮನೆಗೆ ಹೋಗಿ ಸ್ವಲ್ಪ ಹೊತ್ತಿನ ನಂತರ ರೊಟ್ಟಿ ಮತ್ತು ಪಲ್ಯದೊಡನೆ ಹಿಂದಿರುಗಿ ಬಂದು ಬಾಬಾ ಅವರ ಮುಂದೆ ಇಟ್ಟಳು. ಅವರು ಅದನ್ನು ತೆಗೆದುಕೊಂಡು ನಾಯಿಗೆ ತಿನ್ನಲು ಕೊಟ್ಟರು. ಆಗ ಲಕ್ಷ್ಮೀಬಾಯಿಯು "ಇದೇನು ಬಾಬಾ, ನಾನು ನಿಮಗೋಸ್ಕರ ಅಡಿಗೆ ಸ್ವತ: ತಯಾರಿಸಿ ತಂದಿದ್ದೇನೆ; ನೀವು ಒಂದು ಚೂರು ಸಹಾ ತಿನ್ನದೆ ನಾಯಿಗೆ ಕೊಡುತ್ತಿದ್ದೀರಲ್ಲ? ನನಗೆ ವೃಥಾ ತೊಂದರೆ ಕೊಟ್ಟಿರಿ" ಎಂದರು. ಆಗ ಬಾಬಾ ಅವರು "ಏತಕ್ಕೆ ಚಿಂತಿಸುವೆ? ಆ ನಾಯಿಯ ಹಸಿವನ್ನು ಹಿಂಗಿಸುವುದು ನನ್ನ ಹಸಿವನ್ನು ಹಿಂಗಿಸಿದಂತೆಯೇ. ನಾಯಿಗೂ ಆತ್ಮವಿದೆ. ಜೀವರಾಶಿಗಳು ಬೇರೆ ಬೇರೆ ಯಾಗಿರಬಹುದು. ಆದರೆ ಹಸಿವು ಮಾತ್ರ ಸಾಮಾನ್ಯವಾದಿದು.

ಅಲ್ಲವೇ? ಕೆಲವು ಪ್ರಾಣಿಗಳು ಮಾತನಾಡಬಲ್ಲವು. ಕೆಲವು ಮಾತನಾಡವು ಅಷ್ಟೇ. ಯಾರು ಹಸಿದವರಿಗೆ ಅನ್ನ ನೀಡುತ್ತಾರೆಯೋ, ಅವರು ನನಗೆ ಅನ್ನ ನೀಡಿದಂತೆಯೇ. ಇದು ಸಿದ್ಧಾಂತವೆಂದು ತಿಳಿ" ಎಂದು ಹೇಳಿದರು. ಇದು ಕ್ಷುಲ್ಲಕ ವಿಷಯವಾಗಿರಬಹುದು. ಆದರೆ ಆಧ್ಯಾತ್ಮಿಕತೆಯ ನೈಜ ಸ್ವರೂಪವನ್ನು ಯಾರ ಮನಸ್ಸನ್ನೂ ನೋಯಿಸದೆ ಬಾಬಾ ಕಾರ್ಯಾಚರಣೆಯಲ್ಲಿ ತೋರಿಸಿದರು. ಅಂದಿನಿಂದ ಲಕ್ಷ್ಮೀಬಾಯಿ ಸಿಂದೆ ಪ್ರತಿದಿನವೂ ಬಾಬಾ ಅವರಿಗೆ ರೊಟ್ಟಿ, ಹಾಲು ಮತ್ತು ಮೊಸರನ್ನು ಪ್ರೀತಿ ಮತ್ತು ಭಕ್ತಿಗಳಿಂದ ಅರ್ಪಿಸ ತೊಡಗಿದರು. ಬಾಬಾ ಅವರು ಅದನ್ನು ಸೇವಿಸಿ ಸಂತುಷ್ಟರಾಗುತ್ತಿದ್ದರು. ಉಳಿದುದನ್ನು ರಾಧಾಕೃಷ್ಣಮಾಯಿ ಮತ್ತು ಲಕ್ಷ್ಮೀಬಾಯಿ ಅವರಿಗೆ ತಿರುಗಿ ಕಳುಹಿಸುತ್ತಿದ್ದರು.

ಬಾಬಾ ಅವರು ಲಕ್ಷ್ಮೀಬಾಯಿಯವರ ಸೇವೆಯನ್ನು ಜ್ಞಾಪಿಸಿಕೊಂಡರು. ಅವರು ಗತಿಸುವ ಮೊದಲು ತಮ್ಮ ಕಿಸೆಗೆ ಕೈಹಾಕಿ ಅವರಿಗೆ ಒಂದು ಸಾರೆ ೫ ರೂ. ಗಳನ್ನು ಮತ್ತೊಂದು ಸಾರೆ ನಾಲ್ಕು ರೂಪಾಯಿಗಳನ್ನೂ ಕೊಟ್ಟರು. ಈ ಸಂಖ್ಯೆಯು (ಒಂಭತ್ತು) ೨೧ನೇ ಅಧ್ಯಾಯದಲ್ಲಿ ವಿವರಿಸಿದ ನವರಸ ಭಕ್ತಿಗಳನ್ನು ಸೂಚಿಸುತ್ತದೆ. ಅಥವಾ ಅದು ಸೀಮೋಲ್ಲಂಘನ ನಿಮಿತ್ತ ಬಾಬಾ ಕೊಟ್ಟ ದಕ್ಷಿಣೆಯಾಗಿರಬಹುದು. ಲಕ್ಷ್ಮೀಬಾಯಿಯವರಿಗೆ ಹಣದ ಕೊರತೆ ಇರಲಿಲ್ಲ. ಆದ್ದರಿಂದ ಬಾಬಾ ಅವರು ಭಾಗವತದ ೧೧ನೇ ಸ್ಕಂದದ ೧೦ನೇ ಅಧ್ಯಾಯದ ೬ನೇ ಶ್ಲೋಕದಲ್ಲಿ ಹೇಳಿರುವ ಭಕ್ತನಲ್ಲಿ ಇರಬೇಕಾದ ಮೊದಲು ಐದು, ನಂತರ ನಾಲ್ಕು ಗುಣಗಳನ್ನು ಉಪದೇಶ ಮಾಡಿದರೆಂದು ಭಾವಿಸಬಹುದು. ಬಾಬಾರವರು ಅದೇ ಕ್ರಮವನ್ನು ಅನುಸರಿಸಿ ಐದು ರೂಪಾಯಿಗಳನ್ನು ನಂತರ ನಾಲ್ಕು ರೂಪಾಯಿಗಳನ್ನು ಕೊಟ್ಟರು. ಹಿಂದೆ ಅವಳಿಗೆ ಅನೇಕ ಸಲ ಎಷ್ಟೋ ಹಣವನ್ನು ಕೊಟ್ಟಿದ್ದರು. ಆದರೆ ಈ ಒಂಭತ್ತು ರೂಪಾಯಿಗಳ ಕೊಡುಗೆಯನ್ನು ಲಕ್ಷ್ಮೀಬಾಯಿ ಎಂದು ಮರೆಯಲಿಲ್ಲ.

ಬಾಬಾ ಅವರು ತಮ್ಮ ಅಂತ್ಯದಲ್ಲಿ ಜಾಗೃತರಾಗಿಯೇ ಇದ್ದರು. ಮೋಹ ಮತ್ತು ಮಮತೆಗಳಿಂದ ದೂರವಾಗಿರಲು ಭಕ್ತರೆಲ್ಲರನ್ನೂ ಮನೆಗೆ ಕಳುಹಿಸಿದ್ದರು. ಕಾಕಾ ಮತ್ತು ಬೂಟಿಯವರು ಮಾತ್ರ ಬಾಬಾ ಅವರ ಹತ್ತಿರ ಇದ್ದರು. ಆದರೆ ಅವರನ್ನೂ ಸಹ ವಾಡಾಕ್ಕೆ ಹೋಗಿ ಊಟ ಮಾಡಿಕೊಂಡು ಬರಲು ಹೇಳಿ ಕಳುಹಿಸಿದರು. ಅವರು ಮನಸ್ಸಿಲ್ಲದೆ ಬಾಬಾ ಅವರ ಆಜ್ಞೆಯನ್ನು ಪಾಲಿಸಿ ಭಾರವಾದ ಹೃದಯದಿಂದ ಬಾಬಾ ಅವರನ್ನು ಬಿಟ್ಟು ಊಟಕ್ಕೆ ಹೊರಟರು. ಬಾಬಾ ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದು ಅವರು ವಾಡಾಕ್ಕೆ ಬಂದು ಮನಸ್ಸಿಲ್ಲದ ಊಟಕ್ಕೆ ಕುಳಿತರು. ಅವರು ಊಟ ಮುಗಿಸುವ ಮೊದಲೇ ಬಾಬಾ ಅವರು ಪರಲೋಕ ಯಾತ್ರೆ ಬೆಳೆಸಿದರು. ಈ ಸಮಾಚಾರ ಮುಟ್ಟಿದೊಡನೆಯೇ ಅವರು ಎದ್ದು ಕೈ ತೊಳೆದು ಮಸೀದಿಗೆ ಧಾವಿಸಿದರು. ಬಾಬಾ ಅವರು ಬಯಾಜಿ ಪಾಟೀಲರ ತೊಡೆಯ ಮೇಲೆ ಮಲಗಿದ್ದರು. ಅವರು ನೆಲಕ್ಕುರುಳಿ ಅಥವಾ ಹಾಸಿಗೆಯ ಮೇಲೆ ಒರಗಿಕೊಂಡು ಅಸು ನೀಗಲಿಲ್ಲ. ತಮ್ಮ ಆಸನದಲ್ಲಿ ಕುಳಿತು ತಮ್ಮ ಸ್ವಹಸ್ತದಿಂದ ದಾನ ಮಾಡುತ್ತ ಮಾನವ ದೇಹವನ್ನು ತ್ಯಜಿಸಿ ಸಮಾಧಿ ಹೊಂದಿದರು.

ಸಂತರು ಒಂದು ಧ್ಯೇಯ ಸಾಧನೆಗಾಗಿ ಅವತರಿಸಿ ಆ ಧ್ಯೇಯವನ್ನು ಸಾಧಿಸಿದ ನಂತರ ಹೇಗೆ ಈ ಲೋಕಕ್ಕೆ ಸುಗಮವಾಗಿ ಬಂದರೋ ಹಾಗೆಯೇ ಸುಗಮವಾಗಿ ಹಿಂತಿರುಗಿ ಹೋಗುತ್ತಾರೆ.

**ಶ್ರೀ ಸಾಯಿ ಪ್ರಣಾಮ**

# ೪೩ ಮತ್ತು ೪೪ ನೇ ಅಧ್ಯಾಯಗಳು

## ಸಾಯಿ ಅವರ ಮಹಾ ಸಮಾಧಿ (ಮುಂದುವರೆದುದು)

**ಪೂರ್ವಸಿದ್ಧತೆ – ಸಮಾಧಿ ಮಂದಿರ – ಇಟ್ಟಂಗಿ ಚೂರಾದುದು. ಎಪ್ಪತ್ತೆರಡು ಗಂಟೆಗಳ ಕಾಲ ಸಮಾಧಿ – ಜೋಗ ಅವರ ಸನ್ಯಾಸ – ಅಮೃತ ವಚನಗಳು.**

### ಪೂರ್ವ ಸಿದ್ಧತೆ

ಮನುಷ್ಯನು ಪ್ರಾಪಂಚಿಕ ಸುಖಗಳನ್ನು ಮರೆತು ಪಾರಮಾರ್ಥಿಕ ವಿಷಯಾಸಕ್ತನಾಗುವಂತೆಯೂ ಮತ್ತು ಪರಲೋಕದಲ್ಲಿ ಅವನ ಪ್ರಗತಿ ಸುಗಮವಾಗಲೆಂದೂ ಅವನ ಮರಣ ಸನ್ನಿಹಿತವಾಗುತ್ತಿರುವ ಧಾರ್ಮಿಕ ಗ್ರಂಥಗಳನ್ನು ಓದಿ ಹೇಳುವುದು ಹಿಂದೂ ಧರ್ಮದ ಪದ್ಧತಿ. ಪರೀಕ್ಷಿತ ರಾಜನು ಬ್ರಾಹ್ಮಣ ಋಷಿಪುತ್ರ ಒಬ್ಬನಿಂದ ಶಪಿಸಲ್ಪಟ್ಟು ಒಂದು ವಾರದೊಳಗೆ ಮರಣ ಹೊಂದಬೇಕೆಂದಿರುವಾಗ ಮಹಾ ಯೋಗಿಗಳಾದ ಶುಕ್ರಾಚಾರ್ಯರು ಅವನಿಗೆ ಒಂದು ವಾರದಲ್ಲಿ ಭಾಗವತವನ್ನು ಓದಿ ಹೇಳಿದರು ಎಂಬುದು ನಮಗೆ ತಿಳಿದ ವಿಷಯ. ಇದೇ ಪದ್ಧತಿ ಈಗಲೂ ಅನುಸರಿಸಲ್ಪಟ್ಟು ಮರಣ ಹೊಂದುವ ಮೊದಲು ಭಾಗವತ, ಗೀತೆ ಮುಂತಾದ ಧಾರ್ಮಿಕ ಗ್ರಂಥಗಳನ್ನು ಓದಿ ಹೇಳುತ್ತಾರೆ. ದೇವರ ಅವತಾರ ರೂಪಿಯಾದ ಬಾಬಾ ಅವರಿಗೆ ಯರ ಸಹಾಯವೂ ಬೇಕಿರಲಿಲ್ಲ. ಆದರೆ ಸಾಮಾನ್ಯ ಜನರಿಗೆ ಪಾಠ ಕಲಿಸಲೋಸುಗ ಅವರೂ ಸಹ ಇದೇ ಪದ್ಧತಿಯನ್ನು ಅನುಸರಿಸಿದರು. ತಾವು ಮರಣ ಹೊಂದುವವರೆಂದು ಅವರಿಗೆ ತೀಳಿದಾಗ ವಝೆ ಎಂಬ ಭಕ್ತರಿಗೆ ತಮ್ಮ ಮುಂದೆ 'ಶ್ರೀರಾಮವಿಜಯ' ವನ್ನು ಓದಿ ಹೇಳುವಂತೆ ಆಜ್ಞಾಪಿಸಿದರು. ವಝೆ ಅವರು ಒಂದು ವಾರದಲ್ಲಿ ಅದನ್ನು ಓದಿ ಮುಗಿಸಿದರು. ಬಾಬಾ ಅವರ ಇನ್ನೊಂದುಸಲ ಓದಿ ಹೇಳುವಂತೆ ಆಜ್ಞಾಪಿಸಿದರು. ಈ ರೀತಿ ೧೧ ದಿನಗಳು ಗತಿಸಿದವು.

ಮೂರು ದಿನಗಳಲ್ಲಿ ಮತ್ತೊಂದು ಬಾರಿ ಪಠಿಸಿ ವಝೆ ಬಹಳ ಬಳಲಿದ್ದರು. ಆಗ ಬಾಬಾ ಅವರು ವಝೆ ಅವರ ಪಠಣ ನಿಲ್ಲಿಸಿದರು.

ಇದಕ್ಕೆ ಎರಡು ದಿನಗಳ ಮುಂಚೆ ಬಾಬಾ ಭಿಕ್ಷೆ ಬೇಡುವುದನ್ನು ಬಿಟ್ಟು ಸುಮ್ಮನೆ ಮಸೀದಿಯಲ್ಲಿ ಕುಳಿತಿರುತ್ತಿದ್ದರು. ಕೊನೆಯ ತನಕವೂ ಅವರು ಜಾಗ್ರತರಾಗಿದ್ದು ಭಕ್ತರಿಗೆ ಉಪದೇಶಗಳನ್ನು ಮಾಡುತ್ತಲೇ ಇದ್ದರು. ತಮ್ಮ ನಿರ್ಗಮನದ ಕಾಲವನ್ನು ಯಾರಿಗೂ ಸರಿಯಾಗಿ ತಿಳಿಸಿರಲಿಲ್ಲ. ಕಾಕಾಸಾಹೇಬ ಮತ್ತು ಬೂಟಿ ಅವರು ಪ್ರತಿ ದಿನವೂ ಬಾಬಾ ಅವರ ಜೊತೆಯಲ್ಲಿಯೇ ಊಟ ಮಾಡುತ್ತಿದ್ದರು. ಆದರೆ ೧೫-೧೦-೧೯೧೮ನೇ ದಿನ ಮಾತ್ರ ಅವರು ತಮ್ಮ ಮನೆಗೆ ಊಟಕ್ಕೆ ಹೋಗುವಂತೆ ಆಜ್ಞಾಪಿಸಿದರು. ಆದರೂ ಲಕ್ಷ್ಮೀಬಾಯಿ ಸಿಂದೇ, ಬಾಗೋಜಿ ಸಿಂದೇ, ಬಯಾಜಿ ಪಾಟೀಲ, ಲಕ್ಷ್ಮಣ ಜೋಶಿ, ಬಾಳಾ ಶಿಂಪಿ ಮತ್ತು ನಾನಾಸಹೇಬ ನಿಮೋಣಕರ ಇವರು ಮಾತ್ರ ಅಲ್ಲಿದ್ದರು. ಬಾಬಾ ಲಕ್ಷ್ಮೀಬಾಯಿಗೆ ಒಂಬತ್ತು ರೂಗಳನ್ನು ಕೊಟ್ಟು ಮೈಯಲ್ಲಿ ಸರಿಯಾಗಿಲ್ಲವೆಂದು ಹೇಳಿ, ತಮ್ಮನ್ನು ಬೂಟಿವಾಡಕ್ಕೆ ಕರೆದುಕೊಂಡು ಹೋಗುವಂತೆ ಹೇಳಿದರು. ಈ ರೀತಿ ಹೇಳುತ್ತ ಬಯಾಜಿ ಅವರ ತೊಡೆಯ ಮೇಲೆ ಮಲಗಿ ತಮ್ಮ ಅಸುವನ್ನು ನೀಗಿದರು. ಬಯಾಜಿ ಅವರು ಅವರ ಉಸಿರಾಟ ನಿಂತಿದ್ದನ್ನು ಗಮನಿಸಿ ಕೆಳಗಡೆ ಕುಳಿತಿದ್ದ ನಾನಾ ಅವರನ್ನು ಕರೆದರು. ನಾನಾ ಅವರು ಸ್ವಲ್ಪ ನೀರು ತಂದು ಅವರ ಬಾಯಿಯಲ್ಲಿ ಹಾಕಿದರು. ಅದು ಹೊರಗೆ ಬಂದಿತು. ಆಗ ಅವರು "ಓ ದೇವಾ!" ಎಂದು ಜೋರಾಗಿಕೂಗಿ ಕೊಂಡರು. ಬಾಬಾ ಅವರು ತಮ್ಮ ಕಣ್ಣು ತೆರೆದು 'ಹಾ' ಎಂದು ಅಂದಂತೆ ಕೇಳಿ ಬಂತು.

ಬಾಬಾ ಅವರ ಮರಣದ ವಾರ್ತೆ ಕಾಡ್ಗಿಚ್ಚಿನಂತೆ ಶಿರ್ಡಿಯಲ್ಲೆಲ್ಲ ಕ್ಷಣಮಾತ್ರದಲ್ಲಿ ಪಸರಿಸಿತು. ಮಸೀದಿಯಲ್ಲಿ ಭಕ್ತವೃಂದವು ನೆರೆದು ತಮಗೆ ಉಂಟಾದ ಅಪಾರವಾದ ನಷ್ಟವನ್ನು ಕುರಿತು ಶೋಕಿಸುತ್ತಿತ್ತು.

ಕೆಲವರು ಅಳುತ್ತಿದ್ದರು. ಕೆಲವರು ಬೀದಿಯಲ್ಲಿಯೇ ಮೂರ್ಛಿತರಾದರು. ಸಮಸ್ತ ಚರಾಚರಗಳೂ ಕಂಬನಿ ಸುರಿದವು. ಎಲ್ಲಿ ನೋಡಿದರೂ ನೀರವತೆ ತಲೆ ಎತ್ತಿ ಶೋಕವೇ ಹೋಳೆಯಾಗಿ ಹರಿಯುತ್ತಿತ್ತು. ಆಗ ಬಾಬಾ ಅವರ ದೇಹವನ್ನು ಹೇಗೆ ಸಂಸ್ಕಾರ ಮಾಡಬೇಕೆಂಬ ಪ್ರಶ್ನೆ ಉದ್ಭವಿಸಿತು. ಕೆಲವು ಮಹಮ್ಮದೀಯರು ಮಸೀದಿಯ ಅಂಗಳದಲ್ಲಿ ದೇಹವನ್ನು ಸಮಾಧಿ ಮಾಡಿ ಅದರ ಮೇಲೇ ಗೋರಿ ಕಟ್ಟಬೇಕೆಂದು ಅಭಿಪ್ರಾಯ ಪಟ್ಟರು. ಖುಶಾಲಚಂದ ಮಾರವಾಡಿ ಮತ್ತು ಅಮೀರ ಶಕ್ಕರ ಅವರು ಈ ಅಭಿಪ್ರಾಯವನ್ನು ಅನುಮೋದಿಸಿದರು. ಆದರೆ ಹಳ್ಳಿಯ ಮುಖ್ಯಸ್ಥರಾದ ರಾಮಚಂದ್ರ ಪಾಟೀಲರು ಇದಕ್ಕೆ ಒಪ್ಪಲಿಲ್ಲ. ಬಾಬಾರವರ ದೇಹವನ್ನು ವಾಡಾ ಹೊರತು ಇನ್ನೆಲ್ಲಿಯೂ ಒಯ್ಯಬಾರದೆಂದು ಅವರು ಹೇಳಿದರು. ಈ ರೀತಿ ಭಕ್ತರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿ ೩೬ ಗಂಟೆಗಳ ಕಾಲ ಚರ್ಚೆ ಹಾಗೆಯೇ ಮುಂದುವರೆಯಿತು.

ಬುಧವಾರ ಬೆಳಗಿನ ಜಾವ. ಬಾಬಾ ಶ್ರೀ ಲಕ್ಷ್ಮಣ ಮಾಮಾ ಜೋಶಿ ಅವರು ಕನಸಿನಲ್ಲಿ ಕಾಣಿಸಿಕೊಂಡು ಅವರ ಕೈಯನ್ನು ಹಿಡಿದೆಳೆದು "ಬೇಗ ಏಳು, ಬಾಪೂ ಸಾಹೇಬ ನಾನು ಮೃತನಾಗಿದ್ದೇನೆ; ಪುನ: ಬರಲಾರೆ ಎಂದು ತಿಳಿದಿದ್ದಾನೆ . ನೀನು ಬಂದು ನನಗೆ ಪೂಜೆ ಮತ್ತು ಕಾಕಡ ಆರತಿ ಮಾಡು" ಎಂದರು. ಲಕ್ಷ್ಮಣ ಮಾಮಾ ಬಾಬಾ ಅವರ ಪರಮ ಭಕ್ತರಾಗಿದ್ದರು. ಬಾಬಾ ಅವರಲ್ಲಿ ಪೂರ್ಣ ನಂಬಿಕೆ ಇತ್ತು. ಬೆಳಗಾದ ನಂತರ ಎದ್ದು ಸ್ನಾನ ಸಂಧ್ಯಾವಂದನಾದಿಗಳನ್ನು ಮುಗಿಸಿ ಪೂಜಾ ಸಾಮಗ್ರಿಗಳೊಡನೆ ಬಂದು ಮೌಲ್ವಿಗಳ ವಿರೋಧವನ್ನು ಲೆಕ್ಕಿಸದೆ ತಮ್ಮ ಪಾಡಿಗೆ ತಾವು ಮೃತದೇಹಕ್ಕೆ ಪೂಜೆ, ಆರತಿ ಮಾಡಿ ಹೊರಟು ಹೋದರು.

ಬಾಬಾ ಅವರ ಅಂತಿಮ ನುಡಿಯನ್ನು ಗೌರವಿಸಿ ಅವರನ್ನು ವಾಡಾದ ಮಧ್ಯದಲ್ಲಿ ಸಮಾಧಿ ಮಾಡಲು ನಿಶ್ಚಯಿಸಲಾಯಿತು. ಗುಂಡಿ

ತೋಡಲು ಆರಂಭ ಮಾಡಿದರು. ಮಂಗಳವಾರ ಸಾಯಂಕಾಲ ರಾಹತಾದಿಂದ ಸಬ್‌ಇನ್‌ಸ್ಪೆಕ್ಟರ್ ಮುಂತಾದವರು ಬಂದರು. ಎಲ್ಲರೂ ಈ ಸಲಹೆಗೆ ಸಮ್ಮತಿಸಿದರು. ಮರುದಿನ ಬೆಳಿಗ್ಗೆ ಮುಂಬಯಿಯ ಅಮೀರಭಾಯಿಯವರೂ, ಕೋಪರಗಾಂವದಿಂದ ಮಾಮಲೇದಾರರೂ ಬಂದರು. ಕೆಲವರು ಬಾಬಾ ಅವರ ದೇಹವನ್ನು ಹೊರಗಡೆ ಎಲ್ಲಿಯಾದರೂ ಸಮಾಧಿ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದನ್ನು ಕಂಡ ಮಾಮಾಲೇದರರು ವಿಷಯವನ್ನು ಮತ ನಿರ್ಣಯಕ್ಕೆ ಹಾಕಿದರು. ಬಾಬಾ ಅವರನ್ನು ವಾಡಾದಲ್ಲಿಯೇ ಸಮಾಧಿ ಮಾಡಲು ಭಕ್ತರು ಬಹುಮತದಿಂದ ನಿರ್ಣಯಿಸಿದರು. ಇದನ್ನು ಕೆಲೆಕ್ಟರ್ ಅವರಿಗೆ ತಿಳಿಸಬೇಕೆಂದು ಕಾಕಾ ಅವರು ಹೊರಡುವುದರಲ್ಲಿದ್ದರು. ಆದರೆ ಬಾಬಾ ಅವರ ಕೃಪೆಯಿಂದ ಅಲ್ಪಮತೀಯರ ಅಭಿಪ್ರಾಯ ಬದಲಾಯಿತು. ಎಲ್ಲರೂ ಒಮ್ಮತದಿಂದ ವಾಡಾದಲ್ಲಿ ಸಮಾಧಿಕಾರ್ಯ ನಡೆಯಬೇಕೆಂದು ತೀರ್ಮಾನಿಸಿದರು. ಬುಧವಾರ, ಸಾಯಂಕಾಲ ಬಾಬಾ ಅವರ ಶರೀರವನ್ನು ಸಕಲ ರಾಜಮಾರ್ಯಾದೆಗಳಿಂದ ಮೆರವಣಿಗೆ ಮಾಡಿ ವಾಡಾಕ್ಕೆ ತಂದು ಮುರಲೀಧರನ ಪ್ರತಿಮೆಗೋಸ್ಕರ ಮೀಸಲಾದ ಗರ್ಭಗೃಹದಲ್ಲಿ ಸಮಾಧಿ ಮಾಡಲಾಯಿತು. ನಿಜಕ್ಕೂ ಬಾಬಾ ಅವರೇ ಮುರಲೀಧರನಾಗಿ, ವಾಡಾ ದೇವಾಲಯವಾಗಿ ಪವಿತ್ರ ಪೂಜಾ ಸ್ಥಳವಾಯಿತು. ಬಾಬಾ ಅವರ ಉತ್ತರ- ಕ್ರಿಯೆಯನ್ನು ಬಾಳಾಸಾಹೇಬ ಭಾಟೆ, ಉಪಾಸನಿ ಮತ್ತು ಜೋಗ ಅವರು ಸಾಂಗವಾಗಿ ನೆರವೇರಿಸಿದರು.

## ಇಟ್ಟಂಗಿ ಒಡೆಯಿತು

ಬಾಬಾ ಅವರ ಪರಲೋಕ ಯಾತ್ರೆಗೆ ಸ್ವಲ್ಪ ದಿನಗಳ ಮುಂಚೆ, ಆ ಘಟನೆಯನ್ನು ಸೂಚಿಸುವ ಒಂದು ಶಕುನವಾಯಿತು. ಯಾವಾಗಲೂ ಬಾಬಾ ಅವರು ಕೈಯಿಟ್ಟು ಒರಗಿ ಕುಳಿತುಕೊಳ್ಳುತ್ತಿದ್ದ ಒಂದು ಇಟ್ಟಂಗಿ ಅನೇಕ ವರ್ಷಗಳಿಂದ ಮಸೀದಿಯಲ್ಲಿತ್ತು. ರಾತ್ರಿ

ಅದರ ಮೇಲೆ ತಲೆ ಇಟ್ಟು ಏಕಾಂತದಲ್ಲಿ ಸ್ವಸ್ಥ ಮನದಿಂದ ಇರುತ್ತಿದ್ದರು. ಇದು ಬಹಳ ವರ್ಷಗಳಿಂದ ನಡೆಯುತ್ತಿತ್ತು. ಒಂದು ದಿನ ಬಾಬಾ ಅವರು ಮಸೀದಿಯಲ್ಲಿ ಇರಲಿಲ್ಲ. ಅಂದು ಮಸೀದಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹುಡುಗನು ಅದನ್ನು ಕೈಯಲ್ಲಿ ಹಿಡಿದು ಅದರ ಬುಡದಲ್ಲಿಯ ಕಸ ಗುಡಿಸುತ್ತಿದ್ದನು. ಆದರೆ ಅದು ದುರದೃಷ್ಟದಿಂದ ಕೈಜಾರಿ ಕೆಳಗೆ ಬಿದ್ದು ಎರಡು ಹೋಳಾಯಿತು. ಬಾಬಾ ಅವರಿಗೆ ಈ ವಿಷಯ ತಿಳಿಸಿದಾಗ ಅವರು ಕಣ್ಣೀರಿಟ್ಟು "ಒಡೆದುದು ನನ್ನ ಅದೃಷ್ಟ! ಅದು ನನ್ನ ಜೀವನದ ಸಂಗಾತಿಯಾಗಿತ್ತು. ಅದರೊಡನೆ ನಾನು ಯಾವಾಗಲೂ ತಲ್ಲೀನನಾಗಿರುತ್ತಿದ್ದೆ. ಅದು ನನಗೆ ನನ್ನ ಜೀವದಷ್ಟೇ ಪ್ರಿಯವಾಗಿತ್ತು" ಎಂದು ಬಹಳ ವ್ಯಥೆ ಪಟ್ಟುಕೊಂಡರು.

ಬಾಬಾ ಅವರು ಕೇವಲ ಒಂದು ನಿರ್ಜೀವ ವಸ್ತುವಿಗೋಸ್ಕರ ಇಷ್ಟು ದು:ಖವನ್ನೇಕೆ ಪ್ರಕಟಿಸಿದರು. ಕೆಲವರು ಪ್ರಶ್ನಿಸಬಹುದು. ಅದಕ್ಕೆ ಹೇಮಾಡಪಂತರು "ಸಂತರು ಬಡವರನ್ನು ಮತ್ತು ಅಶಕ್ತರನ್ನು ರಕ್ಷಿಸುವ ಧ್ಯೇಯದಿಂದ ಅವತರಿಸುತ್ತಾರೆ. ಹೀಗೆ ಅವತರಿಸಿದಾಗ ಅವರು ಸಾಮಾನ್ಯ ಜನರೊಡನೆ ಬೆರೆತು ಅವರಂತೆಯೇ ವರ್ತಿಸುತ್ತಾರೆ. ಅಂದರೆ ಅವರು ಬಾಹ್ಯದಲ್ಲಿ ಎಲ್ಲರಂತೆಯೇ ಆಟವಾಡುತ್ತ, ನಗುತ್ತ, ದು:ಖಿಸುತ್ತ ಇರುತ್ತಾರೆ. ಆದರೆ ಅಂತರಂಗದಲ್ಲಿ ಮಾತ್ರ ತಮ್ಮ ಧ್ಯೇಯದ ಬಗ್ಗೆ ಜಾಗೃತರಾಗಿರುತ್ತಾರೆ" ಎಂದು ಹೇಳಿದ್ದಾರೆ.

## ಮೂರು ದಿನಗಳ ಸಮಾಧಿ

ಇದಕ್ಕೆ ಮೂವತ್ತೆರಡು ವರ್ಷಗಳ ಹಿಂದೆ ಅಂದರೆ ಸುಮಾರು ೧೮೮೬ರಲ್ಲಿ ಬಾಬಾ ಅವರು ತಮ್ಮ ಸೀಮಾ ರೇಖೆಯನ್ನು ದಾಟುವ ಪ್ರಯತ್ನ ಮಾಡಿದರು. ಮಾರ್ಗಶೀರ್ಷ ಶುದ್ಧ ಪೌರ್ಣಿಮೆಯ ದಿನ ಬಾಬಾ ಅವರು ದಮ್ಮಿನಿಂದ ನರಳುತ್ತಿದ್ದರು. ಅದನ್ನು ನಿರ್ಮೂಲಗೊಳಿಸಲು ಬಾಬಾ ಅವರು ತಮ್ಮ ಪ್ರಾಣವನ್ನು ಮೇಲಕ್ಕೆ

ತೆಗೆದುಕೊಂಡು ಸಮಾಧಿ ಸ್ಥಿತಿಗೆ ಹೋಗಲು ನಿರ್ಧರಿಸಿದರು. ಆಗ ಅವರು ಭಗತ ಮ್ಹಾಳಾಸಾಪತಿಯವರಿಗೆ "ನನ್ನ ದೇಹವನ್ನು ಮೂರು ದಿನಗಳ ತನಕ ಕಾಪಾಡು. ನಾನು ಮರಳಿ ಬಂದರೆ ಸರಿ, ಇಲ್ಲದಿದ್ದರೆ ಆ ಅಂಗಳವನ್ನು (ಕೈಮಾಡಿ ತೋರಿಸಿ) ನನ್ನನ್ನು ಹೂಳಿಬಿಡು. ಗುರುತಿಗೋಸ್ಕರ ಅಲ್ಲಿ ಎರಡು ಧ್ವಜಗಳನ್ನು ನೆಡು" ಎಂದು ಹೇಳಿ, ರಾತ್ರಿ ಹತ್ತುಗಂಟೆಗೆ ನಿಸ್ತೇಜರಾಗಿ ಬಿದ್ದರು. ಅವರ ಪ್ರಾಣವು ಶರೀರವನ್ನು ಬಿಟ್ಟು ಹೋದಂತೆ ಕಂಡು ಬಂದಿತು. ಎಲ್ಲ ಜನರೂ ಬಾಬಾ ಅವರು ತೋರಿಸಿದ ಜಾಗದಲ್ಲಿ ಅವರ ಶರೀರವನ್ನು ಹೂಳಲು ನಿರ್ಧರಿಸಿದರು. ಆದರೆ ಮ್ಹಾಳಸಾಪತಿಯವರು ಅದನ್ನು ತಡೆದರು. ಬಾಬಾ ಅವರನ್ನು ತೊಡೆಯ ಮೇಲಿರಿಸಿಕೊಂಡು ಮೂರು ದಿನ ಕಾಯ್ದರು. ಮೂರು ದಿನಗಳು ಕಳೆದವು. ನಂತರ ಬೆಳಿಗ್ಗೆ ಮೂರು ಗಂಟೆ ಹೊತ್ತಿಗೆ ಬಾಬಾ ಅವರಿಗೆ ಜೀವಕಳೆ ಬಂದಿತು. ಉಸಿರಾಟ ಆರಂಭವಾಯಿತು. ಕಣ್ಣು ತೆರೆದು ಎಚ್ಚರವಾಗಿ ಯಥಾ ಸ್ಥಿತಿಗೆ ಬಂದರು.

ಇದರಿಂದ ಬಾಬಾ ಅವರು ಮೂರುವರೆ ಅಡಿ ದೇಹದಲ್ಲಿ ಜೀವಿಸಿ ನಂತರ ಅದನ್ನು ತ್ಯಜಿಸಿ ಹೊರಟು ಹೋದರೇ ಅಥವಾ ಜೀವಾತ್ಮದಲ್ಲಿ ಜಾಗೃತರಾಗಿದ್ದರೇ ಎಂಬುದನ್ನು ನಾವು ಊಹಿಸಬಹುದು. ಈ ದೇಹವು ನಶ್ವರವಾದದ್ದು ಕ್ಷಣಿಕವಾದದ್ದು. ಆದರೆ ಅಂತರಂಗದಲ್ಲಿಯ ಆತ್ಮವು ಅಮರವಾದದ್ದು. ಈ ಶುದ್ಧ ಚೈತನ್ಯ ಸ್ವರೂಪವೇ ಬ್ರಹ್ಮಜ್ಞಾನ. ಅದು ಇಂದ್ರಿಯಗಳ ನಿಯಾಮಕ ವಸ್ತು. ಆ ವಸ್ತುವೇ ಸಾಯಿ. ಇದು ವಿಶ್ವದ ಚರಾಚರವೆಲ್ಲವನ್ನೂ ವ್ಯಾಪಿಸಿರುತ್ತದೆ. ಇದಿಲ್ಲದ ಸ್ಥಳವಿಲ್ಲ. ತಮ್ಮ ಧ್ಯೇಯವನ್ನು ಸಾಧಿಸಲೋಸುಗ ದೇಹವನ್ನು ಧರಿಸಿ ಅದನ್ನು ಸಾಧಿಸಿದ ನಂತರ ದೇಹವನ್ನು ಬಿಸುಟಿ ಬಾಬಾ ಅನಂತರಾದರು. ಬಾಬಾ ಅವರು ನಿತ್ಯರು. ಅವರ ಮರಣವು ಕೇವಲ ಬಾಹ್ಯರೋಪವಾದದ್ದು. ಆದರೆ ನಿಜವಾಗಿಯೂ ಸಕಲ ಚರಾಚರಗಳಲ್ಲಿ ಅವರ ಆತ್ಮವು ವ್ಯಾಪಿಸಿ ಅವುಗಳ ನಿಯಾಮಕರಾಗಿರುತ್ತಾರೆ ಬಾಬಾ.

ಅಂತರಿಗೆ ಪೂರ್ಣ ಶರಣಾಗತರಾಗಿ ಅವರನ್ನು ಮನಃಪೂರ್ವಕವಾಗಿ ಪ್ರೀತಿಸುವ ಭಕ್ತರಿಗೆ ಇದರ ಅರಿವಾಗುತ್ತದೆ.

ನಮಗೆ ಈಗ ಬಾಬಾ ಅವರನ್ನು ಪ್ರತ್ಯಕ್ಷ ನೋಡಲಾಗದೆ ಇದ್ದಾಗಲೂ ಸಹ ಶಿರ್ಡಿಗೆ ಹೋದರೆ ಅವರ ಸುಂದರವಾದ ಚಿತ್ರವನ್ನು ಮಸೀದಿಯಲ್ಲಿ ಕಾಣಬಹುದು. ಇದನ್ನು ಬಾಬಾ ಅವರ ಪರಮ ಭಕ್ತರಾದ ಪ್ರಸಿದ್ಧ ಚಿತ್ರಕಾರ ಶ್ರೀ ಶ್ಯಾಮರಾವ ಜಯಕರ ಅವರು ಚಿತ್ರಿಸಿರುತ್ತಾರೆ. ನಿಜವಾದ ಭಕ್ತರಿಗೆ ಈ ಚಿತ್ರವನ್ನು ನೋಡಿದರೆ ಬಾಬಾ ಅವರ ದರ್ಶನವಾದಂತೆಯೇ ತೋರುತ್ತದೆ. (ಈಗ ಅಮೃತ ಶಿಲೆಯ ಸುಂದರ ಮೂರ್ತಿ ಸಮಾಧಿ ಮಂದಿರದಲ್ಲಿ ರಾರಾಜಿಸುತ್ತಿದೆ) ಈಗ ಬಾಬಾ ಅವರು ಶರೀರವಿಲ್ಲದಿದ್ದರೂ ಸಹ ಸಜೀವವಾಗಿ ವಾಸವಾಗಿದ್ದಾರೆ. ಎಂದಿನಂತೆ ಈಗಲೂ ಅವರು ಭಕ್ತರ ಯೋಗಕ್ಷೇಮವನ್ನು ಚಿಂತಿಸುತ್ತ ಅವರಿಗೆ ತಮ್ಮ ಸಹಾಯವೆಸಗುತ್ತಿದ್ದಾರೆ. ಸಂತರಿಗೆ ಸಾವಿಲ್ಲ. ಅವರು ಸಾಮಾನ್ಯ ಮಾನವರಂತೆ ಕಂಡರೂ ನಿಜವಾಗಿಯೂ ಅವರು ದೇವರ ಅವತಾರ ಸ್ವರೂಪರು.

## ಜೋಗ ಮತ್ತು ಅವರ ಸನ್ಯಾಸ

ಬಾಪೂಸಾಹೇಬ ಜೋಗ ಅವರ ಸನ್ಯಾಸವನ್ನು ವರ್ಣಿಸಿ ಹೇಮಾಡಪಂತರು ಈ ಅಧ್ಯಾಯವನ್ನು ಮುಗಿಸಿರುತ್ತಾರೆ.

ಭಕ್ತ ಬಾಪೂಸಾಹೇಬ ಜೋಗ ಅವರು ಪುಣೆಯ ಪ್ರಸಿದ್ಧ ವ್ಯಾಪಾರಿಗಳಾದ ವಿಷ್ಣುಬುವಾ ಜೋಗ ಅವರ ಚಿಕ್ಕಪ್ಪನವರು. ಅವರು ೧೯೦೯ರಲ್ಲಿ ಸರ್ಕಾರಿ ಹುದ್ದೆಯಿಂದ ನಿವೃತ್ತರಾದ ಮೇಲೆ ನಂತರ ತಮ್ಮ ಪತ್ನಿಯೊಡನೆ ಶಿರ್ಡಿಗೆ ಬಂದು ನೆಲೆಸಿದರು. ಅವರಿಗೆ ಸಂತಾನ ಪ್ರಾಪ್ತಿ ಇರಲಿಲ್ಲ. ಜೋಗ ದಂಪತಿಗಳು ಬಾಬಾ ಅವರನ್ನು ಭಕ್ತಿಯಿಂದ ಪೂಜಿಸುತ್ತ ಕಾಲ ಕಳೆಯುತ್ತಿದ್ದರು. ಮೇಘಾ ಅವರ ಮರಣದ ನಂತರ ಬಾಪೂ ಅವರೇ ಬಾಬಾ ಅವರಿಗೆ ಮಸೀದಿಯಲ್ಲಿ ಆರತಿ

ಮುಂತಾದವುಗಳನ್ನು ಮಾಡುತ್ತಿದ್ದರು. ಇದು ಅವರ ಸಮಾಧಿ ತನಕ ನಡೆಯಿತು. ಜ್ಞಾನೇಶ್ವರಿ ಮತ್ತು ಏಕನಾಥ ಭಾಗವತವನ್ನು ಓದಿ ಅರ್ಥ ವಿವರಿಸುವ ಕೆಲಸವೂ ಇವರ ಪಾಲಿಗೆ ಬಂದಿತು. ಅನೇಕ ವರ್ಷಗಳ ಕಾಲ ಸೇವೆ ಮಾಡಿದ ನಂತರ ಜೋಗ ಅವರು ಬಾಬಾ ಅವರನ್ನು ಕುರಿತು "ನಾನು ನಿಮ್ಮಲ್ಲಿ ಬಹಳ ದಿವಸಗಳಿಂದ ಸೇವೆ ಮಾಡುತ್ತಿದ್ದೇನೆ. ಆದರೂ ನನ್ನ ಆತ್ಮಕ್ಕೆ ಶಾಂತಿ ದೊರಕಿಲ್ಲ. ಸಂತರ ಸಂಪರ್ಕದಿಂದಲೂ ಸಹ ನನ್ನ ಸ್ಥಿತಿ ಉತ್ತಮಗೊಂಡಿಲ್ಲ; ನೀವು ಯಾವಾಗ ನನ್ನನ್ನು ಆಶೀರ್ವದಿಸುತ್ತೀರಿ?" ಎಂದು ಕೇಳಲು ಬಾಬಾ ಅವರು "ಸ್ವಲ್ಪ ಕಾಲದಲ್ಲಿಯೇ ನಿನ್ನ ಕರ್ಮವು ಸವೆಯುವುದು. ನಿನ್ನ ಪಾಪಗಳು ಸುಟ್ಟು ಬೂದಿಯಾಗುವುವು; ಆಗ ನಿನ್ನನ್ನು ಆಶೀರ್ವದಿಸುತ್ತೇನೆ. ನೀನು ಆಗ ಅರಿಷಡ್ವರ್ಗಗಳಿಂದ ಮುಕ್ತನಾಗುವೆ. ಅಂದು ಸನ್ಯಾಸವನ್ನು ಸ್ವೀಕರಿಸು. ಮತ್ತು ದೇವರ ಸೇವೆ ಮಾಡು" ಎಂದು ಉತ್ತರಿಸಿದರು. ಕೆಲವು ದಿನಗಳ ನಂತರ ಬಾಬಾ ಅವರ ಮಾತುಗಳು ನಿಜವಾದವು. ಅವರ ಪತ್ನಿಯು ಮೃತಳಾದಳು. ಅವರಿಗೆ ಮಮತೆಯು ದೂರವಾಯಿತು. ಅಂದಿನಿಂದ ಸನ್ಯಾಸಾಶ್ರಮವನ್ನು ಸ್ವೀಕರಿಸಿ ತಮ್ಮ ಜೀವನದ ಗುರಿಯನ್ನು ಬಾಪೂ ಸಾಹೇಬ ಸಾಧಿಸಿದರು.

## ಬಾಬಾ ಅವರ ಅಮೃತ ವಚನಗಳು

"ಯಾರು ನನ್ನನ್ನು ಪ್ರೀತಿಯಿಂದ ನೋಡಬಯಸುತ್ತಾರೆಯೋ ಅವರು ನನ್ನನ್ನು ಕಾಣುತ್ತಾರೆ. ನಾನಿಲ್ಲದ ಜಗತ್ತು ಅವರಿಗೆ ಶೂನ್ಯವಾಗಿ ಕಾಣುತ್ತದೆ. ಅವರು ನನ್ನ ಲೀಲೆಗಳ ವಿನ: ಬೇರೆಯದನ್ನು ಹೇಳಬಯಸುವುದಿಲ್ಲ. ಅವರು ನಿರಂತರವಾಗಿ ಯಾವಾಗಲೂ ನನ್ನನ್ನೇ ಧ್ಯಾನಿಸುತ್ತ ಯಾವಾಗಲೂ ನನ್ನ ನಾಮವನ್ನೇ ಉಚ್ಚರಿಸುತ್ತಾರೆ. ಯಾರು ನನ್ನಲ್ಲಿ ಪೂರ್ಣ ಶರಣಾಗತಿಯನ್ನು ಹೊಂದಿ ನನ್ನನ್ನೇ ಸ್ಮರಿಸುತ್ತಾರೆಯೋ, ಅವರಿಗೆ ನಾನು ಚಿರಋಣಿ. ಅವರಿಗೆ ಮುಕ್ತಿಯನ್ನು ದೊರಕಿಸಿ ಕೊಟ್ಟು ನಾನು ಋಣಮುಕ್ತನಾಗುತ್ತೇನೆ. ಯಾರು ನನ್ನನ್ನು

ಸದಾ ಧ್ಯಾನಿಸುತ್ತ ನನಗೆ ಮೊದಲು ಅರ್ಪಿಸದೆ ತಾವು ಏನನ್ನೂ ಸ್ವೀಕರಿಸುವುದಿಲ್ಲವೋ ಅಂಥವರ ಅಧೀನನು ನಾನು. ಯಾರು ನನ್ನನ್ನು ಅವಲಂಬಿಸಿರುವರೋ ಅವರು ನದಿಯು ಸಮುದ್ರವನ್ನು ಸೇರಿ ಅದರೊಡನೆ ಐಕ್ಯವಾಗುವಂತೆ ನನ್ನನ್ನು ಸೇರಿ ನನ್ನಲ್ಲಿ ಐಕ್ಯವಾಗುತ್ತಾರೆ. ನೀವು ನಿಮ್ಮ ಅಹಂಕಾರ ಅಹಂಭಾವಗಳನ್ನು ತ್ಯಜಿಸಿ ನನಗೆ ಶರಣಾಗತರಾಗಿ" ಎಂದು ಬಾಬಾ ಅವರು ಮಸೀದಿಯಲ್ಲಿ ಆಗಾಗ್ಗೆ ನುಡಿಯುತ್ತಿದ್ದರು.

## ನಾನು ಯಾರು?

ಬಾಬಾ ಅವರು ಅನೇಕ ಸಾರೆ "ನಾನು ಯಾರು?" ಎಂದು ಕೇಳುತ್ತಿದ್ದರು. "ನೀವು ನನ್ನನ್ನು ಹುಡುಕಿಕೊಂಡು ಎಲ್ಲಿಗೂ ಹೋಗಬೇಕಿಲ್ಲ. ನಿಮ್ಮಲ್ಲಿಯೂ ಮತ್ತು ಚರಾಚರಗಳಲ್ಲಿಯೂ ಒಂದು ಆತ್ಮವಿದೆ. ಅದೇ ನಾನು. ಇದನ್ನು ತಿಳಿದು ನನ್ನನ್ನು ನಿಮ್ಮ ಅಂತರಂಗದಲ್ಲಿ ರಕ್ಷಿಸಿರಿ ಮತ್ತು ಸಕಲ ಚರಾಚರಗಳಲ್ಲಿಯೂ ನನ್ನನ್ನು ನೋಡಿರಿ. ಇದನ್ನು ನೀವು ಮನನ ಮಾಡಿದರೆ ಸರ್ವಜ್ಞತ್ವವನ್ನು ಅರಿತು ನನ್ನಲ್ಲಿ ಲೀನವಾಗುತ್ತೀರಿ" ಎಮದು ಬಾಬಾ ಹೇಳಿರುತ್ತಾರೆ.

ಆದುದರಿಂದ ಹೇಮಾಡಪಂತರು ವಾಚಕರಿಗೆ ನಮಸ್ಕರಿಸಿ ಎಲ್ಲ ದೇವರನ್ನೂ, ಸಂತರನ್ನೂ, ಭಕ್ತರನ್ನೂ, ಪ್ರೀತಿಸಿ ಗೌರವಿಸಬೇಕೆಂದು ಬೇಡಿಕೊಂಡಿರುತ್ತಾರೆ.

"ಯಾರು ಇತರರನ್ನು ಆಕ್ಷೇಪಿಸಿ ನಿಂದಿಸುತ್ತಾರೆಯೋ, ಅಂಥವರು ನನ್ನ ಹೃದಯವನ್ನು ಚುಚ್ಚಿದಂತೆ ನನ್ನನ್ನು ಗಾಯ ಪಡಿಸಿರುತ್ತಾರೆ. ಆದರೆ ಯಾರು ತಾಳ್ಮೆಯಿಂದ ಇರುತ್ತಾರೆಯೋ ಅವರು ನನ್ನ ಪ್ರೀತಿಗೆ ಪಾತ್ರರಾಗುತ್ತಾರೆ" ಎಂದು ಬಾಬಾ ಅವರು ಅನೇಕ ಸಲ ಹೇಳಿದ್ದಾರೆ. ಈ ರೀತಿ ಬಾಬಾ ಅವರು ಸಕಲ ಚರಾಚರಗಳಲ್ಲಿಯೂ ವ್ಯಾಪಿಸಿ ಅವುಗಳನ್ನು ಕಾಪಾಡುತ್ತಿರುತ್ತಾರೆ. ಎಲ್ಲ ಜೀವರಾಶಿಗಳನ್ನು ಪ್ರೀತಿಯಿಂದ

ಕಾಣುವುದೇ ಅವರ ಧ್ಯೇಯವಾಗಿತ್ತು. ಅವರಿಗೆ ಬೇರಾವುದೂ ಬೇಕಿರಲಿಲ್ಲ. ಇಂತಹ ಅಮೃತವಾಣಿಯು ಯಾವಾಗಲೂ ಅವರಿಂದ ಬರುತ್ತಿತ್ತು. ಯಾರು ಬಾಬಾ ಅವರ ಕೀರ್ತಿಯನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಹಾಡುತ್ತಾರೆಯೋ ಅಥವಾ ಯಾರು ಅವುಗಳನ್ನು ನಿರಂತರವಾದ ಭಕ್ತಿಯಿಂದ ಕೇಳುತ್ತಾರೆಯೋ ಅಂಥವರು ಬಾಬಾ ಅವರಲ್ಲಿ ಐಕ್ಯರಾಗುತ್ತಾರೆ.

ಶ್ರೀ ಸಾಯಿ ಪ್ರಣಾಮ

# ೪೫ನೇ ಅಧ್ಯಾಯ

## ಕಾಕಾಸಾಹೇಬರ ಅನುಮಾನ ಮತ್ತು ಆನಂದರಾವ ಅವರ ಕನಸು – ಮರದ ಹಲಿಗೆ ಇತ್ಯಾದಿ

ಈ ಹಿಂದಿನ ಮೂರು ಅಧ್ಯಾಯಗಳಲ್ಲಿಯೂ ಬಾಬಾ ಅವರ ನಿರ್ವಾಣ ಯಾತ್ರೆಯನ್ನು ವಿವರಿಸಿದ್ದೇವೆ. ಅವರ ಭೌತಿಕ ಸ್ವರೂಪವು ಮಾತ್ರ ನಮ್ಮ ಕಣ್ಣಿನಿಂದ ದೂರವಗಿದೆಯೇ ಹೊರತು ಅವರ ಆಧ್ಯಾತ್ಮಿಕ ರೂಪವು– ಬಾಬಾ ಅವರ ಆತ್ಮ– ಪರಮಾತ್ಮ– ಅಮರವಾದದ್ದಾಗಿದೆ. ಅವರು ಜೀವಂತರಾಗಿದ್ದಾಗ ನಡೆದ ಲೀಲೆಗಳನ್ನು ವಿವರಿಸಿದ್ದೇನೆ. ಅವರು ಗತಿಸಿದ ನಂತರವೂ ಅಂತಹ ಲೀಲೆಗಳು ಸಂಭವಿಸಿವೆ. ಮತ್ತು ಸಂಭವಿಸುತ್ತಲೂ ಇವೆ. ಬಾಬಾ ಅವರು ಜೀವಿಸಿದ್ದಾಗ ಅವರ ಸಂಪರ್ಕ ಪಡೆದ ಜನರೇ ಧನ್ಯರು. ಆದರೆ ಪ್ರಾಪಂಚಿಕ ವಿಷಯಗಳಲ್ಲಿ ವಿರಕ್ತಿಯನ್ನು ತೋರದೆ, ಪರಮಾತ್ಮನ ಕಡೆಗೆ ಮನಸ್ಸು ಕೊಡದೆ ಇರುವ ಜನರು ದುರದೃಷ್ಟರೆಂದೇ ಹೇಳಬೇಕು.

ಭಕ್ತರಿಂದ ಅವರಿಗೆ ಬೇಕಾಗಿದ್ದುದು –ಬೇಕಾಗಿರುವುದು ಹೃತ್ಪೂರ್ವಕ ಭಕ್ತಿ ಮಾತ್ರ. ನಮ್ಮ ಇಂದ್ರಿಯಗಳು, ಅವಯವಗಳು ಮತ್ತು ಮನಸ್ಸು ಬಾಬಾ ಅವರ ಸೇವೆಯಲ್ಲಿ ನಿರತರಾಗಿರಬೇಕು. ಕೆಲವು ಅವಯುವಗಳನ್ನು ಪೂಜೆಗೆ ನಿಯಮಿಸಿ ಇನ್ನಿತರ ಅವಯವಗಳನ್ನು ಬೇರೆ ಕಡೆಗೆ ಹರಿಸಬಾರದು. ಪೂಜೆ ಮತ್ತು ತಪಸ್ಸು ಮಾಡುವಾಗ ನಾವು ಹೃತ್ಪೂರ್ವಕವಾಗಿ, ತ್ರಿಕರಣ ಶುದ್ಧಿಯಿಂದ ಮಾಡಬೇಕು.

ಧರ್ಮಪತ್ನಿಯು ತನ್ನ ಪತಿಯಲ್ಲಿ ಇಟ್ಟ ಪ್ರೇಮವನ್ನು ಶಿಷ್ಯನಿಗೆ ಗುರುವಿನಲ್ಲಿ ಇರುವ ಪ್ರೇಮಕ್ಕೆ ಹೋಲಿಸಬಹುದಾಗಿದೆ. ಮಾತಾಪಿತರಾಗಲಿ, ಸಹೋದರರಾಗಲಿ ಅಥವಾ ಬಂಧುಗಳೇ ಆಗಲಿ ನಮ್ಮ ಜೀವನದ ಗುರಿಯಾದ ಆತ್ಮಜ್ಞಾನವನ್ನು ಪಡೆಯಲು

ಸಹಾಯಕರಾಗಲಾರರು. ನಮ್ಮ ದಾರಿಯನ್ನು ನಾವೇ ಹಾಕಿಕೊಂಡು ಆತ್ಮಜ್ಞಾನವನ್ನು ಪಡೆಯಬೇಕು. ನಿತ್ಯಾನಿತ್ಯಗಳನ್ನು ವಿಚಾರ ಮಾಡಿ, ಪ್ರಾಪಂಚಿಕ ಸುಖಭೋಗಗಳನ್ನು ತ್ಯಜಿಸಿ, ಇಂದ್ರಿಯ ನಿಗ್ರಹ ಶಕ್ತಿಯನ್ನು ಗಳಿಸಿ ನಾವು ಮುಕ್ತ ಮಾರ್ಗ ಹಿಡಿಯಬೇಕು. ಇತರರಿಗೆ ಅಧೀನರಾಗುವ ಮೊದಲು ನಮ್ಮಲ್ಲಿ ನಾವೇ ವಿಶ್ವಾಸವಿಟ್ಟು ಈ ರೀತಿ ನಾವು ಈ ಪ್ರಪಂಚವು ನಶ್ವರವಾದುದೆಂದು ತಿಳಿದು ಮಿತ್ಯ ಜ್ಞಾನವನ್ನು ತೊರೆದು ಚಿತ್ತವು ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದರೆ ಕೊನೆಗೆ ನಮಗೆ ವೈರಾಗ್ಯ ಬಂದು ಮಮಕಾರವು ದೂರಾಗುವುದು. ಈ ವಿಧಾನದಿಂದ ಬ್ರಹ್ಮ ವಾಸನೆಯು ಉಂಟಾಗಿ ಆ ಬ್ರಹ್ಮನೇ ಗುರು ಎಂದು ಅರ್ಥವಾಗುತ್ತದೆ. ನಾವು ಯಾವಾಗ ಗುರು ಅಥವಾ ಬ್ರಹ್ಮನನ್ನು ಹೃತ್ಪೂರ್ವಕವಾಗಿ ಆರಾಧಿಸುತ್ತೇವೆಯೋ, ಆಗ ನಾವು ಅತನಲ್ಲಿ ಐಕ್ಯವಾಗಿ ಆತ್ಮಜ್ಞಾನವನ್ನು ಪಡೆಯುತ್ತೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಗುರುವಿನ ನಾಮಸ್ಮರಣೆಯಿಂದಲೂ, ಅವನ ಧ್ಯಾನದಿಂದಲೂ ನಾವು ಸಕಲ ಜೀವರಾಶಿಗಳಲ್ಲಿಯೂ ಅವನನ್ನು ಕಾಣುವಂತಾಗಿ ನಮಗೆ ನಿತ್ಯ ಆನಂದವು ದೊರಕುತ್ತದೆ. ಈ ಕೆಳಕಂಡ ಕಥೆಯು ಇದನ್ನು ಪ್ರತಿಪಾದಿಸುತ್ತದೆ.

## ಕಾಕಾ ದೀಕ್ಷಿತ ಅವರ ಅನುಮಾನ

ಏಕನಾಥ ವಿರಚಿತವಾದ 'ಭಾವಾರ್ಥ ರಾಮಾಯಣ' ಇವುಗಳನ್ನು ಪ್ರತಿದಿನವೂ ಓದಲು ಬಾಬಾ ಅವರು ಕಾಕಾ ಅವರಿಗೆ ಆಜ್ಞಾಪಿಸಿದ್ದರೆಂಬುದು ನೆನಪಿರಲುಸಾಕು. ಇದನ್ನು ಅವರು ಬಾಬಾ ಅವರು ಗತಿಸಿದ ನಂತರವೂ ಅನುಸರಿಸುತ್ತ ಬಂದರು. ಒಂದು ದಿನ ಚೌಪಾಟಿಯ ಕಾಕಾ ಮಹಾಜನಿ ಅವರ ಮನೆಯಲ್ಲಿ ಕಾಕಾ ದೀಕ್ಷಿತರು ಬೆಳಿಗ್ಗೆ ಏಕನಾಥ ಭಾಗವತವನ್ನು ಪಾರಾಯಣ ಮಾಡುತ್ತಿದ್ದರು. ಕಾಕಾ ಮಹಾಜನಿಯವರೂ ಮತ್ತು ಶ್ಯಾಮ ಅವರೂ ಅದನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಆ ಅದ್ಯಾಯದಲ್ಲಿ (೧೧ನೇ ಸ್ಕಂದ

ಅಧ್ಯಾಯ೨) ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಅವಿಹೋರ್ತ್ರ, ದ್ರುಮಿಲ, ಚಮಸ ಮತ್ತು ಕರಭಾಜನರೇ ಮೊದಲಾದ ನವನಾಥರು ಜನಕರಾಜನಿಗೆ ಭಾಗವತದ ಧರ್ಮತತ್ವಗಳನ್ನು ವಿವರಿಸುತ್ತಿದ್ದರು. ಜನಕರಾಜನು ಆ ನವನಾಥರನ್ನು ಕುರಿತು ಮುಖ್ಯ ಪ್ರಶ್ನೆ ಹಾಕಿದನು. ಅದಕ್ಕೆ ಎಲ್ಲರೂ ಸಮಂಜಸವಾದ ಉತ್ತರ ಕೊಟ್ಟರು. ಕವಿಯು ಭಾಗವತದ ಧರ್ಮವನ್ನು ಸೂಚಿಸಿದರು. ಹರಿಯು ಭಕ್ತರ ಗುಣಗಳನ್ನು ವಿವರಿಸಿದನು. ಅಂತರಿಕ್ಷನು ಮಾಯೆ ಏನೆಂಬುದನ್ನೂ, ಪ್ರಬುದ್ಧನು ಮಾಯೆಯನ್ನು ದಾಟುವುದು ಹೇಗೆ ಎಂಬುದನ್ನೂ, ಪಿಪ್ಪಲಾಯನನು ಪರಬ್ರಹ್ಮವು ಏನೆಂಬುದನ್ನೂ, ಅವಿಹೋರ್ತ್ರನು ಕರ್ಮವು ಏನೆಂಬುದನ್ನೂ, ದ್ರುಮಿಲನು ಪರಮಾತ್ಮನ ಅವತಾರ ಮತ್ತು ಲೀಲೆಗಳನ್ನೂ, ಚಮಸನು ನಾಸ್ತಿಕನು ಮರಣ ನಂತರ ಏನನ್ನು ಅನುಭವಿಸುತ್ತಾನೆ ಎಂಬುದನ್ನು ಮತ್ತು ಕರಭಾಜನನು ಯುಗಯುಗಗಳಲ್ಲಿ ಪರಮಾತ್ಮನನ್ನು ಯಾವ ರೀತಿ ಆರಾಧಿಸಬೇಕೆಂಬುದನ್ನು ವಿವರಿಸಿದರು. ಈ ಕಲಿಯುಗದಲ್ಲಿ ಹರಿನಾಮ ಸ್ಮರಣೆಯೊಂದೇ ಮೋಕ್ಷ ಮಾರ್ಗಕ್ಕೆ ಸಾಧನ ಆಂದಿನ ಪಾರಾಯಣ ಮುಗಿದ ನಂತರ ಕಾಕಾ ದೀಕ್ಷಿತ ಶ್ಯಾಮ ಅವರನ್ನು ಕುರಿತು " ಈ ನವನಾಥರ ವಿವರಣೆ ಎಷ್ಟು ಚೆನ್ನಾಗಿದೆ; ಆಶ್ಚರ್ಯಕರವಾಗಿಲ್ಲವೆ? ಆದರೆ ಅವುಗಳನ್ನು ಅಭ್ಯಸಿಸುವುದು ಬಹಳ ಕಷ್ಟ. ನಾಥರು ಶುದ್ಧರಾಗಿದ್ರು, ನಮ್ಮಂತ ಮೂಢಾತ್ಮರಿಗೆ ಅವರಿಂದ ಉಲ್ಲೇಖಿಸಲ್ಪಟ್ಟ ಭಕ್ತಿಯನ್ನು ಹೊಂದಲು ಸಾಧ್ಯವೆ? ನಾವು ಎಷ್ಟೋ ಜನ್ಮ ತಾಳಿದರೂ ನಮಗೆ ಅದು ಸಾಧ್ಯವಿಲ್ಲ. ನಮಗೆ ಎಲ್ಲಿಯ ಮುಕ್ತಿ? ಅದನ್ನು ನಾವು ಬಯಸುವುದೂ ಬೇಡ ಎಂದು ತೋರುತ್ತದೆ ಎಂದರು. ಶ್ಯಾಮ ಅವರಿಗೆ ಇಂಥ ಮನೋಭಾವನೆ ಹಿಡಿಸಲಿಲ್ಲ. ಆಗ ಅವರು "ತಮ್ಮ ಅದೃಷ್ಟಬಲದಿಂದ ಬಾಬಾ ಅವರಂಥ ಅನರ್ಘ್ಯ ರತ್ನವನ್ನು ಪಡೆದಿರುವರೇ ಹೀಗೆ ಹೇಳುವುದು ನಿಜವಾಗಿಯೂ ಸರಿಯಾದುದಲ್ಲ. ಬಾಬಾ ಅವರರಲ್ಲಿ ನಮಗೆ ಶುದ್ಧ ಭಕ್ತಿ ಇದ್ದರೆ ನಾವು ಏಕೆ

ಅಶಾಂತಿಯಿಂದ ಇರಬೇಕು? ನಾಥರ ಭಕ್ತಿಯು ಶಕ್ತಿಯುತವಾಗಿರಬಹುದು. ನಮ್ಮ ಭಕ್ತಿಯೂ ಹಾಗೆಯೇ ಇಲ್ಲವೆ? ಬಾಬಾ ಅವರೇ ನಮಗೆ ಗುರು. ಹರಿನಾಮ ಸ್ಮರಣೆಯೊಂದೇ ಮುಕ್ತಿ ಮಾರ್ಗಕ್ಕೆ ಸುಲಭ ಸಾಧನವೆಂದು ಹೇಳಲಿಲ್ಲವೆ? ಹೀಗಿದ್ದ ಮೇಲೆ ಚಿಂತೆ ಏಕೆ, ಹೆದರಿಕೆ ಏಕೆ?" ಎಂದು ಕೇಳಿದರು. ಕಾಕಾಸಾಹೇಬರಿಗೆ ಶ್ಯಾಮ ಅವರ ವಿವರಣೆ ಅರ್ಥವಾಗಲಿಲ್ಲ. ತೃಪ್ತಿಯಾಗಲಿಲ್ಲ. ಅವರು ಆ ದಿನವೆಲ್ಲವೂ ಅಗಾಧವಾದ ಭಕ್ತಿಯನ್ನು ಸಂಪಾದಿಸುವುದು ಹೇಗೆ, ಎಂದು ಚಿಂತಿಸುತ್ತ ಮನ:ಶಾಂತಿ ಇಲ್ಲದೆ ಕೊರಗಿದರು. ಮರುದಿನ ಬೆಳಿಗ್ಗೆ ಒಂದು ಪವಾಡ ಜರುಗಿತು.

ಆನಂದರಾವ ಪಾಖಾಡೆ ಎಂಬುವರು ಶ್ಯಾಮ ಅವರನ್ನು ಹುಡುಕಿಕೊಂಡು ಅವರ ಕಡೆಗೆ ಬಂದರು. ಆಗ ಭಾಗವತ ಪಾರಾಯಣ ನಡೆದಿತ್ತು. ಪಾಖಾಡೆಯವರು ಶ್ಯಾಮ ಅವರ ಹತ್ತಿರ ನಿಂತು ಏನೋ ಪಿಸುಗುಟ್ಟಿದರು. (ಅವರು ಮೆಲ್ಲಗೆ ತಮ್ಮ ಕನಸನ್ನು ವಿವರಿಸುತ್ತಿದ್ದರು) ಈ ಕಿವಿ ಮಾತನ್ನು ಕೇಳಿ ಕಾಕಾ ಸಾಹೇಬರು ಪಾರಾಯಣ ನಿಲ್ಲಿಸಿ ಅದೇನೆಂದು ಕೇಳಿದರು. ಆಗ ಶ್ಯಾಮ ಅವರು "ನಿನ್ನೆ ನೀವು ಒಂದು ಅನುಮಾನವನ್ನು ವ್ಯಕ್ತಪಡಿಸಿದಿರಲ್ಲವೇ? ಅದಕ್ಕೆ ವಿವರಣೆ ಇಲ್ಲಿದೆ : ಪಾಖಾಡೆ ಅವರಿಗೆ ಬಾಬಾ ಅವರು ಕನಸಿನಲ್ಲಿ ಹೇಳಿದುದನ್ನು ಅವರೇ ಹೇಳುತ್ತಾರೆ. ಗುರುವಿನ ಚರಣಗಳಿಗೆ ನಮಸ್ಕಾರ ಮಾಡುವುದು ಅಥವಾ ಆರಾಧನೆ ಮತ್ತು ಭಕ್ತಿ ಇಷ್ಟೆ ಸಾಕೆಂದು ಹೇಳಿರುತ್ತಾರೆ" ಎಂದರು. ಪಾಖಾಡೆ ತಮ್ಮ ಕನಸನ್ನು ಈ ರೀತಿ ವಿವರಿಸಿದರು.

"ನಾನು ಸಾಗರದಲ್ಲಿ ನಿಂತಿದ್ದೆ. ಬಾಬಾ ಕೂಡಲೇ ಕಾಣಿಸಿಕೊಂಡರು. ಅವರು ರತ್ನಖಚಿತವಾದ ಸಿಂಹಾಸನದ ಮೇಲೆ ಕುಳಿತಿದ್ದರು. ಚರಣಗಳು ಮಾತ್ರ ನೀರಿನಲ್ಲಿ ಇದ್ದವು. ನಾನು ಅತ್ಯಾನಂದದಿಂದ ಸಂತುಷ್ಟನಾದೆನು. ಆ ದೃಶ್ಯ ಕಣ್ಣಿಗೆ ಕಟ್ಟಿದಂತಾಗಿ ಮರೆಯಲಾರದಾಗಿದೆ. ಅದು ಕನಸೆಂದು ನಾನು ಭಾವಿಸಿರಲಿಲ್ಲ.

ಶ್ಯಾಮ ಅವರು ಕುತೂಹಲದಿಂದ ಅಲ್ಲಿಯೇ ನಿಂತಿದ್ದರು. ಅವರು ನನ್ನನ್ನು ಕುರಿತು 'ಬಾಬಾ ಅವರ ಚರಣಕ್ಕೆ ಎರಗು' ಎಂದರು. ನಾನು 'ಹೌದು, ನಮಸ್ಕಾರ ಮಾಡಬೇಕೇಂದಿದ್ದೇನೆ, ಏನು ಮಾಡಲಿ? ಅವರ ಚರಣಗಳು ನೀರಿನಲ್ಲಿವೆ; ನನ್ನ ಮಸ್ತಕವನ್ನು ಹೇಗೆ ಅವರ ಅಡಿದಾವರೆಗಳಲ್ಲಿ ಇಡಲಿ?' ಎಂದೆನು

ಆಗ ಶ್ಯಾಮ ಅವರು 'ಓ ದೇವಾ, ನೀರಿನಲ್ಲಿರುವ ನಿಮ್ಮ ಚರಣಗಳನ್ನು ಮೇಲಕ್ಕೆತ್ತಿರಿ ಅನ್ನಲು, ಬಾಬಾ ಅವರು ಕೂಡಲೇ ತಮ್ಮ ಚರಣಾರವಿಂದಗಳನ್ನು ಮೇಲಕ್ಕೆತ್ತಿದರು. ಸ್ವಲ್ಪವೂ ನಾನು ತಡಮಾಡದೆ ಪಾದಗಳನ್ನು ಹಿಡಿದುಕೊಂಡು ನಮಸ್ಕರಿಸಿದೆನು. ಇದನ್ನು ನೋಡಿ, ಬಾಬಾ 'ಈಗ ಹೊರಡು' ನಿನ್ನ ಅಭೀಷ್ಟವು ಸಿದ್ಧಿಸುತ್ತದೆ. ಭಯ ಮತ್ತು ಕಾತುರತೆಯನ್ನು ಬಿಡು, ಎಂದು ಹೇಳಿ ಆಶೀರ್ವದಿಸಿದರು. ಮುಂದುವರೆದು "ನನ್ನ ಶ್ಯಾಮನಿಗೆ ಜರಿ ಅಂಚಿನ ದೋತರಗಳನ್ನು ಕೊಡು – ನಿನಗೆ ಒಳ್ಳೆಯದಾಗುತ್ತದೆ.' ಎಂದು ಹೇಳಿದರು.

ಬಾಬಾ ಅವರ ಆಜ್ಞೆಗನುಸಾರವಾಗಿ ಪಾಖಾಡೆಯವರು ಧೋತರವನ್ನು ಕೊಂಡು ತಂದು ಶ್ಯಾಮ ಅವರಿಗೆ ಕೊಡಬೇಕೆಂದು ಅವರ ಕೈಗಿತ್ತರು. ಆದರೆ ಶ್ಯಾಮ ಅವರು "ಬಾಬಾ ಅವರು ಸ್ವೀಕರಿಸೆಂದು ಹೇಳುವ ತನಕ ನಾನು ಸ್ವೀಕರಿಸುವುದಿಲ್ಲ" ಎಂದರು. ಕೆಲವು ಕಾಲದ ಚರ್ಚೆಯ ನಂತರ ಕಾಕಾ ಅವರು ಚೀಟಿ ಹಾಕಲು ನಿರ್ಧರಿಸಿದರು. ಅನುಮಾನ ಬಂದಾಗ ಚೀಟಿ ಹಾಕಿ ಅದರಲ್ಲಿ ಒಂದನ್ನು ಎತ್ತಿ ಬಂದ ಉತ್ತರದಂತೆ ನಡೆಯುವುದು ಕಾಕಾ ಅವರ ವಾಡಿಕೆಯಾಗಿತ್ತು. ಒಂದು ಚೀಟಿಯಲ್ಲಿ "ಸ್ವೀಕರಿಸು" ಎಂದೂ ಮತ್ತೊಂದು ಚೀಟಿಯಲ್ಲಿ "ನಿರಾಕರಿಸು" ಎಂದು ಬರೆದು ಮಡಿಚಿ ಬಾಬಾ ಅವರ ಫೋಟೋದ ಮುಂದೆ ಇಟ್ಟು ಒಂದು ಮಗುವಿನ ಕೈಯಿಂದ ಚೀಟಿ ಎತ್ತಿಸಲಾಯಿತು. ಅದರಲ್ಲಿ "ಸ್ವೀಕರಿಸು" ಎಂದಿತ್ತು. ದೋತರವನ್ನು ಶ್ಯಾಮ ಅವರಿಗೆ

ಕೊಟ್ಟರು. ಶ್ಯಾಮ ಅವರೂ ಸಂತೋಷದಿಂದ ಅದನ್ನು ಸ್ವೀಕರಿಸಿದರು. ಈ ರೀತಿ ಆನಂದರಾವ ಮತ್ತು ಶ್ಯಾಮ ಇಬ್ಬರೂ ಆನಂದಭರಿತರಾದರು. ಕಾಕಾಸಾಹೇಬರ ಅನುಮಾನ ಪರಿಹಾರವಾಯಿತು.

ಈ ಕಥೆಯು ಇತರ ಸಂತರ ವಾಣಿಯನ್ನು ಗೌರವಿಸುವಂತೆ ಹೇಳುವುದಲ್ಲದೆ, ಅದೇ ಸಮಯದಲ್ಲಿ ನಮ್ಮ ಮಾತೆಯಲ್ಲಿ ನಾವು ಅಚಲ ವಿಶ್ವಾಸ ಇಡಬೇಕೆಂಬುದನ್ನು ಬೋಧಿಸುತ್ತದೆ. ಗುರುವಿಗೆ ನಮ್ಮ ಯೋಗಕ್ಷೇಮ ವಿಚಾರ ಇತರರಿಗಿಂತ ಹೆಚ್ಚಾಗಿ ತಿಳಿದಿರುವುದರಿಂದ ಅವರ ಉಪದೇಶಗಳನ್ನು ನಾವು ಪಾಲಿಸಬೇಕು. ಈ ಪ್ರಪಂಚದಲ್ಲಿ ಅನೇಕ ಸಂತರಿದ್ದಾರೆ. ಆದರೆ ನಮ್ಮ ನಿಜವಾದ ಗುರುವೇ ನಮಗೆ ತಂದೆ. ಬೇರೆಯವರು ಅನೇಕ ಹಿತವಚನಗಳನ್ನು ಹೇಳಬಹುದು. ಆದರೆ ನಮ್ಮ ಗುರುವಿನ ಮಾತನ್ನು ಮಾತ್ರ ಎಂದಿಗೂ ನಾವು ಮೀರಬಾರದು. ಅಂದರೆ ನಾವು ನಮ್ಮ ಗುರುವನ್ನು ಮನ:ಪೂರ್ವಕವಾಗಿ ಪ್ರೀತಿಸಬೇಕು. ಅವರಲ್ಲಿ ಸಂಪೂರ್ಣ ಶರಣಾತರಾಗಿರಬೇಕು. ಅವರ ಮುಂದೆ ಭಕ್ತಿಯಿಂದ ನಮಸ್ಕರಿಸಬೇಕು. ಹೀಗೆ ಮಾಡಿದರೆ "ಸೂರ್ಯನ ಮುಂದೆ ಕತ್ತಲು ಹೇಗೆ ಇರಲಾರದೋ ಹಾಗೆ ನಿಮ್ಮ ಮುಂದೆ ಯಾವ ಸಂಸಾರ ಸಾಗರವೂ ಇರಲಾರದು" ಎಂದು ಹೇಳಿರುವ ಬಾಬಾ ಅವರ ವಚನಗಳು ನಮ್ಮ ಹೃದಯದಲ್ಲಿ ನೆಲೆಗೊಳ್ಳುತ್ತವೆ.

## ಹಲಿಗೆಯ ಹಾಸಿಗೆ

ಮೊದಮೊದಲು ಬಾಬಾ ಅವರು ನಾಲ್ಕು ಮೊಳ ಉದ್ದ ಒಂದು ಮೊಳ ಅಗಲ ಸುತ್ತಲೂ ನಾಲ್ಕೂ ಮೂಲೆಗಳಲ್ಲಿ ಪಣತಿ ಉರಿಯುತ್ತಿದ್ದ ಕಟ್ಟಿಗೆಯ ಹಲಿಗೆಯ ಮೇಲ ನಿದ್ರಿಸುತ್ತಿದ್ದರು. ಕೊನೆಗೆ ಆ ಹಲಿಗೆಯನ್ನು ಬಾಬಾ ಚೂರು ಚೂರು ಮಾಡಿ ಒಗೆದು ಬಿಟ್ಟರು. (೧೦ನೇ ಅಧ್ಯಾಯ ನೋಡಿರಿ) ಒಂದು ಸಾರೆ ಬಾಬಾ ಅವರು ಆ ಹಲಿಗೆಯ ಮಹತ್ವವನ್ನು

ಕಾಕಾ ಅವರಿಗೆ ವಿವರಿಸುತ್ತಿದ್ದರು. ಅದನ್ನು ಕೇಳಿದ ಅವರು "ನೀವು ಇನ್ನೂ ಹಲಿಗೆಯನ್ನು ಪ್ರೀತಿಸುವುದಾದರೆ ಇನ್ನೊಂದು ಹಲಿಗೆಯನ್ನು ತಂದು ಉಯ್ಯಾಲೆ ಕಟ್ಟುತ್ತೇವೆ; ಅದರ ಮೇಲೆ ಸುಖವಾಗಿ ನಿದ್ರಿಸುವಿರಂತೆ" ಎಂದು ಹೇಳಲು ಬಾಬಾ ಅವರು "ಮ್ಹಾಳಸಾಪತಿಯನ್ನು ನೆಲದ ಮಲಗಿಸಿ ನಾನು ಮೇಲೆ ಮಲಗಲು ಇಷ್ಟಪಡುವುದಿಲ್ಲ" ಎಂದರು. ನಂತರ ಕಾಕಾ ಅವರು "ಮ್ಹಾಳಸಾಪತಿಯವರಿಗೂ ಒಂದು ಹಲಿಗೆ ಕೊಡಿಸುತ್ತೇನೆ" ಎಂದು ಹೇಳಲು, ಬಾಬಾ ಅವರು "ಅವನು ಹಲಿಗೆಯ ಮೇಲೆ ಹೇಗೆ ನಿದ್ರಿಸಬಲ್ಲನು? ಹಲಿಗೆಯ ಮೇಲೆ ಎತ್ತರದಲ್ಲಿ ಮಲಗುವುದು ಅಷ್ಟು ಸುಲಭವಲ್ಲ. ಯಾರು ಸದ್ಗುಣ ಪರಿಪೂರ್ಣರೋ ಅಂಥವರು ಮಾತ್ರ ಹಲಿಗೆಯ ಮೇಲೆ ನಿದ್ರಿಸಬಲ್ಲರು. ಅವರು ಯಾವಾಗಲೂ ಜಾಗೃತ ದೃಷ್ಟಿ ಹೊಂದಿದವರಿರಬೇಕು. ನಾನು ನಿದ್ರೆ ಹೋಗುವಾಗ, ನನ್ನ ಹೃದಯದ ಮೇಲೆ ಕೈಯಿಟ್ಟು, ನಾನು ಹರಿನಾಮ ಸ್ಮರಣೆ ಮಾಡುತ್ತಿರುವುದನ್ನು ಗಮನಿಸುತ್ತಿರು; ನಿದ್ರಿಸಿದಾಗ ನನ್ನನ್ನು ಎಚ್ಚರಿಸು ಎಂದು ನಾನು ಮ್ಹಾಳಸಾಪತಿಗೆ ಹೇಳುತ್ತೇನೆ. ಅವನಿಂದ ಅದೂ ಸಾಧ್ಯವಿಲ್ಲ. ಅವನೇ ನಿದ್ರೆಯಿಂದ ತೂಕಡಿಸುತ್ತಾನೆ. ನನ್ನ ಹೃದಯದ ಮೇಲಿನ ಅವನ ಕೈಗಳು ಕಲ್ಲಿನಂತೆ ಭಾರವಾಗಿರುತ್ತವೆ. 'ಭಗತ್' ಎಂದುನಾನು ಕೂಗಿದಾಗ ಮಾತ್ರ ಅವನು ಎಚ್ಚೆತ್ತು ಕಣ್ಣು ತೆರೆಯುತ್ತಾನೆ. ಹೀಗೆ ನೆಲದ ಮೇಲೇಯೇ ಸರಿಯಾಗಿ ನಿದ್ರಿಸಲಾಗದೆ ನಿದ್ರಾದೇವಿಯ ಗುಲಮನಾಗಿರುವ ಅವನು ಹಲಿಗೆಯ ಮೇಲೆ– ಅದೂ ಎತ್ತರದಲ್ಲಿ ಹೇಗೆ ನಿದ್ರಿಸಬಲ್ಲನು?" ಎಂದರು. ಅನೇಕ ಸಾರೆ ಬಾಬಾ ಅವರು ಭಕ್ತರ ಮೇಲಿನ ಪ್ರೀತಿಯಂದ "ಯಾವುದು ನಮ್ಮದೋ, ಅದು ನಮ್ಮೊಡನೆ ಇರುತ್ತದೆ. ಇತರರದು, ಅವರವರ ಹತ್ತಿರ ಇರುತ್ತದೆ" ಎಂದು ಹೇಳುತ್ತಿದ್ದರು.

## ಶ್ರೀ ಸಾಯಿ ಪ್ರಣಾಮ

# ೪೬ನೇ ಅಧ್ಯಾಯ

## ಬಾಬಾ ಅವರ ಗಯಾ ಯಾತ್ರೆ– ಎರಡು ಆಡುಗಳು

ಈ ಅಧ್ಯಾಯದಲ್ಲಿ ಶ್ಯಾಮ ಅವರು ಕಾಶಿ, ಪ್ರಯಾಗ ಮತ್ತು ಗಯಾ ಯಾತ್ರೆ ಮತ್ತು ಬಾಬಾ ಅವರು ಹೇಗೆ ತಮ್ಮ ಫೋಟೋ ರೂಪದಲ್ಲಿ ಶ್ಯಾಮ ಅವರಿಗಿಂತ ಮುಂಚೆಯೇ ಗಯೆಯಲ್ಲಿದ್ದರು ಎಂಬುದನ್ನೂ ಮತ್ತು ಎರಡು ಆಡುಗಳ ಕಥೆಯನ್ನೂ ಹೇಮಾಡಪಂತ ಹೇಳಿದ್ದಾರೆ.

ಸಾಯಿ, ಕರ್ಮಬಂಧನದಿಂದ ನಮ್ಮನ್ನು ಮುಕ್ತ ಮಾಡುವ ನಿನ್ನ ಚರಣಗಳ ದರ್ಶನ ಪಡೆದ ನಾವೇ ಧನ್ಯರು! ನಿನ್ನ ರೂಪ ಈಗ ಅಗೋಚರವಾಗಿದ್ದರೂ ನಿನ್ನನ್ನೇ ನಂಬಿದ ಭಕ್ತರಿಗೆ ನಿನ್ನ ಅನುಗ್ರಹದ ಅನುಭವವಾಗುತ್ತಿದೆ. ಅಸದೃಶ್ಯವಾದ ಮತ್ತು ಉದಾತ್ತವಾದ ದಾರದಿಂದ ನಿನ್ನ ಭಕ್ತರನ್ನು ನಿನ್ನೆಡೆಗೆ ಸೆಳೆದುಕೊಂಡು ತಾಯಿಯು ತನ್ನ ಕಂದನನ್ನು ಅಪ್ಪಿಕೊಳ್ಳುವಂತೆ ಅವರನ್ನು ನೀನು ಅಪ್ಪಿಕೊಳ್ಳುತ್ತಿ. ನೀನು ಎಲ್ಲಿರುವೆ ಎಂಬುದು ಭಕ್ತರಿಗೆ ಗೊತ್ತಿಲ್ಲದಿದ್ದರೂ ನಿನ್ನ ಏಕೈಕ ರೀತಿಯಿಂದ ಸೂತ್ರಧಾರಿಯಾಗಿ ಕೊನೆಗೆ ಭಕ್ತಿಗೆ ಅವರ ಹಿಂದೆಯೇ ಇರುವಂತೆ ಅನುಭವ ನೀಡಿ ಅವರನ್ನು ಸಂರಕ್ಷಿಸುತ್ತಿರುವಿ. ಬುದ್ಧಿವಂತರೂ, ಜ್ಞಾನಿಗಳೂ ಮತ್ತು ವಿದ್ವಾಂಸರೂ ತಮ್ಮ ಅಹಂಭಾವದಿಂದ ಸಂಸಾರವೆಂಬ ಸಾಗರದಲ್ಲಿ ತೊಳಲುತ್ತಾರೆ. ಆದರೆ, ನಿಜವಾದ ಭಕ್ತರನ್ನು ನೀನು ಕಾಪಾಡುವೆ, ಬಾಹ್ಯದಲ್ಲಿ ಅಗೋಚರನಾಗಿ ನಿನ್ನ ಲೀಲೆಯನ್ನು ನೀನು ನಡೆಸುತ್ತ ಅವುಗಳಲ್ಲಿ ನಿನಗೆ ಆಸಕ್ತಿ ಇಲ್ಲವೆಂದು ತೋರಿಸುತ್ತಿ. ನಿನ್ನ ಜೀವನದ ಮರ್ಮ ಯಾರೂ ತಿಳಿಯರು. ಆದುದರಿಂದ ನಮ್ಮ ಪಾಪ ನಿರ್ಮೂಲನಕ್ಕಾಗಿ ನಿನ್ನಲ್ಲಿ ತನು, ಮನ, ಧನಗಳನ್ನು ಅರ್ಪಿಸಿ ಯಾವಾಗಲೂ ನಿನ್ನ ನಾಮಸ್ಮರಣೆ ಮಾಡುವುದೇ ಉತ್ತಮವಾದ ಸಾಧನ ನೀನು ಭಕ್ತರ ಅಭೀಷ್ಟಗಳನ್ನು ನೆರವೇರಿಸುತ್ತಿ. ಯಾರು ಮೋಹದಿಂದ ದೂರ ಇರುತ್ತಾರೆಯೋ,

ಅಂಥವರಿಗೆ ನೀನು ಪರಮಾನಂದವನ್ನು ದಯಪಾಲಿಸುತ್ತಿ. ನಿನ್ನ ಪವಿತ್ರ ನಾಮಮೃತ ಸ್ಮರಣೆಯೇ ಭಕ್ತರಿಗೆ ಸುಲಭ ಸಾಧನ. ಈ ಸಾಧನೆಯಿಂದ ನಮ್ಮ ರಜಸ್ತಮೋಗುಣಗಳು ನಾಶವಾಗುತ್ತವೆ. ಸತ್ವಗುಣ ಮತ್ತು ಧರ್ಮಬುದ್ಧಿಯೂ, ವಿವೇಕವೂ, ವೀತರಾಗವೂ ಜ್ಞಾನದ ಜೊತೆಗೆ ಉದ್ಭವಿಸುತ್ತವೆ. ಆಗ ನಾವು ಆತ್ಮೋನ್ಮುಖರಾಗುತ್ತೇವೆ. ಇದೇ ಗುರುವಿನಲ್ಲಿ ಮಾಡಬೇಕಾದ ಸಂಪೂರ್ಣ ಶರಣಾಗತಿ. ನಮ್ಮ ಮನಸ್ಸು ನಿರ್ಮಲವಾಗಿ, ಶಾಂತಿ ಪಡೆಯುವುದೊಂದೇ ಇದಕ್ಕೆ ನಿದರ್ಶನ. ಈ ಶರಣಾಗತಿ, ಭಕ್ತಿ ಮತ್ತು ಜ್ಞಾನದ ಮಹತ್ವ ಅಪೂರ್ವವಾದುದು.

ಬಾಬಾ ಅವರು ಭಕ್ತರನ್ನು ಅನುಗ್ರಹಿಸಿದರೆ, ಅವರು ಹಗಲಿರುಳೂ ಎಡಬಿಡದೆ ಅವರ ಬಳಿಯಲ್ಲಿಯೇ ಇರುತ್ತಾರೆ. ಭಕ್ತನು ಎಲ್ಲಿಯೇ ಹೋಗಲಿ, ಅವನಿಗಿಂತ ಮುಂಚೆ ಅಲ್ಲಿರುತ್ತಾರೆ. ಈ ಕೆಳಕಂಡ ಘಟನೆಯೇ ಅದಕ್ಕೆ ನಿದರ್ಶನ.

## ಗಯಾ ಯಾತ್ರೆ

ಕಾಕಾ ದೀಕ್ಷಿತ ಅವರಿಗೆ ಶ್ರೀ ಸಾಯಿಬಾಬಾ ಅವರ ಪರಿಚಯವಾದ ಸ್ವಲ್ಪ ದಿನಗಳ ನಂತರ ಅವರು ತಮ್ಮ ಜ್ಯೇಷ್ಠ ಪುತ್ರನಿಗೆ ಉಪನಯನವನ್ನು ನಾಗಾಪುರದಲ್ಲಿ ಮಾಡಬೇಕೆಂದು ನಿಶ್ಚಯಿಸಿದರು. ಅದೇ ಸಮಯದಲ್ಲಿ ನಾನಾ ಸಾಹೇಬ ಚಾಂದೋರಕರ ಅವರು ತಮ್ಮ ಹಿರಿಯ ಮಗನ ಮದುವೆಯನ್ನು ಗ್ವಾಲಿಯರದಲ್ಲಿ ನೇರವೇರಿಸಲು ನಿಶ್ಚಯಿಸಿದರು. ಇವರಿಬ್ಬರೂ ಬಾಬಾ ಅವರನ್ನು ಅಹ್ವಾನಿಸಲು ಶಿರ್ಡಿಗೆ ಬಂದರು. ಅವರು ಬಾಬಾ ಅವರನ್ನು ಸಮಾರಂಭಗಳಿಗೆ ಬರಲು ಬಲವಂತ ಮಾಡಲಾಗಿ ಬಾಬಾ ಶ್ಯಾಮನನ್ನು ಸಂಗಡ ಕರೆದುಕೊಂಡು ಹೋಗುವಂತೆ ಅವರಿಗೆ ಹೇಳಿ ತಾವು ಕಾಶಿ ಮತ್ತು ಪ್ರಯಾಗ ಯಾತ್ರೆ ಮಾಡಿ ಬರುವೆನೆಂದು ತಿಳಿಸಿದರು. ಬಾಬಾ ಅವರ ಅಪ್ಪಣೆ ಪಡೆದು ಶ್ಯಾಮ ಅವರು ನಾಗಾಪುರ ಮತ್ತು ಗ್ವಾಲಿಯರಗೆ ಹೋಗಿ

ಸಮಾರಂಭಗಳನ್ನು ಮುಗಿಸಿಕೊಂಡು ನಂತರ ಕಾಶಿ ಮತ್ತು ಪ್ರಯಾಗಕ್ಕೆ ಹೋಗಲು ನಿರ್ಧರಿಸಿದರು.

ಅಪ್ಪಾಕೋತೆ ಅವರು ಕೂಡಾ ಶ್ಯಾಮ ಅವರ ಸಂಗಡ ಹೋಗಲು ನಿರ್ಧರಿಸಿದರು. ಇಬ್ಬರೂ ಉಪನಯನ ಸಮಾರಂಭಕ್ಕೆ ನಾಗಪುರಕ್ಕೆ ಹೋದರು. ಕಾಕಾ ಅವರು ಶ್ಯಾಮ ಅವರ ಖರ್ಚಿಗೋಸ್ಕರ ೨೦೦ ರೂಪಾಯಿಗಳನ್ನು ಕೊಟ್ಟರು. ಅದಾದ ನಂತರ ಗ್ವಾಲಿಯರಗೆ ಮದುವೆ ಸಮಾರಂಭಕ್ಕೆ ಹೋದರು. ಅಲ್ಲಿ ನಾನಾ ಸಾಹೇಬ ಚಾಂದೋರಕರ ಅವರು ಅವರಿಗೆ ೧೦೦ ರೂಪಾಯಿಗಳನ್ನು ಕೊಟ್ಟರು. ಅವರ ಸಂಬಂಧಿಗಳಾದ ಜಠಾರ ಅವರು ಸಹ ೧೦೦ ರೂಪಾಯಿಗಳನ್ನು ಕೊಟ್ಟರು. ನಂತರ ಶ್ಯಾಮ ಅವರು ಕಾಶಿ ಮತ್ತು ಅಯೋಧ್ಯೆಗೆ ಹೊರಟರು. ಅವರಿಗೆ ಕಾಶಿಯಲ್ಲಿ ಶ್ರೀಲಕ್ಷ್ಮಿನಾರಾಯಣ ದೇವಸ್ಥಾನದಲ್ಲಿ ಸ್ವಾಗತ ದೊರೆಯಿತು. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಜಠಾರ ಎಂಬ ಕಾರ್ಯನಿರ್ವಾಹಕರಿಂದ ಸತ್ಕಾರ ನಡೆಯಿತು. ಅಯೋಧ್ಯೆಯಲ್ಲಿ ೨೧ ದಿನಗಳಿದ್ದು, ಕಾಶಿಯಲ್ಲಿ ಎರಡು ತಿಂಗಳಿದ್ದು ನಂತರ ಗಯೆಗೆ ಪ್ರಯಣ ಬೆಳಸದಿರು. ಗಯೆಯಲ್ಲಿ ಇಳಿದು ರಾತ್ರಿ ಧರ್ಮಶಾಲೆಯಲಿ ತಂಗಿದರು. ಬೆಳಗಾಗುತ್ತಲೇ, ಒಬ್ಬ ಗಯಾವಾಲಾ (ಯಾತ್ರಿಕರಿಗೆ ವಸತಿ ಮತ್ತು ಊಟ ಸೌಕರ್ಯವನ್ನೊದಗಿಸುವ ಅರ್ಚಕ) ಬಂದು, ಯಾತ್ರಿಕರು ಎಲ್ಲರೂ ಆಗಲೇ ಹೊರಟಿದ್ದಾರೆ ಎಂದು ಹೇಳಿ ಇವರಿಗೆ ಕೂಡ ಹೊರಡಲು ಹೇಳಿದನು. ಶ್ಯಾಮ ಗಯೆಯಲ್ಲಿ ಪ್ಲೇಗ ಜಾಡ್ಯವೇನಾದರೂ ಇದೆಯೇ ಎಂದು ಗಯಾವಾಲಾನನ್ನು ಕೇಳಲು, ಅವನು ಇಲ್ಲ ಎಂದು ಉತ್ತರಿಸಿದನು. ಮತ್ತು ನೀವೇ ಬಂದು ನೋಡಿರಿ ಎಂದೂ ಹೇಳಿದನು. ಅನಂತರ ಅವರುಗಯಾವಾಲಾನೊಡನೆ ಹೊರಟರು. ಅವನ ಮನೆಯಲ್ಲಿ ತಂಗಿದರು. ಆಗ ಶ್ಯಾಮ ಅವರಿಗೆ ಆನಂದವಾಗಯಿತು. ಅವರ ಸಂತೋಷಕ್ಕೆ ಕಾರಣವೇನೆಂದರೆ, ಅವನ ಮನೆಯ ಪಡಸಾಲೆಯಲ್ಲಿ ಶ್ರೀಸಾಯಿಬಾಬಾ ಅವರ ದೊಡ್ಡ ಫೋಟೋ ಇದ್ದುದು. ಆ ಫೋಟೋ

ನೋಡಿದ ಕೂಡಲೇ ಶ್ಯಾಮ ಪರಮಾನಂದ ಭರಿತರಾದರು. ಆಗ ಅವರಿಗೆ "ಕಾಶಿ, ಪ್ರಯಾಗ ಯಾತ್ರೆಯ ನಂತರ ಶ್ಯಾಮನಿಗಿಂತ ನಾನು ಮುಂದಿರುತ್ತೇನೆ" ಎಂದು ಹೇಳಿದ ಬಾಬಾ ಅವರ ಮಾತಿನ ನೆನಪು ಮೂಡಿತು.

ನಯನಗಳಲ್ಲಿ ಆನಂದಬಾಷ್ಪ ಉಕ್ಕಿತು. ರೋಮಾಂಚನವಾಯಿತು. ಕಂಠವು ಗದ್ಗದವಾಯಿತು. ಅವರಿಗೆ ಪ್ಲೇಗ ಹೆದರಿಕೆ ಆಗಿರಬಹುದು ಎಂದು ಗಯಾವಾಲಾ ಗಾಬರಿಯಾದನು. ಆಗ ಶ್ಯಾಮ ಅವರು ಈ ಫೋಟೋ ಎಲ್ಲಿ ದೊರಕಿತು? ಎಂದು ಗಯಾವಾಲಾನನ್ನು ಕೇಳಲು ಅವನು "ಮನಮಾಡ ಮತ್ತು ಪುಣ್ಯತಂಬೆಗಳಲ್ಲಿ ಗಯಾ ಯಾತ್ರಿಕರಿಗೆ ನೆರವು ನೀಡುವ ಸುಮಾರು ೨೦೦-೩೦೦ ಜನ ನನ್ನ ನೌಕರರಿದ್ದಾರೆ. ಅವರಿಂದ 'ಬಾಬಾ ಅವರ ಕೀರ್ತಿ ತಿಳಿಯಿತು. ಸುಮಾರು ೧೨ ವರ್ಷಗಳ ಹಿಂದೆ ನಾನು ಬಾಬಾ ಅವರ ದರ್ಶನ ಪಡೆಯಲು ಶಿರ್ಡಿಗೆ ಹೋಗಿದ್ದೆ. ಆಗ ನನಗೆ ಶ್ಯಾಮ ಎಂಬುವರ ಮನೆಯಲ್ಲಿ ತೂಗುಹಾಕಿದ್ದ ಬಾಬಾ ಅವರ ಫೋಟೋದ ಮೇಲೆ ಆಶೆ ಹುಟ್ಟಿತು. ಬಾಬಾ ಅವರ ಅಪ್ಪಣೆ ಪಡೆದು ಶ್ಯಾಮ ಅವರು ಅದನ್ನು ನನ್ನ ಕೈಯಲ್ಲಿ ಇಟ್ಟರು. ಅದೇ ಈ ಫೋಟೋ" ಎಂದರು. ಆಗ ಶ್ಯಾಮ ಅವರಿಗೆ ಎಲ್ಲವೂ ನೆನಪಾಯಿತು. ಗಯಾವಾಲಾ ತನ್ನ ಮನೆಗೆ ಬಂದಿರುವ ವ್ಯಕ್ತಿ ಶ್ಯಾಮ ಎಂದು ತಿಳಿದ ಮೇಲೆ ಆನಂಭರಿತನಾದನು. ಅವರಿಬ್ಬರೂ ಬಹುಕಾಲ ಸಂಭಾಷಿಸಿದರು. ಗಯಾವಾಲಾ ಶ್ಯಾಮ ಅವರನ್ನು ಸಕಲ ಮರ್ಯಾದೆಗಳಿಂದ ಸತ್ಕರಿಸಿದನು. ಅವನು ಬಹಳ ಶ್ರೀಮಂತನಾಗಿದ್ದನು. ತಾನು ಪಲ್ಲಕ್ಕಿಯಲ್ಲಿ ಕುಳಿತು ಶ್ಯಾಮ ಅವರನ್ನು ಆನೆಯ ಮೇಲೇ ಕೂಡ್ರಿಸಿ, ಅವರ ಸಕಲ ಅನುಕೂಲತೆಗಳನ್ನು ಗಯೆಯಲ್ಲಿರುವ ತನಕ ಪ್ರೀತಿಯಂದ ನೋಡಿಕೊಂಡನು.

ಬಾಬಾ ಅವರ ಮಾತುಗಳು ಅಕ್ಷರಶ: ಸತ್ಯವಾಗಿ ಅವರು ಹೇಳಿದಂತೆ ನಡೆಯುತ್ತದೆ. ಎಂಬುದೇ ಈ ಕಥೆಯ ನೀತಿ. ಅವರು

ಸಕಲ ಜೀವಿಗಳಲ್ಲಿಯೂ ಸಮಪ್ರೀತಿಯುಳ್ಳವರಾಗಿ ಅವುಗಳಲ್ಲಿ ಐಕ್ಯರಾಗಿದ್ದರು. ಈ ಕೆಳಗಿನ ಘಟನೆಯು ಇದನ್ನು ಸ್ಥಿರಪಡಿಸುತ್ತದೆ.

## ಎರಡು ಆಡುಗಳು

ಒಂದು ಸಾರಿ ಬಾಬಾ ಅವರು ಲೇಂಡಿ ತೋಟದಿಂದ ಹಿಂದಿರುಗಿ ಬರುವಾಗ, ಒಂದು ಆಡಿನ ಹಿಂಡು ನೋಡಿದರು. ಅವುಗಳಲ್ಲಿ ಎರಡು ಮಾತ್ರ ಬಾಬಾ ಅವರನ್ನು ಆಕರ್ಷಿಸಿದವು. ಆಗ ಅವರು ಅವುಗಳ ಹತ್ತಿರ ಹೋಗಿ ಅವುಗಳನ್ನು ಮುದ್ದಾಡಿ ೩೨ ರೂಗಳನ್ನು ಕೊಟ್ಟು ಅವುಗಳನ್ನು ತೆಗೆದುಕೊಂಡರು. ಭಕ್ತರಿಗೆ ಬಾಬಾ ಅವರ ಈ ವಿಚಿತ್ರ ರೀತಿ ಅರ್ಥವಾಗಲಿಲ್ಲ. ಆ ಎರಡು ಆಡುಗಳಿಗೆ ಹೆಚ್ಚೆಂದರೆ ೮ ರೂಪಾಯಿ ಬೆಲೆ ಕೊಡಬಹುದು ಎಂದು ತಮ್ಮ-ತಮ್ಮೊಳಗೆ ಪಿಸುಗುಟ್ಟಿದರು. ಆದರೆ ಯಾರಿಗೂ ಬಾಬಾ ಅವರನ್ನು ಕೇಳುವ ಧೈರ್ಯವಿರಲಿಲ್ಲ. ಬಾಬಾ ಅವರೂ ಸುಮ್ಮನಿದ್ದರು. ಶ್ಯಾಮ ಮತ್ತು ತಾತ್ಯಾ ಕೋತೆ ಅವರು ಧೈರ್ಯದಿಂದ ಬಾಬಾ ಅವರನ್ನು ಈ ಬಗ್ಗೆ ಪ್ರಶ್ನಿಸಿದರು. ಆಗ ಬಾಬಾ, ತಮಗೆ ನೋಡಿಕೊಳ್ಳಲು, ಮನೆ -ಮಠ ಅಥವಾ ಸಂಸಾರವಿಲ್ಲ. ಆದುದರಿಂದ ಹಣವನ್ನು ಕೂಡಿ ಹಾಕುವುದರಿಂದ ಪ್ರಯೋಜನವೇನು? ಎಂದು ಕೇಳಿ ತಮ್ಮ ಸ್ವಂತ ಖರ್ಚಿನಿಂದ ಅವುಗಳಿಗೆ ತಿನ್ನಿಸಲು ನಾಲ್ಕು ಸೇರು ಕಡಲೆ ತರಿಸಿ ಆಡುಗಳಿಗೆ ತಿನ್ನಲು ಹಾಕಿದರು. ಇದಾದ ನಂತರ ಅವರು ಆ ಆಡುಗಳನ್ನು ಅವುಗಳ ಮಾಲಕನಿಗೆ ಹಿಂತಿರುಗಿಸಿದರು. ಅನಂತರ ಆ ಆಡುಗಳಿಗೆ ಸಂಬಂಧಿಸಿದ ಪೂರ್ವಜನ್ಮದ ಕಥೆಯನ್ನು ಈ ರೀತಿ ಹೇಳಿದರು.

"ತಾತ್ಯಾ, ನೀವು ಈ ವ್ಯಾಪಾರದಲ್ಲಿ ನಾನು ಮೋಸಹೋದೇನೆಂದು ತಿಳಿದಿರುವಿರಿ. ಇಲ್ಲ, ನಾನು ಮೋಸ ಹೋಗಿಲ್ಲ. ಅವುಗಳ ಕಥೆ ಕೇಳಿರಿ: ಅವು ಪೂರ್ವಜನ್ಮದಲ್ಲಿ ಮನುಷ್ಯರಾಗಿ

ಅದೃಷ್ಟವಶಾತ್ ನನ್ನ ಸಂಗಡಿಗರಾಗಿದ್ದವು. ಅವರಿಬ್ಬರೂ ಸಹೋದರರಾಗಿದ್ದರು. ಬರಬರುತ್ತ ಪರಸ್ಪರ ವೈರಿಗಳಾದರು. ಹಿರಿಯವನು ಸೋಮಾರಿ ಇದ್ದು ಕಿರಿಯವನು ಚುರುಕಾಗಿ ಇದ್ದು ಬಹಳ ಹಣ ಸಂಪಾದನೆ ಮಾಡುತ್ತಿದ್ದನು. ಹಿರಿಯುವನು ಅತಿಯಾಸೆಯುಳ್ಳವನಾಗಿ, ಕಿರಿಯವನ ಎಲ್ಲ ಹಣವನ್ನು ನುಂಗುವ ಸಲುವಾಗಿ ಅವನನ್ನು ಕೊಲೆ ಮಾಡಲು ಯತ್ನಿಸಿದನು. ಅವರು ತಮ್ಮ ಸಂಬಂಧವನ್ನು ಮರೆತು ಜಗಳವಾಡಲು ಆರಂಭಿಸಿದರು. ಹಿರಿಯವನು ಕೊಲ್ಲುವ ಪ್ರಯತ್ನದಲ್ಲಿ ವಿಫಲನಾದನು. ಇಬ್ಬರಿಗೂ ಕಡು ವೈರತ್ವ ಬೆಳೆಯಿತು. ಒಂದು ದಿನ ಹಿರಿಯವ ಸಮಯ ಸಾಧಿಸಿ ತನ್ನ ದೊಣ್ಣೆಯಿಂದ ಕಿರಿಯವನ ತಲೆಗೆ ಬಲವಾದ ಏಟು ಕೊಟ್ಟನು. ಕಿರಿಯವನು ಕೋಪಗೊಂಡು ಕೊಡಲಿಯಿಂದ ಹೊಡೆದನು. ಈ ರೀತಿ ಇಬ್ಬರು ಗಾಯಗೊಂಡು ಸ್ಥಳದಲ್ಲಿಯೇ ಮೃತರಾದರು. ಆ ಕರ್ಮದಿಂದ ಅವರಿಬ್ಬರೂ ಈಗ ಆಡುಗಳಾಗಿ ಹುಟ್ಟಿರುತ್ತಾರೆ. ಅವು ಹೋಗುತ್ತಿರುವಾಗ ನಾನು ಅವರನ್ನು ಕೂಡಲೆ ಗುರುತಿಸಿದೆ. ಅವುಗಳ ನೆನಪಾಯಿತು. ಕನಿಕರದಿಂದ ಅವುಗಳಿಗೆ ಆಹಾರ ನೀಡಬೇಕೆನಿಸಿತು. ಆದುದರಿಂದ ನನ್ನ ಹತ್ತಿರ ಇದ್ದ ಎಲ್ಲ ಹಣವನ್ನು ಖರ್ಚುಮಾಡಿದೆ ಅದಕ್ಕಾಗಿ ನೀವು ನನ್ನನ್ನು ದೂಷಿಸುತ್ತಿರುವಿರಿ. ನಿಮಗೆ ಈ ವ್ಯಾಪಾರ ಸರಿಯಾಗಿ ತೋರಲಿಲ್ಲ. ಆದ್ದರಿಂದ ಅವುಗಳನ್ನು ತಿರುಗಿ ಅವುಗಳ ಮಾಲಿಕನಿಗೆ ಕೊಟ್ಟೆ" ಎಂದರು.

**ಶ್ರೀ ಸಾಯಿ ಪ್ರಣಾಮ**

# ೪೭ನೇ ಅಧ್ಯಾಯ

## ವೀರಬದ್ರಪ್ಪ ಮತ್ತು ಚೆನ್ನಬಸಪ್ಪ – ಕಪ್ಪೆ ಮತ್ತು ಸರ್ಪ – ಇವರ ಕಥೆಗಳು

ಬಾಬಾ ಅವರ ವದನಾರವಿಂದವು ಮಂಗಳಕರಾದುದ್ದು, ನಾವು ಅವರನ್ನು ಒಮ್ಮೆ ದೃಷ್ಟಿಸಿ ನೋಡಿದರೆ ಸಾಕು; ಅವರು ನಮ್ಮ ಪೂರ್ವಜನ್ಮದ ಅನೇಕ ದು:ಖಗಳನ್ನು ನಿರ್ಮೂಲ ಮಾಡಿ ನಮ್ಮನ್ನು ಆಶೀರ್ವದಿಸುತ್ತಾರೆ. ನಮ್ಮ ಮೇಲೆ ಅವರ ಕೃಪಾದೃಷ್ಟಿಯು ಬಿದ್ದರೆ ನಮ್ಮ ಕರ್ಮಬಂಧವು ಬಿಡುಗಡೆಯಾಗಿ ನಮಗೆ ಅತಿಶಯವಾದ ಆನಂದವು ದೊರಕುತ್ತದೆ. ಪರಮ ಪಾವನೆಯಾದ ಗಂಗೆಯು ತನ್ನಲ್ಲಿ ಮಿಂದವರೆಲ್ಲರ ಪಾಪಾಗಳೆಲ್ಲವನ್ನೂ ನಿರ್ಮೂಲ ಮಾಡುತ್ತಾಳೆ, ಅಲ್ಲವೆ! ಆದರೆ ಅವಳು ಸಂತರು ತನ್ನಲ್ಲಿ ಬಂದು ಮಿಂದು ಅವರ ಪಾದಧೂಳಿಯಿಂದ ತನ್ನಲ್ಲಿರುವ ಪಾಪಗಳು ಅಳಿಯಲೆಂದು ಆಶಿಸುತ್ತಾಳೆ. ಶ್ರೀ ಸಾಯಿಯು ಸಂತ ಶ್ರೇಷ್ಠರಲ್ಲಿ ಅನರ್ಘ್ಯರತ್ನ ಈಗ ಅವರೇ ಹೇಳಿರುವ ಈ ಕಥೆಗಳನ್ನು ಕೇಳಿರಿ.

### ಕಪ್ಪೆ ಮತ್ತು ಸರ್ಪ

ಒಂದು ದಿನ ಬೆಳಿಗ್ಗೆ ಉಪಹಾರವಾದ ನಂತರ ಅಡ್ಡಾಡುತ್ತ ಒಂದು ಸಣ್ಣ ನದಿಯ ದಡಕ್ಕೆ ಬಂದೆನು. ನನಗೆ ಆಯಾಸವಾಗಿತ್ತು. ಅಲ್ಲಿ ಸ್ವಲ್ಪ ವಿಶ್ರಮಿಸಕೊಂಡ ನಂತರ ಕೈಕಾಲು ತೊಳೆದು ಸ್ನಾನ ಮಾಡಿ ಕುಳಿತಿದ್ದೆ. ಗಾಳಿ ತಣ್ಣಗೆ ಬೀಸುತ್ತಿತ್ತು. ನಾನು ಚಿಲುಮೆ ಸೇದಲು ಸುರು ಮಾಡಿದೆ. ಆಗ ಒಂದು ಕಪ್ಪೆ 'ಡರಾಂವ' 'ಡರಾಂವ' ಎಂದು ಒದರುವ ಶಬ್ದ ಕೇಳಿ ಬಂದಿತು. ಚಿಲುಮೆ ಸೇದಬೇಕು ಎನ್ನುವುದರೊಳಗೆ ದಾರಿಕಾರನೊಬ್ಬನು ನನ್ನ ಸಮೀಪಕ್ಕೆ ಬಂದನು. ಅವನು ನನಗೆ ನಮಸ್ಕರಿಸಿ ತನ್ನ ಮನೆಗೆ ನನ್ನನ್ನು ಊಟಕ್ಕೆ ಆಮಂತ್ರಿಸಿದನು. ಅವನು ಚಿಲುಮೆ ಹೊತ್ತಿಸಿ ನನಗೆ ಕೊಟ್ಟನು.

ಪುನ: ಕಪ್ಪೆಯ ಶಬ್ದ ಕೇಳಿಸಿತು. ದಾರಿಕಾರನೂ ಕುತೂಹಲದಿಂದ ಅದು ಏನೆಂದು ಕೇಳಿದನು. ಆಗ ನಾನು "ಒಂದು ಕಪ್ಪೆ ತೊಂದರೆಯಲ್ಲಿ ಇದೆ. ಅದು ತನ್ನ ಹಿಂದಿನ ಜನ್ಮದ ಕರ್ಮಫಲವನ್ನು ಅನುಭವಿಸುತ್ತಿದೆ. ನಾವು ಪೂರ್ವಜನ್ಮದಲ್ಲಿ ಬಿತ್ತಿದ ಬೀಜದ ಫಲವನ್ನು ಈಗ ಅನುಭವಿಸಲೇಬೇಕು. ದು:ಖಿಸುವುದರಿಂದ ಏನೂ ಪ್ರಯೋಜನವಿಲ್ಲ" ಎಂದೆನು. ನಂತರ ದಾರಿಕಾರನು ಅವುಗಳನ್ನು ನೋಡಲು ಹೊರಟನು. ಆಗ ನಾನು "ಒಂದು ಕಪ್ಪೆ ಸರ್ಪದ ಬಾಯಿಗೆ ಸಿಕ್ಕು ಒದರುತ್ತಿದೆ. ಅವು ಎರಡೂ ಹಿಂದಿನ ಜನ್ಮದಲ್ಲಿ ವೈರಿಗಳಾಗಿದ್ದವು. ಈಗ ಅವು ತಮ್ಮ ಕರ್ಮಫಲವನ್ನು ಅನುಭವಿಸುತ್ತಿವೆ" ಎಂದೆನು. ಅವನು ಆ ಕಡೆ ಹೋಗಿ ನೋಡಲು ಒಂದು ಕಾಳಸರ್ಪವು ಒಂದು ದೊಡ್ಡ ಕಪ್ಪೆಯನ್ನು ಬಾಯಿಯಲ್ಲಿ ಹಿಡಿದಿದ್ದನ್ನು ಕಂಡನು.

ಅವನು ಹಿಂತಿರುಗಿ ಇನ್ನು ೧೦-೧೨ ನಿಮಿಷಗಳಲ್ಲಿ ಸರ್ಪವು ಕಪ್ಪೆಯನ್ನು ನುಂಗಿಬಿಡುವುದೆಂದು ತಿಳಿಸಿದನು. ಅದಕ್ಕೆ ನಾನು "ಸಾಧ್ಯವಿಲ್ಲ; ಅದರ ಅಪ್ಪನಾದ ನಾನು ಇಲ್ಲಿ ಇರುವಾಗ ಸರ್ಪವು ಸದನ್ನು ನುಂಗಲು ಸಾಧ್ಯವೇ? ಹಾಗಾದರೆ ನಾನು ಇಲ್ಲಿ ಇರುವುದಾದರೂ ಏಕೆ? ಕಪ್ಪೆಯನ್ನು ಹೇಗೆ ರಕ್ಷಿಸುವೆನೆಂಬುದನ್ನು ನೋಡು" ಎಂದೆನು.

ಚಿಲುಮೆ ಎಳೆದ ನಂತರ ನಾವು ಆ ಸ್ಥಳಕ್ಕೆ ಧಾವಿಸಿದೆವು. ಅವನು ಸರ್ಪವು ನಮ್ಮ ಮೇಲೆ ಎರಗಿ ಬೀಳುವುದೋ ಎಂಬ ಭಯದಿಂದ ನನ್ನನ್ನು ಮುಂದೆ ಹೋಗದಂತೆ ತಡೆದನು. ಅದನ್ನು ಲೆಕ್ಕಿಸದೆ ನಾನು ಮುಂದೆ ಹೋಗಿ ಆ ಸರ್ಪವನ್ನು ಕುರಿತು "ವೀರಭದ್ರಪ್ಪ ನಿನ್ನ ಶತ್ರುವಾದ ಬಸಪ್ಪನು ಕಪ್ಪೆಯಾಗಿ ಹುಟ್ಟಿದ ನಂತರವೂ ಪಶ್ಚಾತ್ತಾಪಗೊಂಡಿಲ್ಲವೆ? ನೀನು ಸಹ ಸರ್ಪವಾಗಿ ಹುಟ್ಟಿದ ನಂತರವೂ ನಿನ್ನ ದ್ವೇಷವನ್ನು ತ್ಯಜಿಸಿಲ್ಲವೆ? ನಾಚಿಕೆಯಿಂದ ನಿನ್ನ ದ್ವೇಷ ಬಿಟ್ಟು ಶಾಂತವಾಗಿರು" ಎಂದೆನು.

ಇದನ್ನು ಕೇಳಿದ ನಂತರ ಸರ್ಪವು ಕಪ್ಪೆಯನ್ನು ಬಿಟ್ಟು ನೀರಿನಲ್ಲಿ ಮುಳುಗಿ ಮಾಯವಾಯಿತು; ಕಪ್ಪೆಯು ಪೊದೆಯಲ್ಲಿ ಓಡಿ ಅಡಗಿತು.

ದಾರಿಕಾರನಿಗೆ ಆಶ್ಚರ್ಯವಾಯಿತು. ಅವನು "ನಿಮ್ಮ ಮಾತುಗಳನ್ನು ಕೇಳಿದ ನಂತರ ಹೇಗೆ ಸರ್ಪವು ಕಪ್ಪೆಯನ್ನು ಬಿಟ್ಟಿತು, ವೀರಬದ್ರಪ್ಪ ಯಾರು ಬಸಪ್ಪ ಯಾರು, ಅವರಿಬ್ಬರ ದ್ವೇಷಕ್ಕೆ ಕಾರಣವೇನು?" ಎಂದು ಕೇಳಿದನು. ಆಗ ನಾನು ಪುನ: ಮರದ ನೆರಳಿಗೆ ಬಂದು ಅವನಿಗೆ ಚಿಲುಮೆ ಕೊಟ್ಟು, ಆ ರಹಸ್ಯವನ್ನು ಹೇಳಿದೆನು:

"ನನ್ನ ಊರಿನಿಂದ ೪-೫ ಮೈಲಿಗಳ ದೂರದಲ್ಲಿ ಒಂದು ಮಹಾದೇವನ ದೇವಸ್ಥಾನವಿತ್ತು. ದೇವಸ್ಥಾನವು ಬಹಳ ಹಳೆಯದಾಗಿ ಬಿದ್ದುಹೋಗಿತ್ತು. ಅಲ್ಲಿಯ ನಿವಾಸಿಗಳು ಆ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಹಣ ಶೇಖರಿಸಿ ಅದರ ದುರಸ್ತಿ ಕಾರ್ಯವನ್ನಾರಂಭಿಸಿದರು. ಸ್ಥಳಿಯ ಶ್ರೀಮಂತನೊಬ್ಬನು ಕೋಶಾಧಿಕಾರಿಯನ್ನಾಗಿ ನೇಮಿಸಿ, ಮೇಲ್ವಿಚಾರಣೆಯನ್ನು ಅವನಿಗೆ ವಹಿಸಲಾಯಿತು. ಅವನು ಲೆಕ್ಕಪತ್ರಗಳನ್ನು ಸರಿಯಾಗಿ ಇಡಬೇಕಿತ್ತು. ಆದರೆ ಅವನು ಬಹಳ ಕೃಪಣ. ದೇವಸ್ಥಾನ ದುರಸ್ತಿಗಾಗಿ ಸ್ವಲ್ಪ ಹಣ ವೆಚ್ಚ ಮಾಡಿದನು. ಕೆಲಸ ಮಾತ್ರ ಮುಂದುವರಿಸಲಿಲ್ಲ ಹೀಗೆ ಎಲ್ಲ ಹಣವನ್ನು ವೆಚ್ಚಮಾಡಿದೆನೆಂದು ಹೇಳಿ ಸಾಕಷ್ಟು ಹಣವನ್ನು ಕಬಳಿಸಿದನು. ಮಾತಿನಲ್ಲಿ ಬಹಳ ಒರಟಾಗಿ ಕೆಲಸವು ನಡೆಯದಿದ್ದುದಕ್ಕೆ ಏನಾದರೂ ಕಾರಣ ಹೇಳಿ ಕಾಲವನ್ನು ಕಳೆಯುತ್ತಿದ್ದನು. ಜನರು ಅವನ ಹತ್ತಿರ ಹೋಗಿ ಅವನ ಸಹಾಯವಿಲ್ಲದೆ ದುರಸ್ತಿ ಕೆಲಸ ಶೀಘ್ರವಾಗಿ ಮುಗಿಯುವುದಿಲ್ಲ ಎಂದು ಹೇಳಿದರು. ಅವರು ಮತ್ತೊಂದು ಯೋಜನೆಯನ್ನು ತಯಾರಿಸಿ, ಹಣವನ್ನು ಅವನಿಗೆ ಕೂಡಿಸಿ ಕಳುಹಿಸಿದರು. ಅವನು ಅದನ್ನೂ ಸಹ ತಿಂದು ಹಾಕಿದುದರಿಂದ ದೇವಾಲಯ ಸರಿಪಡಿಸುವ ಕೆಲಸ ನಡೆಯಲೇ ಇಲ್ಲ. ಇದಾದ ಕೆಲವು

ದಿನಗಳ ನಂತರ ಮಹಾದೇವನು ಅವನ ಪತ್ನಿಯ ಕನಸಿನಲ್ಲಿ ಕಾಣಿಸಿಕೊಂಡು, "ನೀನು ಹೋಗಿ ದೇವಾಲಯದ ಗೋಪುರದ ಕೆಲಸಕ್ಕೆ ಕೈ ಹಾಕು. ನೀನು ಖರ್ಚುಮಾಡಿದುದಕ್ಕೆ ನೂರ್ಮಡಿಯಾಗಿ, ನಾನು ಕೊಡುವೆನು" ಎಂದು ಹೇಳಿದನು. ಅವಳು ತನ್ನ ಕನಸನ್ನು ಪತಿಗೆ ಹೇಳಿದಳು. ಅವನು ಇದನ್ನು ಕೈಗೊಂಡರೆ, ತನ್ನ ಕೈಯಿಂದ ಬಹಳ ಹಣ ವೆಚ್ಚವಾಗುವುದು ಎಂದು ಭಾವಿಸಿ ಅದು ಬರಿ ಕನಸು ಮಾತ್ರ ಎಂದು ಉದಾಸೀನ ಭಾವದಿಂದ ನಕ್ಕು ಇದನ್ನು ನಂಬಲಾಗದು; ಹಾಗಿದ್ದರೆ ಮಹಾದೇವ ನನಗೆ ಯಾಕೆ ಕಾಣಿಸಿಕೊಳ್ಳಬಾರದಾಗಿತ್ತು? ನಾನೇನು ನಿನ್ನಿಂದ ದೂರದಲ್ಲಿ ಇದ್ದೇನೆ? ಪತಿ –ಪತ್ನಿಯರಲ್ಲಿ ವೈಮನಸ್ಸು ತರಲು ಉದ್ದೇಶಿಸಿದ ಕೆಟ್ಟ ಸ್ವಪ್ನ ಅದು ಎಂದು ಸುಮ್ಮನಾದನು. ಅವಳೂ ಸಹ ಸುಮ್ಮನಿರಬೇಕಾಯಿತು.

ದಾನಿಗಳಿಂದ ದೇವರು ಅವರ ಅಪೇಕ್ಷೆಗೆ ವಿರುದ್ಧವಾದುದನ್ನು ಅಪೇಕ್ಷಿಸುವುದಿಲ್ಲ. ದಾನವು ಕೇವಲ ತೃಣ ಮಾತ್ರವಾದರೂ ಅದನ್ನು ಮನ:ಪೂರ್ವಕವಾಗಿ ಅರ್ಪಿಸಿದರೆ ದೇವರಿಗೆ ಪ್ರೀತಿ. ಕೆಲವು ದಿನಗಳ ನಂತರ ದೇವರು ಅವಳ ಸ್ವಪ್ನದಲ್ಲಿ ಮತ್ತೆ ಕಾಣಿಸಿಕೊಂಡು "ನಿನ್ನ ಪತಿಯನ್ನು ಕುರಿತು ಚಿಂತಿಸಬೇಡ. ಅವನ ಹಣದ ಅಗತ್ಯವಿಲ್ಲ. ನಿನಗೆ ಇಷ್ಟವಿದ್ರೆ ನಿನ್ನ ಸ್ವಂತ ಹಣವನ್ನು ಖರ್ಚು ಮಾಡು" ಎಂದು ಹೇಳಿ ಅಂತರ್ಧಾನನಾದನು. ಈ ವಿಚಾರವನ್ನು ಅವಳು ತನ್ನ ಪತಿಯೊಂದಿಗೆ ಸಮಾಲೋಚಿಸಿ ತನ್ನ ತವರುಮನೆಯವರು ಕೊಟ್ಟ ಆಭರಣಗಳನ್ನು ಜೀರ್ಣೋದ್ಧಾರ ಕಾರ್ಯನಿಮಿತ್ತ ಉಪಯೋಗಿಸಲು ನಿರ್ಧರಿಸಿದಳು. ಆ ಕೃಪಣನು ಈಗ ಪರಮಾತ್ಮನಿಗೆ ಸಹ ಮೋಸ ಮಾಡಬೇಕೆಂದು ಆಭರಣಗಳಿಗೆ ಕಡಿಮೆ ಬೆಲೆ ಕಟ್ಟಿ ೧೦೦೦ ರೂ.ಗಳಿಗೆ ತಾನೇ ಆ ಆಭರಣಗಳನ್ನು ತಾನೇ ಕೊಂಡುಕೊಂಡನು.ಆದರೆ ಆ ೧೦೦೦ ರೂ. ಗಳ ಬದಲಾಗಿ ದೇವರಿಗೋಸ್ಕರ ಒಂದು ಜಮೀನನ್ನು ಕೊಡುವುದಾಗಿ ಹೇಳಿದನು.

ಅದಕ್ಕೆ ಪತ್ನಿ ಒಪ್ಪಿದಳು. ಅದರೆ ಆ ಜಮೀನು ಡುಬಕಿ ಎಂಬ ಹೆಸರಿನ ಮುದುಕಿ ಅವನಿಗೆ ೨೦೦೦ ರೂಪಾಯಿಗಳಿಗೆ ವತ್ತೆ ಹಾಕಿದ್ದು ಇತ್ತು. ಅದು ಫಲವತ್ತ ಆಗಿರಲಿಲ್ಲ. ಆ ಭೂಮಿಯನ್ನು ಪೂಜಾರಿಯು ವಶಕ್ಕೆ ಕೊಡಲಾಯಿತು. ಕೆಲವು ಕಾಲದ ನಂತರ ಆಶ್ಚರ್ಯಕರವಾದ ಸಂಗತಿ ನಡೆದುಹೋಯಿತು. ಒಂದು ದಿನ ಭಯಂಕರ ಮಳೆ, ಬಿರುಗಾಳಿ ಬಂದು ಕೃಪಣನ ಮನೆಗೆ ಸಿಡಿಲು ಬಡಿದು ಅವನು, ಅವನ ಪತ್ನಿ ಮತ್ತು ಡಬಕಿ ಮೂವರೂ ಮೃತರಾದರು.

ಆ ಕೃಪಣನು ಮರುಜನ್ಮದಲ್ಲಿ ಮಥುರೆಯ ಬ್ರಾಹ್ಮಣ ವಂಶದಲ್ಲಿ ವೀರಭದ್ರಪ್ಪನಾಗಿ ಹುಟ್ಟಿದನು. ಅವನ ಹೆಂಡತಿಯು ದೇವಾಲಯದ ಪೂಜಾರಿಯ ಮಗಳಾಗಿಯೂ ಡುಬಕಿಯು ಚೆನ್ನಬಸಪ್ಪನಾಗಿಯೂ ಜನ್ಮತಾಳಿದರು. ಆ ದೇವಾಲಯದ ಅರ್ಚಕನು ನನ್ನ ಮಿತ್ರನಾಗಿದ್ದನು. ಅವನು ಆಗಾಗ್ಗೆ ನನ್ನ ಸಲಹೆ ಪಡೆಯುತ್ತಿದ್ದನು. ಅವನ ಪುತ್ರಿಯಾದ ಗೌರಿಯು ಸಹ ನನ್ನಲ್ಲಿ ಪ್ರೀತಿ, ವಿಶ್ವಾಸ ಮತ್ತು ಗೌರವದಿಂದ ಇದ್ದಳು. ಹುಡುಗಿಯು ಪ್ರಾಪ್ತ ವಯಸ್ಕಳಾದಳು. ಅರ್ಚಕನಿಗೆ ಅವಳ ಮದುವೆ ನೆರವೇರಿಸುವಂತೆ ಚಿಂತೆ ಶುರುವಾಯಿತು. ವರನನ್ನು ಹುಡುಕಹತ್ತಿದನು. ಗೌರಿಯನ್ನು ವೀರಬದ್ರಪ್ಪನಿಗೆ ಕೊಟ್ಟು ವಿವಾಹ ಮಾಡಲಾಯಿತು. ವೀರಬದ್ರಪ್ಪನು ಮೊದಮೊದಲು ನನ್ನಲ್ಲಿ ವಿಶ್ವಾಸ ಇಟ್ಟಿದ್ದನು. ಆದರೆ ಆ ಜನ್ಮದಲ್ಲಿಯೂ ಅವನಿಗೆ ಧನ ಲೋಭ ಬಹಳ ಇದ್ದಿತು.

ಕಾಲ ಉರುಳಿತು. ಗೌರಿಯ ಅದೃಷ್ಟದಿಂದ ಭೂಮಿಗೆ ಅತಿ ಹೆಚ್ಚು ಬೆಲೆ ಬಂದಿತು. ಆ ಶುಷ್ಕ ಜಮೀನಿಗೆ ಒಂದು ಲಕ್ಷ ರೂಪಾಯಿ ದೊರೆತವು (ಅವಳ ಆಭರಣದ ಬೆಲೆಯ ೧೦೦ರಷ್ಟು) ಅರ್ಧ ಹಣವು ನಗದಾಗಿ ಬಂದಿತು. ಉಳಿದ ಅರ್ಧ ಹಣವನ್ನು ೨೫ ಕಂತುಗಳಲ್ಲಿ ಕೊಡುವಂತೆ ತೀರ್ಮಾನವಾಯಿತು. ಆ ಹಣದ ವಿಷಯದಲ್ಲಿ ಕಲಹ ಹುಟ್ಟಿತು. ನನ್ನ ಹತ್ತಿರ ಪಂಚಾಯತಿಗೆ ಬಂದರು.

ಆಗ ನಾನು ಆ ಜಮೀನು ದೇವರಿಗೆ ಸೇರಿದ್ದು. ಅದರ ಹಕ್ಕು ಪೂಜಾರಿಯದೆಂದೂ, ಅದರ ಮಾಲೀಕರು ಗೌರಿ ಎಂದೂ, ಅವಳ ಅನುಮತಿ ಇಲ್ಲದೆ ಒಂದು ಕಾಸು ಕೂಡ ಮುಟ್ಟಲು ಅವಳ ಗಂಡನಿಗೆ ಆಧಿಕರವಿಲ್ಲವೆಂದೂ ತೀರ್ಮಾನ ಕೊಟ್ಟೆನು. ಇದನ್ನು ಕೇಳಿದ ವೀರಬದ್ರಪ್ಪನು ನನ್ನ ಮೇಲೆ ಕೋಪಗೊಂಡು ಗೌರಿಯ ಹಕ್ಕನ್ನು ಅಲ್ಲಗಳೆದು ನಾನು ಹಣಪಡೆಯಲು ಇಚ್ಛಿಸಿರುವೆನೆಂದು ಆರೋಪಿಸಿದನು. ಅವನ ನುಡಿಗಳನ್ನು ಕೇಳಿ, 'ದೇವರೇ' ಎಂದು ಸ್ತಬ್ಧನಾದೆನು. ವೀರಭದ್ರಪ್ಪನು ಹೆಂಡತಿಯನ್ನು ತೆಗಳಿದನು. ಗೌರಿಯು ಮಧ್ಯಾಹ್ನ ನನ್ನ ಹತ್ತಿರ ಬಂದು, "ನನ್ನ ಗಂಡನ ನುಡಿಗಳಿಂದ ನಿಮಗೆ ನೋವಾಗಿರಬಹುದು; ಅದರೆ ನೀವು ನನ್ನ ಕೈ ಬಿಡಬೇಡಿ" ಎಂದು ಅಂಗಲಾಚಿ ಬೇಡಿಕೊಂಡಳು. ಹೀಗೆ ಅವಳು ನನ್ನಲ್ಲಿ ಶರಣಾಗತಳಾದುದರಿಂದ ನಾನು ಸಪ್ತಸಮುದ್ರಗಳನ್ನಾದರೂ ದಾಟಿ ಅವಳನ್ನು ರಕ್ಷಿಸುವೆನೆಂದು ಅಭಯ ಕೊಟ್ಟೆನು. ಅದೇ ದಿನ ರಾತ್ರಿ ದೇವರು ಗೌರಿಯ ಸಪ್ನದಲ್ಲಿ ಕಾಣಿಸಿಕೊಂಡು "ಧನವೆಲ್ಲವೂ ನಿನಗೆ ಸೇರಿದ್ದು; ಅದನ್ನು ಯಾರಿಗೂ ಕೊಡಬೇಡ; ಚೆನ್ನಬಸಪ್ಪನನ್ನು ಸಂಧಿಸಿ ಅವನೊಡನೆ ಆಲೋಚಿಸಿ ಸ್ವಲ್ಪ ಹಣವನ್ನು ದೇವಾಲಯಕ್ಕೆ ವಿನಿಯೋಗಿಸಿ; ನಿನ್ನ ಸ್ವಂತ ಖರ್ಚಿಗೆ ಬೇಕಾದರೆ, ಮಸೀದಿಯಲ್ಲಿರುವ ಬಾಬಾ ಅವರ ಸಲಹೆ ಪಡೆ" ಎಂದು ಹೇಳಿ ಮಾಯವಾದನು. ಗೌರಿಯು ಇದನ್ನು ನನಗೆ ತಿಳಿಸಿದಳು. ನಾನು ಸರಿಯಾದ ಮಾರ್ಗದರ್ಶನ ನೀಡಿದೆ. "ಅಸಲನ್ನು ನೀನೇ ಇಟ್ಟುಕೊಂಡು, ಬಡ್ಡಿಯ ಅರ್ಧಬಾಗವನ್ನು ಚೆನ್ನಬಸಪ್ಪನಿಗೆ ಕೊಡು" ಎಂದು ಹೇಳಿ , "ವೀರಬದ್ರಪ್ಪನಿಗೆ ಇದರಲ್ಲಿ ಲೇಶಮಾತ್ರವೂ ಹಕ್ಕಿಲ್ಲ" ಎಂದೆನು. ಹೀಗೆ ಹೇಳುತ್ತಿರುವಾಗ ಚೆನ್ನಬಸಪ್ಪ ಮತ್ತು ವೀರಬದ್ರಪ್ಪನು ಇಬ್ಬರೂ ಕಲಹ ಮಾಡುತ್ತ ನನ್ನ ಬಳಿಗೆ ಬಂದರು. ನಾನು ಅವರನ್ನು ಸಮಾದಾನ ಮಾಡಲು ಯತ್ನಿಸಿ, ಗೌರಿಯ ಕಂಡ ಸ್ವಪ್ನವನ್ನು ಅವರಿಗೆ ತಿಳಿಸಿದೆನು. ವೀರಬದ್ರಪ್ಪನು ಅತಿಕೋಪದಿಂದ ಚೆನ್ನಬಸಪ್ಪನನ್ನು ಕೊಲೆಮಾಡುವುದಗಿ

ಹೆದರಿಸಿದನು. ಚೆನ್ನಬಸಪ್ಪ ಅಂಜುಬುರುಕ. ಅವನು ಬಂದು ನನ್ನ ಕಾಲುಗಳನ್ನು ಹಿಡಿದುಕೊಂಡನು. ಆಗ ನಾನು ಅವನನ್ನು ಕಾಪಾಡುತ್ತೇನೆ ಎಂದು ಭರವಸೆ ಕೊಟ್ಟೆನು.

ಕೆಲವು ಕಾಲದ ನಂತರ ಚೆನ್ನಬಸಪ್ಪನು ಗತಿಸಿದನು. ಈಗ ಚೆನ್ನಬಸಪ್ಪನು ಕಪ್ಪೆಯಾಗಿಯೂ ವೀರಬದ್ರಪ್ಪನು ಸರ್ಪವಾಗಿಯೂ ಇರುತ್ತಾರೆ. ಚೆನ್ನಬಸಪ್ಪನ ಅರ್ತಧ್ವನಿಯನ್ನು ಕೇಳಿ ನನ್ನ ಮಾತುಗಳು ನೆನಪಾದವು. ಅದುದರಿಂದ ನಾನು ಬಂದು ಅವನ್ನು ರಕ್ಷಿಸಿ ನನ್ನ ವಚನ ಪಾಲಿಸಿದೆನು. ಭಕ್ತರು ಅಪಾಯದಲ್ಲಿರುವಾಗ ದೇವರು ಅವರ ಕಡೆಗೆ ಹೋಗಿ ಅವರನ್ನು ಕಾಪಾಡುತ್ತಾನೆ. ನನ್ನನ್ನು ಇಲ್ಲಿಗೆ ಕಳುಹಿಸಿ ಕಪ್ಪೆಯನ್ನು (ಚೆನ್ನಬಸಪ್ಪನನ್ನು) ರಕ್ಷಿಸಿದನು. ಇದೆಲ್ಲ ಆ ಪರಮಾತ್ಮನ ಲೀಲೆ.

## ನೀತಿ

ಮನುಷ್ಯ ಮಾಡಿದ್ದನ್ನು ಅನುಭವಿಸಲೇಬೇಕು ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಹಣದ ಮೇಲಿನ ಆಶೆ ಅವನನ್ನು ಕೆಡಿಸುತ್ತದೆ. ಕೊನೆಗೆ ಅವನನ್ನು ನಾಶಗೊಳಿಸಸಿ, ಇತರರನ್ನೂ ನಾಶ ಮಾಡುತ್ತದೆ.

## ಶ್ರೀ ಸಾಯಿ ಪ್ರಣಾಮ

# ೪೮ನೇ ಅಧ್ಯಾಯ

## ಶೇವಡೆ ಅವರ ಭಕ್ತಿ– ಸಪಟಣೇಕರ ದಂಪತಿಗಳಿಗೆ ಸಂತತಿ

ಒಬ್ಬರು ಹೇಮಾಡಪಂತರನ್ನು ಸಾಯಿಬಾಬಾ ಅವರು ಗುರುಗಳೋ ಅಥವಾ ಸದ್ಗುರುಗಳೋ ಎಂದು ಕೇಳಿದರು. ಇದನ್ನು ವಿವರಿಸಲು ಹೇಮಾಡಪಂತರು ಸದ್ಗುರುವಿನ ಲಕ್ಷಣಗಳನ್ನು ವರ್ಣಿಸಿರುತ್ತಾರೆ.

### ಸದ್ಗುರುವಿನ ಲಕ್ಷಣಗಳು

ಯಾರು ವೇದಗಳನ್ನೂ, ವೇದಾಂತಗಳನ್ನೂ ಮತ್ತು ಶಾಸ್ತ್ರಗಳನ್ನೂ ಬೋಧಿಸುತ್ತಲೂ, ಯಾರು ತಮ್ಮ ಉಸಿರನ್ನು ಹತೋಟಿಯಲ್ಲಿ ಇಟ್ಟುಕೊಂಡು ಬ್ರಹ್ಮನನ್ನು ಕುರಿತು ಉಪನ್ಯಾಸ ಮಾಡುತ್ತಲೂ, ಯಾರು ಮಂತ್ರಗಳನ್ನು ಶಿಷ್ಯರಿಗೆ ಬೋಧಿಸಿ , ಅವುಗಳನ್ನು ಜಪಿಸಲು ಶಿಷ್ಯರಿಗೆ ಹೇಳಿ ಪ್ರತಿಫಲವನ್ನು ಹೊಂದಲು ನಿರ್ದಿಷ್ಟ ಕಾಲವನ್ನು ಸೂಚಿಸಲಾರರೋ ಯಾರು ಆತ್ಮಜ್ಞಾನವನ್ನು ನೀಡಲಾರರೋ ಯಾರು ಆತ್ಮಜ್ಞಾನವನ್ನು ಸ್ವತ: ಸಂಪಾದನೆ ಮಾಡಿರುವುದಿಲ್ಲವೋ ಅಂಥವರು ಸದ್ಗುರು ಎನಿಸುವುದಿಲ್ಲ. ಆದರೆ ಯಾರು ತಮ್ಮ ಉಪದೇಶಗಳಿಂದ, ನಮ್ಮಲ್ಲಿರುವ ಐಹಿಕ ಭೋಗಗಳ ಚಪಲತೆಯನ್ನು ದೂರಮಾಡಬಲ್ಲರೋ, ಯಾರು ನಮಗೆ ಆತ್ಮಜ್ಞಾನದ ನೈಜ ಸ್ವರೂಪವನ್ನು ತೋರಿಸಬಲ್ಲರೋ ಯಾರು ಆತ್ಮಜ್ಞಾನದ ಆಧ್ಯಾತ್ಮಿಕ ಮತ್ತು ಪ್ರಾಯೋಗಿಕ ವಿಧಾನಗಳಲ್ಲಿ ಪರಿಶ್ರಮ ಹೊಂದಿರುತ್ತಾರೆಯೋ ಅವರೇ ನಿಜವಾದ ಸದ್ಗುರುಗಳೆಂದು ನಾವು ಕರೆಯಬಹುದು. ತಾನೇ ಆತ್ಮಜ್ಞಾನವನ್ನು ಹೊಂದಿರದೆ ಇದ್ದವನು ಇತರರಿಗೆ ಏನು ದೊರಕಿಸಿ ಕೊಡಬಹುದು? ಸದ್ಗುರುವು ಕನಸಿನಲ್ಲಿಯೂ ಸಹ ತನ್ನ ಭಕ್ತರಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ಅದಕ್ಕೆ ಬದಲಾಗಿ ಅವನು ಶಿಷ್ಯರ ಸೇವೆ ಮಾಡಲಿಚ್ಛಿಸುತ್ತಾನೆ. ತಾನು ಮೇಲು ಶಿಷ್ಯರು ಕೀಳೆಂದು ಅವನು ಭಾವಿಸಲಾರ ತನ್ನ ಶಿಷ್ಯರನ್ನು ಸ್ವತ: ಮಕ್ಕಳಂತೆ

ಭಾವಿಸುತ್ತಾನೆ. ಸದ್ಗುರುವಿನ ಮುಖ್ಯ ಗುಣವೆಂದರೆ, ಅವನು ಶಾಂತಿಯ ನಿವಾಸ. ಅವನು ಯಾವಾಗಲೂ ನಿಶ್ಚಲನಾಗಿರುತ್ತಾನೆ. ತಾನು ವಿದ್ವಾಂಸನೆಂಬ ಅಹಂಕಾರ ಅವನಿಗೆ ಇರುವುದಿಲ್ಲ. ಶ್ರೀಮಂತರಾಗಲಿ, ಬಡವನಾಗಲಿ, ದೊಡ್ಡವರಾಗಲಿ, ಚಿಕ್ಕವರಾಗಲಿ ಎಲ್ಲರೂ ಅವನ ದೃಷ್ಟಿಯಲ್ಲಿ ಒಂದೇ.

ಕೇವಲ ಪೂರ್ವಜನ್ಮದ ಸುಕೃತ ಫಲದಿಂದ ಮಾತ್ರವೇ, ಶ್ರೀ ಸಾಯಿಬಾಬಾ ಅವರಂತಹ ಸದ್ಗುರುವಿನ ಸಂಪರ್ಕ ಹೊಂದಿ ಅವರಿಂದ ಆಶೀರ್ವದಿಸಲ್ಪಟ್ಟಿರುವುದಾಗಿ ಹೇಳಿರುತ್ತಾರೆ– ಶ್ರೀ ಹೇಮಾಡಪಂತರು. ಬಾಬಾ ಅವರು ತುಂಬಾ ಯೌವನದಲ್ಲಿಯೂ ಸಹ ಚಿಲುಮೆ ಒಂದನ್ನು ಬಿಟ್ಟರೆ ಇನ್ನಾವುದನ್ನೂ ಇಟ್ಟುಕೊಂಡಿರಲಿಲ್ಲ. ಅವರಿಗೆ ಸಂಸಾರವಾಗಲಿ, ಸ್ನೇಹಿತರಾಗಲಿ, ಮನೆಯಾಗಲಿ, ಯಾವ ಆಧಾರವೂ ಇರಲಿಲ್ಲ. ಹದಿನೆಂಟನೇ ವಯಸ್ಸಿನಲ್ಲಿಯೇ ಅವರು ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಅತೀತರಾಗಿದ್ದರು. ಯಾವಾಗಲೂ ನಿರ್ಭಯರಾಗಿ ಏಕಾಂತ ಸ್ಥಳದಲ್ಲಿ ಕುಳಿತು, ಆತ್ಮದಲ್ಲಿ ತಲ್ಲೀನರಾಗಿರುತ್ತಿದ್ದರು. ಅವರು ಜೀವಿಸಿದ್ದಾಗ ಯಾವ ತರದ ಅನುಭವಗಳಾದವೋ, ಅದೇ ತರದ ಅನುಭವ ಭಕ್ತರಿಗೆ ಈಗಲೂ ಆಗುತ್ತಿವೆ. ಭಕ್ತರ ನಿಷ್ಕಲಂಕ ಪ್ರೇಮವನ್ನು ಅರಿತು, ಅವರ ಹಿತಕ್ಕೋಸ್ಕರ, ಲೌಕಿಕದಲ್ಲಿ ಸಾಮಾನ್ಯ ಮನುಷ್ಯರಂತೆ ಬಾಬಾ ಅವರು ವರ್ತಿಸಿದರು. ಭಕ್ತರು ತಮ್ಮ ವಿಶ್ವಾಸ ಮತ್ತು ಭಕ್ತಿ ಎಂಬ ಹೃದಯದ ಸೊಡರನ್ನು ಅಣಿಮಾಡಿ, ಪ್ರೀತಿ ಎಂಬ ಬತ್ತಿಯಿಂದ ಅದನ್ನು ಉರಿಸಬೇಕು. ಹೀಗೆ ಮಾಡಿದರೆ ಜ್ಞಾನವೆಂಬ ಜ್ವಾಲೆ ಬೆಳಗಿ, ಪ್ರಕಾಶಮಾನವಾಗುತ್ತದೆ. ಪ್ರೀತಿ ಇಲ್ಲದ ಜ್ಞಾನ ಒಣ ಭೂಮಿಯಂತೆ; ಆ ತರದ ಜ್ಞಾನವನ್ನು ಯಾರೂ ಅಪೇಕ್ಷಿಸುವುದಿಲ್ಲ. ಪ್ರೀತಿ ಇಲ್ಲದೆ ತೃಪ್ತಿ ಇರುವುದೇ ಇಲ್ಲ. ಆದುದರಿಂದ ನಮ್ಮಲ್ಲಿ ನಿಶ್ಚಲವಾದ ಅಪಾರವಾದ ಪ್ರೇಮವಿರಬೇಕು. ಆ ಪ್ರೇಮವನ್ನು ಯಾರಿಂದ ವರ್ಣಿಸಲು ಸಾಧ್ಯ? ಅದರ ಮುಂದೆ

ಎಲ್ಲವೂ ಕ್ಷುಲ್ಲಕ. ಪ್ರೇಮವಿಲ್ಲದ ಪಠಣದಿಂದಾಗಲಿ, ಶ್ರವಣದಿಂದಾಗಲಿ ಏನೂ ಪ್ರಯೋಜನವಿಲ್ಲ. ಪ್ರೀತಿ ಅಥವಾ ಪ್ರೇಮದ ಹೊಂಬೆಳಕಿನಿಂದ ಭಕ್ತಿ, ಶಾಂತಿ, ವೈರಾಗ್ಯ ಮುಕ್ತಿ ಎಲ್ಲವೂ ದೊರಕುತ್ತವೆ. ಪ್ರೇಮವು ಯಾವುದರಲ್ಲಿಯೂ ತಾನಾಗಿಯೇ ಅಂಕುರಿಸುವುದಿಲ್ಲ. ಅದನ್ನೇ ಕುರಿತು ದೀರ್ಘವಾಗಿ ನಾವು ಶ್ರದ್ಧೆಯಿಂದ ಧ್ಯಾನ ಮಾಡಬೇಕು. ನಿಜವಾದ ಹಂಬಲ ಮತ್ತು ಸಂಯಮ ಇದ್ದರೆ ಪರಮಾತ್ಮನು ತಾನೇ ಸ್ವತಃ ಅವತರಿಸುವನು ಎಂಬುದನ್ನು ಭಕ್ತರು ಅರಿತುಕೊಳ್ಳಬೇಕು.

ಆದುದರಿಂದ ಗುರುವಿನೆಡೆಗೆ ಪರಿಶುದ್ಧವಾದ ಮನಸ್ಸಿನಿಂದ ಸಾಗಿ, ಅವನ ಪಾದಾರ್ಚನೆ ಮಾಡೋಣ. ಆಗ ನಾವು ಅವನಿಂದ ರಕ್ಷಿಸಲ್ಪಡುತ್ತೇವೆ.

ಈ ಕೆಳಗಿನ ಭಕ್ತರ ಅನುಭವಗಳು ಈ ನೀತಿಯನ್ನು ನಿದರ್ಶಿಸುತ್ತವೆ.

## ಸಪಟಣೇಕರ

ಅಕ್ಕಲಕೋಟೆಯ ಸಪಟಣೇಕರ ವಿದ್ಯಾರ್ಥಿಯಾಗಿ ಕಾನೂನು ವ್ಯಸಂಗ ಮಾಡುತ್ತಿದ್ದರು. ಅವರು ಒಂದು ದಿನ ತಮ್ಮ ಸಹ ವಿದ್ಯಾರ್ಥಿಯಾದ ಶೇವಡೆ ಅವರನ್ನು ಸಂಧಿಸಿದರು. ಇತರ ವಿದ್ಯಾರ್ಥಿಗಳು ಕೂಡ ಗುಂಪು ಕೂಡಿಕೊಂಡು ಅವರ ವ್ಯಾಸಂಗದ ಟಿಪ್ಪಣಿಗಳನ್ನು ಹೋಲಿಸಿಕೊಂಡರು. ಇದರಿಂದ ಶೇವಡೆಯವರು ಏನೂ ಓದಿಲ್ಲವೆಂದು ಅವರನ್ನು ಎಲ್ಲರೂ ಉಪಹಾಸ ಮಾಡಿದರು. ಆಗ ಅವರು "ಸರಿಯಾಗಿ ಓದದಿದ್ದರೂ ಪರವಾಗಿಲ್ಲ; ನನ್ನ ಸಾಯಿಬಾಬಾ ನನ್ನನ್ನು ಪಾಸು ಮಾಡಿಸುತ್ತಾರೆ" ಎಂದರು. ಸಪಟಣೇಕರ ಅವರಿಗೆ ಆಶ್ಚರ್ಯವಾಯಿತು. ಅವರು ಶೇವಡೆ ಅವರನ್ನು ಪಕ್ಕಕ್ಕೆ ಕರೆದು "ಸಾಯಿಬಾಬಾ ಅಂದರೆ ಯಾರು?" ಎಂದು ಕೇಳಿದರು. ಅದಕ್ಕೆ ಶೇವಡೆಯವರು "ಶಿರ್ಡಿಯ ಮಸೀದಿಯಲ್ಲಿ ಒಬ್ಬ ಫಕೀರರು

ವಾಸಿಸಿತ್ತಿದ್ದಾರೆ. ಮಹಾ ಸತ್ಪುರುಷರವರು. ಅವರು ಏಕೈಕ ವ್ಯಕ್ತಿ. ಪೂರ್ವಜನ್ಮದ ಪುಣ್ಯಫಲವಿದ್ದಲ್ಲಿ ಮಾತ್ರ ಅವರನ್ನು ನೋಡಲು ಸಾಧ್ಯ. ನಾನು ಅವರನ್ನು ಸಂಪೂರ್ಣವಾಗಿ ನಂಬಿದ್ದೇನೆ ಮತ್ತು ಅವರು ಹೇಳುವುದು ಎಂದಿಗೂ ಸುಳ್ಳಾಗುವುದಿಲ್ಲ. ನಾನು ಮುಂದಿನ ವರ್ಷ ತೇರ್ಗಡೆಯಾಗುವೆನೆಂದು ಕಳೆದ ವರ್ಷವೇ ಅವರು ಹೇಳಿದ್ದಾರೆ. ಆದುದರಿಂದ ನಾನು ಧೃಡ ನಂಬಿಕೆಯಿಂದ ಇದ್ದೇನೆ" ಎಂದರು. ಸಪಟಣೇಕರ ಅವರು ಇದನ್ನು ಕೇಳಿ ನಕ್ಕು ಅವರನ್ನು ಮತ್ತು ಬಾಬಾ ಅವರನ್ನೂ ಕುರಿತು ಹಾಸ್ಯ ಮಾಡಿದರು. ಮುಂದೆ ಇಬ್ಬರೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

## ಚಲ್ ಹಟ್

ಸಪಟಣೇಕರ ಅವರು ಅಕ್ಕಲಕೋಟೆಯಲ್ಲಿ ವಕೀಲಿವೃತ್ತಿ ಆರಂಭ ಮಾಡಿದರು. ಇದಾದ ಹತ್ತು ವರ್ಷಗಳ ನಂತರ ಅವರ ಮಗನು ಗಂಟಲು ವ್ಯಾಧಿಯಿಂದ ಮೃತನಾದನು. ಇದು ಅವರ ಹೃದಯವನ್ನು ಭೇದಿಸಿತು. ಗಾಣಗಾಪುರ ಮತ್ತು ಇತರ ಪವಿತ್ರ ತೀರ್ಥಯಾತ್ರೆಗಳನ್ನು ಮಾಡಿದರು. ಆದರೂ ಶಾಂತಿ ದೊರಕಲಿಲ್ಲ. ವೇದಾಂತ ಪಾರಾಯಣ ಮಾಡಿದರೂ ಕೂಡ ಶಾಂತಿ ಸಿಗಲಿಲ್ಲ. ಆಗ ಅವರಿಗೆ ಶೇವಡೆಯವರು ಹೇಳಿದ ಬಾಬಾ ಅವರ ಜ್ಞಾಪಕ ಬಂದಿತು. ಆಗ ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆಯಬೇಕೆಂದು ನಿರ್ಧರಿಸಿದರು. ಅವರು ತಮ್ಮ ಕಿರಿಯ ಸಹೋದರ ಪಂಡಿತರಾವನೊಡನೆ ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆದ ಮರುಕ್ಷಣವೇ ಆನಂದಭರಿತರಾದರು. ಅವರು ಬಾಬಾ ಅವರ ಹತ್ತಿರ ಹೋಗಿ, ಶುದ್ಧ ಮನಸ್ಸಿನಿಂದ ಹಣ್ಣುಹೂವುಗಳನ್ನು ಅವರ ಮುಂದಿಟ್ಟ ಕೂಡಲೆ ಬಾಬಾ ಅವರು ಇಲ್ಲಿಂದ "ಹೊರಟು ಹೋಗು" ("ಚಲ್ ಹಟ್") ಎಂದು ಆರ್ಭಟಿಸಿದರು. ಸಪಟಣೇಕರ ಅವರು ತಲೆ ತಗ್ಗಿಸಿ ದಿಕ್ಕು ತಪ್ಪಿ ಏನೂ ತಿಳಿಯದೆ ಪಕ್ಕಕ್ಕೆ ಸರಿದರು. ಯಾವ ರೀತಿಯಿಂದ ಬಾಬಾ

ಅವರನ್ನು ಸಂತುಷ್ಟಪಡಿಸಬೇಕೆಂಬುದನ್ನು ತಿಳಿಯಲು ಅವರು ಉತ್ಸುಕರಾದರು. ಕೆಲವರು ಬಾಳಾ ಶಿಂಪಿ ಕಡೆಗೆ ಹೋಗಲು ಹೇಳಿದರು. ಸಪಟಣೇಕರ ಶಿಂಪಿ ಅವರನ್ನು ಕಂಡು ಸಲಹೆ ಕೇಳಿದರು. ಅವರು ಬಾಬಾ ಅವರ ಫೋಟೋ ಒಂದು ತೆಗೆದುಕೊಂಡು ಅವರೊಡನೆ ಮಸೀದಿಗೆ ಬಂದರು. ಬಾಳಾ ಶಿಂಪಿ ಫೋಟೋ ತೆಗೆದುಕೊಂಡು ಬಾಬಾ ಅವರ ಕೈಗಿತ್ತರು ಮತ್ತು ಅವರು "ಯಾರ ಫೋಟೋ" ಎಂದು ಕೇಳಿದರು. ಬಾಬಾ ಅವರು ಸಪಟಣೇಕರ ಅವರ ಕಡೆಗೆ ಕೈಮಾಡಿ "ಅದು ಅವನ ಒಡೆಯನದು!" ಎಂದರು. ಮತ್ತು ಗಹಗಹಿಸಿ ನಕ್ಕರು. ಬಾಳಾ, ಬಾಬಾ ಅವರನ್ನು ನಗುವಿನ ಅರ್ಥವೇನೆಂದು ಕೇಳಿ, ಸಪಟಣೇಕರರಿಗೆ ಹತ್ತಿರ ಬರಲು ತಿಳಿಸಿದರು. ಸಪಟಣೇಕರ ಹತ್ತಿರ ಬಂದೊಡನೆ ಬಾಬಾ ಮತ್ತೆ "ಹೊರಟು ಹೋಗು" ಎಂದರು. ಆಗ ಅವರಿಗೆ ಏನೂ ತೋಚದಾಯಿತು. ಆಗ ಅವರಿಬ್ಬರೂ (ಬಾಳಾ ಮತ್ತು ಸಪಟಣೇಕರ) ಕೈ ಜೋಡಿಸಿ ಬಾಬಾ ಅವರ ಮುಂದೆ ನಿಂತರು. ಬಾಬಾ ಅವರು ಸಪಟಣೇಕರ ಅವರಿಗೆ "ಇಲ್ಲಿಂದ ಕೂಡಲೆ ಹೊರಟು ಹೋಗು" ಎಂದು ಮತ್ತೆ ಆಜ್ಞಾಪಿಸಿದರು. ಅವರ ಆಜ್ಞೆಯನ್ನು ಪಾಲಿಸದೆ ವಿಧಿ ಇರಲಿಲ್ಲ. ಸಪಟಣೇಕರ ಅವರು ಭಾರವಾದ ಹೃದಯದದಿಂದ ಶಿರ್ಡಿ ಬಿಟ್ಟು ಹೊರಟರು. "ಮುಂದಿನ ಸಲವಾದರೂ ದರ್ಶನಕ್ಕೆ ಮತ್ತು ಸೇವೆ ಅವಕಾಶ ಕೊಡಿ" ಎಂದು ಪ್ರಾರ್ಥಿಸಿದರು.

## ಶ್ರೀಮತಿ ಸಪಟಣೇಕರ

ಒಂದು ವರ್ಷಕಳೆಯಿತು. ಅದರೂ ಸಪಟಣೇಕರ ಅವರಿಗೆ ಶಾಂತಿ ದೊರಕಲಿಲ್ಲ. ಗಾಣಗಾಪುರಕ್ಕೆ ಮತ್ತೆ ಹೋಗಿ ಅಲ್ಲಿ ಕೆಲವು ದಿನ ಕಾಲ ಕಳೆದರು. ಅನಂತರ ಜಳಗಾಂವಕ್ಕೆ ಹೋಗಿ, ಕೊನೆಗೆ ಕಾಶಿಗೆ ಹೋಗುವುದೆಂದು ನಿರ್ಧರಿಸಿದರು. ಅವರು ಹೊರಡುವ ಒಂದು ದಿನ ಮುಂಚೆ ಅವರ ಪತ್ನಿಯವರಿಗೆ ಈ ರೀತಿ

ದೃಷ್ಟಾಂತವಾಯಿತು: ಕನಸಿನಲ್ಲಿ ಅವಳು ಬಾವಿಗೆ ನೀರು ತರಲು ಮಡಿಕೆಯೊಡನೆ ಹೋಗುತ್ತಿದ್ದಂತೆಯೂ ಮರದ ಕೆಳಗೆ ಕುಳಿತಿದ್ದ ಫಕೀರನೊಬ್ಬನು "ಮಗುವೇ, ಯಾಕೆ, ಈ ವ್ಯರ್ಥ ಶ್ರಮ? ನಾನು ನೀರು ತಂದುಕೊಡುವೆ" ಎಂದು ಹೇಳಿದ ಹಾಗೆ ಕಂಡು ಅವಳು ಹೆದರಿ ಓಡಹತ್ತಿದಳು. ಫಕೀರನು ಅವಳನ್ನು ಹಿಂಬಾಲಿಸಿದನು. ಅಷ್ಟರಲ್ಲಿ ಕನಸು ಮುಗಿದು ಕಣ್ಣು ತರೆದು ನೋಡಿದಳು. ಯಾರೂ ಇರಲಿಲ್ಲ. ಇದನ್ನು ಪತಿಗೆ ಹೇಳಿದಳು. ಅವರು ಇದು ಶುಭ ಶಕುನವೆಂದು ಮನಗೊಂಡು ಶಿರ್ಡಿಗೆ ಹೋಗಲು ನಿರ್ಧರಿಸಿದರು. ಶಿರ್ಡಿ ತಲುಪಿ, ಮಸೀದಿಗೆ ಹೋದಾಗ ಬಾಬಾ ಅವರು ಅಲ್ಲಿ ಇರಲಿಲ್ಲ. ಅವರು ಲೇಂಡಿ ತೋಟಕ್ಕೆ ಹೋಗಿದ್ದರು. ಅವರು ಮಸೀದಿಗೆ ಬರುವ ತನಕ ಕಾಯುತ್ತ ಕುಳಿತರು. ಶ್ರೀಮತಿಯವರು ಬಾಬಾ ಅವರನ್ನು ನೋಡಿ ತಾವು ಕನಸಿನಲ್ಲಿ ಕಂಡ ಫಕೀರನಂತೆಯೇ ಅವರು ಇದ್ದುದನ್ನು ಕಂಡು ಭಕ್ತಿಪೂರ್ವಕವಾಗಿ ಅವರಿಗೆ ನಮಸ್ಕರಿಸಿದಳು. ಮತ್ತು ಅವಳ ಭಕ್ತಿಗೆ ಮನಸೋತ ಬಾಬಾ ಅಲ್ಲಿದ್ದ ಬೇರೆ ಭಕ್ತರಿಗೆ ತಮ್ಮದೇ ಆದ ಒಂದು ರೀತಿಯಲ್ಲಿ ಕಥೆ ಹೇಳತೊಡಗಿದರು. "ನನ್ನ ಕೈಕಾಲುಗಳು, ಹೊಟ್ಟೆ, ಸೊಂಟ ಎಲ್ಲವೂ ಬಹಳ ದಿನಗಳಿಂದ ನೋಯುತ್ತಿವೆ. ನಾನು ಅನೇಕ ಔಷಧಗಳನ್ನು ತೆಗೆದುಕೊಂಡೆ. ಆದರೂ ಗುಣವಾಗಲೇ ಇಲ್ಲ. ಔಷಧ ಬಿಟ್ಟುಬಿಟ್ಟೆ. ಆದರೆ ಈಗ ಎಲ್ಲ ನೋವು ಇದ್ದಕ್ಕಿದ್ದ ಹಾಗೆಯೇ ಹೇಗೆ ಮಾಯವಾಗಿದೆ ಎಂದು ಆಶ್ಚರ್ಯಪಡುತ್ತಿದ್ದೇನೆ" ಎಂದರು. ಇಲ್ಲಿ ಬಾಬಾ ಯಾರದೇ ಹೆಸರನ್ನು ಸೂಚಿಸಲಿಲ್ಲವಾದರೂ ಈ ನೋವು ಶ್ರೀಮತಿಯವರದೇ ಆಗಿತ್ತು. ಬಾಬಾ ಅವರು ವರ್ಣಿಸಿದಂತೆ ಅವರ ನೋವು ಗುಣವಾಯಿತು.

ಆಗ ಶ್ರೀ ಸಪಟಣೇಕರ ಅವರು ದರ್ಶನ ಪಡೆಯಲು ಮುಂದೆ ಬಂದರು. ಆಗ್ಗೆಯೂ ಬಾಬಾ ಅವರು ಹಿಂದಿನಂತೆಯೇ "ಚಲ್ ಹಟ್" ಎಂದರು. ಆಗ ಅವರಿಗೆ ಬಾಬಾ ಅವರ ಅಸಮಾಧಾನಕ್ಕೆ

ತಮ್ಮ ಹಿಂದಿನ ಕರ್ಮಗಳೇ ಕಾರಣ ಎಂದ ತಿಳಿದು ಅವುಗಳನ್ನು ಸರಿಪಡಿಸಿಕೊಳ್ಳಬೇಕೆಂದು ನಿಶ್ಚಯಿಸಿದರು. ಅನಂತರ ಬಾಬಾ ಅವರ ಚರಣಕಮಲಗಳಿಗೆ ಎರಗಿದರು. ಆಗ ಬಾಬಾ ಸಪಟಣೆಕರ ಅವರನ್ನು ಆಶೀರ್ವದಿಸಿದರು. ಸಪಟಣೇಕರ ಬಾಬಾ ಅವರ ಪಾದ ಸಂವಾದನ ಮಾಡುತ್ತ ಕುಳಿತರು. ಆ ಸಮಯಕ್ಕೆ ಸರಿಯಾಗಿ ದನಕಾಯುವ ಒಬ್ಬ ಹೆಂಗಸು ಬಂದು ಬಾಬಾ ಅವರ ನಡ ತಿಕ್ಕುತ್ತ ಕುಳಿತಳು. ಆಗ ಬಾಬಾ ಅವರು ತಮ್ಮದೇ ಆದ ರೀತಿಯಲ್ಲಿ ಒಬ್ಬ ವರ್ತಕನ ಕಥೆ ಹೇಳತೊಡಗಿದರು. ಆಗ ಸಪಟಣೇಕರ ಅವರಿಗೆ ಅದು ತಮ್ಮ ಅನುಭವವೇ ಆಗಿರುವುದನ್ನು ಕಂಡು ಬಾಬಾ ಅವರಿಗೆ ಇದೆಲ್ಲ ಹೇಗೆ ಗೊತ್ತಾಯಿತು ಎಂದು ವಿಸ್ಮಿತರಾದರು. ಅವರು ಸರ್ವಜ್ಞರೆಂಬುದನ್ನು ಮನಗಂಡರು. ಈ ರೀತಿ ಅವರ ಮನದಲ್ಲಿ ವಿಚಾರತರಂಗ ಎದ್ದಾಗ ಬಾಬಾ ಅವರು ದನ ಕಾಯುವವಳನ್ನು ಕುರಿತು "ಇವನು ನಾನು, ಇವನ ಮಗನನ್ನು ಕೊಂದೆನೆಂದು ನನ್ನನ್ನು ದೂಷಿಸುತ್ತಾನೆ. ನಾನು ಮಕ್ಕಳನ್ನು ಕೊಲ್ಲುತ್ತೇನೆಯೇ? ಇವನು ಇಲ್ಲಿಗೆ ಬಂದು ಏಕೆ ಅಳಬೇಕು? ಈಗ ನೋಡು: ನಾನು ಅದೇ ಮಗುವನ್ನು ಅವನ ಪತ್ನಿಯ ಗರ್ಭದಲ್ಲಿ ಇಡುವೆನು" ಎಂದು ಹೇಳಿ ಅವನ ತಲೆಯ ಮೇಲೆ ಕೈಯಿಟ್ಟು ಸಮಾಧಾನಪಡಿಸಿ "ಈಗ ನಿನ್ನ ಚಿಂತೆ ದೂರವಾಯಿತು. ನನ್ನಲ್ಲಿ ಅಚಲವಾದ ನಂಬಿಕೆ ಇಡು. ನಿನ್ನ ಅಭೀಷ್ಟ ಈಡೇರುತ್ತದೆ" ಎಂದರು. ಸಪಟಣೇಕರ ಅವರ ಮನಸ್ಸು ಕರಗಿ ಕಂಬನಿಯಿಂದ ಬಾಬಾ ಅವರ ಪಾದಗಳನ್ನು ತೊಳೆದರು.

ಆನಂತರ ಅವರು ನೈವೇದ್ಯವನ್ನು ತಯಾರಿಸಿ, ಪೂಜಾ ಸಾಮಗ್ರಿಗಳೊಡನೆ ಪತ್ನಿ ಸಮೇತರಾಗಿ ಮಸೀದಿಗೆ ಬಂದು ಬಾಬಾ ಅವರಿಗೆ ಪೂಜೆ ಸಲ್ಲಿಸಿ, ನೈವೇದ್ಯ ಅರ್ಪಿಸಿ ಪ್ರಸಾದ ಸ್ವೀಕರಿಸಿದರು. ನಂತರ ಪ್ರತಿ ದಿನ ಇದೇ ರೀತಿ ಪೂಜಿಸಹತ್ತಿದರು. ಒಂದು ದಿನ ಮಸೀದಿಯಲ್ಲಿ ಬಹಳ ಜನಸಂದಣಿ ಇತ್ತು. ಸಪಟಣೇಕರ ಅವು ಸಂದಣಿಯಲ್ಲಿ ನುಗ್ಗಿ ಆಗಾಗ್ಗೆ ಬಾಬಾ ಅವರಿಗೆ ನಮಸ್ಕರಿಸುತ್ತಿದ್ದರು.

ಇದನ್ನು ನೋಡಿ ಬಾಬಾ ಸಪಟಣೇಕರ ಅವರಿಗೆ "ಯಾಕೆ ಬಹಳ ನಮಸ್ಕರಿಸುತ್ತಿರುವಿ. ಪ್ರೀತಿ ಮತ್ತು ಭಕ್ತಿಯಿಂದ ಒಂದು ನಮಸ್ಕಾರವೇ ಸಾಕು" ಎಂದರು. ಅಂದಿನ ರಾತ್ರಿ ಈ ಹಿಂದೆ ಹೇಳಿದ ಚಾವಡಿ ಮೆರವಣಿಗೆಯನ್ನು ಸಪಟಣೇಕರ ಕಂಡರು. ಆಗ ಬಾಬಾ ಅವರು ಅವರಿಗೆ ಪಂಢರಪುರದ ಪಾಂಡುರಂಗನಂತೆ ಕಂಡರು.

ಮಾರನೆಯ ದಿನ ಶಿರ್ಡಿಯಿಂದ ಹೊರಡುವುದಕ್ಕೆ ಮೊದಲು ಸಪಟಣೇಕರ ಅವರು ಬಾಬಾ ಅವರಿಗೆ ಒಂದು ರೂಪಾಯಿ ದಕ್ಷಿಣೆ ಕೊಡಬೇಕೆಂದೂ ಪುನ: ಕೇಳಿದರೆ ಇಲ್ಲ ಎಂದು ಹೇಳದೆ ತಮ್ಮ ಖರ್ಚಿಗೆ ಸ್ವಲ್ಪ ಹಣ ಇಟ್ಟುಕೊಂಡು ಉಳಿದಿದ್ದೆಲ್ಲವನ್ನೂ ಕೊಡಬೇಕೆಂದೂ ಯೋಚಿಸಿದರು. ಅವರು ಮಸೀದಿಗೆ ಹೋಗಿ ಒಂದು ರೂಪಾಯಿ ದಕ್ಷಿಣೆಯನ್ನು ಅರ್ಪಿಸಿದಾಗ ಅವರ ಇಚ್ಛೆಯಂತೆಯೇ ಬಾಬಾ ಅವರು ಇನ್ನೊಂದು ರೂಪಾಯಿ ಕೇಳಿದರು. ಅದನ್ನು ಸಪಟಣೇಕರ ಕೊಟ್ಟರು. ಆಗ ಬಾಬಾ ಅವರು "ಈ ತೆಂಗಿನಕಾಯಿಯನ್ನು ತೆಗೆದುಕೋ. ಇದನ್ನು ನಿನ್ನ ಪತ್ನಿಯ ಸೆರಗಿನಲ್ಲಿ ಹಾಕು. ಯಾವುದೊಂದು ಚಿಂತೆ ಬೇಡ; ಸುಖವಾಗಿ ಪ್ರಯಾಣ ಮಾಡು" ಎಂದರು. ಬಾಬಾ ಅವರು ಹೇಳಿದಂತೆ ಸಪಟಣೇಕರ ನಡೆದುಕೊಂಡರು. ಒಂದು ವರ್ಷದೊಳಗಾಗಿ ಅವರಿಗೆ ಪುತ್ರ ಸಂತಾನವಾಯಿತು. ಮಗುವಿನ ಎಂಟನೇ ತಿಂಗಳಿನಲ್ಲಿ ದಂಪತಿಗಳಿಬ್ಬರೂ ಮಗುವಿನೊಡನೆ ಶಿರ್ಡಿಗೆ ಬಂದರು. ಬಾಬಾ ಅವರ ಪಾದದಲ್ಲಿ ಮಗುವನ್ನು ಇಟ್ಟು "ದೇವರೆ, ನಿಮಗೆ ಸಾಷ್ಟಾಂಗ ನಮಸ್ಕಾರಗಳು. ನಿಮ್ಮ ಋಣ ತೀರಿಸುವ ಬಗೆ ನಮಗೆ ತಿಳಿಯದು. ಈ ಬಡವರನ್ನು ಆಶೀರ್ವದಿಸಿ ಕಾಪಾಡಿರಿ; ನಮಗೆ ನಿಮ್ಮ ಚರಣಗಳೇ ಸರ್ವಸ್ವ. ನಮ್ಮನ್ನು ಆಶೀರ್ವದಿಸಿರಿ" ಎಂದು ಪ್ರಾರ್ಥಿಸಿದರು.

**ಶ್ರೀ ಸಾಯಿ ಪ್ರಣಾಮ**

# ೪೯ನೇ ಅಧ್ಯಾಯ

## ಹರಿ ಕಾನೋಬ – ಸೋಮದೇವಸ್ವಾಮಿ – ನಾನಾ ಸಾಹೇಬ ಚಾಂದರಕರ

### ಇವರ ಅನುಭವಗಳು

ಬ್ರಹ್ಮನನ್ನು ಮತ್ತು ಸದ್ಗುರುವನ್ನು ಹೊಗಳಲು ವೇದಗಳಿಂದಲೂ ಪುರಾಣಗಳಿಂದಲೂ ಸಾಧ್ಯವಿಲ್ಲದೆ ಇರುವಾಗ ನಮ್ಮಂತಹ ಪಾಮರರು ಸದ್ಗುರುವಾದ ಸಾಯಿಬಾಬಾ ಅವರನ್ನು ವರ್ಣಿಸಲು ಹೇಗೆ ಸಾಧ್ಯ? ಈ ಬಗ್ಗೆ ನಾವು ಮೌನದಿಂದ ಇರುವುದೇ ಒಳ್ಳೆಯದು. ಮೌನವ್ರತವೇ ಸದ್ಗುರುವಿನ ವರ್ಣನೆಯ ಒಳ್ಳೆಯ ಮಾರ್ಗ. ಆದರೆ ಸಾಯಿಬಾಬಾ ಅವರ ಸದ್ಗುಣಗಳನ್ನು ನಮ್ಮ ಮೌನವ್ರತವನ್ನು ಮುರಿದು ನಮ್ಮ ಬಾಯಿ ತೆಗೆಯುವಂತೆ ಮಾಡುತ್ತದೆ. ಬಂಧು–ಬಳಗದವರು ಜೊತೆಯಲ್ಲಿ ಇಲ್ಲದಿದ್ದರೆ ಒಳ್ಳೆಯ ಆಹಾರವೂ ರುಚಿಸುವುದಿಲ್ಲ. ಆದರೆ ಅವರು ನಮ್ಮ ಹತ್ತಿರ ಇದ್ದರೆ ಅದಕ್ಕೆ ರುಚಿ ಬರುತ್ತದೆ. ಇದು ಸಾಯಿಲೀಲಾಮೃತಕ್ಕೂ ಅನ್ವಯಿಸುತ್ತದೆ. ಈ ಅಮೃತವನ್ನು ಒಬ್ಬರೇ ಸೇವಿಸಲಾಗುವುದಿಲ್ಲ. ಸ್ನೇಹಿತರು, ಬಂಧು–ಬಳಗದವರು ನಮ್ಮ ಜೊತೆ ಇದ್ದರೆ ಅದರ ರುಚಿಯೇ ಬೇರೆ.

ಶ್ರೀ ಸಾಯಿಬಾಬಾ ಅವರೇ ಸ್ವತಃ ತಮ್ಮ ಕಥೆಗಳನ್ನು ಬರೆಯುವಂತೆ ಪ್ರೇರಪಿಸಿ ಬರೆಯಿಸಿಕೊಳ್ಳುತ್ತಾರೆ. ಅವರಲ್ಲಿ ಶರಣಾಗತರಾಗಿ ಅವರನ್ನು ಭಕ್ತಿಯಿಂದ ಧ್ಯಾನಿಸುವುದೊಂದೇ ನಮ್ಮ ಕರ್ತವ್ಯ. ತಪಸ್ಸು ಮಾಡುವುದು, ಯಾತ್ರೆ, ಹರಕೆ, ತ್ಯಾಗ, ಧ್ಯಾನ, ಇವುಗಳಿಗಿಂತ ಉತ್ತಮವಾದುದು– ಸದ್ಗುರುವನ್ನು ಕುರಿತು ಧ್ಯಾನಿಸುವುದು. ಇದೆಲ್ಲಕ್ಕಿಂತ ಶ್ರೇಷ್ಠವಾದುದು ಬೇರೆ ಇನ್ನಿಲ್ಲ. ಕಾರಣ ನಾವು "ಸಾಯಿ" ನಾಮವನ್ನು ಉಚ್ಚರಿಸುತ್ತ ಅವರ ವಚನಗಳನ್ನು ಸ್ಮರಿಸುತ್ತ ಅವರ ಮಹಿಮೆಯ ಧ್ಯಾನ ಮಾಡುತ್ತ ತಲ್ಲೀನರಾಗಬೇಕು. ನಮ್ಮ ಸಂಸಾರ ಬಂಧನವನ್ನು

ತೊಲಗಿಸಲು ಇದಕ್ಕಿಂತ ಉತ್ತಮವಾದ ಬೇರೆ ಮಾರ್ಗ ಇನ್ನೊಂದಿಲ್ಲ. ಈ ಮೇಲೆ ಹೇಳಿದಂತೆ ನಮ್ಮ ಕರ್ತವ್ಯವನ್ನು ನಾವು ಪರಿಪಾಲಿಸಿದರೆ, ಸಾಯಿಯವರು ನಮ್ಮ ಸಹಾಯಕ್ಕೆ ಬಂದೇ ಬರುವರು ಮತ್ತು ಭವಬಂಧನದಿಂದ ನಮ್ಮನ್ನು ಮುಕ್ತ ಮಾಡುವರು."

## ಹರಿ ಕಾನೋಬಾ

ಮುಂಬಯಿಯ ಹರಿ ಕಾನೋಬಾ ಎಂಬುವರೊಬ್ಬರು ತಮ್ಮ ಬಂಧು ಮಿತ್ರರಿಂದ ಬಾಬಾ ಅವರ ಲೀಲೆಗಳನ್ನು ಕೇಳಿ, ಅನುಮಾನಿಸಿ ಅವುಗಳನ್ನು ಪರೀಕ್ಷಿಸಲು ಕೆಲವು ಮಿತ್ರರೊಡನೆ ಶಿರ್ಡಿಗೆ ಬಂದರು. ಜರತಾರಿ ಪೇಟಾ ತಲೆಗೆ ಸುತ್ತಿಕೊಂಡು ಹೊಸ ಚಪ್ಪಲಿ ಹಾಕಿಕೊಂಡು ಅವರು ಬಂದಿದ್ದರು. ದೂರದಿಂದಲೇ ಬಾಬಾ ಅವರನ್ನು ನೋಡಿ ನಮಸ್ಕರಿಸಬೇಕೆಂದು ಅವರು ಇಚ್ಛಿಸಿದ್ದರು. ತಮ್ಮ ಹೊಸ ಚಪ್ಪಲಿ ಎಲ್ಲಿ ಬಿಡಬೇಕೆಂದು ಬಹಳ ಯೋಚಿಸಿ ಕಡೆಗೆ ಹೊರಗಡೆ ಒಂದು ಮೂಲೆಯಲ್ಲಿ ಬಿಟ್ಟು ಮಸೀದಿ ಪ್ರವೇಶಿಸಿ ಮುಂದೆ ಬಾಬಾ ಅವರಿಗೆ ನಮಸ್ಕರಿಸಿ ಪ್ರಸಾದ ಸ್ವೀಕರಿಸಿ ಹಿಂತಿರುಗಿ ಬಂದು ನೋಡಿದಾಗ ಅವರ ಚಪ್ಪಲಿ ಇರಲಿಲ್ಲ. ಎಷ್ಟು ಹುಡುಕಿದರೂ ಅವು ಸಿಗದೆ ಅವರು ತಮ್ಮ ನಿವಾಸಕ್ಕೆ ಹಿಂತಿರುಗಿದರು.

ಅನಂತರ ಸ್ನಾನ ಮಾಡಿ, ದೇವರ ಪೂಜೆ ನೆರವೇರಿಸಿ. ನೈವೇದ್ಯವನ್ನು ಅರ್ಪಿಸಿ ಊಟಕ್ಕೆ ಕುಳಿತುಕೊಂಡರು. ಅದರೂ ಮನಸ್ಸಿನಲ್ಲಿ ಚಪ್ಪಲಿಗಳ ನೆನಪು ಬರುತ್ತಲೇ ಇತ್ತು. ಊಟವಾದ ನಂತರ ಕೈತೊಳೆಯಲು ಹೊರಗೆ ಬಂದರು. ಆಗ ಒಬ್ಬ ಹುಡುಗ ಇವರ ಕಡೆ ಬರುತ್ತಿರುವುದನ್ನು ನೋಡಿದರು. ಆ ಹುಡುಗ ಒಂದು ಜೊತೆ ಚಪ್ಪಲಿಗಳನ್ನು ಕೋಲಿನ ತುದಿಗೆ ಸಿಕ್ಕಿಸಿಕೊಂಡು ಕೈ ತೊಳೆಯುತ್ತಿದ್ದವರನ್ನು ಕುರಿತು "ಬಾಬಾ ಅವರು ಈ ಕೋಲು ಮತ್ತು ಚಪ್ಪಲಿ ಕೊಟ್ಟು 'ಹರೀಕಾ ಬೇಟಾ, ಜರೀಕಾ ಪೇಟಾ' ಎಂದು ಕೂಗುತ್ತ ಹೋಗು; ಯಾರಾದರೂ ಈ ಚಪ್ಪಲಿ ತಮ್ಮದೆಂದು ಕೇಳಿದರೆ

ಅವರ ಹೆಸರು ತಿಳಿದುಕೋ. ಅವರು ಕಾನೋಬನ ಮಗ ಎಂಬುದನ್ನು ಕೇಳಿ ತಿಳಿ. ಅವರು ಜರಿ ಪೇಟಾ ಹಾಕಿಕೊಂಡಿರುತ್ತಾರೆಯೇ ಎಂಬುದನ್ನು ನೋಡಿ ಅನಂತರ ಇವುಗಳನ್ನು ಕೊಡು ಎಂದು ಹೇಳಿದ್ದಾರೆ" ಎಂದನು. ಹರಿ ಕಾನೋಬಾ ಇದನ್ನು ಕೇಳಿ ಸಂತಸದಿಂದ ಅವನ ಹತ್ತಿರ ಬಂದು, ತಾವೇ ಹರಿಕಾನೋಬ ಎಂದೂ, ಕಾನೋಬನ ಪುತ್ರರೆಂದೂ ಹೇಳಿ ಜರಿ ಪೇಟಾವನ್ನೂ ಹುಡುಗನಿಗೆ ತೋರಿಸಿದರು. ಹುಡುಗನು ನಂತರ ಅವರಿಗೆ ಚಪ್ಪಲಿ ಕೊಟ್ಟನು. ಆಗ ಅವರು ನಾನು ಜರೀ ಪೇಟಾ ಹಾಕಿಕೊಂಡಿರುವುದು ಎಲ್ಲರಿಗೂ ಗೊತ್ತಿದೆ. ಬಾಬಾ ಅವರೂ ಸಹ ಇದನ್ನು ನೋಡಿರಬಹುದು. ಆದರೆ ನಾನು ಶಿರ್ಡಿಗೆ ಬರುತ್ತಿರುವುದು ಇದೇ ಮೊದಲು. ನನ್ನ ಹೆಸರು ಹರೀ ಕಾನೋಬ ಎಂದೂ, ನಾನು ಕಾನೋಬನ ಪುತ್ರನೆಂದೂ ಅವರಿಗೆ ಹೇಗೆ ತಿಳಿಯಿತು ಎಂದು ಯೋಚನಾ ಮಗ್ನರಾದರು. ಅವರು ಶಿರ್ಡಿಗೆ ಬಂದಿದ್ದುದು ಬಾಬಾ ಅವರನ್ನು ಪರೀಕ್ಷಿಸಲೋಸುಗ ಈ ಘಟನೆಯಿಂದ ಬಾಬಾ ಅವರು ನಿಜವಾದ ಸತ್ಪುರುಷರೆಂಬ ಅರಿವಾಗಿ ಅವರು ಮುಂಬಯಿಗೆ ಹಿಂತಿರುಗಿದರು.

## ಸೋಮದೇವ ಸ್ವಾಮಿ

ಈಗ ಬಾಬಾ ಅವರನ್ನು ಪರೀಕ್ಷಿಸುವುದಕ್ಕಾಗಿ ಬಂದ ಇನ್ನೊಬ್ಬರ ವಿಚಾರವನ್ನು ಪರಿಶೀಲಿಸೋಣ. ಕಾಕಾಸಾಹೇಬ ದೀಕ್ಷಿತರ ಸಹೋದರ ಭಾಯಿಜಿಯವರು ನಾಗಪುರದಲ್ಲಿ ವಾಸವಗಿದ್ದರು. ಅವರು ೧೯೦೬ರಲ್ಲಿ ಹಿಮಾಲಯ ಪರ್ವತಕ್ಕೆ ಹೋದಾಗ ಅಲ್ಲಿ ಉತ್ತರ ಕಾಶಿಯ ಹರಿದ್ವಾರದ ಶ್ರೀಸೋಮದೇವ ಸ್ವಾಮಿಯವರ ಪರಿಚಯವಾಯಿತು. ಮುಂದೆ ಐದು ವರ್ಷಗಳ ನಂತರ ಸೋಮದೇವಸ್ವಾಮಿ ನಾಗಾಪುರಕ್ಕೆ ಭಾಜಿಯವರ ಕಡೆಗೆ ಬಂದರು. ಅಲ್ಲಿ ಸಾಯಿಬಾಬಾ ಅವರ ಲೀಲೆಗಳನ್ನು ಕೇಳಿದರು. ಆಗ ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆಯಬೇಕೆಂದು ಅವರಿಗೆ ಇಚ್ಛೆಯಾಯಿತು. ಭಾಯಿಜಿಯವರಿಂದ ಪರಿಚಯ ಪತ್ರ

ಪಡೆದು ಶಿರ್ಡಿಗೆ ಹೊರಟರು. ಮನಮಾದ ಮತ್ತು ಕೋಪರಗಂವ ದಾಟಿದ ನಂತರ ಟಾಂಗಾ ಮಾಡಿಕೊಂಡು ಶಿರ್ಡಿಗೆ ನಡೆದರು. ಶಿರ್ಡಿ ಸಮೀಪಿಸುತ್ತಿರುವಾಗಲೇ ದೂರದಿಂದಲೇ ಮಸೀದಿಯ ಮೇಲೆ ಹಾರಾಡುತ್ತಿದ್ದ ಧ್ವಜವು ಸ್ವಾಮಿಯ ಕಣ್ಣಿಗೆ ಬಿತ್ತು. ಬೇರೆ ಬೇರೆ ಸಂತರ ಆಚರಣೆ ಬೇರೆ ಬೇರೆಯಾಗಿರುತ್ತದೆ. ಧ್ವಜವನ್ನು ನೋಡಿದ ತಕ್ಷಣವೇ ಅವರ ಮನಸ್ಸಿನಲ್ಲಿ "ಈ ಸಂತರಿಗೆ ಧ್ವಜದ ಮೋಹ ಏಕೆ? ಅದೇನು ಅವರ ಹಿರಿಮೆಯನ್ನು ವ್ಯಕ್ತಪಡಿಸುತ್ತದೆಯೇ?" ಎಂಬ ಭಾವನೆ ಮೂಡಿತು. ಅವರು ತಮ್ಮ ಸಹ -ಪ್ರಯಾಣಿಕರಿಗೆ, ಈ ಶಿರ್ಡಿ ಯಾತ್ರೆ ಬೇಡ ಹಿಂತಿರುಗುವೆನೆಂದು ಹೇಳಿದರು. ಆಗ ಅವರು "ಹಾಗಿದ್ದರೆ ನೀವು ಇಷ್ಟು ದೂರ ಬಂದಿದ್ದು ಏಕೆ? ಈ ಧ್ವಜ ನೋಡಿ ನಿಮ್ಮ ಮನಸ್ಸಿಗೆ ಅಶಾಂತಿಯುಂಟಾಯಿತು. ಶಿರ್ಡಿಯಲ್ಲಿ ರಥ, ಪಲ್ಲಕ್ಕಿ, ಕುದುರೆ ಮುಂತಾದ ಸರಂಜಾಮುಗಳನ್ನು ನೋಡಿದರೆ ನೀವು ಏನು ಅನ್ನಬಹುದು?" ಎಂದರು. ಆಗ ಸ್ವಾಮಿ "ಪಲ್ಲಕ್ಕಿ ಮುಂತಾದವುಗಳನ್ನು ಇಟ್ಟುಕೊಂಡಿರುವ ಅನೇಕ ಸಾಧು-ಸಂತರನ್ನು ನೋಡಿದ್ದೇನೆ. ಇವರನ್ನು ನೋಡುವುದಕ್ಕಿಂತ ಹಿಂತಿರುಗುವುದೇ ಲೇಸು" ಎಂದು ಹೇಳಿ ಹಿಂತಿರುಗಲು ಸಿದ್ಧರಾದರು. ಸಹ-ಪ್ರಯಾಣಿಕರು ಬಲವಂತ ಮಾಡಿ ಕುತರ್ಕ ಬಿಟ್ಟು ಅವರಿಗೆ ಮುಂದುವರೆಯುವಂತೆ ತಿಳಿಸಿದರು. ಬಾಬಾ ಅವರಿಗೆ ಅವುಗಳ ಮೇಲೆ ಆಸಕ್ತಿ ಇಲ್ಲವೆಂದೂ ಭಕ್ತರೇ ಅವರ ಮೇಲಿನ ಪ್ರೀತಿಗಾಗಿ ಅವೆಲ್ಲವನ್ನೂ ಇಟ್ಟಿರುತ್ತಾರೆ ಎಂದು ತಿಳಿಸಿದರು. ಹೀಗೆ ಒತ್ತಾಯ ಮಾಡಿ ಅವರನು ಶಿರ್ಡಿಗೆ ಕರೆದುಕೊಂಡು ಬಂದರು. ಮಸೀದಿಯನ್ನು ಪ್ರವೇಶಿಸಿ ಬಾಬಾ ಅವರನ್ನು ನೋಡಿದೊಡನೆಯೇ ಅವರ ಮನಸ್ಸು ಕರಗಿತು. ನಯನಗಳಲ್ಲಿ ಅಶ್ರುಗಳು ತುಂಬಿದವು. ಕಂಠವು ಗದ್ಗದವಾಯಿತು. ಅವರ ಗುರುವಿನ ನೆನಪು ಬಂದಿತು. ಅವರ ಶಂಕೆಗಳೆಲ್ಲವೂ ಮಾಯವಾದವು. ಬಾಬಾ ಅವರ ಪಾದಧೂಳಿಯಲ್ಲಿ ಹೊರಳಾಡಬೇಕೆಂದು ಇಚ್ಛಿಸಿ ಅವರನ್ನು ಸಮೀಪಿಸಿದರು. ಆಗ ಬಾಬಾ ಅವರು ಕೋಪದಿಂದ "ನಮ್ಮಭೂಷಣ

ವಸ್ತುಗಳು ನಮ್ಮಲ್ಲಿಯೇ ಇರಲಿ. ನೀನು ಮನೆಗೆ ಹೋಗು. ಮಸೀದಿಗೆ ಪುನ: ಬಂದರೆ ಜೋಕೆ! ಇದು ಸಂತರ ಲಕ್ಷಣವೇ? ಇಲ್ಲಿ ಒಂದು ಕ್ಷಣವು ನಿಲ್ಲಬೇಡ" ಎಂದರು. ಸ್ವಾಮಿಯವರು ಚಕಿತರಾದರು. ಬಾಬಾ ಅವರಿಗೆ ತಮ್ಮ ಇಂಗಿತ ಅರಿವಾಗಿದೆ ಎಂದು ತಿಳಿಸಿದರು. ಎಂತಹ ಜ್ಞಾನಿಗಳಿವರು! ಅವರು ಕೆಲವರನ್ನು ಆಲಿಂಗಿಸುತ್ತಲೂ, ಕೆಲವರ ಮಸ್ತಕದ ಮೇಲೆ ಅಭಯ ಹಸ್ತವನ್ನು ನೀಡುತ್ತಲೂ ಇರುವುದನ್ನು ಸೋಮದೇವಸ್ವಾಮಿ ಕಂಡರು. ಅನಂತರ ಸೋಮದೇವಸ್ವಾಮಿ ತಮ್ಮ ನಡತೆ ಸರಿಯಾಗಿರಲಿಲ್ಲವೆಂದೂ ಬಾಬಾ ಅವರ ಆಕ್ರೋಶವು ಪರೋಕ್ಷವಾದ ಆಶೀರ್ವಾದವೆಂದೂ ಬಗೆದರು.

## ನಾನಾಸಾಹೇಬ ಚಾಂದೋರಕರ

ಹೇಮಾಡಪಂತರು ನಾನಾಸಾಹೇಬರ ಅನುಭವವನ್ನು ಕುರಿತು ಬರೆದು ಈ ಅಧ್ಯಾಯವನ್ನು ಮುಕ್ತಾಯ ಮಾಡಿರುತ್ತಾರೆ.

ಒಂದು ದಿನ ನಾನಾವರು ಮ್ಹಾಳಸಾಪತಿ ಮತ್ತಿತರೊಡನೆ ಮಸೀದಿಯಲ್ಲಿ ಕುಳಿತಿರುವಾಗ ವೈಜಾಪುರದಿಂದ ಒಬ್ಬ ಮಹಮ್ಮದೀಯನು ಕುಟುಂಬ ಸಮೇತ ಬಾಬಾ ಅವರ ದರ್ಶನಕ್ಕೆ ಬಂದನು. ಅವನ ಸಂಗಡವಿದ್ದ ಘೋಷಾ ಸ್ತ್ರೀಯರನ್ನು ನೋಡಿ ನಾನಾ ಅವರು ಎದ್ದು ಹೋಗಲು ಪ್ರಯತ್ನಪಟ್ಟರು. ಆಗ ಬಾಬಾ ಅವರು ಅವರನ್ನು ತಡೆದರು. ಅವಳು ಬಾಬಾ ಅವರಿಗೆ ನಮಸ್ಕರಿಸಲು ಮುಖದ ಪರದೆಯನ್ನು ಎತ್ತಿದಾಗ ನಾನಾ ಅವಳ ಸೌಂದರ್ಯವನ್ನು ನೋಡಿದರು. ನಮಸ್ಕರಿಸಿದ ನಂತರ ಅವಳು ಮತ್ತೆ ಮುಸುಕು ಹಾಕಿಕೊಂಡಳು. ಅವಳ ಸೌಂದರ್ಯವನ್ನು ಮೊತ್ತೊಮ್ಮೆ ನೋಡಲು ನಾನಾ ಇಚ್ಛಿಸಿದರು. ಅವರೆಲ್ಲರೂ ಅಲ್ಲಿಂದ ಹೊರಟು ಹೋದ ನಂತರ ಬಾಬಾ ನಾನಾ ಅವರನ್ನು ಕುರಿತು, "ನಾನಾ, ವೃಥಾ ಏಕೆ ತಳಮಳಗೊಂಡಿರುವಿ? ಇಂದ್ರಿಯಗಳು ತಮಗೆ ನೇಮಿಸಿದ ಕೆಲಸವನ್ನು ಮಾಡುತ್ತಿರಲಿ. ನಾವು ಅವುಗಳ ಗೊಡವೆಗೆ ಹೋಗಬಾರದು. ದೇವರು

ಸುಂದರವಾದ ಪ್ರಪಂಚವನ್ನು ನಿರ್ಮಿಸಿದ್ದಾನೆ. ಅವನ ಗುಣ-ಗ್ರಹಣ ಮಾಡುವುದು ನಮ್ಮ ಕರ್ತವ್ಯ. ಮನಸ್ಸು ಕ್ರಮೇಣ ಸ್ಥಿರವಾಗಿ ಸಮಾಧಾನ ಹೊಂದುತ್ತದೆ. ಮುಂದಿನ ಬಾಗಿಲು ತೆರೆದಿರುವಾಗ ಹಿಂದಿನ ಬಾಗಿಲಿನಿಂದ ಏಕೆ ಬರಬೇಕು? ಅಂತರಂಗ ಪರಿಶುದ್ಧವಾಗಿದ್ದರೆ ಯಾವ ನಷ್ಟವೂ ಆಗಲಾರದು. ನಮ್ಮಲ್ಲಿ ದುರಾಲೋಚನೆ ಇಲ್ಲದಿದ್ದರೆ ನಾವು ಯಾರಿಗೂ ಹೆದರಬೇಕಿಲ್ಲ. ಕಣ್ಣು ತಮ್ಮ ಕರ್ತವ್ಯ ಮಾಡುತ್ತಿರಲಿ. ಅದಕ್ಕೆ ನಾವೇಕೆ ನಾಚಿಕೊಂಡು ಹೆದರಬೇಕು?" ಎಂದರು.

ಶ್ಯಾಮ ಅವರು ಸಹ ಅಲ್ಲಿಯೇ ಇದ್ದರು. ಆದರೆ ಬಾಬಾ ಅವರ ಮಾತುಗಳು ಅವರಿಗೆ ಅರ್ಥವಾಗಲಿಲ್ಲ. ಮನೆಗೆ ಹೋಗುವಾಗ ದಾರಿಯಲ್ಲಿ ನಾನಾ ಅವರನ್ನು ವಿಚಾರಿಸಿದರು. ಆಗ ನಾನಾಸಾಹೇಬ "ಆ ಸ್ತ್ರೀಯ ಸುಂದರ ಮುಖ ನೋಡಿ ನನ್ನ ಮನಸ್ಸು ಅಶಾಂತತೆಯಿಂದ ಇತ್ತು. ಬಾಬಾ ಅವರು ಅದನ್ನು ಅರಿತು ನನಗೆ ಈ ರೀತಿ ಹಿತವಚನ ನುಡಿದರು." ಎಂದು ಹೇಳಿ ಕೆಳಕಂಡಂತೆ ವಿವರಿಸಿದರು.

"ನಮ್ಮ ಮನಸ್ಸು ಸ್ವಭಾವತ: ಚಂಚಲವಾದದ್ದು. ಆದರೆ ಅದರ ನಿರಂಕುಶ ಅಧಿಕಾರಕ್ಕೆ ನಾವು ಶರಣಾಗತರಾಗಬಾರದು. ಇಂದ್ರಿಯಗಳು ಅಶಾಂತಿಯಿಂದ ಇರಬಹುದು. ಆದರೆ ಶರೀರವನ್ನು ನಾವು ಹೇಗಾದರೂ ಮಾಡಿ ನಿಯಂತ್ರಿಸಿ ಅಸಹಿಷ್ಣುತೆಯನ್ನು ತಡೆಯಬೇಕು. ಇಂದ್ರಿಯಗಳು ವಿಷಯವನ್ನು ಅಪೇಕ್ಷಿಸುತ್ತವೆ; ಆದರೆ ನಾವು ಅವುಗಳನ್ನು ಹಿಂಬಾಲಿಸುತ್ತ ವಸ್ತುಗಳ ಲಾಲಾಸೆಗೆ ಮನಸೋಲಬಾರದು. ನಿಧಾನವಾಗಿ ಮತ್ತು ಕ್ರಮೇಣವಾಗ ಅಭ್ಯಾಸ ಬಲದಿಂದ ನಾವು ಇಂದ್ರಿಯಗಳನ್ನು ಜಯಿಸಬಹುದು. ನಾವು ಇಂದ್ರಿಯಗಳ ದಾಸರಾಗಬಾರದು. ಅವುಗಳನ್ನು ಸಮಯ -ಸಂದರ್ಭಗಳಿಗೆ ತಕ್ಕಂತೆ ಸರಿಯಾಗಿ ಉಪಯೋಗಿಸಬೇಕು. ಸೌಂದರ್ಯವು ನೋಟದ ವಸ್ತು. ನಾವು ವಸ್ತುಗಳ ಸೌಂದರ್ಯವನ್ನು ಭಯರಹಿತವಾಗಿ ನೋಡಬೇಕು ನಾಚಿಕೆಯಾಗಲಿ, ಹೆದರಿಕೆಯಾಗಲಿ, ಸ್ಥಳವಿರಬಾರದು. ಮೋಹ-ರಹಿತರಾಗಿ ಪರಮಾತ್ಮನಿಂದ ನಿರ್ಮಿತವಾದ

ಸೌಂದರ್ಯದ ಕೃತಿಗಳನ್ನು ನೋಡಿ ಆನಂದ ಪಡಬೇಕು. ಈ ರೀತಿ ನಾವು ಇಂದ್ರಿಯಗಳನ್ನು ಸುಲಭವಾಗಿ ಮತ್ತು ಸ್ವಾಭಾವಿಕವಾಗಿ ಹತೋಟಿಯಲ್ಲಿ ಇಟ್ಟುಕೊಳ್ಳಬಹುದು. ಇದರಿಂದ ಆನಂದವನ್ನು ಅನುಭವಿಸುವಾಗಲೂ ಸಹ ಪರಮಾತ್ಮನ ನೆನಪು ಮೂಡುವುದು. ನಮ್ಮ ಬಾಹ್ಯೇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳದೆ ಮನಸ್ಸು, ಧರ್ಮ, ಅರ್ಥ, ಕಾಮಗಳಲ್ಲಿ ಸಿಲಿಕಿದರೆ ಈ ಜನನ–ಮರಣವೆಂಬ ವ್ಯೂಹದಿಂದ ನಮಗೆ ತಪ್ಪಿಸಿಕೊಳ್ಳಲು ಅಸಾಧ್ಯ. ಆದರೆ ನಾವು ವಿವೇಕವನ್ನು ನಮ್ಮ ಸಾರಥಿಯನ್ನಾಗಿ ಮಾಡಿಕೊಂಡರೆ ಇಂದ್ರಿಯಗಳು ದಾರಿ ತಪ್ಪಿ ಹೋಗದಂತೆ ಮಾಡಬಹುದು. ಇಂತಹ ಸಾರಥಿಯಿಂದ ನಾವು ಶಾಂತಿ ಸಾಗರವಾದ ಸಾಯಿ ಪಾದವನ್ನು ಸುಲುಭವಾಗಿ ಸೇರಬಹುದು."

**ಶ್ರೀಸಾಯಿ ಪ್ರಣಾಮ.**

# ೫೦ನೇ ಅಧ್ಯಾಯ

## ಕಾಕಾಸಾಹೇಬ ದೀಕ್ಷಿತ – ಶ್ರೀ ಟೇಂಬೆ ಸ್ವಾಮಿ – ಬಲರಾಮ ಧುರಂದರ ಇವರ ಅನುಭವಗಳು

(ದಾಭೋಲಕರ ವಿರಚಿತ ಮೂಲ ಸಚ್ಚರಿತೆಯ ೫೦ನೇ ಅಧ್ಯಾಯವು ೩೯ನೇ ಆಧ್ಯಾಯದ ವಿಷಯವನ್ನೇ ಕುರಿತು ಪ್ರಸ್ತಾಪಿಸಿರುವುದರಿಂದ ಅದನ್ನು ಅದರೊಡನೆಯೇ ಸೇರಿಸಿ, ಅದರ ೫೧ನೇ ಅಧ್ಯಾಯವನ್ನು ಇಲ್ಲಿ ೫೦ನೇ ಅಧ್ಯಾಯವನ್ನಾಗಿ ತೆಗೆದುಕೊಂಡಿದೆ.)

ಶ್ರೀ ಕೃಷ್ಣನಂತೆ ಗೀತಾಮೃತವನ್ನು ಬೋಧಿಸುತ್ತ ಭಕ್ತರ ಪಾಲಕನಾಗಿ ಅವರಿಗೆ ಸರ್ವಶಕ್ತಿಯನ್ನು ದಯಪಾಲಿಸುವ ಕರುಣಾಮಯಿ ಸಾಯಿ, ನಿನಗೆ ಜಯತು! ಓ ಸಾಯಿ, ಕೃಪಾದೃಷ್ಟಿಯಿಂದ ನೀನು ನಮ್ಮೆಡೆಗೆ ನೋಡಿ ನಮಗೆ ಆಶೀರ್ವದಿಸು!

ಮಲಯಗಿರಿಯಲ್ಲಿ ಚಂದನ ಮರಗಳು ಉಷ್ಣತೆಯನ್ನು ಹೋಗಲಾಡಿಸುವಂತೆ, ಮಾನವನಿಗೆ ಸುಖ-ಸಂತಸಗಳನ್ನು ಕೊಡಲು ಭೂಮಿಯ ಮೇಲೆ ಮಳೆಯಾಗುವಂತೆ ಅಥವಾ ವಸಂತ ಋತುವಿನಲ್ಲಿ ಪರಮಾತ್ಮನ ಪೂಜೆಗೆ ಸುಮನ ಪ್ರಕಟವಾಗುವಂತೆ ಈ ಸಾಯಿ ಚರಿತ್ರೆಯನ್ನು ಕೇಳುವವರಿಗೂ ಹೇಳುವವರಿಗೆ ಸುಖ-ಶಾಂತಿಗಳು ದೊರಕುತ್ತವೆ.

ಈ ಮಾತನ್ನು ನಿದರ್ಶಿಸುವ ಘಟನೆಯನ್ನು ಪರೀಕ್ಷಿಸೋಣ.

### ಕಾಕಾಸಾಹೇಬ ದೀಕ್ಷಿತ

ಶ್ರೀ ಹರಿ ಸೀತಾರಾಮ ಅಥವಾ ಕಾಕಾಸಾಹೇಬ ದೀಕ್ಷಿತರು ೧೮೬೪ರಲ್ಲಿ ಜನ್ಮ ತಾಳಿದರು. ಅವರ ಪ್ರೈಮರಿ ವ್ಯಾಸಂಗವು ಖಾಂಡ್ವಾದಲ್ಲಿಯೂ ಮತ್ತು ಹಿಂಗನಘಾಟದಲ್ಲಿಯೂ, ಸೆಕೆಂಡರಿ

ವ್ಯಾಸಂಗವು ನಾಗಪುರದಲ್ಲಿಯೂ ಆಯಿತು. ಉಚ್ಛ ವ್ಯಾಸಂಗಕ್ಕಾಗಿ ಅವರು ಮುಂಬಯಿಗೆ ಬಂದು ಮೊದಲು ವಿಲ್ಸನ್ ಕಾಲೇಜಿನಲ್ಲಿಯೂ, ನಂತರ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿಯೂ ವ್ಯಾಸಂಗ ಮಾಡಿದರು. ಪದವೀಧರರಾದ ನಂತರ ೧೮೮೩ರಲ್ಲಿ ಕಾಯಿದೆ ಮತ್ತು ಸೋಲಿಸಿಟರ ಪರೀಕ್ಷೆ ಮಾಡಿಕೊಂಡು ಕೆಲವು ಕಾಲ ಮೆಸರ್ಸ ಲಿಟಲ್ ಆ್ಯಂಡ್ ಕಂಪನಿಯಲ್ಲಿ ಸೋಲಿಸಿಟರ್ ಆಗಿ ಕೆಲಸ ಮಾಡಿದರು. ಆನಂತರ ತಮ್ಮದೇ ಆದ ಸೋಲಿಸಿಟರ ಸಂಸ್ಥೆ ಆರಂಭಿಸಿದರು. ೧೯೦೯ರ ತನಕ ಇವರಿಗೆ ಬಾಬಾ ಅವರ ಹೆಸರೇ ಗೊತ್ತಿರಲಿಲ್ಲ. ನಂತರ ಅವರು ಲೋಣಾವಳದಲ್ಲಿ ತಂಗಿದ್ದಾಗ ತಮ್ಮ ಹಳೆಯ ಸ್ನೇಹಿತರಾದ ಶ್ರೀ ನಾನಾಸಾಹೇಬ ಚಾಂದೋರಕರ ಅವರ ಸಂಪರ್ಕವಾಗಿ ಬಾಬಾ ಅವರ ಪರಮ ಭಕ್ತರಾದರು. ಅದು ಹೇಗೆಂಬುದನ್ನು ನೋಡೋಣ.

೧೯೦೯ರಲ್ಲಿ ದೀಕ್ಷಿತ ಮತ್ತು ಚಾಂದೋರಕರ ಅವರ ಭೆಟ್ಟಿಯಾಗಿ ಇಬ್ಬರೂ ಮಾತನಾಡುತ್ತ ಕುಳಿತರು. ಆಗ ಕಾಕಾ ಅವರು ತಾವು ಲಂಡನ್ನಿನಲ್ಲಿ ರೈಲು ಹತ್ತುವಾಗ ಕಾಲು ಜಾರಿ ಅಪಘಾತ ಹೇಗೆ ಸಂಭವಿಸಿತು ಎಂಬುದನ್ನು ವಿವರಿಸಿದರು. ಎಷ್ಟೋ ಚಿಕಿತ್ಸೆ ಮಾಡಿಸಿದರೂ ಕಾಲು ಸರಿಹೋಗಲಿಲ್ಲ ಎಂದು ಹೇಳಿದರು. ಆಗ ನಾನಾ ಅವರು ಕಾಕಾ ಅವರಿಗೆ ಕಾಲು ನೋವು ಗುಣವಾಗಿ ಕುಂಟುವುದು ತಪ್ಪಬೇಕಾಗಿದ್ದರೆ ಶ್ರೀ ಸದ್ಗುರು ಸಾಯಿಬಾಬಾ ಅವರ ದರ್ಶನ ಮಾಡಲು ಸಲಹೆ ಮಾಡಿದರು. ಅವರು ಬಾಬಾ ಅವರ ಬಗ್ಗೆ ಸಮಸ್ತ ವಿಷಯಗಳನ್ನೂ ತಿಳಿಸಿದರು. ಅವರು "ನನ್ನ ಭಕ್ತರು ಎಷ್ಟೇ ದೂರದಲ್ಲಿರಲಿ; ಸಪ್ತಸಮುದ್ರಗಳ ಆಚೆಯಿರಲಿ, ಅವರನ್ನು ಗುಬ್ಬಿಯ ಕಾಲಿಗೆ ಹುಡುಗರು ದಾರ ಕಟ್ಟಿ ಎಳೆದು ತರುವಂತೆ, ನಾನು ಅವರನ್ನು ಬರಮಾಡಿಕೊಳ್ಳುತ್ತೇನೆ" ಎಂಬ ವಚನವನ್ನು ಹೇಳಿದರು. ಆಗ ಕಾಕಾ ಅವರು ಇದನ್ನು ಕೇಳಿ ಸಂತಸದಿಂದ ಬಾಬಾ ಅವರಲ್ಲಿಗೆ ಹೋಗಿ ಅವರ ದರ್ಶನ ಪಡೆದು "ಈ ಕಾಲಿನ ಕುಂಟುತನ ಗುಣವಾಗದಿದ್ದರೂ ಅಡ್ಡಿ ಇಲ್ಲ. ಆದರೆ ನನ್ನ ಚಪಲ

ಬುದ್ಧಿಯನ್ನು ಸ್ಥಿಮಿತಗೊಳಿಸಿ ನನಗೆ ನಿತ್ಯಾನಂದವನ್ನು ದೊರಕಿಕೊಡುವಂತೆ ಪ್ರಾರ್ಥಿಸುತ್ತೇನೆ" ಎಂದರು.

ಇದಾದ ಕೆಲವು ಕಾಲದ ನಂತರ, ಕಾಕಾ ಸಾಹೇಬರು ಮುಂಬಯಿಯ ಶಾಸನ ಸಭೆಯ ಸದಸ್ಯತ್ವಕ್ಕೆ ಮತ ಪಡೆಯಲು ಅಹಮದನಗರಕ್ಕೆ ಬಂದು ಸರದಾರ ಕಾಕಾಸಾಹೇಬ ಮಿರೀಕರ ಅವರೊಡನೆ ತಂಗಿದ್ದರು. ಆ ಸಮಯಕ್ಕೆ ಸರಿಯಾಗಿ ಕೋಪರಗಾಂವದಲ್ಲಿ ಮಾಮಲೇದಾರರಾಗಿದ್ದ ಕಾಕಾ ಸಾಹೇಬರ ಮಿತ್ರ ಶ್ರೀ ಬಾಳಾಸಾಹೇಬ ಮಿರೀಕರ ಅವರು ಅಲ್ಲಿಗೆ ಬಂದರು. ಚುನಾವಣೆ ಕೆಲಸದ ನಂತರ ಕಾಕಾ ಅವರು ಶಿರ್ಡಿಗೆ ಹೋಗಬೇಕೆಂದು ಯೋಚಿಸಿದ್ದರು. ದೀಕ್ಷಿತರ ಜೊತೆಗೆ ಯಾರನ್ನು ಕಳುಹಿಸಬೇಕೆಂದು ಮಿರೀಕರ ಅವರು ಯೋಚಿಸುತ್ತಿದ್ದರು. ಆಗ ಶಿರ್ಡಿಯಲ್ಲಿ ಆಗಲೇ ಬಾಬಾ ಇವರ ಆಗಮನವನ್ನು ಕಾಯುತ್ತಿದ್ದರು. ಶ್ಯಾಮ ಅವರಿಗೆ ಅಹಮದನಗರದಿಂದ ಅವರ ಮಾವನಿಂದ ಅವರ ಪತ್ನಿಗೆ (ಶ್ಯಾಮ ಅವರ ಅತ್ತೆ) ಆರೋಗ್ಯ ತೀರ ಹದಗೆಟ್ಟಿದೆಯೆಂದು ತಂತಿ ಬಂದಿತು. ಶ್ಯಾಮ ಅವರು ಕೂಡಲೇ ಬಾಬ ಅವರ ಅಪ್ಪಣೆ ಪಡೆದು ಅಹಮದನಗರಕ್ಕೆ ಬಂದು ಅತ್ತೆಯವರನ್ನು ನೋಡಿ ಗುಣಮುಖರಾಗಿದ್ದುದನ್ನು ಕಂಡು ಸಂತಸಗೊಂಡರು. ನಾನಾಸಾಹೇಬ ಪಾನಸೆ ಮತ್ತು ಅಪ್ಪಾಸಾಹೇಬ ಗದ್ರೆ ಅವರು ಅಹಮದನಗರದಲ್ಲಿ ಆಗ ನಡೆದಿದ್ದ ಕುದುರೆಗಳ ಪ್ರದರ್ಶನಕ್ಕೆ ಹೋಗುವಾಗ ದಾರಿಯಲ್ಲಿ ಶ್ಯಾಮ ಅವರನ್ನು ಸಂದಿಸಿ ಕಾಕಾಸಾಹೇಬ ಮಿರೀಕರ ಅವರ ಮನೆಗೆ ಹೋಗಿ, ಶಿರ್ಡಿಗೆ ಹೋಗುವಾಗ ಕಾಕಾಸಾಹೇಬ ದೀಕ್ಷಿತರನ್ನೂ ಕರೆದುಕೊಂಡು ಹೋಗಿ ಎಂದರು. ಸಾಯಂಕಾಲ ಶ್ಯಾಮ ಅವರು ಮಿರೀಕರ ಅವರ ಮನೆಗೆ ಬಂದರು. ಕಾಕಾಸಾಹೇಬರ ಪರಿಚಯವಾಯಿತು. ಶ್ಯಾಮ ಮತ್ತು ಕಾಕಾಸಾಹೇಬ ದೀಕ್ಷಿತ ಇಬ್ಬರು ರಾತ್ರಿ ಹತ್ತು ಗಂಟೆಗೆ ರೈಲಿನಲ್ಲಿ ಕೋಪರಗಾಂವಕ್ಕೆ ಪ್ರಯಾಣ ಮಾಡಬೇಕೆಂದು ನಿಶ್ಚಯವಾಯಿತು. ಇದಾದ ನಂತರ

ಒಂದು ವಿಸ್ಮಯಕಾರಿ ಸಂಗತಿ ನೆರವೇರಿತು. ಬಾಳಾಸಾಹೇಬರು, ಬಾಬಾ ಅವರ ಫೋಟೋಕ್ಕೆ ಹಾಕಿದ ತೆರೆಯನ್ನು ತೆಗೆದು ಕಾಕಾದೀಕ್ಷಿತರಿಗೆ ತೋರಿಸಿದರು. ಶಿರ್ಡಿಗೆ ಹೋಗಿ ಕಾಣಬೇಕೆಂದಿದ್ದ ಬಾಬಾ ಅವರು ಆಗಲೇ ಫೋಟೋದ ರೂಪದಲ್ಲಿ ಈ ಸಂದರ್ಭದಲ್ಲಿ ತಮ್ಮನ್ನು ಸ್ವಾಗತಿಸುತ್ತಿದ್ದಾರೆಂದು ಕಾಕಾ ದೀಕ್ಷಿತ ಭಾವಿಸಿದರು. ಆ ಫೋಟೋ ಮೇಘಾ ಅವರಿಗೆ ಸೇರಿದ್ದಿತು. ಅದರ ಗಾಜು ಒಡೆದು ಹೋಗಿದ್ದರಿಂದ, ಮೇಘಾ ಅದನ್ನು ಸರಿಪಡಿಸುವುದಕ್ಕಾಗಿ ಶ್ಯಾಮ ಅವರ ಕೈಯಲ್ಲಿ ಕೊಟ್ಟು ಅಹಮದನಗರಕ್ಕೆ ಕಳುಹಿಸಿದ್ದರು. ಅದು ಸರಿಯಾಗಿ ಕಾಕಾ ಮತ್ತು ಶ್ಯಾಮ ಅವರ ಸಂಗಡ ಶಿರ್ಡಿಗೆ ಹೊರಟಿತು.

ಹತ್ತು ಗಂಟೆಗೆ ಮುಂಚಿತವಾಗಿಯೇ ರೈಲ್ವೆ ನಿಲ್ದಾಣ ಸೇರಿ, ಟಿಕೇಟು ಪಡೆದದ್ದಾಯಿತು; ರೈಲು ಗಾಡಿ ಬಂದಿತು. ಎರಡನೇ ತರಗತಿಯ ಬಂಡಿಯಲ್ಲಿ ಸ್ಥಳವೇ ಇರಲಿಲ್ಲ. ಅದೃಷ್ಟವಶಾತ್ ಆ ರೈಲಿನ ಗಾರ್ಡು ಕಾಕಾಸಾಹೇಬರಿಗೆ ಪರಿಚಿತರಾಗಿದ್ದರಿಂದ ಅವರು ಒಂದನೇ ತರಗತಿಯಲ್ಲಿ ಅವರಿಗೆ ಸ್ಥಳ ದೊರಕಿಸಿ ಕೊಟ್ಟರು. ಹೀಗೆ ಪ್ರಯಾಣ ಮಾಡಿ ಇಬ್ಬರೂ ಕೋಪರಗಾಂವದಲ್ಲಿ ಇಳಿದರು. ಅಲ್ಲಿ ಶಿರ್ಡಿಗೆ ಹೊರಡಲುನುವಾಗಿದ್ದ ನಾನಾಸಾಹೇಬರನ್ನು ಕಾಕಾ ಆಕಸ್ಮಾತ್ತಾಗಿ ಸಂದಿಸಿದರು. ಆಗ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಕಾಕಾ ಮತ್ತು ನಾನಾ ಪರಸ್ಪರ ಆಲಿಂಗಿಸಿ, ಪವಿತ್ರವಾದ ಗೋದಾವರಿ ತೀರ್ಥದಲ್ಲಿ ಮಿಂದು ಶಿರ್ಡಿಗೆ ಹೊರಟರು. ಅಲ್ಲಿಗೆ ಬಂದ ನಂತರ ಬಾಬಾ ಅವರ ದರ್ಶನ ಪಡೆದರು. ಆ ಕ್ಷಣದಲ್ಲಿಯೇ ಅವರ ಮನಸ್ಸು ಕರಗಿ, ನೇತ್ರಗಳಲ್ಲಿ ಆನಂದಬಾಷ್ಪ ಉಕ್ಕಿತು. ಆಗ ಬಾಬಾ ಅವರನ್ನು ಕುರಿತು "ನಿಮ್ಮನ್ನೇ ಎದುರು ನೋಡುತ್ತಿದ್ದೆ. ಆದುದರಿಂದಲೇ ಶ್ಯಾಮನನ್ನು ಕಳುಹಿಸಿದ್ದೆ" ಎಂದರು.

ಅನಂತರ ಕಾಕಾ ಅವರು ಅನೇಕ ವರ್ಷಗಳ ಕಾಲ ಬಾಬಾ ಅವರೊಡನೆ ಇದ್ದರು. ಅವರು ಶಿರ್ಡಿಯಲ್ಲಿ ಒಂದು ವಾಡಾ ಕಟ್ಟಿಸಿ

ಹೆಚ್ಚು ಕಡಿಮೆ ಶಿರ್ಡಿಯಲ್ಲಿಯೇ ವಾಸ ಮಾಡತೊಡಗಿದರು. ಬಾಬಾ ಅವರಿಂದ ಅವರು ಪಡೆದ ಅನುಭವಗಳು ಸಾವಿರಾರು. ಆದ್ದರಿಂದ ಅವೆಲ್ಲವುಗಳನ್ನು ಇಲ್ಲಿ ವಿವರಿಸಲು ಅಸಾಧ್ಯ. (ಆದುದರಿಂದ ವಾಚಕರು "ಸಾಯಿಲೀಲಾ" ಪತ್ರಿಕೆಯ ೧೨ನೇ ಸಂಪುಟದ ೬ ರಿಂದ ೯ನೇ ಸಂಚಿಕೆಗಳನ್ನು ಓದಬಹುದು.)

"ಕೊನೆಯಲ್ಲಿ ನಿನ್ನನ್ನು ವಿಮಾನದಲ್ಲಿ (ಅಂದರೆ ನಿರಾಯಾಸವಾಸದ ಮರಣ) ಕರೆದುಕೊಂಡು ಹೋಗುತ್ತೇನೆ" ಎಂದು ಬಾಬಾ ಕಾಕಾಸಾಹೇಬ ದೀಕ್ಷಿತರಿಗೆ ಹೇಳಿದ್ದರು. ಇದು ನಿಜವಾಯಿತು. ೧೯೨೬ ನೇ ಜುಲೈ ೫ನೇ ತಾರೀಖು, ಅವರು ಹೇಮಾಡಪಂತರೊಡನೆ ಬಾಬಾ ಅವರ ಬಗ್ಗೆ ಮಾತನಾಡುತ್ತ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಆಗ ಒಮ್ಮೆಲೇ ಅವರು ಬಾಬಾ ಅವರಲ್ಲಿ ಶೀಘ್ರವಾಗಿ ಧ್ಯಾನಾಸಕ್ತರಾದಂತೆ ತೋರಿತು. ಕೂಡಲೇ ಅವರು ನಿರಾಯಾಸವಾಗಿ ತಮ್ಮ ತಲೆಯನ್ನು ಹೇಮಾಡಪಂತರ ಭುಜದ ಮೇಲೇ ಇಟ್ಟು ಇಹಲೋಕವನ್ನು ತ್ಯಜಿಸಿದರು.

## ಟೇಂಬೆ ಸ್ವಾಮಿ

ಈಗ ಸಂತರು ಹೇಗೆ ಪರಸ್ಪರ ಭ್ರಾತೃಪ್ರೇಮದಿಂದ ಇರುತ್ತಾರೆ ಎಂಬುದನ್ನು ಪರಿಶೀಲಿಸೋಣ. ಒಂದು ಸಾರೆ, ಟೇಂಬೆ ಸ್ವಾಮಿ ಎಂದು ಪ್ರಸಿದ್ಧವಾದ ಶ್ರೀ ವಾಸುದೇವಾನಂದ ಸರಸ್ವತಿಯವರು ಗೋದಾವರಿ ತೀರದಲ್ಲಿ ರಾಜಮಹೇಂದ್ರಿಯಲ್ಲಿ ತಂಗಿದ್ದರು. ಅವರು ದತ್ತಾತ್ರೇಯ ಉಪಸಕರಾಗಿದ್ದರು. ಮಹಾಜ್ಞಾನಿಗಳೂ, ಯೋಗ ಸಂಪನ್ನರೂ ಆಗಿದ್ದರು. ನಾಂದೇಡದ ಪುಂಡಲೀಕರಾದ ವಕೀಲರು ಅವರನ್ನು ಕಾಣಲು ತಮ್ಮ ಸ್ನೇಹಿತರೊಂದಿಗೆ ಹೊರಟರು. ಅವರ ದರ್ಶನ ಪಡೆದರು. ಸಂಭಾಷಣೆ ನಡೆಯುತ್ತಿದ್ದಾಗ ಶ್ರೀ ಸಾಯಿಬಾಬಾ ಅವರ ವಿಷಯವೂ ಬಂದಿತು. ಬಾಬಾ ಅವರ ಹೆಸರನ್ನು

ಕೇಳಿದೊಡನೆಯೇ ಸ್ವಾಮಿಜೀಯವರು ಅಲ್ಲಿಯೇ ನಮಸ್ಕಾರ ಮಾಡಿ ತೆಂಗಿನಕಾಯಿ ಒಂದನ್ನು ತೆಗೆದುಕೊಂಡು "ಇದನ್ನು ನನ್ನ ಸಹೋದರ ಶ್ರೀ ಸಾಯಿಬಾಬಾ ಅವರಿಗೆ ಅರ್ಪಿಸಿ ಮತ್ತು ನನ್ನನ್ನು ಮರೆಯದೆ ಪ್ರೀತಿಸುತ್ತಿರಿ ಎಂದು ಹೇಳಿರಿ" ಎಂದು ತಿಳಿಸಿ ಪುಂಡಲೀಕರಾವ ಅವರಿಗೆ ಕೊಟ್ಟರು. ಸ್ವಾಮಿಗಳು ಬಾಬಾ ಅವರನ್ನು ಸಹೋದದರೆಂದು ಕರೆದುದು ಸರಿ. ಏಕೆಂದರೆ, ಸ್ವಾಮಿಜೀಯವರು ಸಹ ಶಾಸ್ತ್ರ ಸಮ್ಮತವಾದ ಧುನಿಯಲ್ಲಿ ಸದಾ ಅಗ್ನಿಯನ್ನು ಉರಿಸುತ್ತಿದ್ದರು.

ಒಂದು ತಿಂಗಳ ಒಳಗಾಗಿ ಪುಂಡಲೀಕರಾವ ಅವರು ನಾಲ್ಕು ಜನ ಮಿತ್ರರೊಡನೆ ತೆಂಗಿನಕಾಯಿ ತೆಗೆದುಕೊಂಡು ಬಂದರು. ಮನಮಾಡದಲ್ಲಿ ಇಳಿದಾಗ ಬಹಳ ಬಾಯಾರಿಕೆಯಾದುದರಿಂದ ಹತ್ತಿರವಿದ್ದ ಹಳ್ಳಕ್ಕೆ ನೀರು ಕುಡಿಯಲು ಹೋದರು. ಬರಿದಾದ ಹೊಟ್ಟೆ ಇದ್ದಾಗ ನೀರು ಕುಡಿಯಬಾರದೆಂದು ಖಾರದ ಅವಲಕ್ಕಿಯನ್ನು ತಿನ್ನಲು ಆರಂಭ ಮಾಡಿದರು. ಅದರ ಜೊತೆಗೆ ತೆಂಗಿನಕಾಯಿ ಸೇರಿಸಿ ತಿಂದರೆ ಒಳ್ಳೆಯದೆಂದು ಕೆಲವರು ಹೇಳಿದರು. ಅದರಂತೆ ತೆಂಗಿನಕಾಯಿ ಒಡೆದು ಚೂರು ಮಾಡಿ ಅವಕ್ಕಿಯಲ್ಲಿ ಬೆರೆಸಿದರು. ಈ ತೆಂಗಿನಕಾಯಿಯನ್ನು ಟೇಂಬೆ ಸ್ವಾಮಿಯವರು ಬಾಬಾ ಅವರಿಗೆಂದು ಕೊಟ್ಟಿದ್ದರು. ಶಿರ್ಡಿ ಸಮೀಪಿಸುತ್ತಲೇ ಆ ತೆಂಗಿನಕಾಯಿಯ ನೆನಪಾಯಿತು. ಹೆದರಿಕೆಯಿಂದ ನಡುಗುತ್ತ ಬಾಬಾ ಅವರ ಮುಂದೆ ನಿಂತರು. ಈ ಮೊದಲೇ ಬಾಬಾ ಅವರಿಗೆ ಈ ವಿಷಯ ತಿಳಿದಿತ್ತು. ಆದುದರಿಂದ ಕೂಡಲೇ ಅವರು ಪುಂಡಲೀಕರಾವ ಅವರನ್ನು ಕುರಿತು "ನನ್ನ ಬಂಧುವಿನಿಂದ ತಂದ ನನ್ನ ವಸ್ತು ಕೊಡು" ಎಂದರು. ಆಗ ಪುಂಡಲೀಕರಾವ ಅವರು ಬಾಬಾ ಅವರ ಪಾದಗಳನ್ನು ಭದ್ರವಾಗಿ ಹಿಡಿದುಕೊಂಡು ತಮ್ಮ ಅಪರಾಧಕ್ಕೆ ನೊಂದುಕೊಂಡು ಅವರಲ್ಲಿ ಕ್ಷಮೇ ಬೇಡಿದರು. ಅದಕ್ಕೆ ಬದಲಾಗಿ ಬೇರೊಂದು ತೆಂಗಿನಕಾಯಿ ತರುವೆನು ಎಂದರು. ಆದರೆ ಬಾಬಾ

ಅವರು ನಿರಾಕರಿಸಿ "ಆ ತೆಂಗಿನಕಾಯಿಯ ಬೆಲೆ ಸಾಮಾನ್ಯವಾದ ತೆಂಗಿನಕಾಯಿಯ ಬೆಲೆಗಿಂತ ಮಿಗಿಲಾದುದು. ಆ ಫಲದ ಯೋಗ್ಯತೆ ಬೇರೆ ಯಾವದಕ್ಕೂ ಬರಲಾರದು" ಎಂದು ಹೇಳಿ, "ನೀನು ಚಿಂತಿಸಬೇಡ; ಶ್ರೀಫಲ ಮುಟ್ಟಿಸುವ ಕಾರ್ಯ ನನ್ನ ಅಭಿಲಾಷೆಯಂತೆ ನಿನಗೆ ವಹಿಸಲ್ಪಟ್ಟಿತು. ಕೊನೆಗೆ ನೀವು ದಾರಿಯಲ್ಲಿ ಅದನ್ನು ತಿಂದು ಬಿಟ್ಟಿರಿ. ನಿನಗೇಕೆ ಅದರ ಹೊಣೆಗಾರಿಕೆ? ಸತ್ಕರ್ಮವಾಗಲಿ, ದುಷ್ಕರ್ಮವಾಗಲಿ ಅದರ ಹೊಣೆ ನಿನಗೆ ಬೇಡ ಅಹಂಭಾವನ್ನು ತ್ಯಜಿಸು. ಆಗ ನಿನ್ನ ಪಾರಮಾರ್ಥಿಕ ಪ್ರಗತಿ ತ್ವರಿತಗೊಳ್ಳುತ್ತದೆ" ಎಂದರು.

## ಬಾಳಾರಾಮ ಧುರಂಧರ

ಪಾಠರೆ ಪ್ರಭು ಕುಲಕ್ಕೆ ಸೇರಿದ ಶ್ರೀಯುತ ಬಾಳಾರಾಮ ಧುರಂಧರ ಅವರು ಕೆಲವು ಕಾಲ ಮುಂಬಯಿ ಪ್ರಾಂತದ ಹೈಕೋರ್ಟ್ ಅಡ್ವೋಕೇಟ್ ಆಗಿ ನಂತರ ಸರಕಾರದ ಲಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರದು ಬಹಳ ಧಾರ್ಮಿಕ ಮತ್ತು ಭಗವದ್ಭಕ್ತರ ಕುಟುಂಬ. ಅವರು ಸಾಮಾಜಿಕ ವಿಷಯಗಳ ಬಗ್ಗೆ ಅನೇಕ ಗ್ರಂಥಗಳನ್ನು ಬರೆದರು. ಅನಂತರ ಅವರು ತಮ್ಮ ಗಮನವನ್ನು ಧಾರ್ಮಿಕ ಮತ್ತು ಪಾರಮಾರ್ಥಿಕ ವಿಷಯಗಳ ಕಡೆಗೆ ಹರಿಸಿದರು. ಭಗವದ್ಗೀತೆಯನ್ನೂ, ಜ್ಞಾನೇಶ್ವರಿಯನ್ನೂ ವೇದಾಂತ ಮತ್ತು ಇನ್ನುಳಿದ ಆಧ್ಯಾತ್ಮಿಕ ಕೃತಿಗಳನ್ನು ಓದಿದರು. ಅವರು ಪಂಢರಪುರದ ವಿಠ್ಠಲನ ಪರಮ ಭಕ್ತರಾಗಿದ್ದರು. ಸುಮಾರು ೧೯೧೨ರಲ್ಲಿ ಅವರಿಗೆ ಬಾಬಾ ಅವರ ಸಂಪರ್ಕವಾಯಿತು. ಇದಕ್ಕೆ ಆರು ತಿಂಗಳ ಹಿಂದೆ ಅವರ ಸಹೋದರ ಬಾಬುಲಜಿ ಅವರು ವಾಮನರಾವ ಅವರ ಜೊತೆಗೆ ಶಿರ್ಡಿಗೆ ಹೋಗಿ ಬಾಬಾ ಅವರ ದರ್ಶನ ಪಡೆದಿದ್ದರು. ಅವರು ತಮ್ಮ ಅನುಭವಗಳನ್ನು ಬಾಳಾರಾಮ ಅವರಿಗೂ, ಮತ್ತಿತರರಿಗೂ ಹೇಳಿದರು. ಆಗ ಎಲ್ಲರೂ ಬಾಬಾ ಅವರ ದರ್ಶನ ಪಡೆಯಬೇಕೆಂದು ನಿರ್ಧಾರ ಮಾಡಿದರು. ಅವರು ಶಿರ್ಡಿಗೆ ಬರುವುದಕ್ಕೆ ಮುಂಚೆಯೇ ಬಾಬಾ ಅವರು "ಈ ದಿನ ನನ್ನ ದರ್ಬಾರದ

ಅನೇಕ ಜನರು ಬರುತ್ತಾರೆ" ಎಂದು ಹೇಳಿದರು. ಧುರಂಧರ ಸಹೋದರರು ಇದನ್ನು ಇತರರಿಂದ ಕೇಳಿ "ನಮ್ಮ ಆಗಮನವನ್ನು ಅವರಿಗೆ ತಿಳಿಸಿರಲಿಲ್ಲ. ಆದರೂ ಇದು ಅವರಿಗೆ ಹೇಗೆ ಗೊತ್ತಾಯಿತು?" ಎಂದು ಆಶ್ಚರ್ಯಚಕಿತರಾದರು. ಎಲ್ಲರೂ ಬಾಬಾ ಅವರಿಗೆ ನಮಸ್ಕಾರ ಮಾಡಿ ಕುಳಿತರು. ಆಗ ಬಾಬಾ ಅವರು "ನಾನು ಈ ಹಿಂದೆ ಹೇಳಿದ ನನ್ನ ದರ್ಬಾರಿನ ಜನ ಇವರೇ" ಎಂದು ಹೇಳಿ, ಧುರಂಧರ ಸಹೋದರರನ್ನು ಕುರಿತು "ಈ ಹಿಂದಿನ ಅರವತ್ತು ಜನ್ಮಗಳಿಂದ ನಾವು ಚಿರಪರಿಚಿತರು" ಎಂದರು. ಎಲ್ಲರೂ ನಮ್ರತೆಯಿಂದ ಕೈಜೋಡಿಸಿ ಬಾಬಾ ಅವರ ಪಾದಗಳನ್ನು ಎವೆಯಿಕ್ಕದೆ ನೋಡಹತ್ತಿದರು. ಸಾತ್ವಿಕ ಗುಣಗಳಾದ ಕಣ್ಣೀರು, ರೋಮಾಂಚನ, ಗದ್ಗದ ಕಂಠ ಇವುಗಳಿಂದ ಅವರು ಮನಸೋತು ಆನಂದಭರಿತರಾದರು. ನಂತರ ಅವರು ತಮ್ಮ ನಿವಾಸಕ್ಕೆ ಹೋಗಿ ಊಟ ಮಾಡಿ ಸ್ವಲ್ಪ ಹೊತ್ತು ವಿಶ್ರಮಿಸಿ ಪುನ: ಮಸೀದಿಗೆ ಬಂದರು. ಬಾಳಾರಾಮ ಅವರು ಬಾಬಾ ಅವರ ಬಳಿಗೆ ಬಂದು ಅವರ ಪಾದ ಸಂವಾದನ ಮಾಡುತ್ತ ಕುಳಿತರು. ಹುಕ್ಕಾ ಸೇದುತ್ತಿದ್ದ ಬಾಬಾ ಅವರು ಅದನ್ನು ಬಾಳಾರಾಮ ಅವರಿಗೂ ಸೇದುವಂತೆ ಹೇಳಿದರು. ಬಾಳಾರಾಮರಿಗೆ ಹುಕ್ಕಾಸೇದುವ ಅಭ್ಯಾಸವಿರಲಿಲ್ಲ. ಆದರೂ ಅದನ್ನು ಒಂದು ಬಾರಿ ಎಳೆದು ನಮ್ರತೆಯಿಂದ ಹಿಂತಿರುಗಿಸಿದರು. ಬಾಳಾರಾಮ ಆರು ವರ್ಷಗಳಿಂದ ದಮ್ಮಿನಿಂದ ನರಳುತ್ತಿದ್ದರು. ಹುಕ್ಕಾ ಸೇದಿದಂದಿನಿಂದ ಅವರ ರೋಗ ಪೂರ್ಣ ಗುಣವಾಯಿತು. ಆದರೆ ಆರುವರ್ಷಗಳ ನಂತರ ಪುನ: ಅವರಿಗೆ ಕೆಮ್ಮು ಬಂದಿತು. ಅಂದೇ ಬಾಬಾ ಅವರು ಮಹಾಸಮಾಧಿ ಹೊಂದಿದ್ದರು.

ಈ ಧುರಂಧರ ಬಂಧುಗಳು ಶಿರ್ಡಿಗೆ ಬಂದ ದಿನ ಗುರುವಾರ. ಅಂದು ಚಾವಡಿ ಮೆರವಣಿಗೆ ಇತ್ತು. ಅದನ್ನು ನೋಡುವ ಸುಯೋಗ ಅವರಿಗೆ ಲಭಿಸಿತು. ಚಾವಡಿಯ ಆರತಿ ಸಮಾರಂಭದಲ್ಲಿ ಬಾಳಾರಾಮ

ಅವರು ಬಾಬಾ ಅವರ ವದನಾರವಿಂದದಲ್ಲಿ ಪಾಂಡುರಂಗನ ಪ್ರತಿಭೆ ಕಂಡರು. ಮರುದಿನ ಕಾಕಾಡ ಆರತಿ ಸಮಾರಂಭದಲ್ಲಿಯೂ ಅದೇ ರೀತಿ ಕಂಡರು.

ಬಾಳಾರಾಮ ಧುರುಂದರ ಅವರು ಮಹಾರಾಷ್ಟ್ರದ ಪ್ರಸಿದ್ಧ ಸಂತರಾದ ಶ್ರೀ ತುಕಾರಾಮ ಅವರ ಜೀವನ ಚರಿತ್ರೆಯನ್ನು ಮರಾಠಿಯಲ್ಲಿ ಬರೆದಿರುತ್ತಾರೆ. ಆದರೆ ಅವರ ಅದರ ಪ್ರಕಟಣೆಯನ್ನು ನೋಡಲು ಜೀವಿಸಿರಲಿಲ್ಲ. ಅನಂತರ ೧೯೨೮ರಲ್ಲಿ ಅವರ ಸಹೋದರರು ಅದನ್ನು ಪ್ರಕಟಿಸಿದರು. ಅದರಲ್ಲಿ ಬಾಲಾರಾಮ ಧುರಂಧರ ತಮ್ಮ ಅನುಭವವನ್ನು ಉಲ್ಲೇಖಿಸಿದ್ದಾರೆ.

**ಶ್ರೀ ಸಾಯಿ ಪ್ರಣಾಮ**



ಓಂ ಶ್ರೀಸಾಯಿನಾಥಾಯ ನಮಃ

PUB005